೨೬. ಡೆ ನುಡಿಯದಿರಿಂ ಪೋಗಿವಾಂ ಮಾಣೆನೆನ್ದಾದರದಿನ್ದಂ ಭೂಮಿ ಪೊಂಪುಟ್ಟಗೆ ಪಸುಧನಮಂ ಧನಮಂ ನೀಡುತುಂ ದೇವರದೇವಂಗ್ಗಿತ್ತಿ

೨೭. ಯಿಂ ಕಯ್ಮುಗಿದುರಿವುರಿಯಂ ಪೊಕ್ಕು ದೇಕಬ್ಬೆ ತನ್ನಂ ಧರೆಯಲ್ಲಂ ಮೆಚ್ಚಿ ನಿಚ್ಚಂ ಪೊಗಳೆ ನೆಗಟುತುಂ ದೇವಲೋಕಕ್ಕೆ ವೋದಳ್ । ಲಲಿತವೃತ್ತಂ ।

೨೮. ಶ್ರೀರಮಣಿ ಗೌರಿಸಚಿಧಾರಿಣಿಯಪುತ್ರಿ ರತಿಭೂರಮಣಿಯನ್ದದಸರೂಪವಾಱ್ ವೊಳ್ವಾದಾರೆ ಜಯಧಾರೆ ಜಸದಾರೆ ನಯಧಾ

೨೯. ರೆ ಭಯಹಾರೆ ಪತಿಭಕ್ತೆ ಧೃತಶಕ್ತೆಯೆನೆಸಂನಿ ವೀರನಿಧಿಯಂ ಚಲದ ವಾರಿನಿಧಿಯಂ ಗುಣದ ಚಾರುನಿಧಿಯಂ ನೆಗಳ್ದ ದೇಕಲೆಯ

೩೦. ನಿನ್ತೀ ನಾರಿಜನರನ್ನಮನದಾರೊಱವರ್ ಶಕಳಧಾರಿಣಿಯೊಳಿನ್ತು ವರಕಾನ್ತೆ ದೊರೆಯಾವಳ್ । ಅಕ್ಕರಂ । ಪಣ್ಡಿತಾಶ್ರಯಂ ನುಗುನಾ

೩೧. ಡರಾಘವಂ ಮುನಿವರಸಿಙ್ಗಮಾಚಕದಾವಳಂ ಚಣ್ಡವಿಕ್ರಮಂ ಕುಡಿಯರವಲ್ಲಭಂ ಕಲಿಕಾಲಕರ್ಣ್ಯಂ ಮಚ್ಚರಿಪವರಗಣ್ಡಂ ವನ್ದಿ

೩೨. ಚಿನ್ತಾಮ[ಣಿ*] ಶಿವಪಾದಶೇಖರಂ ನಿಜಸುತೆಗನುರಾಗದಿಂ ಮಣ್ಡಲಕೆಲ್ಲಂ ಪಡಿಛನ್ದಮಾಗೆ ಶಿಲಾಸ್ತಂಭ ಶಾಸನಮಾಗೆ ನೆಟ್ಟಂ ॥*

೩೩. ಶ್ರೀದೇಕಬ್ಬೆ ಮಹಾದೇವರ್ಗ್ಗೆ ಬಿಟ್ಟ ಪೂಂಬೊಲಂ ತೋಣ್ಬಖಣ್ಡಮುಮಂ ನಿರ್ಮ್ಮಾಣ ಮಜ್ಜಿಕೆಱಿಯ ತೆಂಕಣ ಕಡೆಯಲ್ ಅಯ್ದು ಕೊಳಗ ಗಜ್ದೆಯು

೩೪. ಮಂ ಈ ವಂಸದ ಪುಟ್ಟಿದರ್ ಕಾದರಿಸುಗೆ ಸಲಿಸದವರ್ ನರಕಭಾಜನರಪ್ಪರ್ । ಕನ್ದಂ । ಮಱುಪರ ಚಕ್ರಂ ದ್ವಿಜರೊಳ್ ಕಱಿಮಱಿಯಿ

೩೫. ಲ್ಲೆನಿಪ ಕುಱಿಪಿನಾದಿತ್ಯಂ ಸನ್ದಱಕೆಯವಗಾದಮಲ್ಲಂ ಜಱುಚದ ಕವಿರಾಜ-ಬಾನ್ಧವಂ ಬರದನಿದಂ ॥

೩೬. ಕಣ್ಡರಿಸಿದಂ ಮುನಿವರ ಸಿಂಗಾಚಾರಿಯುಂ ಮಚ್ಚರಿಪರಗಣ್ಡಾಚಾರಿಯು ॥

೨೩

ಶ್ರವಣಬೆಳಗೊಳ ಶಾಸನ

ಕ್ರಿ.ಶ.ಸು. ೧೧೩೧

ಪೂರ್ವ ಮುಖ

೧. ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಗಲಾಂಛನಂ ।

೨. ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥

೩. ಶ್ರೀಮದ್ಯಾದವವಂಶಮಂಡನಮಣಿಃ ಕ್ಷೋಣೀಶರಕ್ಷಾಮಣಿರ್ಲ-

೪. ಕ್ಷ್ಮೀಹಾರಮಣಿಃ ನರೇಶ್ವರಶಿರಃ ಪ್ರೋತ್ತುಂಗಶುಂಭದ್ಮಣಿಃ ಜೀಯಾನ್ನೀತಿ-ಪಥೇಕ್ಷ-

೫. ದರ್ಪ್ಪಣಮಣಿಃ ಲೋಕಯ್ಕಚೂಡಾಮಣಿ ಶ್ರೀವಿಷ್ಣುರ್ವ್ವಿನಯಾರ್ಚ್ಚಿತೋ ಗುಣಮಣಿಃ ಸಮ್ಯ-

೬. ಕ್ತಚೂಡಾಮಣಿಃ ॥ ಎರೆದ ಮನುಜಂಗೆ ಸುರಭೂಮಿರುಹಂ ಶರಣೆಂದವಂಗೆ ಕುಳಿಶಾಗಾರಂ ಪರವನಿ-

೭. ತೆಗನಿಲತನೆಯಂ ಧುರದೊಳು ಪೊಣರ್ದ್ದಿಂಗೆ ಮೃತ್ಯು ವಿನಯಾದಿತ್ಯಂ ॥ವೃ॥ ಎನೆತಾನುಂ ಕೆಱೆದೇ-

೮. ಗುಲಂಗಳೆನಿತಾನುಂ ಜೈನಗೇಹಂಗಳಂತೆನೆತುಂ ನಾರ್ಕ್ಕಳನೂರ್ಗ್ಗಳಂ ಪ್ರಜೆಗಳು ಸಂತೋಷದಿಂ ಮಾಡಿದಂ ವಿ-

೯. ನೆಯಾದಿತ್ಯನ್ರಿಪಾಳ ಪೊಯ್ಸಳನೆ ಸಂದಿರ್ದ್ದಾ ಬಲೀಂದ್ರಂಗೆ ಮೇಲೆನೆ ಪೆಂಪಂ ಪೊಗಳ್ವನ್ನನಾವನೊ ಮಹಾಗಂ-

೧೦. ಭೀರನಂ ಧೀರನಂ ॥ ಇಟ್ಟಿಗೆಗೆಂದಗಳ್ದ ಕುಳಿಗಳ್ಕೆಱೆ ಯಾದವು ಕಲ್ಲುಗೆಗೊಣ್ಡ ಪೆರ್ವ್ವೆಟ್ಟು ಧರಾತಳಕ್ಕೆ

೧೧. ಸರಿಯಾದವು ಸುಣ್ಣದ ಭಂಡಿ ಬಂದ ಪೆರ್ವ್ವಟ್ಟೆಯೆ ಪಳ್ಳಮಾದುವೆನೆ ಮಾಡಿಸಿದಂ ಜಿನರಾಜಗೇಹಮಂ ನೆಟ್ಟ-

೧೨. ನೆ ಪೊಯ್ಸಳೇಸನನೆ ಬಣ್ಣಿಪರಾರ್ಮ್ಮಲೆರಾಜರಾಜನಂ ॥ಕಂ॥ ಆ ಪೊಯ್ಸಳ-ಭೂಪಂಗೆ ಮಹೀಪಾ-

೧೩. ಳಕುಮಾರನಿಕರಚೂಡಾರತ್ನಂ ಶ್ರೀಪತಿ ನಿಜಭುಜವಿಜಯಮಹೀಪತಿ ಜನಿಯಿಸಿದನದಟನೆ-

೧೪. ಱೆಯಂಗನ್ರಿಪಂ ॥ ವಿ ॥ ವಿನೆಯಾದಿತ್ಯನ್ರಿಪಾಳನಾತ್ಮಜನಿಳಾಲೋಕೈಕ-ಕಲ್ಪದ್ರುಮಂ ಮನುಮಾರ್ಗ್ಗಂ

---

೨೩. E.C. II No.143 p. 73

೧೫. ಜಗದೇಕವೀರನೆಱೆಯುಂಗೊರ್ವ್ವಿಶ್ವರಂ ಮಿಕ್ಕನಾತನ ಪುತ್ರಂ ರಿಪುಭೂ–
ಮಿಪಾಳಕಮದಸ್ಸಂಮರ್ದ್ದ–

೧೬. ನಂ ವಿಷ್ಣುವರ್ದ್ಧನಭೂಪಂ ನೆಗಳ್ದಂ ಧರಾವಳೆಯದೊಳ್ ಶ್ರೀರಾಜಕಣ್ಠೀರವಂ ॥ ಕಂ ॥
ಆ ನೆಗಟ್ದೆಱೆಯಂ–

೧೭. ಗನ್ರಿಪಾಳನ ಸೂನು ಬ್ರಿಹದ್ವೈರಿಮರ್ದ್ದನಂ ಸಕಳಧರಿತ್ರೀನಾಥನರ್ತ್ಥಿ–ಜನತಾಭಾನುಸುತಂ
ವಿಷ್ಣುಭೂ–

೧೮. ಪನುದಯಂಗೆಯ್ದಂ ॥ ಅರಿನರಪಸಿರಾಸ್ಫಾಳನರಕನುದ್ಧತವೈರಿಮಂಡಳೇಶ್ವರ–
ಮದಸಂಹರಣಂ ನಿಜಾ–

೧೯. ನ್ವಯೈಕಾಭರಣಂ ಶ್ರೀಬಿಟ್ಟಿದೇವನೀವರದೇವ ॥ ಸ್ವಸ್ತಿಸಮಧಿಗತಪಂಚಮಹಾಶಬ್ದ
ಮಹಾಮಂಡಳೇ–

೨೦. ಶ್ವರಂ । ದ್ವಾರಾವತೀಪುರವರಾಧೀಶ್ವರ । ಯಾದವಕುಳಾಂಬರದ್ಯುಮಣಿ । ಸಮ್ಯಕ್ತಚೂಡಾಮಣಿ
। ಮಲಪ –

೨೧. ರೊಳ್ಗಂಡ । ಚಲಕೆ । ಬಲುಗಂಡ । ನಾಳಿಂ ಮುನ್ನಿಱಿವ । ಸೌರ್ಯ್ಯಮಂ ಮೆಱೆವ ।
ತಳಕಾಡುಗೊಂಡ । ಗಂಡಪ್ರಚಂಡ ।

೨೨. ಪಟ್ಟಿಪೆರುಮಾಳನಿಜರಾಜ್ಯಾಭ್ಯುದಯಯ್ಕರಕ್ಷಣದಕ್ಷಕ । ಅವಿನಯನರಪಾಳಕಜನಸಿಕ್ಷಕ ।
ಚ–

೨೩. ಕ್ರಗೊಟ್ಟವನದಾವಾನಳ । ನಹಿತಮಂಡಳಿಕಕಾಳಾನಳ । ತೊಂಡಮಂಡಳಿ–
ಕಮಂಡಳಪ್ರಚಂಡದೌರ್ವ್ವಾನ–

೨೪. ಳ । ಪ್ರಬಳರಿಪುಬಳಸಂಹರಣಕಾರಣ । ವಿದ್ವಿಷ್ಟಮಂಡಳಿಕಮದನಿವಾರಣಕರಣ ।
ನೊಳಂಬವಾಡಿ–

೨೫. ಗೊಂಡ । ಪ್ರತಿಪಕ್ಷನರಪಾಲಲಕ್ಷ್ಮಿ ಯನಿರ್ಕ್ಕುಳಿಗೊಂಡ । ತಪ್ಪೆತಪ್ಪುವ । ಜಯಶ್ರೀಕಾಂತೆಯನಪ್ಪು–

೨೬. ವ । ಕೂರೆಕೂರ್ಪ್ಪ । ಸೌರ್ಯ್ಯಮಂ ತೋರ್ಪ್ಪ । ವೀರಾಂಗನಾಲಿಂಗಿತ–ದಕ್ಷಿಣದೋರ್ದ್ದಂಡ
। ನುಡಿದಂತೆ ಗಂಡ । ಅದಿ–

೨೭. ಯಮನ ಹ್ರಿದಯಸೂಲ । ಬೀರಾಂಗನಾಲಿಂಗಿತಲೋಲ । ಉದ್ಧತಾರಾತಿ–
ಕಂಜವನಕುಂಜರ – ಸರ–

೨೮. ಣಾಗತವಜ್ರಪಂಜರ । ಸಹಜಕೀರ್ತ್ತಿಧ್ವಜ । ಸಂಗ್ರಾಮವಿಜಯಧ್ವಜ । ಚೆಂಗಿರೆಯ
ಮನೋಭಂಗ । ವೀ–

೨೯. ರಪ್ರಸಂಗ । ನರಸಿಂಗವರ್ಮ್ಮನಿರ್ಮ್ಮೂಳನಂ । ಕಳಪಾಳಕಾಳಾನಳಂ । ಹಾನುಂಗಲುಗೊಂಡ
। ಚತುರ್ಮ್ಮುಖ–

೩೦. ಗಂಡ । ಚತುರಚತುರ್ಮ್ಮುಖ । ಸಾಹವಶಣ್ಮುಖ । ಸರಸ್ವತೀಕರ್ಣ್ನಾವತಂಸ ।
ನುಂನತವಿಷ್ಣುವಂಶ । ರಿಪು–

೩೧. ಹ್ರಿದಯಸೆಲ್ಲ । ಭೀತರಂ ಕೊಲ್ಲ । ದಾನವಿನೋದ । ಚಂಪಕಾಮೋದ । ಚತ್ಸಮಯಸಮುದ್ಧರಣ । ಗಂಡ–

೩೨. ರಾಭರಣ । ವಿವೇಕನಾರಾಯಣ । ವೀರಪಾರಾಯಣ । ಸಾಹಿತ್ಯ ವಿದ್ಯಾಧರ । ಸಮರಧುರಂಧರ

೩೩. ಪೊಯ್ಸಳಾನ್ವಯಭಾನು । ಕವಿಜನ ಕಾಮಧೇನು । ಕಲಿಯುಗಪಾರ್ತ್ಥ । ದುಷ್ಟರ್ಗೆ ದೂರ್ತ್ಥ । ಸಂಗ್ರಾಮರಾ–

೩೪. ಮ । ಸಾಹಸಭೀಮ । ಹಯವತ್ಸರಾಜ । ಕಾಂತಾಮನೋಜ । ಮತ್ತಗಜ–ಭಗದತ್ತ । ನಭಿನವಚಾ–

೩೫. ರುದತ್ತ । ನೀಲಗಿರಿಸಮುದ್ಧರಣ । ಗಂಡರಾಭರಣ ಕೊಂಗರ ಮಾರಿ । ರಿಪುಕುಳತಪ್ರಹಾ–

೩೬. ರಿ । ತೆರೆಯೂರನಲೆವ । ಕೊಯತೂರ ತುಳಿವ । ಹೆಂಜೆಱು ದಿಸಾಪಟ್ಟ । ಸಂಗ್ರಾಮಜತ್ತಲ–

೩೭. ಟ್ಟ । ಪಾಂಡ್ಯನಂ ಬೆಂಕೊಂಡ । ಉಚ್ಚಂಗಿಗೊಂಡ । ಏಕಾಂಗವೀರ । ಸಂಗ್ರಾಮಧೀರ । ಪೊಂಬುಚ್ಚನಿರ್ದ್ಧಾಟಣ । ಸಾ–

೩೮. ವಿಮಲೆ ನಿರ್ಲ್ಲೋಟಣ । ವೈರಿಕಾಳಾನಳ । ನಹಿತದಾವಾನಳ । ಶತ್ರುನರಪಾಳದಿಶಾಪಟ್ಟ

೩೯. ಮಿತ್ರನರಪಾಳಲಲಾಟಪಟ್ಟ । ಘಟ್ಟವನಳಿವ । ತುಳುವರ ಸೆಳೆವ । ಗೋಯಿಂದವಾಡಿಭಯಂ–

೪೦. ಕರ । ನಹಿತಬಳಸಂಖರ । ರೊದ್ದವ ತುಳಿವ । ಸಿತಗರಂ ಪಿಡಿವ । ರಾಯರಾಯಪುರಸೂ–

೪೧. ಱೆಕಾಱ । ವೈರಿಭಂಗಾಱ । ವೀರನಾರಾಯಣ । ಸೌರ್ಯ್ಯಪರಾಯಣ । ಶ್ರೀಮತುಕೇಶ–

೪೨. ವದೇವ ಪಾದಾರಾಧಕ । ರಿಪುಮಂಡಳಿಕಸಾಧಕಾದ್ಯನೇಕನಾಮಾವಳೀಸ–ಮಾಳಂಕ್ರಿತ–

೪೩. ನುಂ ಗಿರಿದುರ್ಗ್ಗ ವನದುರ್ಗ್ಗ । ಜಳದುರ್ಗ್ಗಾದ್ಯನೇಕದುರ್ಗ್ಗಂಗಳನಶ್ರಮದಿಂದ ಕೊಂಡ ಚಂಡಪ್ರತಾ–

೪೪. ಪದಿಂ ಗಂಗವಾಡಿತೊಂಭತ್ತಱುಸಾಸಿರಮುಮಂ ಲೊಕ್ಕಿಗುಂಡಿವರಮುಂಡಿಗೆ ಸಾಧ್ಯಂಮಾಡಿ ।

೪೫. ಮತ್ತಂ ॥ವ್ರಿ॥ ಎಳೆಯೊಳದುಷ್ಟರನುದ್ಧತಾರಿಗಳನಾಟಂದೊತ್ತಿ ಬೆಂಕೊಂಡು ದೋರ್ಬ್ಬಳದಿಂ

೪೬. ದೇಶಮನಾವಗಂ ತನಗೆ ಸಾಧ್ಯ ಮಾಡಿರಲು ಗಂಗಮಂಡಳಮೆಂದೋಲೆಗೆ ತೆತ್ತುಮಿತ್ತು ಬೆಸನಂ

೪೭. ಪೂಣ್ದಿರ್ಪ್ಪಿನಂ ವಿಷ್ಣುಪೊಯ್ಸಳನಿರ್ದ್ದಂ ಸುಖದಿಂದೆ ರಾಜ್ಯದೊದವಿಂದಂ ಸಂತತೋತ್ಸಾಹದಿಂ ॥ ಎ–

೪೮. ತ್ತಿದನೆತ್ತಲತ್ತಲಿದಿರಾದ ನ್ರಿಪಾಳಕರಳ್ಕಿ ಬಳ್ಕಿ ಕಂಡಿತ್ತು ಸಮಸ್ತವಸ್ತುಗಳನಾಳುತನ–

೪೯. ಮಂ ಸಲೆ ಪೂಣ್ದು ಸಂತತಂ ಸುತ್ತಲುಮೋಲಗಿಪ್ಪರೆನೆ ಮುನ್ನಿನವರ್ಗಮನೆಕರಾದವರ್ಗ್ಗ–

೫೦. ತ್ತಳಗಂ ಪೊಗರ್ತ್ತೆಗೆನೆ ಬಣ್ಣಿಪನಾವನೊ ವಿಷ್ಣುಭೂಪನಂ ॥ ಅನ್ತು ತ್ರಿಭುವನಮಲ್ಲ ತಳಕಾ–

೫೧. ಡುಗೊಂಡ ಭುಜಬಳವೀರಗಂಗವಿಷ್ಣುವರ್ದ್ಧನಪೊಯ್ಸಳದೇವರ ವಿಜಯ-ರಾಜ್ಯಮು-
೫೨. ತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ತ-
೫೩. ತ್ಪಾದಪದ್ಮೋಪಜೀವಿ ಪರಿಯರಸಿ ಪಟ್ಟಮಹಾದೇವಿ ಸಾನ್ತಲದೇವಿ

ದಕ್ಷಿಣ ಮುಖ

೫೪. ಸ್ವಸ್ತ್ಯನವರತಪರಮಕಲ್ಯಾಣಾಭ್ಯುದ-
೫೫. ಯ ಸಹಶ್ರಫಲಭೋಗಭಾಗಿನಿ ದ್ವಿತೀಯ
೫೬. ಲಕ್ಷ್ಮೀಲಕ್ಷಣಸಮಾನೆಯುಂ । ಸಕಳಗುಣಗ-
೫೭. ಣಾನೂನೆಯುಂ । ಮಭಿನವರುಗುಮಿಣೀದೇವಿಯುಂ । ಪತಿ
೫೮. ಹಿತಸತ್ಯಭಾವೆಯುಂ । ವಿವೇಕೈಕಬ್ರಿಹಸ್ಪತಿಯುಂ । ಪ್ರ-
೫೯. ತ್ಯುತ್ಪನ್ನವಾಚಸ್ಪತಿಯು । ಮುನಿಜನವಿನೇಯಜನ ವಿ-
೬೦. ನೀತೆಯುಂ । ಚತುಸ್ಸಮೆಯಸಮುದ್ಧರಣೆಯುಂ । ಬ್ರತ-
೬೧. ಗುಣಶೀಳಚಾರಿತ್ರಾಂತಃಕರಣೆಯುಂ । ಲೋಕೈಕ ವಿ-
೬೨. ಖ್ಯಾತೆಯುಂ । ಪ್ರತಿಬ್ರತಾಪ್ರಭಾವಸಿದ್ಧಸೀತೆ-
೬೩. ಯುಂ । ಸಕಳವಂದಿಜನಚಿಂತಾಮಣಿಯುಂ । ಸಮ್ಯಕ್ತ-(ಕ್ತ್ವ)
೬೪. ಚೂಡಾಮಣಿಯುಂ । ಮುದ್ವಿತ್ತಸವತಿಗಂಧವಾರ-
೬೫. ಣೆಯುಂ । ಪುಣ್ಯೋಪಾರ್ಜ್ಜನಕರಣಕಾರಣೆಯುಂ । ಮ-
೬೬. ನೋಜರಾಜವಿಜೆಯಪತಾಕೆಯುಂ । ನಿಜಕಳಾಭ್ಯು-
೬೭. ದಯದೀಪಿಕೆಯುಂ । ಗೀತವಾದ್ಯಸೂತ್ರಧಾರೆ-
೬೮. ಯುಂ । ಜಿನಸಮಯಸಮುದಿತಪ್ರಾಕಾರೆಯುಂ ।
೬೯. ಜಿನಧರ್ಮ್ಮಕಥಾಕಥನಪ್ರಮೋದೆಯುಂ । ಮಾ-
೭೦. ಹಾರಾಭಯಭೈಶಜ್ಯಶಾಸ್ತ್ರದಾನವಿನೋದೆ-
೭೧. ಯುಂ । ಜಿನಧರ್ಮ್ಮನಿರ್ಮ್ಮಳೆಯುಂ । ಭವ್ಯಜನವಚ್ಛ-
೭೨. ಳೆಯುಂ । ಜಿನಗನ್ಧೋದಕಪವಿತ್ರೀಕ್ರಿತೋತ್ತಮಾಂ-
೭೩. ಗೆಯುಮಪ್ಪ ॥ಕ॥ ಆ ನೆಗರ್ದ್ದ ವಿಷ್ಣುನ್ರಿಪನ ಮ-
೭೪. ನೋನಯನಪ್ರಿಯೆ ಚಳಾಳನೀಳಾಳಕಿ ಚಂದ್ರಾ-
೭೫. ನನೆ ಕಾಮನ ರತಿಯಲು ತಾನೆಣೆತೊಣೆಸರಿ-
೭೬. ಸಮಾನೆ ಶಾಂತಲದೇವಿ ॥ ವ್ರಿ ॥ ಧುರದೊಳು ವಿಷ್ಣುನ್ರಿ-
೭೭. ಪಾಳಕಂಗೆ ವಿಜಯಶ್ರೀ ವಕ್ಷದೊಳು ಸಂತತಂ ಪ-
೭೮. ರಮಾನನ್ದದಿನೋತುನಿಲ್ವ ವಿಪುಳಶ್ರೀ ತೇಜದು-

೭೯. ದ್ದಾನಿಯಂ ವರದಿಗ್ಭಿತ್ತಿಯನೆಯ್ದಿಸಲ್ನೆಱೆವ ಕೀರ್ತ್ತಿ
೮೦. ಶ್ರೀಯೆನುತಿರ್ಪ್ಪುದೀ ಧರೆಯೊಳು ಶಾನ್ತಲದೇವಿ
೮೧. ಯಂ ನೆಱೆಯೆ ಬಣ್ನಿಪ್ಪಣ್ನನೇವಣ್ನಿಪಂ ॥ ಕಲಿಕಾಲ–
೮೨. ವಿಷ್ಣುವಕ್ಷಸ್ಥಳದೊಳು ಕಲಿಕಾಲಲಕ್ಷ್ಮಿ ನೆಲಸಿ–
೮೩. ದಳೆನೆ ಶಾಂತಲದೇವಿಯ ಸೌಭಾಗ್ಯಮನೆಲ ಗಳ ಬ–
೮೪. ಣ್ಣಿಸುವೆನೆಂಬನೇವಣ್ನಿಸುವ ॥ ಶಾನ್ತಲದೇವಿಗೆ ಸದ್ಗುಣ–
೮೫. ಮಂತೆಗೆ ಸೌಭೋಗ್ಯಭಾಗ್ಯವತಿಗೆ ವಚಶ್ರೀಕಾಂತೆ–
೮೬. ಯುಮಗಜೆಯುಮಚ್ಯುತಕಾಂತೆಯುಮೆಣೆಯ–
೮೭. ಲ್ಲದುಳಿದ ಸತಿಯರ್ದ್ದೊರೆಯೇ ॥ ಅಕ್ಕರ ॥ ಗುರುಗ–
೮೮. ಳು ಪ್ರಭಾಚಂದ್ರಸಿದ್ಧಾನ್ತದೇವರೆ ಪೆತ್ತತಾಯಿ ಗು–
೮೯. ಣನಿಧಿ ಮಾಚಿಕಬ್ಬೆ ಪಿರಿಯಪೆರ್ಗ್ಗಡೆ ಮಾರಸಿಂಗಯ್ಯಂ
೯೦. ತಂದೆ ಮಾವನುಂ ಪೆರ್ಗ್ಗಡೆ ಸಿಂಗಿಮಯ್ಯಂ । ಅರಸಂ ವಿಷ್ಣು–
೯೧. ವರ್ದ್ಧನನ್ರಿಪಂ ವಲ್ಲಭಂ । ಜಿನನಾಥಂ ತನಗೆಂದುಮಿಷ್ಟದೆ–
೯೨. ಯ್ವಂ । ಅರಸಿ ಶಾನ್ತಲದೇವಿಯ ಮಹಿಮೆಯಂ ಬಣಿಸಲು
೯೩. ಬಕ್ಕುಮೆ ಭೂತದೊಳು ॥ ಸಕವರ್ಷಂ ೧೦೫೦ ಮೂಱ–
೯೪. ನೆಯ ವಿರೋಧಿಕ್ರಿತ್ಸಂವತ್ಸರದ ಚೈತ್ರ ಸುದ್ದ ಪಂಚ–
೯೫. ಮೀ ಸೋಮವಾರದಂದು ಶಿವಗಂಗೆಯತೀರ್ತ್ಥದಲು ಮುಡಿಪಿ
೯೬. ಸ್ವರ್ಗ್ಗತೆಯಾದಳು ॥ ವ್ರಿ ॥ ಈ ಕಲಿಕಾಲದೊಳ್ ಮನು
೯೭. ಬ್ರಿಹಸ್ಪತಿ ವಂದಿಜನಾಶ್ರಯಂ ಜಗವ್ಯಾಪಿತ ಕಾಮ–
೯೮. ಧೇನುವಭಿಮಾನಿ ಮಹಾಪ್ರಭು ಪಂಡಿತಾಶ್ರಯಂ ಲೋ–
೯೯. ಕಜನಸ್ತುತಂ ಗುಣಗಣಾಭರಣಂ ಜಗದೇಕದಾನಿ–
೧೦೦. ಯವ್ಯಾಕುಳಮಂತ್ರಿಯೆಂದು ಪೊಗಳ್ಗುಂ ಧರೆ ಪೆರ್ಗ್ಗಡೆ ಮಾ
೧೦೧. ರಸಿಂಗನ ॥ ದೊರೆಯೇ ಪೆರ್ಗ್ಗಡೆ ಮಾರಸಿಂಗವಿಭುವಿಂಗೀ ಕಾಲ–
೧೦೨. ದೊಳು ಪುರುಷಾರ್ತ್ಥಂಗಳೊಳತ್ಯುದಾರತೆಯೊಳಂ ಧರ್ಮ್ಮಾನು–
೧೦೩. ರಾಗಂಗಳೊಳು ಹರಪಾದಾಂಬ್ಜ ಭಕ್ತಿಯೊಳು ನಿಯಮದೊ–
೧೦೪. ಳು ಶೀಳಂಗಳೊಳು ತಾನೆನಲು ಸುರಲೋಕಕ್ಕೆ ಮನೋಮುದಂಬೆ–
೧೦೫. ರಸು ಪೋದಂ ಭೂತಳಂ ಕೀರ್ತ್ತಿಸಲು ॥ಕ॥ ಅನುಪಮ ಸಾನ್ತಲ
೧೦೬. ದೇವಿಯುಮನುನಯದಿಂ ತಂದೆ ಮಾರಸಿಂಗಯ್ಯನುಮಿಂಬಿನೆ ಜ–
೧೦೭. ನನಿ ಮಾಚಿಕಬ್ಬೆಯುಮಿನಿಬರುಮೊಡನೊಡನೆ ಮುಡಿಪಿ
೧೦೮. ಸ್ವರ್ಗ್ಗತರಾದರು ॥ ಲೇಖಕ ಬೋಕಿಮಯ್ಯ ॥

ಪಶ್ಚಿಮ ಮುಖ

೧೦೯. ಅರಸಿ ಸುರಗತಿಯನೆಯ್ದಿದಳಿರಲಾಗೆನಗೆಂದು ಬಂ-

೧೧೦. ದು ಬೆಳುಗೊಳದಲು ದುರ್ದ್ಧರ ಸನ್ಯಾಸದಿಂ ಪರಿ-

೧೧೧. ಣತೆ ತಾಯಿ ಮಾಚಿಕಬ್ಬೆ ತಾನುಂ ತೊಱೆದಳು ॥ವೃ॥ ಅ-

೧೧೨. ರೆಮಗುಳ್ದಿರ್ದ್ದ ಕಣ್ಮಲರ್ಗ್ಗಳೋದುವ ಪಂಚಪದಂ ಜಿನೇಂದ್ರನಂ ಸ್ಮರಿಯಿಸುವೋಜೆ ಬ-

೧೧೩. ನ್ಧುಜನಮಂ ಬಿಡಿಪುನ್ನತಿ ಸನ್ಯಸಕ್ಕೆವಂದಿರಲೊಸೆದೊಂದು ತಿಂಗಳುಪ-ವಾಸದೊಳಿಂಬಿ-

೧೧೪. ನೆ ಮಾಚಿಕಬ್ಬೆ ತಾಂ ಸುರಗತಿಗೆಯ್ದಿದಳು ಸಕಳಭವ್ಯರ ಸನ್ನಿಧಿಯೊಳು ಸಮಾ-

೧೧೫. ಧಿಯಿಂ ॥ ಕ ॥ ಆ ಮಾರಸಿಂಗಮಯ್ಯನ ಕಾಮಿನಿ ಜಿನಚರಣಭಕ್ತೆ ಗುಣಸಂ-

೧೧೬. ಯುತೆ ಉದ್ದಾಮಪತಿಬ್ರತೆ ಎನ್ದೀ ಭೂಮಿಜನಂ ಪೊಗಳೆ ಮಾಚಿಕಬ್ಬೆಯೆ

೧೧೭. ನೆಗಟ್ದಳು ॥ ಜಿನಪದಭಕ್ತೆ ಭನ್ದುಜನಪೂಜಿತೆಯಾಶ್ರಿತಕಾಮಧೇನು ಕಾ-

೧೧೮. ಮನಸತಿಗಂ ಮಹಾಸತಿ ಗುಣಾಗ್ರಣಿ ದಾನವಿನೋದೆ ಸಂತತಂ ಮು-

೧೧೯. ನಿಜನಪಾದಪಂಕರುಹಭಕ್ತೆ ಜನಸ್ತುತೆ ಮಾರಸಿಂಗಮಯ್ಯನ ಸತಿ

೧೨೦. ಮಾಚಿಕಬ್ಬೆಯೆನೆ ಕೀರ್ತ್ತಿಸುಗಂ ಧರೆ ಮೆಚ್ಚಿ ನಿಚ್ಚಲುಂ ॥ ಜಿನನಾಥಂ ತನ-

೧೨೧. ಗಾಪ್ತನಾಗೆ ಬಲದೇವಂ ತಂದೆ ಪೆತ್ತಬ್ಬೆ ಸದ್ವನಿತಾಗ್ರೇಶರೆ ಬಾಚಿಕಬ್ಬೆ-

೧೨೨. ಯೆನೆ ತಮ್ಮಂ ಸಿಂಗಣಂ ಸಂದ ಮಾಂತನದಿಂದಗ್ಗದ ಮಾಚಿಕಬ್ಬೆ ಸುರಲೋಕ

೧೨೩. ಕ್ಕೋದಳೆಂದೆಂದು ಮೇದಿನಿಯೆಲ್ಲಂ ಪೊಗಳುತ್ತಮಿರ್ಪುದೆನೆ ಬಣ್ನಿಪ್ಪಣ್ನಾ-

೧೨೪. ನೇವೆಣ್ನಿಪಂ ॥ಕ॥ ಪೆಂಡಿರ್ಸ್ಸನ್ಯಾಸನಂಗೊಂಡವರೊಳಗಿನಿತಂ ಬಲ್ಲರಾ-

೧೨೫. ರೆಂಬಿನಂ ಕೈಕೊಂಡಾಗಳು ಘೋರವೀರಬ್ರತಪರಿಣತೆಯಂ ಮೆಚ್ಚಿ

೧೨೬. ಸಂತೋಷದಿಂದಂ ಪಾಂಡಿತ್ಯಂ ಚಿತ್ತದೊಳು ತಳ್ತಿರೆ ಜಿನಚರಣಾಂಭೋ-

೧೨೭. ಜಮಂ ಭಾವಿಸುತ್ತಂ ಕೊಂಡಾಡಲು ಧಾತ್ರಿ ತನ್ನಂ ಸುರಗತಿವ-

೧೨೮. ಡೆದಳು ಲೀಲೆಯಿಂ ಮಾಚಿಕಬ್ಬೇ ॥ ದಾನಮನನೂನಮಂ

೧೨೯. ಕಃ ಕೇನಾರ್ಥೀಯೆಂದು ಕೊಟ್ಟು ಜಿನನಂ ಮನದೊಳು ಧ್ಯಾನಿಸು

೧೩೦. ತಂ ಮುಡಿಪಿಳಿನ್ನೇನೆಂಬುದೊ ಮಾಚಿಕಬ್ಬೆಯೊಂದುನ್ನ

೧೩೧. ತಿಯಂ ॥ ಇಂತು ತಮ್ಮ ಗುರುಗಳು ಪ್ರಭಾಚಂದ್ರಸಿದ್ಧಾ-

೧೩೨. ನ್ತದೇವರಂ । ವರ್ದ್ಧಮಾನದೇವರಂ । ರವಿಚಂದ್ರದೇವರಂ । ಸ-

೧೩೩. ಮಸ್ತಭವ್ಯಜನಂಗಳ ಸನ್ನಿಧಿಯೊಳು ಸನ್ಯಸನಮಂ ಕೈ-

೧೩೪. ಕೊಂಡವರ ಪೇಳ್ವ ಸಮಾಧಿಯಂ ಕೇಳುತ್ತ ಮುಡುಪಿದಳು ॥

೧೩೫. ಪಂಡಿತಮರಣದಿನೀ ಭೂಮಂಡಲದೊಳು ಮಾಚಿಕಬ್ಬೆಯಂತೆ-
೧೩೬. ವೊಲಾರ್ಕ್ಕೈಕೊಂಡಿಂತು [೧]ನೆಗಟ್ಟಳರಿಗಳಖಂಡಿತಮಂ[೧] ಘೋರವೀ-
೧೩೭. ರಸನ್ಯಾಸನಮ ॥ ಅವರ ವಂಶವಾವತಾರಮೆಂತೆಂದಡೆ ॥ ಕ ॥ ಜಿ-
೧೩೮. ನಧರ್ಮ್ಮನಿರ್ಮ್ಮಳಂ ಭವ್ಯನಿಧಾನಂ ಗುಣಗಣಾಶ್ರಯಂ ಮನುಚರಿತಂ
೧೩೯. ಮುನಿಚರಣಕಮಳಭ್ರಿಂಗಂ ಜನವಿನುತಂ ನಾಗವರ್ಮ್ಮದಂಡಾಧೀಶಂ ॥ ವಿ ॥
೧೪೦. ಅನುಪಮನಾಗವರ್ಮ್ಮನ ಕುಲಾಂಗನೆ ಪೆಂಪಿನ ಚಂದಿಕಬ್ಬೆ ಸಜ್ಜನನುತೆ
೧೪೧. ಮಾನಿ ದಾನಿ ಗುಣಿ ಮಿಕ್ಕ ಪತಿಬ್ರತೆ ಸೀಲದಿಂದೆ ಮೇದಿನಿಸುತೆ-
೧೪೨. ಗಂ ಮಿಗಿಲು ಪೊಗಳಲಾನಱಿಯೆಂ ಗುಣದಂಕಕಾರ್ತಿಯಂ ಜೀನ-
೧೪೩. ಪದಭಕ್ತೆಯಂ ಭುವನಸಂಸ್ತುತೆಯಂ ಜಗದೇಕದಾನಿಯಂ ॥ ಅವರ್ಗ್ಗೆ
೧೪೪. ಸುಪುತ್ರಂ ಬುಧಜನನಿವಹಕ್ಕಾರ್ತ್ತೀವ ಕಾಮಧೇನುವೆನುತ್ತಂ ಭುವನ-
೧೪೫. ಜನಂ ಪೊಗಳಲು ಮಿಕ್ಕವನುದಯಂಗೆಯ್ದನುತ್ತಮ ಬಲದೇವಂ ॥ ವ್ರಿ ॥
೧೪೬. ಸಕಳಕಳಾಶ್ರಯಂ ಗುಣಗಣಾಭರಣಂ ಪ್ರಭು ಪಂಡಿತಾಶ್ರಯಂ ಸು-
೧೪೭. ಕವಿಜನಸ್ತುತಂ ಜಿನಪದಾಬ್ಜಭೃಂಗನನೂನದಾನಿ ಲೌಕಿಕಪರಮಾ-
೧೪೮. ರ್ತ್ಥಮೆಂಬೆರಡುಮಂ ನೆಱೆ ಬಲ್ಲನೆನುತ್ತೆ ದಂಡನಾಯಕ ಬಲದೇವನಂ ಪೊ-
೧೪೯. ಗಳ್ವುದಂಬುಧಿವೇಷ್ಟಿತಭೂರಿಭೂತಳಂ ॥ ಮುನಿನಿವಹಕ್ಕೆ ಭ-
೧೫೦. ವ್ಯನಿಕರಕ್ಕೆ ಜಿನೇಶ್ವರಪೂಜೆಗಳ್ಗೆ ಮಿಕ್ಕನುಪಮದಾನಧರ್ಮ್ಮ-
೧೫೧. ದೊದವಿಂಗೆ ನಿರಂತರಮೊಂದೆ ಮಾರ್ಗ್ಗದಿಂ ಮನೆಯೊಲನಾಕುಳಂ
೧೫೨. ಮದುವೆಯಂದದ ಪಾಂಗಿನೊಳುಣ್ಬುದೆಂದಡಿ ಮನುಜನಿಧಾನನಂ
೧೫೩. ಪೊಗಳ್ವನೇವೊಗಳ್ವಂ ಬಲದೇವಮಾರ್ತ್ತ್ಯನ ॥ ಸ್ಥಿರನೇ ಮೇರುಗಿರೀಂದ್ರದಿಂದೆ
೧೫೪. ಮಿಗಿಲೇ ಗಂಭೀರನೇ ಬಾಪ್ಪು ಸಾಗರದಿಂದಗ್ಗಳಮೆಂತು ದಾನಿಯೆ ಸು-
೧೫೫. ರೋರ್ವ್ವಿಜಕ್ಕೆ ಮೇಲು ಭೋಗಿಯೇ ಸುರರಾಜಂಗೆಣೆಯೆಂದು ಕೀರ್ತ್ತಿಪುದು
೧೫೬. ಕಯ್ಕೊಂಡಳ್ಕಱಿಂ ಸಂತತಂ ಧರೆಯೊಳ್ ಶ್ರೀಬಲದೇವಮಾರ್ತ್ತ್ಯನನಿ-
೧೫೭. ಳಾಲೋಕೈಕವಿಖ್ಯಾತನ ॥ ಕ ॥ ಬಲದೇವದಂಡನಾಯಕನಲಂಘ್ಯ-
೧೫೮. ಭುಜಬಳಪರಾಕ್ರಮಂ ಮನುಚರಿತಂ ಜಲನಿಧಿವೇಷ್ಟಿತಧಾ-
೧೫೯. ತ್ರೀತಳದೊಳು ಸಮನಾರೊ ಮಂತ್ರಿಚೂಡಾಮಣಿಯೊಳು ॥
೧೬೦. ಶ್ರೀಮತ್ ಚಾರುಕೀರ್ತ್ತಿದೇವರ ಗುಡ್ಡ ಲೇಖಕ ಬೋಕಿಮಯ್ಯ ಬರದ ಬಿ-
೧೬೧. ರುದರೂವಾರಿಮುಖತಿಳಕ ಗಂಗಾಚಾರಿಯ ತಮ್ಮ ಕಾಂವಾಚಾರಿ ಕಂಡರಿಸಿದ [॥*]

೧-೧ 'ನೆಗಟ್ಟರೀಗಳಖಂಡಿತಮಂ' ಎಂದು ಇರಬಹುದು

೧೬೨. ಸ್ವಸ್ತ್ಯನವರತಪ್ರಬಳರಿಪುಬಳವಿ–
೧೬೩. ಷಮುಸಮರಾವನಿಮಹಾಮಹಾರಿ
೧೬೪. ಸಂಹಾರಕರಣಕಾರಣ ಪ್ರಚಂಡದಂಡನಾ–
೧೬೫. ಯಕಮುಖದರ್ಪ್ಪಣ । ಕಥಕಮಾಗಧಪುಣ್ಯ–
೧೬೬. ಪಾಠಕಕವಿಗಮಕಿವಾದಿವಾಗ್ಮಿ ಜನತಾದಾ–
೧೬೭. ರಿದ್ರಸನ್ತರ್ಪ್ಪಣ । ಜಿನಸಮಯಮಹಾಗ–
೧೬೮. ಗನಶೋಭಾಕರದಿವಾಕರ । ಸಕಳಮು–
೧೬೯. ನಿಜನನಿರಂತರದಾನಗುಣಾಶ್ರಯಶ್ರೇ–
೧೭೦. ಯಾಂಸ । ಸರಸ್ವತೀಕರ್ಣ್ನಾವತಂಸ । ಗೋತ್ರ–
೧೭೧. ಪವಿತ್ರ । ಪರಾಂಗನಾಪುತ್ರ । ಬನ್ಧುಜನಮನೋ–
೧೭೨. ರಂಜನ । ದುರಿತಪ್ರಭಂಜನ । ಕ್ರೋಧಲೋಭಾನೃ–
೧೭೩. ತಭಯಮಾನಮದವಿದೂರಗುತ್ತ ಚಾ–
೧೭೪. ರುದತ್ತ । ಜೀಮೂತವಾಹನ । ಸಮಾನಪರೋ–
೧೭೫. ಪಕರೋದಾರ । ಪಾಪವಿದೂರ । ಜಿನಧರ್ಮ್ಮ–
೧೭೬. ನಿರ್ಮ್ಮಳ । ಭವ್ಯಜನವತ್ಸಳ । ಜಿನಗಂಧೋದಕ–
೧೭೭. ಪವಿತ್ರೀಕ್ರಿತೋತ್ತಮಾಂಗ । ನನುಪಮಗುಣ–
೧೭೮. ಗಣೋತ್ತುಂಗ । ಮುನಿಚರಣಸರಸಿರುಹ–
೧೭೯. ಷ್ಟಂಗ । ಪಂಡಿತಮಂಡಳೀಪುಂಡರೀಕವನಪ್ರಸಂ–
೧೮೦. ಗ । ಜಿನಧರ್ಮ್ಮಕಥಾಕಥನಪ್ರಮೋದನುಂ ।
೧೮೧. ಆಹಾರಾಭಯಭೈಶಜ್ಯ ಶಾಸ್ತ್ರದಾನವಿ–
೧೮೨. ನೋದನುಮಪ್ಪ ಶ್ರೀಮತ್ ಬಲದೇವದಂಡನಾ–
೧೮೩. ಯಕನೆನೆ ನೆಗಟ್ಟಿ ॥ ಆ ಬಲದೇವಂಗಂ ಮ್ರಿಗಸಾ–
೧೮೪. ಭೀಕ್ಷಣೆಯನಿಪ ಬಾಚಿಕಬ್ಬೆಗವಖಿಳೋರ್ವ್ವೀ–
೧೮೫. ಬನ್ಧು ಪುಟ್ಟಿದಂ ಗುಣಿ ಲೋಬರನದಟಲೆವ ಸಿಂಗಿ–
೧೮೬. ಮಯ್ಯನುದಾರ ॥ ವ್ರಿ ॥ ಜಿನಪತಿಭಕ್ತನಿ–
೧೮೭. ಷ್ಟಜನವತ್ಸಳನಾಶ್ರಿತ ಕಳ್ಪಭೂರುಹಂ ಮು–
೧೮೮. ನಿಚರಣಾಂಬುಜಾತಯುಗಭೃಂಗನುದಾರನನೂನ–
೧೮೯. ದಾನಿ ಮತ್ತಿನ ಪುರುಷರ್ಗ್ಗೆ ಪೋಲಿಸುವಡಾರ್ದ್ದೊರೆಯೆಂ–
೧೯೦. ಬಿನೆಗಂ ನೆಗಟ್ಟಿ ನೀ ಮನುಜನಿಧಾನನೆಂದು ಪೊಗಳ್ಗುಂ ಧರೆ

೧೯೧. ಪೆಗ್ಗಡೆ ಸಿಂಗಿಮಯ್ಯನ ॥ ಜಿನಧರ್ಮ್ಮಾಂಬರತಿಗ್ಮರೋಚಿ
೧೯೨. ಸುಚರಿತ್ರಂ ಭವ್ಯವಂಶೋತ್ತಮಂ ಸಿಷ್ಟನಿಧಾನಂ ಮಂತ್ರಿಚಿ-
೧೯೩. ನ್ತಾಮಣಿ ಬುಧವಿನುತಂ ಗೋತ್ರವಂಶಾಂಬರಾರ್ಕ್ಕಂ ವನಿತಾ-
೧೯೪. ಚಿತ್ತಪ್ರಿಯಂ ನಿರ್ಮ್ಮಳನನುಪಮನತ್ಯುತ್ತಮಂ ಕೂ-
೧೯೫. ರೆ ಕೂರ್ಪ್ಪಂ ವಿನಿಯಾಂಭೋರಾಸಿ ವಿದ್ಯಾನಿಧಿ ಗುಣನಿಳ-
೧೯೬. ಯಂ ದಾತ್ರಿಯೊಳ್ ಸಿಂಗಿಮಯ್ಯಂ ॥ ಕ ॥ ಶ್ರೀಯಾದೇವಿ
೧೯೭. ಗುಣಾಗ್ರಣಿಯೀ ಯುಗದೊಳು ದಾನಧರ್ಮ್ಮ-
೧೯೮. ಚಿನ್ತಾಮಣಿ ಭೂದೇವಿಯ ಕೊನ್ತಿದೇವಿಯ ದೊರೆಯೆನ್ನ
೧೯೯. ಸಿಂಗಿಮಯ್ಯನ ವಧುವ ॥ ಸ್ವಸ್ತ್ಯನವರತ ಪರಮಕ-
೨೦೦. ಲ್ಯಾಣಾಭ್ಯುದಯ ಸತಸಹಸ್ರಫಳಭೋಗಭಾಗಿನಿ ದ್ವಿತೀಯ-
೨೦೧. ಲಕ್ಷ್ಮೀಸಮಾನೆಯುಂ । ಸಕಳಕಳಾಗಮಾನೂನೆಯುಂ । ವಿವೇಕಯ್ಕ-
೨೦೨. ಬ್ರಿಹಸ್ಪತಿಯುಂ । ಮುನಿಜನ ವಿನೇಯಜನವಿನೀತೆಯುಂ । ಪತಿಬ್ರತಾಪ್ರಭಾ-
೨೦೩. ವಪ್ರಸಿದ್ಧಸೀತೆಯುಂ । ಸಮಕ್ತಚೂಡಾಮಣಿಯುಮುದ್ವೃತ್ತ ಸವ-
೨೦೪. ತಿನಗ್ಧವಾರಣೆಯುಮಹಾರಾಭಯ ಭೈಷಜ್ಯ ಶಾಸ್ತ್ರದಾನವಿ-
೨೦೫. ನೋದೆಯುಮಪ್ಪ ಶ್ರೀಮದ್ವಿಷ್ಣುವರ್ದ್ಧನಪೊಯ್ಸಳದೇವರ ಪಿರಿಯರಸಿ ಪಟ್ಟಮ-
೨೦೬. ಹಾದೇವಿ ಶಾನ್ತಲದೇವಿಯರ್ ಶ್ರೀಬೆಳ್ಗೊಳತೀರ್ತ್ಥದೊಳ್ಸವತಿಗಂಧವಾರಣ-
೨೦೭. ಜಿನಾಲಯಮಂ ಮಾಡಿಸಿಯಿದಕ್ಕೆ ದೇವತಾಪೂಜೆಗಂ ರಿಷಿಸಮುದಾ-
೨೦೮. ಯಕ್ಕಾಹಾರದಾನಕ್ಕಂ ಜೀರ್ಣ್ನೋದ್ಧಾರಕ್ಕಂ ಕಲ್ಕಣಿನಾಡ ಮೊಟ್ಟೆನ-
೨೦೯. ವಿಲೆಯುಮಂ ಗಂಗಸಮುದ್ರದ ನಡುಬಯಲಲಯ್ವತ್ತು ಕೊಳಗ ಗರ್ದ್ದೆ-
೨೧೦. ಯತೋಂಟಮುಮಂ ನಾಲ್ವತ್ತು ಗದ್ಯಾಣ ಪೊನ್ನನಿಕ್ಕಿ ಕಟ್ಟಿಸಿ ಚರುಗಿಂಗೆ
೨೧೧. ವಿಳಸನಕಟ್ಟಮುಮಂ ಶ್ರೀಮದ್ವಿಷ್ಣುವರ್ದ್ಧನ ಪೊಯ್ಸಳದೇವರಂ
೨೧೨. ಬೇಡಿಕೊಂಡು ಸಕವರ್ಷ ಸಾಯಿರದ ನಾಲ್ವತ್ತಯ್ದೆನೆಯ ಶೋಭಕ್ರಿ-
೨೧೩. ತ್ಸಂವತ್ಸರದ ಚೈತ್ರ ಸುದ್ಧ ಪಾಡಿವ ಬೃಹಸ್ಪತಿವಾರದಂದು
೨೧೪. ತಮ್ಮ ಗುರುಗಳು ಶ್ರೀಮೂಲಸಂಘದ ದೇಸಿಯಗಣದ ಪೊಸ್ತ-
೨೧೫. ಕಗಚ್ಛದ ಶ್ರೀಮನ್ಮೇಘಚಂದ್ರತ್ರೈವಿದ್ಯದೇವರ ಶಿಷ್ಯರಪ್ಪ ಪ್ರ-
೨೧೬. ಭಾಚಂದ್ರಸಿದ್ಧಾನ್ತದೇವರ್ಗ್ಗೆ ಪಾದಪ್ರಕ್ಷಾಳನಂ ಮಾಡಿ
೨೧೭. ಸರ್ಬ್ಬಬಾಧಾಪರಿಹಾರವಾಗಿ ಬಿಟ್ಟ ದತ್ತಿ ॥ ವ್ರಿತ್ತ ॥ ಪ್ರಿಯ-
೨೧೮. ದಿಂದಿನ್ತಿದನೆಯ್ದೆ ಕಾವ ಪುರುಷರ್ಗ್ಗಾಯುಂ ಮಹಾಶ್ರೀಯುಮಕ್ಕೆ-
೨೧೯. ಯಿದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರೊರ್ಬ್ಬಿಯೊಳು

೨೨೦. ಬಾಣರಾಸಿಯೊಳೆಕ್ಕೋಟಿಮುನೀಂದ್ರರಂ ಕವಿಲೆಯಂ ವೇದಾಢ್ಯರಂ
೨೨೧. ಕೊಂದುದೊಂದಯಶಂ ಸಾರ್ಗ್ಗಮಿದೆಂದುಸಾಱಿದಪುವೀ ಶೈ-
೨೨೨. ಳಾಕ್ಷರಂ ಸಂತತಂ ॥ ಶ್ಲೋಕ ॥ ಸ್ವದತ್ತಾಂ ಪರದತ್ತಾಂ ವಾಯೊ ಹ-
೨೨೩. ರೇತಿ ವಸುಂಧರಾ ಷಷ್ಟಿರ್ವ್ವರ್ಷಸಹಶ್ರಾಣಿ ವಿಷ್ಠಾಯಾಂ ಜಾಯ-
೨೨೪. ತೇ ಕ್ರಿಮಿಃ ॥

೨೪
ಲಕ್ಷ್ಮೇಶ್ವರ ಶಾಸನ
ಕ್ರಿ.ಶ. ೧೧೦೭, ೧೧೫೨ ಮತ್ತು ೧೧೫೩

೧. ಜಯುತ್ಯಾನನ್ದಸನ್ದೋಹಜ್ಞಾನೈಶ್ವರ್ಯ್ಯಮಯಸ್ಸದಾ [॥*] ಇಚ್ಛಾಮಾತ್ರ-ಸಮುತ್ಪನ್ನಸಮಸ್ತಭುವ[ನ U-] [೧*]

೨. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ [।*] ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ [॥೨*] ಗಣ.........

೩. ಶ್ರೀಮತ್ಪುರಿಕರಪುರಲಕ್ಷ್ಮೀಮಣ್ಡನನಭವನುಭಯಭವಹಿತಕರನುರ್ವ್ವೀ-ಮಹಿತನೆನಿಪ ದಕ್ಷಿ[ಣ ಸೋಮ...]

೪. ಪದಾರಾ[ಧ]ಕರಂ ॥ [೩*]ನಂದಿಯುಮಗೆಜೆಯು ಮುತ್ತಂಸೇನ್ದುವು-ಮುದ್ಯಜ್ಜಟಾಕಳಾಪಮುಮಿನಿತುಂ ಸನ್ದ [೧*] ಸ್ವಯಂಭು(?)...]-

೫. ಗೆ ಚಳುಕಿವಂಶೋತ್ತಮರಂ ॥ [೪*]

೬. ಶ್ರೀ ಮಚ್ಚಾಳುಕ್ಯವಂಶಲಲಾಮಂ ವಿದ್ವಿಷ್ಟರಾಯಜಗದಳನಖಿಳೋರ್ವ್ವೀ-ಮಣ್ಡನನಪ್ರತಿಮೋದ್ದಾಮಂ ಪೆರ್ಮ್ಮಾಡಿರಾ [UU UU UU UU] ॥ [೫*]

೭. ಶರಣಾಯಾತ ಕುಭೃತ್ಕುಳಪ್ರಕರಮಂ ವಾರಾಶಿಯೆಂತಂತೆ ಬಿತ್ತರದಿಂ ರಕ್ಷಿಸಿ ತೈಲಪಾವನಿಪನಿಂ ಸತ್ಯಾಶ್ರಯೋ[ರ್ವ್ವೀಶ್ವರಂ] (?) UU--U ಚಳುಕ್ಯ]-

೮. ವಂಶಲಲನಾಲಾಲಾಟಲಕ್ಷ್ಮಂ ವಸುಂಧರೆಯಂ ತಾಳ್ದಿದನತ್ಯುದಾತ್ತಮಹಿಮಂ ಶ್ರೀವಿಕ್ರಮೋರ್ವ್ವಿಶ್ವರ ॥ [೬*] ಪರಿಯಿ[-UU-- UUU ಅದ]-

೯. ಟನಿಂ ಚೋಳನಂ ಚಾಳನಂಗೆಯ್ದುರಿಯಿಂ ನೇಪಾಳಭೂಪಾಳನನದಟಲೆಂದ ಗೂರ್ಜ್ಜರೊರ್ವ್ವೀಶರಾಜತ್ಪುರಮಂ ನಿರ್ದ್ಧಾಮ ಧೂ[ಮ UUUUUU--]

೧೦. ಸುಟ್ಟನೊಟ್ಟಯ್ಸಿದುರ್ವ್ವೀವರ ಬೇರಂ ಬೇರದಿಂ ಕಿರ್ತ್ತಲೆದನನುಪಮಂ ವಿಕ್ರಮಾದಿತ್ಯದೇವಂ ॥ [೭*] ಸ್ವಸ್ತಿ ಸಮಸ್ತಭುವನಾಶ್ರಯ [ಶ್ರೀ ಪೃಥ್ವೀವಲ್ಲಭ ಮಹಾ]-

---

೨೪. E.I. XVI pp. 37-40

೧೧. ರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀಮತ್ತ್ರಿಭುವನಮ[ಲ್ಲದೇವರ ವಿಜಯ]-

೧೨. ರಾಜ್ಯವುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ॥ ತತ್ಪಾದಪದ್ಮೋಪಜೀವಿ ॥ಕ॥ ಬನ [ವಾಸೀ UU UU UU]-

೧೩. ನನಘ ಜಯಂತೀಪುರೇಶ ಮಧುಕೇಶಜಗಜ್ಜನವಂದ್ಯಪದಸರೋಜಾರ್ಚ್ಚನ-ತತ್ಪರನುದ್ಧಸಮರಲೋಲಂ ತೈಲಂ॥[೮*] ವೃ॥ ಜನಕ ನಮ[o-U-U-U-]-

೧೪. ರ್ದ್ದಳನದಕ್ಷಂ ಶಾನ್ತಭೂಪಾಳನಾತನ ಮಾದೇವಿ ಸಮಗ್ರಪುಣ್ಯವತಿ ದಲ್ ತಾಯ್ತಾಂ ಶ್ರೀಯಾದೇವಿ ತೈಲನೃಪಂ ಮಾವುಲಿ ಜೋಕಿ ಬಿಕ್ಕಿಯೆನಿಪೀ ಭೂ[ಪಾ]

೧೫. ಳಜಾಳಂ ಯಶೋಧನರೇಂ ಪುಣ್ಯಮೊ ಸತ್ಕನೀಯ ಜನಕ [ರ್*] ಶ್ರೀತೈಲ ಭೂಪಾಳನ ॥ [೯*] ಬಲಿಯೆಂತಂತೆ ತದೀಯದೇಶಮನದಂ ನಿರ್ವ್ವಾಧೆಯಿಂದಾಳ್ದು ಮೆ[ಯ್ಗ]-

೧೬. ಲಿ ದಿಕ್ಕುಂಭಿಂಯು ಕುಂಭಸಂಭೃತಲಸತ್ಸಿಂದೂ(ದೂ)ರರಾಗಾವಿಳ[ಂ] ಬಳ(ಲ)ವತ್ತೇಜಮೆನಲ್ ಧರಾವಳಯಮಂ ನಿಃಕ(ಷ್ಕ)ಂಟಕಂ ಮಾಡಿದಂ ಪಲರುಂ ಬಣ್ಣಿಸ-

೧೭. ಲುದ್ಧತಾರಿದಳನಂ ಕಾದಂಬಕಂಠೀರವಂ ॥ [೧೦*] ಸ್ವಸ್ತಿ ಸಮಧಿಗತ-ಪಂಚಮಹಾಶಬ್ದಮಹಾಮಣ್ಡಳೇಶ್ವರಂ ಬನವಾಸೀಪುರವರಾಧೀಶ್ವರಂ

೧೮. [ಜಯ]ಂತೀಮಧುಕೇಶ್ವರದೇವಲಬ್ಧವರಪ್ರಸಾದಂ ಸಹಜಮೃಗಮದಾಮೋದಂ ತ್ರ್ಯಕ್ಷಕ್ಷ್ಮಾಸಂಭವಂ ಚತುರಸೀ (ಶ್ರೀ)ತಿನಗರಾಧಿಷ್ಠಿತ ಲಲಾಟ-

೧೯. [ಲೋಚನ ಚ]ತುರ್ಭ್ಭುಜಂ(ಜ) ಜಗದ್ವಿದಿತಾಷ್ಟಾದಶಾಶ್ವಮೇಧಯಜ್ಞ ದೀಕ್ಷಾದೀಕ್ಷಿತಂ ಹಿಮವದ್ಗಿರೀಂದ್ರರುಂದ್ರಶಿಖರಿ(ರ) ಶೇಖರಾಯಮಾನ(ಣ)-ಮಹಾಸ್ಫ-

೨೦. [ಟಿಕಶಿಲಾಸ್ತಂ] ಭವಬದ್ಧಮದಗಜ ಮಹಾಮಹಿಮಾಭಿರಾಮಂ ಕಾದಂಬಚಕ್ರಿ ಮಯೂರವರ್ಮ್ಮ ಮಹಾಮಹಿಪಾಳಕುಳಭೂಷಣಂ ಪೆರ್ಮ್ಮ-

೨೧. [ಟ್ಟಿತೂ]ರ್ಯ್ಯನಿರ್ಗ್ಘೋಷಣಂ ಸಾ(ಶಾ)ಖಾಚರೇಂದ್ರಧ್ವಜವಿರಾಜಮಾನ ಮಾನೋತ್ತುಂಗಸಿಂಹಲಾಂಛನಂ ದತ್ತಾರ್ತ್ಥಿಕಾಂಚನಂ ಸಮರಜಯಕಾರಣ ಕ-

೨೨. [ದಂಬಾ]ಭರಣಂ ಮಾರ್ಕ್ಕೊಳ್ವರ ಗಣ್ಡಂ ನಾಮಾದಿಸಮಸ್ತಪ್ರಶಸ್ತಿಸಹಿತಂ ಶ್ರೀಮನ್ ಮಹಾಮಂಡಳೇಶ್ವರಂ ತೈಲಹದೇವರಸಪ್ಪಾನುಂಗಲ್ಲ-

೨೩. ಯ್ಯೂಱಂ ತ್ರಿಭೋಗಾಭ್ಯಂತರಸಿದ್ಧಿಯಿಂ ದುಷ್ಟನಿಗ್ರಹವಿಶಿಷ್ಟಪ್ರತಿಪಾಳ-ನೆಯಿಂದಾಳ್ದರಸುಗೆಯ್ಯುತ್ತಂ ಪಾನುಂಗಲ್ಲ ನೆಲೆ-

೨೪. [ವೀ]ಡಿನೊಳ್ ಸುಳಸಂಕಥಾವಿನೋದದಿಂದಿರಲಿತ್ತಲ್ ॥ವೃ॥ ತೆವರೆಲ್ಲಂ ದೇವತಾಮಂದಿರನಿವಹಮೆ ನಿಮ್ನಸ್ಥಳೀರಾಜಿಯೆಲ್ಲಂ ಸುವಿರಾಜ-

೨೫. ದ್ದೀರ್ಗ್ಘಿಕಾಸಂಕುಳಭರಿತಪಯಃಪೂರನೀರೇಜಕಾಸಾರವೆ ಮತ್ತಂ ತತ್ಸ-ಮಾಳಂಕೃತವಸುಧೆಯದೆಲ್ಲಂ ಲಸಚ್ಚಂದನೋದ್ಯಾನವೆನಲ್ ರ-

೨೬. ಮ್ಯ[೦*] ದಲೆನ್ದುಂ ಪುರಿಕರನಗರೀಲೀಲೆ ಲೋಕಾವಲೋಕಂ ॥ [೧೧*] ಮತ್ತಮಲ್ಲಿ ॥ಕಂ॥ ಒನ್ದೊಂದಕ್ಷರತೆಯಂ ಸಾನನ್ದದಿನಭ್ಯರ್ಚ್ಚಿಸಲ್ಕೆ ಕೊಳಗಂ ತೀವಿತ್ತೆಂದೊ–

೨೭. ಡೆ ಶಿವಲಿಂಗದ ಸಮಸನ್ದ ಮಹೋನ್ನತಿಯ ಪವಣನಜಿಯೆಂ ಪೊಗಳಲ್ ॥ [೧೨*] ಕಡೆಯದ ಕಂಡರಿಸದ ಬೇರ್ಪ್ಪಡಿಸದ ಕಮ್ಮಯಿಸದೊಂದಕೃತ್ತ್ರಿ(ತ್ರಿ)–

೨೮. ಮರೂಪಂ ಪಡೆದ[೦?] ಸ್ವಯಂಭು ನೆಲದಿಂದೊಡೆದುದಯಂಗೆಯ್ದುನಲ್ಲಿ ದಕ್ಷಿಣಸೋಸೋಮಂ ॥ [೧೩*] ಇನ್ತೆನಿಸಿದ ಮಹಾಸ್ವಯಂಭು ಸೋಮನಾಥದೇವರ

೨೯. ಸ್ಥಾನಾಚಾರ್ಯ್ಯಂ ॥ಕ॥ ಸುವ್ರತನಿಳಯಂ ಸಕಳಮಹಾವ್ರತಿ ಸನ್ತಾನಕಲ್ಪಭೂಜಂ ದಶವರ್ಮ್ಮವಜ್ರನಿಯುಕ್ತನೆಸೆದಂ ಪ್ರವ್ರಾಜ್ಯ ಮಹೇಂ–

೩೦. ದ್ರಸೋಮಪಣ್ಡಿತದೇವಂ ॥ [೧೪*] ಇನ್ತು ಶಮದಮಯಮನಿಯಮ–ನಿಷ್ಠಾಗರಿಷ್ಠನಪ್ಪ ಮಹೇಂದ್ರಸೋಮಪಣ್ಡಿತದೇವರ್ಮ್ಮಹಾ–

೩೧. ಮಹಿಮನಪ್ಪ ಸೋಮನಾಥದೇವದಿವ್ಯಶ್ರೀಪಾದಾರ್ಚ್ಚನಾಳಂಕೃತಘುಶೃ(ಸೃ)ಮಣಶೃ(ಸೃ)ಣಚನ್ದನಾನುಲೇಪ ಸುಗನ್ಧಮುಮಂ ತತ್ಪ್ರಸಾ–

೩೨. ದಶೇಷಾಕ್ಷತಂಗಳುಮಂ ಕೊಣ್ಡು ಪಾನುಂಗಲ್ಲಿಗೆ ಪೋಗಿ ಮಹಾಮಣ್ಡಳೇಶ್ವರಂ ತೈಲಹದೇವನಂ ಪರಸುವುದುಂ ಹರ್ಷೋತ್ಕರ್ಷಚಿತ್ತನಾಗಿ ಸ್ಥಾ–

೩೩. ನವಿಶೇಷಮುಮಂ ದೇವತಾವಿಷೇಷಮುಮಂ ಮನದೆಗೊಣ್ಬು ಸೋಮನಾಥ–ದೇವರ್ಗ್ಗಂಗಭೋಗಕ್ಕೆ ನಮ್ಮ ನಾಡೊಳೊಂದೂರಂ ಕುಡುವಮೆಂದು ವಿಚಾ–

೩೪. ರಿಸಿ ಶ್ರೀಕರಣಪ್ರಧಾನಸೇನಾಧಿಪಪುರಸ್ಸರಂ ಸ್ವಸ್ತಿ ಶ್ರೀಮಚ್ಚಾಳುಕ್ಯವಿಕ್ರಮಸಂವತ್ಸರದ ೩೨ನೆಯ ಸರ್ವ್ವಜಿತ್ ಸಂವತ್ಸರದ ಪು–

೩೫. ಷ್ಯಶುದ್ಧ ೧೨ ಆದಿವಾರವುತ್ತರಾಯಣಸಂಕ್ರಮಣವ್ಯತೀಪಾತಂ ಕೂಡಿದ ಪುಣ್ಯತಿಥಿಯೊಳ್ ಪಾನುಂಗಲ್ಲಯ್ನೂಱರ ಕಂ–

೩೬. ಪಣಂ ಕುನ್ದವುರ ಮೂವತ್ತಱ ಬಳಿಯು ಬಾಡಂ ಕಲ್ಲವಣವುಂ ಶ್ರೀ ಸೋಮನಾಥದೇವರ್ಗ್ಗಂಗಭೋಗಕ್ಕಾಚಂದ್ರಾರ್ಕ್ಕಂ ಸ್ಥಾಯಿಯಾಗಿ

೩೭. ಸರ್ವ್ವನಮಶ್ಯ(ಸ್ಯ)ಮುಂ ಸರ್ವ್ವಬಾಧಾಪರಿಹಾರಮುಮಾಗಿ ಪಾರಮೇಶ್ವರದತ್ತಿಯಾಗಿ ತಾಂಮ್ರಶಾಸನಸಹಿತಂ ಮಹೇಂ–

೩೮. ದ್ರಸೋಮಪಣ್ಡಿತರ ಕಾಲಂ ಕರ್ಚ್ಚಿ ಧಾರಪೂರ್ವ್ವಕಂ ಮಾಡಿ ಬಿಟ್ಟಂ । ॥ಶ್ಲೋಕ॥ ಸ್ವದತ್ತಾ ಪರದತ್ತಾಂ ವಾಯೋ ಹರೇತ ವಸು–

೩೯. ನ್ಧರಾ [।*] ಷಷ್ಟಿ[ರ್ವ]ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥ [೧೫*] ಕಂ॥ ಗಂಗಾಸಾಗರಯುಮುನಾ ಸಂ(ಗ)ಮದೊಳ್ ಕೋಟಿ ಕವಿ–

೪೦. ಲೆಯಂ ಬ್ರಾಹ್ಮಣರು ಲಿಂಗಿಗಳಂ ಸಲೆ ಪುಣ್ಯದಿನಂಗಳೊಳಳಿದವರ್ಗಳಪ್ಪರಿನ್ತಿದನಳಿದರ್ ॥ [೧೬*] ಪ್ರತಿಪಾಲಿಸಿದವರ್ಗ್ಗನನ್ತಪುಣ್ಯಫಳ ॥

೪೧. ಶ್ರೀವಧು ತನ್ನ ಪೇರುರದೊಳುದ್ಭಜಯಾಂಗನೆ ತೋಳೊಳೊಪ್ಪೆ ಧಾತ್ರೀ ವಧುವಿಚ್ಛೆಕಾರ್ತ್ತಿ ಕಡೂಗೂ(ಗು)ತ್ತಿರೆ ಚಾರು ಚಳುಕ್ಯವಂಶರಾಜೀವ-

೪೨. ವಿಕಾಶನೋಲ್ಲಸಿತ ಚಣ್ಡಕಂ ನೆಗರ್ದ್ದ(ರ್ದ)೦ ಸಮಸ್ತಧಾತ್ರೀವಳಯೇಶ-ನಿರ್ಮ್ಮಡಿ ಪದಿರ್ಮ್ಮಡಿ ನೂರ್ಮ್ಮಡಿ ತೈಲಭೂಭು[ಜ]೦ ॥ [೧೭*] ಸ್ವಸ್ತಿ ಸಮಸ್ತಭುವನಾ-

೪೩. ಶ್ರಯಂ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತಾಶ್ರಯಕುಳತಿಳಕಂ ಚಾಳುಕ್ಯಾಭರಣಂ ಶ್ರೀ

೪೪. ಮತ್ತ್ರೈಲೋಕ್ಯಮಲ್ಲದೇವರ ವಿಜಯುರಾಜ್ಯವುತ್ತರೋತ್ತರಾಭಿವೃದ್ಧಿಪ್ರವ-ರ್ಧಮಾ[ನ]ಮಾಚಂದ್ರಾರ್ಕ್ಕತಾರಂಬರ್ಂ ಸಲುತ್ತಮಿರೆ ॥ ತ-

೪೫. ತ್ಪಾದಪದ್ಮೋಪಜೀವಿ ॥ ಕಾದಂಬಕುಳಪ್ರಭವಪ್ರಾದುರ್ಭಾವಂ ಜಯುನ್ತಿಮಧು-ಕೇಶ್ವರದೇವೋದಿತ ವರಪ್ರಸಾದನಿಳಾದಯಿತ[೦] ಮಣ್ಡ-

೪೬. ಳೇಶ ಮಾವುಲಿತೈಲಂ ॥ [೧೮*] ನರೆಯಂಗಲ್ ನೆಲೆವೀಡೆನೆ ಪರಿಗ್ರಹಂ ಪ್ರಜೆಗಳಾಪ್ತವರ್ಗ್ಗಂ ಪಳೆಯರ್ಪ್ಪಿರಿಯ ಶ್ರೀಕರಣದವರ್ವ್ವರಮಂತ್ರಿ-

೪೭. ಗಳೆಂದು ಪೊರೆಯಲುದ್ಯತನಾದಂ ॥ [೧೯*] ಸನ್ತಾನಸ್ಥಂ ನೃಪಪದಮನ್ತಳೆದುಂ ಧರ್ಮ್ಮತತ್ಪರಂ ತೈಲನೃಪಂ ಮನ್ತಣವೇನೊ ಪರಿತ್ರಾನನ್ತ-

೪೮. ಸುಖಕ್ಕೆಳರಸಿ ಪುಣ್ಯಭಾಜನನಾದಂ ॥ [೨೦*] ಅನ್ತು ಕತಿಪಯ ಸಂವತ್ಸರಂ ತದ್ರಾಜ್ಯಲಕ್ಷ್ಮಿ ಯನಳಂಕರಿಸಿರ್ದ್ದು ಕಾದಂಬಕಣ್ಠೀರವಂ ತೈಲಹ-

೪೯. ದೇವಂ ಸೋಮನಾಥದೇವದರ್ಶನವ್ರತಪ್ರಭಾವದಿಂದಿರೆ ॥ ಅಸಿಧಾರಾವ್ರತಮಂ ಸಾಧಿಸಿ ಜಯವಧು ವಾಣಿ ಬಾಣಮುಖಮಂ ಸಲೆ

೫೦. ಸಾಧಿಸಿ ಬಂದು ಭುಜದೊಳಾಸ್ಯದೊಳೆಸೆದಿರ್ಪ್ಪಳ್ ವೀರಪಾಣ್ಡ್ಯಭೂಪಾಳಕನ ॥ [೨೧*] ಆ ಮಹಾಮಣ್ಡಳೇಶ್ವರಂ ಪುಲಿಗೆಱೆನಾಡ ಮನ್ನೆಯಮ-

೫೧. ನಾಳ್ದರಸುಗೆಯ್ಯುತ್ತಿರೆ ॥ ಪುರಿಕರದೇಶಮುಮಂ ಬಂಧುರತರಬನವಾಸೆದೇಶಮಂ ಮೇಲಾಳ್ಕೆ ನಿರನ್ತರಮಾಗಲಾಳ್ದನತಿದುರ್ದ್ದ-

೫೨. ರಧೈರ್ಯ್ಯಂ ದಣ್ಡನಾಥಮಹದೇವರಸಂ ॥ [೨೨*] ಆ ಪ್ರಚಣ್ಡದಣ್ಡನಾಥನ ಬೆಸದಿಂ ಪುಲಿಗೆಱೆನಾಡಂ ಬಿದ್ದಂ(ಡ್ಡ)ರಸದಣ್ಡನಾಥನುಂ ಮಹಾಪ್ರ-

೫೩. ಧಾನೋತ್ತಮನತ್ತಿರಾಜನುಮಾಳ್ದರವರಪ್ರಭಾವಮೆನ್ತೆನೆ॥ಕಂ॥ಎರಡಂ ನುಡಿಯದ ಸಂಗರಧರೆಯೊಳ್ ಬೆಂಗುಡದ ಪರ-

೫೪. ವಧೂಕೇಳಿಯನಾಚರಿಸದ ಪೆಂಪಿನೊಳಾವಂ ದೊರೆ ಪರಿಕಿಸೆ ಬಿದ್ದರಾಜದಣ್ಡಾಧಿಪನೊಳ್ ॥ [೨೩* [೧೨*] ಮಧುರವಚೋವಾಚಃಪ-

೫೫. ತಿ ವಿಧುವಿಶದಯಶಂ ವಿನೂತಶಾಡ್ಗುಣ್ಯನಯಾಂಬುಧಿಯೆಂದೊಡಿತರರೆಣೆ[...]ೀ ಪ್ರಧಾನಸೇವಾಧಿಪತ್ಯನತ್ತಿಪರಾಜ ॥ [೨೪*]

೫೬. ಸ್ವಸ್ತಿಸಮಸ್ತಪ್ರಶಸ್ತಿಸಹಿತಂ ಶ್ರೀ ಮನ್ಮಹಾಮಣ್ಡಳೇಶ್ವರಂ ಮಾವುಲಿ ತೈಲಹದೇವಂ ಸೋಮನಾಥದೇವದರ್ಷ(ರ್ಶ)ನವ್ರತೋ-

೫೭. ದ್ಯಾಪನಾರ್ತ್ಥಂ ಶ್ರೀಮದ್ರಾಜಧಾನಿಪಟ್ಟಣಂ ಪುಲಿಗೆಱೆಗೆ ಬಂದು ಸೋಮ-ದೇವಪದನಖಮಯೂ [ಖೋ*] ಲ್ಲೇಖಲೇಖಾಪಗಾಪ್ರವಾಹ-

೫೮. ದಿಂ ಪವಿತ್ರೀಕೃತಶರೀರನಾಗಿ ಕ್ಷೀರಧಾರಾಪೂರದಿಂ ಸಹಸ್ರಗದ್ದುಗೆಯಂ ಕೊಟ್ಟು ದೇವರ್ಗ್ಗೆ ಮುನ್ನಂ ತಮ್ಮಜ್ಜಂ ಪಿರಿಯ ತೈಲಹದೇವಂ

೫೯. [ಬಿ]ಟ್ಟ ದೇವಭೋಗಂ ಕಲ್ಲವಣಮುಂ ಪುನರ್ದ್ದತ್ತಿಯಾಗಿ ಸ್ವಸ್ತಿ ಶ್ರೀಮ-ಚ್ಚಾಳುಕ್ಯತ್ರೈಳೋಕ್ಯಮಲ್ಲದೇವವರ್ಷದ ೩ನೆಯ ಅಂಗಿರಸಂವತ್ಸರದ

೬೦. [ಪು]ಷ್ಯ ಶುದ್ಧ ೮ಮಿ ಸೋಮವಾರವುತ್ತರಾಯಣಸಂಕ್ರಮಣವ್ಯತೀಪಾತಂ ಕೂಡಿದ ಪುಣ್ಯತಿಥಿಯಯೊಳ್ ಶ್ರೀಸ್ವಯಂಭು ದಕ್ಷಿಣಸೋಮನಾ-

೬೧. ಥದೇವರ್ಗ್ಗಂಗಭೋಗಕ್ಕೆ ಕಲ[ಲ್ಲ]ವಣದ ಮೇಲಾಳ್ಕೆ ಮನ್ನೆಯಂ ಕಾಣಿಕೆ-ಯಾಯದಾಯ ಕಿಱುಕುಳ ಸಹಿತಂ ಸರ್ವ್ವಾಯಶುದ್ಧಿಯಾಗಿ ಪೂರ್ವ್ವದ-

೬೨. ತ್ತಿಕ್ರಮದಲು ಸರ್ವ್ವನಮುಶ್ಯ(ಸ್ಯ)ಮುಂ ಸವ್ವಬಾಧಾಪರಿಹಾರಮಾಗಿ ಅಲ್ಲಿಯ ಸ್ಥಾನಾಚಾರ್ಯ್ಯಂ ಜ್ಞಾನಸೋಮಪಣ್ಡಿತದೇವ-

೬೩. [ರ ಕಾ]ಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಪಾನುಂಗಲ್ಲಯ್ನೂಱಱ ಪ್ರಭುಗಾವುಣ್ಡುಗಳುಂ ಶ್ರೀಕರಣಪ್ರಧಾನಸೇನಾಧಿಪತಿಸಹಿತಂ ನರೆಯಂ

೬೪. ಗಲ್ಲ ನೆಲೆವೀಡಿನೊಳಿರ್ದ್ದು ತಗ್ರ್ಗಾಮಮಂ ಬಿಟ್ಟ ॥ ಸ್ವಸ್ತಿ ಶ್ರೀಮಚ್ಚಾಳುಕ್ಯತ್ರೈಳೋಕ್ಯಮಲ್ಲ ವರ್ಷದ ೪ನೆಯ ಶ್ರೀಮುಖಸಂವತ್ಸರದ ಚೈ-

೬೫. ತ್ರದ ಅಮವಾಶ(ಸೆ) ಸೋಮವಾರದಂದು ಹಾನುಂಗಲ್ಲಯ್ನೂಱಱ ದಣ್ಡನಾಯಕಂ ಡಾಕರಸನುಂ ಶ್ರೀಕರಣಂಗಳುಂ ಶ್ರೀ ಸೋಮನಾಥದೇ-

೬೬. ವರ ನಂ(ನಿ)ತ್ಯನನ್ದಾದೀವಿಗೆಗೆ ಹಾನುಂಗಲ್ಲಯ್ನೂಱಱ ಗ್ರಾಮಾನು ಗ್ರಾಮದಲು ಪ್ರತ್ಯೇಕಂ ಬಿಟ್ಟ ಪಣವೊಂದು ॥ವೃ॥ತನಗಾರಾಧ್ಯಂ[ತ್ರಿ]-

೬೭. [ಳೋ]ಕೀಪತಿ ವಿಬುಧನುತಂ ಸೋಮದೇವಾಧಿಪ[ಂ] ಸಜ್ಜನಕಂ [ಮಾ]-ಹೇಂದ್ರಸೋಮಂ ಜನನಿ ವಿನುತಚಾರಿತ್ರೆ ತಾಂ ಮಾಳಿಯಕ್ಕಂ ವಿನಯಾಳಂಕಾರೆಯೆಂ

೬೮. ಧನ್ಯನೊ ಗುಣಗಣವಾರಾಶಿ[ಸ]ಂಪೂರ್ಣ[ರ್ಣ್ಣ] ಸೋಮಂ ಮುನಿಸಂತಾನೋತ್ಪಳೋ [-] ಇತ ವಿಪುಳಸತ್ಸೋಮನೀ ಜ್ಞಾನಸೋಮಂ ॥ [೨೫*] ಶ್ಲೋಕ ॥ ಬ-

೬೯. ಹುಭಿರ್ವ್ವಸುಧಾ ದತ್ತಾ ರಾಜಭಿಸ್ಸಗರಾಧಿಭಿ [।*] ರ್ಯ್ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ [॥*೨೬*] ಭೂವಿನುತಂ ರೂವಾರಕ-

೭೦. ಳಾವಿದ ಜಿನ್ನೋಜನಗ್ರಪುತ್ರಂ ಚಾವಂ ಕೇವಳಮೆ ಸವಣ್ಣಲ್ಲರ ದೇವಂ ರಾಜೋಜನಿವರ್ಗಳೆಸೆದರ್ದ್ಧರೆಯೊಳ್ [*೨೭*] ರಾಜೋಜನ ಕಣ್ಡರನೆ ॥

೨೫
ಕುರುಗೋಡ ಶಾಸನ
ಕ್ರಿ.ಶ. ೧೧೭೬

೧. ಶ್ರೀಕಲಿದೇವ [॥*] ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ। ತ್ರೈಲೋಕ್ಯನಗರಾ-

೨. ರಂಭಮೂಲಸ್ತಂಭಾಯ ಶಂಭವೇ ॥ ಶ್ರೀರಾಮಾರಮಣಪ್ರಣತಮಹಿ-

೩. ಮಂ ಬೃಂದಾರಕೋದಾರಬೃನ್ದಾರಾಧ್ಯಂ ತ್ರಿದಶಾಧಿನಾಥನಗಜಾಚಂಚತ್ಕುಚಾಲೋಲಕಾಶ್ಮೀರೋರಸ್ಥಳ-

೪. ನಬ್ಜಸಂಭವನತಂ ತ್ರೈಲೋಕ್ಯನಿಸ್ತಾರವಿಸ್ತಾರಂ ಶ್ರೀಕಲಿದೇವನೊಲ್ದು ನಮಗೀಗಿಷ್ಟಾರ್ತ್ಥಸಂಸಿದ್ಧಿಯಂ ॥ವ॥ ಅನ್ತು ಜಗತ್ಕರ್ತ್ತ-

೫. ನೆನಿಸಿದ ಮಹಾದೇವನೆಂಬುದ್ಭಾವಿತಮಾದಿಳಾವನಿತೆಗೆ ಕಾಂ[ಚೀ]ಮುದ್ರೆ ೦ತೆ ಚಕ್ರಮೆನಿಸಿದ ಸಮುದ್ರಮೆನ್ತೆನೆ ॥

೬ ವೃ॥ ಮದವ(ಂ)ನ್ನಿರೇಭನೀರಾಶ್ವ ಕರಿಮಕರೋಚ್ಚಂಡಮಂಡೂಕಗಂಡೂ[ಷದ] ನಾನಾನಕ್ರಚಕ್ರಕ್ರಕ-

೭ ಚಕಮತಲೋತ್ಸಪಾಠೀನರಾಜೀವಿದಿತ ಕ್ಷುದ್ರೋದರಾದಿಪ್ರಬಳಜಳಚರಾನೀಕಸಂಕ್ಷೋಭ-

೮. ಪುಚ್ಛಚ್ಛದವಾತಾಘಾತ ಭೂತೋದ್ವಹಳಲಹರಿಕಾಸ್ಫಾರಭದ್ರಂ ಸಮುದ್ರಂ ॥ ವ॥ ಶ್ರೀಮಜ್ಜಂಬೂದ್ವೀಪ-

೯. ದೊಳ್ ಭರತಮಹೀಕಾನ್ತೆಯ ಕುಂತಳದಂತೆಸೆವುತಿರ್ದ್ದ ಕುಂತಳದೇಶದ ತುಂಗಾಭದ್ರಾನದಿಯಿಂ ತೆಂಕಲ್ ॥ವೃ॥ವ-

೧೦. ನರುಹ ಷಂಡಂದಿ ಬೆಳೆದ ಕೆಯ್ವೊಲದಿಂ ಸಹಕಾರಸಾರಸತ್ವನಸಲವಂಗ-[ಕೌ]ಂಗವಲೀತಿಳಕಪ್ರತ-

೧೧. ಳಪ್ರವಾಳನೂತನಕರನಾಗಪೂಗಸಕಳರ್ಧಕನನ್ದನದಿನ್ದವೆಯ್ದೆ ತಾನೆ ನಲಿದು ಬಲ್ಲಕುನ್ದೆ ನಡುವಿಕ್ಕುತಮೊಪ್ಪುಗು-

೧೨. ವೆತ್ತ ನೋರ್ಪ್ಪಡುಂ ॥ ಅಲ್ಲಿ ಪಟ್ಟಣಂ ಕುಱಗೋಟದುರ್ಗ್ಗಮೆಂತೆನೆ

೧೩. ವೃ॥ ಚೋಳನನಾಳುಮಾಡುವುದು ಗೂರ್ಜ್ಜರರಂ ಸಲೆ ತರ್ದ್ದಿಕುಂ ಕ-

೧೪. ರಂ ಲಾಳನನಾಳಿಮಾಡುವುದು ಪಾಂಡ್ಯನನಂಡಲೆಗುಂ ತುಲುಂಗಭೂಪಾಲನಳಿದಿಕ್ಕೆಯನೆ ಮಾಡುವದೀ ಕುಱುಗೋಡ ಕೋ-

೧೫. ಟೆ ತಾಂ ಕಾಳಗವೆಂದಡೇಳುಮಡಿ ಪೆರ್ಚ್ಚುವುದಚ್ಚರಿ ಯಾರೊ ಕಾದುವರ್ ॥ಕಂ॥ ಆ ಪುರಮಂ ಪ್ರತಿಪಾಳಿಪ ಭೂಪಶಿ-

---

೨೫. SII Ix-i 319-322

೧೬. ಖಾಮಣಿ ಶಿವೈಕಚೂಡಾಮಣಿ ದಿಗ್ವ್ಯಾಪಿಯಶೋದರ್ಪ್ಪಣಮಣಿ ತಾಪಿತರಿಪು ರಾಚಮಲ್ಲನಪ್ರತಿಮಲ್ಲಂ ॥ವ॥ಸ್ವ–

೧೭. ಸ್ತಿಸ ಮಧಿಗತಪಂಚಮಹಾಶಬ್ದ ಮಹಾಮಣ್ಡಳೇಶ್ವರನುಂ ಭೋಗಾವತೀ–ಪುರವರಾಧೀಶ್ವರನುಂ ಸಿತರಗ–

೧೮. ಣ್ಡನು ಸಿಂದಗೋವಿಂದನುಂ ಪಾತಾಳಚಕ್ಕವರ್ತ್ತಿಯ ಶ್ರೀವೀರಕಲಿದೇವರ ಪಾದಾರಾಧಕನುಮೆನಿಸಿದ ರಾಚ–

೧೯. ಮಲ್ಲದೇವನ ರಾಜ್ಯಮುತ್ತರೋತ್ತರವಾಗುತ್ತಿರಲು ತತ್ಪುರ ನಿವಾಸಿಗಳಪ್ಪ ಮುಂಮುರಿದಂಡಗಳ ಮಹಿಮೆ

೨೦. ಯೆನ್ತೆಂದೆಡೆ ॥ರಗಳೆ॥ ಸ್ವಸ್ತಿ ಗವಱೀಶಪದಪದ್ಮಷಟ್ಚರಣರುಂ । ವಿಸ್ತೀರ್ಣ–ವಸ್ತುಗುಣವಿನಿಹಿತಾಚರಣರು । (।)

೨೧. ಪಂಚಶತವೀರಶಾಸನಗುಣೋದ್ಧರಣರುಂ । ಸಂಚಿತಸಮಸ್ತಧರ್ಮ್ಮೈಕನಿ–ಸ್ತರಣರುಂ ಬ್ಯವಹಾರನಯವಿ–

೨೨. ನಯವಿಜ್ಞಾನವಿದ್ಯರುಂ । ನವರತ್ನವಾಹನಪರೀಕ್ಷಾನವದ್ಯರುಂ । ಶರಣೆಂದು ಕಂಡರಂ ಕರುಣದಿಂ ಕಾವರುಂ ।

೨೩. ಬಿರುದಿಂಗೆ ಬೀಗುವರ ಹರಣವಂ ಸೋವರುಂ । ತೋಟಿಯೆಂದಡೆ ಕೋಟಿಲಾಭವೆಂದುಲಿವರುಂ ಆಟಂದ ಬವರಕ್ಕೆ ನಾ–

೨೪. ಟಕಂ ನಲಿವರುಂ । ಅಯ್ಯಾವೊಳೆಯ ತಳದಿನಿದುವೆ ನೆರ್ಗ್ಗಿಱಿದೆನಿಪ ರಯ್ಯಾಮಾ ದ್ವಾರವತೀಪುರಕೆ ಕುಱುವೆನಿಪ ।

೨೫. ದಂಡಂಗಳೊಳ್ ಮಹಾವಿನಹಾಳ ಕಲ್ಲಿಸೆಟ್ಟಿಯನ್ವಯವೆನ್ತೆನೆ ॥ಕಂ॥ ಎಳೆಯೊಳಗೆ ಸಿಂದವಾಡಿಗೆ ತಿಲಕದವೊಲೆಸೆ–

೨೬. ವ ಮುದಿಯನೂರೊಳ್ಪಿಂಪಗ್ಗಳದ ಬಣಂಜಿಗನೆನೆ ಮೂಗುಳಬುದ್ಧಿಯ ಕೇತಿಸೆಟ್ಟಿಯ ಪೊಗಳದದಾರ್ ॥ವೃ॥ ಮೂ–

೨೭. ಗುಳಬುದ್ಧಿಯೆಂಬ ಪೆಸರಂ ಪಡದೊಪ್ಪುವ ಕೇತಿಸೆಟ್ಟಿಗಂ ಭಾಗಿನಿ ಚಂದಿಕಬ್ಬೆಗೊಗೆದಿರ್ದ್ದ ಸುತರ್ಗ್ಗಣೆಯಾರು ಲೋಕದೊ–

೨೮. ಳ್ ನಾಗಮಸೆಟ್ಟಿಗಂ ನೆಗಳ್ದ ಮಾಧವಸೆಟ್ಟಿಗೆ ಬೇಡಿಸೆಟ್ಟಿಗುದ್ಯೋಗದ ರುದ್ರಸೆಟ್ಟಿಗೆ ನೆಗಳ್ತೆಪೊಗಳ್ತೆಯ ಚೀಲಿಸೆಟ್ಟಿಗಂ ॥

೩೦. ಕಂ॥ ಅಂತೆನಿಪ ನಾಗಿಸೆಟ್ಟಿಗೆ ಕಾಂತೆ ಪತಿಬ್ರತೆಗೆ ಮಾಕಣಬ್ಬೆಗೆ ಸುತರತ್ಯಂತಗುಣಿ ಮಾದಿಸೆಟ್ಟಿಯುಂಮಂತಾ

೩೧. ಕಲಿದೇವಸೆಟ್ಟಿಯುಂ ಪೆಸರ್ವ್ವಡೆದರ್ । ಅಂತಿರ್ವ್ವರೊಳಗೆ ಬಿರುದಬಣಂಜಿಗರಯ್ನೂರ್ವ್ವರ ಪುತ್ರ, ಕಲ್ಲಿಸೆಟ್ಟಿ ಗೋತ್ರಪವಿತ್ರಂ ।

೩೨. ಹರಿಯಳದ ಪುರದ ಕಲಿದೇವರ ವರಪುತ್ರಂ ಪರಾಂಗನಾಜನಪುತ್ರಂ ॥ವೃ॥ ಹುಸಿಯದ ಮಾತು ಕೊಟ್ಟಳಿಪ–

೩೩. ದಾರ್ಪ್ಪ ಕಳಂಕದೊಳ್ಗುಂದದೊಳ್ಜಸಂ । ಕುಸಿಯುದ ಧೈರ್ಯ್ಯಂ ವೋಜೆ–ಗಿಡದೊಳ್ಗುಣವಂಜದ ಬೀರವೆಗ್ಗಿನಿಂ ಮುಸುಕದ

೩೪. ರೂಪು [ದ]ಣ[1] ವಣವೆಲ್ಲನಿತಿಲ್ಲದ ಶಂಭುಭಕ್ತಿ ಭಾವಿಸೆ ಕಲಿದೇವರೀಯಲಿವು ಸಂದಪುವೀ ಕಲಿದೇವಸೆಟ್ಟಿಯೊಳ್ ॥

೩೫. ಕಂ ॥ ಕಲಿದೇವಸೆಟ್ಟಿಯುತ್ತಮಕುಲವನಿತೆ ಕುಲೀನೆ. ಪತಿಹಿತಾಳಂಕ್ರಿತೆ ತಾಂ ಕಲಿದೇವಪದಾರಾಧಕಿ ಸೆಲೆ ಕೇ

೩೬. ತಾಂಬಿಕೆಯೆ ಧನ್ಯೆ ಧರಣೀತಳದೊಳ್ ॥ ಕಲಿದೇವಸೆಟ್ಟಿಗಂ ಕೇತಲೆಗಂಮಕ್ಕಳ್ ವಿನೂತ ವಾಗಾಂಬಿಕೆಯಾಚಲೆ ಸ–

೩೭. ಕಲಗುಣನಿಧಾನಂ ಕಲಿದೇವನೆನಲ್ಕೆ ಧನ್ಯರಾರಿವರಿಂದಂ ॥ವೃ॥ ಸತ್ಯದ ಬಿತ್ತು ಸಾಹಸದ ಸಾಗರವೊಳ್ಗುಣ–

೩೮. ದಾಗರಂ ಜನಸ್ತುತ್ಯತೆಯೊಳ್ಪು ಧರ್ಮ್ಮದ ತವರ್ಮ್ಮನೆ । ವಾಂತನದಿ–ರ್ಕ್ಕೆದಾಣವೌಚಿತ್ಯದ...ಜಸದ ಸಯ್ಪು ನೆ–

೩೯. ಗಳ್ತೆಯ ಲೋಕದೇಳ್ಗೆಯೌನ್ನತ್ಯದ ಗೊತ್ತೆನುತ್ತೆ ಧರೆ ಬಣ್ಣಿಪುದೀ ಕಲಿದೇವಸೆಟ್ಟಿಯಂ ॥ ಮತ್ತಮಾತನ ಬ್ಯವಸಾಯ–

೪೦. ಬ್ಯವಹಾರವೆನ್ತೆನೆ ॥ಕಂ॥ ಭಕ್ತಿಯ ಭಂಡ ಮೊದಲ್ ನಿಜಭಕ್ತಿಯೆ ಕೋಟಾನುಕೋಟಿ ಲಾಭಂ ಶಿವಸದ್ಭಕ್ತಿಯ ಬೆಳಿಸಿ

೪೧. ...ಭಕ್ತ ಕಲಿದೇವಸೆಟ್ಟಿ ನೆಗಳ್ದಂ ಧರೆಯೊಳ್ ॥ವ॥ ಆತನ ಹೃದಯಕಮಲದೊಳ್ ಮನಃಪ್ರೇರಕ ಮಹಾದೇವಂ ಜೀವ–

೪೨. ನಾಗಿರ್ಪ್ಪನೆನ್ತೆನೆ ॥ಕಂ॥ ಚಿನ್ತಾಮಣಿಲಿಂಗಂ ಹೃದಯಾನ್ತರದೊಳ್ನಿನ್ದು ಕಲ್ಲಿಸೆಟ್ಟಿಗೆ ದಯೆಯಿಂದಿನ್ತು ನಡೆಯಿನ್ತು ನುಡಿ–

೪೩. ಯೆಂದಿಂತು ಸದಾ ಶಿಕ್ಷಿಸುತ್ತೆ ರಕ್ಷಿಸುತ್ತಿರ್ಪ್ಪಂ ॥ವ॥ ಅಂತು ನಿಜಾಂತರಂಗದೊಳಿರ್ದ್ದ ಭಕ್ತಿಯ್ಮಂ ಶಕ್ತಿಯ್ಮಂ ಕು–

೪೪. ಡೆ ಬಹಿರಂಗಕ್ಕೆ ವರಪ್ರಸಾದಮ್ಬಳೆದು ಕುಱುಗೋಡ ತೆಂಕಣ ಭಾಗದಲ್ ಮಾಟಕೂಟಪ್ರ(ಪ್ರಾ)ಸಾದದೇಗು–

೪೫. ಲಮಂ ಮಾಡಿಸಿ ತಂನಿಷ್ಟವಪ್ಪ ॥ ಕಂ ॥ ಕಲಿದೇವರ್ಗ್ಗೆ ಶಿವೋತ್ಸವದೂವವಿಂದೆ ಕಳಾಪ್ರ–

೧.'ಣಿ' ಇರಬಹುದು

೪೭. ತಿಷ್ಠೆಯಂ ಮಾಡಿದ ದೇಗುಲಮುಮನೆತ್ತಿಸಿದೀ ನಿರ್ಮ್ಮಳಧಾರ್ಮ್ಮಿಕನೆನಿಪ ಕಲ್ಲಿಸೆಟ್ಟಿ ಕೃತಾರ್ತ್ಥಂ ॥

೪೭. ಭೂತೇಶನ ಪಡುವಣ ವಿಖ್ಯಾತಿಯ ಕೆಱೆ ಬಡಗಲೆಸೆವ ತೀರ್ತ್ಥಂ ತೆಂಕಲು ಶೀತಳಭಾವಿಯ-

೪೮. ನಗಳಿಸಿದಾತಂ ಕಲಿದೇವಸೆಟ್ಟಿ ಧನ್ಯಂ ಜಗದೋಳ್ ॥ ಅನ್ತು ॥ ಕಟ್ಟಿಸಿದ ಕೆಱೆ ಮನೋಮುದದಿಟ್ಟಾರವೆ ಪ-

೪೯. ಸಿಯಲೀಯದಿಕ್ಕುವ ಸತ್ರ ಬಿಟ್ಟ ಬೆಳಗೆಯ್ಗಳೆಱೆವಱವಟ್ಟಿಗೆ ಕಲಿದೇವಸೆಟ್ಟಿ ಮಾಡಿದ ಧರ್ಮ್ಮಂ ॥

೫೦. ವ ॥ ಅನ್ತು ಧರ್ಮಮೂರ್ಜ್ಜಿತವಾಗುತ್ತಿರಲ್ ಸಮಸ್ತಭುನಾಶ್ರಯಂ ಪ್ರಥ್ವೀವಲ್ಲಭಂ ಮಹಾರಾಜಾ-

೫೧. ಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಕಳಚುರ್ಯ್ಯಕುಳತಿಳಕಂ ಭುಜಬಳಮ-

೫೨. ಲ್ಲಂ ಕುಂತದೇಶದ ಚಕ್ರವರ್ತ್ತಿ ರಾಯಮುರಾರಿ ಸೋವಿದೇವನ ರಾಜ್ಯಂ ಪ್ರವರ್ತ್ತಿಸುತ್ತ-

೫೩. ಮಿರಲು ಸಕವರ್ಷದ ೧೧೯೭ನೆಯ ಮನುಮಥಸಂವತ್ಸರದ ಪುಷ್ಯ-

೫೪. ದಮಾವಾಸ್ಯೆ ಸೋಮವಾರ ಸೂರ್ಯ್ಯಗ್ರಹಣ ಉತ್ತರಾಯಣಸಂಕ್ರಮಾ-

೫೫. ಣದ ಪುಣ್ಯತಿಥಿಯಲು ಶ್ರೀಮನ್ಮಹಾಮಂಡಳೇಶ್ವರಂ ಪರಮ ಮಾಹೇಶ್ವರಂ ರಾಜಮಲ್ಲದೇವರು ಕಲ್ಲಿಸೆ-

೫೬. ಟ್ಟಿಯಿಂ ಸುಪ್ರತಿಷ್ಠಿತಮಾದೀ ಶ್ರೀಕಲಿದೇವರ್ಗ್ಗೆ ಭಕ್ತಿಪೂರ್ವಕವಾಗಿಯಲ್ಲಿಯ ಸ್ಥಾನಚಾರ್ಯ್ಯ (॥)

೫೭. ರು ॥ ಕಂ ॥ ಶಿವಶಕ್ತಿಸುತಂ ಕಲಿದೇವವರಾಂಘ್ರಿಸರೋಜಪೂಜಕಂ ಸಕಲ ಗುಣೋದ್ಭವ ಕಾಳಾಮುಖತಿ-

೫೮. ಳಕಂ ಭವನಸ್ತುತನೆನಿಪನಮೃತರಾಶಿಮುನೀಂದ್ರಂ ॥ ಅಮೃತಗುಣನ-ಮೃತಮಾನಸನಮೃತೋತ್ತ-

೫೯. ಮಾವಾಣಿಯುಮೃತಹಸ್ತಾಂಬುಜನನ್ತಮ್ರಿತಮತಿಯುಮೃತಮಹಿಮಾಪ್ರಮಿತನೆ-ನಿಪ್ಪಮೃತರಾಶಿಮುನಿ ಕ್ರಿ-

೬೦. ತಕೃತ್ಯಂ॥ವ॥ಅನ್ತೆನಿಸಿದಮೃತರಾಶಿದೇವರ ವರ ಜೀಯರ ಕಾಲಂಕರ್ಚ್ಚಿ ಧಾರಾಪೂರ್ವ್ವಕಂ ಕಲ್ಲಿಸೆಟ್ಟಿ ಮು-

೬೧. ಖ್ಯವಾಗಿ ಕುಱುಗೋಡ ಬಡಗಣರಳಿಯಕೆಱೆಯಿಂ ಮೂಡಲ್ ನೀರಹಳ್ಳದಿಂ ಗವಱೇಶ್ವರದ ಭೋಗದ ಸ್ಥ-

೬೨. ಳದಿಂ ತೆಂಕಲ್ ಪರಂಜ್ಯೋತೀದೇವರ ಕೆಯ್ಯಿಂ ಪಡುವಲ್ ಕಲಿದೇವ-ರಂಗಭೋಗರಂಗಭೋಗಖಂಡಸ್ಫುಟಿ-

೬೩. ಜೀತಜೀರ್ಣ್ನೋದ್ಧಾರವಿನ್ತಿನಿತಕ್ಕಂ ಬಿಟ್ಟ ತಕ್ಕಿಲಂ ಮತ್ತರ್ ೨ ಆ ಸ್ಥಳದ ನಡುವೆ ಸಂಕಿಮೆಯಂಗೆ ಕಂಬ ೨೨೫ ॥

೬೪. ದೇವರ ಹಾಡುವಾತಂಗೆ ಕಂಬ ೨೨೫ ॥ ಶ್ರೀಮನ್ಮಹಾಮಣ್ಡಳೇಶ್ವರಂ ಬಳ್ಳಾರೆಯಜ್ಜರಸರು ಹಟ್ಟ-

೬೫. ಣದ ಪೊಲದೊಳಗೆ ಸಿಂಗದೇವಿಯ ದಾರಿಯಿಂ ಮೂಡಲ್ ಗೌಡೂಕ್ಕಲ ದೇವಗೆಯ್ಯಿಂ ಬಡಗಲ್ ಕೊಪ್ಪೇಶ್ವರದ

೬೬. ಕೆಯ್ಯಿಂ ತೆಂಕಲ್ ಅಜವಟಿಗೆ ಸತ್ರವಂಬಲಿಯಿನಿತಕ್ಕಂ ಬಿಟ್ಟ ತಕ್ಕಿಲ ಮತ್ತರ್ ೧ ಚೈತ್ರಪವಿತ್ರ ಅತಿಥಿ-

೬೭. ಯಭ್ಯಾಗತ ತಪೋಧನರ ಗ್ರಾಸಕ್ಕೆ ಬಿಟ್ಟ ತಕ್ಕಿಲ ಮತ್ತರ್ ೧ । ಅಲ್ಲಿಂ ಪಡುವಲು ಸಮಸ್ತಪ್ರಾಣಿಗಳ್ಗೆ ಬಿಟ್ಟ

೬೮. ಧರ್ಮ್ಮವಣ್ಣಿಗೆಗೆ ಕಂಬ ೪೫೦ ಮತ್ತಮಾ ಪೊಲದ ದೇವರಂಗಭೋಗ-ನೈವೇದ್ಯಕ್ಕೆ ಕುಜುಗೋಡ ಪೊಲವೇರಿಯಿಂ ಮೂ-

೬೯. ಡಣ ಕಿಸು ಮತ್ತರ್ ೨ ಕುಜುಗೋಡ ತೆಂಕಣ ಪೂದೋಂಟ ೧ ದೇವರ-ಪುರದೊಳಗೆ ನಂದಾದೀವಿಗೆಗೆ ಗಾಣ ೨ ಮ-

೭೦. ತ್ತಂ ನಖರಂಗಳು ಪೊಂಗಳದಲ್ಲಿ ಕೊಟ್ಟಲ್ಲಿ ಭತ್ತ ಸೂಳಸ ೨ ಕೊಂಡಲ್ಲಿ ಸೊಳಸ ೨ ಮುಂಮುರಿದಂಡಗಳಯ್ಸಂ-

೭೧. ಬರದಲ್ಲಿ ದೇವರ್ಗ್ಗೆ ಪೊಂಗೆ ಕೊಟ್ಟಲ್ಲಿ ಕಾಣಿ ೧ ಕೊಂಡಲ್ಲಿ ಕಾಣಿ ೧ ತಂಬುಲಿಗ ಸಾಸಿರ್ವ್ವರು ದೇವರ್ಗ್ಗೆ ಹೇಜಿ್ಂ-

೭೨. ಗೆಲೆ ೧೦೦೦ ಹೊಜಿಗೆಲೆ ೫೦ ಸ್ಥಾನಾಚಾರ್ಯ್ಯರಿಬ್ಬರುಂ ಸೀತಾಳಗದ್ದುಗೆಗೆ ಕೊಡ ೨೦ ವಸುಧಾರೆ ೨-

೭೩. ಮಂ ನಡಸುವರ್ ಯಿಂತೀ ಧರ್ಮ್ಮವನರಸುಗಳುಂ ಮುಮ್ಮರಿದಂಡಂಗಳುಂ ಪ್ರತಿಪಾಳಿಸುವರು

೭೪. ಅವರ್ಗ್ಗೆ ಗಂಗೆ ವಾರಣಾಸಿ ಕುರುಕ್ಷೇತ್ರ ದಿಬ್ಯತೀರ್ಥಂಗಳಳು ಸಾಸಿರಕಪಿಲೆಗಳಂ ಸಾಸಿರ ಬ್ರಾಹ್ಮಣ-

೭೫. ರ್ಗ್ಗಂ ಸಾಸಿರ ತಪೋಧನರ್ಗ್ಗಳಂಕಾರಸಹಿತಂ ಕೊಟ್ಟ ಪುಣ್ಯದ ಫಳಂಗಳಕ್ಕು ॥ ಯಿನ್ತೀ ಧರ್ಮ್ಮಂಗಳಂ ಕಿ-

೭೬. ಡಿಸಿದವರಿಗೆ ಗಂಗೆ ವಾರಣಾಸಿ ಕುರುಕ್ಷೇತ್ರ ಪ್ರಯಾಗೆಯರ್ಗ್ಘ್ಯತೀರ್ತ್ಥಂಗಳಲು ಸಾಸಿರ

೭೭. ಕಪಿಲೆಗಳಂ ಸಾಸಿರ ಬ್ರಾಹ್ಮಣರುಮಂ ಸಾಸಿರ ತಪೋಧನರುಮಂ ಕೊನ್ದ ಮಹಾಪಾತಕಂಗಳವರಿಗಕ್ಕು ॥

೭೮. ಮತ್ತಂ ನಾಲ್ಕುಂ ನಾಡುಗಳುಂ ನೆರೆದಾವನಾಡಲು ಹೇಜಿದಡಂ ಕೋಣ ೧೦ ಎತ್ತು ೧೦ ಕತ್ತೆ ೧೦ ಅನ್ತು ೩೦-

೭೯. ಕ್ಕಂ ಹಾರಿಕಾಯಸುಂಕಮಂ ಶ್ರೀಕಲಿದೇವರಿಗೆಯಂಗಭೋಗಪೂಜೆಪುನಸ್ಕಾರಕ್ಕೆ ಮಾನ್ಯವಾಗಿ ಧ-

೮೦. ರ್ಮ್ಮಕ್ಕೆ ಕೊಟ್ಟರ್ ॥ ಶ್ಲೋಕ ॥ ಸಾಮಾನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ

೮೧. ಭವದ್ಭಿಃ। ಸರ್ವ್ವಾನೇತಾನ್ ಭಾವಿನಃ ಪಾರ್ತ್ಥಿವೇನ್ದ್ರಾನ್ ಭೂಯೋ ಭೂಯೋ ಯಾಚತೇ ರಾಮಚಂದ್ರಃ ॥ ಸ್ವದ–

೮೨. ತ್ತಾಂ ಪರದತ್ತಾಂ ವಾ ಯೋ ಹರೇತಿ ವಸುನ್ಧರಾಂ ಷಷ್ಟಿರ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ [॥*]

೨೬
ಸಿರಿವಾಳ ಶಾಸನ
ಕ್ರಿ.ಶ. ೧೧೭೮

೧. *[ಸ್ವಸ್ತಿ ಸಮಧಿಗತ ಪಂಚಮಹಾಶಬ್ಧ] ಮಹಾಮಂಡಳೇಶ್ವರಂ ತಗರನಗರಾಧೀಶ್ವರಂ [ಜೀಮೂತವಾಹ]

೨. ನಾನ್ವಯಪ್ರಸೂತಸೂರ್ಯ್ಯಂ ಚ (ರ?) ಘಜಾತಂ ಶ್ರೀ ಶಿಳಾಱವಂಶೋದ್ಭವ ನರೇಂದ್ರ ವಿಭವಾಮರೇಂದ್ರ (ಡಂಗಾಱ)

೩. ಭೇರಿನಿರ್ಗ್ಘೋಷಣಂ ಸಮರವಿಭೀಷಣಂ ವಿದಗ್ಧಮುಗ್ಧಾಂಗನಾಹ್ರಿದಯ ಕುಸುಮಕೋದಂಡ ಕದನಪ್ರಚಂಡ ಚೆಂ–

೪. ನಮನ್ನೆಯ ಪನ್ನಗವೈನತೇಯ ವೀರಾಧಿಮಂನ್ನೆಯ ತಾರಕಾಸುರಕಾರ್ತಿಕೇಯ ನತಿ ವಿಷಮಹಯಾ–

೫. ರೂಢಂಪ್ರೌಢರೇಖಾರೇವಂತ ವಿಜೇಯಲಕ್ಷ್ಮೀಕಾಂತ ಸುವರ್ಣಗರುಡಧ್ವಜ ವಿಮಳಕೀರ್ತ್ತಿಧ್ವಜ ಕಾರ್ತ್ತ್ಯಯನೀದೇವೀಲ–

೬ ಬ್ಧವರಪ್ರಸಾದ ಮ್ರಿಗದಾಮೋದ ಆಳಿಂ ಮುಂನಿಱಿವ ಸೌರ್ಯ್ಯಮಂ ಮೆಱೆವ ಆ ಬಂಟರಭಾವ

೭ ಮಱೆವುಗೆ ಕಾವ ಆನೆಗನಂಕಕಾಱ ರಣರಂಗವೀಱ ನಿಜದಬೆಡಂಗ ಸಾಹಸೋತ್ತುಂಗ ಶ್ರೀಮದು–

೮. ತ್ತರೇಶ್ವರದೇವರ ಪಾದಾರಾಧಕ ಪರಬಳಸಾಧಕ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮಾನು ಮಹಾಮಂ–

೯. ಡಳೇಶ್ವರ ಎಳೆಮೇಲ ಸಿಂಗಿದೇವರಸರುಂ ಅವ್ವೆ ನಾಗಲದೇವಿಯರುಂ ಶ್ರೀಮನ್ಸು· ಮಹಾಪ್ರಧಾನಂ ಸೇನಾಧಿಪ–

ಕರ್ನಾಟಕ ಭಾರತಿ : ೯–೩ * ಪ್ರಾರಂಭದಲ್ಲಿ ಭಾಗ ಒಡೆದು, ಕಳೆದು ಹೋಗಿದೆ.

೧೦. ತಿಮಹಾಪಸಾಯಿತಂ ರಿಪುಮದಮರ್ದನಂ ಪ್ರತಾಪರಣರಂಗಭೈರವಂ ಶ್ರೀಮತು ಘಟ್ಟಿಯ

೧೧. ಕೇತನಾಯಕನುಂ ಸಮಸ್ತಪರಿವಾರಮುಂ ನಾಡಗ್ರಾಯಿತರುಂ ಶ್ರೀಮತು ಭಿಲ್ಲಮದೇವರ ಮ–

೧೨. ಹಾಪಸಾಯಿತಂ ಅಧಿಕಾರಿ ಪಯ್ಯನಾಯಕರುಂ ಸಕವರುಷಂ ೧೧೧೦ನೆಯ ಪ್ಲವಂಗ ಸಂವತ್ಸರ–

೧೩. ದ ಭಾದ್ರಪದ ಬಹುಳದಮವಾಸ್ಯೆ ಶುಕ್ರವಾರ ಸೂರ್ಯ್ಯಗ್ರಹಣ ನಿಮಿತ್ತವಾಗಿ ಎಳೆಮೇಲ–

೧೪. ಯ್ವತ್ತಱ ಬಳಿಯ ಬಾಡಂ ಮುಱುವಡಿಯ ಮಂನ್ನೆಯ ಮೇಳಾಳಿಕೆಯುಂ ಬಾಹಿರ ಸೀಮೆಯೊ–

೧೫. ಳಗಣ ನಿಧಿನಿಧಾನನಿಕ್ಷೇಪಜಲಪಾಷಾಣಮಾಳಾವ್ರಿಕ್ಷಗುಲುಮಲತಾವಳಿ ಚತುರಘಾಟ

೧೬. ಕಲ್ಲಕಣಿ ಅರುವಣಿ...ದಱ ಮೂಲೆಗರರುವಣ ಅಷ್ಟಭೋಗತೇಜಸ್ವಾಮ್ಯ ದಂಡ ದೋಷ ಕಾಣಿಕೆ ಕಿ–

೧೭. ಱುಕುಳಾಯದಾಯ ಸರ್ಬ್ಬಯ ಶುಧವಾಗಿಯಿಂತಿನಿತುವಂ ಶ್ರೀಮದ್ದಕ್ಷಿಣ ವಾರಣಾಸಿ

೧೮. ಧರ್ಮ್ಮದಮನೆಯಾದಿಪಟ್ಟಣ ಸಿರಿವೊಳಲ ಶ್ರೀಮತು ಸಿದ್ಧಸಾತೇಶ್ವರದೇವರ ಅಂಗಭೋಗರಂ–

೧೯. ಗಭೋಗ ಖಂಡಸ್ಫುಟಿತ ಜೀರ್ನ್ನೋದ್ಧಾರಕ್ಕಂ ಶಿವಯೋಗಿಗಳಶನಾಚ್ಛಾಧನಕ್ಕಂ ಶ್ರೀಮತು ಸರ್ವ್ವ–

೨೦. ದೇವದಯೊಳಗೆ ಶಿವಯೋಗಿ ಶಾ[ನ್ತಿ]ಮಯ್ಯಂಗಳ ಮಹಿಮೆಯೆಂತೆನೆ ಕ್ರೀತ ಯುಗ ತ್ರೇತೆ–

೨೧. ಮೂಱನೆಯ ದ್ವಾಪರದೊಳು ನೆಗಳ್ದ ಭೂತೋದ್ಭವರ್ಬ್ಬತಿತ ಬ್ರತಾನುಕಾರಿಗಳು ದಿಬ್ಯಸಹಶ್ರತಾ–

೨೨. ನುಮಬ್ದ ಕಿಂಕರನು ಹರೆಯಿ ಬಳಿಕವಾತೆಸೆದೀವನ ದೆಂತೆನೆ ಶಾನ್ತಿಮಯ್ಯ ತತುಕ್ಷ–

೨೩. ಣದೊಳೆ ಭಕ್ತಿಯ ಪಡೆದನೇಂ ಕಲಿವೀರನೋ ವೀರಭದ್ರನೋ ॥ ಶ್ರೀಮದಣಿ ಮಾದ್ಯಷ್ಟಗುಣಸಂ–

೨೪. ಪಂನರುಂ ತತ್ವಜ್ಞಾನಪ್ರಸನ್ನರುಂ ಷಡಂಗಯೋಗಸಂಗದರುಂ ಸಸಾರಭ್ಯಸಂಗ ನಿಸಂಗರುಮಪ್ಪ ಶಿವಯೋ–

೨೫. ಗಿ ಶಾನ್ತಿಮಯ್ಯದೇವಂಗಳ ಪುತ್ರ ರೇವಣದೇವಯ್ಯಂಗಳ ಪ್ರಸಿ ದ್ಧತಿಗೆಯೆಂತನೆ ॥ ಒರ್ಬ್ಬಳ ತಂಡುಳದಿಂ–

೨೬. ದಮುರ್ಬ್ಬೀಶನ ರಾಯಕಟಕಮಂ ತಣಿಪಿದನಾ ಸರ್ಬ್ಬಜ್ಞಮೂರ್ತಿ ಜಗದೊಳ ಗೊರ್ಬ್ಬನೆ ಶಿವಸಿಧ ಚ–

೨೭. ಶ್ರೀ ರೇವಣದೇವಂ ॥ ತೊಱೆ ತುಂಬಿ ಬಂದಡರೆ ತಾ ಹಱುಗೋಲ ತನ್ನಿವೆಂನದಾಜ್ಞಾಬಲದಿಂ ತೊಱೆ–

೨೮. ಯಂ ದಾಂಟುವನಿಂತೀ ಕುಱುಪಿನ ತತುಕಾರನೀ ರೇವಣದೇವಂ ॥ ಅಂದೊಮ್ಮೆ ಸಿದ್ಧನೆಂದೊಡೆ

೨೯. ನಿಂದಿಸಿದರು ಮನುಜರೆಲ್ಲ ಧರೆ ಭೂರ್ಭುಗಿಲೆನೆ ಬೆಂದುದು ಸತ್ವರಜಂ ತಮವಂದಿನ ಸಿದ್ಧಂ ಪ್ರ-

೩೦. ಸಿದ್ಧ ರೇವಣದೇವಂ ॥ ಮುನ್ನೊಮ್ಮೆ ಸಿದ್ಧನಾಗಿಯುವನ್ನದ ತವನಿಧಿಯ ತೋಱಿ ಲೋಕದೊಳಂ

೩೧. ಮತ್ತಿನ್ನೊಮ್ಮೆ ನೋರ್ಪೆನೆಂದು ತಂನ ತಾನಱಿಪ್ಪನೆಗಳ್ದ ರೇವಣದೇವಂ॥ ತಾರದಮಂದ್ರದ ಮಧು

೩೨. ರದ ಸಾರಾಯದ ಸಪ್ತಸರದಿಂದ ನರೇಶ್ವರಂ ಭೋರೆನೆ ಕೇಳಿಸುತಿಪ್ಪ ಧಾರಿಣಿ ತಳದೊಳಗೆ ನೆಗಳ್ದ ರೇವಣದೇವ ॥

೩೩. ನ್ರಿತ್ಯಕ್ಕೆ ನಿಂದಡೆವೆ ಬಲದತ್ಯದ್ಭುತ ಮರುಳತಂಡ ರೌದ್ರಮಿದೆನಲುಂ ಪ್ರತ್ಯಕ್ಷ ಲಿಂಗ ಬೆಮರಲು ಸತ್ಯ-

೩೪. ದಿಂದತ್ಯಂತ ಸಿದ್ಧರೇವಣದೇವ ॥ ಅನ್ತಾ ಭೂಲೋಕ ಸಿದ್ಧಪ್ರಸಿದ್ಧರಪ್ಪ ರೇವಣದೇವಯ್ಯಂಗಳ

೩೫. ಪಾದಪ್ರಕ್ಷಾಳನಂ ಮಾಡಿ ತ್ರಿಭೋಗಾಭ್ಯಂತರ ಸರ್ಬ್ಬನಮಶ್ಯವಾಗಿ ಧಾರಾ ಪೂರ್ಬ್ಬ-

೩೬. ಕಂ ಮಾಡಿ ಕೊಟ್ಟರು ಮಂಗಳ ಮಹಾಶ್ರೀ ಶ್ರೀ.............ಯ ಪ್ರಭುಗಳು ಎಂಟು ಹಿಟ್ಟುಗ-

೩೭. ಳಮಯ್ಯಂ......................ಂಭುಸೋಮನಾಥದೇವರಾಣೆಯ..........

೩೮. ಲೂರು ನಾವಿದಗೆಯೂರಾ.............ಮಿ ಪೂರ್ಬ್ಬಮರ್ಯ್ಯಲದೆ ॥.........

೩೯. ತ್ತಂ ಪರದತ್ತಂ ವಾಹೋ ಹ..............ಣಿ ಏಷ್ಟಾಯಾ.........

೪೦. ತೇ ಕ್ರಿಮಿಃ ॥ ....ಲನೀಯೋ ಭವ..................

೪೧. ವಿನಃ ಪಾರ್ತ್ಥಿ.................................ಃ ॥

೨೭
ಅಮೃತಾಪುರ ಶಾಸನ
ಕ್ರಿ.ಶ.ಸು. ೧೧೯೬

೧. ಜಯತಿಶಿವಶಾಸನಂ ಭೂಚರಖೇಚರದಿವಿಜರಾಜಿಮಕುಟಾರೂಢಂ ಧರ್ಮ್ಮ-ಪ್ರಸಾದವರ್ಧಿತಲಕ್ಷ್ಮೀನಿತ್ಯಪ್ರದಾಯಕಂ ಜಗತಿ ॥

---

೨೭ E.C.VI TK. No. 45

೨.	ಶ್ರೀಮತ್ಸೇನಾಧಿನಾಥೋತ್ತಮನನಮಿತನಂ ರಕ್ಷಿಸುತ್ತಿರ್ಕ್ಕೆ ತಾರಾಸ್ತೋಮಮಂ ನಿಲ್ವಂನೆಗಂ ನಾರದಮಸೃಣರಸವ್ಯಕ್ತಗೀತಾಮೃತಂ

೩.	ಗೌರೀಮುಗ್ಧಮನ್ದಸ್ಮಿತಮಧುರಕಟಾಕ್ಷಾಮೃತಂ ದೇವರಾಜಪ್ರೇಮ-ಸ್ತುತ್ಯಾದಿಸದ್ವಾಗಮೃತನ ಮೃತನಾಥಂ ತ್ರಿಲೋಕೈಕನಾಥಂ ॥ ಸಿರಿಯ-

೪.	ಲರ್ಗಣ್ಣ ಬೆಳ್ವೆಳಗಿನಿಂ ಪುದಿದಂಬುಜನೀಶನಂತಿರೆ ಗಿರಿಜಾಕಟಾಕ್ಷ-ರುಚಿಗಳ್ಪುದಿದೀಶನು ಮಬ್ಜನಾಭನಂತಿರೆ ಜನಸಂಸ್ತವಂ ತಮಗೆ ಪಲ್ಲಟಮಪ್ಪಿನಮೊಪ್ಪಿ ತೋಱುವಾ ಹರಿಹರದೇವರೊಲ್ದಮಿತನಂ ಪರಿರಕ್ಷಿ-

೫.	ಸುತಿರ್ಕ್ಕೆ ಸಂತತಂ ॥ ವಿನತಕ್ಷತ್ರಿಯಪುತ್ರಸಂತತಿನವೀನೋತ್ತಂಸಮಂ ರಾಜಶಾಸನಮಂ ಮಸ್ತಕಪೀಠದೊಳ್ತಳೆಯೆ ನಾಲ್ಕುಂ ದಿಕ್ಕಿನೊಳ್ ಸೀಮ-ಶಾಸನಮಪ್ಪಂತುದಯಾ ಚಳಾದಿಕುಧರಂ

೬.	ಬಲ್ಲಾಳದೇವಂಗೆ ಮೇದಿನಿಯಂ ಸಾಧಿಸಿಕೊಟ್ಟ ಶೌರ್ಯ್ಯಮಮಿತಂಗಕ್ಕುಂ ಪೆಱಂಗಕ್ಕುಮೆ ॥ ಗದ್ಯ ॥ ಆ ನಿಶ್ಶಂಕಪ್ರತಾಪಚಕ್ರವರ್ತಿಯನ್ವಯಾವತಾರಮದೆಂತೆಂದೊಡಮೃತದಮೃತಕರನ ಕ

೭.	ಮಳೆಯ ಕೌಸ್ತುಭದ ಪಾರಿಜಾತದೈರಾವತದುಚ್ಚೈಶ್ರವದಚ್ಚರಸೆಯರ ಸಂಭೂತಿಯಿಂ ಖ್ಯಾತಿಗಾಕರಮಾದ ಪೀಯೂಷರತ್ನಾಕರದ ನಡುವೆ ॥ ವೃ ॥ ಸಿರಿಯಂ ಕೌಸ್ತುಭರತ್ನಮಂ ಹರಿಯ-

೮.	ನಂತಾ ಶಂಖಮಂ ಚಕ್ರಮಂ ಭರದಿಂ ಪೇಱಿಬಹಿತ್ರದಂತಿರೆಸೆದಿರ್ದ್ದಂ ಶೇಷನಾ ಕ್ಷೀರಸಾಗರದೊಳ್‌ದೇವನ ನಾಭಿಪದ್ಮದ ಮೃಣಾಳಂ ಕೂವಕಂ-ಬಂಬೊಲಚ್ಚರಿಯಾಗಿರ್ದ್ದುದು ಕರ್ಣ್ನಧಾರನವೊಲಿರ್ದ್ದಂ ಪುಟ್ಟಿ ಪದ್ಮೋದ್ಭವಂ ॥ ಪರಮಬ್ರ-

೯.	ಹ್ಮನ ಚಿತ್ತದೊಳ್ ಮುನಿಗಳೇಱ್ಬರ್ಪುಟ್ಟಿದರ್ತ್ತನ್ಮುನೀಶ್ವರರೊಳ್ ಪೆಂಪೆಸೆವತ್ರಿಪದ್ಮದಲರೊಳ್ ಪದ್ಮೋದರಂ ಪದ್ಮವಿಷ್ಟರನಂ ಪುಟ್ಟಿಸಿತರ್ಕ್ಕೆ ಮಚ್ಚರಿಪವೋಲ್ ಕಣ್ಣೆಯ್ದಲಿಂದಂ ಸುಧಾಕರನಂ ಪುಟ್ಟಿಸಿದಂ

೧೦.	...ಪವಿತ್ರಮುದಯಸ್ಥಾನಂ ಮಹಾಭಾಗದೊಳ್ ॥ ಯಿಂದುವಿಲೋಚನೋ-ತ್ಸವದಿನಿಂದು ಮನೋಜಸಹಾಯವೃತ್ತಿಯಿಂದಿಂದುಕಳಾಳಿಯಿಂ ಮೆಱೆವೆ-ನಂದು ನೃಸಿಂಹನೃಪಾಳಸೂನು

೧೧.	ತಾನಿಂದುವಿಲೋಚನೋತ್ಸವದಿನಿಂದು ಮನೋಜಸಹಾಯವೃತ್ತಿಯಿಂದಿಂದುಕಳಾಳಿಯಿಂ ಮೆಱೆವುತಿರ್ದ್ದಪನಿಂದುಕುಳಪ್ರದೀಪಕಂ ॥ಕ॥ ಆ ರಾಜನ ಪುತ್ರನಂ ಮದವಾರಣವಿದ್ಯಾವಿಳಾ-

೧೨.	ಸದಿಂ ಬುಧನೆಂಬಂ ಧಾರಿಣಿಯೊಳ್‌ನೆಗಱ್ದಂ ದ್ವಿರದಾರೋಹಚಕ್ರವರ್ತ್ತಿ ಬಲ್ಲಾಳನವೊಲ್ ॥ ಆತನ ಮಗಂ ಪುರೂರವನಾತಂಗಂ ದೇವಲೋಕದೂರ್ವ್ವಸಿಗಂ ವಿಖ್ಯಾತನುದಯಿಸಿದನುಪಮಾತೀತಬ-

೧೩. ೞರ್ಕ್ಕಾಯುವಾಯುವೆಂಬ ನೃಪೇಂದ್ರಂ ॥ ಅವನ ಮಗಂ ನಹುಷಂ ಮತ್ತವನ ತನೂಜಂ ಯಯಾತಿ ತದ್ವಿದರುರ್ವ್ವೀಥವರಾಗೆ ಬಳಿಕೆ ಪಲರುದ್ಭವಿಸಿದರಾ ಸೋಮವಂಶದೊಳ್ ಯದುವೆಂಬಂ ॥

೧೪. ಆಯದುದಗ್ರತೆ ಮಿಗೆ ನೆಗೞ್ದ ಯದುವಿಂ ಯಾದವಾಭಿದಾನ ಸೋಮಾಮ್ನಾಯಕ್ಕೆ ರೂಢಿವಡೆದತ್ತಾ ಯಾದವರೊಳಗೆ ನೆಗೞ್ದ ನಸಹಾಯಬಳಂ ॥ವೃ॥ ಸಳನೆಂಬಂ ಶಶಕಪ್ರಸಿದ್ಧ–

೧೫. ಪುರದೊಳ್ ವಾಸನ್ತಿಕಾದೇವಿಯಂ ತಳೆದಾರಾಧಿಸುವಾಗಳುತ್ತರಳನೇತ್ರಂ ಘೋರವಕ್ತ್ರಂ ವಿಶೃಂಖಳಗಾತ್ರಂ ಪುಲಿ ಪಾಯೆ ಕಂಡು ಮುನಿನಾಥಂ ಕುಂಚಮಂ ಕೊಟ್ಟು ಪೊಯ್ಸಳ ಎಂದಂ ಬೞಿಕಾ–

೧೬. ಯ್ತು ಪೊಯ್ಸಳವೆಸರ್ ತಾಂ ಯಾದವೋರ್ವ್ವೀಶರೊಳು ॥ಕ॥ ಅಲಗಿಂ ಸಿಂಗಮನಿಱಿದನ ಕಲಿತನಮಂ ನಗುವ ತೆಱಿದೆ ಮೆಱವುದು ಸೆಳೆಯಿಂ ಪುಲಿವೊಯ್ದ ಕುಱುಪು ವೊಯ್ಸಳಕುಲ–

೧೭. ತಿಲಕನ ಮತ್ತಗಜದ ಟಕ್ಕೆಯದೊಳೀಗಳ್ ॥ ಮತ್ತೇಭ ॥ ಅನಿತೊಂದುಂನತಿವೆತ್ತ ಪೊಯ್ಸಳಕುಳಂ ಪೂರ್ವ್ವಾದ್ರಿಯಂ ಪೋಲ್ವಿನಂ ವಿನಯಾದಿತ್ಯನೃಪಾಳನುದ್ಭವಿಸಿದಂ ಭೂಲೋಕದಾದಿತ್ಯನೆಂಬಿನೆಗಂ ಕಟ್ತಿಲೆ

೧೮. ಕೂಡೆ ಕಣ್ಗೆ ಕವಿದತ್ತನ್ಯಾವನೀಶರ್ಗ್ಗೆ ತೊಟ್ಟನೆ ಕಯ್ಕೊಂಡುದಲರ್ಕ್ಕೆಯಂ ಕುವಳೆಯಂ ಮತ್ತಾತನಿಂ ಕೌತುಕಂ ॥ ಕೆಳೆನಡೆಯಿಂ ಕಳಹಂಸೆಗೆ ಕೆಳೆನುಡಿಯಿಂ ಕೋಕಿಳಕ್ಕೆ ಸೋಗೆಗೆ ಮುಡಿಯಿಂ ಕೆ–

೧೯. ಳೆ ಕೆಳೆಯಬ್ಬರಸಿಯೆ ತತ್ಕುಳವಧುವಾದಳ್ ತದೀಯ ಸುತನೆಱೆಯಂಗಂ ॥ವೃ॥ ನೆಱವಿಂದಂ ವೈರಿಬೃಂದಂ ಕವಿವುದುಮನಿತೊಂದಂ ರಣೋತ್ಸಾಹದಿಂದಂ ತಱೆದೊಟ್ಟಲ್ ಸೀಳ್ದು ಮೆಟ್ಟಲ್ ಯಮ–

೨೦. ಪುರಿಗಿರಿದಟ್ಟಲ್ ಚಲಂಮುಟ್ಟೆ ಕಟ್ಟಲ್ ನೆಱೆದೆತ್ತಂ ಕಯ್ದುವೊತ್ತಂ ವಸುಧೆಯೊಳಗೆ ಮತ್ತಂ ಜಸಂಬೆತ್ತನಾ ಸಂದೆಱೆಯಂಗಂ ವೀರಗಂಗಂ ರಿಪುತಿಮಿರಪತಂಗಂ ಜಯಶ್ರೀಭುಜಂಗಂ ॥ ಚಲದೆ–

೨೧. ಱೆಯಂಗೆ ಚಾಗದೆಱೆಯಂಗೆ ಜಸಕ್ಕೆಱೆಯಂಗೆ ಮಿಕ್ಕದೋರ್ವ್ವಲದೆಱೆಯಂಗೆ ವೀರದೆ ಱೆಯಂಗೆ ಕುಲೊನ್ನತಿ ತನ್ನೊಳೊಪ್ಪುವೇಚಲೆಯೆಱೆಯಂಗೆ ಕಿರ್ತ್ತಿಯೆಱೆಯಂಗೆ ಱೆಯಂಗನೃ–

೨೨. ಪಂಗೆ ನಂದನಂ ಜಲಧಿಪರೀತಭೂವಳಯವರ್ದ್ಧನನಂಕದ ವಿಷ್ಣುವರ್ದ್ಧನಂ ॥ಕಂ॥ ಬಲ್ಲಾಳನ ತಂಮಂಗೇಂ ಬಲ್ಲಾಳ್ತನಮೆರವೆ ತೇಜಮೆಂಬುದು ಪೆಱರ್ಗಿಂನಿಲ್ಲುದಯಾದಿತ್ಯ ಮಹೀವಲ್ಲಭನಣ್ಣಂಗೆ ವಿ–

೨೩. ಷ್ಣುಗಲ್ಲದೆ ಜಗದೊಳ್ ॥ವ॥ ಆ ಪರಮಮಾಹೇಶ್ವರಸಮಯಾಧಾರನುಂ–ಪರಮರುದ್ರಾವತಾರನುಂಮೇಕಾಂಗವೀರನುಂಮೆನಿಸಿ ನೆಗೞ್ದ ಬಲ್ಲಾಳದೇವನ ಬಲ್ಲಾಳ್ತನಮಂ ಪೇೞ್ವೆಡೆ ॥ವೃ॥ ಕಾಳೆ–

೨೪. ಗದೊಳ್ತಡಂಗಡಿದು ಮುಂದಣ ಥಟ್ಟಿನವುಂಕಿ ಪಾಯ್ದೊಡಾ ಮಾಳವಚಕ್ರವರ್ತ್ತಿ ಜಗದೇವನೆ ತಂನ ಮದಾಂಧಸಿಂಧುರಂ ಕೀಳಿಡೆ ಪೂತು ರಾವುತೆನೆ ರಾವುತನಲ್ಲೆನಿದಿರ್ಚ್ಚು ವೀರಬಲ್ಲಾಳನೆನೆಂದು ಮೆ-

೨೫. ಟ್ಟಿ ತಿವಿದಾಳ್ತನವಚ್ಚರಿಯಾಯ್ತು ಧಾತ್ರಿಯೊಳ್ ॥ವೃ॥ ಬಿಟ್ಟಗನಾಹವಾಂಗಣಕೆ ಜೆಟ್ಟಿಗನೆತ್ತಿದೊಡತ್ತ ಕಂಚಿ ಬೆಂಗೊಟ್ಟುದು ಕೊಂಗು ಕೂಡೆ ನೆಲೆವಿಟ್ಟುದು ಮಿಕ್ಕ ವಿರಾಟಕೋಟೆ ಕೂಗಿಟ್ಟುದು

೨೬. ಕೋಯತೂರ್ಕ್ಕೆದಱೆಕೆಟ್ಟುದು ರೂಡಿಯ ಚಕ್ರಗೊಟ್ಟಮಿಂಬಿಟ್ಟುದು ಕಯ್ದುವಿಕ್ಕಿ ಕಡಲೊಳ್ವಡಲಿಟ್ಟುದು ಸಪ್ತಕೊಂಕಣಂ ॥ ಮುನಿದಾಂತೊಡ್ಡಿದ ಚಾತುರಂಗಬಳಮಂ ಕಣ್ಮುಟ್ಟಿನೊಳ್ನೋಡಿ ತೊ-

೨೭. ಟ್ಟಿನೆ ತಾಂ ಕಂಡೊಡೆ ಹುಃಬಬಾಪ್ಪು ಬಱೆಕೆಂಬಲ್ಲೂಳೆಯಂ ನೆರ್ಕ್ಕನೆರ್ಕ್ಕನೆ ಬೇರ್ಕ್ಕೆಯ್ದುದ್ದೇಸಜ್ಜಸಱೆನಳವಿಂತೆಂದೆತ್ತಿ ಬೊಟ್ಟಿಟ್ಟು ಮಾಣ್ಬನೆ ಮಾಣಂ ವಿಳಯಾನ್ತಕಂಗೆ ಕುಡುಗಂ ಕೈ-

೨೮. ಘಟ್ಟಿಗಂ ಬಿಟ್ಟಿಗಂ ॥ ಧುರದೊಳು ವಿಷ್ಣುನೃಪಂಗೆ ದಿಗ್ವಿಜಯದುದ್ಯೋಗಂ ಬರಂ ನಿಲ್ವ ಭೂವರರಾರಾ ನೃಪರಾಮನೆತ್ತುವುದು ಬೇಱೊಂದರ್ಕ್ಕದೇಕೇನ್ ತುಳಾಪುರುಷಕ್ಕೆಂದು ಹಿರಣ್ಯಗರ್ಭಮಿರಲೆಂ-

೨೯. ದುತ್ತುಂಗದೇವಾಲಯೋತ್ಕರಮಂ ಮಾಡಿಸಲೆಂದು ಸಂದ ಪರರಾಷ್ಟ್ರಂಗಳ್ಗೆ ತಾನೆತ್ತುವಂ ॥ ಶತಮುಖನಕ್ಕೆಮಾಡುವ ಮಖಂಗಳಮೇರುಗಳೆಂದು ತಾರಕ-ಪ್ರತತಿಗಳಾರಯಲ್ಪಡೆವ ದೇವಕು-

೩೦. ಳಂಗಳ ವಾರ್ದ್ಧಿಗೆತ್ತಹರ್ಪ್ಪತಿ ಪೊಲಗೆಟ್ಟು ನಿಟ್ಟಿಪ ತಟಾಕಚಯಂಗಳ ಪೆರ್ಮೆಯಿಂದಮೂರ್ಜಿತಮೆನಿಪಗ್ರಹಾರಮವು ವಿಷ್ಣುನೃಪಾಳಕನಿತ್ತದತ್ತಿಗಳ್ ॥ಕ॥ ದೇವಿವೆಸರೆಸೆವ ಲ-

೩೧. ಕುಮಾದೇವಿಗಮಾ ವಿಷ್ಣುವರ್ದ್ಧನಂಗಂ ತನಯಂ ಶ್ರೀವಿಜಯನಾರ-ಸಿಂಹಮಹೀವಲ್ಲಭವನವನ ವೀರಮುಪಮಾತೀತಂ ॥ವೃ॥ ಕೆದಱೆತ್ತಳ್ಕಿತ್ತು ಬಳ್ಕಿತ್ತಗಿದು ಮುಗಿದುದಸ್ಮಬ್ಬಳಂ ನಿಲ್ಲದಿಂನೀ ಪದದೊ-

೩೨. ಳ್ಕೈಕೊಳ್ವೆನೆಂದೊಡ್ಡಿದಿರೊಳೊದವಿ ನಿಸ್ಸಾಣಮಂ ತಾನೆ ಸೂಳೈಸಿದನತ್ತ-ಲ್ತೈಪುಮಾಣ್ಮಾರ್ಮ್ಮಲೆದೊಡೆ ತಲೆಗೊಂಡಂತ್ತಿದಂ ತುಂಗಭದ್ರಾನದಿಯಂ ಪಾಂಡ್ಯಾವನೀಭೃದ್ಬಳದ ಪೆಣಗಳಿಂ ಕ-

೩೩. ಟ್ಟಿದಂ ನಾರಸಿಂಹಂ ॥ ನರಸಿಂಹಂ ನರಸಿಂಹನಂತೆ ಮುನಿಸಿಂ ಮಾಱಾಂ । ತ ವೀರಾರಿಭೂಪರನಣ್ಮುಟ್ಟಿನೊಳಿಂತು ಕಂಡೊಡೆ ಬಟೆಕ್ಕಂಮಂಮ ಪೋಟ್ಡೆಕ್ಕಿ ಪೇರುರಮಂ ದೊಕ್ಕೆನೆ ಕುತ್ತಿ ಚಕ್ಕನೆ

೩೪. ಭುಜದ್ವಂದ್ವಗಳಿಂದೆತ್ತಿ ಬಲ್ಲಗುರುಳಂ ಕೋದೆಳಲಿಕ್ಕಿ ಬೀರಸಿರಿಗೆತ್ತಂ ತೋರಣಂ–ಗಟ್ಟನೆ ॥ ನಗೆಮೊಗವೆಂಬ ಚಂದ್ರಮನನಪ್ಪಿದ ಕೈರವಲಕ್ಷ್ಮಿಯೆಂಬಿನಂ ಸೊಗಯಿಪ ಚಲ್ಲಗಣ್ ಚಿಬುಕಮಂ

೩೫. ಪರಿಚುಂಬಿಸುವಂತೆ ಬಿಂಕದಿಂ ನೆಗದ ಘನಸ್ತನಂ ಸುಟೆಗುರುಳ್ನಳಿತೋಳ್ಕಳ–ಕೋಕಿಳಸ್ವನಂ ಬಗೆಯುಗೆ ಕೂಡೆ ಸೋಲಿಸುವಳೇಚಲದೇವಿ ನೃಸಿಂಹದೇವನಂ ॥ಕ॥ ಪಟ್ಟಮಹಾದೇವಿಗಮಾ ಕ–

೩೬. ಟ್ಟಣಕದ ಕಲಿಯೆನಿಪ್ಪ ನರಸಿಂಹಂಗಂ ಪುಟ್ಟಿದನಾಹವಜಯದೊಡವುಟ್ಟುವಿನಂ ರಾಯಮನ್ಮಥಂ ಬಲ್ಲಾಳಂ ॥ ಧರೆಯಂ ತಾಟ್ಚಿದ ಶೇಷನುಂ ಕಮಠನುಂ ದಿಗ್ದಂತಿಸನ್ತಾನಮುಂ ನೆರೆದೇಕಾಂಗ–

೩೭. ದಿನಾಂತವೋಲ್ ಭುಜಗರಾಜದ್ರಾಘಿಮಂ ಕೂರ್ಮಖರ್ಪ್ಪರ ಕೂಟೋಚ್ಚಳಿತಾಂಶಮಾ ದಿಗಿಭಹಸ್ತಸ್ಥೂಳವಾಂತತ್ತಿಳಾಭರಮಂ ರಕ್ಷಣದಕ್ಷಣದಕ್ಷಿಣ–ಭುಜಂ ಬಲ್ಲಾಳಭೂಪಾಳನಾ ॥ ಮುನಿ–

೩೮. ಸಿಂದು ತೋಳಬಾಳಂ ಜಡಿವ ನಡೆಯೆ ಸೂಳಯ್ಸು ಸೂಳಯ್ಸಿ ನೂಂಕೆಂಬನಿತಕ್ಕಾಂಪನರಾ ರೋಮದು ಪುಸಿಪುಸಿ ಮಾಣೆತ್ತಮುಂದಾಮ್ತ ಸಿಂಹಾಸನಮತ್ತಲ್ವಾರ್ದ್ಧಿಮು–

೩೯. ಟ್ಟಟ್ಟಿದ ಪಡವಳರ್ಗಿಟ್ಟಾಳ್ಗೆ ಕೊಟ್ಟೋಲೆಗೀ ಮೇದಿನಿಸಾಧ್ಯಂ ಬಾಪ್ಪಿದೇಂ ರಾಯರೊಳತಿ ಬಳನೋ ವೀರಬಲ್ಲಾಳದೇವಂ ॥ ಕದನಪ್ರೊಚ್ಚಂಡಭೂಮಂಡಳಪತಿಗಳ ಬೇರ್ವೆರ್ಗ್ಗೆ ಬೆಂನ್ನೀರ ಹೊಯ್ದಾದುದು

೪೦. ಕಾಯ್ಪಿಂ ಬಾಳ ನಿಸ್ಸಂಗರಮಯದೊಳಿಂತಂತವಷ್ಟಂಭದಿಂ ತೂಗಿದ ಬಾಳ್ಬಳ್ವತ್ತು ಬಾಟ್ವಿಗ್ಗಡದ ಬಿರುದರಂ ತೂಗಿ ತುತ್ತಿಟ್ಟುದೇಂ ತಾಳ್ದಿದನೋ ವಿಕ್ರಾನ್ತಮಂ ಯಾದವಕುಳ–

೪೧. ತಿಳಕಂ ವೀರಬಲ್ಲಾಳದೇವಂ ॥ ಶುಂಡಾಳಂ ಮದವುಳ್ಳ ಚೋಳನಳವಿಂದಾ ಸಿಂಹಳಂ ಸಿಂಹವುದ್ದಂಡಂ ಸೇವುಣನಾವಗಂ ಸರಭವಿನ್ತೀ ಮೂವರುಂ ರಾಯರಂ ತುಂಡಂ ಮುಂ

೪೨. ಡದೊಳಾಳೆ ಪೊಯ್ಯದಿರನಾರೇನ್ ಪೇಳ್ದಪೆಂ ರಾಯಭೇರುಂಡಂ ರಾಯರ ಚಕ್ರವರ್ತ್ತಿ ರಣದೊಳ್ಬಲ್ಲಾಳಭೂಪಾಳಕಂ ॥ ಉರಿಯಂತಂತಟ್ಟಿಯಿಂ ಸುಟ್ಟುರಿಸಿ ನೆಗೆಯೆ ನೆತ್ತರ್ಮಹೀ–

೪೩. ಚಕ್ರದೋಳ್ಕಗ್ಗರಿಕೆಂತಂತ್ತೆಲುಂ ಪಂದಲೆ ಪಡಲಿಡೆ ಧಂಧಂಧಗಿಲ್ಭುಭುಗಿಲ್ ಘಂಘರಿಲೆಂದೇನಳ್ವಿತೋ ಸೆವುಣಬಳವನಮಂ ವೀರಬಲ್ಲಾಳಕೋಪೋ–ದ್ಧುರದಾವೋಗ್ರಾನಳಂ ಶಾತ್ರವನೃಪತಿ–

೪೪. ಮೃಗಬ್ರಾತಮಳ್ಕಾಡುವಂನಂ ॥ ಮುಳಿದು ಕಡಂಗಿ ಸೋರ್ವ ಭಟಕೋಟಿಗೆ ವಾರ್ಧ್ದಿತರಂಗದನ್ತೆ ಸಂಗಳಿಸುವ ವಾಜಿರಾಜಿಗೆ ದಿಶಾಪ್ರಸರಂ ಕವಿವಂತೆ ನೂಂಕಲೌವ್ವಳಿಸುವ ಗಂಧಸಿ–

೪೫. ಸ್ದುರಘಟಾಳಿಗೆ ದಕ್ಷಿಣಚಕ್ರವರ್ತ್ತಿ ಕಂಡಳವಿಯೊಳಾರ್ದ್ದು ಬೊಬ್ಬಿಱಿದು ನೂಂಕಿದನಗ್ಗದ ಪಟ್ಟದಾನೆಯಂ ॥ ಒಂದೆರಡಟ್ಟೆ ಕೋಡವೊನೆಯೊಳ್ತಿರುಗುತ್ತಿರೆ ಬಲ್ವೆಣಂ ಮರಳ್ದೊಂದೆರಡಗ್ರ-

೪೬. ಹಸ್ತದೊಳಗುರ್ವ್ವಿಸೆ ಮೋದಿದ ತಾಳವಟ್ಟದೊಳ್ಬಂದ ಪೆಣಂ ಪೆಡಂ ಮಗುಳೆ ಕಣ್ಗೆಸೆಗುಂ ಜವನೇಱಿದೊಂದು ಜಕ್ಕಂದೊಳದಂತೆ ಸೇವುಣಘರಟ್ಟನ ವೀರವಿಳಾಸಸಿಂಧುರಂ ॥ ಅರಸುಗಳೊಂದೆರಟ್ ಬ-

೪೭. ಯುಲೊಳೊಂದೆರಡಳ್ಕಿದ ಕೋಟೆಯುಳ್ನೆರಂ ಬೆರಸಿಱಿದಾಳ್ತನಕ್ಕಿನಿತನಿ-ಕ್ಕರದಲ್ತಸಹಾಯಶೂರನಾಂ ತರನಿಱಿದಟ್ಟಿಯಾಡಿಸಿದ ತೋಟ್ಟಿಲದಿಂ ನಡೆಗೋಣ್ಪೆಗೊಂಡ ಸಂಗರವೆಣಿಸಲ್ಕಳುಂಬುಮದನಾ-

೪೮. ವುದನಾವುದನೇನ ಬಣ್ಣಿಪೆಂ ॥ಕ॥ ಆರೆಣೆಯಂಬೆನಳುಂಬದ ವೀರಮನೀ ಜಗಮನಾವಗಂ ಸುತ್ತಿದ ಮುಂನೀರೆಂಬುದು ಬಿರುದಿನ ಬೆಳ್ಳಾರೆನಿಸಿದು-ದದಟರಾಯಕೋಳಾಹಳನಂ ॥ಗದ್ಯ॥

೪೯. ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ದ್ವಾರಾವತೀಪುರವರಾಧೀಶ್ವನು ಯಾದವಕುಳಾಂಬರದ್ಯುಮಣಿ ಸಮ್ಯಕ್ತ್ವ ಚೂಡಾ-

೫೦. ಮಣಿ ಮಲೆರಾಜನರಾಜತುಳತರತೇಜಂ ಮಲಪರೊಳ್ಗಂಡ ಕದನಪ್ರಚಂ-ಡನಸಹಾಯಶೂರನೇಕಾಂಗವೀರಂ ಶನಿವಾರಸಿದ್ಧಿ ಶರಣಾಗತವಾರ್ದ್ಧಿ ಗಿರಿದುಗ್ಗಮಲ್ಲಂ ರಾಯಸಿರಸ-

೫೧. ಲ್ಲ ಚಲದಂಕರಾಮಂ ಬಿರುದಂಕಭೀಮಂ ನಿಶ್ಯಂಕಪ್ರತಾಪಚಕ್ರವರ್ತ್ತಿ ಹೊಯ್ಸಳ ಶ್ರೀ ವೀರಬಲ್ಲಾಳದೇವರು ದುಷ್ಟನಿಗ್ರಹಶಿಷ್ಟಪ್ರತಿಪಾಳನಾರ್ಥ ಮುತ್ತರದಿಗ್ವಿಜಯಪ್ರಸಂಗದಿಂ

೫೨. ಬಂದು ವಿಜಯಸಮುದ್ರಾಪರನಾಮಧೇಯಮಪ್ಪ ಹಳ್ಳವೂರ ನೆಲೆವೀಡಿ-ನೊಳು ಸುಕಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯುತ್ತಮಿರೆ ॥ಕ॥ ತತ್ಪದನಖರಮಯೂ-

೫೩. ಖಲಸತ್ಪುಷ್ಪಿತರಾಗರುಚಿರಪಲ್ಲವಿತ ದಯೋದ್ಯತ್ಪೂರ್ಣ್ನಫಳಿತಬುಧಪರಿಷ-ತ್ಪೂಜ್ಯನವೀನಪಾರಿಜಾತಂ ಖ್ಯಾತಂ ॥ ಸ್ವಸ್ತಿ ಶ್ರೀಮದಗಣ್ಯಪುಣ್ಯನೃಪಗೇಹಂ ಗಂಡಭೇರಂಡತಂ

೫೪. ತ್ರಸ್ತೋಮಾಗ್ರಣಿ ಯಾದವೇಶ್ವರಭಾರತ್ನಪ್ರದೀಪಂ ಜಗತ್ಪ್ರಸ್ತುತ್ಯಾಕೃತಿ ಮಂತ್ರಿಮಂಡಳಿಕ ದಂಡಾಧೀಶ ತತ್ತನ್ಮಹಾನಿಸ್ತಾರೈಕಶರಣ್ಯರೂಪನಮಿತಂ ಗಂಭೀರರತ್ನಾಕರಂ ॥

೫೫. ವ॥ ಆ ದಂಡನಾಥಚೂಡಾಮಣಿಯನ್ವಯಾವತಾರಮೆಂತೆಂದೊಡೆ ॥ವೃ॥ ಅತಿಶಯಮಾಯ್ತು ದಾನಗುಣಮಿಟ್ಟಳಮಾಯ್ತಭಿಮಾನದೇಳ್ಗ ಸಂತತಮೆಸೆದತ್ತು ಬಂಧುಜನಸಂ-

೫೬. ಗತಿ ಪೆಂಪವಳವಟ್ಟುದೂರ್ಜ್ಜಿತಾಕೃತಿ ದೊರೆವೆತ್ತುದಾಶ್ರಯಗುಣಂ ಪೆಸರ್ವೆತ್ತುದು ಸತ್ಯಮೆಂಬಿನಂ ಚತುರಜನಂ ಚತುರ್ಥಕುಳದೀಪಕನೆಂಬುದು ಚಟ್ಟಿಸೆಟ್ಟಿಯು ॥ಕ॥ ಪತಿಹಿ-

೫೭. ತಗುಣದಿಂದಮರುಂಧತಿಗೆಣೆ ಸೌಭಾಗ್ಯದೇಳ್ಗೆಯಿಂದಗ್ಗದ ಪಾರ್ವ್ವತಿಗೆ ದೊರೆ ಚಟ್ಟಿಸೆಟ್ಟಿಯು ಸತಿ ಭೂಭುವನಕ್ಕೆ ಜಕ್ಕಿಯಕ್ಕಂ ನೆಗಳ್ದಳು ॥ವೃ॥ ಪುರುಷನಮೇರು ಚಟ್ಟಮರಸಂಗೆ

೫೮. ಕುಳೋಂನತಿ ಪುಟ್ಟೆ ಪುಟ್ಟಿದಂ ಹರಿಯಮಸೆಟ್ಟಿ ಲೋಕದೊಳಗಂಗಭವಂಗೆಣೆ ರೂಪಿನಿಂ ಕಳಾಪರಿಣತೆಯಿಂ ಚತುರ್ಮುಖನೊಳೋರಗೆ ವೈಭವದೇಳ್ಗೆಯಿಂ ಪುರಂದರನ ಸಮಾ-

೫೯. ನವರ್ತ್ಥದೂದವಿಂ ಧನದಂಗನುಸಾರಿಯೆಂಬಿನಂ ॥ಕ॥ ಹರಿಯಮಸೆಟ್ಟಿಯ ಕುಳವಧು ಚರಿತ್ರವತಿ ಪುತ್ರವತಿ ಕಳಾವತಿ ಲೋಕೋತ್ತರಮಾನವತಿ ಸರಸ್ವತಿ ಸಿರಿ ಸರಿಯೆಂಬನ್ತು ಸು-

೬೦. ಗ್ಗಿಯಕ್ಕಂ ನೆಗಟ್ದಳು॥ ರಸಮಿರ್ಪ್ಪುದು ಕರತಳದೊಳು ರಸಾಯನಂ ನುಡಿಯೊಳಿರ್ಪ್ಪುದೀಕ್ಷಣದೊಳ್ ಸೊಂಪೆಸೆವಮೃತಮಿಪ್ಪುದೆನೆ ಸಂತೋಸದಿಂ ಸುಗ್ಗವ್ವೆ ತಣಿವುವಳ್ಪರಿಜನಂ ॥

೬೧. ವೃ ॥ ಹರಿಯಮಸೆಟ್ಟಿಗಂ ನೆಗಟ್ದಿ ಸುಗ್ಗಲೆಗಂ ಸುತನಾದನಲ್ತೆ ಬೇಟ್ಪಿರ-ನಿಧಿಬಂಧುಸಂಕುಳದಭಿಷ್ಟಫಳಂ ಪರಿವಾರದುತ್ಸವಂ ಪರಹಿತದಾಶ್ರಯಂ ಪರಮಧರ್ಮ್ಮದ

೬೨. ಮೆಯ್ಸಿರಿ ಸತ್ಯದುತ್ತರೋತ್ತರದಶೆ ಸತ್ಯದಾಯತನಮಪ್ಪಮೃತೇಶ್ವರ-ದಂಡನಾಯಕಂ ॥ ಜಡರಂ ಜಾತಿವಿಹೀನರಂ ವಿಕಳರಂ ನಾಣೊಕ್ಕರಂ ಮಿಕ್ಕರಂ ಪಡೆದಾ ದೋಷನಿವಾರಣ-

೬೩. ಕ್ಕಮೃತದಂಡಾಧೀಶನಂ ಪುಣ್ಯದಿಂ ಪಡೆದಂ ಪದ್ಮಜನಲ್ಲದಂದು ನೆಗಟ್ದೀ ಗಾಂಭೀರ್ಯ್ಯಮೀ ಧೈರ್ಯಮೀ ಕುಡುವಾರ್ಪ್ಪೀ ಕಡುನೇರ್ಪ್ಪು ಭೂಭುವನದೊಳ್ ಪೇಳಂನ್ಯಸಾಮಾನ್ಯಮೇ ॥ ಅಮಿತಂ ದಂಡೇಶರತ್ನಂ

೬೪. ಪ್ರಭು ದಿಟಕೆ ಕೆಲರ್ದ್ದೂರದಿಂ ಪರ್ವ್ವತಂ ರಮ್ಯಮೆನಿರ್ಪ್ಪಂತಿರ್ಪ್ಪಾರಾರಯ್ದೊಳಪುಗೆ ಪುರುಳಿಲ್ಲಂ ನರೋಪಾದಿಯೇ । ಯುದ್ಧಮುಖಂ ತಳ್ತಲ್ಲಿ ಕೂರಾಳಧನರಿಲಮೆಗಂದಲ್ಲಿ ಮಾದಾನಿ ನಷ್ಟೋ-

೬೫. ದ್ಯಮರೆಂತೆಂದಲ್ಲಿ ನಂಟು ವಿಷಮಸಮಯಮಾದಲ್ಲಿ ತಾನೇಕವಾಕ್ಯಂ ॥ ಸುಟಿಯಲ್ಕಾಗದೆ ಮುಂನೆ ಸೂರ್ಯ್ಯನುದಯಂಗೆಯ್ವಂನಮುನ್ತಿನ್ತು ಮಿಂಬುಳುಗಳ್ ಮಿಕ್ಕಿನ ದಂಡನಾಥರರೆಬರ್ಕ್ಕಾ-

೬೬. ರ್ಯ್ಯಕ್ಕೆ ಖಳ್ಗಕ್ಕದೇಂ ಗಟಪಲ್ ಸಲ್ಲದೆ ಸಲ್ವದಿಂತಮಿತದಂಡಾಧೀಶನಂ ಕಾಂಬುದುಂ ಬಟಿಕಾರ್ಮ್ಮಂತ್ರಿಗಳಾರ್ಸ್ಸಮಗ್ರರೆಣಿಸೂ ಬಲ್ಲಾಳನಾಸ್ಥಾನದೊಳ್ ॥ ಸಿರಿಯುಂಟೇ ಪೆಱಗಿತ್ತು ತೋಱುವು-

೬೭. ದು ಬಲ್ವುಂಟೇ ಮನಂ ಮೆಚ್ಚದಂತರನುಗ್ರಾಜಿಯೊಳಿಕ್ಕಿ ತೋಱುವುದು ತಾನುಂಡುಟ್ಟು ಚಿರ್ಮ್ಮೆಂದುಕೊಂಡಿರೆ ಮಾಣೆಂತಟ ಬಲ್ಪದಾವ ಸಿರಿಯೆಂದಾರ್ತ್ತಣ್ಮಿಕೂರ್ತಿತ್ತು ಮಚ್ಚರಿಪಂಗರ್ತ್ಥಿಸು-

೬೮. ವಂಗೆ ಸಲ್ವನಮಿತಂ ದಂಡೇಶದಿಕ್ಕುಂಜರುಂ ॥ ಕಡುವಲ್ಪಿಂ ಭೀಮನೆಂಬಂನೆಗಟ್ದಿನೆಳೆಯೊಳಷದಾತನಿಂದೀತಸನ್ತ್ರೋನ್ನರ್ಱೀಡಿಯಿಂದಂ ರಾಮನೆಂಬಂ ನೆಗಟ್ದಿನೆಳೆಯೊಳಂದಾತನಿಂದೀತನಾರ್ಗ್ಗಂ ಕುಡುರ್ವಾಂ ಕರ್ಣ್ನನೆಂಬು ನೆಗ-

೬೯. ಟ್ಟಿನೆಳೆಯೊಳಂದಾತನಿಂದೀತನಿಂ ಪೇಳ್ವೆಡೆ ಮತ್ತಿಲ್ಲಾರುಮೆಂಬತೆಸೆದಪನಮಿತಂ ದಂಡನಾಥತ್ರಿಣೇತ್ರಂ ॥ ಮಡಗಿದ ತಾಂಬ್ರಶಾಸನಮದೊಂದೆಡಗೆತ್ತಿದ ಕಲ್ಲಶಾಸನಂ ನುಡಿವುವೆ ಮಂತ್ರಿಮುಖ್ಯನಮಿತಂ ನೆ–

೭೦. ಱೆಕಾವುದನೀವುದಂ ತೊಡರ್ಪ್ಪಡಸಿರೆ ಕಾದ ಮಾನಸರ ಮೆಯ್ಸಿರಿಗಳ್ ನರಶಾಸನಂ ಮನಂಬಡೆವಿನಮಿತ್ತು ದಂ ಪೊಗಟ್ವಿಲೋಕದ ನಾಲಗೆ ತಾಂಬ್ರಶಾಸನಂ ॥ ಇದು ತಾಂ ಬಲ್ಲಾಳರಾಜಾಭ್ಯುದಯಜಯ–

೭೧. ವತೀಮಂಗಳಾಚಾರವೋ ಮೇಣಿದು ಪೂರ್ಣಂಭೋನಿಧಾನಪ್ರಬಳಲಹರಿ–ಕಾಪೂರನಿರ್ಗ್ಘೋಷಮೋ ಮತ್ತಿದು ಹರ್ಷೋತ್ಕರ್ಷವರ್ಷಾಂಬುದ ನಿನದಮೋ ಪೇಳೆಂಬಿನಂ ಭೋಜನೋತ್ಸಾಹದಿನೊಪ್ಪು–

೭೨. ತ್ತಿರ್ಪ್ಪುದೋರಂತಮಿತನ ಮನೆಯೊಳ್ ವಿಪ್ರಕೋಟಿಪ್ರಘೋಷಂ ॥ ಮೊಱಡಿಯ ಮೇಲೆ ಮಾದುಫಲಮಾದವೊಲಾದುದು ತೀವಿನಿಂದ ಪೆರ್ಗ್ಗೆಱೆಮೊಱೆಯಲ್ಲದೆಂದೆನಿಪ ಬೆಳ್ವಲದಲ್ಲಿ ನವೀನ–

೭೩. ಸೃಷ್ಟಿ ಕಣ್ದೆಱದುದು ದಂಡನಾಯಕಶಿಖಾಮಣಿಯಪ್ಪಮಿತಂ ಸಮುದ್ರಮೀ ತೆಱನೆನಿಪಂದದಿಂ ಗದುಗಿನೊಳ್ ನೆಱೆ ಕಟ್ಟಿಸಿದಂ ತಟಾಕಮಂ ॥ ಅಮೃತ ಮರೀಚಿ ನಿಟ್ಟಡಕಿಲಿಟ್ಟುದು ಲೋ–

೭೪. ಕದ ಕಣ್ಣ ಪುಂಣ್ಯಪುಂಜಮೆ ನೆಲಸಿತ್ತು ಯಾದವನೃಪೇಂದ್ರ ಕೀರ್ತ್ತಿಯ ಬಿತ್ತುರಾಶಿಯಂ ನಿಮಿರ್ದುದೆನಿಪ್ಪವೋಲಮಿತನೊಪ್ಪಿರೆ ಮಾಡಿಸಿದಂ ಬೆಡಂಗುವೆತ್ತಮೃತಸಮುದ್ರದೊಳ್ ಮಹಿಮೆವೆತ್ತ–

೭೫. ಮೃತೇಶ್ವರದಿವ್ಯಗೇಹಮಂ ॥ ಅಮೃತಸಮುದ್ರಮದ್ರಿಮಥನಕ್ಕಗಿದಿಲ್ಲಿಗೆ ವಂದುದಿಂಬುವೆತ್ತಮರನದೀ [೧–] ತೊಳಲಲಾಱದೆ ವಿಶ್ರಮಿಸಿತ್ತು ಧಾತ್ರಿಗಭ್ರಮೆ ನೆಲೆದಪ್ಪಿ ನೀಟ್ಟುದೆನೆ ಧರ್ಮ್ಮದ ನೆ–

೭೬. ರ್ಮ್ಮಗೆ ನೆರ್ಮ್ಮಮಾಯ್ತು ಸಂದಮೃತಸಮುದ್ರಮೆಂಬಪರಿಪೂರ್ಣ್ನತಟಾಕಮನೆಂತು ಬಣ್ಣಿಪೆಂ ॥ ಒದವಿ ಪೊದಳ್ದು ನೀಟ್ದಿ ಫಳಸಂಕುಳದಿಂದೆಸೆದಿರ್ದ್ದ ಪಾರಿಜಾತದ ತಳಿರ್ಗೊಂಬಿನನ್ತೆ ಮೆಱೆದಿರ್ಪ್ಪಮೃತೇಶ್ವ–

೭೭ ರದಂಡನಾಥನಗ್ಗದ ಸಹಜಾತರೊಳ್ ಬುಧಜನಸ್ತುತರಲ್ಲದರಾರ್ ಸಮಸ್ತಸಂಪದಮೆನೆ ಸಲ್ವುದಾರ ಪೆಸರ್ಗೊಂಡೊಡಮಾ ಪೆಸರುತ್ತರೋತ್ತರಂ ॥ ಕಲಿದೇವಂ ದೇವನಾತಂ ನುಡಿದನೆ ತೊದಳಿಲ್ಲಾ–

೭೮. ತನೊಲ್ದಿತ್ತನೇ ನಿಶ್ಚಲಮಾತಂ ಕಾದನೇ ದೇವರ ಬರವಳವಿಂದಾತನಿಂತಾನ್ತನೇ ಮಾರ್ವ್ವಲಮಿಲ್ಲಾತಂ ಚಲಂ ಮಾಡಿದನೆ ಬಿದಿಗಮಿಂಬಿಲ್ಲ ಮತ್ತಾತನಂ ಭೂತಳದೊಳ್ ಪೋಲ್ವಾತನಾರ್ಬಾಪ್ಪಮಿತನೆವಡೆ–

೭೯. ದಂ ತಂಮನಂ ಪುಣ್ಯಪುಂಜಂ ॥ ಸಮನೆನಲಾತನೊಳ್ ಸಮನದಾರ್ ಚಲಮೇ ತನಗಲ್ಲದಿಲ್ಲ ಚಾಗಮೆ ತನಗಲ್ಲದಿಲ್ಲ ಲಲಿತಾಕೃತಿಯೇ ತನಗಲ್ಲದಿಲ್ಲ ಭೋಗಮೆ ತನಗಲ್ಲದಿಲ್ಲೆಸೆವ ಮಾನ್ತನವೇ

೮೦. ತನಗಲ್ಲದಿಲ್ಲ ಸತ್ಯಮೆ ತನಗಲ್ಲದಿಲ್ಲ ಪೆಱರ್ಗೇಂ ಕಲಿಗಂ ಭುವನೈಕಸೇವ್ಯನೋ ॥ಕ॥ ಚಲದೊಳಭಿಮಾನದೊಳ್ ಸತ್ಕುಲದೊಳ್ ಸತ್ಯದೊಳುದಾರದೊಲ್ ಪರಹಿತದೊಳ್ ಕಲಿಯಣ್ಣನೆ ನೆಗಟ್ಟ–

೮೧. ಪ್ಪಂ ಕಲಿಯಣ್ಣಂ ಲೋಕದೊಳಗೆ ಕೃತಯುಗಚರಿತಂ ॥ ಧುರದೊಳ್ ಭೀಮನ ತಂಮನೂರ್ಜ್ಜಿತನಂಯೋಪಾಂಯಂಗಳೊಳ್ ರೇವತೀಶ್ವರನಾಖ್ಯಾನದ ತಮ್ಮನಗ್ರಜಮನಸ್ಸಂತೋಷಲಕ್ಷ್ಮೀಪರಂಪರೆ–

೮೨. ಯೊಳ್ ರಾಮನ ತಂಮನೀಯಮಿತದಂಡೇಶಂಗೆ ತಂಮಂ ಕುಲಾಭರಣಂ ಶ್ರೀವದನಾಬ್ಜಭಾನು ಮಸಣಯ್ಯಂ ಮಂತ್ರಿವಿದ್ಯಾಧರಂ ॥ ಶಿವಪಾದಶೇಖರಂ ದಾನವಿನೋದಂ ಸತ್ಯವಾಕ್ಯನಭಿಮಾನಧನಂ ಭು–

೮೩. ವನಹಿತಂ ಕಟಕಕ್ಕೊಪ್ಪುವನಂಣ್ನನ ಪಟ್ಟವರ್ಧನಂ ಮಸಣಯ್ಯಂ ॥ವೃ॥ ಬಸವಂ ದಂಡೇಶಚೂಡಾಮಣಿ ರಣಧವಳಂ ಗಂಡಭೇರುಂಡನೊಲ್ದರ್ತ್ಥಿಸಿ ಬಂದಂಗಾಂತುನಿಂದಂಗಗಿದು ಶರಣಮೆಂದಂಗೆ ಭೂಚಕ್ರ–

೮೪. ದೊಳ್ ಮಾನಸರೂಪಿಂದಿರ್ದ್ದ ಚಿನ್ತಾಮಣಿ ನೃಪಶಚಿವಾಕಾರದಿಂದಿರ್ದ್ದ ಕಳ್ಪಾನ್ತಸಮುದ್ಯದ್ವಹ್ನಿ ನಣ್ಪಿಂದಮಿತನಣುಗನಾಗಿರ್ದ್ದ ವಿದ್ಯಾಧರೇಂದ್ರಂ ॥ ಕಳದೊಳ್ ಕಟ್ಟಂಕದೊಳ್[೧] ಬಂದಡಸಿದ ಬಯಲೊ–

೮೫. ಳ್ ಭಾಸೆಯೊಳ್[೨] ಕೋಟಿಯೊಳ್ ದೊರ್ವ್ವಳದೊಳ್[೩] ತಳ್ತಾಂಕೆಯೊಳ್ ಕೈದೆಗೆಯ ಭರದೊಳ್[೪] ನಚ್ಚಿನಾಳ್ ಮಾರ್ಬ್ಬಳದೊಳ್ ಕಣ್ನುಳ್ಕುವಾಳ್ ಹೊಯ್ಸಳನ ಕಟಕದೊಳ್ತಾನೆ ಸಂದಗ್ಗದಾ–

೮೬. ಳಗ್ಗಳದಾಳ್ ಬಲ್ಲಾಳದೇವಂಗಮಿತನ ಬಸವಂ ದಂಡನಾಥತ್ರಿಣೇತ್ರ ॥ ಎಸೆವೀ ಬಲ್ಲಾಳದೇವಂಗಮಿತನೆ ಬಲದೋಳ್ ತೋಳ್ಗೆ ಸಂದಿರ್ದ್ದ ಕೂರ್ಬ್ಬಾಳ್ ಬಸವಂ ಬಲ್ಲಾಳನಾಸ್ಥಾಯಿಕೆಗಮಿತಕೆ ದೀಪಂ ಪ್ರದೀಪ–

೮೭. ಕ್ಕೆ ತೇಜಂ ಬಸವಂ ಬಲ್ಲಾಳರಾಜ್ಯಕ್ಕಮಿತನೆ ಮುಖಮಂತಾ ಮುಖಶ್ರೀಗೆ ನೇತ್ರಂ ಬಸವಂ ಮುಖ್ಯ ಪ್ರಭಾವಕ್ಕವರಿವರೆನೆ ಮತ್ತಾರುವಂ ಪೇಳಲುಂಟೇ ॥ಕ॥ ಮೂವರುಮನುಜಾತರಿನ್ನೈರಾವತದಿಂದ–

೮೮. ಮೃತಕಿರಣನಿಂ ಕೌಸ್ತುಭದಿಂ ದೇವಾವನಿಜಮೆಸೆವವೋಲೀ ವಸುಧಾತಳ–ದೊಳೆಸೆವನಮಿತಚಮೂಪಂ ॥ ಸ್ವಸ್ತಿ ಸಮಸ್ತಭುವನರಾಜಿರಾಜಿವಿರಾಜಿತ–ಚೂಡಾಮಣಿಮರೀ–

---

೧. ಕಟ್ಟಂಕದಾಳ್; ೨. ಭಾಸೆಯಾಳ್; ೩. ದೋರ್ವ್ವಳದಾಳ್; ೪. ಭರದಾಳ್ – ಹೀಗೆ ಇರಬಹುದೇ?

೮೯. ಚಿಮಂಜರೀರಂಜಿತಚಳನನಳಿನ ಶ್ರೀಮದಮೃತೇಶ್ವರದೇವಲಬ್ಧವರಪ್ರಸಾದನುಂ ಅನವರತಪಾತ್ರದಾನವಿನೋದನುಂ । ಯಾದವಾನ್ವಯಗಗನ-ಗಭಸ್ತಿಮಾಳಿನಿಶ್ಯಂಕಪ್ರತಾಪಚಕ್ರವ-

೯೦. ರ್ತ್ತಿ ವೀರಬಲ್ಲಾಳದೇವರಾಜ್ಯಾಭ್ಯುದಯಕರಣಕಾರಣನುಂ । ವಿಜಯ-ಗೋಮಿನೀಮಂಗಳಾಯತನರತ್ನತೋರಣನುಂ । ಚತುರ್ತ್ಥಕುಳಕುಮು-ದಿನೀಶರಚ್ಚಂದ್ರ ಚಂದ್ರಿಕೋಪಮಾನಮಾ-

೯೧. ನಾನೂನಸರ್ವ್ವಲಕ್ಷಣಸಂಪೂರ್ಣ್ನಸುಗ್ಗಾಂಬಿಕಾಗರ್ಬ್ಬದುಗ್ಧಾರ್ಣ್ನವಪಾರಿಜಾತ ನುಂ ಸೌಂದರ್ಯ್ಯವಿಜಿತಚೇತೋಜಾತನುಂ ವೀರವೈರಿಧಾರಿಣೀನಾಥ-ಹಸ್ತ್ಯರಥಪದಾತಿಸಂಘಾತನಿರ್ಘಾತಪ-

೯೨. ಟಿಷ್ಟನಿಷ್ಠುರಕೃಪಾಣಕುಳಿದಂಡಮಂಡಿತಭುಜಾಮಂಡಳನುಂ ವೀರಕ್ಷ್ಮೀಪ್ರ-ಸಾದನೋಪಚಿತಕರ್ಣ್ನಕುಂಡನುಂ । ಸನ್ಧಿವಿಗ್ರಹಯಾನಾಸನಸಂಶ್ರೆಯ-ದ್ವೈದೀಭಾವಭಾವಿತಪ್ರಯೋ-

೯೩. ಗನಿಪುಣಮಂತ್ರಿಮಂಡಳನಿತ್ಯಾವಳೋಕರತ್ನದರ್ಪ್ಪಣನುಂ । ಪರಿವಾರನಿವಹ-ಚಿತ್ತಂಸತರ್ಪ್ಪನುಂ । ವಿದ್ಯುದ್ದಂಡನರ್ತ್ತನಾನುಸಾರಿಸ್ವೈರಚಾರಶೂಕಳ್ಯ-ತುರಂಗಮಾರೂಢಪ್ರೌಢದಂಡಾಂ-

೯೪. ಕ ಶಬ್ದಶಿಕ್ಷೋಪಜಾತರೇಪರೇಖಾವಿಳಾಸವತ್ಸರಾಜನುಂ । ಶಸ್ತ್ರಶ್ರಮಾಚಾರ್ಯ್ಯಭಾರದ್ವಾಜನುಂ । ಕಲಿದೇವ ಮಸಣಿದೇವ ಬಸವರಾಜ ಪ್ರಸಿದ್ಧ ಸೋದರತ್ರಿತಯಶಾಖಾನುಬಂಧಬಂ-

೯೫. ಧನುಜ ಫಲಪ್ರದಾಯಕ ಕಳ್ಪವ್ರಿಕ್ಷನುಂ । ಶರಣಾಗತಮಂಡಳಿಕರಕ್ಷಾದಕ್ಷನುಂ । ಸತ್ಯತ್ಯಾಗವಿಕ್ರಮಕ್ರೀಡಾನವೀನರಾಧೇಯನುಂ । ಶೌಚಗಾಂಗೇಯನುಂ । ಸ್ವಾಮಿದ್ರೋಹಮೋಹಾನ್ಧ-

೯೬. ಕಾರಸಂಹಾರಸಹಶ್ರಕಿರಣನುಂ । ಯಾದವಕಟಕರತ್ನಾಭರಣನುಂ । ದಂಡನಾಥಮೌಳಿಮಾಣಿಕ್ಯನುಂ । ದಂಡನಾಥ ಕುಸುಮಕೋದಂಡನುಂ । ದಂಡನಾಥಗಂಡಮಾರ್ತ್ತಂಡನುಂ । ದಂಡನಾಥ ದಿಕ್ಕುಂಜ-

೯೭. ರನು(ಂ) । ಮುಗ್ಧಂಡದಂಡನಾಥಕೋಳಾಹಳನುಂ । ವಾಚಾಳದಂಡನಾಥ ಹಾಳಾಹಳನುಂ । ಚೋಳದಂಡನಾತಕಾಳರಾಕ್ಷಸನುಂ । ಮಾಳವದಂಡನಾಥ ಮದನತ್ರಿಣೇತ್ರನುಂ । ಗೂರ್ಜ್ಜರದಂಡನಾಥಗಿರಿವ-

೯೮. ಜ್ರದಂಡನುಂ । ರಾಯದಂಡನಾಥಗಂಡಭೇರುಂಡನುಂ । ಚೋಳಬಾಳಿಕಾಹಂಸತಿಳಕನುಂ । ಕೇರಳನಿತಂಬಿನೀ[೧]ತಾರಹಾರನುಂ[೧] । ಮಾಳವಮಾನಿನೀಮನೋರಂಜನನುಂ । ಕರ್ಣ್ಣಾಟಕಾಮಿನೀಕರ್ಣ್ಣಾಭರಣನುಂ । ಪ್ರಧಾನ-

---

೧-೧ 'ತೋರಹಾರನುಂ' ಇರಬಹುದೇ?

೯೯. ಜಂಗಮಕೇದಾರನುಂ । ಸಕಳಜನಾಧಾರನುಮೆನಿಸಿ ಮಹಿಮೆಗಾಸ್ಪದವಾದ-ಮೃತೇಶ್ವರದಂಡನಾಯಕಂ ಕಗ್ಗಿಯ ವೃತ್ತಿಯೊಳಗಣಮೃತಸಮುದ್ರದೊಳ್ ಶ್ರೀಮದಮೃತೇಶ್ವರದೇವರಂ

೧೦೦. ಸುಪ್ರತಿಷ್ಠಿತಂ ಮಾಡಿ ಸಕವರ್ಷಂ ೧೧೧೯ನೆಯ ಪಿಂಗಳ ಸಂವತ್ಸರದ ಪುಷ್ಯ ಬಹುಳ ಸಪ್ತಮಿ ಸೋಮವಾರದುತ್ತರಾಯಣ ಸಂಕ್ರಮಣದಂದು ಶ್ರೀಮದು ವಜ್ರೇಶ್ವರದೇವರ ಸಂನಿಧಾನದೊಳ್

೧೦೧. ಪಾದಪೂಜಾಪುರಸ್ಸರಂ ಶ್ರೀಮತ್ಪ್ರತಾಪಚಕ್ರವರ್ತ್ತಿ ವೀರಬಲ್ಲಾಳದೇವರ ಶ್ರೀಹಸ್ತದಿಂ ಧಾರಾಪೂರ್ವ್ವಕಂ ಪಡೆದು ತಂನ ಮಾಡಿಸಿದಮೃತೇಶ್ವರ ದೇವರ ಅಂಗಭೋಗರಂಗಭೋಗಕ್ಕಂ । ಚೈತ್ರ-

೧೦೨. ಪವಿತ್ರಾರೋಪಣಕ್ಕಂ । ದೇವರ ಪೂಜಾರಿಗಪರಿಚಾರಕರ್ಗ್ಗಂ ಬ್ರಾಹ್ಮಣರಾಹಾರದಾನಕ್ಕಂ । ಖಂಡಸ್ಫುಟಿತಜೀರ್ಣ್ಣೋದ್ಧಾರಕವಾಗಿ ಆಸಂದಿ-ನಾಡೊಳಗಣಗ್ರಹಾರ ಹುಣಿಸೆಯಕಟ್ಟವಂ ಸ-

೧೦೩. ರ್ವ್ವನಮಸ್ಯವಾಗಿ ಕೊಟ್ಟ ದತ್ತಿ । ಹಾದಿಯಕೆಱೆಯ ನಾಗಗೌಡನುಂ ಕಗ್ಗಿಯ ಭಾಗೆಯ ಪ್ರಭುಗಾವುಂಡುಗಳ್ ಪ್ರಮುಖವಾಗಿ ಆ ಭಾಗೆಯ ಗಂಗವುರವಂ ಸರ್ವ್ವನಸ್ಯವಾಗಿ ಬಿಟ್ಟ

೧೦೪. ದತ್ತಿ । ಕೂಂಟನಮಡುವಿನ ಕೇತಗವುಡನೆಱಕಗೌಡ ಮಾಳಗೌಡನಿಂತೀ ಮೂವರುಂ ತಂಮ ಹೊಲದೊಳಗೆ ಅಮೃತೇಶ್ವರದೇವರ್ಗ್ಗೆ ದೇವತಾಲಯಕ್ಕಂ ಪುರಮಂ ಕಟ್ಟಲಾಚಂದ್ರತಾರಂಬರಂ

೧೦೫. ಸಲ್ವನ್ತಾಗಿ ಕೊಟ್ಟ ಭೂಮಿ । ಮತ್ತವಾ ಹೊಲದೊಳಗೆ ಪುರದಿಂ ಮೂಡಲುಂ ತೆಂಕಲು ಗಂಗನ ಗಳೆ ಗದ್ದೆ ಮತ್ತರೊಂದು । ತೋಟ ಮತ್ತರೊಂದು । ಅನ್ತು ಮತ್ತರೆರಡಂ ಕೊಟ್ಟ ದತ್ತಿ । ಹಾದಿಯಕೆ-

೧೦೬. ಱೆಯ ಪ್ರಭು ನಾಗಗವುಂಡಂ ತಂನ ಹೊಲದೊಳಗೆ ಪುರದ ಪಡುವಣ ಎಱೆಯಮನ ಮಸಣಗವುಡನ ಕೆಱೆಯ ಕೆಳಗೆ ಗದ್ದೆ ಮತ್ತರೊಂದಂ ಕೊಟ್ಟ ದತ್ತಿ । ಅಮೃತಸಮುದ್ರದ ಮೂಡಣ-

೧೦೭. ಕೋಡಿಯಲ್ಲಿ ನಾಗಗೌಡಮುಖ್ಯವಾಗಿ ಬಾಚಲೇಶ್ವರದ ಪಟ್ಟಣಸ್ವಾಮಿ ಮಹದೇವಸೆಟ್ಟಿಯರು ತಂಮ ಗೌಡಿಕೆಯ ನೇಜಿಲಕೆಱೆಯ ಚಿಣ್ಣವ-ಗಟ್ಟದಕೆಱೆಯ ಕೆಳಗೆ ಗಂಗನ-

೧೦೮. ಗೆಳೆಯಲು ಗದ್ದೆ ಮತ್ತರೊಂದು ಕೊಟ್ಟ ದತ್ತಿ । ಅಮೃತಸಮುದ್ರದ ಪಡುವಣ ಕೋಡಿಯಲ್ಲಿ ॥ ಕ ॥ ಅಯ್ಯಣವಾಡಿಯೊಳಂ ಕಡುರಯ್ಯಂ ಜಗದೊಳಗೆ ಕೊಟ್ಟುಕುಣಿವಿಗ್ರಾಮ-

೧೦೯. ಕ್ಕಯ್ಯನೆನಸಿರ್ದ್ದನಾ ರುದ್ರಯ್ಯಂಗಂ ಮಂತ್ರಿಜಕ್ಕನಾತ್ಮಜನಾದಂ ॥ ವ ॥ ಆ ಹೆಗ್ಗಡೆ ಜಕ್ಕಯ್ಯನಮೃತೇಶ್ವರದಂಡನಾಯಕರ ಬೆಸದಿಂದಮೃತೇಶ್ವರ ದೇವರ ಭವನಮಂನತಿಚಲ್ವನಾಗಿ ಮಾ-

೧೧೦. ಡಿಸಿದಡೆಯಮೃತೇಶ್ವರದಂಡನಾಯಕರು ಮೆಚ್ಚಿಕೊಟ್ಟ ಗದ್ದೆ ಗಂಗನಗಳೆಯಲು ಕಂಬ ಹಂನೆರಡು । ಮತ್ತಂ ದವಸಿಗರ್ಗ್ಗೆ ಗಂಗನ ಗಳೆಯಲು ಕಂಬವಱುವತ್ತು । ಮತ್ತಂ ದೇವರ ನೈವೇ–

೧೧೧. ದ್ಯಕ್ಕೆ ಗದ್ದೆ ಗಂಗನ ಗಳೆಯಲು ಕಂಬ ನಾಲ್ವತ್ತು ಅಂತು ಮತ್ತರೊಂದು ಕಂಬ ಹಂನೆರಡು ಕೊಟ್ಟ ದತ್ತಿ । ಅಮೃತೇಶ್ವರದೇವರ್ಗ್ಗೆ ದೋರಸಮುದ್ರದ ಭತ್ತವಸರದಂಗಡಿಯ ಸಮಸ್ತನಕ–

೧೧೨. ರಂಗಳುಂ ಮುಖ್ಯವಾಗಿ ಗುಂಮೇಶ್ವರದಂಗಡಿ । ಬೊಮ್ಮಲದೇವಿಯರಂಗಡಿ । ಕೇತಲದೇವಿಯರಂಗಡಿ । ಬೆಲುಹೂರಂಗಡಿ । ಪತ್ಯೇಕ

೧೧೩. ಪತ್ಯೇಕ ಸೆಡೆಅರವನವೊಂದು । ಚೈತ್ರಕ್ಕೆ ಹಾಗವೊಂದು । ಪವಿತ್ರಕ್ಕೆ ಹಾಗವೊಂದು ॥ ವೃ ॥ ಪ್ರಿಯದಿಂದಿಂತಿದನೆಯ್ದೆ ಕಾವಮನುಜಂಗಾ ಯುಂ ಜಯಶ್ರೀಯುಮಕ್ಕೆ ಯಿ–

೧೧೪. ದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರಂಗಳೊಳು ವಾರಣಾಶಿಯೊಳೆ–ಕ್ಕೋಟಿಮುನೀಂದ್ರರು ಕವಿಲೆಯಂ ವೇದಾಢ್ಯರಂ ಕೊಂನ್ದುದೊಂದಯಶಂ ಪೊರ್ದ್ದುಗುವೆನ್ದು ಸಾಱಿದಪುವೀ ಶೈ–

೧೧೫. ಳಾಕ್ಷರಂ ಧಾತ್ರಿಯೊಳು । ಸ್ವದತ್ತಾಂ ಪರದತ್ತಾಂ ವಾ ಹೋ ಹರೇತಿ ವಸುಂಧರಾ । ಷಷ್ಟಿರ್ವ್ವರ್ಷಸಹಸ್ರಾಣಿ ನಿಷ್ಠಾಯಾಂ ಜಾಯತೇ ಕ್ರಿಮಿಃ । ಉದ್ಧಂಡಕವಿಭಾಳನೇತ್ರಂ ಸುಕವಿ–

೧೧೬. ಜನಮಿತ್ರಂ ಜನ್ನಯ್ಯನ ಕವಿತೆ । ಸರಸ್ವತೀಕರ್ಣ್ನಪತ್ರಂ ಕಮನೀಯಗಾತ್ರಂ ಲೊಕ್ಕಿಗುಂಡಿಯ ಮಹದೇವಂರ್ಣ್ನಂಗಳ ಶಿಷ್ಯ ನಾಕಂಣ್ನನ ಬರಪ । ಬಿರುದಕಂಡರಣೆಕಾಱ–

೧೧೭. ಕೊಳಾಹಳಂ ರೂವಾರಿ ಮಲ್ಲೋಜನ ಕಂಡರಣೆ ॥ ಮಂಗಳಮಹಾಶ್ರೀ ॥ ಕಗ್ಗಿಯ ವೃತ್ತಿಯ ಸಾವಂತ ಮಾಳಗೌಡನಿಂ ಕಿಱಿಯ ಬಂಮಗಾವುಂಡಂಗೆ ॥ವೃ॥

೧೧೮. ನಿರುಪಮದಾನಿ ಬಂಮಗವುಡಂಗಮನಂಗನೆ ಮಾಕಗೌಡಿಗೀ ಹರಿಹರನಬ್ಜಶಂಭವರು ಪುಟ್ಟುವ ಮಾರ್ಗದೆ ಪುಟ್ಟಿದರ್ಸ್ಸುತರ್ವ್ವರನಿಧಿ ಕೇತ–ಗೌಡನೆಱೆಯಂಗಗವುಂಡನು ಮಾ–

೧೧೯. ಳಗೌಡರಾದರದೊಳೆ ಕೊಟ್ಟರೊಪ್ಪುವಮೃತೇಶಪುರಕ್ಕತಿಸೇವ್ಯ ಭೂಮಿಯಂ ॥ ಬ್ರಹ್ಮಪುರಿಯ ಬ್ರಾಹ್ಮಣರ್ಗ್ಗೆ ಗಂಗವುರದ ಕೆಱೆಯ ಕೆಳಗೆ ಗದ್ದೆ ಗಣಪತಿಭಟ್ಟ ಉಪೇಂ–

೧೨೦. ದ್ರಭಟ್ಟ ಕುದುರೆಯಪ್ಪಯ್ಯ ॥ ಬಮ್ಮಯ್ಯ । ಕೂಚಯ್ಯ । ನಾಗದೇವ । ಭಟ್ಟ । ದಾಡಿಗೆಯಪ್ಪಯ್ಯ । ನಾರಣನಾಗದೇವ ಹರಿಹರಪೆದ್ದಿ । ಯಿನ್ತಿನಿಬರ್ಗ್ಗಂ ಮತ್ತರೊಂದು ಕಂಬ ಹತ್ತು । ಅಮೃತಸಮುದ್ರದಲ–

೧೨೧. ಪ್ಪಯ್ಯಂಗೆ ಕಂಬ ಹತ್ತು

೨೮
ಅಬ್ಬಲೂರು ಶಾಸನ
ಕ್ರಿ.ಶ.ಸು. ೧೨೦೦

೧. ಓಂ[॥*] ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಳೋಕ್ಯ-
ನಗರಾರಂಭಮೂಲಸ್ತಂಭಾಯ ಶಂಭವೇ ॥ ಶ್ರೀಮದ್ಗಂಗಾತರಂಗೋ-

೨. ಚ್ಚಳಿತಜಳಕಣಶ್ರೇಮಿಪುಃಪಾಳಿಶೋಭಾಧಾಮಂ ಚಂಚಜ್ಜಟಾಪಲ್ಲವಮಮ್ರಿ-
(ಮೃ)ತಕರೋದ್ಯತ್ಫಳಂ ಬಾಹುಶಾಖಾರಾಮಂ ಗೌರೀಲತಾ-

೩. ಲಿಂಗಿತಮಮರನುತಂ ಶಂಭುಕಳ್ಪದ್ರುವಾದಂ ರಾಮಂಗೀಗತ್ಥಿಯಿಂ ವಾಚ್ಛಿತಫಳಚಯಮಂ
ಸಂತತೋತ್ಸಾಹದಿಂದಂ ॥ ಶ್ರೀಕಣ್ಠಂ ರಾಮ-ದೇವಂಗನುಪ್ಪ (ಪ)ಮ-

೪. ಮಹಿಮಂಗೀಗೆ ಸಂಪತ್ತನೆಂದುಂಅನಾ ನಾಕೌಕಾನೀಕಮೌಳಿಪ್ರಕರಮ-
ಣಿಗಣಶ್ರೇಣಿಶೋಣಾಂಶುಜಾಳಬ್ಯಾಕೀರ್ಣ್ನಾ[೦*]ಘ್ರಿದ್ವಯಾಳಂಕ್ಕಿ(ಕೃ)ತನಮರವರಂ
ಶೀತಶೈಲೇ[೦*]ದ್ರ-

೫. ಕನ್ಯಾಳೋಕಾಂಶುಶ್ರೀನಿವಾಸಂ ಸಕಳಗಣವ್ರಿ(ವೃ)ತಂ ವಿರಸೋಮೇಶನೀಶಂ ॥
ಚಳದುಗ್ರ್ರಾಹವಕ್ತ್ರಚ್ಚು(ಚ್ಯು)ತತಿಮಿನಿಕರಾತುಚ್ಛಪುಚ್ಛಾಗ್ರಘಾತುಕುಳಿತಾಂ-

೬. ಭಃಕುಂಭಿಯೂಥಪ್ರಕರಸಜಳಫೂತ್ಕಾರಹಸ್ತಾಬ್ರಿ(ಭ್ರ)ಮಾಳಾಮಿಳಿತಂ ಸುತ್ತಿ ಪ್ಫೊ(ರ್ಪ್ಪು)
ದುದ್ಯನ್ಮಣಿಕಿರಣಸ್ಫಾರಮುಕ್ತಾಂಶು ವೇಳಾಚಳಮಾಳಂ

೭. ಭೂರಮಾಮಣ್ಣನವಿಪುಳಕಟೀದೇಶಮುದ್ರಂ ಸಮುದ್ರಂ ॥ವ॥ ಅಂತನೇಕ
ಜಳಚರನಿವಾ[ಸ*]ಮುಂಸ[ಮು*]ತ್ತುಂಗಲಹರೀನಿವಾಸಮುಮೆನಿಸಿ ಸೊಗಯಿಸುವ

೮. ಲವಣಸಮುದ್ರದಿಂ ಪರವ್ರಿ(ವೃ)ತವಾದ ಜಂಬೂದ್ವೀಪದ ತೆಂಕಲು ನೀಳನಿಶದ(ಧ)
ಹಿಮವನ್ತಪರ್ವ್ವತಂಗಳೊಳವಲ್ಲಿ ॥ವ್ರಿ॥ ಎಸೆಗುಂ ಪೂರ್ವಾಪರಾಂಭೋನಿಧಿಮಿ[ತಿ]-

೯. ವಿತತಾಯಾಮದಿಂ ಸಿದ್ಧಕನ್ಯಾವಿಸರಾನಂಗೋರು ಕೇಳೀಶ್ರಮಶಮಮ-ಹಿಮಾಕಂದರಂ
ಸ್ವರ್ಧುನೀವಾಃಪ್ರಸರೋಪಕ್ಷುಣ್ಣ ನಾನಾ [ನಗನಿ]-

೧೦. ಕರಗಳದ್ಗಣ್ಡಶೈಳಾಳಿಮಾಳಾವಿಸರಂ ಪ್ರಸ್ಫಾರಶೀತದ್ಯುತಿರುಚಿನಿಚಯಭ್ರಾಜಿತಂ [ಶೀ]ತಶೈಲಂ
॥ವ॥ (॥)ಆ ಮಹಿಗಿ [ರೀ]ನ್ದ್ರದ ದಕ್ಷಿಣಪಾರ್ಶ್ವವ [ತ್ತೀ]-

೧೧. ಯತ್ತಿಪ್ಪ ಭಾರತವರ್ಷದೊಳು ಕುಂತಳದೇಶವೆಂಬುದಧಿಕ ಶೋಭೆವೆತ್ತೆಸುವುದಲ್ಲಿ ॥ಕ॥
ಸೊಗಯಿಪುದಲನ್ದೆಯೆಂಬುದು ನಗರಂ ಚೆಲುವೆಸೆದು ನಾಡೆವ(ಯ)ಮ-

---

೨೮. E.I. V 245.......252

೧೨. ರಾವತಿಗಂ ಮಿಗಿಲೆನಿಸಿ ವಿಬುಧಜನದಿಂದಗಣಿತಧನಧಾನ್ಯಜಳಸಮ್ರಿ (ಮೃ)ದ್ಧಿಯಿನೆಂದು ॥ ಮತ್ತ ॥ ಪ್ರಕಟಿತಕಮರಾವತಿಯೊಳು ಸುಕೇಶಿಯುಂ[o] ಮಂಜುಘೋಷೆಯುಂ ತಾಮಿರ್ಬ್ಬರ್ಸ–

೧೩. ಕಳವಧೂತತಿಯೆಲ್ಲಂ ಸುಕೇಶಿಯಮಂಜುಘೋಷೆಯರ್ತ್ತತ್ಪುರದೊಳ್ ॥ ವ್ರ ॥ ಅದು ನಾನಾವಿಧ ಗನ್ಧಸಾಳಿವನದಿಂ ಸವ್ವರ್ತುಕೆದ್ಯಾನನಂದನದಿಂ ಪೊರ್ನ್ನ(ರ್ಣ್ಣ) ತಟಾಕಕೂಪ–

೧೪. ಸರಸೀಸಂನ್ದೋಹದಿಂ ಸಾರಸ್ಸೋನ್ಮದಭ್ರಿ(ಭೃ)ಂಗೀಪಿಕಕೋಕಕೇಕಿಶುಕಸಂಘಾ–ನೀಕಶಾಕುಂನಾದದಿನೆತ್ತಂ ಗಣಿಕಾವಿನೋದಕ್ರಿ(ಕೃ)ತವೀಣಾನಾದ[1]ದಿಂದೊಪ್ಪ–ಗುಂ[1] । (॥) ವ । (॥) ಅಂತಪರಿಮಿತಕೇ–

೧೫. ದಾರಭೂಮಿಯುಂಮಪರಾಜಳಾಶ್ರಯಾಭಿರಾಮುಮುಂ ಬಹುಜನಾಕೀರ್ನ್ನ–(ರ್ಣ್ಣ)ಮುಮಮೇಯಗಣಿಕಾನಿವಾಸಮುಮಗಣಿತವಣಿಗ್ಜನಾಶ್ರಯಮುಮಮೆನಿಸಿ ಶೋಭಾನಿವಾಸಮಾಗೆ ॥

೧೬. ವ್ರಿ ॥ ಅವತರಿಸಿರ್ದ್ದನಲ್ಲಿ ರಜತಾಚಳದಿಂ ಗಿರಿಜಾಸಮೇತಮುತ್ಸವದೊಳೆ ಸೋಮನಾಥನಖಿಳಾಮರವೋ(ಮೌ)ಳಿವಿನದ್ಧರತ್ನಸಂಭವ [ಕಿ*]ರಣ–ಪ್ರಭಾಪಟಲಪುಂಜಪರಾಗಪದಾ[ಬ್ಜ]ನರ್ಥಿಯಿಂದ–

೧೭. ವನತಭಾಕ್ತಿಕಾಭಿಮತಸಿದ್ಧಿಫಳೋದಯಕಳ್ಪಭೂರುಹಂ ॥ಕ॥ ಆ ಸೋಮನಾಥಪುರ ಸವಾಸಿತರೊಳು ಬ್ರಹ್ಮಪುರಿಗಳೊಳ್ಪಿ(ಳ್ವಿ)ಪ್ರರೊಳ ಬ್ಯಾ–(ವ್ಯಾ)ಸಶುಕವಾಮದೇವಪರಾಶರಕಪಿಳಾದಿ ಸದ್ರಿ(ದೃ)ಶನೋ–

೧೮. ರ್ಬ್ಬನ್ನೆಗಳ್ದಂ ॥ ಕ ॥ ಶ್ರೀವತ್ಸಗೋತ್ರನುರ್ಬ್ಬೀ(ರ್ವ್ವೀ)ದೇವನುತಂ ನಿಖಿ–ಳವೇದವೇದಾಂಗವಿದಂ ಪಾವನಚರಿತ್ರಗುಣಸದ್ಭಾವಂ ಪುರುಷೋತ್ತಮಂದ್ಪಿ–(ದ್ವಿ)ಜೋತ್ತಮನೆನಿಪಂ ॥ ಕಂ ॥ ಆ ವಿಪ್ರನ ಸತಿ ಸೀತಾದೇವಿಗವಾ [ಸ]ತ್ಯ–

೧೯. ತಪನಸತಿಗಂ ಗುಣಸದ್ಭಾವದೆ ಪದ್ಮಾಂಬಿಕೆ ಸಲೆ ಪಾವನಸುಚರಿತೆ ಪತಿಹಿ–ತಬ್ರ(ವ್ರ)ತೆಯೆನಿಪಳ್ ॥ ಆ ದಂಪತಿಗಳ್ಪಲಕಾಲವನಪತ್ಯರಾಗಿರ್ದ್ದೊಂದು ದೆವಸಂ ನಾಪುತ್ರಸ್ಯ ಲೋಕೋಸ್ತಿ ಎಂಬ ವೇದವಾಕ್ಯಮಂ [ಂ*]ತಿ–

೨೦. [ಳಿದು] ॥ ಕ । (॥) ಪುತ್ರಾರ್ತ್ಥವಾಗಿ ಸತ್ಯಪವಿತ್ರಾಚರಣಂ ನೆಗಟ್ದ ಪುರು–ಷೋತ್ತಮನಾಪತ್ರಾ(ತ್ತ್ರಾ) ಣನೀಶನೆಂದು ಕಳತ್ರಾನ್ವಿತನಾಗಿ ಶಂಭುವಂ ಪೂಜಿಸಿದನ್ ॥ ವ [॥*] ಅಂಗನೆಮಿತ್ತ ದಿವಿಜದನುಜವ್ರಿ(ವೃ)ಂದವಂದಿತಪಾದಾರವಿಂದ–

೨೧. ಮಹೇಶ್ವರಂ ಕವಿಳಾಸಪರ್ಬ್ಬ(ರ್ವ್ವ)ತದ ರಮ್ಯಭೂಮಿಯೊಳು ಕೇಶವ–ವಾಸವಾಬ್ಜಭವರೋಲಗಿಸಲಸಂಖ್ಯಾತಗಣಪರಿವ್ರಿ (ವೃ) ತನುಮಾಸಹಿತಂವ [ವೊ]ಡ್ಡೋಲಗದೊಳು ಸುಖಸಂಕಥಾ–

೧–೧. 'ದಿಂದೊಪ್ಪುಗುಂ' ಎಂದು ಓದಿರಿ.

೨೨. ವಿನೋದದಿಂದಮಿರೆ ನಾರದನೆಂಬ ಗಣೇಶ್ವರನಿನ್ತೆಂದ ॥ ವ್ರಿ ॥ ಓಹಿಲ ದಾಸಿ(ಸ) ಚೆಂನ ಸಿರಿಯಾಳ ಹಳಾಯುಧ ಬಾಣನುದ್ಭಟರ್ದೇಹದೊಳೊಂದಿಗ ಬಂದ ಮಳಯೇಶ್ವರ ಕೇಶವರಾಜರಾದಿಯಾಗ್ಗೈಹಿ–

೨೩. ಕಸೌಖ್ಯಮಂ ಬಿಸುಟಸಂಖ್ಯಗಣಂ ನಿಜವಾದ ಭಕ್ತಿಸದ್ಗೇಹದೊಳಿಲ್ಲಿರಲು ಸಮಯಮುಕ್ಕಟವಾದುವು(ದು) ಜೈನಬೌಧ[ದ್ದ]ರೊಳ(ಳ್) ॥ ಎಂಬುದುಂ ಮಹೇಶ್ವರಂ ದರಹಸಿತವದನಾರವಿಂ–

೨೪. ದನಾಗಿ ವೀರಭದ್ರನಂ ನೀಂ ಮನುಷ್ಯಲೋಕದೊಳು ನಿಂನಂಶದೊಳೊ–ರ್ಬ್ಬಿ(ರ್ಬ್ಬ)ನಂ ಪುಟ್ಟಿಸಿ ಪರಸಮಯಗಳಂ ನಿಯಾಮಿಸೆಂಬುದುಂ ವೀರಭದ್ರನುಂ ಪುರುಷೋ–

೨೫. ತ್ತಮಭಟ್ಟರ್ಗ್ಗೆ ಸ್ವಪ್ನದೊಳ್ತಾಪಸರೂಪದಿಂ ಬಂದು ಪುತ್ರಂ ಪರಸಮಯನಿಯಾಮಕಂ ನಿಮಗೆ ಪುಟ್ಟುಗುಮೆ [ಂ*]ದು ಮತ್ತಂಮಿಂತೆಂದ ॥ ಶ್ಲೋಕ ॥ ಜೈನಮಾರ್ಗ್ಗೇಷು ಯೇ ಯಾ –

೨೬. ತಾ ಬಹವೋ ದಕ್ಷಿಣಾಪಥೇ ತೇ ದೂಷಿತಾ ಭವನ್ತು ಸರ್ವ್ವೇ ರಾಮೇಣ ತವಸೂನುವಾ ॥ ವ ॥ ಎನ್ದು ವ(ಪ)ರಮಪ್ರಸಾದಂ ಮಾಡಿ ಪೋಪುದಂ ಪುರುಷೋತ್ತಮಭಟ್ಟರು

೨೭. ಕ್ರಿ[ಕೃ]ತಾರ್ತ್ಥರಾಗಿ ಸಂತಸಂಬಟ್ಟು ಮಗನಂ ಪಡೆದು ಜಾತಕರ್ಮ್ಮಾದಿ ಕ್ರಿಯೆಗಳಂ ಮಾಡಿ ದೇವತೋ[ದ್ದೇ]ಶಧಿಂ ರಾಮನೆಂದು ಪೆಸರನಿಟ್ಟರಾತನುಂ ತನ್ನ ದಿವ್ಯ(ವ್ಯ) ಜನ್ಮಾನುರೂಪಮಾ–

೨೮. ಗೆ ಶಿವಯೋಗಯುಕ್ತನಾಗಿ ನಿಸ್ಪೃಹವ್ರಿ(ವೃ)ತ್ತಿಯಿಂ ಚರಿಯಿಸುತ್ತುಂ ॥ ಕಂದ ॥ ಏಕಾಗ್ರಭಕ್ತಿಯೋಗದಿನೇಕಾಕಿಯೆನಲೆ ಸಂದು ಶಿವನಂ ಪಿರಿದಪ್ಪೇಕಾನ್ತದೊಳಾರಾಧಿ–

೨೯. ಸಿ ಯೆಕಾನ್ತದ ರಾಮನೆಂಬ ಪೆಸರ[ಂ*]ಪಡದಂ ॥ ವ್ರಿ ॥ ಸತತಂ ಸಂದು ಶಿವಾಗಮೋಕ್ತವಿವಿಧಕ್ಷೇತ್ರಂಗಳೊಳು ಶಾಂಭವಾಯತನಾನೇಕನದೀನದಪ್ರಕರದೊಳು [೧]ಗೌರಿ[ರೀ]ವರಾಂಘ್ರಿದ್ವ[೧]–

೩೦. ಯಾಶ್ರಿತ ವಾಕ್ಕಾಯಮನೋನುಗಂ ಚರಿಯಿಸುತ್ತಂ ಬಂದು ಕಣ್ಡಂ ಸುರಾರ್ಚ್ಚಿತನಂ ದಕ್ಷಿಣಸೋಮನಾಥನನಘೌಘತ್ರಾಸಿಯಂ ಪ್ರೀತಿಯಿಂ ॥ ವ ॥ ಅನ್ತು ಬಂದನವರ–

೩೧. ತ ವಿನಮದಮರವರಮೌಳಿಮಣಿಕಿರಣಮಂಜರೀರಂಜಿತಾಂಘ್ರಿಯುಗ್ಮನಪ್ಪ ಪುಲಿಗೆಱೆಯ ಸೋಮನಾಥನನಾರಾಧಿಸುತ್ತಮಿಪ್ಪುದುಮಾ ಪರಮೇಸ್ವರ ಪ್ರತ್ಯಕ್ಷವಾಗಿ॥

೩೨. ಅತ್ರ ಶೋಕದ್ವಯಂ ॥ ಅಲ್ಬಲೂರು ವರಗ್ರಾಮಂ ಗತ್ವಾ ರಾಮ ಮಮಾಜ್ಞೆ(ಜ್ಞ)ಯಾ [।*] ತತ್ರ ವಾಸಂ ಕುರು ಸ್ವಸ್ಥ ಯಾಜ ಮಾಂ ಭಕ್ತಿಯೋಗತಃ ॥ ಜೈನೈ[ಃ*]ಸಹ ವಿವಾದಂ ಚ ಶಂಕಾಂ ಹಿತ್ವಾಕು–

೧–೧. 'ಗೌರೀವರಾಂಘ್ರಿದ್ವ' ಎಂದು ಓದಿರಿ.

೩೪. ರುಷ್ವಥ । ಸ್ವಶಿರೋಪಿ ಪಣಂ ಕ್ರಿ(ಕೃ)ತ್ವಾ ಪುತ್ರ ತ್ವಂ ವಿಜಯೀ ಭವ ॥ ಎಂದು ಸೋಮನಾಥದೇವರ್ಬೆಸಸಿದಡೇಕಾನ್ತದ ರಾಮಯನಬ್ಬಲೂರು ಬ್ರಹ್ಮೇಶ್ವರ[೧] ಸ್ಥಾನುದಾಳುಂ[೧] ನಿಷ್ಠಿ(ಷ್ಟ)ಹವ್ರಿ(ವೃ)ತ್ತಿಯಿಂದಮಿರೆ । ಕ॥

೩೪. ಯು(ಉ)ಲಿದಡ್ಡಿಬಂದು ಜೈನರ್ಪಲರನ್ತಾ ಸಂಕಗೌಣ್ಡಸಹಿತಂ ಪಿರಿದುಂ ಚಲದಿಂ ಕೈವಾರಿಸಿದರ್ತ್ತೊಲಗದೆ ಜಿನ ದೈವನೆನ್ದು ಶಿವಸಂನಿಧಿಯೊಳು ॥ ವ ॥ ಅದಂ ಕೇಳ್ದೇಕಾನ್ತದ ರಾಮಯ್ಯಂ–

೩೫. ನತಿಕ್ರುದ್ಧ(ದ್ಧ)ನಾಗಿ ಶಿವಸಂನಿಧಿಯೊಳನ್ಯದೇವತಾಸ್ತವನಂ ಮಾಡಲಾಗದೆಂದಡ(ದ)ಂ ಮಾಣದೆ ನುಡಿ [ಯು*]ತ್ತಿರಲಿಂತೆಂದಂ ॥ ವ್ರಿ ॥ ಜಗಮಂ ಮಾಡುವನಾವನಾವನದನಾ–

೩೬. ಪತ್ಕಾ[ಲ]ದೊಳ್ ಕಾವನಿಂ ಮಿಗೆ ಕೋಪಂ ತನಗಾಗೆ ಸಂಹರಿಸಲಾವಂ ದಕ್ಷನಾ ಶಂಭು ಸರ್ವ್ವಗನಿರ್ದನ್ತೆ ಗತಪ್ರಭಾವವಿಭವಂ ಸಂಸಾರದೊಳು ಬಿದ್ದು ದಂದುಗದೊಳು ಬರ್ದ್ದು(ದ್ದು) ತಪಕ್ಕ(ಕೆ) ಸಾರ್ದ್ದು

೩೭. ಸುಖಮಂ ಪೊರ್ದ್ದಿರ್ಪ್ಪನುಂ ದೇವನೇ ॥ ಕ ॥ ಹರನನ್ತಿರೀವನೇ ನಿಂಮರುಹಂ ಮುಂಕೊಟ್ಟಿಟಾ[ವು]ದಾವುದು ಮುನ[ನ್ನಂ]ಹರನೊಳ್ಪಡದರನೇಕರ್ವ್ವರಮಂ ಬಾಣದಿನಿಶಾಳಭಕ್ತಗಣಂಗಳು ॥ಕ॥ ಎನೆ ಜೈ–

೩೮. ನರೆಂಗು ನೀಂ ಮುಂನಿನಹಿತರರ ಹೇಳಲೇಕೆ ನಿಂನಯ ಸಿ(ಶಿ)ರಮಂ ಜನಮಱಿಯಲರಿದು ಕೊಟ್ಟಾತನೊಳಿಂ ಪಡೆ ನೀನೆ ಭಕ್ತನಾತನೆ ದೇವಂ ॥ ಕ ॥ ಎನಲೇಕಾನ್ತದ ರಾಮಂ ಮನಸಿಜರಿಪುಗಿತ್ತು ತಲೆಯ

೩೮. ನಾಂ ಪಡೆದಡೆ ನೀವೆನಗೀವ ಪಣಮದೇನೆನೆ ಮುನಿದೆಂದರ್ಜ್ಜಿನನ ಕಿತ್ತು ಶಿವನಂ ನಿಲಿಪೆವು ॥ಕ॥ ಎನೆ ಕುಡುವುದೋಲೆಯಂ ನೀವೆನಗೆಂದಿತ್ತೋಲೆಗೊಂಡು ಶಿರಮಂ ತಾಂ ಭೋ[ಂ*] ಕೆನಲರಿದು ಕುಡುವ ಪದದೊ–

೪೦. ಳು ಶಿವನಂ ಸಾಂನಿಧ್ಯಮಾಡಿ ರಾಮಂ ನುಡಿಗುಂ ॥ ವ್ರಿ ॥ ಉಡುಗದೆ ಶಂಭು ನೀನೆ ಶರಣೆಂನದಡಂ ಮನಮನ್ಯಬಾ(ಭಾ)ವದೊಳೊಡರ್ದಮೀ ಕ್ರಿ(ಕೃ)ಪಾಣಮುಖದಿಂ ತಲೆ ಪೋಗದೆ ನಿಲ್ಕದಲ್ಲದಿ–

೪೧. ದ್ದಡೆ ಶಿವ ನಿಂನ ಮುಂನಡಿಗುರುಳುಗೆನುತಂ ಕಲಿ ರಾಮನಾರ್ದ್ದು ಕೆಯ್ಗಿಡದರಿದಿ[೨]ಕ್ಕಲುಂರಯಿಸಿದಂ[೨] ಶಿರಮಂ ಶಿವನಂಘ್ರಿಯುಗ್ಮದೊಳು ॥ ವ್ರಿ ॥ [೩]ಅರೆಗಯಿಗೊಂಡನೆ[೩] ಕಿತ್ತು ನೋಡಿದನೆ ಕೂರ್ಪ್ಪಂಗ–

೪೨. ಳುಕಿ [೪]ಮೆಯಿಗಯ್ದನೆ[೪] ಸೆರಗಂ ಪಾರ್ದ್ದನೆ ಬಾಳ್ಗೆ ಭಕ್ತರೆನುತಂ ಬಲ್ಲಾಳು ರಾಮಂ ಸ್ವಕಂಧರಮಂ ಚಕ್ಕನೆ ಹುಲ್ಲಕಟ್ಟನರಿವಂತಕ್ಲೇಶದಿಂದಾಗಳಂ–ತದೀಶಾಂಘ್ರಿಯೊಳಿ[ಕ್ಕಿಶಂಕರ]ಗಣ[ಕ್ಕಾ]ನ[ಂ*]ದ–

೧–೧. 'ಸ್ಥಾನದೊಳು' ಎಂದು ಓದಿರಿ, ೨–೨ 'ಇಕ್ಕಲಾಯಿಸಿದಂ' ಎಂದು ಓದಿರಿ, ೩–೩'ಅರೆಗಾಯ್ಗೊಂಡನೆ' ಎಂದು ಓದಿರಿ, ೪–೪ 'ಮೆಯ್ಗಾಯ್ದನೆ' ಎಂದು ಓದಿರಿ

೪೩. ವಂ ಮಾಡಿದಂ ॥ಕ॥ ಅರಿದ ತಲೆ ಏಳು ದೆವಸಂಬರೆಗಂ ಮೆಱದಿಂ ಬಳಿಕ್ಕವಿತ್ತಂ ಹರನಾದರದಿಂ ತಲೆ ಕಲೆಯಿಲ್ಲದೆ ತಿರವಾದುದು ಲೋಕವಟಿ (ಜೆ)ಯೆ ರಾಮ [ಂ*]ಪಡದಂ ॥ಕ॥ ಬೆಱ-

೪೪. ಗಾಗಿ ಜೈನರೆಲ್ಲಂ ಮಱುಗಿ ಜಿನಪ್ರಳೆ(ಳ)ಯವೆಂಬುದಂ ಮಾಡದಿರಿನೆಂದೆಱಗಿ ಕಾಲ್ವಿಡಿಯೆ ಮಾಣದೆ ಬಱಿಸಿಡಿಲಂತೆಱಗಿ ಜಿನನ ತಲೆಯಂ ಮುಱಿದಂ ॥ ವ್ರಿ ॥ ಬಡಿಗೊಂಡೊರ್ಬ್ಬನೆ ಸೊಕ್ಕಿ ಬಾಳೆ-

೪೫. ವನಮಂ ಕಾಡಾನೆ [೧]ಪೊಕ್ಕನ್ತಿರು ಕಡಗಲು[೧] ಕಾಪಿನ ವೀರರಂ ತುರುಗಮಂ ಸಾಮನ್ತರಂ ತೂಳ್ದು ಮಾಮಾರ್ಪ್ಪಡೆಗಳು ಜೈನರ ಮಾರಿ ಬಂದುದೆನುತುಂ ಬೆ[ಂ*]ಗೊಟ್ಟು ಪೋಗಲು ಜಿನಂ ಕೆಡವಂ[ಂ]ನಂಬ ಬಡಿದಲ್ಲಿ ಕೈಕೊ-

೪೬. ಳಿಸಿದಂ ಶ್ರೀವೀರಸೋಮೇಶನಂ ॥ವ್ರಿ॥ ಅದನೆಲ್ಲಂ ನೆಱೆಪೋಗಿ ಬಿಜ್ಜಣ-ಮಹೀಪಾಳಂಗೆ ಜೈನರ್ಕ್ಕಳುರ್ಕ್ಕವದಿಂ ಪೇಳ್ದು ವಿರೋಧವಾಗೆ ಪಿರಿದುಂ ದೂಱುತ್ತಿರಲು ಕೋಪ ದುರ್ಮ್ಮದನಾ ಬಿಜ್ಜಣಭೂಭುಜಂ ಮುನಿಸಿನಿಂ

೪೭. ರಾಮೈಯನಂ ಕಂಡು ನೀನಿದನನ್ಯಾಯಮನೇಕೆ ಮಾಡಿದೆಯೆನಲ್ಕೊಟೊ-[ಟ್ಟೋ]ಲೆಯಂ ತೋಱೆದಂ ॥ಕ॥ ಅವರಿತ್ತಯೋಲೆಯಿದೆ ನೀನವಧರಿ ಸುವುದಿಕ್ಕು ನಿಂನ ಭಂಡಾರದೊಳಿಂ-

೪೮. ನವರೊಡ್ಡವಿರಲಿಯಿನ್ನೊಡ್ಡುವುದಾರ್ಪ್ಪಡೆ ನಿಂನ ಮುನ್ದೆ ಜಿನರಂ ಫಲರಂ ॥ [ವ*] ॥ ಅನ್ತಪ್ಪಡೀ ತಲೆಯನರಿದವರ ಕೈಯೊಳೊ[ಡ್ಡು]ವೆನವರದಂ ಸುಟ್ಟಂ ಬಳಿಕವಾಂ ಪ[ಡು*]ವೆನೆನಗಾನೆಸೆಜ್ಜೆಯ ಬಸ-

೪೯. ದಿ[ಮು*]ಖ್ಯವಾಗಿ ಯಂನುಱುವ ಬಸದಿ ಜಿನರಂ ಪಲರನೊಡ್ಡುವುದೆನೆ ಬಿಜ್ಜಣರಾಯಂ ನಾಮೀ ಕೌತುಕಮಂ [೨]ನೋಡುವವೊಂದು[೨] ಬಸದಿಗಳ ಪಂಡಿತರುಮಂ ಜೈನವಂ ಕರದು ನೀಮಾ(ಮ)ಪ್ಪಡೆ

೫೦. ಬಸದಿಗಳಂ ಪಣಂಮಾಡಿ ಓಲೆಯಂ ಕುಡಿವೆನ್ದಡವರಾವೀ ಮುಂನೊಡದ ಬಸದಿಯಂ ದೂಱಲ್ ಬನ್ದೆವಲ್ಲದಿನೊಡ್ಡಿ ಜಿನಪ್ರಳೆ(ಳ)ಯಂ ಮಾಡಲು ಬಂದವರಲ್ಲೆ(ಲ್ಲ)ವೆನೆ ಬಿಜ್ಜಣರಾಯಂ ನಕ್ಕು ನೀವಿಂನುಸಿ-

೫೧. ರದೆ ಪೋಗಿ ಸುಖದಿನಿರಿವೆಂದವರಂ ಕಳಿಪಿ ರಾಮಯ್ಯ[ಂ*]ಗಳಿಗೆಲ್ಲರುವಱಿಯೆ ಜಯಪತ್ರಮಂ ಕೊಟ್ಟು(ಟ್ಟಂ) । (॥) ವ್ರಿ ॥ ಅರಿರಾಯಕ್ಷಿತಿಭ್ರಿ-(ಭೃ)ಂನಗಾರಿಯರಿರಾಯಾಂ ಭೋಧಿಕುಂಭೋದ್ಭ-

೫೨. ವಂ ಅರಿರಾಂಯೇಂಧನತೀಬ್ರ(ವ್ರ)ವಹ್ನಿ ಅರಿರಾಂಯಾನಂಗಭಾಳೇಕ್ಷಣಂ ಅರಿರಾಯೋಗ್ರಭುಜಂಗಭೂರಿಗರುಡಂ ಶ್ರೀಬಿಜ್ಜಣಂ ವೈರಿರಾಜ್ಯರಮಾಕ-ರ್ಷಣದೋಲೆ(ಲಿ)ತಾಸಿ ಸುಹ್ರಿ(ಹೃ)ದಂ ಕೀರ್ತ್ಯಂಗನಾವಲ್ಲಭಂ ॥

೧-೧. 'ಪೊಕ್ಕನ್ತಿರುಕ್ಕಡಗಲ್ ಎಂದು ಓದಿರಿ, ೨-೨ 'ನೋಡುವೆವೆಂದು' ಎಂದು ಓದಿರಿ.

೫೩. ಚೋಳನನಿಕ್ಕ ಲಾಳನನಧಕ್ಕರಿಸಿ ಸ್ಥಿತಿಹೀನಮಾಡಿ ನೇಪಾಳನನಂಧ್ರನಂ ತುಳಿದು ಗುರ್ಜ್ಜರನಂ ಸೆಱೆಯಿಟ್ಟು ಚೇದಿಭೂಪಾಳನ ಮೈಮೆಯಂ ಮುಱಿದು ವಂಗನ ಬೀಸಿ[ಸಿ] ಕಾದಿಕೊಂದು ಬಂ–

೫೪. ಗಾಳಕಳಿ[ಂ] ಗವಾಗಧಪಟಸ್ವರವಾಳವಭೂಮಿಪಾಳರಂ ಪಾಳಿಸಿದಂ ಧರಾವಳೆ(ಳ)ಯಮಂ ಕಲಿಬಿಜ್ಜಣರಾಯಭೂಭುಜಂ ॥ ಕ ॥ ಕೊಡದೊಳಗೆ ಪುಟ್ಟಿ ಕಡಲಂ ಕುಡಿದಂ ಘಟಯೋನಿ ಪುಟಿ[ಟ್ಟಿ] ಕಳಚುರ್ಯ್ಯ–

೫೫. ರೊಳೋಗಡಿಸದೆ ಚಳುಕ್ಯರನ್ವಯಗಡಲಂ ಕುಡಿದುರ್ಕ್ಕಿ ಸಜ್ಜನಂ ಬಿಜ್ಜಣನೊಳು ॥ ವ ॥ ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಮಣ್ಡಳೇಶ್ವರಂ ಕಾಳಾ(ಳ)ಂಜರಪುರವರಾಧೀಶ್ವರಂ[*]ಸುವರ್ನ್ನ(ರ್ಣ್ಣ)ವ್ರಿ(ವೃ)ಷ–

೫೬. ಭಧ್ವಜಂ । ಡಮರುಗತೂರ್ಯ್ಯನಿರ್ಗ್ಘೋಷಣಂ । ಕಳಚುರ್ಯ್ಯಕುಳಕ–[ಮಳ]ಮಾರ್ತ್ತ[ಣ*]ಣ್ಡಂ [।*]ಕದನಪ್ರಚಣ್ಡಂ । ಮೊನೆಮುಟ್ಟೆಗಣ್ಡಂ [।*] ಸುಭಟರಾದಿತ್ಯಂ । ಕಲಿಗಳಂಕುಸ(ಶ)ಂ ಗಜಸಾ–

೫೭. ಮನ್ತ ಶರಣಾಗತವಜ್ರಪಂಜರಂ[।*] ಪ್ರತಾಪಲಂಕೇಶ್ವರಂ [।*]ಪರ–ನಾರೀಸಹೋದರಂ [।*]ಸ (ಶ) ನಿವಾರಸಿದ್ಧಿ [।*]ಗಿರಿದುರ್ಗ್ಗಮಲ್ಲಂ [।*] ಚಲದ [ಂ*]ಕರಾಮ[ಂ।*] ನಿಸ್ಸ(ಶ್ಯ)ಂಕಮಲ್ಲನಿತ್ಯನಿಖಿಲನಾಮಾದಿಸ–

೫೮. ಮಸ್ತಪ್ರಶಸ್ತಿಸಹಿತ [ಂ*] ಶ್ರೀಮತು ಬಿಜ್ಜಣದೇವಂ ರಾಮಯ್ಯಂಗಳು ಮಾಡಿದ ಪರಮಸಾಹಸಕಂ ನಿರತಿಶಯವಪ್ಪ ಮಾಹೇಶ್ವರಭಕ್ತಿಗ [ಂ*] ಮೆಚ್ಚಿ ವೀರ–ಸೋಮನಾಥದೇವರ ದೇಗುಲ–

೫೯. ದ ಮಾಟಕೂಟಪ್ರಾಕಾರಖಣ್ಡಸ್ಫುಟಿತಜೀರ್ನ್ನೋದ್ಧಾರಕ್ಕ ದೇವರಂಗ–ಭೋಗನೈವೇದ್ಯಕ(ಕ್ಕಂ)ಂ ಬನವಸೆ [೧]ಎನಿಚ್ಚಾಸಿರದ[೧] ಕಂಪಣೆ(ಣಂ) ಸ[ತ್ತ]ಳಿಗೆಯೆಪ[ಪ್ಪ]ತ್ತಱಮ[ಂ*]ನೆಯ ಚ[ಟ್ಟ]ರಸನುಮಾಕ[ಂ]ಪಣದಗ್ರಾಯಿತ ಪ್ರ–

೬೦. ಭುಗೌಣ್ಡುಗಳಂ ಮುಂದಿಟ್ಟು ಶ್ರೀಮದು ಬಿಜ್ಜನದೇವ[ಂ*] ಸತ್ತಳಿಗೆಯೆಪ್ಪತ್ತ–ಱೊಳಗೆ ಮಳುಗುಂದದಿಂ ತೆಂಕಣ ಗೋವಾವೆಯೆಂಬ ಗ್ರಾಮಮಂ ಪ್ರಸಿದ್ಧಸೀಮಾಸಹಿತಂ ತ್ರಿಭೋಗಮುಮಂ

೬೧. ಶ್ರೀಮದೇಕಾನ್ತದ ರಾಮ್ಮೈ(ಮ)ಯ್ಯಂಗಳ ಕಾಲಂ ಕರ್ಚ್ಚಿ ಧಾರಾಪೂರ್ಬ್ಬ–(ರ್ವ್ವ)ಕಂ ಮಾಡಿಕೊಟ್ಟು [ಪ್ರ]ತಿಪಾಳಿಸಿದಂ ॥ಓಂ [॥*] ಶ್ರೀನುತಕೀರ್ತಿ–ವಿಕ್ರಮದೊಳೊಂದಿದ ಸೋಮಕುಲೈಕಭೂಷಣಂ ತಾನೆನಿಪೀ

೬೨. ಚಳುಕ್ಯನ್ರಿ(ನೃ)ಪರನ್ವಯದೊಳು ವಸುಧಾಧಿನಾಥರಾಖ್ಯಾನಪರಾಕ್ರಮರ್ಕಳಿಯೆ ಧಾತ್ರಿಪರಾಹ್ರಿ(ಹೃ)ತೆಯಾಗೆ ತೈಲಪಂ ತಾನೆ ಚಳುಕ್ಯಧಾತ್ರಿಕುಲಶೈಲನೆನಲು ಮುದದಿಂದೆ ತಾಳ್ದಿದಂ ॥

೧–೧.'ಪನ್ನಿರ್ಚ್ಛಾಸಿರದ' ಎಂದು ಓದಿರಿ

೬೩. ಅಂತಾ ತೈಲಪದೇವಂಗೆ ಸತ್ಯಾಶ್ರಯದೇವನೆಂಬ ಮಗಂ ಪುಟ್ಟಿದಂ ತತ್ತನಯಂ ವಿಕ್ರಮದೇವಂ ⁽ತತದನುಜಂ⁾ ದಶವರ್ಮ್ಮದೇವನಾತನ ಮಗಂ ಜಯಸಿಂಗರಾಯನಾತನ ಮಗನಾಹವ–

೬೪. ಮಲ್ಲನಾತನ ಮಗಂ ತ್ರಿಭುವನಮಲ್ಲಪೆರ್ಮಾಡಿರಾಯನಾತನ ಮಗಂಭೂಲೋಕಮ[ಲ್ಲ] ಸೋಮೇಶ್ವರದೇವನಾತನ ಮಗ ಪ್ರತಾಪಚಕ್ರವರ್ತಿ ಜಗದೇಕಮ[ಲ್ಲ]ನಾತನ ತಮಂ ತ್ರೈಲೋ–

೬೫. ಕ್ಯಮಲ್ಲನೂರ್ಮ್ಮಡಿತೈಲಪನಾತನ ಮಗಂ ತ್ರಿಭುವನಮಲ್ಲ ಸೋಮೇಶ್ವರ ದೇವನಾತನ ಪರಾಕ್ರಮ ಪ್ರಭಾವಮೆಂತೆಂದಡೆ ॥ ವೃ ॥ ಕೋಡುಳ್ಳುಗ್ರಮ–ದೇಭವೊಂದೆರಡೆನ[1] [ಲ್ಕೆ]ಂಪತ್ತು ವೊಡಾಗಿರಲ್ಕೋಡಿ[1]–

೬೬. ಟ್ಟಾನದೆ ತಳ್ತು ಕಾದಿ ಗೆಲ್ದಂ ಕೋಡಿಲ್ಲದೊಂದಾನೆಯಿಂ ನಾಡಂ ಬೀಡ–ನಿಭಂಗಳಂ ತುರಗಮಂ ಸೋಮೇಶ್ವರಂ ಬಿಲ್ಲಮಂ ನೋಡಲ್ಕಾ ಚಳ–ಚೂ(ಚು)ರ್ಯ್ಯವಂಶಮನದಂ ನಿರ್ಮೂಳವಂ ಮಾಡಿದಂ ॥ ವೃ ॥ ದ(ಧ)–

೬೭. ರೆ ನಿಸಾಪತ್ನವಾಗಲು ಸಿರಿ ನಿಜವಸ(ಶ)ದಿಂ ಸ[ಂ*]ದುದಾರಕ್ಕೆ ತಾನಾಗರವಾಗಲು ಕೀರ್ತ್ತಿ ದಿಕ್ಪಾಳಕನಿಕರಮುಖಾದೇಶವಾಗಲು ಜಯಾಸೌಂದರಿ ನಿಚ್ಚ[ಂ*]ತೋಳಬಾಳಂ ಸೆಜೆವಿಡಿದಿರೆ ಸಾಮ್ರಾಜ್ಯಮಂ ತಾಳ್ದಿದಂ ದು–

೬೮. ರ್ದ್ಧರಶೌರ್ಯ್ಯಂ ವೀರಸೋಮೇಶ್ವರನಹಿತವಧೂನೇತ್ರನೀರೇಜಸೋಮಂ ॥ ಅನ್ಯತಮಮೆನಿಪ ಕಳಚುರ್ಯ್ಯಾಂಧಂ ಮಸುಳಲ್ಕೆ ತಂನ ತೇಜದೆ ಧರೆಗನುಬನ್ಧಂ ತಂನೊಳೆ ಸಲೆ ಸಮ್ಮಂ–

೬೯. ಧಿಸೆ ಚಾಳ್[ಳು]ಕ್ಯರಾಯ ಸೋಮಂ ನೆಗಳ್ದಂ ॥ ವ ॥ ಅನ್ತಾ ತ್ರಿಭುವನಮಲ್ಲ ಸೋಮಶ್ವರದೇವಂ ಸಕಳಚಮೂನಾಥಶಿರೋಮಣಿಯುಂ ಚಾಳುಕ್ಯರಾಜ್ಯ–ಪ್ರತಿಷ್ಠಾಪಕನಪ್ಪಕು–

೭೦. ಮಾರ ಬಮ್ಮೆಯುಂನುಂ ತಾನು[ಂ*]ಸೆಲೆಯುಹ [ಳ್ಳಿ]ಯು ಕೊಪ್ಪದೊಳು ಸುಖಸಂಖ(ಕ)ಥಾವಿನೋದದಿನಿರ್ದ್ದೊಂದು ದೆವಸಂ ಧರ್ಮ್ಮಗೋಷ್ಟಿ–(ಷ್ಠಿ)ಯೊಳಿರ್ದು ಪುರಾತ ನೂತ[ನ*]ರಪ್ಪ ಶಿವಭಕ್ತರ ಗು–

೭೧. ಣಸ್ತವನಂ ಮಾಡುತ್ತಮಿರ್ದೇಕಾನ್ತದ ರಾಮಯ್ಯಂಗಳಬ(ಬ್ಬ)ಲೂರಲಿದ್ದಲ್ಲಿ ಜೈನರೆಲ್ಲಂ ನರದು ಬಂದು ಮಹಾವಿವಾದಮಂ ಮಾಡಿ ನೀ[ಂ*] ತಲೆಯನರಿದುಕೊಂಡು ಶಿವನ ಕೈಯೊಳ್ಪಡದೆಯಪ್ಪಡೆ ಜಿನ–

೭೨. ನನೊಡೆದು ಶಿವನಂ ಪ್ರತಿಷ್ಟೆ(ಷ್ಠೆ)ಮಾಡುವೆಂದೊಡ್ಡಮನೊಡ್ಡಿಯೋಲೆಯಂ [ಕೊ]ಟ್ಟಡವರು ಕೊಟ್ಟೋಲೆಯಂ ಕೊಂಡು ತಂನ ತಲೆಯನರಿದಕೊಂಡು ಶಿವಂಗೆ ಪೂಜೆಮಾಡಿ ಬಳಿಕಾ ತಲೆಯಂ ಏಳು–

೧–೧. 'ಲ್ಕೆಂಬತ್ತು ವೊಡ್ಡಾಗಿರಲ್ಕೋಡಿ' ಎಂದು ಓದಿರಿ

೭೩. ದೇವಸಕೆ ಮುನ್ನಿನನ್ತೆ ತಲೆಯಂ ಪೊ(?)ಲೆ(?) ವೀಟಿವನ್ತು ಪಡೆದು ಬಿಜ(ಜ್ಜ)ಣದೇವನ ಕೈಯ್ಯಲು ಜಯಪತ್ರಮಂ ಪೂಜೆಸಹಿತಂ ಕೊಣ್ಡುದುಮಂ ಜಿನನನೊಡೆದು ಬಸದಿಯನಳಿದು ಬಿಸು–

೭೪. ಟು ನೆಲನಂ ಖ[ಂ*]ಡಿಸಿ ವೀರಸೋಮನಾಥದೇವರಂ ಪ್ರ[ತಿ]ಷ್ಠೆ ಮಾಡಿ ಶಿವಾಗಮೋಕ್ತವಾಗೆ ಪರ್ಬ್ಬ(ರ್ವ್ವ)ತಪ್ರ[ಮಾ*]ಣದ ದೇಗುಲಮಂ ತ್ರಿಕೂಟ–ವಾಗೆ ಮಾಡಿಸಿದರೆಂಬುದಂ [ಕೇ]ಳ್ದು ತ್ರಿಭುವನಮಲ(ಲ್ಲ) ಸೋ–

೭೫. ಮೇಶ್ವರದೇವಂ ವಿಸ್ಮಯಂಬಿ(ಬ)ಟ್ಟು ನೋಡುವರ್ತ್ಥಿಯಿಂ ಬಿನ್ನವತ್ತಳೆಯಂ ಬರಯಿಸಿ ಬರಿಸಿಯವರನಿದಿರ್ಗೊ[ಳ*]ಣ್ಡು ತನ್ನಂ ಮನೆಗೊಡಗೊಣ್ಡು ಪೋಗಿ ಪಿರಿದುಂ ಸತ್ಕಾರದಿಂ ಪೂಜಿ–

೭೬. ಸಿ ಶ್ರೀಮದ್ ವೀರಸೋಮನಾಥ ^೧^ದೇದೇ^೧^ವರ ದೇಗುಲ ಮಾಟಕೂಟ–ಪ್ರಾಕಾರಖಂಡಸ್ಫುಟಿತಜೀರ್ನ್ನೋ[ಧ*]ೀದ್ಧಾರಕಂ ದೇವರ ಅಂಗಭೋಗರಂಗ–ಭೋಗನೈವೇದ್ಯಕ್ಕಂ ಚೈತ್ರ–

೭೭ ಪವಿತ್ರವಸಂತೋತ್ಸವಾದಿ ಪರ್ವ್ವ[ಛ*]ಗಳಿಗವನ್ನದಾನ ವಿದ್ಯಾದನಕ್ಕ[ಂ*] ಬನವಸೆ ಪನಿಚ್ಚಾಸಿರದ ಕ[ಂ*]ಪಣಂ ನಾಗರಖಂಡವೆಪ್ಪತ(ತ್ತ)ಜಕೋಳ–ಗಣಬ(ಬ್ಬ)ಲೂರನಾ ದೇವಗ್ಗ್ಗಾ ವೂರಾಗ–

೭೮. ಲು ಬೇಳ್ಕುವೆಂದು ಪರಮಭಕ್ತಿಯಿಂದಾ ಕ[ಂ*]ಪಣ[ದ]ಮನ್ನೆಯ ಮಲ್ಲಿ–ದೇವನಂ ಮು[ಂ*]ದಿಟ್ಟಾ ವೂರ ಮೇಲಾಳಿಕೆ ಮನ್ನೆ ಸುಂಕ ದಂಡದೋಷ ನಿಧ ನಿಕ್ಷೇಪಸಹಿತವಾಗಿ ಏಕಾನ್ತ–

೭೯. [ದ*] ರಾಮಯ್ಯ[ಂ*]ಗಳ ಕಾಲಂ ಕರ್ಚ್ಚಿ ಪೂರ್ವ್ವ ಪ್ರಸಿದ್ಧಸೀಮಾಸಹಿತಂ ತ್ರಿಭೋಗಸಹಿತಂ ಧಾರಾಪೂರ್ವಕಂ ಮಾಡಿ ಪಾರಮೇಶ್ವರದತ್ತಿಯಾಗೆ(ಗಿ) ತಾಂಬ್ರಶಾಸನಮಂ ಕೊಟಾ[ಟ್ಟಾ]ನೆಯನೇಟಿ(ಜೆ)ಸಿ ಮೆ–

೮೦. ಅಯಿಸಿ ಪರಮಭಕ್ತಿಯಿಂ ಪ್ರತಿಪಾಳಿಸಿದಂ [॥*] ಓಂ [॥*] ಶ್ರೀಕಂಠ–ಪದಾಂಬುಜಮನನಾಕುಳಚಿತ್ತದೊಳೆ ಪೂಜಿಪಂ ಶಿವಸಮಯ–ಪ್ರಾಕಾರನೆಳ(ನಿ)ಸಿ ಸಲೆ ನೆಗಳ್ದೇಕಾನ್ತದ ರಾಮನೀಶ–

೮೧. ಭಕ್ತಿಪ್ರೇಮಂ ॥ ಓಂ [॥*] ಶ್ರೀಯಂ ದೀರ್ಗ್ಘಾ[ಛ*]ಯುವಂ ಕೀರ್ತ್ತಿಯನನುದಿನವುಂ ಮಾಳ್ಕೆ ಗೀರ್ವಾಣವಿ(ವೃ)ಂದಜ್ಯಾಯಂಶ್ರೀವೀರಸೋಮಂ ವಿಧಿ(ಧೃ)ತಹಿಮಕರಂ ಕಾಮದೇವಂಗುದಾರಶ್ರೀಯುಕ್ತಂ–

೮೨. ಗದ್ರಿಜಾಸಸ್ಮಿತಸಿತತರಳಾಲೋಲವಿಸ್ತಾರಲೀಲಾನೇಯಾ(ತ್ರಾ)ಳೋಕೊದ್ದ(?) ತಶ್ರೀಲಲಿತರತಿಕಳಾಲಾಸ್ಯಶೈಲೂಷವೇಷಂ ॥ ಸ್ವಸ್ತಿ ಸಮಧಿಗತ ಪಂಚಮಹಾ–ಶಬ್ದ ಮಹಾಮಂ–

೧–೧ ಒಂದು 'ದೇ' ಹೆಚ್ಚಾಗಿದೆ.

೮೩. ಡಳೇಶ್ವರಂ ಬನವಾಸೀಪುರವರಾದೀ(ಧೀ)ಶ್ವರಂ ಜಯನ್ತೀಮಧುಕೇಶ್ವರ-
ದೇವಲಬ್ಧವರಪ್ರಸಾದಂ ವಿದ್ವಜ(ಜ್ಜ)ನಾಹ್ಲಾದಂ ಮಯೂರವರ್ಮ್ಮ[ೆ*] ಕುಲಭೂಷಣಂ
ಕಾದಂಬಕಣ್ಠೀರವಂ ಕದನಪ್ರಚಣ್ಡಂ ಸಾಹ-

೮೪. ಸೋತ್ತು[ಂ*]ಗಂ ಕಲಿಗಳಂಕುಸ(ಶ)ಂ ಸತ್ಯರಾಧೇಯಂ ಶರಣಾಗತವಜ್ರ-ಪಂಜರ[ಂ*]
ಯಾಚಕಕಾಮ[ಧೇ]ನುವಿತ್ಯಖಿಳನಾಮಾವಳಿಸಹಿತನಪ್ಪ ಶ್ರೀಮನ್ಮಹಾಮಣ್ಡಳೇಶ್ವರ[ಂ*]
ಕಾಮದೇವರಸ-

೮೫. ರ್ಪ್ಪಾನುಂಗಲ್ಯೆ(ಲ್ಲೈ) ನೂಱುವಂ ದುಷ್ಟನಿಗ್ರಹಶಿಷ್ಟಪ್ರತಿಪಾಳನದಿನಾಳುತ್ತಮಿರ್ದ್ದಬ್ಬಲೂರ
ವೀರಸೋಮನಾಥದೇವರಂ ಬಂದು ಕಣ್ದು ರಾಮಯ್ಯಂಗಳು ಶಿವಾಗವಾ(ಮ) ವಿಧಾ-

೮೬. ನದಿಂ ಮಾಡಿಸಿದ ಬರ್ಬ್ಬ(ರ್ವ್ವ) ತೋಪಮಾನಮಪ್ಪ ದೇಗುಲಮಂ ಕಣ್ಡವರು ಮಾಡಿದ
ಸಾಹಸಮಂ ಸವಿಸ್ತರ[ಂ*] ಕೇಳ್ದು ಮೆಚ್ಚಿ ಪರಮಪ್ರೀತಿಯಿಂದೊಡಗೊಂಡು ಪೋಗಿ

೮೭. ಪಾನುಂಗಲ್ಲನೆಲೆವೀಡಿಯೊಳ್ಪ್ರಧಾನರು[ಂ*] ತಾನುಂ ಮದುಕೆಯಮಂಡಳಿಂಕ-ಸಹಿತಂ
ಸುಖಸಂಕಥಾವಿನೋದದಿ[ಂ*] ಕುಳ್ಳಿರ್ದ್ದು ಪರಮಭಕ್ತಿಯಿಂ ವೀರಸೋಮನಾಥ-

೮೮. ದೇವರ್ಗ್ಗೆ ಪಾನು[ಂ*]ಗಲ್ಲೈನೂಱಱೊಳಗಣ ಕಂಪಣಂ ಹೊಸನಾಡೆಪ್ಪತ್ತಱೊಳಗೆ
ಮುಣ್ಡಗೋಡೆ ಸಮೀಪದ ಜೋಗೇಸರದಿಂ ಬಡಗಣ ಮಲ್ಲವಳ್ಳಿಯೆಂಬ ಗ್ರಾಮಮಂ
ಪ್ರಸಿದ್ಧಸೀ-

೮೯. ಮಾಸಹಿತವಾಗಿ ತ್ರಿಭೋಗಾಭ್ಯನ್ತರಂ ನಮಸ್ಯಂಮಾಡಿಯಾ ದೇವರ ದೇಗುಲದ
ಖಣ್ಡುಸ್ಫುಟಿತಜೀರ್ನ್ನೋದ್ಧಾರಕಂ ದೇವರಂಗಭೋಗರಂಗ-ಭೋಗನೈವೇದ್ಯ[ಕ್ಕಂ*]ಚೈತ್ರ-

೯೦. ಪವಿತ್ರವಸಂತೋತ್ಸವಾದಿ ಪರ್ಬ್ಬ(ರ್ವ್ವ)ಗಳ್ಗಮನ್ನದಾನಕ್ಕಂ ಯೆಂದು ರಾಮಯ್ಯಂಗಳ
ಕಾಲಂ ಕರ್ಚಿ ಧಾರಾಪೂರ್ವ್ವಕಂ ಮಾಡಿ ಪರಮಭಕ್ತಿಯಿಂ ಕೊಟ್ಟು ಧರ್ಮ್ಮಮಂ
ಪ್ರತಿಪಾಳಿಸಿದಂ । (॥) ಸ್ವಸ್ತ್ಯಸ್ತು ಓಂ ॥

೯೧. ಇಂತೀ ಧರ್ಮ್ಮಂಗಳಂ ಪ್ರತಿಪಾಳಿಯಿಸಿದವರು ಶ್ರೀವಾರಣಾಸಿ ಪ್ರಯಾಗೆ ಕುರುಕ್ಷೇತ್ರ
ಅರ್ಗ್ಘತೀರ್ತ್ಥ ಶ್ರೀಪರ್ವ್ವತಾದಿ ಪುಣ್ಯಕ್ಷೇತ್ರದಲ್ಲಿ ಸಾಯಿರ ಕವಿಲೆಗಳ ಕೋಡುಂ

೯೨. ಕೊಳಗುವಂ ಹೊನ್ನೊಳ್ಕಟ್ಟಿಸಿ ಚತುರ್ವ್ವೆ[ೇ*]ದಪಾರಗರಪ್ಪ ಬ್ರಾಹ್ಮಣರ್ಗೆ
ಸೂರ್ಯಗ್ರಹಣಸೋಮಗ್ರಹಣಬ್ಯ(ವ್ಯ)ತೀಪಾತಸ[ಂ*]ಕ್ರಮಣ[ಣಾ]ಪುಣ್ಯಕಾಲದೊಳ್ವಿಧಿಯುಕ್ತವಾಗೆ
ಕೊಟ್ಟ

೯೩. ಪ(ಫ)ಲವಂ ಪಡವರು ಈ ಧರ್ಮ್ಮವನಳಿದವರಾ ಗಂಗೆ ವಾರಣಾಸಿ ಕುರುಕ್ಷೇತ್ರ
ಪ್ರಯಾಗಾದಿ ಪುಣ್ಯಕ್ಷೇತ್ರಂಗಳೊಳಾ ಕವಿಲೆಗಳುವಂ ಬ್ರಾಹ್ಮಣರುವಂ ಕೊಂದ ಪಾಪಮಂ
ಪಡೆವರೀಯರ್ಥಸಂ-

೯೪. ದೇಹವಿಲ್ಲೆಂಬುದಂ ಮುನ್ನಂ ಮನುವಾಕ್ಯಂಗಳು(ಳ)ಂ ಪೇಳ್ದು[ಂ*] ॥ಶ್ಲೋಕ॥
ಬಹುಭಿರ್ವ್ವಸುಧಾ ಭುಕ್ತಾ ರಾಜಭಿಃ ಸಗರಾದಿಭಿಃ ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ
ತಸ್ಯ ತದಾ ಪ(ಫ)ಲಂ ॥ ಗಣ್ಯಂತೇ ಪಾಂವ(ಸ)ವೋ

೯೫. ಭೂಮೇರ್ಗಣ್ಯ[ಂ*]ತೇ ವ್ರಿ(ವೃ)ಷ್ಟಿಬಿಂದವಃ ನ ಗಣ್ಯತೇ ವಿಧಾತ್ರಾಪಿ ಧರ್ಮಸಂರಕ್ಷಣೇ ಫಲಂ ॥ಸ್ವದ[ತ್ತಾ*]ಂಪರದ[ತ್ತಾ*]ಂವಾಯೋ ಹರತೇ ವಸುಂಧರಾಂ । ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾ–

೯೬. ಯತೇ ಕ್ರಿಮಿಃ ॥ ಕರ್ಮಣಾ ಮನಸಾ ವಾಚಯ[ಃ*] ಸಮರ್ತ್ಥೋಪ್ಯುಪೇಕ್ಷತೇ । ಸಭ್ಯಾ(ಭ್ಯ)ಸ್ತಥೈವ ಚಾಂಡಾಲ[ಃ*]ಸರ್ವ್ವಧರ್ಮ್ಮಬಹಿಷ್ಕ್ರಿ–(ಷ್ಕೃ)ತಃ ॥ ಕುಲಾನಿ ತಾರಯೇತ್ಕರ್ತ್ತಾ ಸಪ್ತ ಚ ಸಪ್ತ ಚ । ಅಧೋವಪಾ–

೯೭. ತಯೇದ್ಧರ್ತಾ ಸಪ್ತ ಸಪ್ತ ಚ ಸಪ್ತ ಚ ॥ ಶ್ಲೋಕ ॥ ಅಪಿ ಗಂಗಾದಿತೀರ್ತ್ಥೇಷು ಹಂತುರ್ಗಾಮಥವಾ ದ್ವಿಜಂ ನಿಷ್ಕ್ರಿ(ಷ್ಕೃ)ತಿಸಾನ್ನ[ದೇ*]ವಸ್ವಬ್ರಹ್ಮಸ್ವ ಹರಣ(ಣೇ)ನಿ(ನೃ)ಣಾಂ ॥ ಸಾಮಾನ್ಯೋಯಂ ಧರ್ಮ್ಮಸೇತು–

೯೮. ನ್ರಿಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ ಸರ್ವ್ವಾನೇತಾನು ಭಾವಿತ(ನ)ಃ ಪಾರ್ತ್ಥಿವೇಂದಾ ಭೂಯೋ ಭೂಯೋ ಯಾಚತೇ ರಾಮಚಂದ್ರಃ ॥ ಸ್ವಸ್ತ್ಯಸ್ತು ಮಂಗಳಂ ಚ । ಶ್ರೀಶ್ಚ ॥ ಓಂ

೯೯. ಓಂ [॥*]ಹರನೊಳ್ತವಧಿಯಂ ತಾಂ ದರವುರವಿಲ್ಲೆನಿಸಿ ಪಡೆದು ದೇಗುಲವಂ ಪುರಹರನ ಕೈಳಾಸದಂತಿರೆ ವಿರಚಿಸಿದಂ ಶಂಭುಭಕ್ತಿಧಾಮಂ ರಾಮಂ ॥ ವ್ರಿ ॥ ದೇಗುಲಕೆಂದು ಭಕ್ತ–

೧೦೦. ಜನವಾದರನ್ದಿರಿರೆರ್ದ್ದ ಕೊಟ(ಟ್ಟ)ಡ(ದ)ಂ ಹಾಗವನಾದಡಂ ಕಳದುಕೊಳ್ಳದೆ ಬೇಡದೆ ನಾಡೆ ದ್ವೆ(ದೈ)ನ್ಯದಿಂ ಪೋಗಿ ನ್ರಿ(ನೃ)ಪಾಳರಂ ಶಿವನನುಗ್ರಹವಕ್ಷಯವಾಗೆ ಮಾಡಿದಂ ದೇಗುಲ[ವ]ಂಹರಾ[ದ್ರಿ]ಗೆ[ಣೆ]–

೧೦೧. ಯಾಗಿರೆ ರಾಮನಿದೇಂ ಕ್ರಿ(ಕೃ)ತಾರ್ತ್ಥನೋ ॥ಕ॥ ಕೇಶವರಾಜಚಮೂಪಂ ಶಾಸನವಂ ಪೇಳ್ದನಂತದಂ ತಿರ್ದ್ದಿ ನಿರಾಯಾಸನೆ ಬರದನೀಶನ ದಾಸಂ ಶಿವಚರಣಕಮಳಶರಣಂ ಸರಣಂ ॥ ಓಂ ॥ [॥*]

೧೦೨. ಸ್ವಸ್ತಿ ಶ್ರೀ ಮತ್ತು ಹರಧರಣಿಪ್ರಸೂತಮುಕ್ಕಂಣಕಾದಂಬ[ವಂಶ*]ರುಂ ಬನ[ವಾ][ಸೀ]ಪುರವರಾಧೀಶ್ವರರುಂ ಶ್ರೀಮದು(ಧು)ಕನಾಥದೇವರ–ದಿಬ್ಯ(ವ್ಯ)ಶ್ರೀಪಾದ–

೧೦೩. ಪದ್ಮಾರಧಕರು ॥ ಮಲಿ(ಲ್ಲಿ) ದೇವರಾಯರುಂ ॥ ನಾಗರಖ[ಂ*]ಡೆಯ .... ರಿಗೆ ನಾಡುಮಂ ....

೧೦೪. .... ಕೊಟ್ಟರು॥

೨೯
ಪಡೇಕನೂರ ಶಾಸನ
ಕ್ರಿಶ. ೧೨೫೭

೧. ಓಂ ಜಯ ಪರಮೇಸ್ವರ ಪರಮಾತ್ಮ ಈಶ್ವರ
೨. ನುರ್ವ್ವೀಪರ್ವ್ವಿ ಅಡಂಗಿಕೊಂಡಿರ್ಪ್ಪವೋರ್ಬ್ಬ–
೩. ೦ಣಿಗೆ ಆಗಿ ಯೋಗಿಗಳ ಮನದ ಕೊನೆ–
೪. ಯ ಜ್ಯೋತೀಸ್ವರನುಂ ವ್ರಿಶಭನ ರೂಪಾಗಿ ಯ–
೫. ಜಮಾನನುಂ ಆಚಾರ್ಯನುಂ ತಾನೆ ಆ–
೬. ಗಿ ಯೋಗಾದಿಸಂಪಂನ್ನಖಳೆಯಂಗಳೆ–
೭ ಲ್ಲವಂ ಸಂಪಾದಿಸಿ ಯೋಗರಮಣೀಯ ಕ್ಷೇತ್ರ–
೮. ಮನೆ[ಸ್ಥ*]ಳವಿಟ್ಟು ಸಲಾಖೆವಿಡಿದು ಅಭಿನವಶ್ರೀಶೈ–
೯. [ಳವ]ನೆ ಮಾಡಿ ಕಪಿಲಸಿದ್ಧಮಲ್ಲಿಕಾ–
೧೦. ರ್ಜ್ಜುನದೇವನೆ ನೆಲಸಿನಿಂದು ಪುಂಣ್ಯ ಪಾ–
೧೧. ಪಂಗಳಂ ಬರಂ ಪೇಳ್ದು ಬೆಸಂ ಪೇಳುತ್ತಿರಲು
೧೨. ಯೇಂ ಬೆಸಂ ದೇವಾ ಎನುತ್ತಿರಲು ಯೀ ಸ್ಥಾ–
೧೩. ನದಲು ಮಾನ್ಯವಾಗಿದ್ದ ವೂರುಗಳಂ ಭೂ–
೧೪. ಮಿಗಳಂ ಧನಂಗಳಂ ಈ ಲಿಂಗಕ್ಕೆ ಹಸ್ತೋ[ದ]–
೧೫. ಕವಂ ಮಾಡಿ ಕೊಟ್ಟುದಂ ಮನಂ ಪೇಸದೇ ಕ–
೧೬. ಳೆದುಕೊಂಡಹೆನೆಂಬಾತನ ಆತನ ಮಾ–
೧೭. ತಾ ಮಾತೆಯ ಪಿತ್ರುಗಳೆಲ್ಲಮಂ ಎಪ್ಪತ್ತೇಳು–
೧೮. ಕೋಟಿ ವರುಸಂಬರಂ ಪುಳುಗೊಂಡದ ನ–
೧೯. ರಕದೊಳಗಿಕ್ಕಿ ನೀನಾಹುತಿಗೊಳುತ್ತಿರುಗಂ–
೨೦. [ಡಾ] ಎಲೆ ಪಾಪ[ವೇ]ಯೀ ದೇವನ ಭೂಮಿ ಧನಕ್ಕಾ–
೨೧. [ನಂ]ಜುವೆನೆಂದು ಪಂದೆಯ ಪಾವಡದರ್ದ್ದಂತೆ
೨೨. ಮನಂ ಬೆದಱಿಪೊಡವಟ್ಟನಂ ಬೇಗ [ಸೀ]–
೨೩. [ಘ್ರಂ]ಕೊಂಡು ಬಾ ಕಂಡಾ । ಎಲೆ ಪುಂಣ್ಯ–

---

೨೮. SII. XI pp. 233-235

೨೪. [ವೇ]ಕವಿಳಾಸಕೆ ಯಿಂತೆರಡಜಿಬೆಂಗೆ
೨೫. [ಪು]ಣ್ಯಪಾಪಂಗಳು ಪಾರ್ದುಕೊಂಡೊಯ್ವು-
೨೬. ದು ತಪ್ಪದು ದಿಠದಿಠ [ಸ]ತ್ಯಂಗಂಡಿ-
೨೭. [ರೆ]ಎಂಬ ಆಜ್ಞಾವಚನ ನಿಯಾಮದಿಂ
೨೮. ರಚಿಸಿದ ಅನಾದಿಸಿದ್ಧನುಂ ಜಗ[ತ್ರ]-
೨೯. ಸಿದ್ಧನುಂ ಅ[ಣಿ]ಮಗರಿಮಲಘಿ-
೩೦. ಮಮಹಿಮಪ್ರಾಚ್ಯಕಾವ್ಯಈಶ[ತ್ವ]-
೩೧. [ವ]ಸಿತ್ವಮೆಂಬ ಅಷ್ಟಮಾದಿ[ಗುಣೈಸ್ವ]-
೩೨. [ರ್ಯ್ಯ]ಸಂಪಂನನುಂ ಬೇಳ್ವ ಭಕ್ತ[ಜನ]-
೩೩. ಮನೋನ್ನತಕಳಾಪ್ರಸಂನನುಂ...
೩೪. ಕರಣಂ ವಿಸುದ್ಧಹರಣಂ ವಹ್ನಿ[ರ್ವ್ವಿ]-
೩೫. ನಾ ಜ್ವಳನುಂ ನಾಡಿಭಾಳನುಂ ನಾದ[ಬಿಂ]-
೩೬. ದ್ದುಧನಿನಂ ದೇಹಸ್ಯ ಸಂಕ್ರಾಮ-
೩೭. [ಣಂ]ಆತ್ಮಜ್ಯೋತಿನಿದರ್ಷಣ ಸ್ವಚ್ಛಂ-
೩೮. [ದ]ಮ್ರಿತುಂಜಮೆಂಬ ದಸಪ್ರ-
೩೯. [ತ್ಯ]ಯಪ್ರಬುದ್ಧನುಂ ಸಿದ್ಧಕು[ಳ]ವಾರ್ಧಿವರ್ದ್ಧನ-
೪೦. [ಸುಧಾ]ಕರನುಂ ಲೋಕವೆಲ್ಲವಂ ಏ
೪೧. ಕಾಕಾರಮಂ ಮಾಳ್ಪೆನೆಂಬ ಶುದ್ಧ
೪೨. ಬಾಣಮಂ... ರಾಮ...
೪೩. [ಕು]ದ್ದಾಳನುಂ ಕ್ರೋಧವಿಧ್ವಂಸಕನು
೪೪. ಭವ[ಅ]ರಿಗಮೂಳನಾಲೋತ್ಪಾಟನ[ಮೋ]-
೪೫. ಹನಿರ್ಮ್ಮೂಳಭೇದನನುಂ ಕೆದರೊಡೆ...
೪೬. ರಣ...ನನುಂ ಮಾಬ್ಬರಿಯದೊಂ...
೪೭. ರ್ಯ್ಯನುಂ ನೆಲಸಿ ಸ್ವರ್ಗ್ಗಮರ್ತ್ಯಪಾತಾಳ...
೪೮. ಲೋಕ್ಯಮಂ ಪಾವನಮಾಡಿ...
೪೯. ಪರಮಾರಾಧ್ಯನುಂ ವೇದವೇದಾನ್ತಭೇ [ಷಜ್ಯ]-
೫೦. ಂಸ್ಥೆಯಸಮತಾಗುಣಮಂ ಸಾಂಖ್ಯ[ತ]...
೫೧. ಥಮಂ ಬೌದ್ಧಸುಧಾತ್ಮತೆಯಂ[ಜೈ]...
೫೨. ನಜಿತಾಪಂ ಧರ್ಮ್ಮವುಮಂ ಚಾರ್ವ್ವಾ...

೫೩. ದ್ರಿಷ್ಟೋಪನ್ಯಾಸಮಮಂ ಮೀಮಾಂಶಕವಿ[ಚಾ]–
೫೪. ರಚಾತುರ್ಯ್ಯಮಮಂ ಪುದುಂಗೊಳ್ಸಿ...
೫೫. ರೂಪಮುಮಂ ನಿಯಾಮಿಸಿ ಐಕ್ಯ...
೫೬. [ವು]ಮಂ ತಂನ ಸುತರ್ಗ್ಗೆ ಪೆಸರಿಟ್ಟ ಲೊಕೈಕನಾ–
೫೭. ಥನೆನಿಪ ಸಿದ್ಧೇಂದ್ರ ಚಕ್ರವರ್ತ್ತಿ ಶ್ರೀರಾ–
೫೮. ಮನಾಥದೇವವಿರಚಿತಕ್ಷೆತ್ರಪ್ರತಿಪಾಳಕ ॥
೫೯. ಸ್ವಸ್ತಿ ಸಮಧಿಗತಪಂಚಮಹಾಶಬ್ದಾಳಂ–
೬೦. ಕ್ರಿತ ಶ್ರೀಮದ್ವಿಜಯಕಟಕನಿವಾಸ
೬೧. ದ್ವಾರಾವತೀಪುರವರಾಧೀಸ್ವರ ವಿಷ್ಣುವಂ–
೬೨. ಶೋದ್ಭವ ಯಾದವಕುಳಕಮಳಕ
೬೩. ಳಿಕಾವಿಕಾಸಭಾಸ್ಕರ ಮಾಳವೀಮಲ್ಲ ಅರಿ–
೬೪. ರಾಯವುರಸೆಲ್ಲ ಗೂರ್ಜ್ಜರವಾರಣಾಂಕುಸ ತೆಲುಂಗರಾ–
೬೫. ಯಸಿರಃಕಮಳನಾಳಮೂಳೋತ್ಪಾಟನ ಪುನರಪಿಸ್ಥಾ–
೬೬. ಪನಾಚಾರ್ಯ್ಯ ಹಂಮೀರರಾಯನಿರ್ಮ್ಮೂಳಭೇದ–
೬೭. ನಂ ಭೂದುರ್ಗ್ಗಗಿರಿದುರ್ಗ್ಗ ಜಲದುರ್ಗ್ಗ ವನದುರ್ಗ್ಗ ಪ್ರಮು–
೬೮. ಖ್ಯನಾನಾದುರ್ಗ್ಗವಿದ್ರಾವಣ ಸುವರ್ಣ್ನಕೀರ್ತ್ತಿ––
೬೯. ಗು(ಗ)ರುಡಧ್ವಜ ಶ್ರೀಮತು ಪ್ರೌಢಪ್ರತಾಪ ಚಕ್ರ–
೭೦. ವರ್ತ್ತಿ ಶ್ರೀಕಂಧ್ನರದೇವವಿಜಯಾರಾಜ್ಯೋದಯೇ ಶ್ರೀ–
೭೧. ಮತು ಸಕವರ್ಷ ೧೧೭೮ನೆಯ ನಳಸಂವತ್ಸರ–
೭೨. ರದ ಶ್ರಾವಣ ಶುದ್ಧ ಬ್ರಹಸ್ಪತಿವಾರ ಪ–
೭೩. ವಿತ್ರಾರೋಪಣಮಹೋತ್ಸವಮಂ ಕಂಡು[ಮ]ತಿ[ಗೊಂ]–
೭೪. ಡು ಭಕ್ತಿಯಿಂ[ದ] ಸ್ವಸ್ತಿ ಸಮಸ್ತಪ್ರಶಸ್ತಿ[ಸ]–
೭೫. ಹಿತಂ ಶ್ರೀಮತು [ಯಾ] ದವನಾರಾಯಣ
೭೬. ಪ್ರಉಢಪ್ರತಾಪಚಕ್ರವರ್ತ್ತಿ ಕಂನ್ನಹರದೇವ–
೭೭. ವಿಜಯರಾಜ್ಯದ ೧೧ನೆಯ ನಳಸಂವ[ತ್ಸರ]
೭೮. ಫಾಲ್ಗುಣ ಬಹುಳ ೧೫ ಸನಿವಾರದಂದು
೭೯. ಶ್ರೀಮತು ಬಸುರಿಕೋಡ ಮಹಾಪ್ರಭು ಸ[ರ]–
೮೦. ಣಾಗತವಜ್ರಪಂಜರ ಪ್ರಣೂತ ರಕ್ಷಾಮ–
೮೧. ಣಿ ಕನ್ನಂಡನಾಲ್ಕುಸಾಸಿರ ದೇಸಿಯ[ದಂಡ]–

೮೨.   ನಾಯಕ ತಂನ್ನಧಿಕಾರದ [ಹಾಗಿ]ಲು[ಹ]-
೮೩.   [ನ್ನೆರ]ಡಜಿೊಳಗಣ ಪಡಿಯಕನೂರ[ನೂಲ]-
೮೪.   ರಸರು ಸೊಂನಲಿಗೆಯಪುರದ ಶ್ರೀ ರಾ-
೮೫.   ಮನಾಥದೇವರಿಗೆ ಸರ್ವ್ವನಮಸ್ಯದಿಂ ಧ[ಧಾ]ರಾ[ಪೂ]-
೮೬.   [ರ್ವ್ವ]ಕವಾಗಿ ಬಿಟ್ಟ ದತ್ತಿ ॥ ಮಂಗಳ ಮಹಾಶ್ರೀ[॥*]

೩೦
ಅರ್ಜುನವಾಡ ಶಾಸನ
ಕ್ರಿ.ಶ. ೧೨೬೦

೧.   ನಮಸ್ತುಂಗ ಸಿ(ಶಿ)ರುಶ್ಚುಂಬಿ ಚಂದ್ರಚಾಮರಚಾರ-
೨.   ವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಶಯ ಶಂ-
೩.   ಭವೇ॥ ಶ್ರೀಯಂ ಶ್ರೀಕಲ್ಲಿನಾಥಂ ಕಡು-
೪.   ಗೆ ಭವಹರಂ ಭಕ್ತಬ್ರಿಂದಕೆ(ಕ್ಕೇ) ಗೌರೀಜಾಯಾಕಾಯ-
೫.   ನುಷಂಗಾಕಳಿತಲಳಿತತಾಪ್ರೋಲ್ಲಸದ್ವಾಮಭಾಗಂ ಸ್ವೀಯಸ್ವಾ-
೬   ಯತ್ತಶಕ್ತಿತ್ರಯಮಯಮಹಿಮಂ ದೇವದಾಯಾದಮಾ-
೭   ಯಾಪಾಯಾಭಿಪ್ರಾಯಲೀಲಂ ಪ್ರಣತಜನದುರಂತಾಘಸಂಘಟ್ಟಶೀಲಂ ॥
೮.   ಮತ್ತಂ ತಥವಾಡಿ ಮಧ್ಯಗ್ರಾಮ ಬಾಗವಾಡೀಪುರವರಾಧೀಸ್ವರಂ ಮಾದಿ-ರಾಜನ ತನೂ-
೯.   ಜಂ ಬಸವರಾಜನ ಮಹಿಮೆಯೆಂತೆಂದಡೆ ॥ ಮಂಗಳಕೀರ್ತ್ತಿ ಪುರಾತನ ಜಂಗಮಲಿಂ-
೧೦.   ಗೈಕಭಕ್ತಿನಿರ್ಭರಲೀಲಾಸಂಗಂ ಸಂಗನಬಸವಂ ಸಂಗತಿಯಂ ಮಾಳ್ಕೆ ಭಕ್ತಿಯೊಳು(ಳ)-
೧೧.   ಗನವರತಂ ॥ ಯಾದವಭೂಮಿಪಾಳರಿಳಿಯಂ ಚತುರದ್ಧಿ(ಬ್ಧಿ) ಪರೀ-
೧೨.   ತೆಯಂ ನಿಸರ್ಗ್ಗೋದಯರಾಳ್ವರನ್ತವರೊಳಸ್ವಚಮೂಚಯವಾರ್ಧಿಸಿಂಹಣ-
೧೩.   ಕ್ಷಾದಯಿತಂ ತದಗ್ನತನಯಪ್ರಭವಂ ನ್ರಿಪ ಕಂನರಂ ಸಮಸ್ತೋದಧಿ-
೧೪.   ವೇಳಯಿಂ ಪೊಜಿಗೆ ಬೆಳ್ಗೊಡೆಯೊಳ್ನೆಳಲಂ ನಿಮಿರ್ಚ್ಚಿದಂ ॥ ಸಲೆ ಭೂದೇವ-
೧೫.   ರ್ಕ್ಕಳ್ಗಿತ್ತಲಸದೆ ಗೋಭೂಮಿಹೇಮವಸ್ತ್ರಾದಿಗಳಂ ಮಲೆವರಸುಗಳೊ-
೧೬.   ಳ್ಗೊಂಬಂ ಬಲವಂತಂ ಕಂನರಂ ಪ್ರತಾಪಸಹಾಯಂ ॥ ಸ್ವಸ್ತಿ ಸಮಸ್ತ-
೧೭.   ಭುವನಾಶ್ರಯ ಶ್ರೀಪ್ರಿಥ್ವೀವಲ್ಲಭ ಮಹಾರಾಜಾಧಿರಾಜಪರಮೇ-

---

೨೯. ಮೂಲ ಶಾಸನದಿಂದ

೧೮. ಶ್ವರ ಪರಮಭಟ್ಟಾರಕ ದ್ವಾರಾವತೀಪುರವರಾಧೀಶ್ವರ ಯಾ–
೧೯. ದವಕುಳಕಮಳಕಳಿಕಾವಿಕಾಸಭಾಸ್ಕರಯರಿರಾಯ–
೨೦. ಜಗಜ್ಝಂಪ ಮಾಳವರಾಯಮದನತ್ರಿನೇತ್ರ ಗೂರ್ಜ್ಜರರಾಯಭಯಂಕರ
೨೧. ತೆಲುಂಗರಾಯಸ್ಥಾಪನಾಚಾರ್ಯ ಇತ್ಯಾದಿ ನಾಮಾವಳೀಸಮಾಳಂಕ್ರಿತ
೨೨. ಶ್ರೀಮತ್ಪ್ರೌಢಪ್ರತಾಪಚಕ್ರವರ್ತ್ತಿ ಶ್ರೀಕಂನರದೇವಂ ದೇವಗಿ–
೨೩. ರಿಯ ನೆಲವೀಡಿನೊಳು ಸುಖಸಂಕಥಾವಿನೋದದಿನನವರತಂ ರಾ–
೨೪. ಜ್ಯಂಗೆಯ್ಯುತ್ತುಮಿರೆ[॥*]ತತ್ಪಾದಪದ್ಮೋಪಜೀವಿ ॥ ಚಿಕ್ಕನ ಚಿಕ್ಕಮಗಂ ವಿಭವಕ್ಕೆ
೨೫. ಕುಬೇರಂಗೆ ಸೆಣಸುವಂ ರಾಯರುಮಂ ಮಿಕ್ಕ, ಬೀಚುಗಿಯೌ–
೨೬. ದಾರ್ಯಕ್ಕಾರಿಂ ಪಿರಿಯನಾತನಂಣಂ ಮಲ್ಲಂ ॥ ಆತನ ತನೂಭವಂ ॥
೨೭. ಚಾವುಂಡಂ ಪಾರ್ವ್ವತಿವಲ್ಲಭಚರಣಸರೋಜದ್ವಯಾಮೋದಭ್ರಿಂಗಂ ಚಾವುಂ–
೨೮. ಡಂ ತ್ಯಾಗಭೋಗಾನುಭವಭವಸುಖಶ್ರೀವಧೂನ್ರಿತ್ಯರಂಗಂ ಚಾವುಂಡ ಸಾಮ–
೨೯. ಭೇದಪ್ರಭ್ರುತಿಸಕಳಮಂತ್ರ(ತ್ರಾ)ಂಗವಿದ್ಯಾಸಮುದ್ರಂ ಚಾವುಂಡಂ ವೀರವೈರಿಪ್ರ–
೩೦. ಕರಸಮರಸಂಘಟ(ಟ್ಟ)ಕಾಳಾಗ್ನಿರುದ್ರಂ ॥ ಯೆನೆ ನೆಗಳ್ದಾ ಚಾವುಂಡನ ಮನದನ್ನಂ
೩೧. ನಾಗರಾಜನಕ್ಷಿ(ಖಿ)ಳನಿಯೋಗ(ಜ್ಞ)ನೆನಿಪ್ಪ ದಿವಾಕರದೇವನ ಪುತ್ರಂ ವಾಣ–ಸಾನ್ವ–
೩೨. ಯಾಂಬರ ಮಿತ್ರಂ ॥ ತ್ಯಾಗಗುಣಕ್ಕೆ ತಾಯ್ವನೆ ಸಮಸ್ತನ್ರಿಪಾಳನಿಯೋಗವ–
೩೩. ರ್ತ್ತನಾಶ್ರೀಗೆ ನಿವಾಸಮಿಷ್ಟರ ವಿಶಿಷ್ಟರ ತೋಷಣಪೋಷಣಂಗಳೊಳ್ಪಾಗ–
೩೪. ರಮೆಂದು ಬಂಣ್ಣಿಸುವುದೀ ಧರೆ ಪಂಡಿತಪಾರಿಜಾತನಂ ನಾಗನನಾ ಜನಾರ್ದ್ದನನ ಭ–
೩೫. ಕ್ತಿಭರಪ್ರಭವಾನುರಾಗನಂ ॥ ಸಂಗನಬಸವನ ಅಗ್ರ[ಜ ಲಿ]ಂಗೈಕಂ
೩೬. ದೇವರಾಜ ಮುನಿಪನ ತೆನೆಯಂ ಜಂಗಮಪುರುಸಂ [ಕಾವ]ರ–
೩೭. ಸಂಗಂ ಪ್ರಿಯಸುತನೆನಿಪ್ಪ ಕಲಿದೇವರಸಂ ॥ ಕಲಿದೇವಮುನಿ–
೩೮. ಪನಾತ್ಮಜ ಸಲೆ ಮೂಜಗದೊಳಗೆ ಮೆಱೆವ ಮಾನವದೇವಂ ಗೆಲಿದಂ ಅಸ(ಶ)ನ–
೩೯. ಬೆಸನವಂ ಛಲರಧಿಕಂ ಹಾಲಬಸವಿದೇವಮುನೀಸಂ ॥ ಸ್ವಸ್ತಿ ಸಮಸ್ತ–
೪೦. ಭುವನಾಸ್ರೆಯಂ ಮಹಾಮಾಹೇಶ್ವರಂ ಕವಿಳಾಸಪುರವ–
೪೧. ರಾಧೀಸ್ವರರುಂ ಸುವಂರ್ಣ್ನವ್ರಿಸಭಧ್ವಜಂ ತೇಸಠ್ಠಿಪುರಾಥ(ತ)ಪಾದಾರ್ಚ್ಚಕ–
೪೨. ರುಂ ಮಹಾಲಿಂಗಜಂಗಮಪ್ರಸು(ಸಾ)ದನಿಯತರುಂ ಸಮ–
೪೩. ಯಭಕ್ತಿಸಂಪಂನ್ನ ಶ್ರೀಬಸವರಾಜನಂನ್ವಯರುಮಪ್ಪ ತಪಚಕ್ರ–
೪೪. ವರ್ತ್ತಿ ವೀರಬ್ರತಿ ಹಾಲಬಸವಿದೇವಂಗೆ ಆ ಮಹಾಪ್ರಧಾನಂಜಿ–
೪೫. ಟ್ಟರಾಜ್ಯ ಪ್ರತಿಷ್ಠಾಚಾರ್ಯನುಮಪ್ಪ ನಾಗರಸರು ಸಕವರುಷಂ ಸಾಸಿರ–
೪೬. ದ ನೂಱಯೆಂಭತ್ತಯೆರಡನೆಯ ಸಿಧ್ಧಾರ್ಥ್ತಿ(ರ್ಥಿ) ಸಂವಛರದ ಚೈ–

೪೭. ತ್ರ ಬಹಳ ಅಮಾಸೆ ಸೋಮವಾರ ಸೂರ್ಯಗ್ರಹಣದಲ್ಲಿ ಹುಲಿಗೆ-
೪೮. ಱೆಯ ಸೋಮನಾಥದೇವರ ಸಂನಿಧಿಯಲ್ಲಿ ಆ ಚೌಡಿಸೆಟ್ಟಿಯರು
೪೯. ರ್ತಿರ್ತ್ಥವಿಶೇಷಮಂ ಬೆಸಗೊಳಲು ನೂಲೆನಾಡೊಳ[ಗಿ]ನ]ಮನಿತನದಿ] ಕವಿಳಲಸ ತೀ[ರ್ತ್ಥಂ]
೫೦. ನಾಲ್ಕು ಯುಗದ ಪುರಾಣೋಕ್ತದಿಂ ಬಂದ ಕ್ಷೇತ್ರವದೆಂತೆಂದಡೆ, ಕ್ರಿತ[ಯು]
೫೧. ಗದಲ್ಲಿ ಕವಿಳಾಸಮುನಿ ಕವಿಳಾಸನಾಥ, ತ್ರತೆಯಲಿ ಅಂಕರಾಜಮುನಿ ಅಂಕ-
೫೨. ನಾಥ, ದ್ವಾಪರದಲ್ಲಿ ಮಹಾರಾಜಮುನಿ ಮಹಲಿಂಗದೇವ, ಕಲಿಯುಗದಲ್ಲಿ
೫೩. ಕಲಿರಾಜಮುನಿ ಕಲಿದೇವನಾಮ ಇ(ಈ) ಮುನಿಗಳು ಮುಕ್ಷ(ಖ್ಯ)ಸಮಸ್ತ-ಗಣೇಸ್ವ-
೫೪. ರರು ಆರಾಧಿಸಿ ಸಾಲೋಕ್ಯಸಾರೂಪ್ಯ ಸಾಮೀಪ್ಯ ಸಾಯುಜ್ಜ(ಜ್ಯ)ಮಂ ಪಡೆ-
೫೫. ದರು, ಆ ದೇವಱಗೆ ಅಂಕನಾಥವೆಸರಿಂ ಅಂಕವಲ ತಳವಿರ್ತ್ತಿ ಕೊ-
೫೬. ತ್ತಸಿ ಕುಱುವನಿಗೆ. ಇ(ಈ) ಹಳ್ಳಿ ಮಾಂಧಾತ ಚಕ್ರವರ್ತ್ತಿ ಬಿಟ್ಟಧರ್ಮ್ಮ, ಆ
೫೭. ತೀರ್ತ್ಥ(ರ್ಥ)ಕ್ಕದು ಸಾಸನಸ್ಥವೆಂಬುದಂ ಚವುಡಿಸೆಟ್ಟಿಯರು ಕೇಳಿ(ಳ್)ದು ನಾಗ-
೫೮. ರಸರೂ ತಾವು ಏಕಸ್ಥರಾಗಿ ಕವಿಳಾಸಪುರದೊಳಗೆ ಸ್ವಯಂಭು ಮ-
೫೯. ಲ್ಲಿಕಾಜ್ಜುನ ಸಂಗಮೇಸ್ವರ ನಾಗೇಸ್ವರ ಯೀ ಮೂಱು ಲಿಂಗಕಂ ಅಂಗ-
೬೦. ಭೋಗ ರಂಗಭೋಗ ಜೀರ್ಣ್ನೋದ್ಧಾರಕ್ಕಂ ಪಾರಣೆಯ ಜಂಗಮಾ-
೬೧. ರಾಧನೆಗಂ ಕೊತ್ತಸಿ ಕುಱುವನಿಗೆ ತಳವಿತ್ತಿ[ರ್] ಅಂಕವಲ ಕೂಂಡಿ
೬೨. ನಾಡೊಳು ಸಲುವಂತೆ ಹೆಜ್ಜುಗಿಯ ಹಬ್ಬವೊ[ಂ]ಭತ್ತು [ದಾನ]ಸುಂಕ
೬೩. ನೂಱಿತಿ(ತ್ತಿ)ನ ಪರಿಹಾರ ಯಿಂತಿನಿತುಮಂ ಸರ್ವ್ವಬಾಧಿ(ಧೆ)
೬೪. ಸರ್ವ್ವನಮಸ್ಯವಂ ಮಾಡಿ ಚವುಡಿಸೆಟ್ಟಿಯರು ನಾಗರಸರು
೬೫. ಯತಿರಾಯ ಹಾಲಬಸವಿದೇವಂಗೆ ಪೂರ್ವ್ವದತ್ತವೆಂದು
೬೬. ಧಾರಾಪೂರ್ವ್ವಕ್ಕಂ ಮಾಡಿ ಕೊಟ್ಟರು [॥*]ಆ ಚವುಡಿಸೆಟ್ಟಿಯರ ನಿ-
೬೭. ಯಾಮದಿಂ ನಾಗರಸರು ಪುರದಿಂ ಪಡುವಲು ತೊಱೆಯ ಕೂ-
೬೮. ಡಿದ ಹಳ್ಳ ನೀರುವರಿಏ ಮೇರೆಯಾಗಿ ಮೇಗೆ ಕಲುಕಂಟಿಗಗೆಱೆ
೬೯. ಬಸವಗೋಡಿ, ಬಡಗಲು ಮೊಸರುಗತ್ತಿ[ಎ]ರಾರವಿಡಿದು, ಮೂಡಲು
೭೦. ಜಂಬೆಗಲ್ಲ ಕುಣಿ ಕುಚ್ಚಗೊಡಿಯಿಂ ಬಂದ ಹಳ್ಳನೀರುವರಿಏ, ತೆಂಕ-
೭೧. ಲು ತೊಱೆಯ ಕೂಡಲು ಯೀ ಚತುಸೀಮಾಭ್ಯಂತರ ಕವಿಳಾಸಪು-
೭೨. ರಅ(ದ)ಲ್ಲಿ ಸುಂಕ ಸಾದ ತಳಸಾರಿಗೆ ಬಟೆಯಬಾಧೆ ಗ್ರಾಮಬ್ರಯ ನಿ-
೭೩. ಧಿನಿಕ್ಷೇಪ ಅಂಕಟಂಕ ಆಣೆಗೋಸನೆ ಮುದ್ರೆ ನಾಗೇಸ್ವರಕೆ ಮಲ್ಲೇಸ್ವರ-
೭೪. ಕೆ ಕುಱುವನಿಗೆ, ಸಂಗಮೇಸ್ವರಕೆ ಪಾರಣೆಯ ಜಂಗಮಾರಾಧ-
೭೫. ನೆಗೆ ಕೊತ್ತಸಿಗೆ ಇ(ಈ) ಧರ್ಮ್ಮಕೆ ಇದು ವಿವರವೆಂದು ನಾಗಸರಸು ಕೊಟ್ಟ

೭೬. ಸಾಸನ ನಾಲ್ಕುಂ ಪಟ್ಟಣಂಗಳು ನೂಲೆನಾಡೊಳಗೆ ಸಂತೆಗಳ
೭೭. ಆಯಾದಯ ಇಪಂತು ಕೋಣನ ಮೆಯಿದೆಱ ಸುಂಕ ಹದಿನೆಂ-
೭೮. ಟ್ಟು ಸಮೆಯವು ಅಱುವತಮೂವರು ಬಣಜುಭಕುತಿ ಭೇದವಿ-
೭೯. ಲ್ಲ ಕವಿಳಾಸಪುರವೇ ಸಾಸನದ ಮನೆ ಬಸವರಾಜನೇ ಸಾಸನಿಗನೆಂ-
೮೦. ದು ವುಭಯನಾನಾದೇಸಿ ಮುಂಮುರಿದಂಡಂಗಳು ಕೊಟ್ಟ[ಸಾ]ಸನ[॥*]

೩೧
ಶ್ರವಣಬೆಳುಗೊಳ ಶಾಸನ
ಕ್ರಿ.ಶ. ೧೩೬೮

೧. ಸ್ವಸ್ತಿ ಸಮಸ್ತಪ್ರಶಸ್ತಿಸಹಿತಂ ॥ ಪಾಷಂಡಸಾಗರ ಮಹಾಬಡ-
೨. ವಾಮುಖಾಗ್ನಿ ಶ್ರೀರಂಗರಾಜಚರಣಾಂಬುಜಮೂಲದಾಸ ಶ್ರೀವಿಷ್ಣು--
೩. ಲೋಕಮಣಿಮಂಟಪಮಾರ್ಗ್ಗದಾಯೀ ರಾಮಾನುಜೋ ವಿಜಯತೇ ಯತಿ-
೪. ರಾಜರಾಜ ॥ ಶಕವರ್ಷ ೧೨೯೦ನೆಯ ಕೀಲಕಸಂವತ್ಸರದ ಭಾದ್ರಪ-
೫. ದ ಶು೧೦ ಬೃ ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಅರಿರಾಯವಿಭಾಡ ಭಾ-
೬. ಷೆಗೆ ತಪ್ಪುವ ರಾಯರಗಂಡ ಶ್ರೀ ವೀರಬುಕ್ಕರಾಯನು ಪ್ರಿಥ್ವೀರಾ-
೭. ಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ ಸಂವಾಜವಾದಲ್ಲಿ ಆ-
೮. ನೆಯಗೊಂದಿ ಹೊಸಪಟ್ಟಣ ಪೆನುಗುಂಡೆ ಕಲ್ಲೆಹದಪಟ್ಟಣವೊಳಗಾದ ಸ-
೯. ಮಸ್ತನಾಡಭವ್ಯಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅಂನ್ಯಾಯ-
೧೦. ಂಗಳನೂ ಬಿಂನಹಂ ಮಾಡಲಾಗಿ ಕೋವಿಲ್ ತಿರುಮಲೆ ಪೆರುಮಾಳ್ ಕೋವಿಲ್‌ತಿರುನಾ-
೧೧. ರಾಯಣಪುರಮುಖ್ಯವಾದ ಸಕಳಾಚಾರ್ಯ್ಯರೂ ಸಕಳಸಮಇಗಳೂ ಸಕಳಸಾ-
೧೨. ತ್ವಿಕರೂ ಮೋಷ್ಟಿಕರು ತಿರುಪಣಿ ತಿರುವಿಡಿ ತಂಣ್ಣೀರವರು ನಾಲ್ವತ್ತೆಂಟು ಜನಂಗ-
೧೩. ಳು ಸಾವಂತಬೋವಕ್ಕಳು ತಿರಿಕುಲ ಜಾಂಬುವಕುಲವೊಳಗಾದ ಹದಿನೆಂಟುನಾ-
೧೪. ಡ ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವದರ್ಶನಕ್ಕೆ ಊ ಜೈನದರ್ಶನಕ್ಕೆಊ
೧೫. ಭೇದವಿಲ್ಲವೆಂದು ರಾಯನು ವೈಷ್ಣವರ ಕೈಯ್ಯಲು ಜೈನರ ಕೈವಿಡಿದುಕೊಟ್ಟು ಯೀ ಜೈ-
೧೬. ನದರ್ಶನಕ್ಕೆ ಪೂರ್ವ್ವಮರಿಯಾದೆಯಲು ಪಂಚಮಹಾವಾದ್ಯಂಗಳೂ ಕಳಶಉ ಸ-
೧೭. ಲುಉದು ಜೈನದರ್ಶನಕ್ಕೆ ಭಕ್ತರದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ-

---

೩೦. E.C. II p. 475

೧೮. ಹಾನಿವೃದ್ಧಿಯಾಗಿ ಪಾಲಿಸುವರು ಯೀಮರ್ಯಾದೆಯಲು ಯಲ್ಲಾರಾಜ್ಯದೊಳಗುಳ್ಳ-
೧೯. ಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು ಚಂದ್ರಾರ್ಕಸ್ಥಾಯಿ-
೨೦. ಯಾಗಿ ವೈಷ್ಣವಸಮಯಲು ಜೈನದರ್ಶನವ ರಕ್ಷಿಸಿಕೊಂಡುಬಹೆಲು ವೈಷ್ಣವರೂ ಜೈ-
೨೧. ನರೂ ವೊಂದು ಭೇದವಾಗಿ ಕಾಣಲಾಗದು ಶ್ರೀತಿರುಮಲೆಯ ತಾತಯ್ಯಂಗಳು.
೨೨. ಸಮಸ್ತರಾಜ್ಯದ ಭವ್ಯಜನಂಗಳ ಅನುಮತದಿಂದ ಬೆಳುಗುಳದ ತೀರ್ತ್ಥದಲ್ಲಿ ವೈಷ್ಣವ
೨೩. ಅಂಗರಕ್ಷೆಗೋಸುಕ ಸಮಸ್ತರಾಜದೊಳಗುಳ್ಳಂತಹ ಜೈನರಾ ಬಾಗಿಲುಗಟ್ಟಲೆ-
೨೪. ಯಾಗಿ ಮನೆಮನೆಗೆ ವರ್ಷಕ್ಕೆ ೧ ಹಣ ಕೊಟ್ಟು ಆ ಯೆತ್ತಿದ ಹೊಂನ್ನಿಂಗೆ ದೇವರ
೨೫. ಅಂಗರಕ್ಷೆಗೆ ಯಿಪ್ಪತ್ತಾಳನೂ ಸಂತವಿಟ್ಟು ಮಿಕ್ಕ ಹೊಂನ್ನಿಂಗೆ ಜೀರ್ಣ್ನಜಿ-
೨೬. ನಾಲಯಂಗಳಿಗೆ ಸೊದೆಯನಿಕೂದು ಯಿ ಮರಿಯಾದೆಯಲು ಚಂದ್ರಾರ್ಕ-
೨೭. ರುಳ್ಳಂನಂ ತಪ್ಪಲೀಯದೆ ವರ್ಷವರ್ಷಕೆ ಕೊಟ್ಟು ಕೀರ್ತ್ತಿಯನೂ ಪುಂಣ್ಯವನೂ ಉಪಾ-
೨೮. ರ್ಜ್ಜಿಸಿಕೊಂಬುದು ಯಿ ಮಾಡಿದ ಕಟ್ಟಳೆಯನು ಆವನೊಬ್ಬನು ಮೀಱಿ-ದವನು ರಾ-
೨೯. ಜದ್ರೋಹಿ ಸಂಘಸಮುದಾಯಕ್ಕೆ ದ್ರೋಹಿ ತಪಸ್ವಿಯಾಗಲಿ ಗ್ರಾಮೀಣಿ-ಯಾಗಲಿ ಯಿ-
೩೦. ಧರ್ಮ್ಮವ ಕೆಡ್ಸಿದರಾದಡೆ ಗಂಗೆಯ ತಡಿಯಲ್ಲಿ ಕಪಿಲೆಯನೂ ಬ್ರಾಹ್ಮಣನನೂ ಕೊ-
೩೧. ಂದ ಪಾಪದಲ್ಲಿ ಹೋಹರು ॥ ಶ್ಲೋ ॥ ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂ-
೩೨. ಧರಾ ಷಷ್ಟಿವರ್ಷಸಹಸ್ರಾಣಿ ಮಿಷ್ಟಾಯಾಂ ಜಾಯತೇ ಕ್ರಿಮಿ ॥ ಮೇಲ್ಭಾಗದಲ್ಲಿ
೩೩. ಕಲ್ಲೆಹದ ಹರ್ವ್ವಿಸೆಟ್ಟಿಯ ಸುಪುತ್ರ ಬಸುವಿಸೆಟ್ಟಿ ಬುಕ್ಕರಾಯರಿಗೆ ಬಿಂನಹಂ ಮಾಡಿ ತಿರುಮಲೆಯ ತಾತಯ್ಯ-
೩೪. ಂಗಳ ಬಿಜಯಂಗೆಸಿತರಂದು ಜೀರ್ನ್ನೋದ್ಧಾರವ ಮಾಡಿಸಿದರು ಉಭಯ ಸಮಯಲೂ ಕೂಡಿ ಬುಸುವಿಸೆಟ್ಟಿಯರಿಗೆ ಸಂಘ
೩೫. ನಾಯ್ಕಪಟ್ಟವ ಕಟ್ಟಿದರು ॥

೩೨
ಹಂಪೆ ಶಾಸನ
ಕ್ರಿಶ. ೧೪೧೧

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಾಚಾರಮರಚಾರವೇ [।*]ತ್ರೈಲೋಕನಗರಾ–ರಂಭ ಮೂಲಸ್ತಂಭಾ–

೨. ಯ ಶಂಭವೇ ॥ [೧*] ಶ್ರೀಮತ್ಸಿಂಧೂರಬಂಧಾರುಣಬಿದು ನವಸಂಧಾಂಬುದಂ ಪುಷ್ಕರಪ್ರೋ–

೩. ದ್ಧಾಮಾಂಭಃಶೀಕರಂ ತಳ್ತು[ಡು] ಗಣಮುರುದಂಷ್ಟ್ರಾಂಕುರಂ ಬಾಲಚಂದ್ರಂ [।*]ಪೋ ಮಾತೇನೆಂಬ ನೇರ್ಷ್ಪಿಂ ನಭಮ[ನ] ಣಕಿ–

೪. ಪಂತಿರ್ದ್ಧ ನಿತ್ಯೋಂನಮತ್ತೇಜೋಮೂರ್ತ್ತಿ ಶ್ರೀಮಹೇಭಾನನನನವರತಂ ಕೂರ್ತು ರಕ್ಷಕ್ಕೆ ನಿಂಮಂ ।[೨*]ತಣಿಯೆ

೫. ಸದಾಳಿಯಂ ಪೊರವ ದಾನಗುಣಂ ಪರಿಪೂ[ರ್ಣ] ಭದ್ರಲಕ್ಷಣಮುಳಮಟ್ಟ ಶಕ್ತಿಸುಮನಸ್ತುತಮಾದನವದ್ಯವಿದ್ಯೆ

೬. ಸಂ[।*]ದಣಿಯರಮಾವನೊಳ್ನೆಗಳ್ದುದೆಂನವೊಲೆಂದು ಮುದಂ ಮಿಗಲ್ಮಹಾ–ಗಣಪತಿ ಕೂ[ರ್ಮ್ಮೆ] ಯಿಂ ಬಂದವ–

೭ ಗೆ ಲಕ್ಷ್ಮಣಮಂತ್ರಿಗಭೀಷ್ಟಸಿದ್ಧಿಯಂ ॥[೩*]ಘೋರಭವಭಯನಿದಾ– ಘದಿನೋರಂತಳ[ವ]ಳಿದು ಬಂದವ–

೮. ರ್ಗ್ಗೊಳ್ಪಂ ಭಾ[।*]ಗೀರಥಿ ಜನಿಯಿಸಿದಾನಂದಾರಾಮಪದಂಗಳೀಲು–ದೊಂದಚ್ಚರಿಯೇ ॥[೪*]ಶ್ರೀಲಕ್ಷ್ಮೀಧರಗುರುಪದನಾ[ಳೀ]–

೯. ಕನವೀನಗಂಧದೊಳ್ಬಗೆದಂ [ದಾ] [।*]ಲೋಲತೆಯನುಳಿದ ಮನುಜ–ಮದಾಳಿಗೆ ಸೊಗಯಿಪುದೆ ಜಡಪದಾಂಬುಜಸಂಗಂ ॥[೫*]

೧೦. ಪೊಂಬೆಟ್ಟಮೆ ಪೊಸಕೇಸರಮೆಂಬವೊಲಳವಟ್ಟ ಕುವಲಯಂ ಕುವಲಯ–ದಂ[।*]ತಿಂಬಾಗಿರೆ ತಂನಯ ತುದಿಗೊಂಬಿನೊಳಂಬು–

೧೧. ದಿಯೊಳೆಸೆದನಾದಿ[ವ]ರಾಹಂ॥[೬*]ಆಮಯಾಪೋತ್ರಿ ದಾತ್ರೀಭರಮುನಜಿಸಿ ತುಳ್ಕಾಡಿದಂವಾರ್ದ್ಧಮರ್ತ್ಯಸೋಮಮಂ ಮಂಥಾ–

೧೨. ದ್ರಿಯಂ ಮಂನಿಸದೊ [ದ]ಗಡೆದಂದಿಂಬುಗೊಂಡೋವದಂಬಿಂ [।*] ರಾಮಂ ಕೈವೋಗದೆಚ್ಚಂದಳವಳಿಯದೆ ಗಾಂಭೀರ್ಯ–

---

೩೧. SII IV No. 267

೧೩. ಧಾಮಂ ತಿತಿ[ಕ್ಷಾ]ಸೀಮಂ ಭೂಮಂಡಲಕ್ಕಾಭರಣಮೆನಿಸಿದಂಭೂರಿಭದ್ರಂ ಸಮುದ್ರಂ ॥[೭*] ಅಂತಸೆವಂಬುರಾ[ಶಿ]–

೧೪. ಯ ಮಗಳ್ಸಿರಿ ತಂನಯು ರಾಣಿಯಾಗ[ಲೋ]ರಂ[ತಿ]ರನಂತತಳ್ಪತಳದೊ–ಳ್ನಿಜಲೀಲೆಯನಿಂಬುಗೊಡು ನಿ[।*]ಶ್ಚಿಂತೆಯಿನಿ[ರ್ದ್ದ]

೧೫. ನೀರರುಹನಾಭಿಯ ನಾಭಿಸರೋಜದೊಳ್ಜಗತ್ಕಾಂತನಲಂಪಿನಿಂ [ದೊ]ಗೆದ–ನೂರ್ಜ್ಜಿತಶಾಸನನಂಬುಜಾಸನಂ ॥ [೮*] ಸರ–

೧೬. ಸಿಜಭವಾತ್ರಿವಿಧುಬುಧಪುರರೂರವಾಯುಃಕ್ಷಿತೀಶನಹುಷಯಯಾತ್ಯಾ [।*] ದ್ಯರನುಕ್ರ[ಮ]ದಿಂ ಯಧುಧರೆಗರ–

೧೭. ಸೆನಿಸಿದನಾದುದಾತನಿಂ ಯದುವಂಶಂ ॥[೯*]ಶ್ರೀಮತ್ಸೋಮಾ(ಂ)–ನ್ವಯಕ್ಕುದ್ಭವಿಸಿದ ಯದುವಂಶಾವನೀಪಾಲರೊಳ್ನಿಸ್ಸೀಮಶ್ರೀ–

೧೮. ಸಂಗಮಕ್ಷ್ಮಾಪತಿ ದೊರೆವಡೆದಂ ತತ್ತನೂಜಂ ಸಮಸ್ತೋ [।*]ರ್ವ್ವೀಮಾನ್ಯಂ ರೂಢಿವೆತ್ತಂ ಹರಿಹರನಧಟಂ ತಂನರೇಂದ್ರಾನುಜಂ

೧೯. ಸುತ್ರಾಮೊದ್ದಾಮಪ್ರತಾಪಂ ತಳೆದನಖಿಳಭೂಚಕ್ರಮಂ ಬುಕ್ಕರಾಯಂ ॥ [೧೦*]ಆತಂಗೆ ಜನಿಸಿದಂ ವಿಖ್ಯಾತಂ ನಳ–

೨೦. ನಹುಷನುಗ್ರಭಗೀರಥರೊರೆಗೇ [।*] ಮಾತೊ ಸರಿಮಿಗಿಲೆನಲ್ಧರ್ಮ್ಮಾತತ–ರೂ[ಪ] ಪ್ರತಾಪಹರಿಹರಭೂಪಂ ॥[೧೧*]ದಾನ–

೨೧. ವಮುರ್ದ್ದನಂತಿರೆ ಮೀನಾಗದೆ ಪಂದಿಯಾಗದಷ್ಟತಿರೂಪಂ[।*]ತಾನಾ ಪ್ರತಾಪಹರಿಹರನೇನುದ್ಧರಿಸಿದನೊ ವೇದಮಂ ಮೇದಿನಿ–

೨೨. ಯುಂ ॥ [೧೨*] ಆ ಭೂಮೀಪಾಲಪುಣ್ಯಾಂಕುರಮದುಪುರುಷಾಕಾರದಿಂ ಪುಟ್ಟಿದಂತಾಶಾಭಾಗಪ್ರಸ್ಫುರತ್ಪಾವನಯ–

೨೩. ಶನಶನಿಪ್ರೌಢಬಾಹುಪ್ರತಾಪಂ [।*] ಸೌಭಾಗ್ಯಶ್ರೀನಿವಾಸಂ ಜನಿಯಿಸಿ ಸಕಲಕ್ಷತ್ರಚೂಡಾಧಿರೂಢಾ–

೨೪. ಗ್ಣಾಭಾರಂ ಸಾರ್ವ್ವಭೌಮೋಂನತಿಯೊಳೆಸಗಿದಂ ದೇವರಾಜಾವನೀಂದ್ರಂ ॥ [೧೩*]ಸಲೆ ನಾ[ನಾ] ಸಸ್ಯಸಂಪತ್ತಿಯನೊದವಿಸಿ ಸ–

೨೫. ಂತುಷ್ಟಿಯುಂ ದಾನಧಾರಾಜಲದಿಂ ಸಂತಾಪಮಂ ತಳ್ಗಿಸಿ ವಿತತಸಿತಛತ್ರ ಸುಚ್ಛಾಯೆಗೊಯ್ದು[।*] ಜ್ವಲಿಪಾಗ್ಣಾದಾಮ–

೨೬. ದಿಂದಂ ನಿಯಮಿಸಿ ನಿಜದೋ[ಃ*] ಸ್ತಂಭದೊಳ್ಕಟ್ಟಿ ಗೋಮಂಡಲಮಂ ಸತ್ಕೀರ್ತಿದುಗ್ಧಂಗಱದನಱ ಕೆಯಿಂ ದೇವರಾ–

೨೭. ಜಾವನೀಂದ್ರಂ ॥[೧೩*]ಮಱಿಮಾತೇಂ ಪಗೆಗೊಂಡಪಾರ್ತ್ಥಿವರನ–ತ್ಯುಗ್ರಾಜಿಯೊಳ್ಕಾಯ್ದು ತಳ್ತಿಱಿವಾಗ[ಳ್ನೆ]ಗಳ್ದು[ಚ್ಛ]ವಂ ಬೆರಸು

೨೮. ಭೇತಾಳಾಳಿ ಬೆಂನೆತ್ತರಂ[।*]ಸುಱಿದಿರ್ಪ್ಪಾಱಿದ ಕೈಗಳಿಂ ಕಡೆವರ [ಂ*]ದಿಗ್ಭಿತ್ತಿಯೋಳ್ಕೂಡಿ ಚಟ್ಟಿಱಿದಂತಿರ್ದ್ದಪುದಪ್ರ–

೨೯. ತರ್ಕ್ಯತರತೇಜಂ ದೇವರಾಜೇಂದ್ರನಾ ॥[೧೫*]ಪೊಡಕರಿಪ ಗಂಡಗು– ಣದುಗ್ಗಡಮೆಂತು[ಟೊ] ಬಿಡದೆ ಜಡಿಯೆ ಜಯವಧುವತ್ತಿ[।*]ತ್ತ[ಡಿ]–

೩೦. ಯಿಡದೆ ಬಾಳಬಾಯೊಳೆನ[ಡ]ವಳ್ ಶ್ರೀದೇವರಾಯಭೂವಲ್ಲಭನ॥

೩೧. ನ್ವಯುದೊ[ಳ್ಸಂ][।*] ದಾದಿ ಪ್ರಧಾನರೀ ಧರೆಗಾದ[ವರ್ಮ್ಮ]ದರಸ– [ಸಾ]ಯಣ್ಣಾಖ್ಯಮ್ಮುಖ್ಯ[ರ್]॥[೧೭*]ತೋಡಡದ ಭಾವಿಯಿಲ್ಲ ಮರೆಕಟ್ಟದ ಪೇರ್ಗ್ಗೆಱೆ –

೩೨. ಯಿಲ್ಲ ಲೀಲೆಯಿಂ ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾರಮಿ– [।*]ಲ್ಲಾಡಲದೇನೊ ಭೂಭುವನಭುಂ[ಭು]ಕಮಾ–

೩೩. ದು[ದು]ಕೀರ್ತ್ತಿ ಬಾಪು [1]ನಾ ಪಾಡಿಯೇ[1] ಸೈಪು ಮಾದರಸ ಸಾಯಣರೆಂಬ ಮಹಾ ಪ್ರಧಾನರಾ ॥ [೧೮*] ಅವರಂ[ಬ] ಲಭದ್ರಾಚ್ಯುತ–

೩೪. ರಿವರೆನೆ ಜನವವರ ತಂಗಿ ಸಿಂಗಲೆ ಭುವನ[।*]ಸ್ತ[ವ]ನೀಯ್ಯ ಚರಿತೆ ಸಂತತಮವನೀತಳದೊಳ್ಸುಭದ್ರೆಯೆನಿಪುದು ಪಿರಿದೇ [॥೧೯*] ಆ

೩೫. ತರುಣೀಶಿಖಾಮಣಿಗೆ ವಲ್ಲಭನಾರೆನೆ ವಿಷ್ಣುಉದ್ಧವಿಖ್ಯಾತಪವಿತ್ರಗೋತ್ರದೊಳು ಗೋಸನೆವೆತ್ತೊಗೆದಂ ಜಗಜ್ಜನ [।*]ಪ್ರೀತಿ–

೩೬. ಕರಂ ಗುಣಾಕರನಲಂಕೃತಭೂಭುವನಂ ಬುಧಾಳಿಲೀಲಾವತಿಶಯ್ಯೆಕತಾಮರಸನೆಂದೆನೆ ರಾಮರಸಂ ಧರಿತ್ರಿಯೊಳು॥ [।*] ಅ–

೩೭. ನಿಮಿಷನಂದನಕ್ಕಮರ ಭೂರಹಪಂಚಕಮಿಶ್ವರಂಗೆ ನೆಟ್ಟನೆ ಮುಖ ಪಂಚ– ಕಂನ್ರುಪನಯಾಭಿಮತಕ್ಕಮ[ರ್ದಂ]ಗ ಪಂಚಕ

೩೮. ಂ[।*]ಜನಿಯಿಸಿ ಲೋಕರೂಢಿವಡದಂತೆ ಸಮುಸ್ತಜನಂ ಮನಂಗೊಳಲ್ಜ– ನಿಸಿದು[ದಾ]ಗುಣ್ಯೈಕನಿಧಿ ರಾಮರಸಂಗೆ ತನೂಜಪಂಚಕಂ ॥ [೨೧*]ಕ್ರಮ–

೩೯. ದಿಂ ಲಕ್ಷ್ಮೀಧರ ಚೆನ್ನಮಂತ್ರಿ ಬುಕ್ಕಂಣ ಮಾಧವ[ಪೆ]ರ್ಗ್ಗಡೆಯೆಂ–[।*]ದಮರ್ದಿರೆ ನಾಮಂ ನೆಗಳ್ದರ್ಸ್ಸಮನಿಸಿ ಸಿಂಗಾಬಿಕಾಪವಿತ್ರೋದರದೊಳು ॥[೨೨*]

೪೦. ಆ ಮೇಱಿವ್ವೈವರೊಳಾಂತಂ ಶ್ರೀ ಮದ್ಭೀಮಪ್ರತಾಪನರ್ಜ್ಜುನಕೀರ್ತ್ತಿ [।*] ಪ್ರೇಮಂ ಲಕ್ಷ್ಮೀಧರನೆನ[ಲೀ] ಮಹಿಯೊಳ್ಧರ್ಮಸಂಭವಪ್ರಾಭವಮಂ ॥ [೨೩*]–ಕಂನ

೪೧. ಡಿಗಕುಲಕೆ ರಂನದ ಕಂನಡಿಯೆನೆ ವಿಶ್ವವಿದಿತಉತ್ತಶ್ರೀಸಂ [।*]ಪಂನಂ ಲಕ್ಷ್ಮೀಧರದೇವಂ ನಿರ್ಮ್ಮಲನಾಗಿ ನೆಗಳ್ದನೊಳಗಂ ಪೊ–

೪೨. ಱಗಂ॥ [೨೪*] ಶ್ರೀರಾಮಂ ತಂದೆ ದೇವೊತ್ತಮ ದಶರಥರಾಮಂ ಮನೋ– ದೈವಮಾನಂದಾರಾಮಂ [ರೂ]ಢಿವೆತ್ತಗ್ಗದ ಕುಲಗುರುವೆಂದಂದೆ ಪೋ–

೧–೧ 'ನಾಡಾಡಿಯೇ' ಎಂದು ಇರಬಹುದು

೪೩. ಷಿಪ್ಪದೇನಿಂ[೨೫*]ನಾರಂ ಸಿಂಗಾಂಬಿಕಾಮಂಗಳಜಠರ–ಸುಧಾವಾರ್ಧಿ–ಸಂಜಾತನಂ ತಾನಾರಾಮಮಂ ಲಕ್ಷ್ಮಣಾಮಾತ್ಯನೆ ಸಕಲಜಗಜ್ಜಾತ–ಚೇತೋಭಿರಾ–

೪೪. ಮಂ ॥ [೨೫*]ಕೆಱೆ¹ಯಂ ಕಟ್ಟಿಸು ಭಾವಿಯಂ ಸವಸು ದೇವಗಾರಾಮಮಂ ಮಾಡಿಸಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ ನಂಬಿ–

೪೫. ದ[।*]ರ್ಗ್ಗೆಱೆ¹ವೆಟ್ಟಾಗಿರು ಶಿಷ್ಟರಂ ಪೊರಯೆನುತ್ತಿಂತೆಲ್ಲವಂ ಪಿಂದೆ ತಾಂ ಯೆಅದಳ್ಪಾಲೆಱವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥ [೨೬*]

೪೬. ಕಯ್ಯೆಂದೊಡೆ ಮಂದಾರದ ಕಯ್ಯುಂ ಮಂತೀಂದ್ರ ಲಕ್ಷ್ಮಣಾಂಕನ ಕಯ್ಯುಂ–[।*]ಕಯ್ಯಲ್ಲದುಳಿದ ಮನುಜರ ಕಯ್ಯೆಂಬುಉ ಮರುಳಕೈಗಳೇತ–

೪೭. ಱಕೈಗಳ್॥ [೨೬*]ಪೊಡವೆಯನೋವಿ ನೋಡಿ ಬಿಡಲಾಱದೆ [ಚ]ರ್ಮ್ಮಮ–[ನೆಲ್ವ] ನೊಳ್ಪುವೆತ್ತೊಡಲ ನೆಗಲ್ಚಿ ಕೊಟ್ಟಳಿರ್ದಂತಕಟಾ ಶಚಿವೇಂದ್ರಲ–

೪೮. ಕ್ಷ್ಮಣಂ[।*]ಪೊಡವಿಯೊಳಂದೆ ಪುಟ್ಟ[ವ]ಡೆ ವಂದಿಗಳಿಷ್ಟಮನಿತ್ತುಜೀವಮಂ ಪಡೆಯನ ಸೂತಜಾತನ ದಧೀಚಿಯ ಖೇಚರಚಕ್ರವರ್ತಿಯಾ ॥ [೨೮*]

೪೯. ಮಾತೇನೋ ದೇವರಾಯಂಗಾತಂ ಸ(ಂ) [ನ್ಮಂ]ತ್ರಿಯೆನಿಸಿ ನೆಗಳ್ದಿರೆ ವಿಬಧ[।*] ಪ್ರೀತಿ ಮಿಗೆ ನಿಖಿಳವಿದ್ಯಾನೀತಿಗೆ ಗುರುವೆಂನದಿರ್ಪ್ಪರೇ ಲಕ್ಷ್ಮಣನಂ ॥[೨೯*]ಸು–

೫೦. ಮನೋ(ಂ)ನ್ಯಾಸದಿಂ ವಿಶ್ರುತವಿಬುಧಜನಾನೂನಸಂ(ಂ) ನ್ಮಾನದಾನ–

೫೧. ರೆಂನಾನಳ್ಕಱೆ¹ಂ ಕೇಳ್ದೊಡೆ ಬಿಡು ಪೊಸತೇಂ ಪೋಗಿಯುಂ ಬಂದು ಕಲ್ಪದ್ರುಮಮೊಂದಂ ಪೇಳ್ವೆ ಮತ್ತುಳ್ಳೆಡೆ ನುಡಿ ಜಗತೀಚಕ್ರದೊಳ್ಸತ್ಕ–

೫೨. ವೀಂದ್ರಾ॥[೩೦*]ಪುಸಿದಾನಜ್ಜಿರಸುವರ್ಥ್ಥವೇಂ ಮುನಿ²ದ ಕಯ್ಯೊಳ್ಪೇಳಲೇ ವಂದಿ ವಾದಿಸದಿರ್ವ್ವಂಶವಿಶುದ್ಧಿಯಳ್ವಿಭವದೊಳ್ವಿಖ್ಯಾತಿಯೊಳ್ನೀತಿ–

೫೩. ಯೋಳ್ಚಸದೊಳ್ಟಾಜ್ಞೆಯೊಳತ್ಯುದಾರಗುಣದೊಳ್ಗಾಂಭೀರ್ಯ್ಯದೊಳ್ಮೂರ್ತ್ತಿ ಲಕ್ಷಿಸೆ ಲಕ್ಷ್ಮೀಧರನಲ್ಲದುಂಟೆ ಸಭೆಯೊಳ್ ಶ್ರೀದೇವರಾಜೇಂದ್ರನಾ ॥ [೩೧*]

೫೪. ಧರಣೀಚಕ್ರಂ ಮನಂಗೊಳ್ವುದೆಯಮುರುತಮಸ್ತೋಮವಲ್ಲಾಡುವಾತ್ಮಾಚರಣಂ ಸ(ಂ)ನ್ಮಾರ್ಗ್ಗಮುದ್ಯೋತಿಸುವ ರುಚಿ ಸದಾಲೋಕಮುರ್ವೇಳ್ವತೇ–

೫೫. ಜ[।*]ಸ್ಫುರಣಂ ನಿತ್ಯಾನುರಾಗಕ್ಕೆಡೆಗುಡಲೆಸೆವೀ ಪೆರ್ಮ್ಮೆಯಿಂ ದೇವಭೂಭುದ್ವರಪಾದಾಸಂನನೇನುಂನತಿವಡದನೊ ಲಕ್ಷ್ಮೀಧರಾಮಾತ್ಯ–

೫೬. ಮಿತ್ರಂ ॥[೩೨*]ಪೂವಿನ ಬಿಲ್ಲನೇಱೆ¹ಸುವ ಬಂಡ² ಬಸಂತನನಾಸೆ–ಮಾಡುವಿಂಮಾವಿನರಲ್ಗಳಂ ಬನಸಗೆಯ್ವೆಳೆದಿಂಗಳ ಪಂಗುಗೊಳ್ವ ಬ[।*]ಲ್ಪೇಉ–

೫೭. ದೆನುತ್ತ ಚಿತ್ತಭವನಾವನ ಮೆಯಿವಳಿಗೊಂಡು ಕಂಡ ಕಾಂತಾವಳಿಯಂ ಮರಳ್ಚುವನೆನಲ್ಲೊಬಗೆಂತುಟೊ ಲಕ್ಷ್ಮಣಾಂಕನಾ ॥[೩೩*] ಸಾರಶ್ರೀ–

---

೧. 'ಗಿ' ಇರಬಹುದು ೨. 'ದ' ಇರಬಹುದು

೫೮. ನೀತಿವಾಕ್ಯಾಮ್ರುತಪರಿಸರದೊಳ್ಪುಟ್ಟಿ ಮೆಯಿಗುಂದದಾನಂದಾರಾಮಾಸಂ
ನಾರಾಮಾಯಣದೊಳಮರ್ದು ತಳ್ತಾವಗಂ [ಕ್ರು]ಷ್ಣಲೀಲಾ[।*]ಧಾರಂ ತಾನ-

೫೯. ಗಿ ನಾನಾಫಲಮನಿಳೆಗೆ ಬೀಱಿತ್ತು ಸಂಸಾರಸೌಖ್ಯಾಕಾರಂ ಸಂ(ಂ)ನ್ಮಂತ್ರಿ
ಲಕ್ಷ್ಮೀಧರನುರುಕವಿತಾಕಲ್ಪವಲ್ಲೀವಿತಾನಂ ॥[೩೪*]ಪದಪಿಂದಂ ಕವಿರಾಜಲ-

೬೦. ಕ್ಷ್ಮಣನ ಕಾವ್ಯಾಲ[ಪ]ಮಂ ಕೂರ್ತ್ತು ಕೇಳದೆ ಮುಂ ಪೋದರೆ ಪಾದ[ವೊಂ]ಮೆ
[1]ಕವಿಗೊಟ್ಟೆತ್ತಾನುಮಾರ್ಯ್ದು ಸಂ[।*]ಮುದದಿಂ ಸ್ಯೆತಿರ-ದೋರುದೂತಿಯರ ಮಾ-

೬೧. ತಂ ಮೀಱಿಕ(ಂ)ಣ್ಗೊಂಡು ನೋಡಿದ ಪೆ(ಂ)ಣ್ಗಳ್ಪುದಿದಿದ್ದಪೂಗಣೆಯ ಪುಂಣಿಂದಂಣಿ
ಪುಯ್ಯಲ್ಚರೇ ॥ [೩೫*]ವೋದಿ ಪರವಂಚನಂಗೆಯ್ವೋದುಗಳಂತಿರ್ಕ್ಕೆ ಲ-

೬೨. ಕ್ಷ್ಮಣಾಮಾತ್ಯನವೊ[।*]ಲಾದರಿಸಿ ಶಚಿವರಾದವರೋದುಉ[ದೋ]ರಂತೆ ಪತಿ-
ಹಿತಾರ್ಥಾಗಮಮಂ ॥ ಸ್ವಾಮಿದ್ರೋಹರ್ಕ್ಕೆಲಂಬರ್ಮ್ಮಸಗಿ ಮಸೆದ ಬಾಳ್ಗೊಂಡು ಚ-

೬೩. ಂಡಪ್ರತಾಪೋದ್ದಾಮಶ್ರೀದೇವಭೂವಲ್ಲಭನ ಗ್ರುಹಮಹಾದ್ವಾರಮಂಮುತ್ತೆ ಮತ್ತಿಂ[।*]ನೇ
ಮಾತೀಮಾತಿನಿಂ ಮುಂನುಱುಬಿತಱು[ಬೆ]ನೂ ಱಂಕಮಂ

೬೪. ಸ್ವಾಮಿಕಾರ್ಯ್ಯಕ್ಕಾಮೆಂದುರ್ವ್ವೇಳ್ವರುತ್ಸಾಹಮನದಟಲದಂ ಲೋಕದೊಳು ಲಕ್ಷ್ಮಣಾಂಕಂ
॥[೩೬*] ಕೆಲಬಲನಂ ವಿಚಾರಿಸದೆ ಬಂದ ಭಟರ್ಬ್ಬಲ[ವ]-ತಂರೆಂದೆನು-

೬೫. ತ್ತಲಸದೆ ನಿಂದು ತಂನ ಪತಿಕಾರ್ಯ್ಯಮೆ ಕಾರ್ಯ್ಯಮೆನುತ್ತ [ಪೂ]ಣ್ದು ಮೆಯಿ[।*]ಗಲಿ
ತಲೆಮಟ್ಟ[ವೀರ್ವ್ವಡೆ]ದ ಮುಂ[ದ್ವ]ಲೆಯೊಂದೆ ಜಗಜ್ಜನಕ್ಕೆ ಮೂದಲೆಯೆನಿಸಿ-

೬೬. ತ್ತದೇವೆಱಗೊ ಲಕ್ಷ್ಮಣಮಂತ್ರಿಂಯು ಸಂದ ಸಾಹಸಂ ॥ [೩೭*]-
ನೆಲದೊಳ್ಪತಿಹಿತರಾವೆಂದುಲಿವರ ನಾಲಿಗೆಯನಲುಗಲಿಯ್ಯದ ಬಲು ಸಂ[।*]ಕಲೆಯಾದುದು
ಮುಂ

೬೭. ಕೀರ್ತ್ತಿಯ ಕಲೆ ಮೂಜಗವಱಿಯೆ ಮಂತ್ರಿಲಕ್ಷ್ಮೀಧರನಾ ॥ [೩೯*] ಆರಾನುಂ
ದಾನೋದಕಧಾರೆಯನೊಸದಾಂಪರವನಿಸುರರೊಳ್ವೆರಗಂ [।*] ಪಾರದೆ ಲಕ್ಷ್ಮಣ-

೬೮. ನಂತಸಿಧಾರೆಯನಾಂಪವರ್ಗಳುಂಟೆ ವಸುಧಾತಳದೊಳ್ ॥[೪೦*] ಗಣ ನಾ ಮಾತ್ರಮೆ
ದೇವರಾಯನರನಾಥಾಸ್ಥಾನದೊಳ್ಮಾನವಾಗ್ರಣಿಗಳ್ಸ್ಯೆತೆ ವಿಚಾರಿಪಾ-

೬೯. ಗಳುಪಧಾ ಸಂಶುದ್ಧಿಯಿಂ ಬುದ್ಧಿಯಿಂ [।*] ಗುಣದಿಂ ಗೌರವದಿಂ [ಪೊ]-ದಳ್ದಿಸವ
ಮುದ್ರಾಮಾತ್ಯ ಯೋಗಂಧರಾಯಣ ಚಾಣಾಕ್ಯ ಸುಮಂತ್ರರೊ-

೭೦. ಳ್ದೊರೆಗೆವಂದಂ ಮಂತ್ರಿ ಲಕ್ಷ್ಮೀಧರಂ ॥[೪೧*] ವಚನ॥ ಆ ಮಹಾಪ್ರಧಾನ
ಲಕ್ಷ್ಮೀಧರನೊಂದು ರಾತ್ರಿಯೊಳ್ಸುಖಸುಪ್ತಿಯನಪ್ಪುಗೆಯ್ದಿರ್ಪ್ಪಿನಂ ಸ್ವಪ್ನ-

೭೧. ದೊಳಪ್ಪ್ರತಿಮತೇಜನಖಿಲಚರಾಚರಜನನಬೀಜಂ । ಬೀಜಾಪೂರಸಮುಚಿತಾ-
ಯುಧವಿಶೇಷವಿಲಸಿತ ದಶಭುಜಾದಂಡಂ । ಖಂಡೇಂದುಮಂ-

---

೧. 'ತೆ' ಇರಬಹುದು

೭೨. ಡಿತಮಣಿಮುಕುಟಮಹನೀಯ್ಯಶಿಖಂಡಂ । ಗಂಡಸ್ಥಳಗಳಿತಮದಮದಿರಾ-
ಪ್ರಮತ್ತಮಧುಕರಝೇಂಕಾರಮುಖರಿತನಿಖಿಲದ್ವಿಲಯಂ । ವ

೭೩. ಲಯಾಂಗದಾಂಗುಲೀಯ್ಯಕಾದಿಭೂಣವಿಭೂಷಿತ ಸರ್ವ್ವಾಂಗನಂಗೀಕ್ರುತ-ಭುಜಂಗಪರಿಲ್ರುಢ
ಪ್ರಾಲಂಬಂ । ಲಂಬೋದರಕಲಿತಕಾಕೋದ-

೭೪. ರಫಣಾಮಣಿಮರೀಚಿನಿರಾಕೃತನಾಭೀಕುಹರವಿಹರದಪಾರಾಂಧಕಾರಂ । ಕ-
ನಕಕಟಿಸೂತ್ರವಿಚಿತ್ರಜಘನಮಂಡಲಂ । ವೀರಕಟಕನೂ-

೭೫. ಪುರಪುರಸ್ಕೃತಪದಸರೋಜನಾಥಂ । ಯಥೋಚಿತದಿಶಾನಿಷಂಣನಿಜನಿ-
ಜಶಕ್ತಿಯುಕ್ತಹರಿಹರವ [ರಾ]ಹಕುಸುಮಸಾಯಂಕ । ಸೇವಕಜ-

೭೬. ನಮನೋರಥದಾಯಕಂ । ಸಕಲಲೋಕೈಕನಾಯಕಂ ಮಹಾವಿನಾಯಕಂ ಬಂದಲೆ
ಲಕ್ಷ್ಮೀಧರಾ ॥ ಲವಣಾಂಭೋನಿಧಿ ತಳ್ತು ಸುತ್ತಿಜಿದ ಜಂಬೂ-

೭೭. ದ್ವೀಪಮಧ್ಯಸ್ಥ ಮೇರುವ ತೆಂಕಲ್ಭರತಾವನೀತಳದೊಳುಂಟಾಹ್ಲಾದಕಂ
ಪು(ಂ)ಣ್ಯಸಂ[।*]ಭವಸದ್ಮಂ ಹರಿಪದ್ಮಗರ್ಬ್ಭಮುಖಲೇಖಾನೀಕಲೀಲಾ-

೭೮. ಮಹೋತ್ಸವಗೇಹಂ ಪರಿಧೂತಮೋಹಮಮಲಸ್ಥಾಮಂ ವಿರುಪಾಕ್ಷನಾ ॥ [೪೨*] ಅಲ್ಲಿ
॥ ಯೆಡದ ಮಡದಿಗೆ ಬಿಗುರ್ತ್ತಾಜಡೆವೆಟಿಗೊಂಡಮರನದಿ-

೭೯. ಯುದೇ ಸೊಬಗೆನೆ ನೇ[।*]ರ್ಪ್ಪಡೆ ತುಂಗಭದ್ರೆ ದೇವನೆ ಬಿಡದಡಸಿದ
ವಾಮಭಾಗದೊಳ್ಸೊಗಯಿಸುಗುಂ ॥[೪೨*] ಜಲಮಮ್ರುತಮಯಂ ಸೊಗಯಿಪ ಜಲವಿ-

೮೦. ಹಗಂ ಪರಮಹಂಸಮಯಮೆಂದುಂ ತ[।*]ಜ್ಜಲಚರಮನಿಮಿಷಮಯಮೆನಲೆಲೆ
ಬಂಣಿಪನಾವನದಱತೀರದ ಸಿರಿಯಂ ॥[೪೪*] ವಚನ ॥ ಆಪಾವನನದೀಪ-

೮೧. ಯಃಪಾನಪರಿಣತ[ಪಣ್ಕಿ]ಲತೃಣನಾರಿಕೇಳಚೂತವಾತುಳಂಗರಂಭಾಜಂ-
ಬೀರಪೂಗನಾಗಕೇಸರಾದಿಭೂಜಾತಜಾತಿಕೇತಕೀಮುಖನಿಖಿಲಕುಸುಮಸು-

೮೨. ಗಂಧಬಂಧುರಗಂಧಶಾಳಿಪಾಳೀಪರಿಕಳಿತಕಳಹಂಸಶುಕಪಿಕಶಿಖಾವಳಕೇಕೀ ವಿಳಾಸವಿಚಿತ್ರಂ
। ಸಕಲಭವಪವಿತ್ರಂ । ದುರಿತಲತಾಲವಿತ್ರಂ । ಭವಾಂಬುಧಿ-

೮೩. ಬಹಿತ್ರಂ । ವಾರಣಶ್ರೀ ಶ್ರೀಪರ್ವ್ವತಾದಿ ಸಿದ್ಧಸ್ಥಾನಮಣಿಗಣಮಾಲಾಸೂತ್ರಂ । ಪಂಪಾಕ್ಷೇತ್ರಂ
ಸೊಗಯಿಪ್ಪುದದಱಪೂರ್ವ್ವದಿಗ್ಭಾಗದೆ ಮಾಲ್ಯವತ್ಪರ್ವ್ವತ-

೮೪. ದ ತೆಂಕವಕ್ಕದೊಳೊಂದು ಮಹಾಗುಹೆಯುಂಟದಕ್ರುತ್ರಿಮದಿವ್ಯಾಗಾರಮದಱೊಳೆಂನಂ
ಸುಪ್ರತಿಷ್ಠೆಗೆಯ್ವುದೆಂದು ನಿರೂಪಿಸೆ ಮಹಾಪ್ರಸಾದ-

೮೫. ವೆಂದು ಕೈಕೊಂಡು ॥ ಆ ಸಂ(ಂ) ನ್ಯತ್ರೀಂದ್ರಲಕ್ಷ್ಮೀಧರನಮರಗುರು ಶ್ರೀವಿ-
ರೂಪಾಕ್ಷಲೀಲಾವಾಸಂ ತಾನಾದ ಪಂಪಾಪುರಪರಿಸರದೀ ಮಾಲ್ಯವದ್ಭೂಧ್ರ-

೮೬. ದೊಳ್ನಾ[।*] ನಾಸಿದ್ಧಿಶ್ರೀಯ್ಯ[ನೀ]ಯ್ಯಲ್ನೆಲೆಗೊಳಿಸಿ ಮಹಾಶಕ್ತಿಹೇರಂಬನಂ ವಿಶ್ವಾಸಂ
ಮೆಯ್ವೆತ್ತ ಭಕ್ತಿಪ್ರಭಾವವಿಭವದಿಂ ಧಾತ್ರಿಯೊಳ್ಕೀರ್ತ್ತಿವೆತ್ತಂ ॥[೪೫*]

೮೭. ತತ್ಸಮಯಕ್ಕೆ ದ್ರುಕ್ಪುರಶಿಖೀಂದು ಶಶಾಂಕಮಿರಲ್ವಿರೋಧಿಸಂವತ್ಸರ ಫಾಲ್ಗುನ ಪ್ರಥಮವಾಸರದೊಳ್ಗುರುವಾರಮೊಂದೆ ವಿ[।*]ದ್ವೆತ್ಥಭೆಬಂಣಿಪಂತೆ-
೮೮. ಸಗಿದಂ ಶಚಿವಾಗ್ಗ್ರಣಿ ಲಕ್ಷ್ಮಣಂ ಸಮಸ್ತೋತ್ಥವಮುಣ್ಮಿ ಪೊಣ್ಮಿರೆ ಮಹಾಗಣ- ನಾಥನವನಪ್ರತಿಷ್ಠೆಯಂ ॥[೪೬*] ವಚನ ॥ ಅಂತಾಪ್ರತಿಷ್ಠೆಯಂ
೮೯. ನಿಷ್ಠೆಯಿಂ ಮಾಡಿ ಮತ್ತಮದಱೊತ್ತಿನೊಳ್ತಾನೆ ಕಯ್ಯಾರೆ ಕೆಯ್ಯಮನಲ್ಲಿಟ್ಟು ತೆಂಗು ಕೌಂಗ ಮಾಲು ಮಾದಳೆ[ಅತ್ತಿ] ಜಂಬು ನಿಂಬೆ ಕಂಕೇಲಿ ನೆಲ್ಲಿ
೯೦. ಬಾಳೆ ರಸ್ತಾಳೆ ದಾಳಿಂಬಂ ಮೊದಲಾದ ಫಲತರುಗಳಿಂ । ಪಲಉಂ ಪೂಗಿಡುಗಳಿಂ ಬೆಳಗುವ ಧ[ರ್ಮ್ಮ] ತೋಂಟಮಂ । ಕಂನಡಿಯ ಕೆಱೆಯ ಕೆಳಗೆ
೯೧. ಮಾಱುಗೊಂಡ [ಮಣ್ಣು]ವಿನ ಖಂ ॥ ಹತ್ತು ಕೊಳಗದ ಗದ್ದೆಯಂ ದೇವರ ಅಂಗರಂಗಭೋಗಕ್ಕೆ ಧಾರಾಪೂರ್ವ್ವಕಂ ಕೊಟ್ಟು । ಧೂಪದೀಪ-[ನೀ*]ರಾಜನಂ ಮುಂತಾದ
೯೨. ವಿವಿಧೋಪಕರಣಂಗಳಂ । ಮಂಗಳ ಮಕುಟಮಂ । ಸುವರ್ನ್ನಕರ್ನ್ನ-ತಾಳಮಂ । ರಜತರದನಾದಿಶರೀರಪರಿಷ್ಕಾರಮಂ ದೇವಿಯರ್ಗ್ಗೆ ಸರ್ವ್ವಾಭರಣಂ ಸಮರ್ಪ್ಪಿ-
೯೩. ಸಿ ಸಕಲಭುವನಂ ಪೂಗಳೆ ಪು(ಂ) ಣ್ಯಕೀರ್ತ್ತಿಯನುಪಾರ್ಜಿಸಿ ॥ ಗುರುದೈವಂ ಮೆಚ್ಚೆ ನಿಚ್ಚಂ ಬಗೆದಣಿವ ಮನೋಭಕ್ತಿ ವಿದ್ವಜ್ಜನಂ ಬಾಪುರೆ ಬಾಪೆಂದೆತ್ತಿಕೊಂಡಾ-
೯೪. ಡುವ ವಿವಿಧಕಳಾಪ್ರೌ[ಢಿ] ವಂದಿಬ್ರಜಂ ಕಂ[।*]ಡಿರದಿಷ್ಟಾರ್ತ್ಥಂಗಳಂ ಕೊಂಡ[ಡ]ರೆ ಪೊಗಳ್ವ ವಿಶ್ರಾಣನಂ ವಿಶ್ವ[ವಂದ್ಯಂ] ಚರಿತಂ ತಾನಾಗಲೇನುಂನತಿವ-
೯೫. ಡೆದನೊ ಲಕ್ಷ್ಮೀಧರಾಮಾತ್ಯವರ್ಯ್ಯಂ ॥[೪೭*] ಅವನಿಯನಾಕ್ರಮಿ[ಪು]ದು ದಾನವಿಚಿತ್ರ ಲೋಕವಱೆಯೆ ಶುಚಿಯೆನಿಸಿ [ದ್ರ್ದಂ] [।*] ಶಿವನುಟ್ಟ ಶೀರೆಯಂ ಪಿಡಿದವಗಡಿಪ-
೯೬. ಳ್ಕೀರ್ತ್ತಿಲಕ್ಷ್ಮಿ ಲಕ್ಷ್ಮೀಧರನಾ ॥[೪೮*] ಪೊಗಳಲ್ಪೊಂಬುಳಿಯೋದ ಪೆಂಪಿನ ಯಶೋಲಕ್ಷ್ಮೀಧರಂ ಬಲ್ಲವರ್ಬ್ಬಗೆಗೊಳ್ವೆಂಪಿನ ಸೊಂಪುವೆತ್ತ ಕವಿತಾಲಕ್ಷ್ಮೀಧರಂ ರಾಜನೀ [।*]ತಿಗೆ ನೇ-
೯೭ ರ್ಪ್ಪಾದ ಮಹಾಪ್ರಧಾನಪದವೀಲಕ್ಷ್ಮೀಧರಂ ಧಾತ್ರಿಯೊಳ್ನೆಗಳ್ದಂ ನಿರ್ಮ್ಮಲ- ರಾಮಚಂದ್ರತನಯಂ ಸ(ಂ)ನ್ಮತ್ರಿಲಕ್ಷ್ಮೀಧರಂ ॥ [೪೯*] ಧರೆ ಪೊಗಳ್ವಿನಮಾ ಲ-
೯೮. ಕ್ಷ್ಮೀಧರಂಗೆ ದೇ[ವಕಿ]ಯುಮೆಸೆವ ಸೋಮಲೆಯುಂ ಗೈ[।*] ನೆರದರ ಸಿಯರಾದರ್ [ಗೊ][1] ತ್ರರಸಿಯರಾದಂತೆ ಹರಿಗೆ ಸಿರಿಯುಂ ಧರೆಯುಂ ॥ [೫೦*]
೯೯. ಆ[ ]ಇರ್ವ್ವರೊಳು ॥ ಪಿರಿಯಳೆನೆ ಸಂದ ಪೆರ್ಮ್ಮೆಯ ಪಿರಿಯ[ಳ್] ಸೌಭಾಗ್ಯದಿಂ ಪಿರಿಯಳ್ಗುಣದಿಂ [।*] ಪಿರಿಯಳ್ಪಾತಿವ್ರತದೆಪಿರಿಯಳೆ ನಲ್ಪಿರಿಯಳಮಮ ದೇವಕಿ ನೆಗ-

---

೧. [ಕೂ] ಇರಬಹುದು

೧೦೦. ಳ್ದ[ಳ್] ॥[೫೧*] ಪೂವಿನಮಾಲೆ ತುಂಬಿ[ದಿರುಳೀ]ಶನ ಜೂಟಿಕೆ ಚಂದ್ರಲೇಖೆ ಲಕ್ಷ್ಮೀವರನೊ[ಳ್ವರಕ್ಕೆ] ವನಮಾಲೆ ಸಮಂತಮರ್ದಂತೆ ವಿಶ್ವಧಾ[।*] ತ್ರೀವಿನುತಪ್ರಸಿದ್ಧಗು–

೧೦೧. ಣ ಲಕ್ಷ್ಮ ಮಂತ್ರಿಗ್ಗೆ ತಾನೆ ಸ[ತ್ಕ]ಳಾಭಾವಕಿ ಸೇಸೆವೆತ್ತೆಸದ ದೇವಕಿ ವಲ್ಲಭೆಯಾದಳಾವಗಂ ॥[೫೨*] ಆ ನೆಗಳ್ದೊಳ್ಪುವೆತ್ತೆಸವ ದೇವಕಿ ದೇವಕಿಯೆಂತು ಸರ್ವ್ವ[೧]ದಾತ್ರೀ[೧]ಸಮ್ಮಾ[ನಿತ]–

೧೦೨. ರಾಮಕೃಷ್ಣಯುಗಮಂ ಪಡೆದಲ್ಲ[ಡೆದಳ್ದ]ಲಂತೆ ಪ[।]ದ್ಮಾಸ[೨]ನದೊಳ್ಪುಮೀ ಕುವಲಯಾಂಗದ ನೇರ್ಪ್ಪುಮೊಡಂಬಡಲ್ಕೆ ತೇಜೋನಿಧಿಭಾನುವಂ ವಿಭುಧ–ಸೇವ್ಯಕಳಾನಿಧಿರಾಮಚಂದ್ರನಂ [॥೫೩*]ವ

೧೦೩. ....ಗುರುವೆನೆ ರೂಢಿವೆತ್ತ ಲಕ್ಷ್ಮಿಧರನಂ ॥[೫೪*]

೧೦೪. ....ಆಚಂದಾರ್ಕವಾಗಿ ನಾಗಜೀಯಗೆ ಕೊಟ್ಟರು॥

ಇದೇ ಕಲ್ಲಿನ ಒಂದು ಪಕ್ಕದಲ್ಲಿ

೧೦೫. ವೀರಾವತಮೆಸೆವಂತಿರೆ ಚಾರುಚಮ [ತ್ಕಾ–

೧೦೬. ರ] ದಿಂದ ವಿಬುಧಜನಂ [।*]ಕ್ಕೆ ದೋರಿಸೆ ಲಕ್ಷ್ಮ[ಣ]–

೧೦೭. ಮಂತ್ರಿ ಕುಮಾರ ಚತುಷ್ಟಯದಿನೆಸೆದನ–

೧೦೮. ವನೀತದೊಳ್ ॥[೫೫*] ತನುವಂ ಮ(ಂ)ನ್ಮಥ ಸೌಮ್ಯ ಭಾ–

೧೦೯. ವಮೊಳಕೆಯ್ಯಲನಂದನಶ್ರೀಮುಖಂ ತನ–

೧೧೦. ಗಾನಂದಮನೀಯೆ ವಿಕ್ರಮಜಯಂಗ–

೧೧೧. ಳ್ದೋಳೊಳಿಂಬಾಗೆ ನೆ[।*] ಟ್ಟನೆ ಸಾಧಾರಣಮಲ್ಲದೀ–

೧೧೨. ಶ್ವರಪದಾಬ್ಜಂ ಪಾರ್ತ್ಥಿವಶ್ರೀಯ್ಯನೀಯ್ಯೆ ನಯ–

೧೧೩. ಂಬೆರ್ತ್ತುದು ಕೀರ್ತ್ತಿದುಂದುಭಿನಿನಾದಂ ಲಕ್ಷ್ಮ–

೧೧೪. ಣಾಮಾತ್ಯನ ॥[೫೬*] [ಪಿಂಗ]ದೆ ಲಕ್ಷ್ಮೀಧರಶಚಿವಂ–

೧೧೫. ಗಾಚಂದ್ರಾರ್ಕ್ಕಮೊದವಿದಾಯುಂ ಶ್ರೀಯು–

೧೧೬. ಂ[।*] ಸಂಗತಿವಡದಿರೆ ಬರೆದಂ ಮಂಗಳಮಯ–

೧೧೭. ವಾಗೆ ಮಧುರನೀ ಶಾಸನಮಂ ॥[೫೭*] ಬಗೆಗೊಳ್ವಂತಿವರ–

೧೧೮. ಂ ಮೆಚ್ಚಿಸಿದ ಸುಕವಿ ಸುಕ್ಷೇತ್ರಹಸ್ತ್ಯಶ್ವಭೂ

೧೧೯. ಷಾದಿಗಳಂ ಮುಂಪೆತ್ತೊಂಡಂ[ಭೂಭರದೊ]ಳಣಿ–

೧೨೦. ಯದೀ ಲೋಕಮೆಂದೆಂಬುದು[।*]ಗಮು[ಂ]ವೇಳ–

೧೨೧. ಳ್ಕವೀಂದ್ರಾಭರಣಮಧುರನಂ ಮಾ(ಂ)ನ್ಯನಂ ಗೊ–

೧–೧. 'ಧಾತ್ರೀ' ಅನವಶ್ಯಕ   ೨. 'ನ' ಇರಬಹುದು

೧೨೨. ಡಿ ತಂನಿಂ ಮಿಗಿಲೆಂಬಂತಳ್ಳಱಿಂ............ನವ-
೧೨೩. ನಿಯೊಳ್ಮಂತ್ರಿಲಕ್ಷ್ಮೀಧರಾಂಕಂ ‖[೫೮*]ಗಣಿದಂಗೊ-
೧೨೪. ಳ್ವೆಡೆ ಮಿಕ್ಕಿನಕ್ಕರದ ಮಾತಂತಿ[ರ್ಕ್ಕೆ]ತನ್ನಾಣೆ
೧೨೫. ಘೋಷಣೆ ಸಲ್ಗುಂ ಸುಕವೀಂದ್ರ ಉ್ರಂದಸಭೆಯೊ
೧೨೬. ಳ್ ತಾನೆಂದೊಡಂಮಂಮ ಧಾ[।*]ರಿಣಿಯೊಳ್ಕೇಳ್ದಱಿಯಾ-
೧೨೭. ರ್ಜಡಾ ಮಧು[ರ]ನಂ [ನಿ]ರ್ನ್ನಿಃತ ಕರ್ನ್ನಾಟಲಕ್ಷ್ಮಣ-
೧೨೮. ಪಾದಸರೋಜನಂ ಪ್ರವಿಲಸದ್ಧಾತ್ರೀಮುಖಾಂಭೋ-
೧೨೯. ಜನಂ ‖[೫೯*]ಯೀ ಸಿದ್ಧಶಾಸನಂ ಕೈಲಾಸಂ ಹಿಮಗಿರಿ ಸು-
೧೩೦. ಮೇರು ವಾರಾಶಿ[ನಿಲಂ][।*]ನೇಸಱು ನೆಗಳ್ವಿನಮೆಂದುಂ
೧೩೧. ಮಾಸದೆ ಮಸುಳಿಸದೆ ನಿಲ್ಕೆ ನಿಃ(ಪ್ರ)ತ್ಯೂಹಂ ‖[೬೦*]

ಇದೇ ಕಲ್ಲಿನ ತಲೆಯ ಮೇಲೆ

೧೩೨. ಹರಿಹರದ
೧೩೩. ಧರಣೋಜ-
೧೩೪. ನ ಬರಹ[‖*]

❖❖

ಅನುಬಂಧ

೧. ಶಾಸನಗಳ ವಿಷಯ
೨. ಪಾರಿಭಾಷಿಕ ಪದಗಳು

ಶಾಸನಗಳ ವಿಷಯ

೧. ಹಲ್ಮಿಡಿ ಶಾಸನ

ಕದಂಬ ಕಾಕುತ್ಸ್ಥ ಭಟ್ಟಾರಕನು ಆಳುತ್ತಿರುವಾಗ, ನರದಾವಿಳೆ ನಾಡಿನ ಮೃಗೇಶ ಹಾಗೂ ನಾಗರೆಂಬ ವೀರಭಟರು–ಬಟರಿಕುಲದ ಅಳಪವಂಶಕ್ಕೆ ಸಂಬಂಧ ಪಟ್ಟ ಸರಕ್ಕೆಲ್ಲಭಟರಿಯ ಪ್ರೀತಿಯ ಮಗನಾದ–ವಿಜಅರಸನಿಗೆ ಕೇಕಯ, ಪಲ್ಲವರನ್ನು ಪರಾಜಯಗೊಳಿಸಿದ ನಿಮಿತ್ತ ಪಲ್ಮಡಿ, ಮೂಟವಳ್ಳಿ ಗ್ರಾಮಗಳನ್ನು ದಾನವಾಗಿ ಕೊಟ್ಟರು.

ಇಬ್ಬರೂ (ಮೃಗೇಶ, ನಾಗ) ಮತ್ತು ಸಟ್ಪಜ್ಗದ ವಿಜಾರಸರೂ ಕೂಡಿ ಪಲ್ಮಡಿಗೆ ಕುಱುಮ್ಬಿಡಿ (ಸಣ್ಣ ದತ್ತಿ?)ಯನ್ನು ಬಿಟ್ಟರು.

ಹತ್ತರಲ್ಲಿ ಒಂದು ಭಾಗದಷ್ಟು ಗದ್ದೆಯನ್ನು ತೆರಿಗೆಯಿಂದ ವಿಮುಕ್ತಗೊಳಿಸಿ ಭಟ್ಟರಿಗೆ ಕೊಡಲಾಯಿತು.

–ಹೀಗೆ ಇದರಲ್ಲಿ ಮೂರು ದಾನಗಳಿವೆ (ಒಂದನೆದು ೧–೧೩, ಎರಡನೆಯದು ೧೪–೧೫, ಮೂರನೆಯದು ೧೬). ಮೊದಲ ಸಾಲು ಶಾಸನದ ಶಿರೋಭಾಗದಲ್ಲಿರುವ ಸುದರ್ಶನ ಚಕ್ರದ ಸುತ್ತ, ಕೊನೆಯ ಸಾಲು ಶಾಸನದ ಎಡಮಗ್ಗುಲಲ್ಲಿ ಕೆತ್ತಲಾಗಿದೆ.

ಮೊದಲಸಾಲಿನ ಸಂಸ್ಕೃತ ಶ್ಲೋಕವನ್ನು ಬಿಟ್ಟರೆ, ಸಂಪೂರ್ಣಶಾಸನ ಕನ್ನಡ ಗದ್ಯದಲ್ಲಿದೆ. ಭರಿತೋನ್, ಕಳ್ದೋನ, ಅಟೆವೋನ್ (ಪ್ರ, ಪು, ಏ, ವ.). ಕೊಟ್ಟಾರ್, ವಿಟ್ಟಾರ್, ಅಪ್ಪೋರ್ (ಪ್ರ, ಪು, ಬ, ವ) ಅದಾನ್ (ದ್ವಿತೀಯಾ ದೀರ್ಘ), ಭಟರಿಯಾ, ಕಲಭೋರನಾ (ಷ, ದೀರ್ಘ), ನಾಡುಳ್, ಆಹವದುಳ್ (ಸಪ್ತಮಿ), ಎಜೆದು, (ಇ>ಎ ವ್ಯತ್ಯಾಸ), ಪಲ್ಮಡಿಉಂ, ಮೂಟವಳ್ಳಿಉಂ (ವಿಸಂಧಿ)–ಈ ಪ್ರಯೋಗಗಳನ್ನೂ ಪೊಗಟೆಪ್ಪೊಟ್ಟಣ, ಪೆತ್ತಜಯನ್, ಬಾಳ್ಗೆಟ್ಟು, ಸಟ್ಮಜ್ಗದರ್, ಕುಱುಮ್ಬಿಡಿ, ಪತ್ತೊನ್ದಿ–ಈ ಮೊದಲಾದ ಅಪೂರ್ವ ಪದಗಳನ್ನೂ ಗಮನಿಸಬೇಕು. ಬಂಧದ ದೃಷ್ಟಿಯಿಂದ ಕನ್ನಡದ ಎಳಮೆ, ಸಂಸ್ಕೃತದ ಪ್ರೌಢಿಮೆಗಳು ಇಲ್ಲಿ ಕಾಲೂರಿ ನಿಂತಿವೆ. (ಹಲ್ಮಿಡಿ ಶಾಸನದ ಪ್ರೇಮಾಲಯಸುತನ್: ಮಾರ್ಗ–೨, ಎಂ.ಎಂ. ಕಲಬುರ್ಗಿ).

೨. ತಮಟಕಲ್ಲು ಶಾಸನ

ಶೌರ್ಯ ಹಾಗೂ ಸೌಂದರ್ಯಗಳ ಸಾಕಾರಮೂರ್ತಿಯಾದ ಗುಣಮಧುರನ ಸುಂದರ ವ್ಯಕ್ತಿಚಿತ್ರಣ ಈ ಶಾಸನದಲ್ಲಿದೆ. ಇದು ಕನ್ನಡ ಸಾಹಿತ್ಯದ ಮೊದಲ ಪದ್ಯವೆಂದು ವಿದ್ವಾಂಸರ ಅಭಿಪ್ರಾಯ. ಅತ್ಯಷ್ಟಿ ಛಂದಸ್ಸಿನ ಕನಕಾಬ್ಜಿನೀ ಹೆಸರಿನ ಅಪೂರ್ವ ವೃತ್ತವಿದು.

೩. ಬಾದಾಮಿ ಶಾಸನ

ಮಂಗಲೀಶನ ಕಲ್ಮನೆಗೆ ಹಾಗೂ ದೇವರ ಮಾಲೆಗಾರನಿಗೆ ಕೊಟ್ಟ ದಾನವನ್ನು ಅಪಹರಿಸಕೂಡದು ಎಂದು ಹೇಳುತ್ತದೆ, ಈ ಶಾಸನ. ಭಾಷೆಯ ವಿಶಿಷ್ಟರೂಪ ನಿರಾಂಡಂಬರ ಗದ್ಯಶೈಲಿ, ಕೇವಲ ಘಟನೆಯನ್ನು ಹೇಳಿ ಮುಗಿಸುವ ರೀತಿಗಳನ್ನು ಇಲ್ಲಿ ಕಾಣಬುದು.

೪. ಬಳ್ಳಿಗಾವೆ ಶಾಸನ

ಬಾದಾಮಿ ಚಾಲುಕ್ಯ ವಿನಯಾದಿತ್ಯನ ಆಳಿಕೆಯಲ್ಲಿ ನಾಗರಖಂಡವನ್ನು ಸೇಂದ್ರರ ಪೊಗಿಲ್ಲಿ ಸಾಮಂತನಾಗಿ ಆಳುತ್ತಿರುವಾಗ, ಅಧಿಕಾರಿಯಾದ ಕಾಂದರ್ಬ(?) ಹಾಗೂ ಬಳ್ಳಿಗಾವೆಯ ದಾಸಡಿ ಮುಂತಾದವರು ಹಿರಿಯ ಒಸಗೆ, ಅಲವಣ ಮತ್ತು ಅಪುತ್ರಕ ಧನವನ್ನು ರಾಜಶ್ರಾವಿತಮಾಡಿ (ರಾಜನಿಗೆ ತಿಳಿಸಿ) ಬಿಟ್ಟುಕೊಟ್ಟರೆಂಬುದು ಈ ಶಾಸನದ ವಿಷಯ. ಪೂರ್ವದ ಹಳಗನ್ನಡದ ನಿರಾಭಾರಣ ಸುಂದರ ಗದ್ಯಕ್ಕೆ ಇದೊಂದು ಒಳ್ಳೆಯ ಮಾದರಿಯೆನಿಸಿದೆ.

೫. ಬಾದಾಮಿ ಶಾಸನ

ಶಿಷ್ಟರಿಗೆ ಶಿಷ್ಟನಾಗಿ, ಪ್ರಿಯರಿಗೆ ಪ್ರಿಯನಾಗಿ ಬಾಧಿಸುವ ಕಲಿಗೆ ಮಾಧವ ನಾಗಿರುವ 'ಕಲಿಯುಗವಿಪರೀತ'ನಾದ ಕಪ್ಪೆಅರಭಟ್ಟನ ರುದ್ರ–ಶಿವ ವ್ಯಕ್ತಿತ್ವದ ಚಿತ್ರಣ ಈ ಶಾಸನದ ವಸ್ತು. ಮೊದಲ ಎರಡು ಸಾಲು ಗದ್ಯ. ಮುಂದಿನ ಎರಡು ಸಾಲು ಶ್ಲೋಕ, ಆಮೇಲೆ ಮೂರು ತ್ರಿಪದಿಗಳಿವೆ. ಇವು ಉಪಲಬ್ಧ ಪ್ರಥಮ ತ್ರಿಪದಿಗಳು. ಒಂದರ್ಥದಲ್ಲಿ ಇದು ಪ್ರಶಸ್ತಿ ಶಾಸನ. 'ಕಪ್ಪೆ ಅರಭಟ್ಟ' ಎಂಬುದು ಕುತೂಹಲಕಾರಿ ಹೆಸರು. ಶಾಸನಗಳಲ್ಲಿ ಬರುವ ಕಪ್ಪೆಯರ ಚಾವುಂಡರಾಯ, ಕಪ್ಪೆಯರ ಆಹಾರದಾನ ಮೊದಲಾದವುಗಳ ಹಿನ್ನೆಲೆಯಲ್ಲಿ ಈ ಹೆಸರಿನ ಒಗಟನ್ನು ಬಿಡಿಸಬೇಕಾಗಿದೆ. (ನೋಡಿರಿ: ಕಪ್ಪೆ ಅರಭಟ್ಟ: ಮಾರ್ಗ–೨, ಎಂ.ಎಂ. ಕಲಬುರ್ಗಿ). ಕೊನೆಯ ಎರಡು ತ್ರಿಪದಿಗಳ ಭಾವ ಸ್ಪಷ್ಟ; ಅರ್ಥ ಅಸ್ಪಷ್ಟ.

೬. ಶ್ರವಣಬೆಳಗೊಳ ಶಾಸನ

ಕಳಂತೂರಮುನಿಯ ಸಮಾಧಿಮರಣದ ವರ್ಣನೆಯಿದು. ಆತನು ಸಮಾಧಿಯನ್ನು ಹೊಂದುವ ಮೊದಲು ಕೈಕೊಂಡ ತಪಸ್ಸಿನ ಭೀಕರತೆಯನ್ನು ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ಚೆನ್ನಾಗಿ ನಿರೂಪಿಸಲಾಗಿದೆ. ಇದು ನಿಷಧಿ ಶಾಸನ.

೭. ಶ್ರವಣಬೆಳಗೊಳ ಶಾಸನ

ಶ್ರೀಸಂಘದ ಮಾಸೇನಮುನಿಯು ಕಬ್ಬಪ್ಪಿನಲ್ಲಿ ಸಮಾಧಿಮರಣ ಹೊಂದಿದುದನ್ನು ಶಾರ್ದೂಲವಿಕ್ರೀಡಿತ ವೃತ್ತದಲ್ಲಿ ಹೇಳಲಾಗಿದೆ. ಇದು ನಿಷಧಿ ಶಾಸನ.

೮. ಶ್ರವಣಬೆಳಗೊಳ ಶಾಸನ

ನಂದಿಸೇನ ಮುನಿಯ ಸಮಾಧಿಮರಣವನ್ನು ಸಾರ್ಥಕ ರೀತಿಯಲ್ಲಿ ಚಿತ್ರಿಸುತ್ತಿದೆ, ಈ ನಿಷಧಿ ಶಾಸನ. ಲೌಕಿಕ ವಸ್ತುಗಳ ಕ್ಷಣಿಕತೆಯನ್ನು ಸಮರ್ಥವಾದ ಹೋಲಿಕೆಗಳಿಂದ ಅಭಿವ್ಯಕ್ತಗೊಳಿಸಿದ ಈ ಶಾಸನಕ್ಕೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವಿದೆ.

೯. ಮಹಾಕೂಟ ಶಾಸನ

ಬಾದಾಮಿ ಚಾಲುಕ್ಯ ವಿಜಯಾದಿತ್ಯನ ಪ್ರಾಣವಲ್ಲಭೆಯಾದ ಸೂಳೆ ವಿನಾಪೋಟಿಯು ಎಲ್ಲ ದಾನಗಳ ಜೊತೆಗೆ ಹಿರಣ್ಯಗರ್ಭವೆಂಬ ಮಹಾದಾನವನ್ನೂ ದೇವರಿಗೆ ಸುವರ್ಣಪೀಠ, ಬೆಳ್ಳಿಯ ಕೊಡೆಗಳನ್ನೂ ಮಂಗಲವೆಂಬ ಗ್ರಾಮದಲ್ಲಿ ಎಂಟುನೂರು ಕ್ಷೇತ್ರ ಭೂಮಿಯನ್ನೂ ದಾನ ಮಾಡಿದಳು. ಇಲ್ಲಿಯ ಗದ್ಯಶೈಲಿಯನ್ನು 'ಮಗಳು' ಎಂಬ ಪ್ರಯೋಗವನ್ನೂ ಗಮನಿಸಬೇಕು.

೧೦. ಪಟ್ಟದಕಲ್ಲು ಶಾಸನ

ಬಾದಾಮಿ ಚಾಲುಕ್ಯರ ಇಮ್ಮಡಿ ವಿಕ್ರಮಾದಿತ್ಯನು ಪಲ್ಲವರ ಕಂಚಿಯನ್ನು ಮೂರುಸಲ ಪಾದಾಕ್ರಾಂತ ಮಾಡಿದುದರ ಸ್ಮಾರಕವಾಗಿ ಮಹಾರಾಣಿ ಲೋಕಮಹಾದೇವಿ ಲೋಕೇಶ್ವರ ದೇವಾಲಯವನ್ನು ಕಟ್ಟಿಸಿದಳು. ಆ ದೇವಾಲಯದ ಶಿಲ್ಪಿ ಸರ್ವಸಿದ್ಧಿ ಆಚಾರಿಯ ಶಿಲ್ಪಕ್ಕೆ ಮೆಚ್ಚಿ 'ಪೆರ್ಜಜೆಪು'ಗೆಯ್ದ ವಿಷಯವನ್ನೊಳಗೊಂಡಿದೆ ಈ ಶಾಸನ.

೧೧. ಸುರಗೂರು ತಾಮ್ರಶಾಸನ

ಗಂಗ ಶ್ರೀಪುರುಷ ಧಣ್ಣಗವಾಡಿಯನ್ನು, ಅವನ ಸಾಮಂತ ಮುದುಕೊಂಗುಣಿಯು ಪೆರ್ವಟ್ಟಿಯೂರು, ಮರ್ದೂರುಗಳನ್ನು ಕೆಸುಗೊಳದ ಮಹಾಜನರಿಗೆ 'ಬ್ರಹ್ಮಾದೇಯ'ವಾಗಿ ನೀಡಿದುದು ಈ ಶಾಸನದ ವಿಷಯ. ಸಂಸ್ಕೃತ–ಕನ್ನಡಗಳ ಒಂದು ವಿಶಿಷ್ಟ ಮಿಶ್ರಣ ಈ ಶಾಸನದಲ್ಲಿದೆ.

೧೨. ಮಾವಳಿ ಶಾಸನ

ರಾಷ್ಟ್ರಕೂಟ ಚಕ್ರವರ್ತಿ ೩ನೆಯ ಗೋವಿಂದನ ಆಳಿಕೆಯಲ್ಲಿ ಬನವಾಸಿ ಮಂಡಲವನ್ನು ರಾಜಾಧಿತ್ಯ, ಆಳುವಖೇಡ-೬೦೦೦ವನ್ನು ಚಿತ್ರವಾಹನ ಆಳುತ್ತಿದ್ದರು. ರಾಜಾದಿತ್ಯನು ಕಾಕರಸನೊಂದಿಗೆ ಚಿತ್ರವಾಹನನ ಪೆರ್ಗುಂಜಿ ಕೋಟೆಯ ಮೇಲೆ ದಾಳಿಯಿಟ್ಟನು. ಆ ಸಮಯದಲ್ಲಿ ಭೀಕರವಾದ ಕಾಳಗ ನಡೆದು ಚಿತ್ರವಾಹನನ ಕೈ ಮೇಲಾಗುವಂತಾಯಿತು. ಇದನ್ನು ಸಹಿಸದ ರಾಜಾದಿತ್ಯ ತನ್ನ ನೆಚ್ಚಿನ ಬಂಟನಾದ ಕುಲಮುದ್ದನಿಗೆ ಹೋರಾಡಲು ಆಜ್ಞೆಯಿತ್ತನು. ಸ್ವಾಮಿನಿಷ್ಠೆಯ ಈ ಬಂಟ. ಚಿತ್ರ ವಾಹನನ ಸೈನ್ಯವನ್ನು ಚೆನ್ನಾಗಿ ಸದೆಬಡಿದು ಹೋರಾಡುತ್ತಲೇ ರಣಾಂಗದಲ್ಲಿ ವೀರಮರಣವನ್ನಪ್ಪಿದ. ಎಂಟು ಜನ ಗಾಮುಂಡರ ಪ್ರತ್ಯಕ್ಷದಲ್ಲಿ ಅರಸನು ಕುಲಮುದ್ದನ ಹೆಸರಿನಲ್ಲಿ ಗದ್ದೆಯನ್ನು ಉಂಬಳಿಯಾಗಿ ಬಿಟ್ಟನು.

ಇದು ವೀರಗಲ್ಲು, ಯುದ್ಧದ ಸನ್ನಿವೇಶವನ್ನು ಕಣ್ಣು ತುಂಬುವಂತೆ ಕಂಡರಿಸಿದೆ. ಚಿಕ್ಕದಾದರೂ ಅಪೂರ್ವ ಶಾಸನವಿದು. ಬಾಣಗಳಿಂದ ಆವೃತನಾಗಿ ವೀರಮರಣವನ್ನಪ್ಪಿದ ಕುಲಮುದ್ದ ಶರಪಂಜರದ ಮೇಲೆ ಪವಡಿಸಿದ ಭೀಷ್ಮ ನಂತಿದ್ದನೆಂಬ ಹೇಳಿಕೆ ಪಂಪಭಾರತದ "ಮಱಿಲ್ದಂ... ಬಿದಿರ ಸಿಡಿಂಬಿನೊಳ್ ಪುದಿದದೊಂದು ಕುಳಾಚಳದಂತೆ ಸಿಂಧುಜಂ" (೧೧-೧೫) ಎಂಬ ಮಾತನ್ನು ನೆನಪಿಗೆ ತರುತ್ತದೆ. ಪಂಪಪೂರ್ವ ಯುಗದ ಕನ್ನಡ ಗದ್ಯಸಾಹಿತ್ಯದ ಸ್ವರೂಪವನ್ನರಿಯಲು ಇಂತಹ ಶಾಸನಗಳು ನೆರವಾಗಿ ನಿಲ್ಲುತ್ತವೆ.

೧೩. ಶಿರೂರ ಶಾಸನ

ಅಮೋಘವರ್ಷ ನೃಪತುಂಗನ ಮಾಂಡಲಿಕ ದೇವಣಯ್ಯನು ಅಣ್ಣಿಗೆರೆಯಲ್ಲಿದ್ದು ಶ್ರೀಪುರದ ರಕವಿಯ್ಯ ಮುಂತಾದ ಇನ್ನೂರು ಮಹಾಜನರಿಗೆ 'ತುಪ್ಪದೆಱೆ' ಬಿಟ್ಟುದನ್ನು ಹೇಳುವುದು ಈ ಶಾಸನದ ಪ್ರಮುಖ ವಿಷಯ. ಇಲ್ಲಿಯ ವೈಭವಪೂರ್ಣ ಬಿರುದಾವಳಿ, ಕನ್ನಡ ಶಾಸನಗಳು 'ಮಾರ್ಗ'ಕ್ಕೆ ಸಂಕ್ರಮಿಸುತ್ತಿದ್ದುದನ್ನು ತಿಳಿಸುತ್ತದೆ.


೧೪. ಕಳಸ ಶಾಸನ

ರಾಷ್ಟ್ರಕೂಟ ಚಕ್ರವರ್ತಿ ೪ನೆಯ ಗೋವಿಂದನು ತುಳಾಪುರುಷನಾದ ಸಂದರ್ಭದಲ್ಲಿ ತನ್ನ ದಂಡನಾಯಕರಾದ ರೇವದಾಸ, ವೀಸೋತ್ತರ ದೀಕ್ಷಿತರಿಗೆ ಕಾಡಿಯೂರು(ಕಳಸ)ನ್ನು ದಾನ ಮಾಡಿದುದು ಇಲ್ಲಿಯ ವಿಷಯ. ಕಾಡಿಯೂರು, ೨೦೦ ಮಹಾಜನರನ್ನೊಳಗೊಂಡ ಒಂದು ಸುಪ್ರಸಿದ್ಧ ಅಗ್ರಹಾರ. ಈ ಗ್ರಾಮದ ಸೊಬಗನ್ನೂ ಅಲ್ಲಿಯ ಮಹಾಜನರ ಲೋಕಪ್ರಸಿದ್ಧಿಯನ್ನೂ ವಿವರಿಸುವ ಇದು, ಕನ್ನಡ ಶಾಸನ ಸಾಹಿತ್ಯದ ಸುದೀರ್ಘವೂ ಚಂಪೂಶೈಲಿಯುತವೂ ಆದ ಪ್ರಥಮ ಶಾಸನ. ಕವಿರಾಜಮಾರ್ಗ ಹಾಗೂ ಪಂಪನ ಮಧ್ಯಕಾಲಾವಧಿಯ ಚಂಪುವಿನ ಕೃಷಿಯನ್ನು ತಿಳಿಸಿಕೊಡುವ ಈ ಶಾಸನವನ್ನು ಬರೆದವ ಕವಿರಾಜರಾಜ.

೧೫. ಕುರ್ಕಿಮಾಲ್ ಶಾಸನ

ಮಹಾಕವಿ ಪಂಪನ ತಮ್ಮನಾದ ಜಿನವಲ್ಲಭನು (ಅಣ್ಣ ಪಂಪನ ಸ್ಮಾರಕವಾಗಿ?) ಸಬ್ಬಿನಾಡ ನಟ್ಟನಡುವಿರುವ ಧರ್ಮಪುರದ ಉತ್ತರಭಾಗದ ವೃಷಭಗಿರಿ (ಈಗ ಕರೆಯುವ ಹೆಸರು ಬೊಮ್ಮಲಗುಟ್ಟ=ಗೊಂಬೆಗಳ ಗುಡ್ಡ)ಯ ಮೇಲೆ ಆದಿ ಮತ್ತು ಅಂತ್ಯ ಜಿನಪ್ರತಿಮೆಗಳನ್ನು, ಚಕ್ರೇಶ್ವರಿಯನ್ನು, ಬೇರೆ ಕೆಲವು ಜಿನಪ್ರತಿಮೆಗಳನ್ನು, ತ್ರಿಭುವನತಿಲಕವೆಂಬ ಬಸದಿಯನ್ನು, ಗಿರಿಯ ಕೆಳಗೆ ಮದನವಿಳಾಸವೆಂಬ ಬನವನ್ನು, ಕವಿತಾಗಣಾರ್ಣವೆಂಬ ಕೆರೆಯನ್ನು ನಿರ್ಮಿಸಿದುದು ಈ ಶಾಸನದ ವಿಷಯ. ಈಗ ಇವುಗಳಲ್ಲಿ ಬನ, ಬಸದಿಗಳು ಇಲ್ಲ; ಕೆರೆಯನ್ನು 'ಪಾತಚೆರು' (=ಪುರಾತನ ಕೆರೆ) ಹೆಸರಿನಿಂದ ಕರೆಯುತ್ತಾರೆ. ಗುಡ್ಡದ ದಕ್ಷಿಣ ತಟದಲ್ಲಿದ್ದಿರ ಬಹುದಾದ ಧರ್ಮಪುರ ಈಗ ಭೂಗತವಾಗಿದೆ.

'ವಾಗ್ವಧೂವರವಲ್ಲಭ'ನೆನಿಸಿದ ಜಿನವಲ್ಲನು ಪಂಪನ ತಮ್ಮ. ವೆಂಗಿಪಳುವಿನಲ್ಲಿದ್ದ ಈತನ ಪೂರ್ವಜರು ಅಭಿಮಾನಚಂದ್ರನ ಕಾಲಕ್ಕೆ ಗುಂಡಿನದಿ ತೀರದ ನಿಡುಗೊಂಡೆಯಲ್ಲಿ ನೆಲಸಿದ್ದರು; ಜಿನವಲ್ಲಭನ ಗುರು ಜಯಣನ್ದಿ, ಈತ ಪಂಡ ರಂಗಪಲ್ಲಿಯವ (ಈಗಿನ ಪಂಡರಪುರ?); ಪಂಪನ ತಾಯಿ ಅಣ್ಣಿಗೆರೆಯ ಜೋಯಿಸ ಸಿಂಘನ ಮೊಮ್ಮಗಳಾದ ಅಬ್ಬಣಬ್ಬೆ, ತಂದೆ ಭೀಮಪಯ್ಯ (ಪಂಪಭಾರತದಲ್ಲಿಯ ಅಪಪಾಠದಿಂದಾಗಿ ಅಭಿರಾಮದೇವರಾಯನೆಂದು ಈ ವರೆಗೆ ಭಾವಿಸಲಾಗಿದ್ದಿತು). ಪಂಪನಿಗೆ ದತ್ತಿಯಾಗಿ ಸಂದ ಧರ್ಮಪುರವಿದ್ದುದು ಈ ವೃಷಭಾದ್ರಿಯ ದಕ್ಷಿಣ ತಟದಲ್ಲಿ–ಈ ಮೊದಲಾದ ಅಂಶಗಳು ಪ್ರಸ್ತುತ ಶಾಸನದಿಂದ ಪ್ರಥಮ ಬಾರಿಗೆ ಗೊತ್ತಾಗುತ್ತವೆ. ವೆಂಗಿಪಳು, ನಿಡುಗೊಂಡೆಗಳು ಈಗಿನ ಆಂಧ್ರ ಪ್ರದೇಶದ ಬಾಪಟ್ಲ ತಾಲೂಕಿನಲ್ಲಿವೆ. ಶಾಸನವಿರುವ ವೃಷಭಗಿರಿಯು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕುರ್ಕಿಯಾಲ್ ಗ್ರಾಮದ ನೆರೆಯಲ್ಲಿದೆ. ವೃಷಭಾದ್ರಿಯ ತಲೆಯ ಮೇಲಿರುವ ಸಿದ್ಧಶಿಲೆಯೆಂಬ ಹೆಸರಿನ ದೊಡ್ಡ ಬಂಡೆಯ ಮೇಲೆ ಈ ಶಾಸನವನ್ನು ಕೆತ್ತಲಾಗಿದೆ. (ಅಣ್ಣನ ಸ್ಮಾರಕವಾಗಿ?) ತಾನು ಮಾಡಿಸಿದ ಮಹತ್ಕಾರ್ಯಗಳನ್ನೂ, ತನ್ನ ವ್ಯಕ್ತಿತ್ವವನ್ನೂ ಹೇಳಿಕೊಳ್ಳುವುದರಿಂದ ಇದು. ಒಂದರ್ಥದಲ್ಲಿ ಜಿನವಲ್ಲಭನ ಪ್ರಶಸ್ತಿಶಾಸನ ವಾಗಿದೆ. ಪಂಪನಿಗೆ ಧರ್ಮಪುರವನ್ನು ನೀಡುವಾಗ ಅರಿಕೇಸರಿ ಬರೆಯಿಸಿದ ಶಾಸನ ಈಗ ಸಿಗುವುದಿಲ್ಲ. ಜಿನವಲ್ಲಭನು ತನ್ನ ಈ ಶಾಸನದಲ್ಲಿ "ಪೋಗಿ ನೋಡು ಸಂದರ ವೃಷಭಾಚಳೋನ್ನತ ಶಿಳಾತಳದೊಳ್ ಬರೆದಕ್ಕರಂಗಳಂ" ಎಂದು ಹೇಳುವುದರಿಂದ ಅದನ್ನು ಈ ವೃಷಭಾದ್ರಿಯ ಮೇಲೆಯೇ ಇನ್ನೊಂದು ಕಡೆ ನಿಲ್ಲಿಸಿರಬೇಕು. ಹುಡುಕಿದರೆ ದೊರೆಯುವ ಸಂಭವವಿದೆ. ಪ್ರಸ್ತುತ ಶಾಸನದಿಂದ ತಿಳಿದುಬರುವ ವಂಶಾವಳಿ ಹೀಗಿದೆ:



ಈ ಶಾಸನದಲ್ಲಿ ಸಂಸ್ಕೃತ, ಕನ್ನಡ ತೆಲುಗು ಭಾಷೆಗಳನ್ನು ಬಳಸಲಾಗಿದೆ. ಇಲ್ಲಿಯ ೩ ಕಂದಪದ್ಯಗಳು ತೆಲುಗು ಸಾಹಿತ್ಯದ ಪ್ರಥಮ ಕಂದಪದ್ಯಗಳು. ಈ ಶಾಸನ ಪಾಠವನ್ನು ಜಿನವಲ್ಲಭನೇ ಸಿದ್ಧಗೊಳಿಸಿರಲು ಸಾಧ್ಯವಿದೆ. 'ವಾಗ್ವಧೂವರ ವಲ್ಲಭ'ನಾದ ಈತನ ಸಾಹಿತ್ಯಕೃತಿಗಳ ಸಂಶೋಧನೆಯಾಗಬೇಕಾಗಿದೆ.

೧೬. ಅತಕೂರ ಶಾಸನ

ರಾಷ್ಟ್ರಕೂಟ ೩ನೆಯ ಕೃಷ್ಣ ಹಾಗೂ ಚೋಳ ರಾಜಾದಿತ್ಯರ ಮಧ್ಯೆ ಏರ್ಪಟ್ಟ ತಕ್ಕೋಲ ಕಾಳಗದಲ್ಲಿ, ಬೂತುಗ ಮತ್ತು ಆತನ ಅಂಕಕಾರ ಮಣಲರತರು ಕಲಿತನದಿಂದ ಕಾದಿದರು. ಇದನ್ನು ಮೆಚ್ಚಿದ ೩ನೆಯ ಕೃಷ್ಣನು ಬೂತುಗನಿಗೆ ಬನವಸೆ–೧೨೦೦೦, ಬೆಳ್ವೊಲ–೩೦೧, ಪುರಿಗೆರೆ–೩೦೦, ಕಿಸುಕಾಡು–೭೦, ಬಾಗೆನಾಡು–೭೦ ಪ್ರದೇಶಗಳನ್ನು ನೀಡಿದನು. ಬೂತುಗನ್ ಮಣಲರತನಿಗೆ ಆತಕೂರ–೧೨, ಬೆಳ್ವೊಲದ ಕೋಟೆಯೂರುಗಳನ್ನು "ಬಾಳ್ಗಚ್ಚು" ಕೊಟ್ಟು ಗೌರವಿಸಿದನು.

ಮಣಲರತನು ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿದುದಕ್ಕೆ ಪ್ರತಿಫಲವಾಗಿ ಒಡೆಯ ಬೂತುಗನಿಂದ ಕಾಳಿಯೆಂಬ ನಾಯಿಯನ್ನು ಬೇಡಿಪಡೆದನು. ಒಂದು ದಿನ ಕೆಳಲೆನಾಡ ಬೆಳತೂರ ಹಳ್ಳಿಯ ಪಶ್ಚಿಮದ ಬೆಟ್ಟದಲ್ಲಿ ಆ ನಾಯಿ ದೊಡ್ಡಹಂದಿಯೊಡನೆ ಕಾದಿ, ಅದನ್ನು ಕೊಂದು ತಾನೂ ಸತ್ತಿತು. ಮಣಲರತ ನಾಯಿಯ ಸ್ಮಾರಕವಾಗಿ ಆತಕೂರಿನಲ್ಲಿ ವೀರಗಲ್ಲು ನಿಲ್ಲಿಸಿದನು. ಕರ್ನಾಟಕದಲ್ಲಿ ಇದೊಂದು ಅಪೂರ್ವ ವೀರಗಲ್ಲು. ಇಂತಹ ಇನ್ನೊಂದು ವೀರಗಲ್ಲು ಅನಂತಪುರ ಜಿಲ್ಲೆಯ ಮಡಕಶಿರಾ ತಾಲೂಕಿನ ಫಲರಾಂಗೊಲ್ಲರಹಟ್ಟಿ ಊರಲ್ಲಿದೆ. (ನೋಡಿರಿ: SII IX-i 37).

ಅಂಬಾರಿಯೇ ರಣಭೂಮಿಯಾಗಿ ಕಾದಿದುದು ಈ ಯುದ್ಧದ ವೈಶಿಷ್ಟ್ಯ. ರಾಜದಿತ್ಯನ ಆನೆಯ ಹೆಸರು "ಚೋಳನ ಕೋಟೆ" ಎಂದೂ ಮಣಲರತನ ಕುದುರೆಯ ಹೆಸರು "ವೀರಲಕ್ಷ್ಮಿ" ಎಂದೂ ತಿಳಿದುಬರುತ್ತದೆ. ಈ ಯುದ್ಧವಿಜಯವನ್ನೇ ವಸ್ತುವಾಗಿಟ್ಟುಕೊಂಡು ಪೊನ್ನನು ರಾಮಾಭ್ಯುದಯವನ್ನು ಬರೆದಿರಬಹುದೆಂದು ಪಂಡಿತರ ಊಹೆ. (ಪೊನ್ನನ ಭುವನೈಕ ರಾಮಾಭ್ಯುದಯ, ಪ್ರಬುದ್ಧ ಕರ್ನಾಟಕ ೧೫–೪ ನೋಡಿರಿ).

೧೭. ದಾನವುಲಪಾಡು ಶಾಸನ

ರಾಷ್ಟ್ರಕೂಟ ೩ನೆಯ ಇಂದ್ರನ (?) ಸೇನಾಪತಿಯಾದ ಶ್ರೀವಿಜಯನ ಶೌರ್ಯ–ಸ್ವಾಮಿನಿಷ್ಠೆ, ಐಹಿಕ–ಪಾರಮಾರ್ಥಿಕ ದೃಷ್ಟಿಗಳನ್ನು ಚಿತ್ರಿಸುತ್ತದೆ, ಈ ಶಾಸನ. ಅರಿವಿಂಗೋಜ, ಅನುಪಮಕವಿ (ಕಲಿ?) ಬಿರುದುಗಳು ಗಮನಾರ್ಹ. ಕನ್ನಡ ಮತ್ತು ಸಂಸ್ಕೃತ ಕಂದಪದ್ಯಗಳಲ್ಲಿ ಮುಂದುವರಿಯುವ ಇದು ಶ್ರೀವಿಜಯನ ಪ್ರಶಸ್ತಿ ಶಾಸನವಾಗಿದೆ.

೧೮. ಜುರ ಶಾಸನ

ಮಧ್ಯಪ್ರದೇಶದ ಜಬ್ಬಲಪುರ ಬಳಿಯ ಜುರ ಗ್ರಾಮದಲ್ಲಿ ದೊರೆತ ಕನ್ನಡ ಶಾಸನವಿದು. ರಾಷ್ಟ್ರಕೂಟ ೩ನೆಯ ಕೃಷ್ಣನ 'ಪರಾಂಗನಾಪುತ್ರ' ಬಿರುದನ್ನು ಇಲ್ಲಿ ಎತ್ತಿ ಹೇಳಲಾಗಿದೆ. ಈ ಪರಾಂಗನಾಪುತ್ರತ್ವವನ್ನೂ ಶೌರ್ಯ-ಸಾಹಸಗಳನ್ನೂ ತಿಳಿಸುವ ಇದು ಚಕ್ರವರ್ತಿ ಕೃಷ್ಣನ ಪ್ರಶಸ್ತಿ ಶಾಸನವಾಗಿದೆ. ಉತ್ತರಭಾರತದ ದಿಗ್ವಿಜಯ ಪ್ರಸಂಗದಲ್ಲಿ ಬರೆಯಿಸಿದ ಈ ಶಾಸನ ಕೃಷ್ಣನ ವಿಜಯಸ್ತಂಭದಂತಿದೆ.

೧೯. ಲಕ್ಕುಂಡಿ ಶಾಸನ

ಕಲ್ಯಾಣಚಾಲುಕ್ಯ ಚಕ್ರವರ್ತಿ 'ಆಹವಮಲ್ಲತೈಲಪ'. ತೈಲಪನ ಮಂತ್ರಿ ಧಲ್ಲ, ಧಲ್ಲನ ಹಿರಿಯಮಗ ನಾಗದೇವ. ನಾಗದೇವನ ಕುಲಪತ್ನಿ ಗುಣದಂಕಕಾರ್ತಿ ಅತ್ತಿಮಬ್ಬೆ. ಈಕೆಯ ಮಗ ಪಡೆವಳತೈಲನು ಮಾಸವಾಡಿ-೧೪೦ ಆಳುವಾಗ, ಈ ಹಿಂದೆ ತಾನು ಕಟ್ಟಿಸಿದ ೧೫೦೦ ಬಸದಿಗಳಿಗಿಂತ ಅಪೂರ್ವವಾದ ಬಸದಿಯನ್ನು ಲಕ್ಕುಂಡಿಯಲ್ಲಿ ನಿರ್ಮಿಸಿ ಸಕಳಗೂರ್ಜರ ವಿಜಯಾನಂತರ ಚಕ್ರವರ್ತಿಯಿಂದ ಹೊನ್ನಕಳಸ, ದತ್ತಿಗಳನ್ನು ಅತ್ತಿಮಬ್ಬೆ ಆ ಬಸದಿಗೆ ಪಡೆಯುತ್ತಾಳೆ.

ಮೂಲಶಾಸನ (SII XI-i-54) ಒಡೆದುಹೋಗಲು ಈ ಶಾಸನ (SII-XI-i-52)ವನ್ನು ನಕಲುಪ್ರತಿಯಂತೆ ಕೆತ್ತಿದ್ದಾರೆ. ಹೀಗೆ ಮಾಡುವಾಗ ಕೆಲವು ಹೊಸ ಸಂಗತಿಗಳನ್ನು ಸೇರಿಸಿದ್ದಾರೆ. ಈ ಶಾಸನದ ಉನ್ನತ ಕುಕ್ಕುಟೇಶ್ವರ..." "ಜಿನಪದ ಪಂಕಜಭ್ರಮರ" ಎಂಬ ಎರಡು ಪದ್ಯಗಳು ಅಜಿತಪುರಾಣ (೧-೬೦, ೬೮)ದಲ್ಲಿವೆ. ಈ ಕಾರಣದಿಂದಾಗಿ ಪ್ರಸ್ತುತ ಶಾಸನವನ್ನು ಅತ್ತಿಮಬ್ಬೆಯ ಆಶ್ರಯಪಡೆದ ರನ್ನ ಬರೆದಿರಬಹುದೆ? ಎಂದು ವಿದ್ವಾಂಸರು ಊಹಿಸುತ್ತಾರೆ.

ಅತ್ತಿಮಬ್ಬೆಯ ಪವಾಡಗಳು ಇಲ್ಲಿ ವರ್ಣಿತವಾಗಿದ್ದು ಕುಕ್ಕುಟೇಶ್ವರನ ದರ್ಶನ, ಪವಾಡ ಅಜಿತಪುರಾಣದಲ್ಲಿಯೂ ಗೋದಾವರಿ ದಾಟಿದ ಪವಾಡ ಬ್ರಹ್ಮಶಿವನ ಸಮಯಪರೀಕ್ಷೆ (೧-೩೯) ಮತ್ತು ಶ್ರವಣಬೆಳ್ಗೊಳದ ೭೩ನೆಯ ಶಾಸನ (ಕ್ರಿ.ಶ. ೧೧೩೯)ಗಳಲ್ಲಿಯೂ ಕಂಡುಬರುತ್ತದೆ. ಅತ್ತಿಮಬ್ಬೆಯ ಈ ಬಸದಿ ಒಮ್ಮೆ ಬಿದ್ದು ಹೋಗಲು ಭರತಾರ್ಯನಿಂದ, ಇನ್ನೊಮ್ಮೆ ಸುಟ್ಟುಹೋಗಲು (?) ನಾಕಿ ಮತ್ತು ಸಿರಿಪಾಳರಿಂದ ಜೀರ್ಣೋದ್ಧಾರಗೊಂಡಿತು. (ದಾನಚಿಂತಾಮಣಿ ಅತ್ತಿಮಬ್ಬೆ: ಸಮಾ ಲೋಕನ-ತೀನಂಶ್ರೀ. ಮತ್ತು ಮಾರ್ಗ-೨, ಎಂ.ಎ. ಕಲಬುರ್ಗಿ ನೋಡಿರಿ).

೨೦. ಮುಳಗುಂದ ಶಾಸನ

೧ನೆಯ ಸೋಮೇಶ್ವರನ ಸಂಧಿವಿಗ್ರಹಾಧಿಕಾರಿಯೂ ಅಗ್ಗಳದೇವನ ಮಗನೂ ಆದ ಬೆಳಖುದೇವನು, ತನ್ನ ತಾಯಿ ಗೊಜ್ಜಿಕಬ್ಬೆಯ ಪರೋಕ್ಷವಿನಯವಾಗಿ ನಯಸೇನ ಪಂಡಿತರ ಪಾದತೊಳೆದು, ತೀರ್ಥದ ಬಸದಿಗೆ ಭೂಮಿಯನ್ನು ದಾನ ವಾಗಿ ನೀಡಿದನು. ಈ ನಯಸೇನನು ಧರ್ಮಾಮೃತದ ನಯಸೇನನ ಗುರುವಿನ ಗುರು. "ಕರ್ಣಾಟ ಭಾಷಾಭೂಷಣದ" ೭೪ನೆಯ

ಸೂತ್ರದ ಕೆಳಗೆ ಬರುವ "ದೀರ್ಘೋಕ್ತಿರ್ನಯಸೇನಸ್ಯ" ಎಂಬ ಮಾತು ಈ ನಯಸೇನನ್ನೇ ಕುರಿತು ಹೇಳಿದುದಾಗಿರಬೇಕು. ಇದರ ಬಲದಿಂದ ಈತನು ಒಂದು ಕನ್ನಡ ವ್ಯಾಕರಣವನ್ನು ಬರೆದಿರಬಹುದೆಂದು ವಿದ್ವಾಂಸರು ಊಹಿಸುತ್ತಾರೆ. ಈತನ 'ಚಂದ್ರಕವಾಟಾನ್ವಯ'ವು ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕವಟೆ ಗ್ರಾಮವನ್ನು ಸೂಚಿಸುವು ದೆಂದು ವಿದ್ವಾಂಸರ ಹೇಳಿಕೆ. (ಚಂದ್ರಿಕಾವಾಟದ ಯತಿಗಳು ಪಿ. ಬಿ. ದೇಸಾಯಿ. ಸಾ. ಪ. ೬೫-೭ ಪು. ೪೧-೪೯).

ಈ ಶಾಸನದ "ಚಾಂದ್ರಂ ಕಾತಂತ್ರಂ...." "ನಿನಗೇನೆಂಬೆನೊ..." ಈ ಎರಡು ಪದ್ಯಗಳು ಲಕ್ಷ್ಮೇಶ್ವರ ಶಾಸನದಲ್ಲಿಯೂ ಇವೆ. (ನೋಡಿರಿ. EI. XVI p-58).

೨೧. ಕೋಗಳಿ ಶಾಸನ

ತ್ರೈಲೋಕ್ಯಮಲ್ಲದೇವ (ಸೋಮೇಶ್ವರ-೧)ನ ಕಾಲದಲ್ಲಿ ಇಂದ್ರಕೀರ್ತಿ ಮುನಿಯು, ಈ ಮೊದಲು ಗಂಗ ಅರಸು ದುರ್ವಿನೀತನಿಂದ ನಿರ್ಮಿತವಾದ ಬಸದಿಯನ್ನು ಉದಿತೋದಿತಗೊಳಿಸಿದ ವಿಷಯ ಈ ಶಾಸನದಲ್ಲಿದೆ. ಇಲ್ಲಿಯ ಲಲಿತರಗಳೆ ಗಮನಿಸಬೇಕಾದ ಛಂದೋರೂಪ. 'ತೋಮರರಗಳೆ' ಅಪರೂಪ ಹೆಸರು. (ನೋಡಿರಿ ತೋಮರರಗಳೆ-ಡಿ. ಎಲ್. ನರಸಿಂಹಾಚಾರ್ ಪ್ರ. ಕ ೩೪-೧) ಜೈನಧರ್ಮದ ಶೈಥಿಲ್ಯ, ಅದನ್ನು ಉಳಿಸಲು ನಡೆಸಿದ ಪ್ರಯತ್ನಗಳು ಇಲ್ಲಿ ಕಂಡುಬರುತ್ತವೆ.

೨೨. ಬೆಳತೂರು ಶಾಸನ

ದೇಕಬ್ಬೆಯ ಮಾಸ್ತಿಶಾಸನವಿದು. ನವಿಲೆನಾಡಿನ ಅಧಿಪತಿಯಾದ ತನ್ನ ಗಂಡ ಏಚನು ಯುದ್ಧದಲ್ಲಿ ಮಡಿದನೆಂದು ಕೇಳಿ ಅಗ್ನಿಪ್ರವೇಶ ಮಾಡುತ್ತಾಳೆ. ಈಕೆಯ ತಂದೆ ರವಿಗನು ಈ ಮಾಸ್ತಿಶಿಲೆ ನಿರ್ಮಿಸಿದ. ಸಾಹಿತ್ಯ, ಸಂಸ್ಕೃತಿ ದೃಷ್ಟಿಯಿಂದ ಬೆಲೆಯುಳ್ಳ ಸ್ಮಾರಕವಿದು.

೨೩. ಶ್ರವಣಬೆಳಗೊಳ ಶಾಸನ

ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲದೇವಿ, ಬೆಳ್ಗೊಳತೀರ್ಥದಲ್ಲಿ ಸವತಿ ಗಂಧಾವರಣ ಜಿನಾಲಯವನ್ನು ನಿರ್ಮಿಸಿ, ಅದರ ಪೂಜಾಕಾರ್ಯಗಳಿಗಾಗಿ ಅರಸನಿಂದ ಭೂಮಿಯನ್ನು ಪಡೆದುಕೊಂಡು, ಪ್ರಭಾಚಂದ್ರದೇವರ ಪಾದಪ್ರಕ್ಷಾಳನ ಮಾಡಿ ದಾನ ನೀಡಿದುದು ಈ ಶಾಸನದ ವಿಷಯ.

ಅರಸು ವಿಷ್ಣುವರ್ಧನ, ಅರಸಿ ಶಾಂತಲೆಯರ ಬಿರುದಾವಳಿಗಳು ಗಮನಾರ್ಹವಾಗಿವೆ. ಶಾಂತಲೆ ಶಿವಗಂಗೆಯಲ್ಲಿ ಮುಡಿಪಿ ಸ್ವರ್ಗಸ್ಥೆಯಾದ, ಇದನ್ನು ಕೇಳಿ ತಾಯಿ ಮಾಚಿಕಬ್ಬೆ ಸಲ್ಲೇಖನ ಮರಣವನ್ನಪ್ಪಿದ ಚಿತ್ತವೇಧಕ ಸಂಗತಿಗಳೂ ಇಲ್ಲಿ ನಿರೂಪಿತವಾಗಿವೆ. ೧-೧೦೮, ೧೦೯-೧೬೧, ೧೬೪-೨೨೪ ಹೀಗೆ ಮೂರು ಶಾಸನಗಳಿವೆ, ಇದರಲ್ಲಿ.

೨೪. ಲಕ್ಷ್ಮೇಶ್ವರ ಶಾಸನ

I. ಪುಲಿಗೆರೆಯ ದಕ್ಷಿಣ ಸೋಮನಾಥ ದೇವರ ಸ್ಥಾನಾಚಾರ್ಯ ಮಹೇಂದ್ರ ಸೋಮಪಂಡಿತರು ಸುಗಂಧ ಗಂಧ ಪ್ರಸಾದಾಕ್ಷತೆಗಳೊಂದಿಗೆ ಹಾನುಗಲ್ಲಿಗೆ ಹೋಗಿ, ಹಾನುಂಗಲ್ಲು-೫೦೦ವನ್ನಾಳುವ ಮಹಾಮಂಡಲೇಶ್ವರ ಕದಂಬ ತೈಲಪ IIIನನ್ನು ಆಶೀರ್ವದಿಸಿ, ಅವನಿಂದ ಕಲ್ಲವಣ ಗ್ರಾಮವನ್ನು ಪಾರಮೇಶ್ವರ ದತ್ತಿಯಾಗಿ ಪಡೆದರು.

II. ಪುಲಿಗೆರೆಯ ಮನ್ನೆಯವನ್ನಾಳುತ್ತಿದ್ದ ಮಹಾಮಂಡಲೇಶ್ವರ ಮಾವುಲಿ ತೈಲನು ಪುಲಿಗೆರೆಗೆ ಬಂದು ದಕ್ಷಿಣ ಸೋಮನಾಥದೇವರ ದರ್ಶನ ಪಡೆದು, ಜ್ಞಾನ ಸೋಮಪಂಡಿತದೇವರ ಕಾಲಂ ಕರ್ಚಿ, ಈ ಮೊದಲು ತಮ್ಮ ಅಜ್ಜ (ತೈಲ-III) ಬಿಟ್ಟ ಕಲ್ಲವಣ ಗ್ರಾಮವನ್ನು ಪುನರ್ದತ್ತಿಯಾಗಿ ಕೊಟ್ಟನು.

III. ಹಾನುಂಗಲ್ಲ-೫೦೦ರ ದಂಡನಾಯಕ ಡಾಕರಸ ಮೊದಲಾದವರು ಸೋಮನಾಥದೇವರ ನಂದಾದೀವಿಗೆಗೆ ದಾನ ನೀಡಿದರು.

ಹೀಗೆ ಈ ಶಾಸನದಲ್ಲಿ ೩ ದತ್ತಿಗಳಿವೆ.

"ಮಹಾವ್ರತಿ ಸಂತಾನಕಲ್ಪಭೂಜಂ" ಎಂಬ ಉಲ್ಲೇಖದಿಂದ ಈ ಆಚಾರ್ಯರು "ಮಹಾವ್ರತಿ" ಪಂಥದವರೆಂದು ಸ್ಪಷ್ಟವಾಗುತ್ತದೆ. ಈ ಪಂಥದ ಇನ್ನೊಂದು ಹೆಸರು ಸೋಮಸಿದ್ಧಾಂತ. ಈ ಕಾರಣದಿಂದಾಗಿ ಆಚಾರ್ಯರ ಹೆಸರಿನಲ್ಲಿ "ಸೋಮ" ಪದ ಏದೆ. ಸ್ಥಾನದೈವತ ಸೋಮೇಶ್ವರ (ಸ+ಉಮಾ+ಈಶ್ವರ) ನಾಗಿದ್ದಾನೆ. ಈ ಮಹಾವ್ರತಿ (=ಸೋಮಸಿದ್ಧಾಂತಿ)ಗಳು ಕಾಪಾಲಿಕ(?)ರೆಂದು ತೋರುತ್ತದೆ.

೨೫. ಕುರುಗೋಡ ಶಾಸನ

ಮಹಾಶಿವಭಕ್ತ ಕಲ್ಲಿಸೆಟ್ಟಿ ಕುರಗೋಡಿನಲ್ಲಿ ಕಲಿದೇವಾಲಯವನ್ನು ನಿರ್ಮಿಸಿ ಅನೇಕ ದತ್ತಿಗಳನ್ನು ಬಿಟ್ಟುದು, ಶಿವೈಕ್ಯ ಚೂಡಾಮಣಿಯೆನಿಸಿದ ಮಾಂಡಲಿಕ ಸಿಂಧ ವಂಶದ ರಾಚಮಲ್ಲ, ಬಳ್ಳಾರೆಯ ಅಜ್ಜರಸರು ಭೂದಾನ ನೀಡಿದುದು ಈ ಶಾಸನದ ವಿಷಯ.

ಕುರುಗೋಡಿನ ಮುಮ್ಮರಿದಂಡಗಳ ಸಮೂಹಕ್ಕೆ ಸೇರಿದವ ಕಲ್ಲಿಸೆಟ್ಟಿ. ಸಿದ್ಧರಾಮನ ಸಮಕಾಲೀನನಾದ ಹಾವಿನಹಾಳ ಕಲ್ಲಯ್ಯ ಮತ್ತು ಈ ಮಹಾವಿನಹಾಳ ಕಲ್ಲಿಸೆಟ್ಟಿ ಬೇರೆ ಬೇರೆಯೆಂದು ತೋರುತ್ತದೆ. ಅವನದು ಸೊಲ್ಲಾಪುರ ಸಮೀಪದ ಹಾವಿನಹಾಳ, ಇವನದು ಕುರುಗೋಡ ಸಮೀಪದ ಹಾವಿನಹಾಳ. ಮಹಾವಿನಹಾಳ ಕಲ್ಲಿಸೆಟ್ಟಿ 'ಮೂಗುಳಬುದ್ದಿ'ಯ ಕೇತಿಸೆಟ್ಟಿಯ ವಂಶಸ್ಥ 'ಮೂಗುಳ ಬುದ್ಧಿ' ಎಂಬ ಅಡ್ಡಹೆಸರು ಬಸವನಬಾಗೇವಾಡಿಯ ಶಾಸನವೊಂದರಲ್ಲಿ ಬರುತ್ತದೆ.

ಮುಮ್ಮರಿದಂಡಗಳನ್ನು ವರ್ಣಿಸುವ ರಗಳೆ ಛಂದಸ್ಸು, ಕಲ್ಲಿಸೆಟ್ಟಿಯ ಭಕ್ತಚೇತನ ಇಲ್ಲಿ ಗಮನಿಸಬೇಕಾದ ಅಂಶಗಳು.

೨೬. ಸಿರಿವಾಳ ಶಾಸನ

ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿಗೆ ಸಂಬಂಧಿಸಿದ ಸಿರಿವಾಳ ಗ್ರಾಮದಲ್ಲಿ ಈ ಶಾಸನವಿದೆ. ವೀರಶೈವ ಪಂಚಾರ್ಯರಲ್ಲಿ ಒಬ್ಬನೆಂದು ಹೇಳಲಾಗುವ ರೇವಣಸಿದ್ಧ ಮತ್ತು ಈ ಶಾಸನೋಕ್ತ ರೇವಣಸಿದ್ಧ ಒಬ್ಬನೇ ಎಂದು ವಿದ್ವಾಂಸರ ಊಹೆ. ಇಲ್ಲಿಯ ಪವಾಡಗಳು ರೇವಣಸಿದ್ಧನ ದಿವ್ಯವ್ಯಕ್ತಿತ್ವಕ್ಕೆ ನಿದರ್ಶನವೆನಿಸಿವೆ.

೨೭. ಅಮೃತಾಪುರ ಶಾಸನ

ಗದುಗಿನಲ್ಲಿ 'ಅಮೃತಸಮುದ್ರ'. ಅಮೃತಾಪುರ ಗ್ರಾಮದಲ್ಲಿ ಅಮೃತೇಶ್ವರ ದೇವಾಲಯ ನಿರ್ಮಿಸಿದ ದಂಡನಾಯಕ ಅಮೃತೇಶ್ವರನು ಹೊಯ್ಸಳ ಚಕ್ರವರ್ತಿ (?)ಯಿಂದ ಅಗ್ರಹಾರ ಪುಣಸೆಕಟ್ಟೆಯನ್ನು ಪಡೆದು ದಾನ ಮಾಡಿದನು; ಜೊತೆಗೆ ಹಲವು ಜನರೂ ದೇವರಿಗೆ ದಾನ ನೀಡಿದರು.

ಹೊಯ್ಸಳ ವಂಶಾವಳಿ, ಅಮೃತ ದಂಡನಾಯಕನ ವಂಶಾವಳಿ ಮತ್ತು ವ್ಯಕ್ತಿಚಿತ್ರಗಳನ್ನು ಚಿತ್ತರಿಸುವ ಇದು ಚಿಕ್ಕ ಚಂಪೂಕಾವ್ಯದಂತಿದೆ. ಇದನ್ನು ಬರೆದವ ಕವಿಚಕ್ರವರ್ತಿ ಜನ್ನ.

೨೮. ಅಬ್ಬಲೂರು ಶಾಸನ


ಜಿನಧರ್ಮದ ನೆಲೆವೀಡಾದ ಅಬ್ಬಲೂರಿನಲ್ಲಿ 'ವೀರಮಾಹೇಶ್ವರ ನಿಷ್ಠೆಯ' ಏಕಾಂತರಾಮಯ್ಯ 'ವೀರಪ್ರತಿಜ್ಞೆಯಿಂದ ಶಿರಸ್ಸುಪವಾಡ ಮೆರೆದು, ಜಿನನನ್ನು ಒಡೆದು, ಆ ಸ್ಥಳದಲ್ಲಿ ವೀರಸೋಮೇಶ್ವರನನ್ನು ಪ್ರತಿಷ್ಠಾಪಿಸಿದುದು ಈ ಶಾಸನದ ವಿಷಯ. ರಾಮಯ್ಯನ ದೈವೀಶಕ್ತಿಗೆ ಬೆರಗಾದ ಬಿಜ್ಜಳ ರಾಮಯ್ಯನ ಕಾಲುತೊಳೆದು ವೀರಸೋಮನಾಥ ದೇವಾಲಯಕ್ಕೆ ಗೋಗಾವೆ ಗ್ರಾಮವನ್ನು ದಾನ ಮಾಡಿದನು. ಆಮೇಲೆ ಕಲ್ಯಾಣ ಚಾಲುಕ್ಯರ ತ್ರಿಭುವನಮಲ್ಲ ಸೋಮೇಶ್ವರ IV ಅಬ್ಬಲೂರು ಗ್ರಾಮವನ್ನು, ಕಂದಬ ಕಾವದೇವನು ಮಲ್ಲವಳ್ಳಿ ಗ್ರಾಮವನ್ನು ವೀರ ಸೋಮನಾಥ ದೇವರಿಗೆ ದಾನನೀಡಿದರು. ಈ ಶಾಸನ ಉತ್ಕೃಷ್ಟ ಪುರಾಣ ಕಾವ್ಯದಂತಿದೆ. (ವೀರ)ಶೈವ ಹಾಗೂ ಜೈನಮತಗ ಘರ್ಷಣೆ, ವೀರಮಾಹೇಶ್ವರ ನಿಷ್ಠೆಗಳು ಇಲ್ಲಿ ಒಡೆದುಕಾಣುತ್ತವೆ. (ನೋಡಿರಿ: ಕರ್ನಾಟಕ ಭಾರತಿ ೪-೧).

೨೯. ಪಡೇಕನೂರ ಶಾಸನ


ಕನ್ನಡ ನಾಲ್ಕುಸಾಸಿರ ಪ್ರಾಂತದ ದೇಸಿಯ ದಂಡನಾಯಕ ನೂಲಸರು, ಸೊನ್ನಲಿಗೆಯ ಶ್ರೀರಾಮನಾಥದೇವರಿಗೆ ಪಡಿಯಕನೂರ (ಫಡೇಕನೂರ)ನ್ನು ದತ್ತಿಯಾಗಿ ಬಿಟ್ಟರು. ಸಿದ್ಧರಾಮೇಶ್ವರನ ಆದೇಶರೂಪದ ವಚನವನ್ನೊಳಗೊಂಡ ಈ ಶಾಸನ ಸಿದ್ಧರಾಮೇಶ್ವರನಿಗೆ ಸಂಬಂಧಪಟ್ಟುದಾಗಿದೆ. (ನೋಡಿರಿ. ಶಾಸನಗಳಲ್ಲಿ ಶಿವಶರಣರು ಪು. ೭೩).

೩೦. ಅರ್ಜುನವಾಡ ಶಾಸನ

ಯಾದವರ ಮಹಾಪ್ರಧಾನ ಚವುಡಿಸೆಟ್ಟಿ ಮತ್ತು ನಾಗರಸರು ಕೂಡಿ ಕವಿಳಾಸಪುರದ ಮಲ್ಲಿಕಾರ್ಜುನ, ಸಂಗಮೇಶ್ವರ ದೇವರಿಗಾಗಿ ಹುಲಿಗೆರೆಯ ಸೋಮೇಶ್ವರನ ಸನ್ನಿಧಿಯಲ್ಲಿ, ಯತಿರಾಯ ಹಾಲಬಸವಿದೇವನಿಗೆ ದತ್ತಿ ನೀಡಿದರು. ಬಸವಣ್ಣನವರ ಚರಿತ್ರೆಯ ಮೇಲೆ ಹೊಸ ಬೆಳಕು ಜೀರಿದ ಶಾಸನವಿದು. "ಸಂಗನ ಬಸವನ ಅಗ್ರಜ..." ಈ ತ್ರುಟಿತ ಪದ್ಯದ ಬಗ್ಗೆ ವಿದ್ವಾಂಸರಲ್ಲಿ ಮತಭೇದವಿದೆ. ಇದನ್ನವಲಂಬಿಸಿ ಬಸವಣ್ಣನವರ ವಂಶಾವಳಿಯನ್ನು ಒಬ್ಬೊಬ್ಬರು ಒಂದೊಂದು ಬಗೆಯಾಗಿ ವ್ಯಕ್ತಗೊಳಿಸಿದ್ದರೂ ಶ್ರೀ ನೆಲಮಂಗಲ ಲಕ್ಷ್ಮೀನಾರಾಯಣರು ಹೇಳುವ.



ಈ ವಂಶಾವಳಿಯನ್ನು ಎಲ್ಲರೂ ನಂಬುತ್ತ ಬಂದಿದ್ದಾರೆ. ಆದರೆ ಈ ಪದ್ಯವನ್ನು ಸೂಕ್ಷ್ಮವಾಗಿ ಓದಿದರೆ



ಎಂಬ ವಂಶಾವಳಿ ಹೊರಡುವಂತೆ ತೋರುತ್ತದೆ. ಅರ್ಜುನವಾಡದ ನೆರೆಯಲ್ಲಿದ್ದ ಕವಿಳಾಸಪುರ ಇಂದು ನಾಶವಾಗಿದೆ. (ನೋಡಿರಿ. ಕ. ಭಾರತಿ ೨-೧ ಮತ್ತು ೯-೪).

೩೧. ಶ್ರವಣಬೆಳಗೊಳ ಶಾಸನ

ಧಾರ್ಮಿಕ ಹಕ್ಕುಗಳ ವಿಷಯವಾಗಿ ಶ್ರೀವೈಷ್ಣವರಿಗೂ ಜೈನರಿಗೂ ಕಲಹ ಹುಟ್ಟಲು ತೊಂದರೆಗೊಳಗಾದ ಜೈನರು ಬುಕ್ಕರಾಯನಲ್ಲಿಗೆ ಬಂದು ನಿವೇದಿಸಿದ ಸಂದರ್ಭದಲ್ಲಿ, ಸಮದರ್ಶಿಯಾದ ಬುಕ್ಕರಾಯ ಉಭಯಪಕ್ಷಗಳ ಕೈ ಹಿಡಿಸಿ, ಜೈನಧರ್ಮ ಹಾಗೂ ಶ್ರೀವೈಷ್ಣವದರ್ಶನಗಳಲ್ಲಿ ಭೇದವಿಲ್ಲವೆಂದು ನಿರ್ಣಯ ನೀಡಿ, ತನ್ನ ಧರ್ಮಸಮನ್ವಯವನ್ನು ಮೆರೆದನು.

೩೨. ಹಂಪೆ ಶಾಸನ

ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರನ ಸ್ವಪ್ನದಲ್ಲಿ ವಿಘ್ನೇಶ್ವರನು ಬಂದು, ಮಾಲ್ಯವಂತ ಪರ್ವತದ ದಕ್ಷಿಣ ಭಾಗದಲ್ಲಿ ಅಕೃತ್ರಿಮವಾದ ಒಂದು ಗುಹೆಯಿದೆ. ಅಲ್ಲಿ ನನ್ನನ್ನು ಪ್ರತಿಷ್ಠಿಸು ಎನ್ನಲು, ಮಂತ್ರಿ ಹಸಾದವೆಂದು ಹೇಳಿ, ಅಲ್ಲಿ ವಿಘ್ನೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ದತ್ತಿ ಬಿಟ್ಟನೆಂದು ಈ ಶಾಸನ ತಿಳಿಸುತ್ತದೆ. ಇಲ್ಲಿ ಹೇಳಿದ ಲಕ್ಷ್ಮೀಧರಾಮಾತ್ಯನ (ನೀತಿವಾಕ್ಯಾಮೃತ, ಆನಂದ ರಾಮಾಯಣ, ಕೃಷ್ಣಲೀಲಾ) ಕೃತಿಗಳು ಇನ್ನೂ ಸಿಕ್ಕಿಲ್ಲ. ಆತನ ತಾಯಿ ಹೇಳಿದ "ಕೆರೆಯಂ ಕಟ್ಟಿಸು..." ಎಂಬ ಪದ್ಯದಲ್ಲಿ ನಮ್ಮ ಸಂಸ್ಕೃತಿ ಮಡುಗಟ್ಟಿ ನಿಂತಿದೆ. ಪುಟ್ಟ ಚಂಪೂ ಕಾವ್ಯದಂತಿರುವ ಈ ಶಾಸನವನ್ನು ಬರೆದವ ಧರ್ಮನಾಥ ಪುರಾಣದ ಕರ್ತೃ, ಮಧುರಕವಿ.

❖❖

ಪಾರಿಭಾಷಿಕ ಪದಗಳು

ಅಂಗಭೋಗ

ದೇವರವಿಗ್ರಹಕ್ಕೆ ಪೂಜೆಯ ಕಾಲದಲ್ಲಿ ಮತ್ತು ಮಿಕ್ಕ ಸಮಯದಲ್ಲಿ ಉಪಯೋಗಿಸುವ ವಸ್ತುಗಳು ಮತ್ತು ಕೈಕೊಳ್ಳುವ ಕಾರ್ಯಗಳು. ಉದಾ: ಸ್ನಾನ, ಗಂಧ, ವಸ್ತ್ರ, ಆಭರಣ, ಪುಷ್ಪ, ದೀಪ, ನೈವೇದ್ಯ ಇತ್ಯಾದಿ.

ಅರ್ಧವಿಸದಿ

ಅರ್ಧವೀಸ(?) ಅರೆವೀಸ ಎಂಬ ಪದ ಈಚಿನ ಶಾಸನಗಳಲ್ಲಿ ಪದೇಪದೇ ಕಾಣಿಸಿಕೊಳ್ಳುತ್ತದೆ. ೪ ವೀಸಗಳೆಂದರೆ ಒಂದು ಹಾಗ.

ಅಱುವಣ

ಈ ಶಬ್ದ, ಶಕಟರೇಫೆ ರೂಪದಲ್ಲಿ ಕಾಣುವುದು ವಿರಳ; ಸಾದಾರೇಫೆಯ ರೂಪದಲ್ಲಿ ಕಾಣುವುದು ಹೇರಳ. ಕಾರಣ 'ಅರುವಣ'ವೆಂಬುದೇ ಶುದ್ಧರೂಪವಾಗಿರ ಬಹುದು. ಇದರ ಅರ್ಥ 'ಅಱಿವೆಣ' ಅಥವಾ ಧರ್ಮದ (ಅಱಿ=ಧರ್ಮ) ಹಣವೆಂದಾಗಲಿಕ್ಕಿಲ್ಲ. ಬಹುಶಃ ದತ್ತಿ ಬಿಟ್ಟ ಭೂಮಿಯಿಂದ ಅರ್ಧ (=ಅರ) ತೆರಿಗೆಯನ್ನೊ, ಹೆಸರಿಗೆ ಮಾತ್ರ ತೆಗೆದುಕೊಳ್ಳುವ ಅಲ್ಪ ತೆರಿಗೆಯನ್ನೊ ಇದು ಸೂಚಿಸುತ್ತಿರಬಹುದು. (ನೋಡಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೯೭). ಅರ್ಪಣ. ಅರುವಣ ಆಗಿರಬಹುದೇ (ನೋಡಿ: ಅಂಕಣ ೧೯೮೧ ಸಪ್ಟೆಂಬರ).

ಅಕ್ಷಪಟಳಾಧಿಪತಿ

ರಾಜ್ಯದ ದಾಖಲೆಯ ಇಲಾಖೆ ಹಾಗೂ ಲೆಕ್ಕಪತ್ರದ ಇಲಾಖೆಗಳ ಮೇಲಿನ ಮುಖ್ಯ ಅಧಿಕಾರಿ.

ಅಳುವಖೇಡ ಅಱುಸಾಸಿರ

ಈಗಿನ ಮಂಗಳೂರು ಜಿಲ್ಲೆಯ ಉತ್ತರ ಭಾಗದ ಒಂದು ಆಡಳಿತ ಪ್ರದೇಶ. ಇಲ್ಲಿಯ ಗ್ರಾಮಸಂಖ್ಯೆ ೬೦೦೦. ಇದರ ಮೊದಲಿನ ರಾಜಧಾನಿ 'ಪಟ್ಟಿಪೊಂಬುಚ್ಚ ಪುರ', ತರುವಾಯದ್ದು 'ಬಾರಕೂರ'.

ಪದಗಳ ಮುಂದಿನ ಅಂಕಿ ಪುಟಗಳನ್ನು ಸೂಚಿಸುತ್ತವೆ.

ಇರ್ಖಂಡುಗ ಮಣ್ಣು

ಎರಡು ಖಂಡುಗ ಹುಟ್ಟುವಳಿ ಕೊಡುವ ಭೂಮಿ; ಖಂಡುಗವೆಂದರೆ ಹತ್ತು ಹೇರು ಅಥವಾ ಇಪ್ಪತ್ತು ಚೀಲ ಧಾನ್ಯ.

ಉಂಡಿಗೆ ಸಾಧ್ಯಂಮಾಡಿ

(ಉಂಡಿಗೆ=ಮುದ್ರೆ, ರಾಜಮುದ್ರೆ), ತನ್ನ ರಾಜ್ಯದ ವಶಕ್ಕೆ ತೆಗೆದುಕೊಂಡು.

ಉಭಯಮುಖಿ ದಾನ

ಕರು ಹಾಕುತ್ತಿರುವ ಹಸುವನ್ನು ದಾನ ನೀಡುವುದು. ಉಭಯಮುಖಿ ದಾನ. ಇದಕ್ಕೆ 'ಇಕ್ಕತ್ತಿಗೆ ಕವಿಲೆ ದಾನ' ಎಂದೂ ಹೆಸರು.

ಎರಡಱುನೂಱು

ಬೆಳ್ವೊಲ ಮುನ್ನೂರು ಮತ್ತು ಪುಲಿಗೆರೆ ಮುನ್ನೂರು ಕೂಡಿದ ಸಂಯುಕ್ತ ನಾಡು. (ಮೊದಮೊದಲು ಪುಲಿಗೆರೆ ಮುನ್ನೂರಕ್ಕೂ ಬೆಳ್ವೊಲ ಮುನ್ನೂರು ಎಂದೇ ಹೆಸರು). ಇದರಲ್ಲಿ ಒಟ್ಟು ಹಳ್ಳಿಗಳು ೬೦೦. ಇದನ್ನೇ ಕವಿರಾಜಮಾರ್ಗಕಾರ 'ಕನ್ನಡದ ತಿರುಳ್' ಎಂದು ಕರೆದಿದ್ದಾನೆ. ಪಂಪ, ರನ್ನರೂ ಈ ನಾಡಿನ ಭಾಷೆಯನ್ನು ಹೊಗಳಿದ್ದಾರೆ.

ಎಱೆಗದ್ಯಾಣ

ಎಱೆಯ ಹೆಸರಿನ ಗಂಗ ಅರಸನಿಂದ ಚಲಾವಣೆಗೊಂಡ 'ಗದ್ಯಾಣ'ವೆಂಬ ನಾಣ್ಯ.

ಎೞ್ತು : ೧೩

ಬರವಣಿಗೆ, ಇದು ದ್ರಾವಿಡ ಪದ. ಕೆಲವು ಪ್ರಾಚೀನ ಶಾಸನಗಳಲ್ಲಿ ಕಂಡುಬರುವ ಈ ಪದಕ್ಕೆ ಎೞುತ್ತು (ತಮಿೞು, ಮಲೆಯಾಳ), ಎೞ್ಥ (ಕೋತ), ಎೞೀತೀ (ಕೊಡಗು) ಎಂಬ ಜ್ಞಾತಿಪದಗಳು ಸಿಗುತ್ತವೆ.

ಏಕಭೋಗ

ಗ್ರಾಮಗಳ ಇಲ್ಲವೆ ನಾಡುಗಳ ಮೇಲಿನ ಅಧಿಕಾರದ ಒಂದು ಪ್ರಕಾರ. ಆದರೆ ಇದರ ಸ್ವರೂಪ ಗೊತ್ತಾಗುವುದಿಲ್ಲ. ತ್ರಿಭೋಗವೆಂಬ ಅಧಿಕಾರದ ಪ್ರಕಾರವೊಂದನ್ನೂ ನಾವು ಶಾಸನಗಳಲ್ಲಿ ಕಾಣುತ್ತೇವೆ.

ಕನ್ನಡ ನಾಲ್ಕುಸಾಸಿರ

ಇದು ಕರಹಡ ನಾಲ್ಕುಸಾಸಿರವಾಗಿರಬಹುದು. ಪ್ರಾಚೀನ ಕಾಲದಲ್ಲಿ ೪೦೦೦ ಹಳ್ಳಿಗಳನ್ನೊಳಗೊಂಡ ಈ ನಾಡು, ಸಾಮಾನ್ಯವಾಗಿ ಈಗಿನ ಸೊಲ್ಲಾಪುರ ಜಿಲ್ಲೆಯ ಪ್ರದೇಶವಾಗಿದೆ. ಇದರ ರಾಜಧಾನಿ ಮಂಗಳವೀಡು (ಮಂಗಳವೇಢೆ).

ಕಂಪಣ

ಆಡಳಿತದ ಸಲುವಾಗಿ ಮಾಡಿಕೊಂಡ ಗ್ರಾಮಗಳ ಸಣ್ಣ ವಿಭಾಗ. ಇಲ್ಲಿಯ ಗ್ರಾಮಗಳ ಸಂಖ್ಯೆ ೩೦, ೪೦, ೭೦ ಹೀಗೆ ಇರುತ್ತಿದ್ದಿತು. ಈಗಿನ ಕಾಲದ ತಾಲೂಕು, ಹೋಬಳಿಗಳಿದ್ದಂತೆ.

ಕಂಬ

ಪ್ರಾಚೀನ ಕಾಲದ ಕ್ಷೇತ್ರಪ್ರಮಾಣ. ೧೦೦ ಅಥವಾ ೬೦೦ ಅಥವಾ ೧೦೦೦ ಕಂಬಗಳೆಂದರೆ ಒಂದು ಮತ್ತರ (ನೋಡಿರಿ ಮತ್ತರ).

ಕರವಂದ (<ಕರಬಂಧ?)

ತೆರಿಗೆ ನಿರ್ಣಯ. 'ದಶವಂದ' ಎಂಬ ಬೇರೊಂದು ಪದ. ಶಾಸನಗಳಲ್ಲಿ ಬಳಕೆಯಾಗಿದೆ.

ಕಳ್ವಪಾದಪದಾನಂ

ಹದಿನಾರು ದಾನಗಳಲ್ಲಿ ನಾಲ್ಕನೆಯದಾದ ಕಲ್ಪವೃಕ್ಷ ದಾನ.

ಕಿಸುಕಾಡೆಪ್ಪತ್ತು

ಬಾದಾಮಿ ತಾಲೂಕಿನ ದಕ್ಷಿಣ ಭಾಗ ಹಾಗೂ ರೋಣ ತಾಲೂಕಿನ ಉತ್ತರ ಭಾಗಗಳನ್ನು ವ್ಯಾಪಿಸಿದ ಎಪ್ಪತ್ತು ಹಳ್ಳಿಗಳ ಒಂದು ನಾಡು. ಪಟ್ಟದಕಲ್ಲು (=ಕಿಸುವೊಳಲು) ಈ ನಾಡಿನ ರಾಜಧಾನಿಯೆಂದು ಡಾ. ಫ್ಲೀಟರ ಅಭಿಪ್ರಾಯ. ಆದರೆ "ಕಿಸುವೊಳಲ್ ಆಜು ಬಾಡ" ಎಂಬ ಒಂದು ಚಿಕ್ಕ ವಿಭಾಗವೂ ಶಾಸನಗಳಲ್ಲಿ ಕಂಡುಬರುತ್ತದೆ. ವಿಕ್ರಮಪುರ (ಅರಸೀಬೀದಿ). ಈ ಕಿಸುಕಾಡು ನಾಡಿನ ರಾಜಧಾನಿಯೆಂದು ಕೆಲವು ಶಾಸನಗಳಿಂದ ವೇದ್ಯವಾಗುತ್ತದೆ.

ಕುಣ್ಡವುರ ಮೂವತ್ತು

ಹಾನುಂಗಲ್ಲಯ್ನೂರು ನಾಡಿನಲ್ಲಿಯ ಮೂವತ್ತುಹಳ್ಳಿಗಳ ಆಡಳಿತದ ಒಂದು ವಿಭಾಗ. ಇಂಥ ವಿಭಾಗಗಳಿಗೆ 'ಕಂಪಣ' ಎಂದು ಪ್ರಾಚೀನ ಹೆಸರು. ಇಲ್ಲಿ 'ಕುಣ್ಡವುರ'ವೆಂದರೆ ಬಂಕಾಪುರದ ಸಮೀಪದಲ್ಲಿರುವ ಈಗಿನ ಕುಂದೂರು. ಇದು ಸುತ್ತಲಿನ ಮೂವತ್ತು ಹಳ್ಳಿಗಳ ಮುಖ್ಯಪಟ್ಟಣ.

ಕುಂತಳದೇಶ

ಪ್ರಾಚೀನ ಕರ್ನಾಟಕದ ಇನ್ನೊಂದು ಹೆಸರು. ಇದು 'ಕವಿರಾಜಮಾರ್ಗ' ಹೇಳುವ 'ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡು', ಏಳುವರೆ ಲಕ್ಷ ಗ್ರಾಮಗಳ ಪ್ರದೇಶವಿದು. ಕಾರಣ 'ಕುಂತಳ ಸಪ್ತಾರ್ಧಲಕ್ಷ'ವೆಂದು ಕರೆಯುವ ರೂಢಿ. ರಾಷ್ಟ್ರಕೂಟರು ಆಳುವಾಗ 'ರಟ್ಟಪಾಡಿ ಸಪ್ತಾರ್ಧ ಲಕ್ಷ'ವೆಂದು ಇದನ್ನು ಕರೆಯು ತ್ತಿದ್ದರು.

ಕೂಂಡಿನಾಡು

ಕೂಂಡಿಮೂಸಾಸಿರ, ಕುಹುಣ್ಡಿ ವಿಷಯ. ಕೂಂಡಿ ತ್ರಿಸಹಸ್ರ ಇತ್ಯಾದಿ ಹೆಸರುಗಳಿಂದ ಶಾಸನಗಳಿಂದ ಪ್ರಸಿದ್ಧವಿದೆ. ಈ ನಾಡಿನ ಮುಖ್ಯಪಟ್ಟಣವಾದ 'ಕೂಂಡಿ'ಯು ಗೋಕಾಕ-ರಾಯಭಾಗ

ತಾಲ್ಲೂಕುಗಳ ನಡುವಿನ ಗ್ರಾಮವಾಗಿದ್ದು, ಇದು ಇಂದಿನ ಪಟ್ಟಣಕೋಡಿಯೆಂದು ಇತ್ತೀಚೆಗೆ ತಿಳಿದುಬಂದಿದೆ.

ಉತ್ತರಕ್ಕೆ ಕೃಷ್ಣಾ ನದಿ, ದಕ್ಷಿಣಕ್ಕೆ ಮಲಪ್ರಭಾ ನದಿ. ಪೂರ್ವಕ್ಕೆ ತೊರಗಲೆ ನಾಡು ಮತ್ತು ಬೆಳುವಲ ಮೂನೂರು-ಇದರ ಮೇರೆಗಳು. ಪಶ್ಚಿಮದ ಮೇರೆ ನಿಶ್ಚಿತವಾಗಿ ಗೊತ್ತಾಗುವುದಿಲ್ಲ. ಈ ಮೇರೆಮಧ್ಯದ ಪ್ರದೇಶವೆಂದರೆ ಈಗಿನ ಬೆಳಗಾವಿ ಜಿಲ್ಲೆ. ಮಹಾರಾಷ್ಟ್ರಕ್ಕೆ ಸೇರಿರುವ ಚಂದಗಡ ತಾಲೂಕು. ಈ ನಾಡಿನಲ್ಲಿಯ ಪ್ರಾಚೀನ ಉಪವಿಭಾಗಗಳು:

೧. ತೇರಿದಾಳ ಹನ್ನೆರಡು

೨. ಕುಱುಂಬೆಟ್ಟಗಂಪಣ

೩. ಸೊಗಲ ಮೂವತ್ತು

೪. ಸುಗಂಧವರ್ತಿ ಹನ್ನೆರಡು

೫. ಹೊರಘಟ್ಟ ಸಪ್ತತಿ

೬. ಹುಬ್ಬಳ್ಳಿ ಹನ್ನೆರಡು (ಮುಗಟಖಾನ ಹುಬ್ಬಳ್ಳಿ)

೭. ವೇಳುಗ್ರಾಮ ಮೂವತ್ತು (ಈಗಿನ ಬೆಳಗಾವಿ)

೮. ಉತ್ಸುಗ್ರಾಮ ಮೂವತ್ತು

೯. ಕೊರವಲ್ಲಿ ಕಂಪಣ

೧೦. ನೂಲಿನಾಡು

ಮೊದಲಾದವುಗಳು.

ಈ ನಾಡಿನ ಪ್ರಾಚೀನ ಕಾಲದ ಮೇರೆಗಳು:

ಉತ್ತರಕ್ಕೆ – ಕರಹಡ ನಾಲ್ಸಾಸಿರ ಹಾಗೂ ಮಿರಿಂಜೆ ಮೂಸಾಸಿರ.

ಪೂರ್ವಕ್ಕೆ – ತೊರಗಲೆ ನಾಡು ಹಾಗೂ ಬೆಳುವಲ ಮೂನೂರು.

ದಕ್ಷಿಣಕ್ಕೆ – ಪಲಸಿಗೆ ಪನ್ನಿರ್ಚ್ಛಾಸಿರ.

ಪಶ್ಚಿಮಕ್ಕೆ – ?

ಕೋಣನ ಮೆಯಿದೆಱೆ : ೧೦೪

ಸರಕುಗಳ ಸಾರಿಗೆಗೆ ಉಪಯೋಗಿಸುತ್ತಿರುವ ಕೋಣಕ್ಕೆ ವಿಧಿಸುವ ತೆರಿಗೆ(?).

ಖಸ :

ಕಾಶ್ಮೀರ ಸಮೀಪದ ಒಂದು ದೇಶ. "ಗುಡ್ಡಗಾಡು ನಾಡಿನಲ್ಲಿಯ ಜನರು" ಎಂಬುದು ಪುರಾಣಗಳ ಹೇಳಿಕೆ.

ಗಂಗನ ಗಳೆ

(ಗಳೆ=ಬಿದಿರಿನ ಕೋಲು). ಗಂಗ ಅರಸರಿಂದ ಮನ್ನಣೆ ಪಡೆದ ಭೂಮಾಪನದ ಒಂದು ಕೋಲು.

ಗ್ರಾಮಬ್ರಯ

ಸುಂಕದ ಒಂದು ಪ್ರಕಾರ. ಗ್ರಾಮದ ವ್ಯವಸ್ಥೆಯ ವ್ಯಯಕ್ಕಾಗಿ ವಿಧಿಸುವ ಸುಂಕ (?)

ಘಳಿಗೆ

ಘಳಿಗೆ (<ಘಟಿಕಾ)=ಕಾಲಮಾಪಕ ಯಂತ್ರ. ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ವೇಳೆಯನ್ನು ತಿಳಿದುಕೊಳ್ಳುವ ಸಲುವಾಗಿ ಈ ಯಂತ್ರವನ್ನು ಶಾಲೆಯಲ್ಲಿಡುತ್ತಿದ್ದರು. ಕಾರಣ, ಶಾಲೆಗಳಿಗೆ 'ಘಟಿಕಾಸ್ಥಾನ'ವೆಂಬ ಹೆಸರೂ ರೂಢವಾಯಿತು.

ಚತುಸ್ಸಮಯ

ಬೌದ್ಧ, ಜೈನ, ವೈಷ್ಣವ ಹಾಗೂ ಶೈವ – ಈ ನಾಲ್ಕು ಮತಗಳು.

ಚೈತ್ರ

ಚೈತ್ರಮಾಸ (ದವನದ ಹುಣ್ಣಿವೆ)ದಲ್ಲಿ ದೇವರಿಗೆ ದವನಾರೋಪಣ ಮಾಡುವ (ದವನವನ್ನೇರಿಸುವ) ಉತ್ಸವವೇ ಚೈತ್ರ, (ನೋಡಿ ಪವಿತ್ರ).

ಡಮರಗತೂರ್ಯ್ಯ

ಪ್ರಾಚೀನ ಕರ್ನಾಟಕದ ರಾಜ್ಯಮನೆತನಗಳು ತಮತಮಗೆ ವಿಶಿಷ್ಟವಾದ ವಾದ್ಯಗಳನ್ನು ಬಳಸುತ್ತಿದ್ದುದು ರೂಢಿ. ಕದಂಬ ಮಹಾಮಂಡಳೇಶ್ವರರಿಗೆ ಪೆರ್ಮ್ಮಟ್ಟಿ ವಾದ್ಯ. ರಟ್ಟಮಹಾಮಂಡಳೇಶ್ವರರಿಗೆ ತಿವಳಿ ವಾದ್ಯಗಳು ವಿಶಿಷ್ಟವಾಗಿದ್ದರೆ; ಶಿವೋಪಾಸಕರಾದ ಕಲಚೂರ್ಯರಿಗೆ ವಿಶಿಷ್ಟವಾದುದು, ಶಿವನ ಹಸ್ತವನ್ನಲಂಕರಿಸಿರುವ ಡಮರುಗ ವಾದ್ಯ.

ತಕ್ಕಿಲ

ಭೂಮಿಯ ಒಂದು ಪ್ರಕಾರ.

ತಂಬುಲಿಗ ಸಾಸಿರ್ವರು

ತಾಂಬೂಲಕ್ಕೆ ಬೇಕಾಗುವ ಎಲೆ, ಅಡಿಕೆ, ಇತ್ಯಾದಿಗಳನ್ನು ವ್ಯಾಪಾರ ಮಾಡುವ ವರ್ತಕರ ಸಂಘ. ಯಾವುದೋ ಊರಲ್ಲಿ ಇದು ಅಸ್ತಿತ್ವಕ್ಕೆ ಬಂದ ಪ್ರಥಮದಲ್ಲಿ ೧೦೦೦ ಜನ ಸದಸ್ಯರಿದ್ದಿರಬೇಕು. ಮುಂದೆ ಯಾವುದೇ ಊರಲ್ಲಿ ಇರುವ ಈ ಜನರ ಸಂಘಕ್ಕೆ ಎಷ್ಟೇ ಸದಸ್ಯರಿರಲಿ 'ತಂಬುಲಿಗ ಸಾಸಿರ್ವ್ವರು' ಎಂದು ಕರೆಯುವದು ರೂಢಿಯಾಯಿತು.

ತರ್ದವಾಡಿ ನಾಡು

ಮುದ್ದೇಬಿಹಾಳ, ಜಮಖಂಡಿ ತಾಲೂಕುಗಳ ಕೆಲ ಹಳ್ಳಿಗಳನ್ನೊಳಗೊಂಡು ವಿಜಾಪುರ ಜಿಲ್ಲೆಯ ಭೀಮಾ ಹಾಗೂ ಕೃಷ್ಣಾ ನದಿಗಳ ನಡುವಿನ ಭೂಪ್ರದೇಶ. ತದ್ದೇವಾಡಿ ಇಂಡಿ ತಾಲೂಕಿನ ಗ್ರಾಮ ಇದು ನಾಡಿನ ಮುಖ್ಯಪಟ್ಟಣವಾಗಿದ್ದಿತು. ತರ್ದವಾಡಿಸಾಸಿರವೆಂದು ಇದಕ್ಕೆ ಇನ್ನೊಂದು ಹೆಸರು. ಇದರಲ್ಲಿಯ ಹಳ್ಳಿಗಳು ಒಂದು ಸಾವಿರ.

ತಳಭೋಗ (<ಸ್ಥಳಭೋಗ)

ದೇವಸ್ಥಾನವನ್ನು ಕಟ್ಟಿಸಿ ದೇವರ ಪ್ರತಿಷ್ಠಾಪನೆಯ ಕಾಲದಲ್ಲಿ ದೇವಾಲಯದ ಜೀರ್ಣೋದ್ಧಾರ ಮತ್ತು ದೇವರ ಪೂಜೆ-ಪುನಸ್ಕಾರಗಳಿಗಾಗಿ ಬಿಟ್ಟ ನಿವೇಶನ, ಹೊಲ ಮತ್ತು ಗ್ರಾಮಗಳ ದತ್ತಿ.

ತಳಸಾರಿಗೆ

ಒಂದೇ ರೀತಿಯ ಸುಂಕದ ಆಡಳಿತಕ್ಕೆ ಒಳಪಟ್ಟ ಪ್ರದೇಶದಲ್ಲಿ ಸಾಗಾಟಗೊಳ್ಳುವ ಸರಕುಗಳ ಮೇಲೆ ವಿಧಿಸುವ ಸುಂಕ (?).

ತಿವಳಿಪಱೆಘೋಷಣಂ

ಪ್ರಾಚೀನ ರಾಜಮನೆತನಗಳಿಗೆ ವಿಶಿಷ್ಟವಾದ ವಾದ್ಯವೋಲಗುವ ಮರ್ಯಾದೆ ಯಿದ್ದಿತು. 'ತಿವಳಿಪಱೆ' ಎಂಬುದು ರಾಷ್ಟ್ರಕೂಟರ ವಿಶಿಷ್ಟವಾದ ವಾದ್ಯ. ಹೀಗಾಗಿ "ತಿವಳಿಪಱೆಘೋಷಣಂ" ಅವರ ಒಂದು ವಿಶೇಷಣವಾಗಿದ್ದಿತು.

ತ್ರಿಭೋಗ

ಡಾ. ಡಿ. ಸಿ. ಸರ್ಕಾರ ಅವರು ಈ ಶಬ್ದಕ್ಕೆ ಹೇಳುವ ಅರ್ಥ; ವ್ಯಕ್ತಿ, ದೇವತೆ ಮತ್ತು ಬ್ರಾಹ್ಮಣ-ಈ ಮೂವರು ಕೂಡಿ ಉಪಭೋಗಿಸುವ ದಾನ.

ತುಳಾಪುರುಷ

ಹದಿನಾರು ಮಹಾದಾನಗಳಲ್ಲಿ ಒಂದು. ದಾನ ಕೊಡುವ ವ್ಯಕ್ತಿಯನ್ನು ಬಂಗಾರ ಬೆಳ್ಳಿ ಮುಂತಾದ ಬೆಲೆಯುಳ್ಳ ವಸ್ತುಗಳ ಕೂಡ ತೂಕ ಮಾಡಿ, ಅದೆಲ್ಲವನ್ನು ದಾನ ನೀಡುವುದಕ್ಕೆ 'ತುಳಾಪುರುಷ ದಾನ'ವೆಂದು ಹೆಸರು. (ನೋಡಿ : ಸಂಶೋಧನ ತರಂಗ ೩೩ ಪು. ೨೮೪)

ತೊಮ್ಬತ್ತಱುಸಾಸಿರ

ಗಂಗವಾಡಿನಾಡಿನ ಇನ್ನೊಂದು ಹೆಸರು. ಗಂಗ ಅರಸರಿಂದ ಆಳಲ್ಪಟ್ಟ ತುಂಗಭದ್ರಾನದಿ ದಕ್ಷಿಣದಲ್ಲಿಯ ಈಗಿನ ಕರ್ನಾಟಕದ ಮತ್ತು ಕರ್ನಾಟಕಕ್ಕೆ ಹತ್ತಿರದ ತಮಿಳುನಾಡಿನ ಕೆಲವು ಭಾಗಗಳು, ಈ ಪ್ರಾಂತದಲ್ಲಿದ್ದವು. ಇಲ್ಲಿಯ ಗ್ರಾಮಗಳ ಸಂಖ್ಯೆ ೯೬೦೦೦.

ದೇವರಪುರ

ದೇವರ ಪೂಜೆ-ಪುರಸ್ಕಾರಗಳಿಗೆ ಬೇಕಾಗುವ ಸರಕುಗಳನ್ನು ಪೂರೈಸುವ ಅಂಗಡಿ; ಪೂಜಾರಿ-ಸೇವಕ-ವಾದಕ-ಪಾತ್ರ-ರೂವಾರಿ ಮುಂತಾದವರ ಮನೆ, ವಿಶ್ರಾಂತಿಸ್ಥಳ-

ಮುಂತಾದವುಗಳನ್ನೊಳಗೊಂಡ ಓಣಿ. ಇದು ದೇವಾಲಯಕ್ಕೆ ಹೊಂದಿ ಇರುತ್ತಿತ್ತು. ಇದಕ್ಕೆ "ಪುರ"ವೆಂದೂ ಕರೆಯುತ್ತಿದ್ದರು.

ಧರ್ಮ್ಮವಣ್ಣ

(ಧರ್ಮ+ಮಣ್ಣು), ಉಚಿತವಾಗಿ ದನಗಳನ್ನು ಮೇಯಿಸಲಿಕ್ಕೆ ಬಿಟ್ಟ ಭೂಮಿ.

ನಕರ

ವರ್ತಕರ ಸಂಘ.

ನಗರೇಶ್ವರ ಗಡಿಂಬದ ಕೋಲ್

ನಗರೇಶ್ವರ ದೇವಾಲಯದಲ್ಲಿಟ್ಟ ಭೂಮಾಪನ ಕೋಲು, ಈ ಕೋಲುಗಳ ಉದ್ದಳತೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತಿದ್ದಿತು.

ನಾಗರಖಂಡೆಪ್ಪತ್ತು

ಬನವಸೆ ಪನ್ನಿರ್ಚ್ಛಾಸಿರ ದೇಶದಲ್ಲಿಯ ಒಂದು ಪ್ರಾಂತ. ಹಾನಗಲ್ಲು ತಾಲೂಕಿನ ದಕ್ಷಿಣ ಮೂಲೆಯ ೪-೬ ಹಳ್ಳಿಗಳು, ಸೊರಬ ತಾಲೂಕಿನ ಉತ್ತರ-ಪೂರ್ವ ಮೂಲೆಯ ಕೆಲವು ಹಳ್ಳಿಗಳು, ಶಿಕಾರಿಪುರ ತಾಲೂಕಿನ ಉತ್ತರದ ಸುಮಾರು ೨೫ ಹಳ್ಳಿಗಳು ಹಾಗೂ ಹಿರೇಕೆರೂರ ತಾಲೂಕಿನ ಉತ್ತರದ ಸುಮಾರು ೨೫ ಹಳ್ಳಿಗಳು ಈ ಪ್ರಾಂತದಲ್ಲಿದ್ದುವು. ಅಬ್ಬಲೂರು ಇದರಲ್ಲಿ ಸಮಾವೇಶಗೊಂಡಿದ್ದಿತೆಂದು ತಿಳಿದುಬರುತ್ತದೆ.

ನೂಲೆನಾಡು

ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಚಿಕ್ಕೋಡಿ ತಾಲೂಕುಗಳ ಕೆಲವು ಹಳ್ಳಿಗಳನ್ನೊಳಗೊಂಡ ಒಂದು ನಾಡು. ರಾಯಭಾಗದ ಒಂದು ಶಾಸನದಲ್ಲಿ 'ನೂಲೆಗಂಪಣ ಮಧ್ಯವರ್ತಿ ಬಂಮಣವಾಡಿ ಗ್ರಾಮಂ' ಎಂಬ ಉಲ್ಲೇಖ ಬಂದಿದೆ. ಮೇಲಿನ ನೂಲೆನಾಡು ಮತ್ತು ಈ ನೂಲೆಗಂಪಣ ಒಂದೇ ಇರಲು ಸಾಕು.

ನೆಲೆವೀಡು

ಅರಸನ ಸ್ಥಿರ ರಾಜಧಾನಿ.

ಪಂಚಮಠಸ್ಥಾನ

ಗ್ರಾಮದಲ್ಲಿಯ ಐದು ಮಠಗಳು ಎಂದು ಇದರ ಅರ್ಥ. ಮೂಲದಲ್ಲಿ ಇದು ಐದು ದೇವಾಲಯಗಳನ್ನು ಸೂಚಿಸುತ್ತಿದ್ದಿತು. ಅವು: ಹರಿ, ಹರ, ಬ್ರಹ್ಮ, ಜಿನ ಹಾಗೂ ಬುದ್ಧ ದೇವಾಲಯಗಳು. ಈ ಐದು ದೇವಾಲಯಗಳು ಇರದ ಕೆಲವು ಗ್ರಾಮಗಳಲ್ಲಿ, ಬೇರೆ ದೇವತೆಗಳ ದೇವಾಲಯಗಳನ್ನೊಳಗೊಳ್ಳಬಹುದಿತ್ತು; ಈ ಪರಿಭಾಷೆ. ಉದಾ: ತೇರದಾಳ ಶಾಸನದ 'ಬುಧ, ಮಾಧವ, ಅರ್ಕ, ಶಂಕರ, ಜಿನ ಸದ್ಮದಿಂ' ಎಂಬ ವಾಕ್ಯವನ್ನು ಗಮನಿಸಬೇಕು. ಕೆಲವು ಊರುಗಳಲ್ಲಿ ಈ ಸಂಖ್ಯೆ ಐದಕ್ಕೆ ಹೆಚ್ಚು ಇಲ್ಲವೆ ಕಡಿಮೆ ಇದ್ದರೂ 'ಪಂಚಮಠಸ್ಥಾನ' ಎಂದು ಬಳಸುವುದು.

ಶಾಸನದಲ್ಲಿ ಪರಂಪರೆಯಾಗಿದೆ. ದತ್ತಿ ಕೊಡುವಾಗ ಉಪಸ್ಥಿತವಾಗಿರುವುದು, ದತ್ತಿಗಳನ್ನು ಸಂರಕ್ಷಿಸುವುದು, ಕೆಲವು ಸಲ ಅವುಗಳನ್ನು ಸ್ವೀಕರಿಸುವುದು ಈ 'ಪಂಚಮಠ ಸ್ಥಾನ'ದವರ ಕರ್ತವ್ಯವಾಗಿದ್ದಿತು.

ಪಂಚಮಹಾಪಾತಕ

ಐದು ಮಹಾಪಾಪಗಳು. ಅವು : ೧. ಬ್ರಹ್ಮಹತ್ಯ ೨. ಸುರಾಪಾನ ೩. ಸ್ತೇಯ (ಆಸ್ತಿಯ ಕಳವು) ೪. ಗುರ್ವಂಗನಾಗಮನ ೫. ಮಹಾಪಾತಕಿ ಸಂಸರ್ಗ. ಅಥವಾ ೧. ಸ್ತ್ರೀವಧೆ ೨. ಬಾಲವಧೆ ೩. ಗೋವಧೆ ೪. ಬ್ರಾಹ್ಮಣವಧೆ ೫. ಋಷಿವಧೆ. ಪಂಚಮಹಾಪಾತಕಗಳು ಯಾವುವೆಂಬುದರ ಬಗ್ಗೆ ಶಾಸ್ತ್ರಗ್ರಂಥಗಳಲ್ಲಿ ಒಮ್ಮತವಿಲ್ಲ.

ಪಂಚಮಹಾಶಬ್ದ

ಪಂಚಮಹಾಶಬ್ದಗಳಿಂದ ಗೌರವಿಸಿಕೊಳ್ಳುವ ಅಧಿಕಾರ, ರಾಜರಿಗೆ ಮತ್ತು ರಾಜಮಾನ್ಯರಿಗೆ ಇದ್ದಿತು. ಇವು : ೧. ಶೃಂಗ (ಕೊಂಬು) ೨. ತಮ್ಮಟೆ ೩. ಶಂಖ ೪. ಭೇರಿ ೫. ಜಯಘಂಟೆ.

ಬೇರೆಬೇರೆ ಕಾಲ ಮತ್ತು ಸ್ಥಳಗಳಲ್ಲಿ ಈ ವಾದ್ಯಗಳು ಸ್ವಲ್ಪ ವ್ಯತ್ಯಾಸ ಹೊಂದುತ್ತಿದ್ದುವು. ೧. ಭೇರಿ ೨. ನಿಸ್ಸಾಳ ೩. ಮೃದಂಗ ೪. ಜಯಘಂಟೆ ೫. ಕಹಳೆ ಎಂದು ಮತ್ತೊಂದು ಕಡೆ ಬಂದಿದೆ.

ಪಟ್ಟಣಸ್ವಾಮಿ

ಪಟ್ಟಣದಲ್ಲಿಯ ವರ್ತಕಸಂಘದ ಮುಖ್ಯಸ್ಥನೆಂದು ವಿದ್ವಾಂಸರು ಹೇಳುತ್ತ ಬಂದಿದ್ದಾರೆ. ಬಹುಶಃ ಗ್ರಾಮದಲ್ಲಿ ಸಂತೆ ವ್ಯವಸ್ಥೆ ನೋಡಿಕೊಳ್ಳುವ ಅಧಿಕಾರಿಯಾಗಿರಬಹುದು.

ಪಣ

(>ಹಣ). ಪ್ರಾಚೀನ ಕಾಲದ ನಾಣ್ಯವಿಶೇಷ. ಗದ್ಯಾಣದ ೧/೧೦ ಭಾಗ.

ಪತ್ತೊನ್ದಿ

ಹತ್ತರಲ್ಲಿ ಒಂದು ಭಾಗ. ಸುಂಕದ ಒಂದು ಪ್ರಕಾರವಿದು. ಇದಕ್ಕೆ ಸಮಾನವಾದ ಸಂಸ್ಕೃತ ಶಬ್ದ ದಶಬಂಧ (>ದಸವಂದ).

ಪವಿತ್ರ

ಶ್ರಾವಣಶುದ್ಧ ಪೌರ್ಣಿಮೆಯಂದು (ನೂಲಹುಣ್ಣಿಮೆ) ದೇವರಿಗೆ ಪವಿತ್ರಾರೋಪಣ ಮಾಡುವ (=ಜನಿವಾರ ತೊಡಿಸುವ) ಉತ್ಸವ, ಶಾಸನಗಳಲ್ಲಿ 'ನೂಲಪರ್ವ' ಎಂದೂ ಇದಕ್ಕೆ ಪರ್ಯಾಯ ನಾಮವಿದೆ. ಇದು 'ಚೈತ್ರಪವಿತ್ರ' ಎಂದು ಸಮಸ್ತಪದವಾಗಿ ಬರುವುದು ಒಂದು ವಿಶೇಷ (ನೋಡಿ : ಚೈತ್ರ).

ಪೆಸುಂಬೆವಣ

(ಪಸುಂಬೆ>ಹಸುಬೆ=ಚೀಲ). ಚೀಲದಲ್ಲಿ ಸರಕುಗಳನ್ನು ತುಂಬಿ, ಹೆಗಲ ಮೇಲೆ ಇಲ್ಲವೆ ಎತ್ತು, ಕತ್ತೆ, ಕೋಣ, ಕುದುರೆ ಮುಂತಾದ ಪ್ರಾಣಿಗಳ ಮೇಲೆ ಹೇರಿಕೊಂಡು ಒಯ್ಯುವಾಗ ಕೊಡುವ ಸುಂಕ.

ಪಾರಮೇಶ್ವರ ದತ್ತಿ

ಸಂಪೂರ್ಣ ಸ್ವಾಮಿತ್ವದ ದಾನ.

ಪಾಳಿಧ್ವಜ

"ರಾಷ್ಟ್ರಕೂಟರ ಶಾಸನಗಳಲ್ಲಿ ಇದು ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ... ಮೊದಲನೆಯ ಅಮೋಘವರ್ಷನ ಗುರುವಾದ ಜಿನಸೇನಾಚಾರ್ಯರ ಆದಿಪುರಾಣದಲ್ಲಿ ಇದರ ವಿವರಣೆಯಿದೆ. ಪಾಳಿಧ್ವಜವೆನ್ನುವುದು ಒಂದು ಧ್ವಜವಲ್ಲ; ಅದೊಂದು ಧ್ವಜಗಳ ವಿಶಿಷ್ಟವಿನ್ಯಾಸ. ಪಾಲಿಯೆಂದರೆ ಸಂಸ್ಕೃತದಲ್ಲಿ ಸಾಲು ಎಂದರ್ಥ. ಹತ್ತು ದಿಕ್ಕುಗಳಲ್ಲಿಯೂ ಒಂದೊಂದು, ರೀತಿಯ, ನೂರೆಂಟು ಧ್ವಜಗಳು; ಎಂದರೆ ಹತ್ತುದಿಕ್ಕುಗಳಿಂದ ಒಟ್ಟು ಒಂದು ಸಾವಿರದ ಎಂಬತ್ತು (೧೦೮೦) ಧ್ವಜಗಳು. ಇಂತಹ ಧ್ವಜವಿನ್ಯಾಸ ನಾಲ್ಕುಕಡೆಯಲ್ಲಿ ರೂಪುಗೊಂಡರೆ ಅದು ಪಾಳಿಧ್ವಜವೆನಿಸಿ ಕೊಳ್ಳುತ್ತದೆ. ಎಂದರೆ ಪಾಳಿಧ್ವಜದಲ್ಲಿ ಒಟ್ಟು ನಾಲ್ಕು ಸಾವಿರದ ಮುನ್ನೂರ ಇಪ್ಪತ್ತು (೪೩೨೦) ಧ್ವಜಗಳಿರಬೇಕು" (ನೋಡಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು. ೩೩೭).

ಪುರಿಗೆಱೆ ಮೂನುರು

ಪುರಿಗೆಱೆ ಮೂನುರು, ಪುರಿಕರದೇಶವೆಂಬಿವು ಪರ್ಯಾಯನಾಮಗಳು. ಪುಲಿಗೆರೆ (ಈಗಿನ ಲಕ್ಷ್ಮೇಶ್ವರ) ಮೊದಲು ಮಾಡಿಕೊಂಡು ಮೂರುನೂರು ಗ್ರಾಮಗಳ ಆಡಳಿತದ ಒಂದು ವಿಭಾಗ. ಇದರ ರಾಜಧಾನಿ ಪುಲಿಗೆರೆ (=ಲಕ್ಷ್ಮೇಶ್ವರ)

ಈ ನಾಡಿನ ಉತ್ತರಕ್ಕೆ 'ಬೆಳ್ವೊಲಮೂನುರು', ಪಶ್ಚಿಮಕ್ಕೆ 'ಹಾನುಂಗಲ್ಲಯ್ನೂರು', ದಕ್ಷಿಣಕ್ಕೆ 'ಬನವಾಸಿ ಪನ್ನಿರ್ಚ್ಛಾಸಿರ', ಪೂರ್ವಕ್ಕೆ 'ಮಾಸವಾಡಿ ನೂರನಲವತ್ತು' ನಾಡುಗಳಿದ್ದವು.

ಕುಂದಗೋಳ ತಾಲೂಕಿನ ದಕ್ಷಿಣ ಪೂರ್ವಭಾಗ,. ಸಿಗ್ಗಾವಿ ತಾಲೂಕಿನ ಪೂರ್ವ ಮತ್ತು ಉತ್ತರಭಾಗ, ಸವಣೂರ ತಾಲೂಕು ಮತ್ತು ಲಕ್ಷ್ಮೇಶ್ವರ ತಾಲೂಕುಗಳ ಪ್ರದೇಶ ಇದರಲ್ಲಿ ಒಳಗೊಂಡಿದ್ದಿತು.

ಪೆರ್ಜೆಱಪು

(<ಪಿರಿಯ+ಸೆಱಪು), ದೊಡ್ಡ ಸತ್ಕಾರಸಮಾರಂಭ, ನೋಡಿರಿ : "ನರಂಗೆ ಸೆ–ಱಪುಗೆಯ್ದನನಂತಂ" (ಪಂ.ಭಾ. ೪–೪೪).

ಬಟ್ಟೆಬಾಧೆ

ಬಟ್ಟೆಯ (ರಸ್ತೆಯ ಮೇಲೆ ಸರಕುಗಳನ್ನು ಸಾಗಾಟ ಮಾಡುವುದಕ್ಕೆ ವಿಧಿಸುವ ರಸ್ತೆಯ ಸುಂಕ. (ಬಾಧೆ=ಸುಂಕ).

ಬನವಸೆ ಮಣ್ಡಲ

೧೨೦೦೦ ಗ್ರಾಮಗಳ ಈ ನಾಡಿಗೆ "ಬನವಸೆ ಪನ್ನಿರ್ಚ್ಛಾಸಿರ"ವೆಂದು ಇನ್ನೊಂದು ಹೆಸರು. ತುಂಗಭದ್ರಾ ಮತ್ತು ವರದಾನದಿಗಳ ನಡುವಿನ ಪ್ರದೇಶವಿದು.

ಬ್ರಹ್ಮಾದೇಯ

ಇನ್ನೊಂದು ರೂಪ ಬ್ರಹ್ಮದೇಯ. ಇದು ಬ್ರಾಹ್ಮಣರಿಗೆ ಕೊಟ್ಟ ದತ್ತಿಯಾಗಿದೆ. ಕರ್ನಾಟಕದಲ್ಲಿ ಇದು 'ಬ್ರಹ್ಮದೇಜ್ಜಂ' ರೂಪದಲ್ಲಿ ಪ್ರಥಮವಾಗಿ ಮಳ್ಳವಳ್ಳಿಯ ಪ್ರಾಕೃತಶಾಸನ (ಕ್ರಿ.ಶ. ೧೫೦)ದಲ್ಲಿ ಬರುತ್ತದೆ.

ಬಾಗೆನಾಡೆಪ್ಪತ್ತು

ಬಾಗೆನಾಡೆಪ್ಪತ್ತರ ಇನ್ನೊಂದು ಹೆಸರು ಬಾಗಡಿಗೆ (=ಬಾಗಿಲುಕೋಟೆ) ಎಪ್ಪತ್ತು (?). ಈ ಗ್ರಾಮವನ್ನು ಮಧ್ಯೆಮಾಡಿಕೊಂಡ ಎಪ್ಪತ್ತು ಹಳ್ಳಿಗಳ ಒಂದು ಆಡಳಿತದ ವಿಭಾಗವಿದು.

ಬಾಳ್ಗಟ್ಟು

ಬಾಳ್=ಖಡ್ಗ, ಕಟ್ಟು (>ಕರ್ಚ್ಚು)=ತೊಳೆ. ಕಾಳಗದಲ್ಲಿ ಹೋರಾಡಿದ ವೀರನ ಕತ್ತಿಯನ್ನು ಸಮಾರಂಭಪೂರ್ವಕ ತೊಳೆದು, ಬದುಕಿಬಂದ ಪಕ್ಷದಲ್ಲಿ ಆತನಿಗೆ, ವೀರಸ್ವರ್ಗವೇರಿದ ಪಕ್ಷದಲ್ಲಿ ಆತನ ಕುಟುಂಬದವರಿಗೆ ಗೌರವಾರ್ಥ ಕೊಟ್ಟ ದಾನ. (ಬಾಟ್>ಬಾಳ್=ಜೀವನ+ಗಟ್ಟು= ಗಳಿಸು=ಬಾಳ್ಗಚ್ಚು=ಬದುಕಿಗಾಗಿ ಹೊಲವನ್ನು ಗಳಿಸುವುದು ಎಂದೂ ಅರ್ಥ ಹೇಳುತ್ತಾರೆ. ನೋಡಿ: ಪ್ರಬುದ್ಧ ಕರ್ಣಾಟಕ ೫೧-೩). ಇವುಗಳಲ್ಲಿ ಮೊದಲಿನದೇ ಸರಿ ಇರಬಹುದು.

ಬೀಳವೃತ್ತಿ

ಈ ಶಬ್ದ ವೀಡಾನುವೃತ್ತಿ, ಬೀಡಾನುವೃತ್ತಿ, ಬೀಳವೃತ್ತಿ ಮುಂತಾದ ಹೆಸರುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಒಂದು ರೀತಿಯ ಉಂಬಳಿ (ನೋಡಿ : ಅಂಕಣ ೧೯೫೧ ಸೆಪ್ಟೆಂಬರ್)

ರಾಜನ ಸಂಬಂಧಿಕರಾದ ಯುವರಾಜ, ಕುಮಾರ, ವಿಶ್ವಾಸಪಾತ್ರರಾದ ಮಂಡಳೇಶ್ವರ, ದಂಡನಾಯಕರುಗಳ ಸಂಬಂಧದಲ್ಲಿ ಈ ಶಬ್ದಪ್ರಯೋಗ ಕಂಡುಬರುತ್ತದೆ. ಈ ಬೀಳವೃತ್ತಿ, ಬೇರೆಕಡೆ ಬರುವ ಬೀಳಾನುವೃತ್ತಿಗಳು ಭಿನ್ನ ಶಬ್ದಗಳೋ ಅಭಿನ್ನ ಶಬ್ದಗಳೋ ಸಂದೇಹ.

ಬೆಂಗಿ

ವೆಂಗಿಮಂಡಲ, ಸಾವಿರ ಗ್ರಾಮಗಳ ಈ ನಾಡು 'ಬೆಂಗಿಸಹಸ್ರ'ವೆಂದು ಪ್ರಸಿದ್ಧವಾಗಿದೆ. ಕೃಷ್ಣಾ ಮತ್ತು ಗೋದಾವರಿ ನದಿಗಳ ಮುಖಭಾಗದ ನಡುವಿನ ಪ್ರದೇಶವಿದು.

ಬೆಳ್ವೊಲ ಮೂನೂಱು

ಮುನ್ನೂರು ಹಳ್ಳಿಗಳನ್ನು ಒಳಮಾಡಿಕೊಂಡ ಒಂದು ಆಡಳಿತ ವಿಭಾಗ. ಇದರಲ್ಲಿ :

೧. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ದಕ್ಷಿಣ ಮತ್ತು ಪೂರ್ವ ಭಾಗ.

೨. ಧಾರವಾಡ ಜಿಲ್ಲೆಯ ನರಗುಂದ, ನವಿಲುಗುಂದ, ಗದಗ ತಾಲೂಕುಗಳು; ಹುಬ್ಬಳ್ಳಿ ತಾಲೂಕಿನ ಪೂರ್ವಭಾಗ, ಕುಂದಗೋಳ ತಾಲ್ಲೂಕಿನ ಉತ್ತರ ಭಾಗ ಹಾಗೂ ರೋಣತಾಲೂಕಿನ ದಕ್ಷಿಣ-ಪಶ್ಚಿಮ ಭಾಗ.

೩. ರಾಯಚೂರು ಜಿಲ್ಲೆಯ ಯಲಬುರ್ಗಿ ತಾಲೂಕಿನ ದಕ್ಷಿಣ–ಪಶ್ಚಿಮ ಭಾಗ.

೪. ವಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ದಕ್ಷಿಣ–ಪಶ್ಚಿಮ ಭಾಗ.

೫. ಹುನಗುಂದ ತಾಲೂಕಿನ ಹುನಗುಂದ ಮೂವತ್ತು.

– ಈ ಭೂಪ್ರದೇಶಗಳು ಸಮಾವೇಶಗೊಂಡಿದ್ದವು. ಇದರ ರಾಜಧಾನಿ ಅಣ್ಣಿಗೆರೆ ಈ ಮುನ್ನೂರು ಹಳ್ಳಿಗಳಲ್ಲಿ ೨೯೨ ಹಳ್ಳಿಗಳನ್ನು ಹೀಗೆ ಗುರುತಿಸಲಾಗಿದೆ.

"ಬೆಳ್ವೊಲ ೩೦೦ ಉಪವಿಭಾಗಗಳನ್ನು ಬೆನ್ನದಡಿ–೭೦, ಚಿಂಚಲಿ–೫೦, ನವಲಗುಂದ–೪೦, ಕೊಳನೂರು–೩೦, ಕುಕನೂರು–೩೦, ನರೆಯಂಗಲ್–೧೨, ಬೆಳ್ವಣಿಗೆ–೧೨ ಎಂದು ಹುಡುಕಿ, ತರುವಾಯ, ಮುಳುಗುಂದ–೧೨ನ್ನು ಸೇರಿಸಿ ಒಟ್ಟು ೨೫೬ ಗ್ರಾಮಗಳನ್ನು ಡಾ. ರಿತ್ತಿ ಲೆಕ್ಕ ಮಾಡಿರುವರು. ಈ ಹಿಂದೆ ನಾವು ಗುರುತಿಸಿದ ಹುನಗುಂದ–೩೦, ಕಿಸುವೊಳಲು–೬ಗಳನ್ನು ಕೂಡಿಸಿ ಈ ಸಂಖ್ಯೆಯನ್ನು ೨೯೨ಕ್ಕೆ ಮುಟ್ಟಿಸಬಹುದು. ಆದರೆ ೩೦೦ರನ್ನು ಪೂರ್ಣಗೊಳಿಸಲು ಬೇಕಾಗುವ ೮ ಗ್ರಾಮಗಳ ಇನ್ನೊಂದು ವಿಭಾಗವನ್ನು ಶೋಧಿಸಬೇಕಾಗಿದೆ" (ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ. ಪು. ೪೮).

ಭಟ್ಟವೃತ್ತಿ

ವಿದ್ಯಾರ್ಥಿಗಳಿಗೆ ಬೋಧಿಸುವ ಅಧ್ಯಾಪಕ(=ಭಟ್ಟ)ರ ಚರಿತಾರ್ಥಕ್ಕಾಗಿ ಕೊಡುವ ಉಂಬಳಿ.

ಭರತವರ್ಷ

ದುಷ್ಯಂತನ ಮಗನಾದ ಭರತಚಕ್ರವರ್ತಿ ಆಳಿದ ದೇಶ; ಭಾರತದೇಶ, ಮಾರ್ಕಂಡೇಯ ಪುರಾಣ(LVII, ೫೯)ದಲ್ಲಿ ಇದರ ಮೇರೆಗಳನ್ನು ಹೀಗೆ ಹೇಳಿದೆ:

ದಕ್ಷಿಣ ಪರತೋಹ್ಯಸ್ಯಪೂರ್ವೇಣ ಚ ಮಹೋದಧಿಃ ।
ಹಿಮಾವಾನುತ್ತರೇಣಾಸ್ಯ ಕಾರ್ಮುಕಸ್ಯ ಯಥಾ ತಥಾ ॥

ಮತ್ತರ

ಇದಕ್ಕೆ ಮತ್ತಲ, ಮತ್ತಲ್, ಮತ್ತರ್ ಎಂದೂ ಹೆಸರುಗಳುಂಟು. ಮತ್ತ, ಮ. ಎಂಬ ಸಂಕ್ಷೇಪ ರೂಪಗಳೂ ಉಂಟು. ಇದು ಭೂಮಿಯ ಅಳತೆಯ ಒಂದು ಪ್ರಮಾಣ, ಮತ್ತರಕ್ಕಿಂತ ಸಣ್ಣ ಅಳತೆಯ ಪ್ರಮಾಣವೆಂದರೆ ಕಂಬ, ಕಮ್ಮ, ಒಂದು ಮತ್ತರಕ್ಕೆ ಎಷ್ಟು ಕಂಬ? ಎಂಬ ಪ್ರಶ್ನೆಗೆ ಶಾಸನಗಳಲ್ಲಿ ಏಕಮತವಿಲ್ಲ. ಅಮೃತಾ ಪುರಶಾಸನದ ಪ್ರಕಾರ ೧ ಮತ್ತರಕ್ಕೆ ೧೦೦ ಕಂಬಗಳೆಂದು ಅರ್ಥವಾಗುತ್ತದೆ.

ಅದು ಹೀಗಿದೆ :

ಹೆಗ್ಗಡೆ ಜಕ್ಕಯ್ಯನಿಗೆ ಕೊಟ್ಟ ಭೂಮಿ – ೧೨ ಕಂಬ
ದೇಸಿಗರ್ಗ್ಗೆ ಕೊಟ್ಟ ಭೂಮಿ – ೬೦ ಕಂಬ
ನೈವೇದ್ಯಕ್ಕೆ ಕೊಟ್ಟ ಭೂಮಿ – ೪೦ ಕಂಬ

ಶಾಸನದಲ್ಲಿ ಈ ಒಟ್ಟು ಮೊತ್ತ (೧೧೨ ಕಂಬ)ಕ್ಕೆ ೧ ಮತ್ತರ ೧೨ ಕಂಬ ಗಳೆಂದು ಹೇಳಲಾಗಿದೆ. ಕಾರಣ ೧ ಮತ್ತರಕ್ಕೆ ೧೦೦ ಕಂಬಗಳು. ಹರಪನಹಳ್ಳಿ ತಾಲೂಕು ಕುರವತ್ತಿ ಶಾಸನದ ವಿವರಗಳಿಂದ ಒಂದು ಮತ್ತರಕ್ಕೆ ೬೦೦ ಕಂಬ ಗಳೆಂದು ತಿಳಿದು ಬರುತ್ತದೆ. ಅದು ಹೀಗಿದೆ:

ಈ ಶಾಸನದಲ್ಲಿ ದಾನ ಕೊಟ್ಟ ಭೂಮಿಯ ಪ್ರಮಾಣಗಳನ್ನು ಕೂಡಿಸಿದರೆ ಒಟ್ಟು ೪ ಮತ್ತರು ೩೧೦೦ ಕಂಬಗಳಾಗುತ್ತವೆ. ಇದಕ್ಕೆ ಶಾಸನದಲ್ಲಿ-ಮತ್ತರು ೪೦೦ ಕಂಬಗಳೆನ್ನಲಾಗಿದೆ. ೩೧೦೦ ಕಂಬಗಳಿಗೆ ೬೦೦ ಲೆಕ್ಕದಿಂದ ೩ ಮತ್ತರು ೪೦೦ ಕಂಬಗಳಾಗುತ್ತವೆ. ಈ ಮೂರು ಮತ್ತರಗಳನ್ನು ೪ ಮತ್ತರಗಳಲ್ಲಿ ಕೂಡಿಸಿ ಒಟ್ಟು ಮೊತ್ತ ೭ ಮತ್ತರ ೪೦೦ ಕಂಬಗಳಾಗುತ್ತವೆ ಅಳೆಯುವ ಸಾಧನಗಳಾದ ಈ ಕಂಬಗಳ ಉದ್ದಳತೆ. ಪ್ರದೇಶದಿಂದ ಪ್ರದೇಶಕ್ಕೆ ಹೆಚ್ಚು ಕಡಿಮೆ ಇದ್ದುದರಿಂದ ಈ ಮತ್ತರದ ಕ್ಷೇತ್ರ ಸಾಧಾರಣವಾಗಿ ಈಗಿನ ಒಂದು ಎಕರೆಯಿಂದ ೮ ಎಕರೆವರೆಗೆ ಆಗುತ್ತದೆ.

ಮನ್ನೆಯ

(ಮಾನ್ಯ>ಮನ್ನೆ). ವಂಶಪಾರಂಪರ್‍ಯವಾಗಿ ಗ್ರಾಮವನ್ನು ಉಪಭೋಗಿಸುವ ವ್ಯಕ್ತಿ. ಗ್ರಾಮದ ಉತ್ಪನ್ನವನ್ನು ಅವನು ಕೆಲವು ಬ್ರಾಹ್ಮಣರಲ್ಲಿ ಹಂಚಿಕೊಳ್ಳುತ್ತಿದ್ದ. ಅವರೇ ಮಹಾಜನರು. ಗ್ರಾಮದ ಸಾಂಸ್ಕೃತಿಕ, ಧಾರ್ಮಿಕ, ಚಲನವಲನಗಳು ಇವರ ವಶದಲ್ಲಿದ್ದುವು.

ಮಹಾಮಂಡಳೇಶ್ವರ

ಚಕ್ರವರ್ತಿಗೆ ಸ್ವಾಮಿನಿಷ್ಠನಾಗಿ ಕೆಲವು ಮಂಡಳಗಳನ್ನು ವಂಶಪಾರಂಪರ್ಯ ದಿಂದ ಆಳುವವ.

ಮಾಟಕೂಟ

ಮಾಟ (<ಮಾಡ?)=ಉಪ್ಪರಿಗೆ; ಕೂಟ=ಶಿಖರ, ತ್ರಿಕೂಟ, ಪಂಚಕೂಟ, ಸಹಸ್ರಕೂಟ ಶಬ್ದಗಳಲ್ಲಿ ಈ 'ಕೂಟ' ಶಬ್ದಪ್ರಯೋಗವನ್ನು ಗಮನಿಸಬೇಕು.

ಮಾಸವಾಡಿ ನೂರನಾಲ್ವತ್ತು

ಮುಂಡರಗಿ ತಾಲ್ಲೂಕು, ಹಾವೇರಿ ತಾಲ್ಲೂಕಿನ ವರದಾನದಿಯ ಉತ್ತರದ ಪೂರ್ವಭಾಗ ಮತ್ತು ಗದಗ ತಾಲೂಕಿನ ಪೂರ್ವ ಭಾಗಗಳನ್ನೊಳಗೊಂಡ ಒಂದು ಆಡಳಿತ ವಿಭಾಗ. ಲಕ್ಕುಂಡಿ, ಈ ವಿಭಾಗದಲ್ಲಿ ಸಮಾವೇಶವಾಗಿದ್ದಂತೆ ತೋರುತ್ತದೆ. ಇದು ೧೪೦ ಗ್ರಾಮಗಳನ್ನೊಳಗೊಂಡ ಪ್ರದೇಶ.

ಮುಂಮ್ಮುರಿದಂಡಂಗಳು

ವಿಜಾಪುರ ಜಿಲ್ಲೆಯ ಐಹೊಳೆಯಲ್ಲಿ ಒಂದು ಕಾಲಕ್ಕೆ "ಆಯ್ಯಾವೊಳೆಯ ಆಯ್ನೂರ್ವ್ವರು" ಎಂಬ ಅಯ್ದುನೂರು ವ್ಯಾಪಾರೀ ಸದಸ್ಯರ ಸಂಘವೊಂದು ಇದ್ದಿತು. ಮುಂದೆ ಯಾವುದೇ ಊರಲ್ಲಿಯ ವ್ಯಾಪಾರಿ ಸಂಸ್ಥೆಗಳಲ್ಲಿ ಎಷ್ಟೇ ಸದಸ್ಯರಿದ್ದರೂ ಇದೇ ಹೆಸರಿನಿಂದ ಕರೆದುಕೊಳ್ಳುತ್ತಿದ್ದರು.

"ಮುಂಮುರಿ ದಂಡ" ಎಂಬುದು ಬಹುಶಃ ಇವರ ಪರ್ಯಾಯನಾಮವೋ, ಈ ಸಂಘದ ಸೈನಿಕ ವರ್ಗದ ನಾಮಾವೋ ಆಗಿರಬೇಕು.

ರಂಗಭೋಗ

ದೇವಾಲಯದ ರಂಗಮಂಟಪದಲ್ಲಿ ದೇವರ ಉಪಭೋಗಕ್ಕಾಗಿ ನಡೆಯುವ ಕಾರ್ಯಕ್ರಮಗಳು. ಉದಾ: ನೃತ್ಯ, ಗೀತ, ವಾದ್ಯ ಮುಂತಾದವು.

ಲವಣಸಮುದ್ರ

ಏಳು ದ್ವೀಪಗಳಲ್ಲಿ ಜಂಬೂದ್ವೀಪವೂ ಒಂದು. ಇದು ಲವಣ ಸಮುದ್ರದಿಂದ ಸುತ್ತು ಬಳಸಲ್ಪಟ್ಟಿದೆ ಎಂದು ಪುರಾಣನಂಬಿಕೆ. (ಅಗ್ನಿಪುರಾಣ ಆ. ೧೦೮, ಪ. ೧–೩).

ವಸಂತೋತ್ಸವ

ವಸಂತ ಋತುವಿನಲ್ಲಿ ಆಚರಿಸುವ ಒಂದು ಉತ್ಸವ. ಬಹುಶಃ ಇದು ಕಾಮದಹನ ಹಬ್ಬವಾದ ಹೋಳಿಯ ಹುಣ್ಣಿಮೆಯಾಗಿರಬಹುದು.

ಶ್ರೀಕರಣ

ರಾಜ್ಯದ ಆಯವ್ಯಯ ನೋಡಿಕೊಳ್ಳುವ ಅಧಿಕಾರಿ.

ಸಪ್ತಕೊಂಕಣ

ನಂದಲಾಲ ಡೇ ಅವರ ಪ್ರಕಾರ ೧. ಕೇರಳ ೨. ತುಳು ೩. ಗೋವೆ ೪. ಕೊಂಕಣ ೫. ಕರಹಾಟಕ ೬. ಬರಾಲಾಟ ೭. ಬರ್ಬರ–ಈ ಏಳು ನಾಡು 'ಸಪ್ತಕೊಂಕಣ.'

ಸಪ್ತಸೋಮ ಸಂಸ್ಥಾವಭೃತಾವಗಾಹನ

೧. ಅಗ್ನಿಷ್ಟೋಮ ೨. ಅತ್ಯಸಿಷ್ಟೋಮ ೩. ಉಕ್ಥ್ಯ ೪. ಷೋಡಶಿನ್ ೫. ಅತಿರಾತ್ರ ೬. ವಾಜಪೇಯ ೭. ಆಪ್ತೋರ್ಯಾಮ–ಈ ಏಳು ಯಜ್ಞಗಳನ್ನು ನೆರವೇರಿಸಿ ಮಾಡುವ ಸ್ನಾನ.

ಸರ್ವಬಾಧಾಪರಿಹಾರ

ತೆರಿಗೆ ಮೊದಲಾದ ಎಲ್ಲ ಬಗೆಯ ಬಾಧೆಗಳಿಂದ ಮುಕ್ತ.

ಸಟ್ಟಿಜ್ಗ

೧. ಶಿವಮೊಗ್ಗ ಜಿಲ್ಲೆಯ 'ಸವಳಂಗ' ಎಂಬ ಊರು (ಪ್ರಬುದ್ಧ ಕರ್ಣಾಟಕ ೨೦–೩)

೨. ಷಡ್ಭಾಗ>ಸಟ್ಟಿಜ್ಗ=ಉತ್ಪನ್ನ ೧/೬ ತೆರಿಗೆ (ಪ್ರಬುದ್ಧ ಕರ್ಣಾಟಕ ೪೭–೪).

೩. ಷಟ್+ಪಾಂಗ>ಸಟ್ಟಿಜ್ಗ=ಉತ್ಪನ್ನ ೧/೬ ತೆರಿಗೆ. (ಪ್ರಬುದ್ಧ ಕರ್ಣಾಟಕ ೫೦–೪)

೪. ಸರ್ಹಂಗ (ಪರ್ಶಿಯನ್ ಪದ)>ಶರಭಂಗ (ಸಂ)>ಸರಭಂಗ (ದ್ಭ)> ಸಟ್ಟಿಂಗ=ದಳಪತಿ (ಪ್ರಬುದ್ಧ ಕರ್ಣಾಟಕ ೫೧–೩)

೫. ಈಗಿನ 'ಸವಲಂಗ' ಹೆಸರಿನ ಊರು. (ಪ್ರಬುದ್ಧ ಕರ್ಣಾಟಕ ೫೧-೩).

೬. ಸಬ್ಬಜ್ಗ > [ಸವ್ವಂಗ] > ಸವಂಗ > ಸವಗ(ರಕ್ಷಣೆಯ ಕವಚ), ಸಬ್ಬಜ್ಗದರ್=ಪಡೆಯನ್ನು ರಕ್ಷಿಸುವ ಮುಂಚೂಣಿಯ ಸೈನಿಕರು. (ಪ್ರಬುದ್ಧ ಕರ್ಣಾಟಕ ೫೨-೩).

ಸಾದ

ಸಾರ್ವಜನಿಕ ಸ್ಥಳದಲ್ಲಿ ಕುಳಿತು ಮಾರಾಟ ಮಾಡುವವರಿಂದ ತೆಗೆದು ಕೊಳ್ಳುವ ಸುಂಕ (?)

ಸಿದ್ಧಾಯ

ನಿಶ್ಚಿತ ಉತ್ಪನ್ನ = Recurring Income (?)

ಸುವರ್ಣವೃಷಭಧ್ವಜ

ಕಲಚೂರ್ಯರ ಧ್ವಜ. ಇದರ ಮೇಲೆ ಬಂಗಾರಬಣ್ಣದ ನಂದಿಯ ಚಿತ್ರವನ್ನು ಬಿಡಿಸಲಾಗಿದ್ದಿತು. ಮಹಾಶಿವಭಕ್ತರಾದ ಮೂಲಕ ಅವರ ವಾದ್ಯಗಳಲ್ಲಿ ಡಮರು, ಧ್ವಜದಲ್ಲಿ ವೃಷಭಚಿತ್ರಗಳು ಶೋಭಿಸುತ್ತಿದ್ದವು. ಬಸವಣ್ಣನವರ ವಂಶಜನಾದ ಹಾಲಬಸವಿದೇವನನ್ನು "ಸುವರ್ಣವೃಷಭಧ್ವಜಂ" ಎಂದು ಅರ್ಜುನವಾಡ ಶಾಸನ ಹೇಳುತ್ತಿರುವುದನ್ನೂ ಇಲ್ಲಿ ಗಮನಿಸಬೇಕು.

ಸೊಳಸ

ಧಾನ್ಯ ಅಳೆಯುವ ಒಂದು ಪ್ರಮಾಣ. ಬಹುಶಃ 'ಸೊಲಿಗೆ'ಯಾಗಿರಬಹುದು. ಎಣ್ಣೆ ಅಳೆಯುವ ಪ್ರಮಾಣಸೂಚಿಯಾಗಿ 'ಸೂಳಸಿಗೆ' ಎಂಬ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಈ 'ಸೊಳಸ' 'ಸೊಳಸಿಗೆ'ಗಳ ಸಂಬಂಧ ವಿಚಾರಾರ್ಹ.

ಹಾಗ (<ಪಾಗ)

ನಾಣ್ಯ ವಿಶೇಷ. ನಾಲ್ಕು ಹಾಗಗಳೆಂದರೆ ಒಂದು ಪಣ. ಹತ್ತು ಪಣಗಳೆಂದರೆ ಒಂದು ಗದ್ಯಾಣ.

ಹಾಗಿಲು ಹನ್ನೆರಡು

ಹಾಗಿಲುಗ್ರಾಮವನ್ನು ಮೊದಲು ಮಾಡಿಕೊಂಡು, ಹನ್ನೆರಡು ಹಳ್ಳಿಗಳ ಒಂದು ಆಡಳಿತ ವಿಭಾಗ. ಹಾಗಿಲುಗ್ರಾಮ ಯಾವುದೆಂಬುದು ತಿಳಿದು ಬಂದಿಲ್ಲ. ವಿಜಾಪುರ ಜಿಲ್ಲೆಯ ಪಡಿಯಕನೂರು (ಈಗಿನ ಪಡೇಕನೂರು) ಈ ಹಾಗಿಲು ಹನ್ನೆರಡರಲ್ಲಿದ್ದಿತು.

ಹಾನುಂಗಲ್ಲಯ್ನೂಱು

ಈಗಿನ ಹಾನಗಲ್ಲು ಮುಖ್ಯ ಮಾಡಿಕೊಂಡು ಆಯ್ದುನೂರು ಹಳ್ಳಿಗಳ ಆಡಳಿತ ಪ್ರದೇಶ. ಇದು ಮಹಾಮಂಡಳೇಶ್ವರರಾದ ಕದಂಬರ ಪ್ರಾಂತ. ಹಾನುಗಲ್ಲು ತಾಲೂಕು, ಸಿಗ್ಗಾವಿ ತಾಲೂಕಿನ ಪಶ್ಚಿಮ-ಉತ್ತರ ಭಾಗ, ಕುಂದಗೋಳ ತಾಲೂಕಿನ ದಕ್ಷಿಣ ಮೂಲೆ, ಕಾರವಾರ ಜಿಲ್ಲೆಯ ಮುಂಡಗೋಡ ತಾಲೂಕಿನ ಕೆಲವು ಭಾಗ. ಸಿದ್ದಾಪುರ ತಾಲೂಕಿನ ಕೆಲಭಾಗ-ಈ ಪ್ರಾಂತ ವ್ಯಾಪ್ತಿ.

ಹೆಜ್ಜುಗಿಯ ಹಬ್ಬ

ಹಿರಿಯ ಸುಗ್ಗಿಯ ಹಬ್ಬ (?) ಕಾರಹುಣ್ಣಿಮಗೆ ಹೊನ್ನಹುಗ್ಗಿಯ ಹಬ್ಬ ಎಂದೂ ಹೆಸರು. ಇವುಗಳ ಪರಸ್ಪರ ಸಂಬಂಧ ವಿಚಾರಾರ್ಹ.

ಹೊಸನಾಡೆಪ್ಪತ್ತು

ಕಾರವಾರ ಜಿಲ್ಲೆಯ ಮುಂಡಗೋಡ ಮತ್ತು ಸಿರ್ಸಿ ತಾಲೂಕುಗಳ ಕೆಲವು ಭಾಗಗಳನ್ನು ಮತ್ತು ಹಾನಗಲ್ಲು ತಾಲೂಕಿನ ಪಶ್ಚಿಮೋತ್ತರ ಭಾಗವನ್ನು ಒಳಗು ಮಾಡಿಕೊಂಡ ಎಪ್ಪತ್ತು ಹಳ್ಳಿಗಳ ಒಂದು ಆಡಳಿತವಿಭಾಗ. ಇದು "ಪಾನುಂಗಲ್ಲೈ ನೂರು" ನಾಡಿನಲ್ಲಿ ಸಮಾವೇಶಗೊಂಡಿದ್ದಿತು.

❖❖

ರಜತ ಮಹೋತ್ಸವ ಪ್ರಕಟನೆ

. . . .

SILVER JUBLEE PUBLICATION

ಧಾರವಾಡ ತಾಲೂಕಿನ ಶಾಸನಗಳು

INSCRIPATIONS OF DHARWAD TALUKA

ಧಾರವಾಡ ತಾಲೂಕಿನ ಶಾಸನಗಳು

ಸಂಪಾದಕರು

ಎಂ. ಎಂ. ಕಲಬುರ್ಗಿ

ಕನ್ನಡ ಅಧ್ಯಯನಪೀಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೬

INSCRIPTIONS OF DHARWAR TALUKA

EDITOR

M. M. KALBURGI

INSTITUTE OF KANNADA STUDIES

KAMATAK UNIVERSITY, DHARWAR

1976

*

ಪ್ರಸ್ತಾವನೆ

೧ | ಯೋಜನೆಯ ಶಿಲ್ಪ-ಸಾಧನೆ

ಪ್ರವೇಶ

ಕನ್ನಡ ಅಧ್ಯಯನಪೀಠದಲ್ಲಿ ಶಾಸನವಿಭಾಗ ಅಸ್ತಿತ್ವಕ್ಕೆ ಬಂದ ಕ್ಷಣದಿಂದಲೇ ಉಪಯುಕ್ತವೂ ವ್ಯಾಪಕವೂ ಆದ ಹಲವು ನಿಶ್ಚಿತಯೋಜನೆಗಳನ್ನು ಕಲ್ಪಿಸಿಕೊಂಡು ಮುನ್ನಡೆಯುತ್ತಲಿದೆ. ಅವು: ಶಾಸನಗಳ ಸೂಚಿಯ ರಚನೆ, ಶಾಸನವಿಷಯಕ್ಕೆ ಸಂಬಂಧಪಟ್ಟ ಸ್ವತಂತ್ರಕೃತಿಗಳ ರಚನೆ, ಶಾಸನಗಳ ಪರಿವೀಕ್ಷಣೆ-ಪ್ರಕಟನೆ ಮತ್ತು ಶಾಸನವಿಷಯಕ್ಕೆ ಸಂಬಂಧಪಟ್ಟ ಕೃತಿಗಳ ಅನುವಾದ. ಇವುಗಳಲ್ಲಿ 'ಶಾಸನಗಳ ಸೂಚಿಯ ರಚನೆ' ಯೋಜನೆಯ ಅಂಗವಾಗಿ ಧಾರವಾಡ ಜಿಲ್ಲೆಯ ಶಾಸನಸೂಚಿ, ವಿಜಾಪುರ ಜಿಲ್ಲೆಯ ಶಾಸನಸೂಚಿಗಳು ಪ್ರಕಟವಾಗಿವೆ. 'ಶಾಸನ ವಿಷಯಕ್ಕೆ ಸಂಬಂಧಪಟ್ಟ ಸ್ವತಂತ್ರಕೃತಿಗಳ ರಚನೆ' ಯೋಜನೆಯ ಅಂಗವಾಗಿ 'ಶಾಸನ ವ್ಯಾಸಂಗ' ಹೆಸರಿನ ಎರಡು ಸಂಪುಟಗಳು ಬೆಳಕು ಕಂಡಿವೆ. ಈಗ ಮೂರನೆಯದಾದ 'ಶಾಸನಗಳ ಪರಿವೀಕ್ಷಣೆ-ಪ್ರಕಟನೆ' ಯೋಜನೆಯ ಅಂಗವಾಗಿ 'ಧಾರವಾಡ ತಾಲೂಕಿನ ಶಾಸನಗಳು' ಹೊರಬರುತ್ತಲಿದೆ. ಹೀಗೆ ಈ ಕೃತಿಯ ಮೂಲಕ ಶಾಸನವಿಭಾಗ ತನ್ನ ಹೊಸಮುಖವೊಂದನ್ನು ಪ್ರಕಟಿಸಿಕೊಳ್ಳುತ್ತಲಿದೆ.

ಶಾಸನಸಂಪತ್ತು

ಸುದೀರ್ಘವೂ ಸುವಿಸ್ತಾರವೂ ಆದ ಇತಿಹಾಸವುಳ್ಳ ಕರ್ನಾಟಕದ ಶಾಸನ ಸಂಪತ್ತು, ಜಗತ್ತಿನ ಮಟ್ಟದಲ್ಲಿ ಮರ್ಯಾದೆ ಗಳಿಸುವ ಯೋಗ್ಯತೆಯನ್ನು ಪಡೆದಿದೆ. ಸಿಂಧೂಸಂಸ್ಕೃತಿಯ ಲಿಪಿಗಳನ್ನು ಬಿಟ್ಟರೆ ಭಾರತದ ಪ್ರಾಚೀನತಮ ಶಾಸನಗಳಾದ ಅಶೋಕನ ಧರ್ಮಶಾಸನಗಳು, ನಮ್ಮ ನಾಡಿನಲ್ಲಿಯೂ ಲಭಿಸಿವೆ. ಅಂದಿನಿಂದ ಹಲವು ಭಾಷೆ, ಹಲವು ಲಿಪಿಗಳಲ್ಲಿ ಮೈದೋರುತ್ತ ಬಂದ ನಮ್ಮ ಶಾಸನಗಳ ಸಂಖ್ಯೆ ಸುಮಾರು ೨೫೦೦೦.* ಈ ನಾಡಿನ ರಾಜಕೀಯ-ಧಾರ್ಮಿಕ-ಸಾಮಾಜಿಕ ಕ್ಷೇತ್ರಗಳ ಮತ್ತು ಭಾಷಿಕ-ಅಕ್ಷರಿಕ-ಸಾಹಿತ್ಯಿಕ ಕ್ಷೇತ್ರಗಳ ಪ್ರಾಮಾಣಿಕ ದಾಖಲೆಗಳಾದ ಇವು, ವೈಭವ-ವೈವಿಧ್ಯತೆಗಳಲ್ಲಿ ಅಪೂರ್ವವೆನಿಸಿವೆ. ತಾಳಗುಂದ, ಐಹೊಳೆ ಮೊದಲಾದ ಶಾಸನಗಳಿಗೆ

* ಸಧ್ಯ ಈ ಸಂಖ್ಯೆ ೩೦, ೦೦೦ ಗಡಿಯನ್ನು ದಾಟಿದೆ.

ಭಾರತೀಯ ಗೌರವ ಸಲ್ಲುತ್ತಿದೆ. ಇದೇ ಐಹೊಳೆ ಶಾಸನ ಕಾಳಿದಾಸನನ್ನು, ಬಾದಾಮಿ ಶಾಸನ ಶಾಲಿವಾಹನಶಕವನ್ನು ಉಲ್ಲೇಖಿಸುವ ಪ್ರಥಮ ದಾಖಲೆಗಳಾಗಿ ಶೋಭಿಸುತ್ತವೆ. ಕಳಸ, ಲಕ್ಕುಂಡಿ, ಹುಮ್ಮಚ, ಅಬ್ಬಲೂರ, ಅರ್ಜುನವಾಡ, ಶ್ರವಣಬೆಳ್ಗೊಳ, ಬೇಲೂರ, ಆತಕೂರ ಶಾಸನಗಳ ಐತಿಹಾಸಿಕ ಮಹತ್ವ ಅಮೂಲ್ಯವೆನಿಸಿದೆ. ಸಾವಿರಾರು ವೀರಗಲ್ಲುಗಳು, ಮಾಸ್ತಿ ಕಲ್ಲುಗಳು, ನಿಷಧಿಶಾಸನಗಳು ಪ್ರಾಚೀನ ಕನ್ನಡಿಗರ ರಣಪರಾಕ್ರಮ, ಪತಿಭಕ್ತಿ, ಧರ್ಮಶ್ರದ್ಧೆಗಳನ್ನು ಘೋಷಿಸುತ್ತವೆ. ಮಧ್ಯಪ್ರದೇಶದ ಜುರಶಾಸನವಂತೂ ನಮ್ಮ ಚಕ್ರವರ್ತಿಗಳ ಸಾಹಸದ ಸೀಮಾರೇಖೆಯನ್ನು ಸೂಚಿಸುತ್ತದೆ. ಸಾಲದುದಕ್ಕೆ ಪ್ರಾಚೀನರ ಬದುಕಿನ ಸರ್ವಕ್ಷೇತ್ರಗಳ ಚಲನವಲನಗಳನ್ನು ಸಾರಿ ಹೇಳುವುದರಿಂದ ನಮ್ಮ ನಾಡಿನ ಚರಿತ್ರೆಯನ್ನು, ಆತ್ಮ ಚರಿತ್ರೆಯನ್ನು ಬರೆಯುವಲ್ಲಿ ವದಂತಿ, ಕಾವ್ಯಗಳಗಿಂತ ಇವುಗಳಿಗೆ ಹೆಚ್ಚಿನ ಬೆಲೆ ಸಲ್ಲುತ್ತದೆ.

ಶಾಸನ ಪರಿವೀಕ್ಷಣೆ

ಕನ್ನಡನಾಡಿನ ಕಳೆದುಹೋದ ಚರಿತ್ರೆಯನ್ನು ತಿರುಗಿ ಕಟ್ಟುವಲ್ಲಿ ನೆರವಾಗುವ ಈ ಶಾಸನಗಳ ಅಧ್ಯಯನಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾದುದು, ಅವುಗಳ ಸಮಗ್ರ ಪರಿವಿಕ್ಷಣೆ ಮತ್ತು ಸರ್ವಾಂಗ ಶುದ್ಧ ಪ್ರಕಟನೆ. ಕರ್ನಾಟಕದಲ್ಲಿ ಶಾಸನಗಳ ಪರಿವೀಕ್ಷಣೆ-ಪ್ರಕಟನೆಯ ಕಾರ್ಯ ೧೮ ನೆಯ ಶತಮಾನದ ಕೊನೆಯ ಪಾದದಲ್ಲಿ ಪ್ರಾರಂಭವಾಗಿ, ಪತ್ರಿಕೆಗಳ ಮೂಲಕ, ಆ ಮೇಲೆ SII,EC,KI ಸಂಪುಟಗಳ ಮೂಲಕ ಮುನ್ನಡೆದಿದೆ. ಈ ಅವಧಿಯಲ್ಲಿ

೧. ಕರ್ನಲ್ ಮೆಕೆಂಝಿಯುಗ : ೧೭೯೧-೧೮೩೭

೨. ಸರ್ ವಾಲ್ಟರ್ ಇಲಿಯಟ್ ಯುಗ : ೧೮೩೭-೧೮೭೦

೩. ಡಾ. ಫ್ಲೀಟ್ ಮತ್ತು ರೈಸ್ ಯುಗ : ೧೮೭೦ ರ ತರುವಾಯ

ಎಂಬ ಮೂರು ಘಟ್ಟಗಳು ತೋರಿಬರುತ್ತದೆ. ಹೀಗೆ ಎರಡುನೂರು ವರ್ಷ ಉರುಳಿದರೂ ಕಿರು ವ್ಯಾಪ್ತಿಯ ಈ ಪ್ರಾಂತದ ಶಾಸನಗಳ ಪರಿವೀಕ್ಷಣಾಕಾರ್ಯ ಪರಿಪೂರ್ಣವಾಗಲಿಲ್ಲವೆಂದು ವ್ಯಸನದಿಂದ ಹೇಳಬೇಕಾಗುತ್ತದೆ.

ಯೋಜನೆಯ ಅವಶ್ಯಕತೆ

ಬಿ. ಎಲ್. ರೈಸ್, ಆರ್. ನರಸಿಂಹಾಚಾರ್ ಮೊದಲಾದವರು ದಕ್ಷಿಣ ಕರ್ನಾಟಕದ ಶಾಸನಗಳನ್ನು ಮೈಸೂರು ಜಿಲ್ಲೆಯ ಶಾಸನ, ತುಮಕೂರು ಜಿಲ್ಲೆಯ ಶಾಸನ ಎಂದು ಮುಂತಾಗಿ 'ಜಿಲ್ಲಾ ಸೀಮಿತಶಾಸನ' ಸಂಪುಟಗಳ ರೂಪದಲ್ಲಿ ಪ್ರಕಟಿಸಿದ್ದಾರೆ. ಇದರಿಂದ ಒಂದು ಊರಿನ, ಒಂದು ತಾಲೂಕಿನ, ಒಂದು ಜಿಲ್ಲೆಯ ಶಾಸನಸಂಪತ್ತು ಕಣ್ಣಿಗೆ ಕಟ್ಟಿ, ಮುಂದಿನ ಪರಿವೀಕ್ಷಕರಿಗೂ ಅಭ್ಯಾಸಿಗಳಿಗೂ ಸ್ಪಷ್ಟವಾದ ಕನ್ನಡಿ ಕೈಗೆ ಬಂದಂತಾಗುತ್ತದೆ.

ಉತ್ತರ ಕನಾಟಕದ ಬಗೆಗೆ ಹೇಳುವುದಾದರೆ, ಈ ಪ್ರದೇಶದಲ್ಲಿ ತೀರ ಹಿಂದೆ ಪರಿವೀಕ್ಷಣೆ ನಡೆಸಿದ ಫ್ಲೀಟರಿಂದಾಗಲೀ, ಶಾಸನಾನ್ವೇಷಣೆಗಾಗಿಯೇ ಅಸ್ತಿತ್ವಕ್ಕೆ ಬಂದ ಇಲಾಖೆ ಮತ್ತು ಸಂಸ್ಥೆಗಳಿಂದಾಗಲೀ ಇಂಥ ವ್ಯವಸ್ಥಿತಕಾರ್ಯ ನಡೆಯಲಿಲ್ಲ. ಫ್ಲೀಟರು ಉತ್ತರಕರ್ನಾಟಕದ ಶಾಸನಕ್ಷೇತ್ರವನ್ನು ಕೈಗೆತ್ತಿಕೊಂಡರೂ ಅವರಿಂದ ಅಲ್ಲಿಷ್ಟು, ಇಲ್ಲಿಷ್ಟು ಪರಿವೀಕ್ಷಣಕಾರ್ಯ ಜರುಗಿತು.

ಶಾಸನಕ್ಕೆ ಸಂಬಂಧಿಸಿದ ಇಲಾಖೆ, ಸಂಸ್ಥೆಗಳು ಆ ಆ ವರ್ಷಗಳಲ್ಲಿ ತಮಗೆ ಪ್ರಯತ್ನಪೂರ್ವಕವಾಗಿ ಸಿಕ್ಕ ಅಥವಾ ಅಪ್ರಯತ್ನಪೂರ್ವಕವಾಗಿ ಕಣ್ಣಿಗೆ ಬಿದ್ದ ಶಾಸನಗಳನ್ನು ಪ್ರಕಟಿಸುತ್ತ ಹೋದವು. ಒಟ್ಟಿನಲ್ಲಿ ಫ್ಲೀಟರಾಗಲಿ ಈ ಇಲಾಖೆಗಳಾಗಲಿ, ಹಳ್ಳಿಯಿಂದ ತಾಲೂಕು, ತಾಲೂಕಿನಿಂದ ಜಿಲ್ಲೆ ಹೀಗೆ ಹೊಂದಿಹಿಡಿದು ಪರಿವೀಕ್ಷಣೆ ನಡೆಸಿ, ಸಮಗ್ರ ಶಾಸನಸಂಪತ್ತನ್ನು ಕೈವಶಮಾಡಿಕೊಳ್ಳುವ ವ್ಯವಸ್ಥಿತ ವಿಧಾನವನ್ನು ಅನುಸರಿಲಿಲ್ಲ. ಇದರಿಂದ ಒಂದು ಊರಿಗೆ, ಒಂದು ತಾಲೂಕಿಗೆ, ಒಂದು ಜಿಲ್ಲೆಗೆ ಸಂಬಂಧಿಸಿದ ಶಾಸನಗಳಲ್ಲಿ ಪ್ರಕಟವಾದುವೆಷ್ಟು? ಪ್ರಕಟವಾಗದವೆಷ್ಟು? ಎಂಬ ಸ್ಪಷ್ಟಕಲ್ಪನೆಯು ಬಾರದೆ ಹೋಯಿತು. ಬಹು ದಿನಗಳಿಂದ ಕೈಗೂಡದಿರುವ ಈ ಕಾರ್ಯವನ್ನು ಕನ್ನಡ ಅಧ್ಯಯನಪೀಠದ ಶಾಸನ ವಿಭಾಗವು 'ಧಾರವಾಡ ತಾಲೂಕಿನ ಶಾಸನಗಳು' ಸಂಪುಟವನ್ನು ಪ್ರಕಟಿಸುವುದರ ಮೂಲಕ ಆರಂಭ ಮಾಡಿದೆ. ದೊರೆತ ಪರಮಿತ ಸಹಾಯದಿಂದ 'ತಾಲೂಕು ಸೀಮಿತಶಾಸನ ಸಂಪುಟ'ಗಳನ್ನು ಪ್ರಕಟಿಸುತ್ತ ಹೋಗುವುದು ಮೊಳದಿಂದ ಮಹಾ ಸಮುದ್ರ ಅಳೆಯುವ ನಿಧಾನಕಾರ್ಯವೆಂದು ಬೇರೆ ಹೇಳಬೇಕಿಲ್ಲ. ಬಹುಶ: ಈ ಮಂದ ವೇಗದಲ್ಲಿ ನಡೆದರೆ ಒಬ್ಬನ ಆಯುಷ್ಯ ಮುಗಿದರೂ ಈ ಕಾರ್ಯ ಉಳಿದುಕೊಳ್ಳುತ್ತದೆ; ದಿನ ಗತಿಸಿದಂತೆ ಕೆಲವು ಶಾಸನಗಳೂ ನಾಶವಾಗಿಬಿಡುತ್ತವೆ. ಕಾರಣ ಈ ಪರಿವೀಕ್ಷಣಾ-ಪ್ರಕಟನಾಕಾರ್ಯ ಇನ್ನೂ ವ್ಯಾಪಕವಾಗಿ, ವೇಗವಾಗಿ ಹಲವು ಹತ್ತು ಕೈಗಳಿಂದ ನಡೆಯುವುದು ತೀರ ಅವಶ್ಯವಿದೆ.

ಯೋಜನೆಯ ಸಮಸ್ಯೆ-ಸಾಧನೆ

ಈಗಾಗಲೇ ಅಲ್ಲಲ್ಲಿ ಪ್ರಕಟವಾದ ಮತ್ತು ಈವರೆಗೆ ಎಲ್ಲಿಯೂ ಪ್ರಕಟವಾಗದೇ ಇದ್ದ ಶಾಸನಗಳನ್ನೊಳಗೊಂಡಿದೆ, ಈ ಸಂಪುಟ. ಇದನ್ನು ಸಿದ್ಧಗೊಳಿಸುವಲ್ಲಿ ನಮಗೆ ಮೊದಲು ಎದುರಾದ ಸಮಸ್ಯೆಯೆಂದರೆ, ಈ ತಾಲೂಕಿನ ಒಟ್ಟು ಹಳ್ಳಿಗಳ ಖಚಿತ ಸಂಖ್ಯೆಯನ್ನು, ಸ್ಪಷ್ಟ ಹೆಸರುಗಳನ್ನು ಸಂಗ್ರಹಿಸುವುದು, ಧಾರವಾಡ ತಾಲೂಕ ಕಚೇರಿಯಿಂದ ಸಂಗ್ರಹಿಸಿದ ಹಳ್ಳಿಗಳ ಸಂಖ್ಯೆಗೂ ಈಗ ತಾಲೂಕಿನಲ್ಲಿರುವ ಹಳ್ಳಿಗಳ ಸಂಖ್ಯೆಗೂ ತಾಳಮೇಳ ಬಹುಶ: ಹೊಂದಲಿಲ್ಲ. ಇದಕ್ಕೆ ಕಾರಣ, ಇಡೀ ಹಳ್ಳಿಯೇ ನಾಶವಾಗಿ ಹೋದುದು ಮತ್ತು ಹಳ್ಳಿಯ ಹೆಸರಿನ ಉಚ್ಚಾರದಲ್ಲಿ ತುಂಬ ವ್ಯತ್ಯಾಸವಿದ್ದುದು.

ಪ್ರಯತ್ನಪಟ್ಟು ಈ ಸಮಸ್ಯೆಯನ್ನು ಬಿಡಿಸಿಕೊಂಡರೂ ಮತ್ತೆ ಎದುರಾದುದು, ಈ ಮೊದಲು ಶಾಸನ ವರದಿಯಲ್ಲಿ ಗುರುತಿಸಿದ ಇಲ್ಲವೆ ಶಾಸನ ಸಂಪುಟಗಳಲ್ಲಿ ಪ್ರಕಟವಾದ ಶಾಸನಗಳು ಈಗ ಮಾಯವಾದುದು. ಉದಾ: ಬಾರ್ನೆಟ್ ಅವರು ಪ್ರಕಟಿಸಿದ್ದ ನರೇಂದ್ರ (೩೮) ಶಾಸನ, ೧೯೨೫-೨೬ ರಲ್ಲಿ ಶಾಸನ ವರದಿಯವರ ಕಣ್ಣಿಗೆ ಬಿದ್ದಿದ್ದ ಅಮ್ಮಿನಭಾವಿ (೩) ಶಾಸನ, SII XV ದಲ್ಲಿ ಪ್ರಕಟವಾದ ಸಿದ್ಧಾಪುರ ಶಾಸನ (೬೭) ಈಗ ಆ ಗ್ರಾಮಗಳಲ್ಲಿ ದೊರೆಯುವುದಿಲ್ಲ. ಕೆಲವು ಊರುಗಳಲ್ಲಿ ಹೊಸಶಾಸನಗಳು ಸಿಕ್ಕರೂ ಒಂದು ಅಕ್ಷರವೂ ಕಾಣದಂತೆ, ಅಕ್ಷರ ಬರೆದಿರಬಹುದೇ ಎಂದು ಸಂದೇಹ ಬರುವಂತೆ ಅವುಗಳ ಸ್ಥಿತಿಯಿದೆ. ಉದಾ: ನೀರಲಕಟ್ಟಿಯ ೨ ಶಾಸನಗಳು ಮತ್ತು ಮುಳ್ಳಮುತ್ತಲದ ೨ ಶಾಸನಗಳು. ಶಾಸನದ ಬೆಲೆಯನ್ನು ಕಳೆದುಕೊಂಡು ಶಿಲೆಯ ಬೆಲೆಗೆ ಇಳಿದ ಇಂಥವುಗಳನ್ನು ಕೈಬಿಡಬೇಕಾಯಿತು. ಈ ಮೊದಲು ಪ್ರಕಟವಾಗಿ ಈಗ ಮಾಯವಾಗಿರುವ ಕೆಲವು ಶಾಸನಗಳನ್ನು ಬಿಟ್ಟರೆ, ಈ ಸಂಪುಟಕ್ಕಾಗಿ ಮಿಕ್ಕುವನ್ನು ಆ ಆ ಊರಿಗೆ ಹೋಗಿ ಅಚ್ಚಿಸಿಕೊಂಡು ಬರಲಾಯಿತು. ಇದರಿಂದ ಹೊಸ ಪಾಠಗಳನ್ನು, ಹೊಸ ಅರ್ಥವನ್ನು ಬೆಳಕಿಗೆ ತರಲು ಸಾಧ್ಯವಾಗಿದೆ.

ಈ ಮೊದಲು ವರದಿಯಲ್ಲಿ ಸೂಚಿತವಾಗಿದ್ದ, ಹೀಗೆ ಸೂಚಿತವಾದವುಗಳಲ್ಲಿ ಪ್ರಕಟವಾಗಿದ್ದ ಮತ್ತು ಈಗ ಹೊಸದಾಗಿ ಲಭಿಸಿ ಪ್ರಕಟವಾಗುತ್ತಲಿರುವ-ಎಂದು ೩ ಬಗೆಯ ಶಾಸನಗಳನ್ನೊಳಗೊಂಡ ಈ ಸಂಪುಟದ ಒಂದು ಸ್ಥೂಲ ಚಿತ್ರ ಹೀಗಿದೆ:

	ಗ್ರಾಮ	ವರದಿವರ್ಷ-ನಂ.	ಪ್ರಕಟನೆ
೧.	ಅಂಬಳ್ಳಿ	೧೯೫೪-೫೫ ನಂ. ೮೮	ಧಾರವಾಡ ತಾಲೂಕಿನ ಶಾಸನಗಳು
೨.	ಅಮ್ಮಿನಭಾವಿ	೧೯೨೫-೨೬ ನಂ. ೪೩೧	SII, XI-ii 121
೩.	ಅಮ್ಮಿನಭಾವಿ	೧೯೨೫-೨೬ ನಂ. ೪೩೨	SII, XI-ii 191
೪.	ಅಮ್ಮಿನಭಾವಿ	೧೯೨೫-೨೬ ನಂ. ೪೩೦	SII, XV 31
೫.	ಅಮ್ಮಿನಭಾವಿ	೧೯೨೫-೨೬ ನಂ. ೪೨೯	SII, XV 228
೬	ಅಮ್ಮಿನಭಾವಿ	೧೯೫೨-೫೩ ನಂ. ೭೦	ಧಾರವಾಡ ತಾಲೂಕಿನ ಶಾಸನಗಳು
೭	ಅಮ್ಮಿನಭಾವಿ	೧೯೨೫-೨೬ ನಂ. ೪೨೮	SII, XV 231
೮.	ಅಮ್ಮಿನಭಾವಿ	---	ಕ. ಭಾ. ೬-೪
೯.	ಅಮ್ಮಿನಭಾವಿ	೧೯೨೫-೨೬ ನಂ. ೪೩೩	SII, XV 257
೧೦.	ಅಮ್ಮಿನಭಾವಿ	---	ಧಾರವಾಡ ತಾಲೂಕಿನ ಶಾಸನಗಳು
೧೧.	ಅಳ್ನಾವರ	೧೯೨೫-೨೬ ನಂ. ೪೭೦	SII, XV 225
೧೨.	ಅಳ್ನಾವರ	೧೯೨೫-೨೬ ನಂ. ೪೭೧	SII, XV 226
೧೩.	ಅಳ್ನಾವರ	೧೯೨೫-೨೬ ನಂ. ೪೧೯	SII, XV 234
೧೪.	ಅಳ್ನಾವರ	೧೯೨೫-೨೬ ನಂ. ೪೬೮	SII, XV 693
೧೫.	ಕನಕೂರ	೧೯೨೫-೨೬ ನಂ. ೪೫೫	SII, XI-ii 154
೧೬.	ಕಲ್ಲೆ	೧೯೨೫-೨೬ ನಂ. ೪೪೯	SII, XV 448
೧೭.	ಕೊಟಬಾಗಿ	೧೯೨೫-೨೬ ನಂ. ೪೪೭	SII, XV 195
೧೮.	ಕೊಟಬಾಗಿ	೧೯೨೫-೨೬ ನಂ. ೪೪೮	SII, XV 619
೧೯.	ಗರಗ	---	ಧಾರವಾಡ ತಾಲೂಕಿನ ಶಾಸನಗಳು
೨೦.	ಗರಗ	---	ಧಾರವಾಡ ತಾಲೂಕಿನ ಶಾಸನಗಳು
೨೧.	ಗರಗ	೧೯೨೫-೨೬ ನಂ. ೪೪೧	SII, XV 610
೨೨.	ಗರಗ	೧೯೨೫-೨೬ ನಂ. ೪೪೨	SII, XV 618

ಗ್ರಾಮ	ವರದಿವರ್ಷ–ನಂ.	ಪ್ರಕಟನೆ
೨೩. ಗೂಗಿಕಟ್ಟಿ	೧೯೨೫–೨೬ ನಂ. ೪೬೫	SII, XI-ii 199
		SII, XV 8
೨೪. ತಡಕೋಡ	೧೯೨೫–೨೬ ನಂ. ೪೪೬	SII, XV 552
೨೫. ತಡಕೋಡ	೧೯೨೫–೨೬ ನಂ. ೪೪೫	SII, XV 199
೨೬. ತೇಗೂರ	೧೯೨೫–೨೬ ನಂ. ೪೫೧	SII, XI-ii 128
೨೭. ದೇವರಹುಬ್ಬಳ್ಳಿ	೧೯೨೫–೨೬ ನಂ. ೪೩೪	KK. P 401-3
		SII. XV 282
		KI. V 66
೨೮. ದೇವರಹುಬ್ಬಳ್ಳಿ	೧೯೨೫–೨೬ ನಂ. ೪೩೫	SII. XV 282
೨೯. ಧಾರವಾಡ	--	ಧಾರವಾಡ ತಾಲೂಕಿನ ಶಾಸನಗಳು
೩೦. ಧಾರವಾಡ	--	ಧಾರವಾಡ ತಾಲೂಕಿನ ಶಾಸನಗಳು
೩೧. ಧಾರವಾಡ	--	ಧಾರವಾಡ ತಾಲೂಕಿನ ಶಾಸನಗಳು
೩೨. ಧಾರವಾಡ	೧೯೪೯–೫೦ ನಂ. ೨೬	KI. VI 16
೩೩. ಧಾರವಾಡ	೧೯೪೩–೪೪ ನಂ. ೬ (KRI)	KI. VI 16
೩೪. ಧಾರವಾಡ	--	ಧಾರವಾಡ ತಾಲೂಕಿನ ಶಾಸನಗಳು
೩೫. ಧಾರವಾಡ	೧೯೪೯–೫೦ ನಂ. ೩೨	ಧಾರವಾಡ ತಾಲೂಕಿನ ಶಾಸನಗಳು
೩೬. ಧಾರವಾಡ	೧೯೪೯–೫೦ ನಂ. ೨೧ (KRI)	KI. VI 68
೩೭. ಧಾರವಾಡ	--	ಧಾರವಾಡ ತಾಲೂಕಿನ ಶಾಸನಗಳು
೩೮. ನರೇಂದ್ರ	--	EI.XIII p 316
೩೯. ನರೇಂದ್ರ	೧೯೫೮–೫೯ ನಂ. ೫೨೮	EI.XIII p 298
೪೦. ನರೇಂದ್ರ	--	ಧಾರವಾಡ ತಾಲೂಕಿನ ಶಾಸನಗಳು
೪೧. ನರೇಂದ್ರ	--	ಧಾರವಾಡ ತಾಲೂಕಿನ ಶಾಸನಗಳು
೪೨. ನರೇಂದ್ರ	--	ಧಾರವಾಡ ತಾಲೂಕಿನ ಶಾಸನಗಳು

ಗ್ರಾಮ	ವರದಿವರ್ಷ–ನಂ.	ಪ್ರಕಟನೆ
೪೩. ನವಿಲೂರ	--	ಧಾರವಾಡ ತಾಲೂಕಿನ ಶಾಸನಗಳು
೪೪. ನಿಗದಿ	೧೯೨೫–೨೬	ನಂ ೪೬೬ SII.XI-ii 60
೪೫. ನುಗ್ಗಿಕೇರಿ	--	ಧಾರವಾಡ ತಾಲೂಕಿನ ಶಾಸನಗಳು
೪೬. ನುಗ್ಗಿಕೇರಿ	--	ಧಾರವಾಡ ತಾಲೂಕಿನ ಶಾಸನಗಳು
೪೭. ಬಾಡ	೧೯೨೫–೨೬ ನಂ ೪೭೬	SII.XV 551
೪೮. ಬೋಕ್ಯಾಪುರ	೧೯೨೫–೨೬ ನಂ ೪೪೩	SII.XV 230
೪೯. ಭಾವಿಹಾಳ	೧೯೨೫–೨೬ ನಂ ೪೪೪	SII.XV 9
೫೦. ಮದನಭಾವಿ	೧೯೨೫–೨೬ ನಂ ೪೫೦	SII.XV 16
೫೧. ಮನಗುಂಡಿ	೧೯೨೫–೨೬ ನಂ ೪೨೭	KK.p 404-17 SII. XV 233 KI. V 32 & 67
೫೨. ಮನಗುಂಡಿ	೧೯೨೫–೨೬ ನಂ ೪೭೮	KK.p 401-3 KI. V 31 & 69
೫೩ ಮನಗುಂಡಿ	೧೯೨೫–೨೬ ನಂ ೪೭೯	KK.p 418-27 KI. V 68 & 70
೫೪. ಮನಗುಂಡಿ	--	ಧಾರವಾಡ ತಾಲೂಕಿನ ಶಾಸನಗಳು
೫೫. ಮನಗುಂಡಿ	೧೯೨೫–೨೬ ನಂ ೪೪೦	SII. XV 651
೫೬. ಮುಗದ	೧೯೨೫–೨೬ ನಂ ೪೫೯	SII. XI-i 78
೫೭. ಮುಗದ	೧೯೨೫–೨೬ ನಂ ೪೫೮	SII. XI-ii 177
೫೮. ಮುಗದ	೧೯೨೫–೨೬ ನಂ ೪೫೬	SII. XI-ii 211
೫೯. ಮುಗದ	೧೯೨೫–೨೬ ನಂ ೪೫೭	SII. XV 553
೬೦. ಮುಗದ	--	ಧಾರವಾಡ ತಾಲೂಕಿನ ಶಾಸನಗಳು
೬೧. ಮುಗದ	--	ಧಾರವಾಡ ತಾಲೂಕಿನ ಶಾಸನಗಳು
೬೨. ಮುಮ್ಮಿಗಟ್ಟಿ	--	EI. XVII p 117-20
೬೩. ರಾಯಾಪುರ	--	ಧಾರವಾಡ ತಾಲೂಕಿನ ಶಾಸನಗಳು

ಗ್ರಾಮ	ವರದಿವರ್ಷ–ನಂ.	ಪ್ರಕಟನೆ
೬೪. ವೆಂಕಟಾಪುರ	೧೯೨೫–೨೬ ನಂ. ೪೫೪	SII. XV 227
೬೫. ಸಿಂಗನಹಳ್ಳಿ	೧೯೨೫–೨೬ ನಂ. ೪೫೨	SII. XV 7
೬೬. ಸಿದ್ದಾಪುರ	೧೯೨೫–೨೬ ನಂ. ೪೬೦	SII. XI-ii 194
೬೭. ಸಿದ್ದಾಪುರ	೧೯೨೫–೨೬ ನಂ. ೪೬೧	SII. XV 14
೬೮. ಸಿದ್ದಾಪುರ	೧೯೨೫–೨೬ ನಂ. ೪೪	IA. XIp 273-74
		SII. XV 229
೬೯. ಸಿದ್ದಾಪುರ	೧೯೨೫–೨೬ ನಂ. ೪೬೨	SII. XV 554
೭೦. ಸಿದ್ದಾಪುರ	೧೯೨೫–೨೬ ನಂ. ೪೬೩	SII. XV 555
೭೧. ಹೆಬ್ಬಳ್ಳಿ	--	ಧಾರವಾಡ ತಾಲೂಕಿನ ಶಾಸನಗಳು
೭೨. ಹೆಬ್ಬಳ್ಳಿ	--	ಧಾರವಾಡ ತಾಲೂಕಿನ ಶಾಸನಗಳು
೭೩. ಹೆಬ್ಬಳ್ಳಿ	--	ಧಾರವಾಡ ತಾಲೂಕಿನ ಶಾಸನಗಳು
೭೪. ಹೆಬ್ಬಳ್ಳಿ	--	ಧಾರವಾಡ ತಾಲೂಕಿನ ಶಾಸನಗಳು

ಈ ಯಾದಿಯ ಪರಿಶೀಲನೆಯಿಂದ ಒಟ್ಟು ೭೪ ಶಾಸನಗಳಲ್ಲಿ ೨೫ ಶಾಸನಗಳು ಅಂದರೆ ಒಟ್ಟು ಸಂಖ್ಯೆಯ ೧/೩ ರಷ್ಟು ಪ್ರಥಮಬಾರಿ ಪ್ರಕಟವಾಗುತ್ತಿವೆಯೆಂದು ಸ್ಪಷ್ಟವಾಗುತ್ತದೆ. ಈ ೨೫ ರಲ್ಲಿ ಮೊದಲು ಗಮನಿಸಿದ್ದ ೩ ನ್ನು (ನಂ. ೧, ೬, ೩೫) ಕಳೆದರೆ ಉಳಿಯುವ ೨೨ ಶಾಸನಗಳು ಈ ಸಂಪುಟದ ಹೊಸ ಕೊಡುಗೆಯಾಗಿದೆ. ಧಾರವಾಡ ತಾಲೂಕಿನ ೧೬೩ ಗ್ರಾಮಗಳಲ್ಲಿ ಈಗ ತಿಳಿದ ಮಟ್ಟಿಗೆ ಶಾಸನಗಳಿದ್ದುದು ೨೮ ಗ್ರಾಮಗಳಲ್ಲಿ. ಆದರೆ ಓಣಿಯಿಂದ ಓಣಿಗೆ, ಹಳ್ಳಿಯಿಂದ ಹಳ್ಳಿಗೆ ವ್ಯವಸ್ಥಿತವಾಗಿ ಪರಿವೀಕ್ಷಣೆ ನಡೆಸಿದರೆ ಈಗ ದೊರೆತ ಶಾಸನಗಳಷ್ಟು ಹೊಸಶಾಸನಗಳು ಸಿಗುವ ಸಂಭವವಿದೆ.

ಯೋಜನೆಯ ಸ್ವರೂಪ

ಶಾಸನಗಳು ಸರ್ವಾಂಗಶುದ್ಧವಾಗಿ, ಸರ್ವಸಮರ್ಪಕವಾಗಿ ಪ್ರಕಟವಾಗಬೇಕೆಂಬುದು ಈ ಯೋಜನೆಯ ಉದ್ದೇಶವಾಗಿರುವುದರಿಂದ, ಅವು ಒಂದು ವ್ಯವಸ್ಥೆಗೆ ಒಳಪಟ್ಟು ಪ್ರಕಟವಾಗುವುದು ಅವಶ್ಯ. ಕಾರಣ ಈ ವರೆಗೆ ವಿದ್ವಾಂಸರು ಅನುಸರಿಸಿದ ಹಲವು ವ್ಯವಸ್ಥೆಗಳ ಹಿನ್ನೆಲೆಯಲ್ಲಿ ಪ್ರಯೋಜಕವೂ ಪರಿಶುದ್ಧವೂ ಆದ ಒಂದು ಯೋಗ್ಯ ಹೊಸ ಚೌಕಟ್ಟನ್ನು ರೂಪಿಸಿಕೊಂಡಿದ್ದೇವೆ. ಶಾಸನದ ಪರಿಚಯ, ಶಾಸನದ ಸಾರಾಂಶ, ಶಾಸನದ ಪಾಠ–ಹೀಗೆ ಮೂರು ಸ್ತರಗಳನ್ನೊಳಗೊಂಡಿದೆ, ಈ ಚೌಕಟ್ಟು.

ಪ್ರಥಮಸ್ತರ: ಶಾಸನದ ತಲೆಯ ಮೇಲೆ ಅದರ ಕ್ರಮಾಂಕ, ಈ ಕ್ರಮಾಂಕದ ಕೆಳಗೆ ಅದು ಲಭಿಸಿದ ಗ್ರಾಮನಾಮ, ಗ್ರಾಮನಾಮದ ಕೆಳಗೆ ಅದರ ಕಾಲ ಇವುಗಳನ್ನು ನಿರ್ದೇಶಿಸಲಾಗಿದೆ.

ಎಡಮಗ್ಗಲು, ಮೇಲೆ ಶಾಸನವರದಿಯ ಶಾಸನಾಂಕ, ಕೆಳಗೆ 'ಧಾರವಾಡ ಜಿಲ್ಲೆಯ ಶಾಸನ ಸೂಚಿ' ಯ ಶಾಸನಾಂಕಗಳನ್ನು ಕಾಣಿಸಲಾಗಿದೆ. ಈ ಸ್ಥಳದಲ್ಲಿ ಕೆಲವು ಸಲ ಕಂಡುಬರುವ ಅಡ್ಡಗೆರೆ ಆ ಶಾಸನ ಈ ಮೊದಲ ವರದಿ. ಸೂಚಿಗಳಲ್ಲಿ ಸೂಚಿತವಾಗಿಲ್ಲವೆಂಬುದನ್ನು ತಿಳಿಸುತ್ತದೆ. ಬಲಮಗ್ಗಲು, ಆ ಶಾಸನ ಪ್ರಕಟವಾದ ಎಲ್ಲ ಸಂಪುಟಗಳನ್ನು, ಪತ್ರಿಕೆಗಳನ್ನು ಸೂಚಿಸಲಾಗಿದೆ. ಕೆಲವು ಸಲ ಈ ಸ್ಥಳದಲ್ಲಿ ಕಂಡುಬರುವ ಅಡ್ಡಗೆರೆ, ಅದು ಈ ಮೊದಲು ಅಪ್ರಕಟಿತವೆಂಬುದನ್ನು ತಿಳಿಸುತ್ತದೆ.

ದ್ವಿತೀಯಸ್ತರ: ಇಲ್ಲಿ ಶಾಸನದ ಸ್ಥೂಲಪರಿಚಯದೊಂದಿಗೆ ಸಾರಾಂಶಕೊಡಲಾಗಿದೆ. ಶಾಸನ ಗ್ರಾಮ, ಆ ಗ್ರಾಮದಲ್ಲಿ ಶಾಸನವಿರುವ ಸ್ಥಳವನ್ನು ಪರಿಚಯಿಸುತ್ತ, ಅದರ ಸ್ಥಿತಿ, ಆ ಕಾಲದ ಅರಸು-ಮಾಂಡಲಿಕ, ಶಾಸನ ಬರವಣಿಗೆಗೆ ಪ್ರೇರಣೆ ನೀಡಿದ ಘಟನೆ, ಮಿತಿ ಇತ್ಯಾದಿಗಳ ಚರ್ಚೆ-ವಿವರಣೆಗಳು ಈ ಸ್ತರದಲ್ಲಿ ಕಾಣುತ್ತವೆ. ಕೊನೆಗೆ, ಗಮನಾರ್ಹ ವಿಷಯವು ಅಮವಾಸ್ಯೆ ಚಿಹ್ನೆಯ ಮುಂದೆ ಲಿಖಿತವಾಗಿದೆ.

ತೃತೀಯಸ್ತರ: ಈ ಸ್ತರದಲ್ಲಿ ಶಾಸನದ ಪರಿಷ್ಕೃತಪಾಠವನ್ನು ಕೊಡಲಾಗಿದೆ. ಮೂಲತ: ಶಾಸನ ಯಾವುದೇ ಲಿಪಿಯಲ್ಲಿದ್ದರೂ ಇಲ್ಲಿ ಕನ್ನಡ ಲಿಪಿಯನ್ನು ಬಳಸಲಾಗಿದೆ. ಶಾಸನ ಪರಿಷ್ಕರಣಕ್ಕೋಸುಗ ಈಗಾಗಲೇ ಶಾಸನಶಾಸ್ತ್ರಜ್ಞರು ರೂಢಿಯಲ್ಲಿ ತಂದಿರುವ ವಿನ್ಯಾಸ, ಸಂಕೇತಗಳನ್ನು ಅನುಸರಿಸಲಾಗಿದೆ. ಮೂಲದಲ್ಲಿರುವ ಚರಣವಿನ್ಯಾಸವನ್ನು ಉಳಿಸಿಕೊಂಡಿದ್ದು ಒಡೆದ ಭಾಗದ ಅಕ್ಷರಗಳನ್ನು ಅಷ್ಟೇ ಬಿಂದುಗಳಿಂದ ತೋರಿಸಲಾಗಿದೆ. ಸಾಧ್ಯವಿದ್ದಲ್ಲಿ ಮಾಡಿದ ಊಹೆಗೆ ಚೌಕ ಕಂಸನ್ನು, ತಪ್ಪು ಪಾಠಗಳಿಗೆ ಮಾಡಿದ ತಿದ್ದುಪಡಿಗಳಿಗೆ ವಕ್ರಕಂಸನ್ನು ಬಳಸಿದ್ದೇವೆ. ಗದ್ಯಭಾಗದ ಮುಕ್ತಾಯವನ್ನು ಸೂಚಿಸಲು ನಕ್ಷತ್ರ ಸಮೇತ ಎರಡು ಲಂಬಗಳನ್ನು ಚೌಕ ಕಂಸಿನಲ್ಲಿ, ಪದ್ಯ ಪದ್ಯಗಳ ಮಧ್ಯವನ್ನು ಎರಡು ಲಂಬಗಳ ಮುಂದೆ ನಕ್ಷತ್ರ ಸಮೇತ ಪದ್ಯಸಂಖ್ಯೆಯನ್ನು ಚೌಕ ಕಂಸಿನಲ್ಲಿಟ್ಟು ಸೂಚಿಸಿದ್ದೇವೆ. ಪಠ್ಯಭಾಗಕ್ಕೆ ಸಂಬಂಧಪಟ್ಟ ವಿಶೇಷಸಂಗತಿಯನ್ನು ಅಡಿಟಿಪ್ಪಣಿಗಳು ಒದಗಿಸುತ್ತವೆ.

ಹೀಗೆ ಪ್ರತಿಯೊಂದು ಶಾಸನ ಮೂರು ಸ್ತರಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಆಮೇಲೆ ಕನ್ನಡೇತರ ವಿದ್ವಾಂಸರಿಗಾಗಿ, ಮೊದಲನೆಯ ಸ್ತರವನ್ನು ಬಿಟ್ಟು ಉಳಿದ ಎರಡು ಸ್ತರಗಳನ್ನು ಇಂಗ್ಲೀಷ ಭಾಷೆ ಮತ್ತು ರೋಮನ್ ಲಿಪಿಗಳಲ್ಲಿ ಕೊಡಲಾಗಿದೆ. ಎರಡನೆಯ ಸ್ತರದಲ್ಲಿದ್ದುದು ಮೇಲೆ ಕನ್ನಡದಲ್ಲಿರುವ ಶಾಸನಸಾರಾಂಶದ ಇಂಗ್ಲೀಷ ಅನುವಾದವಾಗಿದ್ದರೂ ಅದರ ಸಂಕ್ಷಿಪ್ತ ರೂಪ. ಮೂರನೆಯ ಸ್ತರದಲ್ಲಿಯದು ಮೇಲಿನ ಶಾಸನಪಾಠದ ರೋಮನ್ ಲಿಪ್ಯಂತರ.

೨ | ಧಾರವಾಡ ತಾಲೂಕಿನ ಶಾಸನಗಳ ಅಧ್ಯಯನ

ಶಾಸನಗಳು ಒಂದು ಜನಾಂಗದ ಬದುಕಿನ ವಿಶ್ವಾಸಾರ್ಹ ದಾಖಲೆಗಳು ಅವುಗಳಲ್ಲಿ ನಿಕ್ಷಿಪ್ತವಾದ ವಿಷಯಸಂಪತ್ತು ಆ ಜನಾಂಗದಷ್ಟೇ ವ್ಯಾಪಕವಾದುದು, ವೈವಿಧ್ಯಮಯವಾದುದು. ಅಲ್ಲಲ್ಲಿ ಮಡುಗಟ್ಟನಿಂತ ಈ ವಿಷಯ ಸಂಪತ್ತನ್ನು ಬೊಗಸೆ ಬೊಗಸೆಯಾಗಿ ಸಂಗ್ರಹಿಸಿ, ವಿಂಗಡಿಸಿ ಅದರ ಬಲದಿಂದ ಒಂದೊಂದು ಚಿತ್ರವನ್ನು ಬಿಡಿಸಿಕೊಳ್ಳಬೇಕಾಗುತ್ತದೆ. ಇಂಥ ಪ್ರಯತ್ನದ ಮೂಲಕ, ಈ ತಾಲೂಕಿನ ಶಾಸನಗಳು ಒದಗಿಸುವ ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಚಿತ್ರಗಳನ್ನು ಹೀಗೆ ರೂಪಿಸಬಹುದು:

ರಾಜಕೀಯ

ಪ್ರಾಚೀನ ಕರ್ನಾಟಕವನ್ನು ಮುನ್ನಡೆಸಿದ ಶಕ್ತಿಗಳಲ್ಲಿ ರಾಜಶಕ್ತಿ ಪ್ರಮುಖವಾದುದು. 'ರಾಜಾ ಕಾಲಸ್ಯ ಕಾರಣಂ' ಎಂಬ ಸೂತ್ರ ಅರ್ಥಪಡೆದ ರೀತಿಯಲ್ಲಿ ರಾಜಮನೆತನಗಳು ಸಮಾಜಜೀವನದಲ್ಲಿ ಬಹು ಮುಖ್ಯ ಪಾತ್ರವಹಿಸುತ್ತಿದ್ದವು. ರಾಜ್ಯದ ಉನ್ನತ ಅಧಿಕಾರಿಯಾದ ರಾಜನ ಕೈ ಕೆಳಗೆ ಸಾಮಂತರು, ಮಾಂಡಲಿಕರು ಸಣ್ಣ ಸಣ್ಣ ಪ್ರಾಂತಗಳನ್ನಾಳುತ್ತಿದ್ದರು. ಇವರ ಕೈಕೆಳಗೆ ನಾಳ್ಗಾವುಂಡರು, ಇವರ ಕೈಕೆಳಗೆ ಗಾವುಂಡರು–ಹೀಗೆ ರಾಜ್ಯಾಧಿಕಾರದ ವ್ಯವಸ್ಥೆ ಚಕ್ರವರ್ತಿಯಿಂದ ಗಾವುಂಡನವರೆಗೆ ವ್ಯಾಪಿಸಿದ್ದಿತು.

ಧಾರವಾಡ ತಾಲೂಕಿನಲ್ಲಿ ಮೌರ್ಯ, ಶಾತವಾಹನ, ಬನವಾಸಿ ಕದಂಬ, ಬಾದಾಮಿ ಚಾಲುಕ್ಯರ ಶಾಸನಗಳು ಈವರೆಗೆ ಲಭಿಸಿಲ್ಲ. ಲಭಿಸಿರುವ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚುರಿ, ಯಾದವ, ವಿಜಯನಗರ ಚಕ್ರವರ್ತಿಗಳ ಮತ್ತು ಮಾಂಡಲಿಕರಾದ ಗೋವೆಯ ಕದಂಬರ ಶಾಸನಗಳಿಂದ ತಿಳಿದುಬರುವ ರಾಜಕೀಯ ಸಂಗತಿ ಹೀಗಿದೆ:

ರಾಷ್ಟ್ರಕೂಟ: ಈ ತಾಲೂಕಿನಲ್ಲಿ ಸಿಗುವ ಪ್ರಾಚೀನತಮ ಶಾಸನಗಳು ರಾಷ್ಟ್ರಕೂಟರ ಆಳ್ವಿಕೆಗೆ ಸಂಬಂಧಿಸಿದೆ. ಅರಸನ ಉಲ್ಲೇಖವಿರದಿದ್ದರೂ ಅಂಬಳ್ಳಿ (೧* ಸು.ಶ.೯), ಕಲ್ಲೆ (೧೬* ಸು. ಶ. ೮), ಧಾರವಾಡ ೯೨೯, ೩೦* ಸು.ಶ.೯) ಶಾಸನಗಳು ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದುವೆಂದು ಲಿಪಿ ಸ್ವರೂಪವನ್ನಾಧರಿಸಿ ಹೇಳಬಹುದು. ಇವುಗಳಲ್ಲಿ ಧಾರವಾಡ ಶಾಸನ(೩೦) ವನ್ನು ಬಿಟ್ಟರೆ ಮಿಕ್ಕುವು ವೀರಗಲ್ಲುಗಳು.

ಕಲ್ಯಾಣ ಚಾಲುಕ್ಯ: ರಾಷ್ಟ್ರಕೂಟರ ತರುವಾಯ ಕರ್ನಾಟಕವನ್ನಾಳಿದವರು, ಕಲ್ಯಾಣ ಚಾಲುಕ್ಯರು. ಉತ್ತರ ಕರ್ನಾಟಕದಲ್ಲಿ ಈ ಚಕ್ರವರ್ತಿಗಳ, ಇವರ ಸಾಮಂತರ ಶಾಸನಗಳು ಹೇರಳ ಸಂಖ್ಯೆಯಲ್ಲಿ ಸಿಗುತ್ತವೆ. ಪ್ರಸ್ತುತ ಧಾರವಾಡ ತಾಲೂಕು ಇದಕ್ಕೆ ಅಪವಾದವಲ್ಲ. ಈ ತಾಲೂಕಿಗೆ ಸಂಬಂಧಿಸಿದ ಈ ಮನೆತನತನದ ಪ್ರಥಮ ಶಾಸನವೆಂದರೆ ಒಂದನೆಯ ಸೋಮೇಶ್ವರನ

---

* ಕಂಸಿನಲ್ಲಿಯ ನಕ್ಷತ್ರದ ಹಿಂದಿನ ಅಂಕಿ ಶಾಸನಾಂಕವನ್ನು, ಮುಂದಿನ ಅಂಕಿ ಮಿತಿಯನ್ನು ಸೂಚಿಸುತ್ತವೆ.

ಆಳ್ವಿಕೆಯಲ್ಲಿ ಹುಟ್ಟಿದ ಕ್ರಿ.ಶ ೧೦೪೫ ರ ಮುಗದ (೫೨) ಶಾಸನ. ಈ ಮಧ್ಯ ವಿಕ್ರಮಾದಿತ್ಯ VI, ಸೋಮೇಶ್ವರ III, ಜಗದೇಕಮಲ್ಲ II ರ ಶಾಸನಗಳು ಸಿಗುತ್ತವೆ. ಸಾಮಾನ್ಯವಾಗಿ ಇವು ಸಾಮಂತರಾದ ಗೋವೆಯ ಕದಂಬರು ಬರೆಸಿದವುಗಳಾಗಿದ್ದು, ಚಕ್ರವರ್ತಿಗಳೆಂಬ ಕಾರಣ ಇವರ ಉಲ್ಲೇಖ ಬರುತ್ತದೆ.

ಮುಗದ ಶಾಸನ (೫೬*೧೦೪೫), ಒಂದನೆಯ ಸೋಮೇಶ್ವರನನ್ನು, ಈತನ ಸಾಮಂತ ಗೋವೆಯ ಕದಂಬ ಚಟ್ಟಯದೇವ II ನನ್ನು ಉಲ್ಲೇಖಿಸುತ್ತದೆ.

ಇದನ್ನು ಬಿಟ್ಟರೆ ತರುವಾಯ ಸಿಗುವು ಆರನೆಯ ವಿಕ್ರಮಾದಿತ್ಯನ ಶಾಸನಗಳು, ಇಲ್ಲಿಂದ ಮುಂದೆ ಬಹುಸಂಖ್ಯೆಯಲ್ಲಿ ದೊರೆಯುವ ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಶಾಸನಗಳೆಲ್ಲ ಸಾಮಾನ್ಯವಾಗಿ ಈತನ ಶಕೆಯನ್ನೇ ಉಪಯೋಗಿಸಿದೆ. ಅಣ್ಣ ಸೋಮೇಶ್ವರ II ನು ಆಳುತ್ತಲಿದ್ದರೂ ಅಮ್ಮಿನಭಾವಿ (೨* ೧೦೭೧-೭೨) ಶಾಸನ, ವಿಕ್ರಮಾದಿತ್ಯ VI ಆಳುತ್ತಿದ್ದನೆಂದು ಹೇಳುವುದು ಒಂದು ಸುಸಂಘಟಿತ ಪ್ರಯತ್ನವಾಗಿರಬೇಕು. ಈಗ ಸಾಮಂತನಾಗಿದ್ದವನು ಗೋವೆಯ ಕದಂಬ ವಂಶದ ಒಂದನೆಯ ಜಯಕೇಶಿ. ತೇಗೂರು ಶಾಸನ (೨೬*೧೦೮೨), ಕನಕಾಪುರ ಶಾಸನ (೧೫* ೧೧೦೪), ಮುಗದ ಶಾಸನ (೫೭* ೧೧೨೫, ೫೮* ಸು.ಶ. ೧೨) ಗಳು ಮೇಲೆ ವಿಕ್ರಮಾದಿತ್ಯ VI ನನ್ನೂ, ಕೆಳಗೆ ಸಾಮಂತ ಗೋವೆಯ ಕದಂಬ ಮೂರನೆಯ ಗೂವಲದೇವನನ್ನೂ ನಿಗದಿಯ ಶಾಸನ (೪೪* ೧೧೧೧) ಮೇಲೆ ಸಾಮಂತ ಮೂರನೆಯ ಗೂವಲದೇವನನ್ನೂ, ಕೆಳಗೆ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನನ್ನೂ ಉಲ್ಲೇಖಿಸುತ್ತವೆ. ಮುಮ್ಮಿಗಟ್ಟಿ ಶಾಸನ (೬೨* ೧೧೨೪) ಎರಡನೆಯ ಜಯಕೇಶಿಯನ್ನು, ನರೇಂದ್ರ ಶಾಸನ (೬೯* ೧೧೨೫) ವಿಕ್ರಮಾದಿತ್ಯನ ಮಗಳಾದ ಮೈಳಲದೇವಿಯನ್ನು ಎರಡನೆಯ ಜಯಕೇಸಿಯೊಡನೆ ವಿವಾಹ ಮಾಡಿಕೊಟ್ಟುದನ್ನು ಉಲ್ಲೇಖಿಸುತ್ತವೆ. ಇವುಗಳನ್ನು ಬಿಟ್ಟರೆ ಧಾರವಾಡ (೩೨* ೧೧೧೧), ಅಮ್ಮಿನಭಾವಿ (೭* ೧೧೧೨), ಧಾರವಾಡ (೩೩* ೧೧೧೭), ಸಿದ್ಧಾಪುರ (೬೬* ೧೧೨೦), ನರೇಂದ್ರ (೪೦* ೧೧೨೭) ಶಾಸನಗಳು ನೇರವಾಗಿ ಆರನೆಯ ವಿಕ್ರಮಾದಿತ್ಯನನ್ನು ಇಲ್ಲವೆ ಆತನ ಕಾಲಗಣನೆಯನ್ನು ತಿಳಿಸುತ್ತವೆ.

ಆರನೆಯ ವಿಕ್ರಮಾದಿತ್ಯನ ತರುವಾಯ ಪಟ್ಟಕ್ಕೆ ಬಂದವನು ಮೂರನೆಯ ಸೋಮೇಶ್ವರ. ಮದನಭಾವಿ ಶಾಸನ (೫೦* ೧೧೨೭) ದ ಒಡೆದ ಭಾಗದಲ್ಲಿ ಈತನ ಹೆಸರಿರಬಹುದು; ಸಾಮಂತ ಎರಡನೆಯ ಜಯಕೇಸಿಯ ಉಲ್ಲೇಖ ಮಾತ್ರ ಸ್ಪಷ್ಟವಾಗಿದೆ. ಸಿದ್ಧಾಪುರ ಶಾಸನ (೬೭* ೧೧೩೫) ದಲ್ಲಿಯ 'ಚಾಲುಕ್ಯ ಭೂಲೋಕವರಿಸ' ಎಂಬ ಮಾತು ಇವನನ್ನೇ ಸೂಚಿಸುತ್ತಿರಬಹುದು. ವೆಂಕಟಾಪುರ ಶಾಸನ (೬೪* ೧೧೩೬) ಈತನನ್ನೂ ಸಾಮಂತ ಎರಡನೆಯ ಜಯಕೇಶಿಯನ್ನೂ ಹೆಸರಿಸುತ್ತದೆ.

ಮೂರನೆಯ ಸೋಮೇಶ್ವರನ ತರುವಾಯ ಸಿಂಹಾಸನವೇರಿದ ಎರಡನೆಯ ಜಗದೇಕಮಲ್ಲನು ತುಲಾಪುರುಷನಾದುದನ್ನು ಅಮ್ಮಿನಭಾವಿ ಶಾಸನ (೪* ೧೧೪೬) ಹೇಳುತ್ತದೆ. ಚಾಲುಕ್ಯರಾಜ್ಯವನ್ನು ಕಬಳಿಸಿದ್ದ ಕಲಚುರಿಗಳನ್ನು ಕೊನೆಗೊಳಿಸಿ ಆಳಿದವ ನಾಲ್ಕನೆಯ ಸೋಮೇಶ್ವರ.

ಮನಗುಂಡಿಯ ಶಾಸನಗಳು (೫೧,೫೨) ಹೇಳುವ ತ್ರಿಭುವನಮಲ್ಲನು ಈತನೇ ಆಗಿರಬೇಕು. ಧಾರವಾಡ ತಾಲೂಕಿನ ಶಾಸನಗಳು ಈ ರೀತಿ ಕಲ್ಯಾಣ ಚಾಲುಕ್ಯರ ರಾಜ್ಯಭಾರವನ್ನು ತಿಳಿಸುತ್ತವೆ.

ಕಲಚುರಿ: ಕಲ್ಯಾಣಚಾಲುಕ್ಯರನ್ನು ತಳ್ಳಿ ಪಟ್ಟಕ್ಕೆ ಬಂದವರು, ಕಲಚುರಿಗಳು. ಈ ವಂಶದ ಬಗ್ಗೆ ಧಾರವಾಡ ತಾಲೂಕಿನಲ್ಲಿ ಸಿಗುವುದು ರಾಯಾಪುರ ತಾಮ್ರಪಟವೊಂದೇ. ಬಿಜ್ಜಳನ ಮಗ ಅಹವಮಲ್ಲನು ದೇವರಹುಬ್ಬಳ್ಳಿಯ ಬ್ರಾಹ್ಮಣರಿಗೆ ಬೆಲ್ಲವೂರ ಗ್ರಾಮವನ್ನು ದಾನವಾಗಿ ನೀಡಿದ ವಿಷಯವಿಲ್ಲಿದೆ.

ಯಾದವ: ಸಾಮಂತರಾಗಿದ್ದ ಯಾದವರು ತಮ್ಮ ಸಾರ್ವಭೌಮರಾದ ಕಲ್ಯಾಣ ಚಾಲುಕ್ಯರನ್ನು ಪದಚ್ಯುತಗೊಳಿಸಿ ಕರ್ನಾಟಕದ ಚಕ್ರವರ್ತಿಗಳಾದರು. ಈ ತಾಲೂಕಿನಲ್ಲಿ ಸಿಗುವ ಈ ಮನೆತನದ ಪ್ರಥಮಶಾಸನ ಹೆಬ್ಬಳ್ಳಿ (೭೧* ೧೨೪೪)ಯದು, ಕೊನೆಯ ಶಾಸನ ಗರಗಗ್ರಾಮದ್ದು (೨೦* ೧೨೮೭). ಈ ಮಧ್ಯ ಕೆಲವು ಶಾಸನಗಳು ಹುಟ್ಟಿವೆ.

ಹೆಬ್ಬಳ್ಳಿಯ ಒಂದು ಶಾಸನ (೭೧* ೧೨೪೪) ಸಿಂಘಣನ ಕಾಲದಲ್ಲಿ, ಇನ್ನೊಂದು ಶಾಸನ (೭೨* ೧೨೪೮) ಈತನ ಮೊಮ್ಮಗ ಕನ್ನರನ ಕಾಲದಲ್ಲಿ ಹುಟ್ಟಿವೆ. ಕೊಟಬಾಗಿ ಶಾಸನ (೧೭* ೧೨೬೪) ಕನ್ನರನ ತಮ್ಮ ಮಹಾದೇವನ ಸಮಯಕ್ಕೆ, ತಡಕೋಡ ಶಾಸನ (೨೫* ೧೨೮೨) ರಾಮಚಂದ್ರದೇವನ ಸಮಯಕ್ಕೆ ಸಂಬಂಧಿಸಿದೆ. ಗರಗ ಶಾಸನವೂ (೨೦* ೧೨೮೭) ರಾಮಚಂದ್ರನ ಆಳಿಕೆಯನ್ನು ಸೂಚಿಸುತ್ತಿದ್ದು, ಈ ತಾಲೂಕಿನಲ್ಲಿ ಸಿಗುವ ಯಾದವರ ಕೊನೆಯ ಶಾಸನವಾಗಿದೆ. ಇವುಗಳಲ್ಲಿ ಕೊಟಬಾಗಿ ಶಾಸನ (೧೭* ೧೨೬೪) ಗೋವೆಯ ಕದಂಬ ಮೂರನೆಯ ಚಟ್ಟಯದೇವನನ್ನು ಯಾದವರ ಸಾಮಂತನೆಂದು ಅರ್ಥ ಬರುವಂತೆ ಉಲ್ಲೇಖಿಸುತ್ತದೆ.

ವಿಜಯನಗರ: ಧಾರವಾಡ ತಾಲೂಕಿನಲ್ಲಿ ಸಿಗುವ ವಿಜಯನಗರ ಅರಸರ ಶಾಸನಗಳು ಮೂರು, ಇವುಗಳಲ್ಲಿ ಧಾರವಾಡ ಶಾಸನ (೩೬* ೧೪೪೮) ಮಲ್ಲಿಕಾರ್ಜುನರಾಯನ ಪಟ್ಟಬಂಧೋತ್ಸವದ ನೆನಪಿಗಾಗಿ ಧಾರವಾಡದಲ್ಲಿ ನಂದಿಸ್ತಂಭ ನಿಲ್ಲಿಸಿದ ವಿಷಯವನ್ನು ತಿಳಿಸಿದರೆ, ದೇವರಹುಬ್ಬಳ್ಳಿ ಶಾಸನ (೨೮* ೧೫೪೭), ಅಮ್ಮಿನಭಾವಿ ಶಾಸನ (೯* ೧೫೪೭) ಗಳು ಸದಾಶಿವರಾಯನ ಆಳ್ವಿಕೆಯಲ್ಲಿ ರಾಮರಾಯನು ತಿಮ್ಮೋಜ ಕೊಂಡೋಜ, ಭದ್ರೋಜರಿಗೆ ನಾವಿದ ತೆರಿಗೆ ಬಿಟ್ಟು ಕೊಟ್ಟುದನ್ನು ಹೇಳುತ್ತವೆ.

ಮಂಡಲೇಶ್ವರರು: ಈ ತಾಲೂಕಿನಲ್ಲಿ ಸಿಗುವ ಏಕೈಕ ಮಂಡಲೇಶ್ವರ ಮನೆತನವೆಂದರೆ ಗೋವೆಯ ಕದಂಬರದು. ಚಾಲುಕ್ಯರ, ಕೊನೆಕೊನೆಗೆ ಯಾದವರ ಆಧೀನವಾಗಿ ಸುಮಾರು ೩ ಶತಮಾನಗಳವರೆಗೆ ಗೋವೆಯನ್ನು ಕೇಂದ್ರವಾಗಿಟ್ಟುಕೊಂಡು ಇವರು ವಿಸ್ತಾರವಾದ ಪ್ರದೇಶವನ್ನಾಳಿದರು.

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಬನವಾಸಿಪುರವರಾಧೀಶ್ವರಂ ಸಮಸ್ತಭುವನಸಂಸ್ತೂಯಮಾನಂ ಹರಧರಣೀಪ್ರಸೂತಂ ತ್ರಿಳೋಚನಕದಂಬವಂಶಾನ್ವಯಂ ಮಹೀಧರೇಂದ್ರ ಶಿಖರಾಭ್ಯುದಯಮಾನ ಮಹಾಪ್ರಚಣ್ಡ ಮಾರ್ತ್ತಣ್ಡ ಮಾರ್ತ್ತಣ್ಡ ಕರಾತಿತೀಬ್ರನಿಜಪ್ರತಾಪವಶೀಕೃತ ಸಕಳ ಮಹೀಮಣ್ಡ ಳನುತ್ತುಂಗಸಿಂಹಲಾಂಛನಂ ವಾನರಮಹಾಧ್ವಜಂ

ಪೆರ್ಮ್ಮಾಟ್ಟಿತೂರ್ಯ್ಯನಿರ್ಗ್ಘೋಷಣಂ ಚತುರಾಶೀತಿನಗರಾಧಿಷ್ಠಿತನಷ್ಟಾದಶಾಶ್ವ ಮೇಧದೀಕ್ಷಾದೀಕ್ಷಿತ ಕುಳಪ್ರಸೂತಂ ಹಿಮವದ್ಗಿರೀಂದ್ರರುಂದ್ರಸಿಖರ ಸ್ಥಾಪಿತಮಹಾಶಕ್ತಿಪ್ರಭಾವಂ ತ್ಯಾಗಜಗಝಂಪಿ ಝುಂಪಳಾಚಾರ್ಯ್ಯಂ ನಿಶ್ಯಂಕರಾಮಂ ಶುಭಟಕನಕನಿಕಶೋಪಳಂ ಶರಣಾಗತವಜ್ರಪ್ರಾಕಾರಂ ಲೋಕೈಕಕಳ್ಪದ್ರುಮಂ ಸಂಕ್ರಾನ್ತಿಧವಳಂ ಮೂರ್ತ್ತಿನಾರಾಯಣಂ ಕೀರ್ತ್ತಿಮಾರ್ತ್ತಣ್ಡಂ ಮಂಡಳಿಕಲಲಾಟಪಟ್ಟ ವೈರಿಘರಟ್ಟ ಸುಭಟರಾಜಶಿಖಾಮಣಿ ಕಾದಂಬಚೂಡಾಮಣೀತ್ಯ ಖಿಳ ರಾಜಾಳೀಸಮಾಳಂಕ್ರಿತರಪ್ಪ ಶ್ರೀಮನ್ಮಹಾಮಣ್ಡಳೇಶ್ವರಂ" ಎಂಬುದು ಈ ಮನೆತನದ ಬಿರುದು. ಇಂಥ ಪ್ರಖ್ಯಾತಿಯ ಗೋವೆಯ ಕದಂಬರ ಪ್ರಥಮಶಾಸನ ಮುಗದ ಗ್ರಾಮದ್ದು (೫೬* ೧೦೪೫); ಕೊನೆಯ ಶಾಸನ ಕೊಟಬಾಗಿ ಗ್ರಾಮದ್ದು (೧೭* ೧೨೬೪). ಈ ಮಧ್ಯದ ಎಲ್ಲ ಶಾಸನಗಳಲ್ಲಿ ಸುಮಾರು ಅರ್ಧದಷ್ಟು ಶಾಸನಗಳು ಉಪೇಕ್ಷಿಸುವ ರೀತಿಯಲ್ಲಿ ಚಕ್ರವರ್ತಿಯ ಬಗ್ಗೆ ಮೌನ ತಾಳಿ ಕದಂಬ ಕೀರ್ತಿಯನ್ನು ಉದ್ಘೋಷಿಸುತ್ತ ಪ್ರಾರಂಭವಾದರೆ, ನಿಗದಿ ಶಾಸನ (೪೪* ೧೧೧೧) ಗೂವಲದೇವನನ್ನು ವರ್ಣಿಸಿ ತರುವಾಯ ವಿಕ್ರಮಾದಿತ್ಯ VI ನನ್ನು ಹೆಸರಿಸುವ ಸಾಹಸಮಾಡಿದೆ. ಹೀಗೆ ಕೆಲವು ಸಲ ಕಲ್ಯಾಣಚಾಲುಕ್ಯರ ಅಧಿನಾಯಕತ್ವವನ್ನು ಸೂಚಿಸುವುದು, ಕೆಲವು ಸಲ ಸೂಚಿಸದಿರುವುದು, ಮತ್ತೆ ಕೆಲವು ಸಲ ತಮ್ಮ ಹೆಸರಿನ ಕೆಳಗೆ ಸೂಚಿಸುವುದು ಇವರ ಮಹತ್ವಾಕಾಂಕ್ಷೆಯನ್ನು ಎತ್ತಿ ತೋರಿಸಿದರೆ, ಕಲ್ಯಾಣ ಚಾಲುಕ್ಯವಂಶದ ಮೇರುವ್ಯಕ್ತಿ ಆರನೆಯ ವಿಕ್ರಮಾದಿತ್ಯನೊಂದಿಗೆ ಹೆಣ್ಣಿನ ಕೊಡುಕೊಳೆ ಮಾಡಿದುದು ಈ ಮನೆತನದ ಮಹತಿಯನ್ನು ಹೇಳುತ್ತದೆ. ಹೀಗೆ ಚಕ್ರವರ್ತಿಗಳ ತೀರ ಹತ್ತಿರ ನಿಂತ ಇವರ ಶಾಸನಗಳು ಈ ತಾಲೂಕಿನಲ್ಲಿ ಸುಮಾರು ೩೦ ಸಿಗುತ್ತವೆ.

ಮುಗದ ಶಾಸನವು (೫೬* ೧೦೪೫) ಒಂದನೆಯ ಸೋಮೇಶ್ವರನ ಕೈಕೆಳಗೆ ಕದಂಬ ಚಟ್ಟಯ II ನು ಆಳುತ್ತಿದ್ದುದನ್ನು ತಿಳಿಸುತ್ತದೆ. ಅಮ್ಮಿನಭಾವಿ ಶಾಸನ (೨* ೧೦೭೧-೭೨) ದಲ್ಲಿ ವಿಕ್ರಮಾದಿತ್ಯ VI ನ ಸಾಮಂತನಾಗಿ ಒಂದನೆಯ ಜಯಕೇಶಿ ಆಳುತ್ತಿದ್ದ ಸಂಗತಿ ಬರುತ್ತದೆ. ಗೋವೆಯ ಕದಂಬರ ರಾಜಧಾನಿಯೆಂದು ಹೇಳುವ ಪ್ರಥಮ ಶಾಸನವಿದು. ವಿಕ್ರಮಾದಿತ್ಯ VI ನ ಆಳ್ವಿಕೆಯನ್ನು ೬-೭ ವರ್ಷಗಳಷ್ಟು ಮೊದಲು ಹೇಳುತ್ತಿರುವುದು ಈ ಶಾಸನದ ಇನ್ನೊಂದು ವೈಶಿಷ್ಟ್ಯವಾಗಿದೆ.

ಗೂವಲದೇವ III ನನ್ನು ಕುರಿತ ೭ ಶಾಸನಗಳಲ್ಲಿ ತೇಗೂರು (೨೬* ೧೦೮೨), ಕನಕೂರು (೧೫* ೧೧೦೪), ಮುಗದ (೫೭* ೧೧೨೫, ೫೮* ಪು.ಶ ೧೨) ಶಾಸನಗಳು ಮೊದಲು ಚಕ್ರವರ್ತಿಯನ್ನು ತರುವಾಯ ಈ ಸಾಮಂತನನ್ನು ಉಲ್ಲೇಖಿಸಿದರೆ, ನಿಗದಿ (೪೪* ೧೧೧೧) ಶಾಸನ ಮೊದಲು ಸಾಮಂತನನ್ನು ತರುವಾಯ ಚಕ್ರವರ್ತಿಯನ್ನು ಉಲ್ಲೇಖಿಸುತ್ತದೆ. ಅಳ್ನಾವರದ (೧೧* ೧೦೮೧, ೧೨* ೧೧೦೦) ಎರಡು ಶಾಸನಗಳಂತೂ ಚಕ್ರವರ್ತಿಯನ್ನು ಉಪೇಕ್ಷಿಸಿ ನೇರವಾಗಿ ಈ ಸಾಮಂತನನ್ನು ಉಲ್ಲೇಖಿಸುತ್ತವೆ. ಬಹುಶ: ಗೂವಲದೇವ III ನ ಕಾಲದಿಂದ ಇವರು ಸ್ವತಂತ್ರರಾಗಲು ಪ್ರಯತ್ನಿಸುತ್ತಿದ್ದುದರ ದ್ಯೋತಕವಿದು. ಗೂವಲದೇವ III ನ ಆಜ್ಞೆಯ ಮೇರೆಗೆ ತನ್ನ "ವಿವಾಹೋತ್ಸವ ಕಾಲದಲ್ಲಿ" ಜಯಕೇಶಿಯು ಸೌರಾಷ್ಟ್ರ ಸೋಮನಾಥನಿಗೆ ಕನಕೂರನ್ನು ದಾನವಾಗಿ ನೀಡಿದ ವಿಷಯವನ್ನು ಕನಕೂರ ಶಾಸನ (೧೫* ೧೧೦೪) ತಿಳಿಸುತ್ತದೆ. ಇಲ್ಲಿಯ ಮುಗದ ಶಾಸನ (೩೭* ೧೧೨೫) ಗೂವಲದೇವ III ನ ಕೊನೆಯ ಶಾಸನವಾಗಿದೆ.

ಈ ತಾಲೂಕಿನಲ್ಲಿ ಜಯಕೇಶಿ II ಯ ಶಾಸನಗಳು ಅಧಿಕ. ವಿಕ್ರಮಾದಿತ್ಯ VI, ಸೋಮೇಶ್ವರ III, ಜಗದೇಕಮಲ್ಲ II ಈ ಮೂವರು ಚಕ್ರವರ್ತಿಗಳ ಸಾಮಂತನಾಗಿ ವೈಭವದಿಂದ ರಾಜ್ಯವಾಳಿದ ಕೀರ್ತಿ ಇವನಿಗಿದೆ. ಧಾರವಾಡ ತಾಲೂಕಿನಲ್ಲಿ ಸಿಗುವ ಸಿಂಗನಹಳ್ಳಿ (೬೫* ೧೧೨೩-೨೪). ನರೇಂದ್ರ (೩೮* ೧೧೨೩, ೧೧೨೫,೧೧೨೬), ಗೂಗಿಕಟ್ಟಿ (೨೭* ೧೧೨೪), ಮುಮ್ಮಿಗಟ್ಟಿ (೬೨* ೧೧೨೪), ಭಾವಿಹಾಳ (೪೯* ೧೧೨೫), ನರೇಂದ್ರ (೩೯* ೧೧೨೫), ಮದನಭಾವಿ (೫೦* ೧೧೨೭, ೧೧೩೪). ಸಿದ್ಧಾಪುರ (೬೭* ೧೧೨೫), ವೆಂಕಟಾಪುರ (೬೪*ನ ೧೧೩೬) ಶಾಸನಗಳು ಈತನಿಗೆ ಸಂಬಂಧಿಸಿವೆ. ಇವುಗಳಲ್ಲಿ ಮೊದಲಿನ ಆರು ವಿಕ್ರಮಾದಿತ್ಯ VI ನ ಅವಧಿಗೆ, ಕೊನೆಯ ಮೂರು ಸೋಮೇಶ್ವರ III ನ ಅವಧಿಗೆ ಸೇರಿವೆ. ಈ ೯ ಶಾಸನಗಳಲ್ಲಿ ಮುಮ್ಮಿಗಟ್ಟಿ ಶಾಸನ ಚಕ್ರವರ್ತಿ ವಿಕ್ರಮಾದಿತ್ಯ VI ನ, ಸಿದ್ಧಾಪುರ ವೆಂಕಟಾಪುರ ಶಾಸನಗಳು ಚಕ್ರವರ್ತಿ ಸೋಮೇಶ್ವರ III ನ ಅಧಿಪತ್ಯವನ್ನು ಒಪ್ಪಿಕೊಂಡರೆ, ಮಿಕ್ಕ ೬ ಶಾಸನಗಳು ನೇರವಾಗಿ ಈ ಸಾಮಂತನನ್ನು ಸೂಚಿಸುತ್ತವೆ. ನರೇಂದ್ರ ಶಾಸನ (೩೯* ೧೧೨೫) ಈ ಮನೆತನದ ವಂಶಾವಳಿಯ ಖ್ಯಾತಿಯನ್ನು ಚಿತ್ರವತ್ತಾಗಿ ಹೀಗೆ ಬಣ್ಣಿಸುತ್ತದೆ: ಚಟ್ಟಯದೇವ II ನು ಕವಡಿದ್ವೀಪ ಮೊದಲಾದವುಗಳನ್ನು ಗೆದ್ದು, ಲಂಕೆಯವರೆಗೆ ಹಡಗುಗಳ ಸೇತುವೆ ಕಟ್ಟಿ, ಜಲಮಾರ್ಗದ ಮೂಲಕ ಸೌರಾಷ್ಟ್ರಕ್ಕೆ ಹೋಗಿ ಸೋಮನಾಥನಿಗೆ ದಿವ್ಯಪೂಜೆಗೆಯ್ದು, ದಾರಿಯಲ್ಲಿ ಠಾಣೆಯದ ಮುಮ್ಮರಿನೃಪನ ಮಗಳನ್ನು ವರಿಸಿದನು. ಈತನ ಮಗ ಜಯಕೇಶಿ I. ಆಳ್ವರ ಚಕ್ರವರ್ತಿಯನ್ನು ಓಡಿಸಿದ, ಮಗಳನ್ನು ವಿಕ್ರಮಾದಿತ್ಯ VI ನಿಗೆ ಕೊಟ್ಟ, ರಾಜಧಾನಿ ಕಲ್ಯಾಣಕ್ಕೆ ಹೋಗಿ ಗೌರವಗಳಿಸಿದ, ಚೋಳರನ್ನು ಸೋಲಿಸಿದ ವಿಖ್ಯಾತಿ ಈತನದು. ಇವರ ಹಿರಿಯ ಮಗ ಗೂವಲದೇವ III ಕಿರಿಯ ಮಗ ವಿಜಯಾದಿತ್ಯ I . ಈ ವಿಜಯಾದಿತ್ಯನ ಮಗ ಜಯಕೇಶಿ II. ಈತನಿಗೆ ಚಕ್ರವರ್ತಿ ವಿಕ್ರಮಾದಿತ್ಯ VI ನು ಮಗಳು ಮೈಳಲದೇವಿಯನ್ನು ಕೊಟ್ಟು 'ಪದಪದ್ಮಮಂ ನಿಜಾನಂದನೆ ಕರ್ಚ್ಚಿ' ಅಧಿಕ ಕಾಣಿಕೆ ಸಲ್ಲಿಸಿದನು.

ನರೇಂದ್ರ ಶಾಸನ (೩೮* ೧೧೨೩, ೧೧೨೫, ೧೧೨೬) "ಕೊಂಕಣ ವೊಂಭಯ್ನೂಱುಣುಕಲ್ಸಬ್ಬಿಯೆರಡುಮೂವತ್ತು ಕೊನ್ತಕುಳಿಮುವತ್ತು ಹಾನಂಗಲ್ಲ ಯ್ನೂಱುತ್ಸುಗ್ರಾಮೆಕಾದವರವಳ್ಳಿಯೆರಡು ಮುವತ್ತು ಪೊಳಲಗುನ್ದೆಮೂವತ್ತು ವೇಳುಗ್ರಾಮೆಯೆಳ್ಪತ್ತು ಹೈವೆಯಯ್ನೂಱಿ ಕವಡಿದ್ವೀಪ ಸವಲಕ್ಕ" ಪ್ರದೇಶವನ್ನು ಮೈಳಲದೇವಿ (ಜಯಕೇಶಿ II) ಅಳುತ್ತಿದ್ದಳೆಂದು ಹೇಳುವುದು, ಗೋವೆಯ ಕದಂಬರ ರಾಜ್ಯವಿಸ್ತಾರದಲ್ಲಿಯೇ ದೊಡ್ಡದು. ಗೂಗಿಕಟ್ಟಿ ಶಾಸನ (೨೩* ೧೧೨೪) ಮೈಳಲದೇವಿ ಕೇಶವದೇವರನ್ನು ಪ್ರತಿಷ್ಠಾಪಿಸಿದುದನ್ನು ತಿಳಿಸುತ್ತದೆ. ಇವರ ಮಕ್ಕಳು ಶಿವಚಿತ್ತ ಪೆರ್ಮಾಡಿದೇವ ಮತ್ತು ವಿಷ್ಣುಚಿತ್ತ ವಿಜಯಾದಿತ್ಯದೇವರ ವಿಷಯ ಸಾಮಾನ್ಯವಾಗಿ, ಸಿದ್ಧಾಪುರ (೬೮* ೧೧೫೮), ಬೋಕ್ಯಾಪುರ (೪೮* ೧೧೬೩), ಅಮ್ಮಿನಭಾವಿ (೫* ೧೧೬೩), ರಾಯಾಪುರ (೬೭* ೧೧೮೨) ಈ ಎಲ್ಲ ಶಾಸನಗಳಲ್ಲಿ ಜೊತೆಯಾಗಿ ಬಂದಿದೆ. ಇವುಗಳಲ್ಲಿ ರಾಯಾಪುರ ತಾಮ್ರಶಾಸನ, ಕಲಚುರಿಗಳ ತರುವಾಯ ಈ ಸೋದರರನ್ನು ಉಲ್ಲೇಖಿಸುತ್ತದೆ. ಮೊದಲಿನ ಮೂರು ಶಾಸನಗಳು ಚಕ್ರವರ್ತಿತ್ವವನ್ನು ಉಲ್ಲೇಖಿಸದಿರುವದಕ್ಕೆ ಪೆರ್ಮಾಡಿದೇವನ ಆಳಿಕೆಯಲ್ಲಿ ಕಲ್ಯಾಣಚಾಲುಕ್ಯರನ್ನು ತಳ್ಳಿದ್ದ ಕಲಚುರಿಗಳ ಸಾರ್ವಭೌಮತ್ವವನ್ನು ಇವರು ಒಪ್ಪದುದೇ ಕಾರಣವಾಗಿರಬೇಕು.

ಶಿವಚಿತ್ತ ಪೆರ್ಮಾಡಿದೇವನ ತರುವಾಯ ತಮ್ಮನಾಧ ವಿಷ್ಣುಚಿತ್ತವಿಜಯಾದಿತ್ಯನ ಮಗ ಜಯಕೇಶಿ III ಪಟ್ಟವೇರಿದನು. ಮನಗುಂಡಿ (೫೩* ೧೨೦೩), ಮನಗುಂಡಿ (೫೧* ೧೨೦೩, ೧೨೧೧), ಗರಗ (೧೯* ೧೨೦೪-೫) ದೇವರಹುಬ್ಬಳ್ಳಿ (೨೭* ೧೨೦೬), ಮನಗುಂಡಿ (೫೨* ೧೨೦೭) ಶಾಸನಗಳು ಇವನ ಕಾಲದಲ್ಲಿ ಹುಟ್ಟಿವೆ. ಚಾಲುಕ್ಯ ಚಕ್ರವರ್ತಿ ಸೋಮೇಶ್ವರ IV ನನ್ನು ಮನಗುಂಡಿಯ (೫೧* ೧೨೦೩-೧೬) ಒಂದು ಶಾಸನ ಸಾಮಂತನಿಗೆ ತರುವಾಯ ಉಲ್ಲೇಖಿಸುತ್ತದೆ. ಮಿಕ್ಕುವು ಚಕ್ರವರ್ತಿಯ ಬಗ್ಗೆ ಮೌನತಾಳಿವೆ. ಆಮೇಲೆ ಸಿಂಹಾಸನಕ್ಕೆ ಬಂದವನು ಜಯಕೇಶಿ III ಯ ಮಗ ವಜ್ರದೇವ. ಮನಗುಂಡಿಯ ಮೂರು ಶಾಸನ (೫೧, ೫೨, ೫೩) ಗಳ ಉತ್ತರಾರ್ಧದಲ್ಲಿ ಈತನ ಉಲ್ಲೇಖ ಬರುತ್ತದೆ. ಆ ಮೇಲೆ ಪಟ್ಟವೇರಿದ ಈತನ ತಮ್ಮ ತ್ರಿಭುವನಮಲ್ಲನ ಮಗ ಚಟ್ಟಯ III ನ ವಿಷಯ ಕೊಟಬಾಗಿ ಶಾಸನ (೧೭* ೧೨೬೪) ದಲ್ಲಿ ಯಾದವ ಮಹಾದೇವನ ಜೊತೆ ಬರುತ್ತದೆ.

ಹೀಗೆ ಧಾರವಾಡ ತಾಲೂಕಿನಲ್ಲಿ ಅಧಿಕ ಶಾಸನ ಬರೆಯಿಸಿದ, ವೈಭವದಿಂದ ರಾಜ್ಯವಾಳಿದ ಮನೆತನವಿದು. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಜಯಕೇಶಿ II ನ ರಾಣಿಯಾದ ಮೈಳಲದೇವಿ ಪದೇಪದೇ ವರ್ಣನಾವೈಭವದಿಂದ ಕಾಣಿಸಿಕೊಳ್ಳುವುದು. ಬಹುಶಃ ಸ್ವತಂತ್ರ ಆಳಿಕೆ ನಡೆಸುತ್ತಿದ್ದಳೆಂಬ ಧ್ವನಿಯೂ ಅಲ್ಲಲ್ಲಿದೆ.


ಸಾಮಂತರು: ಈ ತಾಲೂಕಿನ ಎರಡು ಸಾಮಂತ ಮನೆತನಗಳಲ್ಲಿ ಒಂದು ಲಕ್ಷ್ಮರಸನದು, ಇನ್ನೊಂದು ಚಾವುಂಡಗಾವುಂಡನದು. ನರೇಂದ್ರದ ಒಂದು ಶಾಸನ (೩೮* ೧೧೨೩) ಇನ್ನೊಂದು ಶಾಸನ (೩೯* ೧೧೨೫) ಈ ಲಕ್ಷ್ಮರಸನನ್ನು ಮತ್ತು ಈತನ ವಂಶಜರನ್ನು ಹೀಗೆ ವಿವರಿಸುತ್ತವೆ:

ಲಕ್ಷ್ಮರಾಜ (ಲಕ್ಷ್ಮರಸ)
|
ಭವ್ಯರಾಜ + ಗಂಗಾ
|
ಸೋಮವಿಭು — ಸಿಂಹದಂಡಾಧಿಪ + ಮೈಳಲದೇವಿಯಕ್ಕ
|
ಬೊಪ್ಪದೇವ

ನರೇಂದ್ರ ಶಾಸನ (೩೮*೧೧೨೩), "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಾಧಿಪತಿ ಮಹಾ ಪ್ರಚಣ್ಡದಣ್ಡನಾಯಕಂ ವಿಬ್ಧವರದಾಯಕ ಗೋತ್ರಪವಿತ್ರ ಪರಾಂಗನಾಪುತ್ರ ಬನ್ಧುಜಿನ್ತಾಮಣಿ ವಿವೇಕ ಚೂಡಾಮಣಿ ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಪ್ರಧಾನನ್ತಜಿಸ್ಟರಾಧ್ಯಕ್ಷ ಪಸಾಯ್ತಂ ಶ್ರೀ ಮನ್ಮೈಳಲದೇವಿಯರ ಮನೆವೆರ್ಗ್ಗಡೆ ಶ್ರೀಮದ್ದಂಡನಾಯಕ" ಎಂಬ ಬಿರುದನ್ನು, ಬೇರೆ ನಾಲ್ಕು ಪದ್ಯಗಳನ್ನೂ ಲಕ್ಷ್ಮರಸನ ವಿಷಯವಾಗಿ ಹೇಳುತ್ತದೆ. ನರೇಂದ್ರದ ಇನ್ನೊಂದು ಶಾಸನ (೩೯*೧೧೨೫) ದಲ್ಲಿಯೂ ಇವನನ್ನು ಕುರಿತು ನಾಲ್ಕು ಪದ್ಯಗಳಿವೆ. ಈ ಶಾಸನ ಮರಿಮೊಮ್ಮಗ ಬೊಪ್ಪದೇವನ ವರೆಗೆ ಮುಂದುವರಿದಿದೆ. ಇಲ್ಲಿ ಭವ್ಯರಾಜ ಮತ್ತು ಪತ್ನಿ ಗಂಗಾದೇವಿಯವರ ಬಗ್ಗೆ ೪ ಪದ್ಯ, ಮಗ ಸೋಮದಂಡಾಧಿಪನ ಬಗ್ಗೆ ೨ ಪದ್ಯಗಳಿವೆ. ಈ ಶಾಸನದ ಕೇಂದ್ರವ್ಯಕ್ತಿಯಾದ

ಸಿಂಹದಂಡಾಧಿಪನನ್ನು "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಸಾಮನ್ತಾಧಿಪತಿ ಮಹಾಪ್ರಚಣ್ಡದಣ್ಣನಾಯಕ ವಿಭುದವರದಾಯಕ ಗೋತ್ರಪವಿತ್ರ ಪರಾಂಗನಾಪುತ್ರ ಬನ್ಧುಚಿನ್ತಾಮಣಿ ವಿವೇಕಚೂಡಾಮಣಿ ದುಷ್ಟಾಶ್ವಮಲ್ಲ ಸೆಣಸಹೃತ್ಸೆಲ್ಲ ಕೋದಣ್ಡರಾಮ ರಣರಂಗಬೀಮ ಸಾಹಿತ್ಯವಿಧ್ಯಾಧರ ನಿಖಿಳಕಳಾಧರ ಸಂಗೀತಪ್ರಸಂಗಸಂಸೇವ್ಯ ಭರತ ಸೌಜನ್ಯಸಾಮ್ರಾಜ್ಯನಿರತ ಧೈರ್ಯಕುಳಪರ್ವ್ವತ ಸತ್ಯಸತ್ಯವೃತ ಮಂತ್ರಚಾಣಾಕ್ಯ ಮನುಜಮಾಣಿಕ್ಯ ಸಜ್ಜನಸಭಾಮಣಿಪ್ರದೀಪ ವಿಕ್ರಮಾದಿತ್ಯ ದೇವಪ್ರತಾಪಸ್ವರೂಪ ನಾಮಾದಿ ಸಮಸ್ತಪ್ರಶಸ್ತಿ ಸಹಿತ ಶ್ರೀಮನ್ಮಹಾಪ್ರಧಾನನನ್ತಃಪ್ಪುರಾಧ್ಯಕ್ಷಂ ಪಸಾಯಿತಂ ಮನೆವೆರ್ಗ್ಗಡೆ ದಣ್ಡನಾಯಕಂ" ಎಂದುವರ್ಣಿಸುತ್ತ, ಈತನು ಕುಂದೂರ ಗ್ರಾಮದಲ್ಲಿ ಲಕ್ಷ್ಮಣೇಶ್ವರ ದೇವಾಲಯ ಕಟ್ಟಿಸಿದುದನ್ನು ಹೇಳುತ್ತದೆ.

ಬಹುಶ: ನಾಳ್ಗಾವುಂಡ ಮನೆತನದಿಂದ ಸಾಮಂತ ಮನೆತನದ ಅಂತಸ್ತಿಗೆ ಏರಿದದು, ಮುಗದ ಶಾಸನ (೫೬*೧೦೪೫, ೫೭*೧೧೨೫, ೫೮* ಸು.ಶ ೧೨. ಶ) ಗಳಲ್ಲಿ ಬರುವ ಜೈನವಂಶದ ಚಾವುಂಡಗಾವುಂಡನ ಮನೆತನ.



ಇವುಗಳಲ್ಲಿ ೫೬ ನೆಯ ಶಾಸನ ಮಾರ್ತಂಡನ ವರೆಗೂ ೫೭ ನೆಯ ಶಾಸನ ಬಮ್ಮರಸನ ವರೆಗೂ ೫೮ ನೆಯ ಶಾಸನ ನಾಕರಸನ ವರೆಗೂ ವಂಶಾವಳಿಯನ್ನು ನೀಡುತ್ತವೆ.

"ಸ್ವಸ್ತಿ ಸಮಸ್ತದುಸ್ತರಾರಾತಿ ಮಸ್ತಕವಿದಳಕಿಶೋರಕಣ್ಠೀರವ । ಪರಸೈನ್ಯ ಭೈರವಂ । ತತಪಿ ತತಘನಶುಷಿರವಾದ್ಯವಿದ್ಯಾವಾಚಸ್ಪತಿ । ಕಾರ್ಯಬೃಹಸ್ಪತಿ । ನಿಜಕುಳಕಮಳಮಾತ್ತಣ್ಡಂ । ನುಡಿವನ್ತೆಗಣ್ಡಂ । ಶರಣಾಗತವಜ್ರಪಂಜರಂ । ವೈರಿದಿಕ್ಕುಂಜರಂ । ಸುಜನಪ್ರಸಂಗಂ । ಸಾಹಸೋತ್ತುಂಗಂ । ನೇಕಾಂಗವೀರಂ ವೀರಾವತಾರಂ । ಕದನಪ್ರಚಣ್ಡಂ ಪಗೆಮುಟ್ಟೆಗಣ್ಡಂ । ವಿನಯವಿಖ್ಯಾತಂ । ನೀತಿ ಮನ್ಧಾತಂ । ನಾಮಾದಿ ಸಮಸ್ತಪ್ರಶಸ್ತಿಸಮೇತರಪ್ಪ" ಎಂಬುದು ಚಾವುಂಡಗಾವುಂಡನ ಬಿರುದು. ಸಮ್ಯಕ್ತರತ್ನಾಕರ ಹೆಸರಿನ ಬಸದಿಯನ್ನು ಮಾಡಿಸಿದ ಕೀರ್ತಿ ಇವನದು.

ಕೆಱೆ ಬಾವಿ ಬಸದಿ ದೇಗುಲ
ಮಱವಂಟಿಗೆ ಸತ್ರುಮೆಂಬ ಧರ್ಮ್ಮಮವಿನಿತುಂ
ನೆಱೆದವು ಮುಗುಂದ ಮೂವ
ತ್ತಱ ವಿಭು ಚಾವುಣ್ಡರಾಯನಿಂದಂ ಜಗದೊಳ್ ॥

ಎಂಬ ಪದ್ಯ ಚಾವುಂಡನ ಲೋಕಸಂಗ್ರಹಸಾಮರ್ಥ್ಯವನ್ನು ವ್ಯಕ್ತಪಡಿಸುತ್ತದೆ. ಈತನ ಹೆಂಡತಿ ಜೆಟ್ಟಿಯಕ್ಕ. ಇವರ ಮೊಮ್ಮಗ ಮಾರ್ತಂಡ ತುಂಬ ಪ್ರಸಿದ್ಧ ವ್ಯಕ್ತಿ. "ಸ್ವಸ್ತಿ ಸಮಸ್ತದುಸ್ತರಾರಾತಿ ಹಸ್ತಮಸ್ತಕಸ್ಥಳ ವಿವಳನೋಗ್ರಪಂಚಾನನಂ । ಶೌರ್ಯ್ಯಷಡಾನನಂ । ಸಕಳಕಳಾ ಕಳಿತವಾಗ್ಗಲನಾಲಲಾಮಂ । ಭುಜಬಳ ಭೀಮಂ । ನರಿಬಳ ಜಳಧಿ ಬಡವಾನಳಂ । ದ್ರೋಹಕಾಳಾನಳಂ । ರಿಪುಹೃದಯಸೆಲ್ಲಂ । ದುಷ್ಟಾಶ್ವಮಲ್ಲಂ । ಬನ್ಧುಜನವನಜಮಾರ್ತ್ತಣ್ಡಂ । ಕಾಯ್ವರಗಣ್ಡಂ । ಅರಿತುರಗತಟ್ಟ ಸಂಘಟ್ಟಂ । ಬಿರುದಗಾವಣಿಗೆ ಶರಭ ಭೇರುಣ್ಡಂ । ಅಷ್ಟಾದಶ ಪಟ್ಟಣಾಧಿಷ್ಠಿತ ಪಂಚ ಪುಟ್ಟಗಾದಿ ಬಾವನ್ನವೀರಂ । ಶಾಸನ ಪಟ್ಟಸಾಲಿಗ ಸಮಯ ಸಮುದಿತ ಲಲಾಟಪಟ್ಟಂ । ವೈರಿಘರಟ್ಟ । ನನೇಕ ಸಂಗ್ರಾಮಪಾರಾವಾರ ಪಾರಾಯಣಂ । ಚತುರಚಾರಾಯಣಂ । ಸಮಯ ವಿಜಯಕಾರಣಂ । ಮದಾನ್ಧರಿಪು ಮದನಿವಾರಣಂ । ಪರನಾರೀದೂರನೇಕಾಂಗ ವೀರನ ಸಹಾಯಶೌರ್ಯ್ಯ ಸಾಹಸೋತ್ತುಂಗನಯ್ಯನ ಸಿಂಗಂ ಗೇಣುಕಾಱರ ದೇವನೊನ್ದಿಜೀವಾತಂ ಲೋಕ ವಿಖ್ಯಾತಂ ಸಮ್ಯಕ್ತರತ್ನಾಕರಂ ೧ ಪದ್ಮಾವತೀಲಬ್ಧವರಪ್ರಸಾದಂ ನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರೀಮನ್ಮಹಾಸಾಮನ್ತಂ" ಎಂಬುದು ಈತನ ಬಿರುದು. "ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕಶಾಲೆಯಂ ಮಾಡಿಸಿ ತನ್ನ ಕೀರ್ತ್ತಿಶಿಳಾಸ್ತಂಭಮನಾಚನ್ದ್ರಾರ್ಕ ತಾರಾಂಬರಂ" ನಿಲ್ಲಿಸಿದನೆಂದು ಮುಗದ ಶಾಸನ (೫೬* ೧೦೪೫) ಹೇಳುತ್ತದೆ. ಈತನ ಹೆಂಡತಿ ಗೊಜ್ಜಿಕಬ್ಬೆ. ಶಾಸನಗಳಲ್ಲಿಯ ಇವಳ ವರ್ಣನೆಯನ್ನು ಓದಿದರೆ ಅತ್ತಿಮಬ್ಬೆ, ಶಾಂತಲೆಯರು ನೆನಪಾಗುತ್ತಾರೆ. ಇವರ ಮಗ ನಾಕರಸ. ಈತನನ್ನು ವಿಸ್ತಾರವಾಗಿ ವರ್ಣಿಸುವ ಮುಗದ ಶಾಸನ (೫೭* ೧೧೨೫)

ಸಾಸನಮಾಗಿರೊಳ್ಪೆಸೆವ ಕಲ್ಲಿನ ಸಾಸನವೊಂದಿದಲ್ತು ಕೇಳ್ ।
ಸಾಸದ ಸಾಸನಂ ಜಯದ ಸಾಸನವಾರ್ಪ್ಪಿನ ಸಾಸನಂ ಗುಣೋ ।
ದ್ಭಾಸನ ಸಾಸನಂ ಸಿರಿಯ ಸಾಸನವೊಳ್ಪಿನ ಸಾಸನಾಳಿಯಿಂ ।
ಲೇಸೆನೆ ನಾಕಿರಾಜವಿಭು ಸಾಸನಕೋಟೆಯನೆಯ್ದೆ ತಾಳ್ದಿದಂ ॥

ಮಾಡಿಸುವಾಯತನಂಗ
ಳ್ಮಾಡಿಸುವಾಹಾರ ದಾನ ಧರ್ಮ್ಮಗುಣಂಗ
ಳ್ಮಾಡಿಸುವ ಕೆಱೆಗಳಿನಿತುಂ
ಮಾಡವೆ ಸಾಮಸ್ತ ನಾಕಿಗಾಯುಂ ಶ್ರೀಯುಂ ॥

ಎಂದು ಕೀರ್ತಿಸುವುದನ್ನು ಲಕ್ಷಿಸಬೇಕು. ಈತನ ಕಕ್ಕ ಚಾವುಂಡನ ಮಗ ಬಮ್ಮರಸನು, ದೊಡ್ಡಪ್ಪ ಮಾರ್ತಂಡಯ್ಯನು ಕೆರೆಗೆ ಬಿಟ್ಟ ಗದ್ದೆಯ ಸೀಮೆಯನ್ನು ನಿರ್ಣಯಿಸಿ ಶಾಸನ ನಿಲ್ಲಿಸುತ್ತಾನೆ.

ಅಧಿಕಾರಿಗಳು: ಧಾರವಾಡ ತಾಲೂಕಿನಲ್ಲಿ ಕೆಲವು ಜನ ರಾಜ್ಯಾಧಿಕಾರಿಗಳ ಉಲ್ಲೇಖ ಬರುತ್ತದೆ. ವಿಕ್ರಮಾದಿತ್ಯ VI ನ ಪಟ್ಟ ಮಹಾದೇವಿ ಮಲಯವತಿಯ ಅಧಿಕಾರಿಗಳಾದ ಭಾನುದೇವ, ಭಾಸ್ಕರರ ಉಲ್ಲೇಖ ಧಾರವಾಡ ಶಾಸನ (೩೭* ಸು. ಶ ೧೧) ದಲ್ಲಿದೆ. ಇವರಲ್ಲದೆ ಜಗದೇಕಮಲ್ಲ IIನ ಪಟ್ಟಸಾಹಣಿ ಬಮ್ಮಣ ಚಮೂಪ(ಅಮ್ಮಿನಭಾವಿ ೪*೧೧೪೬), ಮಹಾಪಸಾಯಿತ ಮಾಗುಡ ಹಿಟ್ಟೆಯ ನಾಯಕ(ಅಮ್ಮಿನಭಾವಿ ೭*೧೨೪೩), ಮಹಾಪ್ರಧಾನ ರಾಯದಂಡಾಧಿಪತಿ ಬೀಚಿಸೆಟ್ಟಿ ಮತ್ತು ಸರ್ವಾಧಿಕಾರಿ ಅಳಿಯ ಮಲ್ಲಿಸೆಟ್ಟಿಯರ(ಹೆಬ್ಬಳ್ಳಿ ೭೨*೧೨೪೮) ವಿವರಗಳೂ ಇಲ್ಲಿ ಬರುತ್ತವೆ. **ಗಾವುಂಡರು** : ಇಡಿಯಾದ ರಾಜ್ಯಕ್ಕೆ ಬಿಡಿಬಿಡಿಯಾದ ಅಧಿಕಾರದ ಮೂಲಕ ಸಂಘಟನೆಯನ್ನು ಒದಗಿಸುವಲ್ಲಿ ಗಾವುಂಡರ ಪಾತ್ರ ತುಂಬ ಹಿರುದು.ಅಮ್ಮಿನಭಾವಿ ಶಾಸನ(೩*೧೧೧೨ ೪ * ೧೧೪೬) ಮತ್ತು ಧಾರವಾಡ ಶಾಸನ(೩೧ * ಸು. ಶ. ೧೧)ಗಳು 'ಪನ್ನಿರ್ವರ್ಗಾವುಂಡು' ಗಳನ್ನು, ಮುಮ್ಮಿಗಟ್ಟಿ ಶಾಸನ (೬೨* ೧೧೨೪) 'ಕುಂದೂರ ಪದಿನರುವರ್ಗಾವುಂಡು'ಗಳನ್ನು, ಮನಗುಂಡಿ ಶಾಸನ (೫೧* ೧೨೦೩) ಚಾವುಂಡ ಗಾವುಂಡನನ್ನು, ಮನಗುಂಡಿಯ ಇನ್ನೊಂದು ಶಾಸನ (೫೩* ೧೨೦೩) ಚಾವುಂಡ ಗಾವುಂಡನನ್ನು, ಮನಗುಂಡಿಯ ಇನ್ನೊಂದು ಶಾಸನ (೫೩* ೧೨೦೩) ತಿಪ್ಪಗಾವುಂಡನನ್ನು ಉಲ್ಲೇಖಿಸುತ್ತವೆ. ಈ ತಾಲೂಕಿನ ಇನ್ನೆರಡು ಸುಪ್ರಸಿದ್ಧ ಗಾವುಂಡ ಮನೆತನಗಳು ತೇಗೂರ, ಮುಮ್ಮಿಗಟ್ಟಿ ಶಾಸನಗಳಲ್ಲಿ ಕಂಡು ಬರುತ್ತವೆ.

'ಕೊಳನೂರ ಗಾವುಣ್ಡನಾನ್ವಯಮೆಂತೆಂದಡೆ' ಎಂದು ಪ್ರಾರಂಭವಾಗುವ ತೇಗೂರ ಶಾಸನ (೨೬* ೧೦೮೨) ಮೂಕಗಾವುಂಡ, ಮಗ ಸಿಂಗಗಾವುಂಡ, ಮಗ ಜಯದೇವಗಾವುಂಡ ಎಂಬ ವಂಶಾವಳಿಯನ್ನು ಕೊಡುತ್ತದೆ. ಮೊಮ್ಮಗ ಜಯದೇವಗಾವುಂಡನು, ಅಜ್ಜ ಮೂಕಗಾವುಂಡ ಕಟ್ಟಿಸಿದ ಕಲಿದೇವ ದೇವಾಲಯಕ್ಕೆ ದತ್ತಿ ಬಿಟ್ಟುದು ಇಲ್ಲಿಯ ವಿಷಯ.

ಮುಮ್ಮಿಗಟ್ಟಿ ಶಾಸನ (೬೨* ೧೧೨೪) ಮಲ್ಲಗಾವುಂಡನ ಮಗ ಉದಯಮಗಾವುಂಡನು ಕಲಿದೇವ ಸ್ವಾಮಿಯ ದೇವಾಲಯಕ್ಕೆ ದಾನ ನೀಡಿದುದನ್ನು ತಳಿಸುತ್ತದೆ. ಇಲ್ಲಿ ಬರುವ

ಸಿಡಿಲನ್ನಂ ರಿಪುನಿಚಯಂ
ತೊಡಜ್ದಿಡೆಯೊಳ್ ಬೆಳ್ಪ ಜನಕೆ ಸುರತರುವನ್ನಂ
ಕುಡುವೆಡೆಯೊಳ್ ಬಾಣನವೊಲ್
ಮೃಡಭಕ್ತಂ ಧರಣೀತಳದೊಳುದಯಮಗವುಂಡಂ ॥

ಎಂಬ ವಿವರಣೆಯನ್ನು ಗಮನಿಸಬೇಕು. ಇವಲ್ಲದೆ ಒಂದೊಂದು ಶಾಸನದಲ್ಲಿಯೂ ಗಾವುಂಡ ಮನೆತನಗಳಿವೆ.

ರಾಜಕೀಯ ವಿಭಾಗಗಳು: ಆಡಳಿತ ಅನುಕೂಲ ದೃಷ್ಟಿಯಿಂದ ರಾಜ್ಯವನ್ನು ಸಣ್ಣ-ದೊಡ್ಡ ಪ್ರಮಾಣದಲ್ಲಿ ವಿಭಾಗಗೊಳಿಸುವುದು ಪ್ರಾಚೀನಕಾಲದಿಂದಲೂ ನಡೆದು ಬಂದ ಪದ್ಧತಿ. ಶಾಸನಗಳಲ್ಲಿ ಕಂಡು ಬರುವ ಸೂಚನೆಗಳನ್ನು ಸಂಗ್ರಹಿಸಿ, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗ, ಉಪವಿಭಾಗಗಳನ್ನು ನಿರ್ಧರಿಸಿ ಅಂಥ ಒಂದು ನಕಾಶವನ್ನು ಬಿಡಿಸಬೇಕಾದ ಬಹು ದೊಡ್ಡ ಕಾರ್ಯ ನಮ್ಮ ಕಣ್ಣಮುಂದೆ ನಿಂತಿದೆ. ಧಾರವಾಡ ತಾಲೂಕಿನ ಶಾಸನಗಳು ಒದಗಿಸುವ ರಾಜಕೀಯ ವಿಭಾಗಗಳು ಹೀಗಿವೆ.

ಕುಂತಳನಾಡು, ಸ್ಥೂಲವಾಗಿ ಕಾವೇರಿಯಿಂದ ಗೋದಾವರಿ ವರೆಗಿನ ವಿಶಾಲ ಕರ್ನಾಟಕಕ್ಕೆ ಸಮಾನವಾದುದು. ಕಲ್ಯಾಣಚಾಲುಕ್ಯ ಮನೆತನದ ವಿಕ್ರಮಾದಿತ್ಯ VI ನನ್ನು ನರೇಂದ್ರ (೩೯* ೧೧೨೫) ಶಾಸನ 'ಕುಂತಳ ಚಕ್ರವರ್ತಿ' ಎಂದು ಕರೆದಿದೆ. ವಿಜಯನಗರ ಅರಸರಿಗೆ ಸಂಬಂಧಿಸಿದ ಅಮ್ಮಿನಭಾವಿ ಶಾಸನ (೯* ೧೫೪೭) 'ಕರ್ನಾಟಕ'ವನ್ನು ಉಲ್ಲೇಖಿಸುತ್ತದೆ. ಈ ಕುಂತಳ ಅಥವಾ ಕರ್ನಾಟಕದಲ್ಲಿ ಅಂತರ್ಗತವಾಗುವ ಮತ್ತು ಅಂತರ್ಗತವಾಗದಿರುವ ಅನೇಕ ಪ್ರಾಂತಗಳ ಹೆಸರು ಈ ಸಂಪುಟದಲ್ಲಿ ಬರುತ್ತವೆ. ನರೇಂದ್ರ ಶಾಸನ (೩೮* ೧೧೨೩-೨೬) ದಲ್ಲಿ "ಕೊಂಕಣವೊಂಭಯ್ನೂಱುಉಣುಕಲ್ಸಬ್ಬಿಯೆರಡು ಮೂವತ್ತು ಕೊನ್ತಕುಳಿ ಮೂವತ್ತು ಹಾನುಂಗಲ್ಲಯ್ನೂಱುತ್ಸುಗ್ರಾಮೆ ಕಾದರವಳ್ಳಿಯೆರಡು ಮೂವತ್ತು ಪೊಳಲಗುನ್ದೆ ಮೂವತ್ತು ವೇಳುಗ್ರಾಮೆಯೆಳ್ಪತ್ತು ಹೈವೆಯಯ್ನೂಱು ಕವಡಿದ್ವೀಪ ಸವಲಕ್ಖಮುಮಂ . . . . ರಾಜ್ಯಂ ಗೆಯ್ಯುತ್ತಮಿರೆ" ಎಂದು ಗೋವೆಯ ಕದಂಬರ ರಾಜ್ಯವಿಸ್ತಾರದಲ್ಲಿ ಈ ಸ್ವತಂತ್ರ ವಿಭಾಗಗಳು ಕಂಡು ಬರುತ್ತವೆ.

ಕೊಂಕಣವೊಂಬಯ್ನೂಱು : ೯೦೦ ಹಳ್ಳಿಗಳ ಸ್ವತಂತ್ರವಿಭಾಗವಾಗಿರುವ ಕೊಂಕಣವೊಂಬಯ್ನೂರು, ಕೊಂಕಣಮಂಡಳ ಎಂದೂ ಕರೆಯಿಸಿಕೊಂಡಿದ್ದಿತು. ಇದು ಗೋವೆಯ ಕದಂಬರಾಜ್ಯದ ಮುಖ್ಯಪ್ರದೇಶ. ಕೆಲವು ಸಲ ಉಳಿದ ವಿಭಾಗಗಳನ್ನು ಬಿಟ್ಟರೂ ಈ ಹೆಸರು ತಪ್ಪದೇ ಬಂದಿದೆ. "ನಿಜರಾಜಧಾನಿ ಗೋವೆಯೊಳಿರ್ದ್ದು ಕೊಂಕಣ ಮಂಡಳಮಂ . . . . ರಾಜ್ಯಂಗೆಯ್ಯುತ್ತಮಿರೆ" ಎಂಬ ವಾಕ್ಯವನ್ನೂ ಇವರಿಗಿರುವ 'ಕೊಂಕಣ ಚಕ್ರವರ್ತಿ' ಎಂಬ ಬಿರುದನ್ನೂ ಗಮನಿಸಬೇಕು.

ಉಣುಕಲ್ಸಬ್ಬಿಯೆರಡು ಮೂವತ್ತು: ಶಾಸನಗಳಲ್ಲಿ ಬರುವ 'ಎರಡಱುನೂರು' ಎಂಬುದು ಪುಲಿಗೆರೆ-೩೦೦, ಬೆಳ್ವೊಲ- ೩೦೦ ಕೂಡಿ ೬೦೦ ಆಗಿರುವ ಪ್ರಾಂತವೆಂದು ಸೂಚಿಸುವಂತೆ, ಇಲ್ಲಿ ಉಣಕಲ್ಲು- ೧೫ ಸಬ್ಬಿ-೧೫ ಸೇರಿ ೩೦ ಆಗಿರಬಹುದೇ ಎನಿಸುತ್ತದೆ. ಆದರೆ ಇವು ಉಣಕಲ್ಲು-೩೦, ಸಬ್ಬಿ-೩೦ ಎಂಬ ವಿಭಾಗಗಳಾಗಿವೆ. ಈಗಿನ ಹುಬ್ಬಳ್ಳಿ ತಾಲೂಕಿನ ಉಣಕಲ್ಲು ಮತ್ತು ಛಬ್ಬಿ ಗ್ರಾಮಗಳು ಕೇಂದ್ರವಾಗಿದ್ದ ಆಡಳಿತ ವಿಭಾಗಗಳಿವು.

ಕೊನ್ತಕುಳಿ ಮೂವತ್ತು: ಇದು ಬಹುಶ: ಮುಂಡಗೋಡ ತಾಲೂಕಿನ ಪರಿಸರದ ಪ್ರಾಂತವಾಗಿರಬಹುದು.

ಹಾನುಂಗಲ್ಲಯ್ನೂಱು: ಈಗಿನ ಹಾನುಗಲ್ಲನ್ನು ಕೇಂದ್ರವಾಗಿಟ್ಟುಕೊಂಡು ೫೦೦ ಹಳ್ಳಿಗಳನ್ನೊಳಗೊಂಡ ಪ್ರಾಂತ.

ಉತ್ಸುಗ್ರಾಮೆ ಕಾದರವಳ್ಳಿಯೆರಡು ಮೂವತ್ತು: ಉತ್ಸುಗ್ರಾಮೆ-೩೦ ಮತ್ತು ಕಾದವರಳ್ಳಿ-೩೦ ಎಂದು ಇದರ ಅರ್ಥ. ಈವು ಈಗಿನ ಬೆಳಗಾವ ತಾಲೂಕಿನ ಉಚಗಾಂವ ಮತ್ತು ಬೈಲಹೊಂಗಲ ತಾಲೂಕಿನ ಕಾದರೊಳ್ಳಿ ಗ್ರಾಮಗಳು ಕೇಂದ್ರವಾಗಿದ್ದ ಆಡಳಿತ ವಿಭಾಗಗಳು.

ಪೊಳಲಗುನ್ದೆ ಮೂವತ್ತು : ಈ ಪ್ರಾಂತವನ್ನು ನಿರ್ದಿಷ್ಟವಾಗಿ ಗುರುತಿಸುವುದು ಸಾಧ್ಯವಾಗಿಲ್ಲ. ಬೈಲಹೊಂಗಲ, ಸವದತ್ತಿ ಮತ್ತು ನವಿಲುಗುಂದ ತಾಲೂಕುಗಳ ಪ್ರದೇಶವಾಗಿರುವ ಸಾಧ್ಯತೆಯಿದೆ.

ವೇಳುಗ್ರಾಮೆಯೆಳ್ಪತ್ತು : ವೇಳುಗ್ರಾಮೆಯೆಂಬುದು ಇಂದಿನ ಬೆಳಗಾವಿಯ ಪ್ರಾಚೀನ ಹೆಸರು. ಈ ಪಟ್ಟಣವನ್ನು ಕೇಂದ್ರವನ್ನಾಗಿಟ್ಟುಕೊಂಡ ೭೦ ಹಳ್ಳಿಗಳ ಪ್ರದೇಶವಿದು.

ಹೈವೆಯಯ್ನೂಱು : ಇದು ಕೊಂಕಣ ೯೦೦ ರ ದಕ್ಷಿಣದಲ್ಲಿರುವ ಪ್ರಾಂತ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಭಾಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಭಾಗಗಳನ್ನೊಳಗೊಂಡಿದ್ದಿತು.

ಕವಡಿದ್ವೀಪ ಸವಲಕ್ಷ : ಕುಂತಳ ನಾಡಿಗೆ ಒಳಪಡದ ಕವಡಿದ್ವೀಪ ಅಥವಾ ಕವಡಿದ್ವೀಪ ಸವಲಕ್ಷ (ಅಳ್ನಾವರ ೧೧* ೧೦೮೧. ನರೇಂದ್ರ ೩೮* ೧೧೨೩, ನರೇಂದ್ರ ೨೯* ೧೧೨೫) ಮೂರು ಶಾಸನಗಳಲ್ಲಿ ಗೋಚರಿಸಿದೆ. ಒಂದೂಕಾಲು ಲಕ್ಷ ಹಳ್ಳಿಗಳ ಈ ಪ್ರಾಂತ ಠಾಣಾ, ಕೋಲಾಬಾ, ರತ್ನಾಗಿರಿ ಜಿಲ್ಲೆಗಳ ಪ್ರದೇಶವಾಗಿರಬಹುದು.

ಕೊಂಕಣ–೯೦೦ ಬಿಟ್ಟರೆ ಪದೇ ಪದೇ ಕಾಣುವ ಗೋವೆಯ ಕದಂಬರ ಮುಖ್ಯಪ್ರಾಂತ ಪಲಸಿಗೆ ಪನ್ನಿರ್ಛಾಸಿರ. "ಗೂವಲದೇವರ್ ಕೋಂಕಣವೊಂಬಯ್ನೂಱುಮಂ ಪಲಸಿಗೆ ಪನ್ನಿರ್ಛಾಸಿರಮುಮಂ . . . . . ರಾಜ್ಯಂಗೆಯ್ಯುತ್ತಮಿರೆ" ಎಂಬ ಉಲ್ಲೇಖ ನೋಡಬೇಕು. ಹೀಗೆ ಈ ಎರಡೇ ಉಲ್ಲೇಖಗಳು ಬೋಕ್ಯಾಪುರ (೪೮* ೧೧೬೩), ಭಾವಿಹಾಳ (೪೯* ೧೧೨೫), ಮನಗುಂಡಿ (೫೯* ೧೦೪೫), ಮುಗದ (೫೭* ೧೧೨೫,೫೮* ಸು.ಶ ೧೨) ಶಾಸನಗಳಲ್ಲಿ ಕಂಡು ಬರುತ್ತವೆ. ಅಮ್ಮಿನಭಾವಿ (೨* ೧೦೭೧–೭೨) ಶಾಸನೋಕ್ತ "ಕೊಂಕಣವೊಂಬಯ್ನೂಱುಮಂ ಪಲಸಿಗೆ ಪನ್ನಿರ್ಛ್ಛಾಸಿರಮುಂ ಕುಂದೂರ್ಯೈನೂಱುಮಂ . . . . . ರಾಜ್ಯಗೆಯ್ಯುತ್ತಮಿರೆ" ಎಂಬುದು ಪಲಸಿಗೆ–೧೨೦೦೦ ದಿಂದ ಕುಂದೂರು–೫೦೦ ಸ್ವತಂತ್ರವೆಂದು ತಿಳಿಸುತ್ತದೆ. ಅಳ್ನಾವರ ಶಾಸನವೂ (೧೧* ೧೦೮೧) ಈ ಅಂಶವನ್ನು ಬೆಂಬಲಿಸುತ್ತದೆ. ಆದರೆ ಕೊಟಬಾಗಿ ಶಾಸನ (೧೭* ೧೨೬೪) "ಹಲಸಿಗೆದೇಶ ಸಂಮಂಧ ಕುಂದೂರು ವಿಶಯ" ಎಂದು ಹೇಳುವಲ್ಲಿ ಕುಂದೂರು–೫೦೦, ಹಲಸಿಗೆ–೧೨೦೦೦ ದ ಒಂದು ಭಾಗವೆಂದು ತಿಳಿದು ಬರುತ್ತದೆ. ನರೇಂದ್ರ ಶಾಸನ (೭೯* ೧೧೨೫) ಈ ಅಂಶವನ್ನು ಪೋಷಿಸುತ್ತದೆ. ಇದಲ್ಲದೆ ಧಾರವಾಡವನ್ನು ದೇವರಹುಬ್ಬಳ್ಳಿ ಶಾಸನ (೨೭* ೧೨೦೬) ದಲ್ಲಿ ಹಲಸಿಗೆನಾಡಿನ ಗ್ರಾಮವೆಂದು, ಧಾರವಾಡ (೩೩* ೧೧೧೭), ನರೇಂದ್ರ (೩೮* ೧೧೨೩. ೭೯* ೧೧೨೫) ಶಾಸನಗಳಲ್ಲಿ ಕುಂದೂರ– ೫೦೦ ರ ಗ್ರಾಮವೆಂದು ಕರೆದುದರಿಂದ ಹಲಸಿಗೆನಾಡಿನ ಒಳಪ್ರಾಂತ ಕುಂದೂರವಾಡೆಂದು ತಿಳಿದುಬರುತ್ತದೆ. ಕಾರಣ ಹಲಸಿಗೆ–೧೨೦೦೦ ಮತ್ತು ಕುಂದೂರ–೫೦೦ ಸ್ವತಂತ್ರ ಪ್ರಾಂತಗಳೋ, ಹಲಸಿಗೆ –೧೨೦೦೦ ದ ಉಪವಿಭಾಗ ಕುಂದೂರ ಐನರೋ ಸ್ಪಷ್ಟವಾಗುವುದಿಲ್ಲ. ಈ ಕುಂದೂರ–೫೦೦ ಕ್ಕೆ ಅಮ್ಮಿನಭಾವಿ, ಕನಕಾಪುರ, ಕೊಟಬಾಗಿ, ಧಾರವಾಡ (ನರೇಂದ್ರ, ತಡಕೋಡ), ಮರೆಯವಾಡ, ಕಾವಲಗೇರಿ, ಕರ್ಬ್ಬಳ್ಳಿ (?) ಗ್ರಾಮಗಳು ಸೇರಿದ್ದವೆಂದು ತಿಳಿದು ಬರುತ್ತದೆ.

ಇಂಥ ಇನ್ನೊಂದು ವಿಭಾಗ ಪಲಸಿಗೆ–೧೨೦೦೦ ಕ್ಕೆ ಸಂಬಂಧಿಸಿದ ಮಾರಜವಾಡಿ ಕಂಪಣ. ಇದರಲ್ಲಿ . . . ರಜೀ ಎಂಬ ಯಾವುದೋ ಒಂದು ಉಪವಿಭಾಗವಿದ್ದು, ಕೊಳನೂರ (ತೆಗೂರ ೨೬* ೧೦೮೨) ಇದಕ್ಕೆ ಸೇರಿದ್ದಿತು. ಇದನ್ನು ಬಿಟ್ಟರೆ ಈ ಮಾರಜವಾಡಿ ಕಂಪಣಕ್ಕೆ ಮುಗುಂದ–೩೦ ಸೇರಿದ್ದಿತೆಂದು ಮುಗದ (೫೬, ೫೭, ೫೮) ಶಾಸನಗಳು ಹೇಳುತ್ತವೆ. ಈ ೩೦ ಹಳ್ಳಿಗಳ ವಿಭಾಗಕ್ಕೆ ಸೇರಿದುದು ನಿಗದಿ (೪೪* ೧೧೧೧).

ಹಲಸಿಗೆ ನಾಡಿನ ಒಂದು ಹಳ್ಳಿ, ಮನಗುಂಡಿಯೆಂದು ಮನಗುಂಡಿ ಶಾಸನ (೫೭* ೧೨೦೩) ಹೇಳಿದರೆ, ಹಲಸಿಗೆ-೧೨೦೦೦ ದ ಉಪವಿಭಾಗ ಹುಲ್ಲಂಬೆ-೭೦ ರ ಒಂದು ಹಳ್ಳಿ ಮನಗುಂಡಿಯೆಂದು ಮನಗುಂಡಿಯ ಇನ್ನೊಂದು ಶಾಸನ (೫೧* ೧೨೦೩) ಹೇಳುವುದರಿಂದ ಹಲಸಿಗೆ ೧೨೦೦೦→ಹುಲ್ಲಂಬಿ ೭೦→ ಮನಗುಂಡಿ ಎಂದು ವಿಭಾಗ, ಉಪವಿಭಾಗ, ಗ್ರಾಮಗಳು ಸ್ಪಷ್ಟವಾಗುತ್ತವೆ.

ಕಿತ್ತೂರ-೩೦ ರ ಒಂದು ಗ್ರಾಮ ಹೊಸವೊಳಲು ಎಂಬ ಉಲ್ಲೇಖವು ಒಂದೆಡೆ ಬರುತ್ತದೆ. (ಸಿದ್ಧಾಪುರ ೬೮* ೧೧೫೮). ರಾಯಾಪುರ ತಾಮ್ರಶಾಸನದಲ್ಲಿ ಬೆಳ್ವೊಲ-೩೦೦ ರ ವಿಭಾಗವಾದ ನವಿಲುಗುಂದ-೪೦ ಕ್ಕೆ ಬೆಲ್ಲವುರಹಳ್ಳಿ ಸೇರಿದ್ದಿತೆಂದು ತಿಳಿದುಬರುತ್ತದೆ.

ಧಾರ್ಮಿಕ

ಪ್ರಾಚೀನ ಕನ್ನಡಿಗರ ಬದುಕನ್ನು ರೂಪಿಸುವಲ್ಲಿ ರಾಜಶಕ್ತಿಯಂತೆ ಪ್ರಮುಖವಾದುದೆಂದರೆ ಧರ್ಮ ಶಕ್ತಿ. ಧಾರವಾಡ ತಾಲೂಕಿನ ಶಾಸನಗಳಲ್ಲಿ ಜೈನ, ಬ್ರಾಹ್ಮಣ, ಶೈವ ಮತ್ತು ವೀರಶೈವಧರ್ಮಗಳಿಗೆ ಸಂಬಂಧಪಟ್ಟ ವಿಷಯ ಹೀಗಿದೆ:

ಜೈನ: ಧಾರವಾಡ ತಾಲೂಕಿನ ಜೈನಕೇಂದ್ರಗಳೆಂದರೆ ಅಮ್ಮಿನಭಾವಿ, ಅಳ್ನಾವರ, ಗರಗ, ತಡಕೋಡ, ನರೇಂದ್ರ, ನುಗ್ಗಿಕೆರೆ, ಮನಗುಂಡಿ, ಮುಗದ, ಹೆಬ್ಬಳ್ಳಿ. ಇವುಗಳಲ್ಲಿ ಅಮ್ಮಿನಭಾವಿಗೆ. ಸಂಬಂಧಿಸಿದಂತೆ ೧೨ನೆಯ ಶತಮಾನದ ಚಂದ್ರನಾಥತೀರ್ಥಂಕರನ ಪಾದಪೀಠದ ಶಾಸನವನ್ನು ಬಿಟ್ಟರೆ, ದೊರೆಯುವುದು ಕ್ರಿ. ಶ . ೧೮೯೨ ರ ನೇಮಿನಾಥತೀರ್ಥಂಕರನ ಪಾದಪೀಠ ಶಾಸನ. ಜೈನಬಸದಿ, ಜೈನ ಸಮಾಜಗಳ ಪ್ರಾಚೀನತಮ ಹಿನ್ನೆಲೆಯಿರುವ ಈ ಗ್ರಾಮದಲ್ಲಿ ವಿಸ್ತಾರವಾದ ಜೈನಶಾಸನಗಳು ವಿಪುಲಸಂಖ್ಯೆಯಲ್ಲಿ ಲಭಿಸದುದು ವಿಚಾರರ್ಹ ಅಂಶವಾಗಿದೆ.

ಅಳ್ನಾವರದ ನಾಲ್ಕು ಶಾಸನಗಳಲ್ಲಿ ಮೂರು ಜೈನಕ್ಕೆ ಸೇರಿದುದು, ಈ ಊರಿನ ಜೈನಪ್ರಾಬಲ್ಯದ ದ್ಯೋತಕವಾಗಿದೆ. ಮೊದಲನೆಯ ಶಾಸನ (೧೧) ಜೈನಮುನಿಗಳಾದ ರಾಮಚಂದ್ರ, ಬಾಳಚಂದ್ರಯತಿಗಳನ್ನು ವರ್ಣಿಸುತ್ತ, ಅಳ್ನಾವರದಲ್ಲಿ ಪ್ರಧಾನ ಮಾಚಣ್ಣ ಮಾಡಿಸಿದ ಬಸದಿಗೆ ನರಸಿಂಹಯ್ಯ ಸೆಟ್ಟಿ ಮೊದಲಾದವರು ಬಿಟ್ಟ ದಾನವನ್ನು ವಿವರಿಸುತ್ತದೆ. ಎರಡನೆಯ ಶಾಸನ (೧೩) ತೀರ ತ್ರುಟಿತವಾಗಿದೆ. ಮೂರನೆಯ ಶಾಸನ (೧೪) ಜೈನಧರ್ಮ ಮತ್ತು ಕನ್ನಡಸಾಹಿತ್ಯ ದೃಷ್ಟಿಯಿಂದ ತುಂಬ ಗಮನಾರ್ಹವಾದುದು. ಹುಬ್ಬಳ್ಳಿಯ ಸಿದ್ಧಣಾಂಕನ ಮಗ ಚಿಕ್ಕಮಲ್ಲಿಸೆಟ್ಟಿ ೨೧ ದಿನ ಸಲ್ಲೇಖನವ್ರತವಿಡಿದು ತೀರಿಕೊಂಡುದು ಇದರ ವಸ್ತು. ಮಲ್ಲಣನ ವರ್ಣನೆಗೆ ಬಳಸಿದ ರಗಳೆ, ಶಾಸನೋಕ್ತ ಅಪರೂಪ ಛಂದಸ್ಸು. ಕವಿಯಾಗಿದ್ದ ಈತನು ೨೪ ಸಂಧಿ ೨೨೧೫ ಸಾಂಗತ್ಯಪದ್ಯಗಳ 'ಸಮ್ಯಕ್ತ್ವಕೌಮುದಿ' ಹೆಸರಿನ ಕೃತಿಯನ್ನು ಬರೆದಿರುವನೆಂದು ಬೇರೆ ಆಧಾರಗಳಿಂದ ತಿಳಿದು ಬರುತ್ತದೆ.

ಇಂದಿಗೂ ಜೈನಸಮಾಜದ ನೆಲೆಯೆನಿಸಿದ ಗರಗದಲ್ಲಿ ಜೈನಪರ ೨ ಶಾಸನಗಳಿವೆ. ಒಂದು : ಯಾಪನೀಯ ಸಂಘ, ಕುಂಮಡಿಗಣದ ಶಾಂತಿವೀರದೇವರ ಸಮಾಧಿಮರಣವನ್ನು ಹೇಳಿದರೆ, ಇನ್ನೊಂದು ಇದೇ ಗಣ-ಗಚ್ಛಗಳಿಗೆ ಸೇರಿದ ಬಸದಿಯ ಹೊಲದ ಒಡೆತನವನ್ನು ಸೂಚಿಸುತ್ತಿರಬಹುದು.

ತಡಕೋಡದ ಎರಡೂ ಶಾಸನಗಳು ಜೈನಪರವಾಗಿವೆ. ಮೊದಲನೆಯದು ಯಾಪನೀಯ ಸಂಘ ಸ್ವರ್ಣ ಪಾಷಾಣಗಚ್ಛ, ವೃಕ್ಷಮೂಲದ ವಾಸುಪೂಜ್ಯಮುನಿಯನ್ನು ಶ್ರೀಚಂದ್ರಪ್ರಭತೀರ್ಥಂಕರನು ಕಾಪಾಡಲಿಯೆಂದು ಹಾರೈಸಿದರೆ, ಇನ್ನೊಂದು ಬಸದಿಯೊಂದಕ್ಕೆ ದಾನನೀಡಿದುದನ್ನು ತಿಳಿಸುತ್ತದೆ.

ನರೇಂದ್ರದ ೫ ಶಾಸನಗಳಲ್ಲಿ ಜೈನಕ್ಕೆ ಸಂಬಂಧಪಟ್ಟುದು (೪೨), ನಾಗಚಂದ್ರಮುನಿಯ ಶಿಷ್ಯ (?) ನಾದ ಕಾರೆಯಗಣದ ಕನಕಶಾಂತಿಮುನಿಯ ಸಮಾಧಿಮರಣವನ್ನು ಉಲ್ಲೇಖಿಸುತ್ತ "ನಿಶಿಧಿಕಾಶಿಳಾಸ್ತಂಭ"ವನ್ನು ಶಿಷ್ಯ ಬಾಹುಬಲಿಮುನಿನಾಥನು ನಿಲ್ಲಿಸಿದನೆಂದು ಸಾರುತ್ತದೆ.

ಬ್ರಾಹ್ಮಣರ ಅಗ್ರಹಾರ. ಶೈವರ ಕೇಂದ್ರವೆನಿಸಿದ ಮನಗುಂಡಿ ಜೈನರ ನೆಲೆವೀಡೂ ಎನಿಸಿದ್ದಿತು. ಇಲ್ಲಿಯ ಒಂದು ಶಾಸನ (೫೩) ದಲ್ಲಿ ಬರುವ ಯಾಪನೀಯ ಸಂಘ, ಮೈಳಾಪತೀರ್ಥಾನ್ವಯ, ಕಾರೆಯಗಣದ ನಗರ ಜಿನಾಲಯಕ್ಕೆ ಸಂಬಂಧಪಟ್ಟ ಆಚಾರ್ಯವಂಶಾವಳಿ ಹೀಗಿವೆ:

ಏಕವೀರ್ಯಾಚಾರ್ಯ
|
ರಾಮಚಂದ್ರ
|
ಬಾಹುಬಲಿ

ಈ ತಾಲೂಕಿನ ಸುಪ್ರಸಿದ್ಧ ಶಾಸನಗಳ ನೆಲೆಯೆನಿಸಿದ ಮುಗದದಲ್ಲಿ ಜೈನಶಾಸನಗಳದೇ ಸಿಂಹಪಾಲು. ಇಲ್ಲಿಯ ಪ್ರಭುವಂಶ ಜೈನಮತೀಯವಾದುದೇ ಇದಕ್ಕೆ ಕಾರಣ. ಇದಕ್ಕೆ ಹೊಂದಿ ಮುನಿವಂಶವೂ ಬೆಳೆದಿದೆ. ಇಲ್ಲಿಯ ಪ್ರಭುವಂಶದಲ್ಲಿ ಚಾವುಂಡ, ನಾಗದೇವ, ಮಾರ್ತಂಡ, ಚಾಮುಂಡರಾಯ, ಬಮ್ಮರಸ, ನಾಕರಸ ಹೆಸರುಗಳು ಗಮನಾರ್ಹವೆನಿಸಿವೆ. ಮುನಿವಂಶದಲ್ಲಿ ಕೀರ್ತಿಗೊರವಡಿ, ನರೇಂದ್ರಕೀರ್ತಿ, ನಾಗಬಿಕ್ಕಿ ಬ್ರತೀಂದ್ರ, ಬಾಳಚಂದ್ರ, ರಾಮಚಂದ್ರ, ಮುನಿಚಂದ್ರ, ಕುಮಾರಕೀರ್ತಿ, ದಾಮನಂದಿ ಮೊದಲಾದ ಹೆಸರುಗಳು ಎಡೆಪಡೆದಿವೆ.

ಇಲ್ಲಿಯ ಒಂದು ಶಾಸನ (೫೬) ಚಾವುಂಡಗಾವುಂಡನು ತಾನು ಮಾಡಿಸಿದ "ಸಮ್ಯಕ್ತ್ವರತ್ನಾಕರ" ಬಸದಿಗೆ ದಾನ ನೀಡಿದುದನ್ನೂ, ಮೊಮ್ಮಗ ಮಾರ್ತಂಡಯ್ಯನು ಈ ಬಸದಿಯನ್ನು ಜೀರ್ಣೋದ್ಧಾರಮಾಡಿ ನಾಟಕಶಾಲೆ ಕಟ್ಟಿಸಿದುದನ್ನೂ ಹೇಳುತ್ತದೆ. ತನ್ನ ದೊಡ್ಡಪ್ಪ ಮಾರ್ತಂಡಯ್ಯನು ಜಿನಾಲಯಕ್ಕೆ ಬಿಟ್ಟ ಭೂದಾನವನ್ನು ಪುನರ್ದತ್ತಿಮಾಡಿ ಬಮ್ಮರಸನು ಇನ್ನೊಂದು ಶಾಸನ (೫೭) ಬರೆಸಿರುವನು. ೫೮ನೆಯ ಶಾಸನ ಜೈನಪ್ರಭುವಂಶವನ್ನು ಹೇಳಿದರೆ ೬೧ ನೆಯದು ಕುಮುದಿಗಣದ ಗುಡ್ಡಿಯೊಬ್ಬಳು ಪಾರ್ಶ್ವನಾಥ ವಿಗ್ರಹ ಮಾಡಿಸಿದುದನ್ನು ಹೇಳುತ್ತದೆ. ಹೆಬ್ಬಳ್ಳಿ ಶಾಸನ (೭೩), ಯಾಪನೀಯ ಸಂಘ ಪುನ್ನಾಗವೃಕ್ಷ ಮೂಲಗಣದ ಉಲ್ಲೇಖ ಮಾಡುತ್ತದೆ. ಒಟ್ಟಿನಲ್ಲಿ ಈ ತಾಲೂಕಿನ ಜೈನ ಇತಿಹಾಸ ಗಮನಾರ್ಹವಾಗಿದ್ದು, ಯಾಪನೀಯ ಸಂಘದ ಕೇಂದ್ರವಾಗಿದ್ದಿತೆನ್ನಬಹುದು.

ಬ್ರಾಹ್ಮಣ: ಬ್ರಾಹ್ಮಣರ ಸುಖದ ನೆಲೆಗಳೆಂದರೆ ಅಗ್ರಹಾರಗಳು. ಅವರ ಉಪಜೀವಸಕ್ಕೋಸುಗ ನೀಡಿದ ಗ್ರಾಮಗಳಿವು. ಈ ಗ್ರಾಮವನ್ನು ಭೋಗಿಸುವ ಕುಟುಂಬಗಳ ಮುಖ್ಯಸ್ಥರು ಮಹಾಜನರು ಅಥವಾ ಊರೊಡೆಯರು. ಈ ತಾಲೂಕಿನಲ್ಲಿಯ ಇಂಥ ಅಗ್ರಹಾರಗಳೆಂದರೆ ಅಮ್ಮಿನಭಾವಿ, ಕನಕೂರ, ದೇವರ ಹುಬ್ಬಳ್ಳಿ, ಬಾಡ, ಮನಗುಂಡಿ ಮತ್ತು ನವಿಲೂರು. ಇವುಗಳ ಮಹಾಜನರ ವಿದ್ವತ್ತು, ಧರ್ಮಮನೋಭಾವ ಉಜ್ವಲವಾಗಿರುತ್ತಿದ್ದವು. ಅಮ್ಮಿನಭಾವಿ ಅಗ್ರಹಾರದ ೪೦೦ ಮಹಾಜನರನ್ನು ಕುರಿತ "ಸ್ವಸ್ತಿಯ [ಮನಿಯಮಸ್ವಾಧ್ಯಾ]ಯಧ್ಯಾನಧಾರಣಮೌನಾನುಷ್ಠಾನ ಪಾರಾಯಣ ಜಪಸಮಾಧಿಶೀಳಸಂಪನ್ನರುಂ ವಿ(ಸುದ್ಧಾ)ತ್ಮರುಂ ಜ್ಞಾನಾತ್ಮತತ್ವಾರ್ಣ್ನವಸಮೇತರುಂ ಲೋಕವಿಖ್ಯಾತರುಂ ಯಜನಯಾಜನಾಧ್ಯಾಯ[ನಾಧ್ಯಾ] ಪನದಾನಪ್ರತಿಗ್ರಹ ಷಟ್ಕರ್ಮ್ಮನಿಯತರುಂ ಕ್ಷೀರಸಾಗರಸಶ್ಯಾಶಯನೋರಸ್ಥಳಸ್ಥಿತಲಕ್ಷ್ಮೀಸಮಕ್ಷ ಸ್ಥಳರುಮ ಚತುಶ್ಯತಪರಿಸಂಖ್ಯಾಪ್ರಸಿದ್ಧ ರಾಜಪೂಜಿತರುಂ ಸಮಸ್ತಲೋಕಜನಭಾಜಿತರುಂ ವಂಶಾಗ್ರಗಣ್ಯರುಂ ವನ್ದಿಬ್ರಿನ್ದಚಿನ್ತಾಮಣಿಗಳುಂ ಸರಣಾಗತವಜ್ರಪಂಜರರುಮೆನಿಸಿ ನೆಗಳ್ದ ಶ್ರೀ [ಮ] ದಗ್ರಹಾರಮಮ್ಮಯನಬಾವಿಯೂರೊಡೆಯ ಪ್ರಮುಖ ನಾಲ್ನೂರ್ವ್ವರ್ಮಹಾಜನಂಗಳು" ಎಂಬ ವರ್ಣನೆ ಯಾವುದೇ ಗ್ರಾಮದ ಮಹಾಜನರ ಮಹಿಮೆಗೆ ಹಿಡಿದ ಕನ್ನಡಿಯಾಗಿದೆ. 'ಮಹಾಸಭೆ'ಯಾಗಿ ನೆರೆದು ಇವರು ದಾನ-ಪ್ರತಿಗ್ರಹ ಪ್ರಸಂಗಗಳನ್ನು ಪೂರೈಸಿದುದಕ್ಕೆ ಇಲ್ಲಿ ಉದಾಹರಣೆಗಳಿವೆ. ಯಾವುದೇ ಮತದ ಇಂಥ ಪ್ರಸಂಗಗಳಿಗೆ ಇವರ ಸನ್ನಿಧಿ ಅವಶ್ಯವಾಗಿದ್ದಿತು. ಅಮ್ಮಿನಭಾವಿ ಶಾಸನ (೩) ದಲ್ಲಿ ಶೈವಮಹಿಳೆ ಚಂದಿಕಬ್ಬೆ ದೇವರ ಸತ್ರಕ್ಕೆ ಭೂದಾನ ನೀಡಿದ ಪ್ರಸಂಗದಲ್ಲಿ ಆ ಊರಿನ ಮಹಾಜನರು ಉಪಸ್ಥಿತರಿದ್ದರು. ಮನಗುಂಡಿ (೫೩೦ ಶಾಸನದಲ್ಲಿ ಜೈನಬಸದಿಗೆ ಈ ಮಹಾಜನರು ದಾನ ನೀಡಿದುದು ಗಮನಿಸತಕ್ಕ ವಿಷಯವಾಗಿದೆ. ಅಗ್ರಹಾರವಾಗಿದ್ದ ಇಲ್ಲವೆ ಆಗಿರದ ಊರಿನಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದ ಓಣಿ ಬ್ರಹ್ಮಪುರಿ. ಹೆಬ್ಬಳ್ಳಿ ಗ್ರಾಮವೊಂದು ಇಂಥ ಬ್ರಹ್ಮಪುರಿಯನ್ನು ಉಲ್ಲೇಖಿಸುತ್ತವೆ.

ಶೈವ: ಒಂದು ಕಾಲಕ್ಕೆ ಕರ್ನಾಟಕದ ಬಹುದೊಡ್ಡ ಧಾರ್ಮಿಕ ಶಕ್ತಿಯಾಗಿದ್ದ ವಿವಿಧ ಶೈವಗಳಲ್ಲಿ ನಕುಲೀಶಪಾಶುಪತ ಪ್ರಮುಖವಾದುದು. ಪ್ರಸಿದ್ಧ ಮಠ-ದೇಗುಲಗಳನ್ನು ನಿರ್ಮಿಸಿ ಸುಪ್ರಸಿದ್ಧ ಗುರು ಪರಂಪರೆಯನ್ನು ಬೆಳೆಸಿದ ಈ ವಂಶದ ಅನೇಕ ಶಾಸನಗಳು ಧಾರವಾಡ ತಾಲೂಕಿನಲ್ಲಿವೆ.

ಅಗ್ರಹಾರ ಅಮ್ಮಿನಭಾವಿ, ಜೈನ ಮತ್ತು ನಕುಲೀಶರ ಆಶ್ರಯವಾಗಿದ್ದಿತು. ಇಲ್ಲಿಯ ಒಂದು ಶಾಸನ (೩) ಲಾಕುಳಾಗಮಸಿದ್ಧಾಂತ ಪ್ರಸಿದ್ಧರಾದ ಉತ್ತವರಾಸಿಪಂಡಿತರ ಸತಿ, ಇಂದ್ರಶಿವಜೀಯರ ಮಗಳು ಚಂದಿಕಬ್ಬೆಯು ಅದಿತ್ಯ ದೇವರ ಸತ್ರಕ್ಕೆ ದಾನ ನೀಡಿದುದನ್ನು ಹೇಳುತ್ತದೆ. ಇದಲ್ಲದೆ ಈ ಗ್ರಾಮದ ಮಲ್ಲಿಕಾರ್ಜುನದೇವರಿಗೆ ಬಿಟ್ಟ ಬೇರೆ ದತ್ತಿಗಳ ಉಲ್ಲೇಖವೂ ಇಲ್ಲಿದೆ. ಕಲಿದೇವಸ್ವಾಮಿ ದೇವಾಲಯಕ್ಕೆ ಜಯದೇವಗಾವುಂಡ ನೀಡಿದ ದತ್ತಿಯನ್ನು ಹೇಳುವ ತೇಗೂರ ಶಾಸನ (೨೬), ಚಂದೇಶ್ವರದಾಚಾರ್ಯರನ್ನು, ದೇವರಾಸಿಪಂಡಿತ, ಶಿವರಾಸಿಪಂಡಿತರನ್ನು ಉಲ್ಲೇಖಿಸುವ ಧಾರವಾಡದ ಎರಡು ಶಾಸನ (೩೧, ೩೨) ಗಳು ನಕುಲೀಶಪಾಶುಪತವನ್ನು ಸೂಚಿಸುತ್ತವೆ. ಅಧಿಕಾರಿಗಳಾದ ಭಾನುದೇವ ಮತ್ತು ಭಾಸ್ಕರರು ಸೋಮೇಶ್ವರ ಪಂಡಿತರ ಕಾಲನ್ನು ತೊಳೆದು ಧರ್ಮೇಶ್ವರ ದೇವರಿಗೆ ದಾನ ನೀಡಿದ ವಿಷಯವನ್ನು ಧಾರವಾಡದ ಇನ್ನೊಂದು ಶಾಸನ (೩೩) ಹೇಳುತ್ತದೆ.

ಶಂಕರದೇವ ಮತ್ತು ಲಕ್ಷಣೇಶ್ವರದೇವರನ್ನು ಉಲ್ಲೇಖಿಸುವ ನರೇಂದ್ರದ ಎರಡು ಶಾಸನ (೩೮, ೩೯) ಗಳು ನಕುಲೀಶಪಾಶುಪತಕ್ಕೆ ಸಂಬಂಧಪಟ್ಟಿರಬಹುದು. ನಿಗದಿ ಶಾಸನ (೪೪) ದಲ್ಲಿ ಕ್ರಿಯಾಶಕ್ತಿ ಪಂಡಿತರ ಶಿಷ್ಯ ತೇಜೋರಾಶಿಪಂಡಿತರಿಗೆ ನೀಡಿದ ದಾನೋಲ್ಲೇಖವಿದೆ.

ಬೋಕ್ಯಾಪುರ ಶಾಸನ(೪೮) ಸ್ವರಂಭೂದೇವರಿಗಾಗಿ ಕೇಂದಾರಶಕ್ತಿಪಂಡಿತರ ಪುತ್ರ ಶಿವಶಕ್ತಿ ಪಂಡಿತರಿಗೆ ದಾನ ನಿಡಿದುದನ್ನು ತಿಳಿಸುತ್ತದೆ. ಮಲ್ಲಿಕಾರ್ಜುನದೇವರ ದತ್ತಿಯನ್ನು ಉಲ್ಲೇಖಿಸುವ ಭಾವಿಹಾಳ ಶಾಸನ (೪೯), ಸ್ವಯಂಭೂದೇವರ ದತ್ತಿಯನ್ನು ಹೇಳುವ ಮದಭಾವಿ ಶಾಸನ (೫೦) ಗಳು ನಕುಲೀಶ ಪಾಶುಪತವರ ಆಗಿರಬೇಕು.

ಶೈವಪರವಾದ ಶಾಸನಗಳಲ್ಲಿ ಪ್ರಸಿದ್ಧವಾದುವು ಮನಗುಂಡಿ ಶಾಸನಗಳು. ಶಿವಶಕ್ತಿದೇವ ಮುನಿಪ, ಈಶಾನಾಖ್ಯ, ಚಂದ್ರಭೂಷಣಮುನಿಪರನ್ನು ಉಲ್ಲೇಖಿಸುವ ಶಾಸನ (೫೧) ದಲ್ಲಿ ಆ ಊರಿನ ಬಣಂಜುಗಳು, ಉಗುರು ಮುನ್ನೂರ್ವರು, ಮಹಾಜನರು, ಗೌಡರು ಸೇರಿ ತ್ರಿಭುವನವೀರಜಯಕೇಶಿದೇವರ ದೇವಾಲಯವನ್ನು ನಿರ್ಮಿಸಿದ ವಿಷಯವೂ ಮಣಿಗುಂದಗೆಯ ಚೌಡಗಾವುಂಡ, ಮಣಿಗುಂದಗೆಯ ಮುನ್ನೂರ್ವರು, ಮಣಿಗುಂದಗೆಯ ಐನೂರ ನಾಲ್ವರು, ಮುಗದದ ಮುನ್ನೂರ್ವರು, ಹುಪ್ಪವಳ್ಳಿಯ ಉಗುರ ಮುನ್ನೂರ್ವರು, ನುಗ್ಗಿಹಳ್ಳಿಯ ಉಗುರಮುನ್ನೂರ್ವರು, ಸತ್ತಿವೂರ ಉಗುರಮುನ್ನೂರ್ವರು, ನೀರುಸಾಗರದ ಉಗುರ ಮುನ್ನೂರ್ವರು ಹೀಗೆ "ಐದು ಸ್ಥಳದವರು ಪವಿತ್ರಪರ್ವ ನೋಡಲು ಬಂದು" ನೀಡಿದ ವೈಭವಪೂರ್ಣ ದತ್ತಿಗಳ ವಿಷಯವೂ ಇದಲ್ಲದೆ "ಕೋಲಿಕು......., ಕಂದಗಲ್ಲು, ನನ್ದಿಗಾವೆ, ಸೊನ್ನಲಿಗೆಯಪುರ, ವಿಜಯಾಪುರ, ಐಯ್ಯಾವಳೆ, ಖೇಡವಿನ್ತೀ ಸ್ಥಳದವರು ಮುಖ್ಯವಾಗಿ ಸಾಸಿರ್ವರುಂ ಪವಿತ್ರದ ಪರ್ವವಂ ನೋಡಲುಂ ಬಂದು" ನೀಡಿದ ದತ್ತಿಗಳ ವಿವರವೂ ಇಲ್ಲಿದೆ. ಸಿದ್ಧೇಶ್ವರ, ಗ್ರಾಮೇಶ್ವರ ದೇವಾಲಯಗಳಿಗೆ ಸಂಬಂಧಿಸಿದ ದಾನಗಳು ಕೊನೆಗೆ ಬರುತ್ತವೆ. ಚಂದ್ರಭೂಷಣದೇವ ಈ ಮೂರು ದೇವಾಲಯುಗಳ ಆಚಾರ್ಯನಾಗಿದ್ದನು. ಮನಗುಂಡಿಯು ಇನ್ನೊಂದು ಶಾಸನ(೫೨ಸಕಳೇಶ್ವರಪಂಡಿತರಿಗೆ ನೀಡಿದ ದಾನವನ್ನು ಹೇಳುತ್ತದೆ.

ಮುಮ್ಮಿಗಟ್ಟಿ ಶಾಸನ(೬೨)ದಲ್ಲಿ ಉದಯಮಗೌಡನು ಕಲಿದೇವಸ್ವಾಮಿಯ ಸ್ಥಾನಾಚಾರ್ಯ ವಾಮಶಕ್ತಿಪಂಡಿತರಿಗೆ ದಾನ ನೀಡಿದ ವಿಷಯ ಬರುತ್ತದೆ.

ಪಸಿದಾರ್ಬ್ಬನ್ನುಣಬೇಡಿದೋ
ಡೊಸೆದಾರ್ತ್ತಿಲ್ಲೆನ್ನದಿಕ್ಕುತಿರ್ಪ್ಪರ್ ಕೂಳಂ
ವಸುಧಾತಳಮೆಲ್ಲಂ ಬಂ
ಣ್ಣಿಸುವಿನೆಗಂ ವಾಮಶಕ್ತಿಪಂಡಿತದೇವರ್ ॥

ಎಂದು ವಾಮಶಕ್ತಿಯನ್ನು ಸ್ತುತಿಸುತ್ತದೆ, ಈ ಶಾಸನ. ಇದೇ ರೀತಿ ವೆಂಕಟಾಪುರ (೬೪), ಸಿಂಗನಹಳ್ಳಿ (೬೫) ಮೂಲಸ್ಥಾನದೇವತೆ, ನಾಗರಾಸಿಪಂಡಿತ ಮೊದಲಾದವರನ್ನು ಸೂಚಿಸುತ್ತವೆ. ಹೆಬ್ಬಳ್ಳಿಯ ಶಾಸನಗಳು ಪಾಶುಪತಮತದ ಸೂಚನೆಯನ್ನೊಳಗೊಂಡಿವೆ. ಹೀಗೆ ಈ ತಾಲೂಕಿನಲ್ಲಿ ಶೈವವು ಸ್ವಲ್ಪ ಹೆಚ್ಚು-ಕಡಿಮೆ ಸರ್ವತ್ರ ವ್ಯಾಪಿಸಿದ್ದ ಮತವೆನಿಸುತ್ತದೆ.

ವೀರಶೈವ: ವೀರಶೈವವನ್ನು ಸೂಚಿಸುವ ಶಾಸನಗಳ ಸಂಖ್ಯೆ ಮಿಕ್ಕವುಗಳೊಂದಿಗೆ ಹೋಲಿಸಿದಾಗ ಕರ್ನಾಟಕದಲ್ಲಿ ಕಡಿಮೆಯೆಂದೇ ಹೇಳಬೇಕು. ಆದರೆ ಧಾರವಾಡ ತಾಲೂಕಿನ ಮೂರು ಶಾಸನಗಳು ಬಹಳ ಮುಖ್ಯವಾದವು.

ಸೊನ್ನಲಾಪುರದ ಸಿದ್ಧರಾಮನಿಗೆ ಬಿಟ್ಟ ಹಲವು ದತ್ತಿಶಾಸನಗಳಲ್ಲಿ ಒಂದು ಕೊಟಬಾಗಿಯದ್ದು (೧೭* ಕ್ರಿ.ಶ. ಸು. ೧೨೬೪). ಸಿದ್ಧರಾಮನನ್ನು ಕುರಿತ ಇತರ ಶಾಸನಗಳಂತೆ ಇದೂ ನಂದಿಕಂಬದ ಮೇಲೆ ಕೆತ್ತಲ್ಪಟ್ಟಿದೆ. ಯಾದವ ಮಹಾದೇವ ಹಾಗೂ ಗೋವೆಯ ಕದಂಬ ಮೂರನೆಯ ಚಟ್ಟಯದೇವರ ಕಾಲದಲ್ಲಿ ಹುಟ್ಟಿದ ಶಾಸನವಿದು. ಕೊಟಬಾಗಿಯ ಇನ್ನೊಂದು ಶಾಸನ (೧೮* ಸು.ಶ. ೧೩) ಬನವಿಸೆಟ್ಟಿಯನ್ನು ಉಲ್ಲೇಖಿಸುತ್ತ "ಗುರುಲಿಂಗಜಂಗಮದ ಪದತೀರ್ಥ" ಎಂಬ ಪದವನ್ನು ಬಳಸಿದುದು ಶಾಸನೋಕ್ತ ವೀರಶೈವ ಪರಿಭಾಷೆಯ ದೃಷ್ಟಿಯಿಂದ ತುಂಬ ಗಮನಾರ್ಹವಾಗಿದೆ.

ಶಿವಶರಣರ ವಿಗ್ರಹ ಮತ್ತು ಶಾಸನ ದೃಷ್ಟಿಯಿಂದ ತೀರ ಮುಖ್ಯವಾದುದು, ಅಮ್ಮಿನಭಾವಿಯ ವಿಗ್ರಹ ಶಾಸನ (೮* ಕ್ರಿ. ಶ . ೧೨೮೪). ಬಿಜ್ಜಳನ ಆನೆಯನ್ನು ತುಳಿವ ಮಡಿವಳ ಮಾಚಿದೇವನ ವಿಗ್ರಹದ ಕೆಳಗೆ "ತಾರಣ ಸಂವತ್ಸರದ ವೈಶಾಖ ಸುದ್ಧ ೧೫ ರಲು ಅಂಮಯನಭಾವಿಯಲ್ಲಿ ಮಡಿವಾಳರು ವೀರ ಮಡಿವಳ ಮಾಚಿ[ದೇ] . . . . .ಯುಗ(?)[ಪ್ರ]ತಿಷ್ಠೆಯಂ [ಮಾಡಿ]ದರು ಮಂಗ[ಳ] . . . ." ಎಂದು ಬರೆಯಲಾಗಿದ್ದು, ಆ ಕಾಲಕ್ಕಾಗಲೇ ಮಾಚಿದೇವ ದೇವತೆಯಾಗಿ ಪೂಜಿಸಲ್ಪಡುತ್ತಿದ್ದನೆಂದು ತಿಳಿದು ಬರುತ್ತದೆ.

* * * *

ದೇವತಾ ಕಾರ್ಯಗಳಿಗೆ ಸಂಬಂಧಿಸಿದಂತೆ ಈ ತಾಲೂಕಿನಲ್ಲಿಯ ದೇವಾಲಯ ಮತ್ತು ಮೂರ್ತಿ ಸ್ಥಾಪನೆಯ ಚಿತ್ರ ಹೀಗಿದೆ: ದೇಹಾರದ ನಾಗಣ್ಣ, ಆತನ ಮಗ ಆಯ್ತವರ್ಮ, ಬಿಬ್ಬಣ್ಣ, ಆತನ ಮಗ(?), ಕಾಳಿಮಯ್ಯ, ಬೀರಣ್ಣ, ಮಾಚಿಯಣ್ಣ–ಈ ಏಳು ಜನರು ಅಮ್ಮಿನಭಾವಿಯಲ್ಲಿ ಕುಂಭೇಶ್ವರ ದೇವಾಲಯವನ್ನು (ಅಮ್ಮಿನಭಾವಿ ೨* ೧೦೭೧–೭೨), ಮಹಾಪ್ರಧಾನ ಮಾಚಣ್ಣನು ಅಣಿಲಾಪುರದಲ್ಲಿ ಜೈನಬಸದಿಯನ್ನು (ಅಳ್ನಾವರ ೧೧* ೧೦೮೧), ಮೂಕಗಾವುಂಡನು ತೇಗೂರಿನಲ್ಲಿ ಕಲಿದೇವಸ್ವಾಮಿ ದೇವಾಲಯವನ್ನು (ತೇಗೂರ ೨೬* ೧೦೮೨), ಅಮ್ಮಿನಭಾವಿಯ ಅಗಸರು ಮಡಿವಳ ಮಾಚಿದೇವನ ಮೂರ್ತಿಯನ್ನು (ಅಮ್ಮಿನಭಾವಿ ೮* ೧೨೮೪), ಮೈಳಲದೇವಿ ಗೂಗಿಕಟ್ಟಿಯಲ್ಲಿ ಕೇಶವದೇವರ ಮೂರ್ತಿಯನ್ನು (ಗೂಗಿಕಟ್ಟಿ ೨೩* ೧೧೨೪), ಐದು ವೀಸಕದ ಪ್ರಮುಖ ಮಹಾಜನಂಗಳು ದೇವರಹುಬ್ಬಳ್ಳಿಯಲ್ಲಿ ಮಹಾಲಕ್ಷ್ಮೀದೇವಿ ಮೂರ್ತಿಯನ್ನು (ದೇವರಹುಬ್ಬಳ್ಳಿ ೨೬* ೧೨೦೬), ಸಿಂಗರಸನು ನರೇಂದ್ರದಲ್ಲಿ ಲಕ್ಷ್ಮಣೇಶ್ವರ ದೇವಾಲಯವನ್ನು (ನರೇಂದ್ರ ೩೯ * ೧೧೨೫) ನಿರ್ಮಿಸಿದ ವಿಷಯಗಳು ಈ ಶಾನಗಳಲ್ಲಿವೆ. ಜೊತೆಗೆ ಚಂದ್ರನಾಥ ತೀರ್ಥಂಕರ ಬಸದಿಯ ಜೀರ್ಣೋದ್ಧಾರಕಾರ್ಯ ಕೈಕೊಂಡ ಕೇಮಣ–ರೇಚಣ (ನುಗ್ಗಿಕೇರಿ ೪೫* ಸು.ಶ ೧೨), ತ್ರಿಭುವನವೀರಜಯಕೇಶಿದೇವಾಲಯುವನ್ನು ಕಟ್ಟಿಸಿದ ಮಣಿಗುಂದಗೆಯ ತೋಂಟಿಗರು (ಮನಗುಂಡಿ ೫೧* ೧೨೦೩), ಭೈರವದೇವರನ್ನು ಪ್ರತಿಷ್ಠಾಪಿಸಿದ ಹುಲಿಯಮಸೆಟ್ಟಿ (ಮನಗುಂಡಿ ೫೧* ೧೨೧೬) ಚಂದ್ರನಾಥತೀರ್ಥಂಕರ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ ಬಮ್ಮಿಸೆಟ್ಟಿ

(ಅಮ್ಮಿನಭಾವಿ ೬* ಸು.ಶ. ೧೨), ನೇಮಿತೀರ್ಥಂಕರರ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ ಬಳ್ಳಾಳರಾವ ವಡೇರು ದೇಸಾಯಿ (ಅಮ್ಮಿನಭಾವಿ ೧೦* ೧೮೯೨), ಸಮ್ಯಕ್ತ್ವರತ್ನಾಕರ ಬಸದಿಯನ್ನು ನಿರ್ಮಿಸಿದ ಚಾವುಂಡಗಾವುಂಡ (ಮುಗದ ೫೬* ೧೦೪೫), ಚೆನ್ನಪಾರಿಶ್ವಜಿನ ವಿಗ್ರಹವನ್ನು ಪ್ರತಿಷ್ಠಾಪಿಸಿದ ಒಬ್ಬ ಮಹಿಳೆ (?) (ಸಿದ್ಧಾಪುರ ೬೭* ೧೧೩೫), ಗಣೇಶ ವಿಗ್ರಹವನ್ನು ಸ್ಥಾಪಿಸಿದ ಒಬ್ಬ ವ್ಯಕ್ತಿ (ಸಿದ್ಧಾಪುರ ೭೦* ಸು.ಶ. ೧೨), ಭಗವತಿ ವಿಗ್ರಹವನ್ನು ಸ್ಥಾಪಿಸಿದ ಸಾಲಗರ ಕಮ್ಮರಸೆಟ್ಟಿ (ಸಿದ್ಧಾಪುರ ೬೯* ಸು.ಶ. ೧೨)–ಇವರನ್ನು ಈ ಶಾಸನಗಳು ಉಲ್ಲೇಖಿಸುತ್ತವೆ.

ಹೀಗೆ ಅಂಗೈ ಅಗಲದ ತಾಲೂಕು ವ್ಯಾಪ್ತಿಯಲ್ಲಿ ನಡೆದ ದೇವಾಲಯ ನಿರ್ಮಾಣ, ಮೂರ್ತಿ ಪ್ರತಿಷ್ಠಾಪನ ಕಾರ್ಯಗಳು ಬೆರಗುಗೊಳಿಸುತ್ತವೆ.

ಸಾಮಾಜಿಕ

ಒಂದು ಸಮಾಜದ ಪ್ರಾಚೀನ ಬದುಕನ್ನು ಚಿತ್ರಿಸಲು ನೆರವಾಗುವ ಅನೇಕ ಸಾಧನಗಳಲ್ಲಿ ಅಗ್ರಸ್ಥಾನ ಶಾಸನಗಳಿಗೆ ಸಲ್ಲುತ್ತದೆ. ಪ್ರಾಚೀನ ಬದುಕಿನ ಪ್ರಾಮಾಣಿಕ ದಾಖಲೆಗಳಾದ ಅವುಗಳ ಬಲದಿಂದ ಬರೆದ ಪತ್ರ, ಹೆಚ್ಚು ಪ್ರಾಮಾಣಿಕವಾಗುವುದು ತೀರ ಸಹಜ. ಧಾರವಾಡ ತಾಲೂಕಿನ ಶಾಸನಗಳಿಂದ ತಿಳಿದುಬರುವ ಸಾಮಾಜಿಕಕ್ಷೇತ್ರಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಇಲ್ಲಿ ಚರ್ಚಿಸಬಹುದು.

ಆತ್ಮಬಲಿದಾನ, ವೀರಮರಣಗಳು ಪ್ರಾಚೀನ ಭಾರತೀಯರು ನಂಬಿದ ಪರಮ ಮೌಲ್ಯಗಳು. ದೇವರ ಸಂಪ್ರೀತಿಗಾಗಿ ಪ್ರಾಣಾರ್ಪಣೆ ಮಾಡುವ 'ಧಾರ್ಮಿಕ ಆತ್ಮಬಲಿದಾನ' ದ ಜೊತೆ ಕಾಲಾಂತರದಲ್ಲಿ ಒಡೆಯನ ಸಂಪ್ರೀತಿಗಾಗಿ ವೇಳೆವಾಳಿಯಾಗುವ, ಪತಿಯ ಸಂಪ್ರೀತಿಗಾಗಿ ಮಹಾಸತಿಯಾಗುವ 'ಲೌಕಿಕ ಆತ್ಮಬಲಿದಾನ'ಗಳೂ ಬೆಳೆದುಬಂದವು, ತರುವಾಯ 'ವೀರಗುಣ'ದ ಅವಶ್ಯಕತೆ ಅಧಿಕವಾದಂತೆ ಯುದ್ಧದಲ್ಲಿ ಹೋರಾಡಿ ವೀರಮರಣವನ್ನು ಅಪ್ಪುವವನಿಗೂ ಸ್ವರ್ಗವಿದೆಯೆಂಬ ಮೌಲ್ಯ ಬೆಲೆಪಡೆಯಿತು.

ಧಾರವಾಡ ತಾಲೂಕಿನಲ್ಲಿ ಈ ಪ್ರಾಣಾರ್ಪಣೆಗಳನ್ನು ಪ್ರತಿನಿಧಿಸುವ ಜೈನಪರವಾದ ನಿಷಧಿಕಲ್ಲು, ಹಿಂದೂಪರವಾದ ಮಾಸ್ತಿ ಕಲ್ಲು ಮತ್ತು ವೀರಗಲ್ಲುಗಳು ಹೀಗೆ ದೊರೆಯುತ್ತವೆ:

ನಿಷಧಿಕಲ್ಲು: ಜೈನ ಶ್ರಾವಕರಾಗಲೀ, ಮುನಿಗಳಾಗಲೀ, ಅನಶನವ್ರತ ಸ್ವಿಕರಿಸಿ ಮಡಿದುದರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಶಿಲೆಗಳಿವು. ಈ ಸಂಪುಟದಲ್ಲಿ ಇಂಥ ೩ ನಿಷಧಿ ಶಾಸನಗಳಿವೆ. ನರೇಂದ್ರ ನಿಷಧಿಕಲ್ಲು (೪೨* ಸು. ಶ . ೧೨), ನಾಗಚಂದ್ರ ಸಿದ್ಧಾಂತದೇವರ ಶಿಷ್ಯನಾದ ಕನಕ ಶಾಂತಿದೇವನ ನಿಷಧಿಮರಣವನ್ನು ಉಲ್ಲೇಖಿಸುತ್ತದೆ. "ಗುರುಗಳ ಸುಕೀರ್ತಿಲತಿಕಾಪರಮೆನಿಸಿ ನಿಶಿಧಿಕಾಶಿಲಾಸ್ತಂಭಮನಾದರದಿಂ ನಿರಿಸಿದರುರ್ವ್ವರೆ ಪರಿಕೀರ್ತ್ತಿಸೆ ನೆಗಳ್ದ ಬಾಹುಬಲಿಮುನಿನಾಥಂ" ಎಂಬ ಪದ್ಯದೊಂದಿಗೆ ಇದು ಮುಗಿಯುತ್ತದೆ. ಗರಗ ನಿಷಧಿಕಲ್ಲು (೨೧* ೧೨೯೦) ಯಾಪನೀಯ ಸಂಘ, ಕುಂಮಡಿಗಣದ ಆಚಾರ್ಯ ಶಾಂತಿವೀರ ದೇವರ ಸಮಾಧಿಮರಣವನ್ನು ತಿಳಿಸುತ್ತದೆ.

ಇವುಗಳಿಗಿಂತ ಗಮನಾರ್ಹವಾದುದು ಅಳ್ನಾವರ (೧೪* ೧೫೦೫) ದ ನಿಷಧಿಶಾಸನ. ಸಲ್ಲೇಖನವ್ರತ ಸ್ವೀಕರಿಸಿ "ಯಿಪ್ಪತ್ತೊಂದು ದಿನ" ಉಪವಾಸವಿದ್ದು ಮಡಿದ ಹುಬ್ಬಳ್ಳಿಯ ಸಿದ್ಧಣಾಂಕನ ಮಗ ಚಿಕ್ಕ ಮಲ್ಲಿಸೆಟ್ಟಿಯನ್ನು ಹೊಳೆಯ ದಂಡೆಯಲ್ಲಿ ದಹನಮಾಡಿದುದನ್ನು ಇದು ತಿಳಿಸುತ್ತದೆ. ಮಧ್ಯದಲ್ಲಿ ರಗಳೆ ಛಂದಸ್ಸಿನ ಕೆಲವು ಸಾಲುಗಳಿವೆ.

ಮಾಸ್ತಿಕಲ್ಲು: ಪತಿಯ ಮರಣಾಂತರದಲ್ಲಿ ಅಗ್ನಿಪ್ರವೇಶಿಸಿದ ಮಹಿಳೆಯ ಸ್ಮಾರಕವಾದ ಮಾಸ್ತಿಕಲ್ಲು ಒಂದು ಮಾತ್ರ ಈ ಸಂಪುಟದಲ್ಲಿದೆ. ಮನಗುಂಡಿ (೫೫* ೧೩೮೪) ಯಲ್ಲಿಯ ಈ ಮಾಸ್ತಿಕಲ್ಲಿನಿಂದ "ನಾಡಪ್ರಭು ಹಳಿಗೆಜೆಯ ಮಲ್ಲಪ್ಪಗಳು ಸ್ವರ್ಗಸ್ತರಾದರು" ಎಂದು ಮಾತ್ರ ತಿಳಿದುಬರುತ್ತದೆ. ಮಧ್ಯದಲ್ಲಿ ಸ್ತ್ರೀವಿಗ್ರಹಗಳನ್ನು ಕೆತ್ತಲಾಗಿರುವುದರಿಂದ ಅವನ ಅನೇಕ ಪತ್ನಿಯರು ಏಕಕಾಲಕ್ಕೆ ಅಗ್ನಿಪ್ರವೇಶ ಮಾಡಿರಬಹುದು. ತ್ರುಟಿತವಾದ ಭಾಗದಲ್ಲಿ ಇವರ ಹೆಸರುಗಳಿರುವ ಸಂಭವವಿದೆ.

ವೀರಗಲ್ಲು: ವೈರಿಯೊಂದಿಗೆ ಕಾದಿ ಮಡಿದವ ವೀರಸ್ವರ್ಗವೇರುವನೆಂಬ ಮೌಲ್ಯವನ್ನು ನಂಬಿದ ಪ್ರಾಚೀನರು ತುಱುಗೋಳ್, ಪೆಣ್ಬುಯ್ಯಲ್, ಎಱೆವೆಸ, ನಂಟನೆಡಱು, ಊರಱಿವು ಪ್ರಸಂಗಗಳಲ್ಲಿ ಹೋರಾಡುತ್ತಿದ್ದರು. ಧಾರವಾಡ ತಾಲೂಕಿನಲ್ಲಿ ತುಱುಗೋಳ್, ಊರಟಿವು, ಎಱೆವೆಸಕ್ಕೆ ಸಂಬಂಧಿಸಿದಂತೆ ಒಟ್ಟು ೯ ವೀರಗಲ್ಲುಗಳು ಸಿಗುತ್ತವೆ.

ಪ್ರಾಚೀನ ಭಾರತೀಯರಿಗೆ ಆಕಳು ಪೂಜ್ಯವಾದುದು. ಅದನ್ನು ಸೆರೆಹಿಡಿಯುವುದು ದಾಳಿಯ ಸಂಕೇತ. ಗೂಗೆಯಹಳ್ಳಿ ಮಾದಯ್ಯ (ಅಂಬಳ್ಳಿ ೧* ಕ್ರಿ.ಶ. ಸು ೯೫೦) ಮತ್ತು ಯಾವನೋ ಇನ್ನೊಬ್ಬ ವೀರನು (ಮುಗದ ೫೯* ಸು. ಶ ೧೨) ತುರುಗೋಳ್ ಪ್ರಸಂಗದಲ್ಲಿ ಹೋರಾಡಿ ಮಡಿದುದು ತಿಳಿದುಬರುತ್ತದೆ.

ನೆರೆಯ ಗ್ರಾಮದವರಾಗಲೀ, ಅಧಿಕಾರಿಗಳಾಗಲೀ ತಮ್ಮ ಗ್ರಾಮದ ಮೇಲೆ ಏರಿಬಂದ ಪ್ರಸಂಗದಲ್ಲಿ ಹೋರಾಡುವುದು ಪುಣ್ಯ ಕಾರ್ಯವೆಂದು ಪ್ರಾಚೀನರ ಭಾವನೆ. ಬಯ್ಸರ ಸಬ್ಬಯ್ಯನು ದೊಡ್ಡವಾಡದ ಊರಳಿವಿನಲ್ಲಿ ತೀರಿಕೊಂಡನೆಂದು ಕಲ್ಲೆ ವೀರಗಲ್ಲು (೧೬* ಸು. ಶ ೮) ಹೇಳುತ್ತದೆ.

ಈ ತಾಲೂಕಿನ ಧಾರವಾಡ (೨೯* ಸು. ಶ ೯), ಅಳ್ನಾವರ (೧೨* ೧೧೦೦), ಮುಗದ (೬೦* ಸು. ಶ. ೧೨), ಗರಗ (೧೯* ೧೨೦೪-೫), ಅಮ್ಮಿನಭಾವಿ (೭* ೧೨೪೩), ಧಾರವಾಡ (೩೫* ಸು. ಶ. ೧೪) ಶಾಸನಗಳು 'ಎಱೆವೆಸ' ಅಂದರೆ ಒಡೆಯನಾದ ರಾಜನಿನಾಗಿ ಹೋರಾಡಿ ವೀರಸ್ವರ್ಗವೇರಿದುದನ್ನು ತಿಳಿಸುತ್ತವೆ. ಇವುಗಳಲ್ಲಿ ಅಮ್ಮಿನಭಾವಿಯ ವೀರಗಲ್ಲು ಸುಪ್ರಸಿದ್ಧವಾಗಿದ್ದು, ಮಾಗುಡ ಹಿಟ್ಟೆಯನಾಯಕನ ವೀರಮರಣವನ್ನು ಕಥಿಸುತ್ತದೆ.

ದಾನಗಳು: ಕರ್ನಾಟಕದ ಮಿಕ್ಕಭಾಗಗಳಂತೆ ಇಲ್ಲಿಯೂ ದಾನಶಾಸನಗಳೇ ಅಧಿಕ. ದೇವರಿಗೆ, ಕೆರೆಗೆ ನೀಡಿದ ಸಣ್ಣ-ದೊಡ್ಡ ನೂರಾರು ದಾನಗಳನ್ನು ಬಿಟ್ಟರೂ ಕೆಲವು ವಿಶೇಷದಾನಗಳು ಇಲ್ಲಿವೆ. ಅವು: ತುಳಾಪುರುಷ, ಗೋಸಹಸ್ರ, ಪೃಥ್ವೀ, ಸಪ್ತಸಾಗರ ಮತ್ತು ಪಾರಮೇಶ್ವರ. ಅಮ್ಮಿನಭಾವಿಯ ಶಾಸನ (೪* ೧೧೨೫) ಚಕ್ರವರ್ತಿ ಜಗದೇಕಮಲ್ಲನ, ನರೇಂದ್ರ ಶಾಸನ (೨೬* ೧೧೨೫) ಮಂಡಲೇಶ್ವರ ಚಟ್ಟಯದೇವನ ತುಳಾಪುರುಷ ದಾನಗಳನ್ನು ಸೂಚಿಸುತ್ತವೆ. ಗೋಸಹಸ್ರ, ಪೃಥ್ವಿ, ಸಪ್ತಸಾಗರ ದಾನನಗಳನ್ನು ನೆರವೇರಿಸಿದವನು ದಂಡನಾಯಕ ಬಮ್ಮಣ್ಣಯ್ಯ (ಅಮ್ಮಿನಭಾವಿ ೪*

೧೧೪೬). ರುದ್ರದೇವನೆಂಬವನು ಅಮ್ಮಿನಭಾವಿಯನ್ನು ಪಾರಮೇಶ್ವರದತ್ತಿಯಾಗಿ ನೀಡುತ್ತಾನೆ (ಅಮ್ಮಿನಭಾವಿ ೪* ೧೧೪೬).

ಪರ್ವ, ವ್ರತ ಮತ್ತು ಪೂಜೆ : ಚೈತ್ರಪರ್ವ, ಪವಿತ್ರಪರ್ವ, ಚೈತ್ರಪವಿತ್ರಪರ್ವ, ಕೀಳ್ಪೋಗುನೋಂಪಿ, ನಂದೀಶ್ವರ ಪರ್ವ, ಗಣಪೂಜೆ, ಪಂಚೋಪಚಾರಪೂಜೆ, ವಿಮಾನಪೂಜೆ- ಇವು ಈ ತಾಲೂಕಿನ ಶಾಸನಗಳಲ್ಲಿ ಕಾಣುತ್ತವೆ. ಇವುಗಳಲ್ಲಿ ಮೊದಲಿನ ಮೂರು ಪರ್ವಗಳ ಹೆಸರು ಶಾಸನಗಳಲ್ಲಿ ಸಾಮಾನ್ಯ. ಜೈನಪರವಾದ ನಂದೀಶ್ವರ ಪರ್ವವೆಂಬುದು ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳಲ್ಲಿ ಆಚರಿಸುವ ವ್ರತ. ಮಿಕ್ಕ ಕಿಳ್ಪೋಗುನೊಂಪಿ, ಗಣಪೂಜೆ, ಪಂಚೋಪಚಾರ ಪೂಜೆ, ವಿಮಾನ ಪೂಜೆಗಳು ವಿವರಗಳನ್ನು ಬಯಸುತ್ತವೆ.

ತೆರಿಗೆ, ನಾಣ್ಯ, ಅಳತೆ: ಶಾಸನಗಳ ತುದಿಗೆ ಬರುವ ದಾನಸಂದರ್ಭ ನಮ್ಮ ನಾಣ್ಯ, ತೂಕ, ಅಳತೆ, ತೆರಿಗೆ ಮೊದಲಾದ ಅಪೂರ್ವ ಸಂಗತಿಗಳನ್ನೊಳಗೊಂಡ ಭಾಗ. ಈ ಸಂಪುಟದ ಶಾಸನಗಳು ವೀಸ ಅರೆವೀಸ, ಪಣ, ಪಾಗ, ಗದ್ಯಾಣ, ಲೊಕ್ಕಿಯಗದ್ಯಾಣ, ಲೊಕ್ಕಿಪ್ರಿಯಶ್ರಾಹೆಯ ಗದ್ಯಾಣ, ದ್ರಮ್ಮ, ಬೇಳೆ ಎಂಬ ನಾಣ್ಯಗಳನ್ನು ಹೇಳುತ್ತವೆ.

ಮತ್ತರು, ಕೋಲು ಭೂಮಾಪನ ಸೂಚಿಯಾಗಿದ್ದು ಕುಂದೂರಕೋಲು <> ಕುಂದೂರಗಳೆ, ಹಿರಿಯಕೋಲು, ನರೇಂದ್ರಪುರದ ಹಿರಿಯಕೋಲು, ಪಾರ್ವಗೋಲುಗಳು ಉಲ್ಲಿಖಿತವಾಗಿವೆ. ಮಿಕ್ಕ ಕೊಳಗ, ಬಳ್ಳ, ಸೊಂಟಿಗೆ <> ಸೌಟಿಗೆ, ಸೌಟು, ಹೇರು ಎಣ್ಣೆ-ಧಾನ್ಯಗಳನ್ನು ಅಳೆಯುವ ಪ್ರಮಾಣಗಳು. ಅರುವಣ, ಕೊಂಡದೆಜ಼ಿ, ಪೆರ್ಜುಂಕ <> ಹೆರ್ಜುಂಕ, ಹಂದರ ಪಣಗಳು ಆ ಕಾಲದ ತೆರಿಗೆಗಳಾಗಿವೆ.

ವೃತ್ತಿಗಳು, ಸಂಘಗಳು : ಈ ತಾಲೂಕಿನ ಶಾಸನಗಳಲ್ಲಿ ಕರ್ಮಾರ, ಕೆಲಸಿಗ <> ನಾವಿಂದ, ತಳಾರ, ಮಡಿವಳ, ತೋಂಟಿಗ, ತೆಲ್ಲಿಗ ಅರುವತೊಕ್ಕಲು, ಉಗುರಮೂನೂರ್ವರು, ತೆಲ್ಲಗ ಐವತ್ತೊಕ್ಕಲು, ಬಣಂಜಿಗರು, ನಕರಂಗಳು ಮುಮ್ಮುರಿದಂಡ ಎಂಬ ವೃತ್ತಿಕಾರರು ಕಂಡುಬರುತ್ತಾರೆ. ಕೆಲಸಿಗರಿಗೆ ವಿಜಯಗರದ ಮಲ್ಲಿಕಾರ್ಜುನದೇವನು ತೆರಿಗೆ ಬಿಟ್ಟುಕೊಟ್ಟುದನ್ನು ಅಮ್ಮಿನಭಾವಿ ಮತ್ತು ದೇವರಹುಬ್ಬಳ್ಳಿ ಶಾಸನಗಳು ತಿಳಿಸುತ್ತವೆ. ಮಡಿವಳರು ಅಮ್ಮಿನಭಾವಿಯಲ್ಲಿ ಸ್ಥಾಪಿಸಿದ ಮಡಿವಳ ಮಾಜಿದೇವನ ವಿಗ್ರಹ ಗಮನಾರ್ಹ ಅಂಶವಾಗಿದೆ. ಇವರಲ್ಲಿ ಕೆಲವರ ಸಂಘಗಳಿದ್ದವೆಂದು ತೋರುತ್ತದೆ. ತೆಲ್ಲಿಗರದು ಐವತ್ತೊಕ್ಕಲು ಎಂದು ಮನಗುಂಡಿ (೫೧* ೧೨೦೩--೧೬) ಶಾಸನ ಹೇಳುತ್ತದೆ. ಭೂವ್ಯವಸಾಯಕ್ಕೆ ಸಂಬಂಧಿಸಿದ 'ತೋಂಟಿಗರೈನೂರ್ವರು' (ಸಿದ್ಧಾಪುರ ೬೮* ೧೧೫೮), 'ಅರುವತ್ತೊಕ್ಕಲು', 'ಉಗುರಮೂನೂರ್ವರು' ಎಂಬ ಸಂಘಗಳು ಸಾಮಾನ್ಯವಾಗಿ ಎಲ್ಲ ಶಾಸನಗಳಲ್ಲಿ ಕಾಣುತ್ತವೆ. ಅರುವತೊಕ್ಕಲು ಸಂಘದ ಮುಖ್ಯಸ್ಥ, ಊರೊಡೆಯನೆಂದು ಸಿದ್ಧಾಪುರ ಶಾಸನಸ್ಥ 'ನಾಲ್ವರು ಪ್ರಭುಮುಖ್ಯ ಅರುವತ್ತೊಕ್ಕಲು' ಎಂಬ ಮಾತು ತಿಳಿಸುತ್ತದೆ. ಎಲೆಯ ವ್ಯವಸಾಯ ಮಾಡುವವರು ಎಲೆಯಬೊಜಂಗರು. 'ಉಗುರಮೂನೂರ್ವರು' ಎಂಬುದು ಇವರ ಸಂಘದ ಹೆಸರು. ಇವರ ವರ್ಣನೆ ಮನಗುಂಡಿ ಶಾಸನ (೪೧* ೧೨೦೩-೧೬) ದಲ್ಲಿ ಹೀಗಿದೆ:

ನುಡಿದಂತೂರ್ಜ್ಜಿತ ಕಾರ್ಯ್ಯಮಂ ಪಡೆದು ಮಾಳ್ಪರ್ಮ್ಮಾನ್ಯರಂ ಮಂನ್ನಿಪ
ರ್ಗಡಣಂ ತಂಮೊಳನೂನಮಾಗಿ ವರಧಂರ್ಮ್ಮಾಧಾರರಾದರ್ಮ್ಮನಂ
ಬಿಡೆ ವಂದಿಬ್ರಜಮಂ ಸಮುದ್ಧರಿಸುವರ್ಸ್ವಾ[-]ಮವಂ ಕೊಟ್ಟವ
ರ್ಪ್ಪಡೆಮಾತೇಂ ಸ್ಥಿರಚಿತ್ತರೀ ಯುಗುರಮೂನೂರ್ವ್ವರ್ಮ್ಮಹಾಮ್ಮೈಮರೆ ॥

ಉಗುರೇಶ್ವರದೇವ ಕ್ರಮ
ಯುಗಮಂ ಪೂಜಿಸುವರರ್ತ್ಥಿಯಿಂದನವರತಂ
ಸೊಗಯಿಸುವರೆಂದು ಬಂಣ್ಣಿಪೆ
ನಗಣಿತಗುಣಯುತರನುಗುರಮೂನೂರ್ವರುಮಂ ॥

ಎಲೆಯಬೊಜಂಗರಂಗಜನ ರೂಪಿನ ಪೆಂಪಿನೊಳಂ ಸಮಾನದಿಂ
ಸಲೆ ಸೊಗಯಿರ್ಪ್ಪರೀ ಧರೆಗೆ ಸತ್ಯಚಳಂ ಸುಚರಿತ್ರವೃತ್ತಿಯಿಂ
ದಲಸದೆ ಮಾಳ್ಪ ದಾನಗುಣದಿಂ ಮಹಿಮೋಂನ್ನತಿಯಿಂ ಜಗಜ್ಜನಂ
ಪಲತೆಱದಿಂದೆ ಬಂಣ್ಣಿಸಲುದಾತ್ತಗುಣಾನ್ವಿತರೀ ಧರಿತ್ರಿಯೊಳ್ ॥

ಸ್ಥಿರದಿಂದೆ ಮೂಲವಳ್ಳಿಯ
ಪರಮನ ಪಾದಾಂಬ್ಜುಯುಗ್ಮಮಂ ಪೂಜಿಸುವ
ರ್ತ್ಥಿರದಿಂದವೆಲೆಯಬೊಜಗ
ರ್ಭ್ಭರದಿಂ ನಾಗೇಶನಂ ಮನೋಜಾಂತಕನಂ

ಶರಣಾಗತರಕ್ಷಕರಂ
ಹರಿಹರಪಾದಾಂಬುಜಭೃಂಗರಂ ಧಾರಿಣೆಯೊಳ್
ನೆರಗಿಲ್ಲದ ಬಲ್ಲಾಳ್ಗಳ
ನತಿಮುದದಿಂ ಪೊಗಳೆ ಬಿಲ್ಲಮೂನೂರ್ವ್ವರಂ ॥

ಈ ಶಾಸನ ಇವರ ವ್ಯಕ್ತಿತ್ವ, ದೈವಭಕ್ತಿಗಳನ್ನು ವರ್ಣಿಸುತ್ತದೆ. ಗ್ರಾಮದ ದಾನ-ಧರ್ಮಕಾರ್ಯದಲ್ಲಿ ಇವರೂ ಭಾಗವಹಿಸುತ್ತಿದ್ದುದು ತೀರ ಸಾಮಾನ್ಯವಾಗಿದ್ದಿತು. ಮನಗುಂಡಿಯ ತ್ರಿಭುವನವೀರ ಜಯಕೇಶಿ ದೇವಾಲಯಕ್ಕೆ ಅಲ್ಲಿಯ ಉಗುರಮುನೂರ್ವರು ದಾನಕೊಟ್ಟುದಲ್ಲದೆ "ಮತ್ತಂ ಮುಗದದ ಮೂನೂರ್ವ್ವರುಂ ಪವಿತ್ರದ ಪರ್ವಕ್ಕೆ ಆಳಲ್ಲಿ ಹಾಗಮಂ ಚಂದ್ರಭೂಷಣದೇವರಿಗೆ

ಕಾಲಂಕರ್ಚಿ ಧಾರಾಪೂರ್ವ್ವಕಂ ಮಾಡಿ ಕೊಟ್ಟರು ॥ ಮತ್ತಂ ನುಗ್ಗಿಯಪಳ್ಳಿಯ ವುಗುರಮೂನೂರ್ವ್ವರುಂ ಪವಿತ್ರದ ಪರ್ವಕೆ ಆಳಲ್ಲಿ ಹಾಗಮಂ ಚಂದ್ರಭೂಷಣದೇವರಿಗೆ ಕಾಲಂಕರ್ಚಿ ಧಾರಾಪೂರ್ವ್ವಕಂ ಮಾಡಿಕೊಟ್ಟರು ॥ ಮತ್ತಂ ಸತ್ತಿವೂರ ವುಗರ ಮೂನೂರ್ವ್ವರುಂ ಪವಿತ್ರದ ಪರ್ವಕೆ ಆಳಲ್ಲಿ ಹಾಗಮಂ ಚಂದ್ರಭೂಷಣದೇವರಿಗೆ ಕಾಲಂಕರ್ಚಿಧಾರಾಪೂರ್ವಕಂ ಮಾಡಿಕೊಟ್ಟರು ॥ ಮತ್ತಂ ನೀರುಸಾಗರದ ವುಗುರವಮೂನೂರ್ವ್ವರುಂ ಪವಿತ್ರದ ಪರ್ವಕೆ ಆಳಲ್ಲಿ ಹಾಗಮಂ ಚಂದ್ರಭೂಷಣದೇವರಿಗೆ ಕಾಲಂ ಕಚ್ಚಿ ಧಾರಾಪೂರ್ವ್ವಕಂ ಮಾಡಿಕೊಟ್ಟರು ॥" ಎಂಬ ವಿವರಣೆ ಗಮನಾರ್ಹವೆನಿಸಿದೆ.

ಇವರಿಗಿಂತ ತೀರ ಪ್ರಮುಖವಾದ ಸಂಘ, ವ್ಯಾಪಾರಿಗಳದು, ಇವರ ವಿಷಯವಾಗಿ ಬಳಕೆಯಾಗುವ ಹೆಸರುಗಳೆಂದರೆ ನಕರರು, ಬಣಂಜಿಗರು, ಸೆಟ್ಟಿಯವರು, ಸೆಟ್ಟಿಗುತ್ತರು, ಮುಮ್ಮುರಿದಂಡಗಳು ಮತ್ತು ಗಾತ್ರಿಗರು.

ನೆರೆದ ಬಣಂಜಿಗರ್ಮ್ಮದದೆ ಕಟ್ಟಿದೊಡಂತದು ಪಟ್ಟವರ್ತ್ತಿಯಿಂ
ದರರೆ ಬಬಾಪ್ಪು ನಂದಿನಿಕರ [UU] ದಿತ್ತುದೆ ಜಾಗವಾರ್ಗ್ಗವಿ
ನ್ದಿರದತಿ ಕೋಪದಿಂ ಮುಳಿಯಲಾ ಜವನನ್ನರಶೇಷಧರ್ಮ್ಮಮಂ
ಭರದೊಳೆ ರಕ್ಷಿಪರ್ನ್ನೆಗಳ್ದ ಪಟ್ಟಣನಾಲ್ಕಜಿಕೊಳಪ್ಪ ಸೆಟ್ಟಿಯರ್ ॥

ಎಂಬ ವರ್ಣನೆ, ಇದೇ ಮನಗುಂಡಿ ಶಾಸನ (೫೧* ೧೨೦೩-೧೬) ದಲ್ಲಿ ಬಂದಿದೆ. ದಾನ-ಧರ್ಮ ಪ್ರಸಂಗದಲ್ಲಿ ಮಹಾಜನ, ಪಂಚಮಠಗಳ ಸಾಲಿನಲ್ಲಿ ಇವರ ಸನ್ನಿದಿಯೂ ಅವಶ್ಯಕವಾಗಿದ್ದಿತು.

ಸ್ತ್ರೀ ಸಮಾಜ: ಈ ಸಂಪುಟದ ಶಾಸನಗಳಲ್ಲಿ ಪದ್ಮಲದೇವಿ, ಗಂಗಾದೇವಿ, ಮೈಳಲದೇವಿ, ಶ್ರೀಯದೇವಿ, ಮಲಯವತಿ, ರಾಜಮತಿ, ಪೊಲ್ಲಿಯಕ್ಕ, ಚಟ್ಟಿಯಕ್ಕ, ಗೊಜ್ಜಿಯಕ್ಕ, ಮೈಳಲದೇವಿಯಕ್ಕ, ಹಮ್ಮಕಬ್ಬೆ, ಚಂದಿಕಬ್ಬೆ, ತಿಪ್ಪವ್ವೆ ಹೆಸರಿನ ಸ್ತ್ರೀಯರು ಕಾಣಿಸಿಕೊಳ್ಳುತ್ತಾರೆ. ಇವರಲ್ಲಿ ಮಲಯವತಿದೇವಿ ಚಕ್ರವರ್ತಿ ವಿಕ್ರಮಾದಿತ್ಯ VI ನ ರಾಣಿ. ಮೈಳದೇವಿ, ಮಂಡಲೇಶ್ವರ ಗೋವೆಯ ಕದಂಬವಂಶದ ೨ ನೆಯ ಜಯಕೇಶಿಯ ರಾಣಿ, ಚಟ್ಟಿಯಕ್ಕ, ಪೊಲ್ಲಿಯಕ್ಕ, ಗೊಜ್ಜಿಯಕ್ಕರು ಮುಗದ ಗ್ರಾಮದ ಸಾಮಂತ (ನಾಲ್ಗಾವುಂಡ) ಮನೆತನದ ಅತ್ತೆ-ಸೊಸೆ-ಮರುಸೊಸೆಯರು. ಗಂಗಾದೇವಿ ಮತ್ತು ಮೈಳಲದೇವಿಯಕ್ಕರು ನರೇಂದ್ರ ಗ್ರಾಮದ ಸಾಮಂತ ಮನೆತನದ ಅತ್ತೆ-ಸೊಸೆಯರು. ರಾಜಮತಿಯೆಂಬವಳು ಜೈನ ಕಂತಿಯಿದ್ದು ಇವಳ ಪಾದವನ್ನು ತೊಳೆದು ದಾನಬಿಟ್ಟುದನ್ನು ನುಗ್ಗಿಕೇರಿ ಶಾಸನ (೪೫* ಸು. ಶ . ೧೨), ಗಂಡ ಜೋಯಿಸ ತಿಪ್ಪಯ್ಯನ ಋಣವನ್ನು ಅವನ ಹೆಂಡತಿ ತಿಪ್ಪವ್ವೆಯು ಆಸ್ತಿ ಭಾಗವನ್ನು ನೀಡಿ ತೀರಿಸಿದುದನ್ನು ಮನಗುಂಡಿ ಶಾಸನ (೫೧* ೧೨೧೧) ಹೇಳುತ್ತವೆ. ಸಾಗರಭಟ್ಟನ ಹೆಂಡತಿ ಶ್ರೀಯದೇವಿ (ನರೇಂದ್ರ ೩೮* ೧೧೨೬), ಉತ್ತವರಾಸಿಪಂಡಿತರ ಸತಿ ಚಂದಿಕಬ್ಬೆ (ಅಮ್ಮಿನಭಾವಿ ೩* ೧೧೧೨), ಹೀಚಗಾವುಂಡನ ಹೆಂಡತಿ ಹಮ್ಮಿಕಬ್ಬೆ (ಸಿದ್ಧಾಪುರ ೬೭* ೧೧೬೭) ಎಂದೂ ತಿಳಿದುಬರುತ್ತದೆ. "ಪದ್ಮಲದೇವಿ ಬಿಟ್ಟ ಧರ್ಮ" ಎಂದು ವೆಂಕಟಾಪುರ ಶಾಸನ (೬೪* ೧೧೩೬) ದಲ್ಲಿ ಬರುತ್ತದೆ. ಈ ಸ್ತ್ರೀ ಸಮುದಾಯದಲ್ಲಿ ಅವಶ್ಯ ಚರ್ಚಿಸಬೇಕಾದವರು ಮಂಡಳೇಶ್ವರಿ ಮೈಳಲದೇವಿ, ಸಾಮಂತಿನಿ ಗೊಜ್ಜಿಕಬ್ಬೆ, ಸಾಮಾನ್ಯ ಗೃಹಿಣಿ ಚಂದಿಕಬ್ಬೆ.

ಮೈಳಲಮಹಾದೇವಿ ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮಗಳಾಗಿ, ಮಂಡಳೇಶ್ವರ ಗೋವೆಯ ಕದಂಬ ಇಮ್ಮಡಿ ಜಯಕೇಶಿಯ ಮಡದಿಯಾಗಿ ಬೆಳಗಿದ ಸ್ತ್ರೀ. "ಜಯಕೇಶಿದೇವರಸರ ವಿವಾಹೋತ್ಸವ ಕಾಲದಲ್ಲಿ ಶ್ರೀಮತ್ರಿಭುವನಮಲ್ಲದೇವರು ಕುಂದೂರೈನೂರರ ಬಳಿಯ ಬಾಡಂ ಕನಕಾಪುರವಂ ಶ್ರೀ ಸೌರಾಷ್ಟ್ರದ ಶ್ರೀ ಸೋಮನಾಥನೇವರ ಧೂಪಕ್ಕೆ" ನೀಡಿದುದನ್ನು ಕನಕೂರ ಶಾಸನ (೧೫* ೧೧೦೪) ತಿಳಿಸಿದರೆ, ನರೇಂದ್ರ ಶಾಸನ (೩೯* ೧೧೨೫) ಅವರ ಮದುವೆಯ ವಿವರವನ್ನು ಹೀಗೆ ಹೇಳುತ್ತದೆ: .

ಎಂದು ವಿಭೂತಿಯಂ ಧರಿಸಿ ಹೇಮನಗೇಂದ್ರಮೆ ಮುಂದೆ ಬಂದು ನಿಂ
ದಂದದಿನಪ್ಪುಕೆಯ್ದು ಮಣಿಮಂಡಪದೊಳ್ವದಪದ್ಮಮಂ ನಿಜಾ
ನಂದದೆ ಕರ್ಚ್ಚಿ ಪೂರ್ಣಕಳಶೋಜ್ವಳಧಾರೆ ವಿರಾಜಿಸಲ್ಕೆ ತಾಂ
ನನ್ದನೆಯಂ ಕುಮಾರಕ ಶಿಖಾಮಣಿಗಿತ್ತನಿಳಾತಳೇಶ್ವರಂ ॥

ಕನಕಾದ್ರ್ಯಗ್ರಂಗಳೇನಚ್ಚರಿಯೆ ಪಲವೆನಲ್ ಹೇಮಪುಂಜಗಳಂ ರೋ
ಹನಗೇಂದ್ರವ್ರಾತವಿತ್ತೆತ್ತೆನೆ ಪಲವು ಮಹಾರತ್ನಪುಂಜಗಳಂ ಶ
ಕ್ರನ ಗಂಧೇಭಕ್ಕಮುಚ್ಚೈಶ್ರವದ ಮಹಿಮೆಗಂ ಮೇಲೆನಲ್ಸಂದುವಂ ನೂ
ತನ ಭದ್ರೇಭಾಶ್ವಕೋಟಿಪ್ರಕರಮನಳಿಯಂಗಿತ್ತನಾ ಕುಂಡ [ಳಾಧೀಶಂ] ॥

ಈ ರೀತಿಯ ಮದುವೆಯ ವರ್ಣನೆ ಶಾಸನಪ್ರಪಂಚದಲ್ಲಿಯೇ ಅಪರೂಪದ ಉಲ್ಲೇಖವಾಗಿದೆ. "ಶ್ರೀಮನ್ಮಹಾಮಣ್ಡಳೇಶ್ವರಂ ಜಯಕೇಶಿದೇವರುಂ ಶ್ರೀಮಚ್ಚಾಳುಕ್ಯಚಕ್ರೇಶ್ವರ ಪ್ರಿಯತನೂತೆ ಮೈಳಲಮಹಾದೇವಿಯರುಂ ಪಲಸಿಗೆಪನ್ನಚ್ಛಾಸಿರಮುಮಂ ಕೊಂಕಣವೊಂಭಯ್ನೂಱುಮಂ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ" ಎಂಬಂತೆ ಸಾಮಾನ್ಯವಾಗಿ ಶಾಸನಗಳಲ್ಲಿ ಜಯಕೇಶಿಯ ಹೆಸರಿನೊಂದಿಗೆ ಇವಳ ಹೆಸರು ಶಾಸನಗಳಲ್ಲಿ (ಭಾವಿಹಾಳ ೪೯* ೧೧೨೫) ಹೆಣೆದುಕೊಂಡು ಬರುತ್ತದೆ. ಇವಳು ಸ್ವತಂತ್ರವಾಗಿಯೂ ಅಳಿದಳೇನೋ ಎಂಬ ಅನುಮಾನ ಹುಟ್ಟಿಸುವ ". . . . ಜಯಿಕೇಶಿದೇವರ ಮನೋನಯನವಲ್ಲಭೆಯರಪ್ಪ . . . . ಶ್ರೀಮತ್ಪಿರಿಯರಸಿ ಮೈಳಲಮಹಾದೇವಿಯರ್ಕುನ್ನೂರ್ದ್ದರೊಳಿರ್ದ್ದು ಕೊಂಕಣವೊಂಭಯ್ನೂಱುಣುಕಲ್ಸಬ್ಬಿಯೆರಡುಮೂವತ್ತು ಪೊಳಲಗುನ್ದೆಮೂವತ್ತು ವೇಳುಗ್ರಾಮೆಯೆಳ್ಪತ್ತು ಹೈವೆಯಯ್ನೂಱುಕವಡಿದ್ವೀಪಸವಲಕ್ಷಮುಮಂ . . . . ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ" ಎಂಬಂತಹ ಮಾತುಗಳೂ ಶಾಸನ (ನರೇಂದ್ರ ೩೮* ೧೧೨೩-೨೬) ದಲ್ಲಿವೆ. ಬಹುಶ: ಇಷ್ಟು ವಿಸ್ತಾರ ಪ್ರದೇಶವನ್ನು ಜಯಕೇಶಿ ಆಳುತ್ತಿರಬಹುದಾದರೂ ಹೀಗೆ ಹೇಳಿದುದು ಇವಳ ಘನತೆಯನ್ನು ಸೂಚಿಸುತ್ತದೆ. "ಶ್ರೀಮನ್ಮಹಾಪ್ರಧಾನನನ್ತಃಪುರಾಧ್ಯಕ್ಷಪಸಾಯ್ತಂ ಶ್ರೀಮನ್ಮೈಳಲಪುಮಹಾದೇವಿಯರ ಮನೆವೆರ್ಗ್ಗಡೆ ಶ್ರೀಮದ್ದಂಡನಾಯಕ ಲಕ್ಷ್ಮರಸ"ನ ಉಲ್ಲೇಖ ನರೇಂದ್ರ ಶಾಸನ (೩೮* ೧೧೨೩-೨೬) ದಲ್ಲಿ, "ಶ್ರೀಮನ್ಮಹಾಪ್ರಧಾನಂ ದಣ್ಡನಾಯಕಂ ಪಸಾಯಿತಂ ಮೈಳಲಮಹಾದೇವಿಯರ ಮನೆವೆರ್ಗ್ಗಡೆ" ಸಿಂಗರಸನ ಉಲ್ಲೇಖ ಇನ್ನೊಂದು ನರೇಂದ್ರಶಾಸನ (೩೯* ೧೧೨೫) ದಲ್ಲಿ ಬರುತ್ತದೆ. ಸಿಂಗನಹಳ್ಳಿ

ಶಾಸನ (೬೫* ೧೧೨೩) ಮೈಳಲದೇವಿಯರ ಶ್ರೀಕರಣದ ಸಿಂಗಣ್ಣನನ್ನು ಸೂಚಿಸುತ್ತದೆ. ಈಕೆ ಕೇಶವದೇವರನ್ನು ಪ್ರತಿಷ್ಠೆಮಾಡಿದಳೆಂದು ಗೂಗಿಕಟ್ಟಿ ಶಾಸನ ೯೨೩* ೧೧೨೪) ತಿಳಿಸುತ್ತದೆ.

ಗೊಜ್ಜಿಯಕ್ಕ, ಮುಗದ ಗ್ರಾಮದ ಸಾಮಂತ ಮಾರ್ತಂಡನ ಧರ್ಮಪತ್ನಿ. ಇಲ್ಲಿಯ ಒಂದು ಶಾಸನ (೫೭* ೧೧೩೫) ಇವಳನ್ನು ಮಲೆಯಗಂಗೆ, ಮರುದೇವಿ, ಘಟಾನ್ತಿಕೆ, ಜಿನಶಾಸನದೇವತೆ ಎಂದು ಕರೆದಿದೆ. ಇನ್ನೊಂದು ಶಾಸನ(೫೮) ದಲ್ಲಿಯೂ ಬರುವ ಇವಳ ವಿಷಯ ಓದುಗನ ಕಣ್ಣು ತುಂಬುತ್ತದೆ.

ಇಂದ್ರಶಿವಜೀಯವರ ಮಗಳೂ ಉಣಕಲ್ಲಿನ ಉತ್ತವರಾಸಿಪಂಡಿತರ ಸತಿಯೂ ಆದ ಚಂದಿಕಬ್ಬೆ 'ಕವೀಂದ್ರಸ್ತುತೆ' ಎನಿಸಿದ್ದಾಳೆ. ದೇವರಸತ್ರಕ್ಕೆ ಇವಳು ದಾನ ನೀಡಿದ ವಿಷಯ ಅಮ್ಮಿನಭಾವಿ ಶಾಸನ (೩* ೧೧೧೨) ದಲ್ಲಿ ಬರುತ್ತದೆ.

ಸಾಹಿತ್ಯಿಕ

ಶಾಸನಗಳ ಉದ್ದೇಶ ಸಾಹಿತ್ಯಿಕ ನಿರ್ವಹಣೆಯಲ್ಲ, ಘಟನೆಗಳ ನಿರೂಪಣೆ. ಆದರೆ ಲೇಖಕರ ಸೌಂದರ್ಯಪ್ರಜ್ಞೆ ಕಾರಣವಾಗಿ ಶಾಸನಗಳ ಬರವಣಿಗೆಗೆ ಸಾಹಿತ್ಯದ ಬಣ್ಣವೇರಿದೆ. ಒಂದು ಸ್ವತಂತ್ರ ಅಭ್ಯಾಸದ ವಸ್ತುವಾಗಿರುವ "ಕರ್ನಾಟಕದ ಶಾಸನಗಳ ಸಾಹಿತ್ಯಸಿದ್ಧಿ"ಗೆ ನಿದರ್ಶನವೆನಿಸುವ ಹಲವು ಶಾಸನಗಳು ಈ ಸಂಪುಟದಲ್ಲಿವೆ. ಯುದ್ಧವೀರ, ದಾನವೀರ ಪ್ರಸಂಗಗಳನ್ನು ವ್ಯಕ್ತಪಡಿಸುವಲ್ಲಿ ಇವುಗಳ ಸತ್ವ ಎದ್ದುಕಾಣುತ್ತದೆ. ಒಂದು ಪದ್ಯ ಇಲ್ಲವೆ ಒಂದು ಸಾಲು ಗದ್ಯದ ಸಣ್ಣಶಾಸನಗಳೂ ಇಲ್ಲಿ ಎಡೆ ಪಡೆದಿವೆ. ಸುಮಾರು ೧೨ ನೆಯ ಶತಮಾನಕ್ಕೆ ಸೇರಿದ ನರೇಂದ್ರದ ಎರಡು ಶಾಸನ (೩೮, ೩೯), ಮನಗುಂಡಿಯ ಎರಡು ಶಾಸನ (೫೧,೫೩), ಮುಗದದ ಎರಡು ಶಾಸನ (೫೬, ೫೭) ಗಳು ಪುಟ್ಟ ಚಂಪೂ ಕಾವ್ಯಗಳಂತೆ ವಿಸ್ತಾರವಾಗಿವೆ; ವಿವಿಧ ವೃತ್ತ-ವಚನಗಳ ವೈಭವದಿಂದ ಬೆಳಗುತ್ತಿವೆ.

ಭುವನಂ ಪೂಗೊಳನಿಂದುಭಾನುಂ ಕಿರಣಂ ಸ್ವಚ್ಛಾಂಬುಗೋತ್ರಾದ್ರಿಕಂ
ತೆವರಂ ಬಂಬುಳಿವಾರ್ಧಿ ತುಂಬಿ ಮನುಜರ್ನೀರ್ವ್ವಾನಸ ಜೈನತ
ತ್ವಮೆ ತಂಪಾಗಿರಲಲ್ಲಿ ಬಾಹುಬಲಿ ಸೈದ್ಧಾನ್ತೇಶಕೀರ್ತ್ತಿಪ್ರಭಾ
ನವಹಂಸಂ ಕವಿಚಕ್ರಸಂಗಿ ನಲಿಗುಂ ನಾನಾರತ ಕ್ರೀಡೆಯಿಂ ॥

ಬಿಡುವ ಮರಳ್ಚುವಟ್ಟುವ ಮಗುಳ್ವ ಕಣಂಗುವ ಪೊಂಗುವಾನ್ತು ರೂ
ಪಿಡುವ ಜಗುಳ್ವ ಝಳಿಪಿಸುವ [– ∪∪] ಪಾರುವ ಮಿಕ್ಕು ಪೊಕ್ಕು ಪೊ
ಕ್ಕಡಸುವ ಕುತ್ತು ಮಿತ್ತುವ[∪ – ∪∪– ∪∪ – ∪ – ∪] ನೂ
ರ್ಮ್ಮಡಿಯೆನಲಾಯ್ತು ಕಾ [∪∪∪ – ∪] ಚವುಣ್ಡನೊಳಾಜಿರಂಗದೊಳ್ ॥

ಅರಿ ಸಾಮನ್ತರ ರಕ್ತಮೆಂಬನವಸನ್ಧ್ಯಾರಾಗಮುರ್ಬ್ಬೇಳೆ ಸಾ
ಕ್ಷರ ನೀರೇಜವನಕ್ಕೆ ಪೊಜ್ಜೆದಿಹರ್ಷಂ ಶಿಷ್ಟೇಷ್ಟ ಚಕ್ರಾಂಕಮಾ

ದರದಿಂ ಪೊಂದೆ ಮುಗುಂದಮೆಂಬುವಯಕೈಳಸ್ಥಾನದೊಳ್ತೇಜಮಾ
ಗಿರೆ ಚೆಲ್ವಾದುದು ನಾಕಿರಾಜವಿಭುವೆಂಬಾದಿತ್ಯ ನಿತ್ಯೋದಯಂ ॥

ಸಾಸನಮಾಗಿರೊಳ್ಪೆಸೆವ ಕಲ್ಲಿನ ಸಾಸನವೊಂದಿದಲ್ತು ಕೇಳ್
ಸಾಸದ ಸಾಸನಂ ಜಯದ ಸಾಸನವಾರ್ಪಿನ ಸಾಸನಂ ಗುಣೋ
ದ್ಭಾಸನ ಸಾಸನಂ ಸಿರಿಯ ಸಾಸನವೊಳ್ಪಿನ ಸಾಸನಾಳಿಯಿಂ
ಲೇಸೆನೆ ನಾಕಿರಾಜವಿಭು ಸಾಸನಕೋಟಿಯನೆಯ್ದೆ ತಾಳ್ದಿದಂ ॥

ಇಂಥ ಅನೇಕ ಪದ್ಯಗಳನ್ನು ಉದಾಹರಿಸಬಹುದು. ಇವುಗಳ ಮಧ್ಯೆ ನುಸುಳಿನಿಂತ ಅಪೂರ್ವ ಪದ್ಯಜಾತಿಗಳೆಂದರೆ ಮೂಲಷಟ್ಪದಿ ಮತ್ತು ರಗಳೆ. ನರಸಮ್ಮನೆಂಬ ಶಿಲ್ಪಿಯನ್ನು ವರ್ಣಿಸುವ ಅಮ್ಮನಭಾವಿ ಶಾಸನದ ಮೂಲ ಷಟ್ಪದಿ ಹೀಗೆದೆ:

ಷಟ್ಪದ॥ ಹರಪಾದಾಂಬುಜಭೃಂಗಂ
ಪರನಾರೀಜನದೂರಂ
[UU – – UU – –] ಜಾತರೂಪಂ ।
ಸರಸತಿಗಣಭಕ್ತಂ
ನರಸಂಮಂ ನೆಗರ್ದ್ದನೀ
ಧರೆಗೆಲ್ಲಂ ಸಲೆ ಸ [– UU – –] ॥

ಇದು, ಕನ್ನಡ ಸಂಶೋಧನಕ್ಷೇತ್ರದಲ್ಲಿ ಪ್ರಥಮಸಲ ಕಣ್ಣಿಗೆಬಿದ್ದ ಮೂಲಷಟ್ಪದಿಯಾಗಿದೆ. ಇಲ್ಲಿಯ 'ಷಟ್ಪದ ಎಂಬ ಹೆಸರೂ ತುಂಬ ಮಹತ್ವಪೂರ್ಣವೆನಿಸಿದೆ. ಕ್ರಿ.ಶ. ೧೦೭೧-೭೨ ರ ಕಾಲದ ಇದಕ್ಕೆ ಪ್ರಾಚೀನತೆಯ ದೃಷ್ಟಿಯಿಂದಲೂ ಬೆಲೆಯಿದೆ.

ಅಳ್ನಾವರ ಶಾಸನ (೧೪೪ ೧೫೦೫), ಸಮಾಧಿಮರಣವನ್ನಪ್ಪಿದ ಚಿಕ್ಕಮಲ್ಲಣ್ಣನನ್ನು ಕೀರ್ತಿಸುವಲ್ಲಿ

ಮತ್ತಮತಿಶಯ ಜಿನಪದಾಂಭೋಜಷಟ್ಚರಣ
ಬಿತ್ತರಿ ಪಂಚಪದಮೂರಿತಾಂತಃಕರಣ
ಗುರುಪದಾಂಭುಜಪರಾಗಸ್ವರಂಜಿತಭಾಳ
ಭರತಕಾವ್ಯಪ್ರಮುಖ ನಾನಾಕಳಾಜಾಳ
ವಸುಧಾಂತರಾಳವಿಶ್ರುತ ವಿವಿಧಸುಚರಿತ್ರ
ಲಸಿತ ಜಿನಗಂಧಪುಷ್ಕರಪವಿತ್ರಿತಗಾತ್ರ
ಧರೆಗೆ ಹುಬ್ಬಳ್ಳಿ ಸಿದ್ಧೇಂದ್ರತನುಸಂಜಾತ
ಸುರಸಕೋವಿದ ಚಿಕ್ಕಮಲ್ಲಣನತಿಖ್ಯಾತ ॥

ಹೀಗೆ ರಗಳೆ ಛಂದಸ್ಸನ್ನು ಬಳಿಸಿದುದು ಅಪರೂಪದ ಉದಾಹರಣೆಯೆನಿಸಿದೆ.

ಈ ತಾಲೂಕಿನ ಶಾಸನಗಳನ್ನು ಬರೆದ ಕವಿ, ಲಿಪಿಕಾರ, ರೂವಾರಿಗಳ ವಿಷಯ ಕೆಲಮಟ್ಟಿಗೆ ಹೀಗೆ ತಿಳಿದುಬರುತ್ತದೆ:

ರೂವಾರಿ ಕುಮುದಚಂದ್ರಂ
ಭಾವಕರೂವಾರಿ ವಾರಿಜಾರ್ಕ್ಕಂ ಮತ್ತಂ
ರೂವಾರಿ ವಾರಿಜೋದ್ಭವ
ನೀ ವಸುಮತಿಯೊಳಗತಿ ಪ್ರಚಣ್ಣಂ ಚೌಂಣ್ಡಂ ॥

ಈ ಪದ್ಯಗಳಲ್ಲಿಯ ಕವಿ, ಲಿಪಿಕಾರರ ಉಲ್ಲೇಖ ವೈಖರಿಯನ್ನು ಗಮನಿಸಬೇಕು.

ಇದೇರೀತಿ ಇನ್ನೊಂದು ಶಾಸನ "ನಾಗಾರ್ಜ್ಜುನ ಪಣ್ಡಿತರು ಪೇಟ್ದ್ ಕಬ್ಬಂ ಕೆಸಱುಕಲ್ಲಾದಿಯಾಗಿ ಕಲ್ಲೋಱ್ಘುರ ಕೆಲಸ । ಭರತೋಜನ ಕಣ್ಡರಣೆ" ಎಂದು ಕವಿ, ಲಿಪಿಕಾರ, ರೂವಾರಿಗಳನ್ನು ಒಟ್ಟಿಗೆ ಸೂಚಿಸುತ್ತದೆ. ರಾಯಾಪುರ ತಾಮ್ರಶಾಸನವು (೬೩) "ಶಕ್ತಿವ್ಯುತ್ಪತ್ತಿಸಂಪನ್ನವಿದ್ವತ್ಶ್ರೀಪಾದಸೇವಿನಾ । ರಜಿತಾದಿತ್ಯದೇವನ ಸೇಯಂ ಶಾಸನಪದ್ಧತಿ: ॥ ಕೃತಿರಿಯಂ ತ್ರಿಭುವನ ವಿದ್ಯಾಚಕ್ರವರ್ತ್ತಿನ: ಶ್ರೀ ಮದಾದಿತ್ಯದೇವಸ್ಯ । ಲಿಖಿತಮಿದಂ ಪಂಡಿತ ಲಕ್ಷ್ಮೀಧರೇಣ । ಉತ್ಕೀರ್ಣ್ಣಂ ರಾಜ ವಿಜ್ಞಾನಿನಾ ಪಂದಯೇನ । " ಎಂದು ಶಾಸನ ಕಾರಣಕರ್ತರನ್ನು ನೆನೆಯುತ್ತದೆ.

"ಅಂತಪ್ಪುದಕ್ಕೆ ಸಾಕ್ಷಿ ತಿಪ್ಪಗಾವುಂಡ ಶ್ರೀ ಮೂಲಸ್ಥಾನದಾಚಾರ್ಯ್ಯ ಬೋಕರಾಸಿ ಶ್ರೀ ಗ್ರಾಮೇಶ್ವರದ ಚಂದ್ರಭೂಷಣದೇವರು ಲಕ್ಷ್ಮಣೇಶ್ವರದಾಚಾರ್ಯ್ಯಮರೇಶ್ವರದೇವರು ಶ್ರೀ ಗೋಗಾಳದೇವರ ಸಚ್ಚಿದಾನಂದಸ್ವಾಮಿ ಅಂತವರವರುಭಯ ಸನ್ಮತದಿಂ ಬರದ ಕುಲಕರಣಿ ಚಿದಯ್ಯ"

"ಶ್ರೀ ಮತ್ಪಿರಿಯರಸಿ ಮೈಳಲಮಹಾದೇವಿಯ ಶ್ರೀ ಕರಣದ ಸಿಂಗಣ್ಣಗಳ ಬರೆಪ" ಎಂಬ ಹೇಳಿಕೆಗಳಲ್ಲಿಯ ಚಿದಯ್ಯ, ಸಿಂಗಣ್ಣಗಳು ಲಿಪಿಕಾರರೆಂಬುದು ಸ್ಪಷ್ಟ.

ಈ ಕವಿ. ಲಿಪಿಕಾರ ಮತ್ತು ರೂವಾರಿಗಳು ಕಾರಣವಾಗಿ ಈ ತಾಲೂಕಿನಲ್ಲಿ ಅನೇಕ ಶಾಸನಗಳು ಹುಟ್ಟಿ ಸಾಹಿತ್ಯ ಸಂಪತ್ತಿನಿಂದ ಕಂಗೊಳಿಸಿದವು.

ಕೃತಜ್ಞತೆಗಳು

ಧಾರವಾಡ ತಾಲೂಕಿನಲ್ಲಿ ಸಿಗುವ ಸರ್ವಶಾಸನಗಳನ್ನು ಅಂಗೈಮೇಲೆ ತೋರಿಸಿಕೊಡುವ ಇಂಥ ಸಂಪುಟದ ರಚನೆ ನಮಗೆ ಪ್ರಥಮ ಅನುಭವ. ಹೀಗಾಗಿ ಎಷ್ಟೇ ಖಚಿತಮಾಡಬೇಕೆಂದರೂ ಕೆಲವು ಲೇಖನ ದೋಷಗಳು ಮತ್ತು ಮುದ್ರಣದೋಷಗಳು ಉಳಿದುಕೊಂಡವು. ತೀರ ಅಲ್ಪಪ್ರಮಾಣದಲ್ಲಿರುವ ಈ ನ್ಯೂನತೆಗಳನ್ನು ವಿದ್ವಾಂಸರು ಮನ್ನಿಸಬೇಕು.

ಅಧ್ಯಯನಪೀಠದ ಅಂದಿನ ಮುಖ್ಯಸ್ಥರೂ ವಿಶ್ವವಿದ್ಯಾಲಯದ ಇಂದಿನ ಕುಲಪತಿಗಳೂ ಆದ ಡಾ. ಆರ್. ಸಿ. ಹಿರೇಮಠ ಅವರ ದೂರದರ್ಶಿತ್ವದ ಫಲ, ಶಾಸನವಿಭಾಗ. ಈ ಯೋಜನೆ ಅಸ್ತಿತ್ವಕ್ಕೆ ಬಂದುದು ಅವರ ಚೈತನ್ಯಪೂರ್ಣ ಮಾರ್ಗದರ್ಶನದಿಂದ. ಅಧ್ಯಯನಪೀಠದ ಇಂದಿನ

ಮುಖ್ಯಸ್ಥರಾದ ಡಾ. ಎಂ.ಎಸ್. ಸುಂಕಾಪುರ ಅವರು ಕನ್ನಡದ ಕುಟುಂಬವತ್ಸಲರು. ಈ ಕಾರ್ಯ ಪವನವೇಗದಲ್ಲಿ ಸಾಗುವ ಏನೆಲ್ಲ ಅನುಕೂಲತೆಗಳನ್ನು ಅವರು ಕಲ್ಪಿಸಿ ಕೊಟ್ಟಿದ್ದಾರೆ. ಕನ್ನಡದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರುವ ಈ ಇಬ್ಬರಿಗೂ ನನ್ನ ಹಾರ್ದಿಕ ವಂದನೆಗಳು.

ನಮ್ಮ ಶಾಸನ ವಿಭಾಗದ ಸಂಶೋಧನ ಸಹಾಯಕರಾಗಿದ್ದ ಡಾ. ಆರ್. ಎನ್. ಗುರವ ಅವರು ಈ ಸಂಪುಟದ ರಚನಾಕಾರ್ಯಕ್ಕೆ ತುಂಬ ನೆರವಾದುದಲ್ಲದೆ ತಮ್ಮ ವಶದಲ್ಲಿರುವ ಹಲವು ಪಡಿಯಚ್ಚುಗಳನ್ನು ಒದಗಿಸಿರುವರು. ಹಗಲೆಂದರೆ ಹಗಲು, ರಾತ್ರಿಯೆಂದರೆ ರಾತ್ರಿ ದುಡಿದು ಸಂಪುಟದ ಸಿದ್ಧತೆ, ಪ್ರಕಟನೆಗಳಿಗಾಗಿ ಪರಿಶ್ರಮಿಸಿದ್ದಾರೆ, ಇನ್ನೊಬ್ಬ ಸಂಶೋಧನ ಸಹಾಯಕರಾದ ಶ್ರೀ.ಬಿ. ಆರ್. ಹಿರೇಮಠ ಅವರು. ಇತ್ತೀಚೆ ಈ ವಿಭಾಗಕ್ಕೆ ಬಂದ ಶ್ರೀ. ಸಿ. ಆಯ್. ಪಾವಟೆ ಅವರ ಸಹಕಾರವು ಈ ಕಾರ್ಯಕ್ಕೆ ಒದಗಿದೆ. ಇವರೆಲ್ಲರಿಗೂ ನಮ್ಮ ಕೃತಜ್ಞತೆಗಳು.

ಈ ಕೃತಿಯ ಪ್ರಕಟನೆಯ ಬಗ್ಗೆ ತೀವ್ರ ಆಸಕ್ತಿ ವಹಿಸಿದವರು, ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿಯವರು ಮತ್ತು ಉಪನಿರ್ದೇಶಕರಾದ ಶ್ರೀ. ಎಸ್. ಬಿ. ನಾಯಕರು. ಇವರು ಮನಸ್ಸು ಮಾಡಿರದಿದ್ದರೆ ಈ ಕೃತಿ ಇಷ್ಟು ಸುಂದರವಾಗಿ, ಇಷ್ಟು ತೀವ್ರವಾಗಿ ಅಚ್ಚಾಗುತ್ತಿರಲೇ ಇಲ್ಲ. ಇವರಿಗೆ ನನ್ನ ವಂದನೆಗಳು.

ತೀರ ಕ್ಲಿಷ್ಟವಾದ ಈ ಸಂಪುಟದ ಅಚ್ಚಿನ ಕಾರ್ಯವನ್ನು ನಮ್ಮ ವಿಶ್ವವಿದ್ಯಾಲಯದ ಅಚ್ಚುಕೂಟದ ಸಹಾಯಕ ನಿರ್ದೇಶಕರಾದ ಶ್ರೀ. ಈ. ಬಿ. ಮನ್ವಾಚಾರ ಅವರು ಅಹ್ವಾನವೆಂಬಂತೆ ಸ್ವೀಕರಿಸಿ, ತುಂಬ ಉತ್ಸಾಹದಿಂದ ಪೂರೈಸಿಕೊಟ್ಟಿದ್ದಾರೆ. ನಾವು ಕೊಡುವ ಕಾಟ, ಹಿಂಸೆ, ತೊಂದರೆ ಏನೆಲ್ಲವನ್ನು ಸಹಿಸಿ ಅಚ್ಚುಕೂಟದ ಸಿಬ್ಬಂದಿಗಳು ಸಹಕರಿಸಿದ್ದಾರೆ. ಈ ಸಹಕಾರಕ್ಕೆ ಉಪಕೃತರಾಗಿದ್ದೇವೆ.

ಧಾರವಾಡ —ಎಂ. ಎಂ. ಕಲಬುರ್ಗಿ

೨೩-೧೦-೧೯೭೬

❖❖

INTRODUCTION

1 | Plan and Progress of the Project

The Epigraphy section in the Institute of Kannada Studies, Karnātaka University, has been formulating some broad and useful projects from its establishment. They are:

1 The writing of independent books on epigraphy.

2 The preparation of the indices of epigraphs.

3 The survey and publication of inscriptions.

4 The translation of books on epigraphy.

As a part of the first project, **Dhārawāḍa Jilleya Śāsana Sūchi** and **Vijāpur Jilleya Śāsana Sūchi** and as a part of the second project, two volumes of Śāsana Vyāsaṁga have been published. Now as a part of the third project. **Dhārawāḍa Tālūkina Śāsanagalu** is being published. Thus the epigraphy section has been displaying its new facets.

Treasuretrove of Epigraphs

The treasuretrove of the epigraphs of Karnātaka has occupied a place of honour in the world. Also the inscriptions of Ashoka, the oldest in India, except that of the script of the Indus Valley Civilization, have been found in Karnātaka. The number of the inscriptions, which have been written in various languages

and scripts, since then approximates to twentyfive thousand.* These epigraphs being the records of the political, religious and social aspects and also of linguistic, palaeographical and literary of our country are thought to be unique in their varied aspects. The inscriptions of Tāḷaguṁd and Aihoḷe etc. are the most noteworthy inscriptions of India, The Aihoḷe and the Badāmi epigraphs mention, for the first time, Kāḷidāsa and the Śālivāhana era respectively. The historical importance of Kaḷasa, Lakkuṁḍi, Hummacha, Abbalūr, Arjunawāḍa, Śravaṇ abeḷgoḷa, Bēlūr, and Ātakūr is noteworthy. A number of hero-stones proclaim heroism and the māsti-stones women's devotion to their husbands, while the nishadhi stones speak of Jain's devotion to their religion. The Jura epigraph of Madhya-Pradesh indicates the extension of the invasion of the Kamataka kings. Apart from all this, they inform us of all the aspects of life in those days. They are more significant as records of the history of our country than that of any literary works and hearsays,

Survey of the Epigraphs

In reconstructing the forgotten history of Karnataka, a survey and publication of the inscriptions is necessary. It began towards the end of the eighteenth century and has continued through the joumals like EI. IA and the volumes like SII, EC and KI. The following three stages can be noted here:

1 The Age of Col. Mackenzie: 1791-1837.

2 The Age of Sir Walter Eliot: 1837-1870.

3 The Age of Dr. Fleet and Rice: 1870 onwards.

Thus even though now two hundred years have lapsed, it is regrettable that the survey and publication of the inscriptions of this small area has not been completed yet.

The necessity of the Project

B. L. Rice and R. Narasiṁhāchār etc. published the inscriptions of Southem Kamataka in districtwise volumes, like Epigraphia Camatica: Mysore

---

* Now it Cross thirty thousand

District Tumkur District etc. From these volumes the students of epigraphy co me to know the number of inscriptions of each village, taluka and district. No such systematic work was done in Northem Kamataka neither by Fleet who surveyed this area long ago, nor by the Department of Archaeology, which came into existence for this purpose only. Fleet took up the survey of the inscriptions of Northem Karnātaka, but did not cover all. Although the Department of Archaeology continued to publish the inscriptions, this could not exhaust the available sources. Since the survey was not carried out systematically, it is not possible to know the definite number of the published and unpublished inscriptions. The Institute of Kannada Studies, Kamatak University, therefore, took up the task and started with the publication of the **Dhārawāḍa Tālūkina Śāsanagaḷu**. It need not be said that the publication of the taluka-wise volumes of inscriptions is a formidable task, which cannot be completed unless a large number of scholars join hands.

The problems and the achievements of the Project

This volume includes the inscriptions already published elsewhere and some that have never been published. The first problem that confronted us in editing this volume was to collect the definite number of villages of the taluka and their names. The number and the names of the villages in the taluka, obtained from the Taluka Office sometimes did not tally with the existing villages. The reason for this is that the village in question has perished, and that there is a lot of difference in the pronunciation of its name. This problem was solved though with much effort. But another problem worried us. Some of the inscriptions mentioned in the epigraphical reports or published in the joumals and epigraphical volumes have disappeared. For example, the Narēṁdra epigraph (38), mentioned in the Annual Report on South Indian Epigraphy 1925-26 and the Siddāpur epigraph (67) published in the SII. XV are not available now. Even though some new ones are found in some places, the script is not visible and therefore, it led to the doubt as to whether anything had been written on it or not. For example, the two epigraphs of Nîralakaṭṭi and two of Muḷḷamuttala. Such inscriptions that lost the merit of epigraphs had to be given up. For those other

ones except which have already been published, but have disappeared now we had to visit the places, and copy them. This attempt of ours has provided us with new readings.

An outline of this volume, which contains three types of inscriptions those that are mentioned in reports, those that are published among the reported ones and the newly found ones which are being published for the first time is as follows:

	Village	Year of report	No	Publication
1.	Aṁbaḷḷi	1954-55	88	Inscriptions of Dhsrwar Taluka
2.	Amminabhāvi	1925-26	431	SII. XI. II121
3.	Amminabhāvi	1925-26	432	SII. XI. II 191
4.	Amminabhāvi	1925-26	430	SII. XV 31
5.	Amminabhāvi	1925-26	429	SII. XV 228
6.	Amminabhāvi	1952-53	70	Inscriptions of Dharwar Taluka
7.	Amminabhāvi	1925-26	428	SII. XV 231
8.	Amminabhāvi	-	-	Kamataka Bharati 6-4
9.	Amminabhāvi	1925-26	433	SII. XV 257
10.	Amminabhāvi	-	-	Inscriptions of Dharwar Taluka
11.	Aḷnāvar	1925-26	470	SII. XV 225
12.	Aḷnāvar	1925-26	471	SII. XV 226
13.	Aḷnāvar	1925-26	419	SII. XV 234
14.	Aḷnāvar	1925-26	468	SII. XV 693
15.	Kanakūr	1925-26	455	SII. XI-u 154
16.	Kalle	1925-26	449	SII. XV 448

17.	Koṭabāgi	1925-26	447	SII. XV 195
18.	Koṭabāgi	1925-26	448	SII. XV 619
19.	Garag	1925-26		Inscriptions of Dharwar Taluka
20.	Garag	-	-	Inscriptions of Dharwar Taluka
21.	Garag	1925-26	441	SII. XV 610
22.	Garag	1925-26	442	S1I. XV 618
23	Gūgikaṭṭi	1925-26	465	SII. XI-u 199 SI T. XV 8
24.	Taḍakōḍ	1925-26	446	SII. XV 552
25.	Taḍakōd	1925-26	445	SII. XV 199
26.	Tēgūr	1925-26	451	SII. XI-u 128
27	Dēvarahubbaḷḷi	1925-26	434	KK. p. 401-3 SU. X V 232 KI. V 66
28.	Dēvarahubbaḷḷi	1925-26	435	SII. XV 208
29.	Dharwar	-	-	Inscriptions of Dharwar Taluka
30.	Dharwar	-	-	Inscriptions of Dharwar Taluka
31.	Dharwar	-	-	Inscriptions of Dharwar Taluka
32.	Dharwar	1949-50(KRI)	26	KI. VI 16
33.	Dharwar	1943-44 (KRI)	6	KI V 16
34.	Dharwar	—	—	Inscriptions of Dharwar Taluka
35.	Dharwar	1949-50 (KRI)	32	Inscriptions of Dharwar Taluka
36.	Dharwar	1949-50 1949-50	21	KI. VI 68
37.	Dharwar	-	-	Inscriptions of Dharwar Taluka
38.	Narēṁdra	-	-	EI. XII. p. 316
39.	Narēṁdra	1958-59	528	El. XII. p. 298

40.	Narēṁdra	1958-59	528	Inscriptions of Dharwar Taluka
41.	Narēṁdra	-	-	Inscriptions of Dharwar Taluka
42.	Narēṁdra	-	-	Inscriptions of Dharwar Taluka
43.	Navilūr	-	-	Inscriptions of Dharwar Taluka
44.	Nigadi	1925-26	466	SII. XI-u 160
45.	Nuggikēri	-	-	Inscriptions of Dharwar Taluka
46.	Nuggikēri	-	-	Inscriptions of Dharwar Taluka
47.	Bāḍa	1925-26	436	SII. XV 551
48.	Bōkyāpur	1925-26	443	SII. XV 230
49.	Bhāvihāḷ	1925-26	444	SII. XV 9
50.	Madanabhāvi	1925-26	450	SII. XV 16
51	Managuṁḍi	1925-26	437	KK. p. 404- 17 SU. XV 233 KI. V 32 and 67
52	Managuṁḍi	1925-26	438	KK. p. 401-3 KI. V 31 and 69
53	Managuṁḍi	1925-26	439	KK. p. 418-27 KI. V 68 and 70
54.	Managuṁḍi	-	-	Inscriptions of Dharwar Taluka
55.	Managuṁḍi	1925-26	440	SII. XV 651
56.	Mugad	1925-26	459	SII. XI-i 78
57.	Mugad	1925-26	458	SII. XI-u 177
58.	Mugad	1925-26	456	SII. XI-u 211
59.	Mugad	1925-26	457	SII. XV 553
60.	Mugad	-	-	Inscriptions of Dharwar Taluka
61.	Mugad	-	-	Inscriptions of Dharwar Taluka
62.	Mummigaṭṭi	-	-	EI. XVII p. 117-120
63.	Rāyāpur	-	-	Inscriptions of Dharwar Taluka

64.	Veṁkaṭāpur	1925-26	454	SII. XV 227
65.	Siṁganahaḷḷi	1925-26	452	SII. XV 7
66.	Siddāpur	1925-26	460	SII. XI-u 194
67.	Siddāpur	1925-26	461	SII.XV 14
68	Siddāpur	1925-26	44	IA XI p. 273-74 SU. XV 229
69.	Siddāpur	1925-26	462	SII. XV 554
70.	Siddāpur	1925-26	463	SII. XV 555
71.	Hebbaḷḷi	-	-	Inscriptions of Dharwar Taluka
72.	Hebbaḷḷi	-	-	Inscriptions of Dharwar Taluka
73.	Hebbaḷḷi	-	-	Inscriptions of Dharwar Taluka
74.	Hebbaḷḷi	-	-	Inscriptions of Dharwar Taluka

It is clear from this list that out of seventy four inscriptions twenty five are being published for the first time. If we leave out the three inscriptions that were mentioned in the reports earlier (No.1, 6, 35), the remaining twenty two epigraphs are totally new. Out of one hundred and sixty three villages in the Dharwar taluka, there are inscriptions in twenty eight villages only. But if a survey is made in each village, it is possible to get new inscriptions equal to the number we have at present.

Nature of the Project

Since the main aim of this project is to publish the inscriptions in all perfectness, it is necessary to adopt a scientific method. Therefore, on the basis of the systems followed by the former scholars, a new system has been formed. This system has three stages:

The first stage: The serial number of the inscription, the name of the village where it, was found and the date of the epigraph have been put one under the other in the centre column.

The serial numher of the inscriptions in the ARSIE has been shown in the left side column and under it the serial number of the inscription in **the Dhārawāḍa Jilleya Śāsana Sūchi** have been mentioned. This (-) mark wherever it occurs in this column, shows that it was not noticed previously either in the reports or indices. The volumes and joumals in which the inscriptions have been published are mentioned on the right side. Similarly, this (-) mark means that it was not published previously.

The second stage: Here a summary has been given with an introduction to the inscription. The village and the exact place where the inscription stands, its position, the king and the feudatory of that time, the incident that gave inspiration to write that inscription, the date of the inscription appear in this second stage. This (●) mark is put against the noteworthy matter.

The third stage: Here an edited text of the epigraph has been given. The Kannada script has been used here irrespective of the script in the original. In editing the epigraphs the conventional signs used by the earlier scholars have been adopted. The length of the line in the original has been retained and in place of erased or broken letters, equal number of dots are put. A square bracket has been used where our guess seems to be apt. And a round bracket has been used where the faulty text is corrected. This [11*] marks the end of a prose passage, whereas this [11*] with a number marks the end of a verse. Footnotes give additional information regarding the text.

Thus each epigraph has three stages. Then for the use and benefit of non-Kannada scholars, the summary of the epigraph is given in English and its transliteration in the Roman script.

2 | A Study of the Inscriptions of Dharwar Taluka

The inscriptions are authentic records of the life of the people, and the subjects dealt in them are also as much elaborate and varied as their life. We have to collect the scattered matter and analyse it in order to obtain a true picture of the people. We can therefore, draw its political, religious and social picture as follows, with the help of the epigraphs of this taluka :

Political

In developing the ancient Karnataka the Royal Power was the most important one. Royal families used to play leading role in the life of the country. Feudatories and the kings served under the Emperor, who was the highest authority in the country. Nālgāvuṁḍas and the Gāvuṁḍas served under the feudatories and the kings. Thus the system of administration spread from the Emperor to the Gāvuṁḍas.

No epigraphs of the Mauryās, the Sātavāhanās, the Kadaṁbās of Banavāsi, Chālukyās of Badāmi in the Dhārwar taluka are found. Inscriptions of the Rāshṭrakūṭas, the Chalukyas of Kalyāṇa, the Kalachuris, the Yādavās, the Vijayanagar Kings and the Kadambās of Goa have been found and they give the political history of Dhārwar taluka as follows:

The Rāshṭrakūṭas: The Rāshṭrakūṭa inscriptions are the oldest in this taluka. Though they do not mention the king, it can be said on the style of the epigraph, that the Aṁbaḷḷi (1* about the 9th century A. D.), Kalle (16* about the 8th century A. D.) and Dharwar (29, 30*about the 9th century A. D.) epigraphs are related to the Rāshṭrakūṭas. All the others except that of the Dharwar (30) are hero-stones.

The Chālukyas of Kalyāṇa: After the Rāshṭrakūṭas, the Chālukyas of Kalyāṇa reigned over Karnataka. A number of inscriptions of these emperors and their feudatories have been found in the Northern Karnataka, The Dharwar taluka is not at all an exception. Among the inscriptions related to this family found in this taluka, the Mugad inscription of A. D. 1045 of Sōmēśvara I. is the first one and that of Managuṁḍi (52) related to Sōmēśvara IV is the last one. Between these two the epigraphs of Vikramāditya VI, Sōmēśvara II and Jagadēkamalla II are found. Though these epigraphs were generally written by the Kadaṁbas of Goa they mention the Chālukyas of Kalyāṇa just because they happened to be their emperors.

The Mugad inscription (56* 1045) mentions Sōmēśwara I and his feudatory Chaṭṭayadēva II, of the Goa Kadaṁba family.

Next to this are the inscriptions of Vikramāditya VI. All the inscriptions of this family including that of Vikramādity VI, name the era of the king Vikramāditya generally. The Amminabhāvi epigraph (2* 1071-72) mentions the reign of Vikramāditya VI though actually his brother Sōmēśvara II was ruling. Then Jayakēśi I, the Kadaṁbas of Goa, was the feudatory. The Tēgūr (26* 1082), the Kanakūr(15* 1104), the Mugad (57* 1125,58* about the 12th century A.D-) epigraphs mention the emperor Vikramāditya VI first, and then the feudatory Guvaladeva III, while the Nigadi epigraph (44* 1111) mentions Gūvaladēva III first and then Vikramāditya VI. The Mummigaṭṭi epigraph (62* 1124) mentions Jayakēśi II who according to and the Narēṁdra epigraph (39* 1I25) was married to Maiḷaladēvi the daughter of Vikramāditya VI. All the other-the Dharwar (32* 1111), the Amminabhāvi (3* 1112), the Dharwar (33* 1117), the Siddāpur (66* 1120) and the Narēṁdra (40* 1127). epigraphs mention either Vikramaditya VI's name or his era.

Sōmēśvara III succeeded Vikramāditya VI. It is possible that his name might have been there in the broken part of the Madanabhāvi epigraph (50* I127). However the mention of the feudatory Jayakēśi II is clear in it. Possibly the phrase 'Chāḷukya Bhūlōka varisa' in the Siddāpur epigraph (67* 1135) mentions him and tho feudatory Jayakēśi II.

The Amminabhāvi epigraph (4* 1146) says that Jagadēkamalla, who succeeded Sōmēśvara III, became 'Tulāpurusha.'

Sōmēśvara IV regained the Chālukya kingdom from the Kalachuris who had taken it over a few years ago. He must be the same Tribhuvanamalla, who is mentioned in the epigraphs of Managuṁḍi (51 and 52).

Thus the inscriptions of Dharwar taluka give us the political history of the Chālukyas of Kalyāṇa.

The Kalachuris: The Kalachuris came to the throne defeating the Chālukyās of Kalyāṇa. The Rāyāpur copper-plate is the only record of this dynasty available in the Dhārwar tāluka. It says that Āhavamalla, the son of Bijjaḷa, donated Bellavur village to the Brahmins of Dēvarahubbaḷḷi.

The Yādavas: The Yādavas, who were the feudatories, became the emperors by defeating the Chālukyas of Kalyāṇa. Of the inscriptions of this dynasty the Hebbaḷḷi (71* 1244) epigraph is the first one and that of Garag (20* 1287) is the last one. One epigraph of Hebbaḷḷi (71′ 1244) was written at the time of Siṁgaṇa and the other (72* 1248) at the time of his grand-son Kannara. The Koṭabāgi epigraph (17* 1264) belongs to the period of Mahādēva, Kannara's brother and the Taḍakōḍa epigraph (25* 1282) to the period of Rāmachaṁdradēva, The Garag (20* 1287) epigraph which mentions the reign of Rāmachaṁdradēva is the last epigraph of the Yādavas available in this taluka. The Koṭabāgi inscription mentions Chaṭṭayadēva III of the Kadaṁbas of Goa, as if he were a feudatory of the Yādavas.

The Vijayanagar Kings: Three inscriptions of the Vijayanagar kings are found in the Dharwar taluka. Among these the Dharwar epigraph (36* 1448) syas that a Naṁdi-staṁbha was erected to commemorate the coronation of Mallikārjuna. The Dēvarahubbaḷḷi (28* 1547) and the Amminabhāvi epigraphs (9* 1547) say that Rāmarāya exempted Timmōja Koṁḍōja and Bhadrōja from paying the barber tax.

The Maṁḍa1ēśvaras: The only Maṁḍalēśvara dynasty found mentioned in the epigraphs of this taluka is of the Kadaṁbas of Goa. They ruled a vast kingdom for three centuries from Goa. They were the feudatories of the Chālukyās first and of the Yādavas later. The following is the epithet of this family:

"Svasti samadhigata-paṁchā-mahā-śabda mahāmaṇḍaḷēśvaraṁ Banavāsî-pura-var-ādhiśvaraṁ samasta bhuvana-saṁstūyamānaṁ Hara- Dharaṇi - prasūtaṁ Triḷōchana - Kadaṁba-vaṁś = ānvayaṁ mahîdharēṁdra-śikhar-ābhyu-dayamāna- mahā- prachaṇḍa- mārttaṇḍa mārttaṇḍa-kar-āti-tîbra-nija-pratāpa-vasîkrata-sakaḷa-mahî-maṇḍaḷan = uttuṁga-siṁha-lānhhanaṁ vānara-mahā-dhvajaṁ permmaṭṭi- tūryya-nirgghshaṇaṁ chatur - āśîti - nagar - ādhishṭhitan - ashṭādas - āśvamēdha.-dîkshā-dîkshita-kuḷa-prasūtaṁ Himavad = girîṁdra-ruṁdra-śikhar-āsthāpita - mahā-sakti-prabhāvaṁ tyāga-jaga-jhampi Jhampaḷ āchāryyaṁ niśśaṁka-Rāmaṁ śu-bhaṭa- kanaka - nikaś - ōpha(pa)ḷaṁ śaraṇ - āgata - vajra- prākāraṁ lōkāika- kaḷpa-drumaṁ saṁkrānti-dhavaḷaṁ mūrtti-

Nārāyaṇaṁ kîrtti-mārttaṇḍaṁ maṁḍaḷika-lalāṭa-paṭṭa vairi-gharaṭṭa-subhaṭa-rāja-śikhāmaṇi Kāḍaṁba-chūḍāman = ity = akhiḷa - rājāvaḷi- samāḷaṁ kritar = appa śriman - mahāmaṇḍaḷēśvaraṁ"[1]

Among the epigraphs of this dynasty, the Mugad epigraph is the first one and that of the Koṭabāgi (19* 1264) is the last one. About half of the epigraphs of this family maintain derisive silence about the emperor, while the Nigadi (44* 1111) epigraph praises at first Gūvaladēva and then the Vikramāditya VI. This indifference to the emperor shows their arrogance and ambition. Their blood relationship with Vikramāditya VI the great, speaks of their greatness. About thirty epigraphs of the Kadaṁbās of Goa, who were so close to the emperor have been found in this taluka.

The Mugad (56* 1045) epigraph says that Chaṭṭayya II was a feudatory of Sōmēśvara I. The Amminabhāvi (2* 1071-72) epigraph which tells us that Goa was the capital of the Kadaṁbasa, shows Jayakēśi I as a feudatory to Vikramāditya VI. Another speciality of this epigraph is that it takes the reign of Vikramāditya VI six or seven years back. Of the seven epigraphs of Gūvaladēva III, the Tēgūr (26* 1082), the Kanakūr (15* 1104) and the Mugad (57* 1125, 58* about the 12th century A. D.) epigraphs mention the emperor first and the feudatory Guvāladēva afterwards, whereas in the Nigadi epigraph (44* 1111) the feudatory is put first and the emperor next. The next of two epigraphs of Aḷnāvar (11* 1081,12* 1100) omit the emperor and mention only feudatory. This is an indication that they might have tried to become independent since the times of Gūrvaladēva III. It is mentioned in the Kanakūr epigraph (15* 1104) that Jayakēśi, on the occasion of his marriage ceremony, donated Kanakūr to

---

1. "ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಬನವಾಸಿಪುರವರಾಧೀಶ್ವರಂ ಸಮಸ್ತಭುವನಸಂಸ್ತೂಯಮಾನಂ ಹರಧರಣೀಪ್ರಸೂತಂ ತ್ರಿಳೋಚನಕದಂಬವಂಶಾನ್ವಯಂ ಮಹೀಧರೇಂದ್ರ ಶಿಖರಾಭ್ಯುದಯಮಾನ ಮಹಾಪ್ರಚಣ್ಡ ಮಾರ್ತ್ತಣ್ಡ ಮಾರ್ತ್ತಣ್ಡ ಕರಾತಿತೀಬ್ರನಿಜಪ್ರತಾಪವಶೀಕೃತ ಸಕಳ ಮಹೀಮಣ್ಡ ಳನುತ್ತುಂಗಸಿಂಹಲಾಂಛನಂ ವಾನರಮಹಾಧ್ವಜಂ ಪೆರ್ಮ್ಮಟ್ಟಿತೂರ್ಯ್ಯನಿರ್ಗ್ಘೋಷಣಂ ಚತುರಾಕೀತಿನಗರಾಧಿಷ್ಠಿತನಷ್ಟಾದಶಾಶ್ವ ಮೇಧದೀಕ್ಷಾದೀಕ್ಷಿತಕುಳಪ್ರಸೂತಂ ಹಿಮವದ್ಗಿರೀಂದ್ರರುಂದ್ರಸಿಖರ ಸ್ಥಾಪಿತಮಹಾಶಕ್ತಿಪ್ರಭಾವಂ ತ್ಯಾಗಜಗಝುಂಪಿಝುಂಪಳಾಚಾರ್ಯ್ಯಂ ನಿಶ್ಯಂಕರಾಮಂ ಶುಭಟಕನಕನಿಕಶೋಪಳಂ ಶರಣಾಗತವಜ್ರಪ್ರಾಕಾರಂ ಲೋಕೈಕಕಳ್ಪದ್ರುಮಂ ಸಂಕ್ರಾನ್ತಿಧವಳಂ ಮೂರ್ತ್ತಿನಾರಾಯಣಂ ಕೀರ್ತ್ತಿಮಾರ್ತ್ತಣ್ಡಂ ಮಂಡಳಿಕಲಲಾಟಪಟ್ಟ ವೈರಿಘರಟ್ಟ ಸುಭಟರಾಜಶಿಖಾಮಣಿ ಕಾಡಂಬಚೂಡಾಮಣೀತ್ಯ ಖಿಳ ರಾಜಾಳೀಸಮಾಳಂಕ್ರಿತರಪ್ಪ ಶ್ರೀಮನ್ಮಹಾಮಣ್ಡಳೇಶ್ವರಂ"

Saurāshṭra Sōmanātha at Gūvaladēva's order. The Mugad (57* 1125) epigraph is the last one of Gūvaladēva III.

There are a good number of epigraphs of Jayakēśi II in this taluka. He was a feudatory of Vikramādltya VI, Sōmēśvara III and Jagadēkumalla II. SiṁganaIII (65* 1123-24), Narēṁdra (33* 1123, 1125, 1126), Gūgikaṭṭi (23* 1124), Mummigaṭṭi (62* 1124), Bhāvihāḷ (49* 1123), Narēṁdra (39* 1125), Madanabhāvi (50* 1127, lJ34), Siddāpura (67* 1135) and Veṁkaṭāpur (64* 1136) epigraphs of Dhārwar taluka belongs to him. Among these, the first six belongs to Vikramāditya VI, and the remaining three belong to the time of Sōmēśvara III. Among these nine epigraphs, the Mummigaṭṭi epigraph accepts the sovereignty of Vikramāditya VI, the Siddāpur and Veṁkaṭāpur epigraphs accept the sovereignty of Sōmēśvara III, and the other six mention this feudatory only. The Narēṁdra epigraph (39* 1(25) describes the fame of this dynasty graphically as follows: Chaṭṭayadēva II won the Kavaḍi-Dvipa etc. built a bridge of ships upto Laṁka , went to Saurāshṭra by ship and worshipped Sōmanātha. While retuming he married the daughter of Mummari Nripa of Ṭhāṇa. His son Jayakēśi I defeated the Emperor of Āḷvā, gave his daughter in marriage to Vikramāditya VI and went to Kalyāṇa, where he was honoured by the Emperor. He also defeated the Chōḷas, His elder son was Gūvaladēva III and the younger Vijayāditya I. Jayakēśi II was the son of Vijayāditya 1. Vikramāditya VI gave his daughter Maiḷaladēvi in marriage to Jayakēśi II with munificent gifts.

The area "Koṁkaṇa-voṁbh-aynūṟ- Uṇukal-Sabbiy-eraḍu-mūvattu Kontakuḷi. mūvattu Hānuṁgall-aynūṟ = Utsugrāme-Kādaravaḷḷiy-eraḍu-mūvattu Poḷ alagunde- muvattu Vēḷugrāmey-eḷpattu Haivey-aynuṟu kavaḍi-dvîpa-sava-lakkha" is the biggest territory of the Kadaṁbas. As mentioned in the Narēṁdra epigraph, it was ruled by Maiḷaladēvi (Jayakēśi II). According to the Gūgikaṭṭi epigraph, Maiḷaladēvi installed the idol of Kēśavadēva, Their sons Śivachitta-permāḍidēve and Vishuṇu chitta- Vijayādityadēva as generally mentioned together elsewhere are mentioned together here in the Siddāpur (68* 1158), Bōkyāpur (48* 1136). Rāyāpur (63* 1182) epigraphs. The last of these mentions the brothers soon after the Kalachuris. In the first three epigraphs there is no mention of the Emperor because they did not accept the Kalachuris, who had dethroned the Chālukyas of Kalyāṇa as their emperor.

Jayakēśi III, the son of Vishṇuchitta- Vijayāditya, succeeded his uncle Śivachitta Permāḍidēva. The Managuṁḍi (52* 1203), Managuḍmi (51 * 1203, 1211), Garag (19* 1204-5), Dēvarahubbaḷḷi (27* 1206) and Managuṁḍi (52* 1207) epigraphs were written during his period. One of the Managuṁḍi (51* 1203) epigraph mentions the Emperor Sōmēśvara IV first, whereas the other (52* 1207, 1218) mentions the feudatory first. The remaining epigraphs are silent about the emperor. Afterwards, Vajradēva, the son of Jayakēśi III came to the throne. His mention is made in the later part of the three Managuṁḍi (51, 52 and 53) epigraphs. Afterwards Chaṭṭayadēva III, the son of Tribhuvanamalla, the brother of Jayakēśi III, came to the throne. He is mentioned in the Koṭabāgi (17* 1264) epigraph along with the king Mahādēva of the Yādava dynasty.

Thus these Kadaṁbās got many epigraphs written in Dhārwar taluka and ruled with glory. A noteworthy fact is that Maiḷaladēvi, the queen of Jayakēśi II, appears often with glorious titles. There are signs of her having ruled independently.

The Sāmaṁtas: Of the two Sāmaṁta dynasties who ruled over Dhārwar taluka, one is of Lakshmarasa and the other is of Chāvuṁḍagāvuṁḍ a. One epigraph of Narēṁdra (38* 1123) describes Laksehmarasa, and the other (39* 1125) describes Lakshmarasa and his descendents as follows:

Lakshmarāja (Lakshmarasa)

Bhavyarāja + Gaṁgā

Sōmavibhu

Siṁhadaṁḍādhipa + Maiḷaladēviyakka

Boppadēva

The Narēṁdra epigraph (38* 11 23) describes Lakshmarasa in four verses and speaks of his honarary titles as: "Svasti samadhigata-paṁcha-mahā-śabda mahā-sāmant-ādhipati mahā-prachaṇḍa-daṇḍanāyakaṁ vibdha-vara-dāyaka gōtra- pavitra par-āṁganā-putra bandhu-chintāmaṇi vivēka-chūḍāmaṇi nām-ādi-samasta-praśa sti-sahitaṁ śrîman-mahā-pradhānan= antaḥpur-ādhyaksha pasāytaṁ śrîman-Maiḷala-Mahādēviyara mane-verggaḍe śrîmad-daṁḍ anāyaka."[1]

60 [yaka*] 1 māna aki(kki) Kēśava - dēvarige 2 mān = akki daṇḍanāyaka 1 mān = akki | Brahmaṁge 2 mān = akki daṇḍanāyaka 1 mān = aki(kki) Bhairava-dēvarige 3 mān = akki daṇḍanāyaka 2 . . .

೩೯

ನರೇಂದ್ರ

ಕ್ರಿ. ಶ. ೧೧೨೫

AR. 1958-59, No. 528 **EI. XIIIp 298**

ಧಾಜಿಸೂ, ನಂ. ೩೬

ಈ ಶಾಸನ, ನರೇಂದ್ರ ಗ್ರಾಮದಿಂದ ೧ ಕಿ. ಮೀ. ದೂರದಲ್ಲಿ ಸಮೂಲ ನಾಶವಾಗಿರುವ ಮಲ್ಲಿಕಾರ್ಜುನ ದೇವಾಲಯದ ಸ್ಥಳದಲ್ಲಿ ನಿಂತಿದೆ. ಶಾಸನ ಸಾಧಾರಣ ಸ್ಥಿತಿಯಲ್ಲಿದೆ. ಕೆಲವಡೆ ಅಕ್ಷರಗಳು ಸವೆದು ಇಲ್ಲವೆ ಒಡೆದು ಹೋಗಿವೆ. ಕಲ್ಯಾಣಚಾಲುಕ್ಯ ಸಾಮ್ರಾಟನಾದ ೬ನೆಯ

---

1. The word 'Paṭṭaṇda' which seems to be the original, must have been read by mistake as 'Paṭṭināḍa'.

2. The hand-writing is different and clumsy from this portion.

ವಿಕ್ರಮಾದಿತ್ಯ, ಮಹಾಮಂಡಳೇಶ್ವರ ಗೋವೆಯ ಕದಂಬವಂಶದ ೨ನೆಯ ಜಯಕೇಶಿ ಹಾಗೂ ಆತನ ಪಟ್ಟದ ರಾಣಿ ಮೈಳಲದೇವಿಯರ ಕಾಲದಲ್ಲಿ ಈ ಶಾಸನ ಹುಟ್ಟಿದೆ.

ಮೈಳಲದೇವಿಯ ಮನೆವೆರ್ಗಡೆಯಾಗಿದ್ದ ಸಿಂಗರಸನು ಕುಂದೂರ ಗ್ರಾಮದಲ್ಲಿ ದೇವಾಲಯ ನಿರ್ಮಿಸಿ, ಪ್ರತಿಷ್ಠಾಪಿಸಿದ ಲಕ್ಷ್ಮಣೇಶ್ವರ ದೇವರಿಗೆ ಒಂದು ಪುರವನ್ನು, ಐವತ್ತು ಮತ್ತರ ಭೂಮಿಯನ್ನು ಹಾಗೂ ಕಾವಲಗೇರಿ ಗ್ರಾಮವನ್ನು ದಾನವಾಗಿ ಕೊಟ್ಟ ವಿಷಯವಿಲ್ಲಿದೆ. ಸಾಲು ೧೦೮-೯ ರಲ್ಲಿ "ಶಕವರ್ಷಂ ೧೦೪೭ನೆಯ ವಿಶ್ವಾವಸು ಸಂವತ್ಸರದ ಭಾದ್ರಪದ ಬ ೧೩ ಶುಕ್ರವಾರ ಮಹಾತಿಥಿ ಯುಗಾದಿ" ಎಂದು ಮಿತಿ ಹೇಳಲಾಗಿದೆ. ಇದು ಕ್ರಿ. ಶ. ೧೧೨೫, ಅಗಸ್ಟ ೨೮, ಶುಕ್ರವಾರಕ್ಕೆ ಸಮಾನವಾಗಿದೆ.

- ಈ ಹಾಳುಊರಿನ ಹೆಸರು ಕುಂಭಾಪುರವೆಂದು ಡಾ. ಬಾರ್ನೆಟ್ ಹೇಳುತ್ತಾರೆ. ಶಾಸನದಲ್ಲಿ ಯುಗಾದಿಯನ್ನು "ಮಹಾತಿಥಿ" ಎಂದು ಕರೆದುದು ಗಮನಾರ್ಹ.

೧ ಶ್ರೀ ಓಂ ನಮಶ್ಶಿವಾಯ ॥ ನಮಸ್ತುಂಗಶಿರಶ್ಚುಂಬಿಚಂದ್ರಚಾಮರ ಚಾಮರವೇ [।*]
ತ್ರೈಲೋಕ್ಯನಗರಾರಂಭಮೂಲ ಸ್ತಂಭಾಯ ಶಂಭವೇ ॥ [೧*] ಶಿವಾಯ ಓಂ [॥*]

೨ ಶ್ರೀಕಾನ್ತಾಕಾನ್ತತುಂಗಸ್ತನಯುಗನಿಬಿಡಾಲಿಂಗಿತೋರಸ್ಥಳಂ ಲೋಕಯ್ಯ
ಪ್ರಸ್ತುತ್ಯದೋರ್ಮ್ಮಣ್ಡಿತಸಮರ ಜಯಶ್ರೀ ಪತಾಕಂ

೩ ಧರಿತ್ರೀಪ್ರಾಕಾರಪ್ರಾಯಧೈರ್ಯ್ಯಂಪ್ರಕಟಿತಮಹಿಮಂ ಪ್ರಾಜ್ಯಕಾದಂಬರಾಜ್ಯಶ್ರೀ
ಕೇಳೀಲೀಲೆಯೊಳ್ ತಳ್ತೆಸೆಗನವರತಂ ಪಶ್ಚಿ-

೪ ಮಾಂಭೋಧಿನಾಥಂ ॥ [೨*] ಶ್ರೀಮತ್ತ್ರೈಲೋಕ್ಯನಾಥಂ ತ್ರಿಪುರವಿಜಯಮಂ
ಭಾಳಲೋಳಾಕ್ಷಿಯಿಂದುದ್ದಾಮಂ ಮಾಡಲ್ಕೆ ಬೇಗಂ ಶ್ರಮಮೊಡರಿಸೆ ಬಂ-

೫ ದೊಂದು ಭಾಸ್ವತ್ಕದಂಬಾರಾಮೋದ್ಯಚ್ಛಾಯೆಯೊಳ್ ನಿಂದೆಸೆವ ಬೆಮರುನುರ್ವ್ವೀತಳಕ್ಕಿಕ್ಕೆ
ಲಕ್ಷ್ಮೀಧಾಮಮಂ ಪುಟ್ಟಿತ್ತು ಭೂಭೃನ್ಮಕುಟಮಣಿಗಣಾಳಂಬ-

೬ ಕಾದಂಬವಂಶ ॥ [೩*] ಕಂದ ॥ ಆ ವಂಶದಲ್ಲಿ ಸೌಂದರ್ಯ್ಯಾವಿಷ್ಕೃತಮೂರ್ತ್ತಿಗಳ್
ದಿಶಾಗಜದಂತಪ್ರಾವೃತಕೀರ್ತ್ತಿಗಳಸುಹೃಜ್ಜೀವಾಕರ್ಷ-

೭ ಪ್ರಪೂರ್ತ್ತಿಗಳು ಪಲರೆಸೆದರ್ ॥ [೪*] ಆ ಮಹಾಮಹೀಶರೊಳಗೆ ॥
ಜಯಲಕ್ಷ್ಮೀನರ್ತ್ತಲೀನರ್ತ್ತನಪರಿಣತಶೈಲೂಷನುರ್ವ್ವೀವಧೂಟೀಪ್ರಿಯಭಾಸ್ವ[ನ್]-

೮ ನೂತ್ನರತ್ನಂ ಭುವನಭವನದೀಪ್ಾಯಮಾಜನ ಪ್ರತಾಪೋದಯನುದ್ಯ
ತ್ಪಶ್ಚಿಮಾಂಭೋನಿಧಿಪತಿ ಧರೆಯೊಳ್ ಬಾಪ್ಪುಸಾಮಾನ್ಯನೇ ಚಟ್ಟಯದೇವಂ
ದೇವರಾಜಪ್ರಕಟಿತ-

೯ ವಿಭವಂ ಸ್ವೀಕೃತಾಶ್ಚರ್ಯಶೌರ್ಯ್ಯ ॥ [೫*] ಕವಡಿದ್ವೀಪಮುಮಾದಿಯಾಗೆ ಪಲವುಂ ದ್ವೀಪಂಗಳಂ ಕೊಣ್ಡು ಲಂಕೆವರಂ ತಳ್ತ ಬಹುತ್ರಸಂತತಿಗಳಿಂದಂ ಸೇತುವಂ ಕಟ್ಟಿ ಕಪ್ಪುವನುಗ್ರಾಸುರ–

೧೦ ರಲ್ಲಿ ಬೇಡೆ ಪಲರುಂ ರಾಮಪ್ರತಿಷ್ಠಾಗ್ರಹಾರವೆನಲ್ಮಾಣ್ಡಳವತ್ಯುದಾತ್ತ[ವೆ]ನಿಕುಂ ಕಾದಂಬಚಕ್ರೇಶನ ॥

[೬*] ಬನವೆತ್ತಂ ಧವಳಾರವಂ ಕಡಕಳಂ ವೈಹಾಳಿ ಪೂದೋಂಟವಿಂಬಿನೆ

೧೧ ತಳ್ತಂಗಡಿ ಸೂಳೆಗೇರಿ ಕೆಱೆಗಳ್ಕಣ್ಗೊಪ್ಪಮಮ್ಮಾಡೆ ನೆಟ್ಟನೆ ಭೈತ್ರಂಗಳ ಮೇಲೆ ಗೋವೆವೆರಸಂಭೋ ರಾಶಿಯೊಳ್ ಲೀಲೆಯಿಂ ವನಧೀಶಂ ನಡೆದಂ ಮಹಾಮಹಿಮೆಯಿಂ

೧೨ ಸೌರಾಷ್ಟ್ರದೇಶಂ ಬರಂ ॥ [೭*] ಅಣಕಂ ಪೇಳ್ವಡೆ ಸೋಮನಾಥವಿಭುವಂ ಕರ್ಪ್ಪೂರದಿಂದೆಯ್ದೆ ಪೂರಣೆಯಂ ಮಾಡಿ ಬಳಿಕ್ಕೆ ಕಬ್ಬಿಲರದಂ ನಿರ್ಮ್ಮಾಲ್ಯಮಂ ಕೂಡೆ ದಾರಿಣಿಯೊ–

೧೩ ಳ್ತೋಱುಗುವೆಂದು ಸುಟ್ಟು ಬೆಲೆಯಂ ಬೇಪ್ಪರ್ನ್ನೆಗಂ ಕೊಟ್ಟು ಭೂಷಣಮಾದಂ ಭುವನಕ್ಕೆ ಚಟ್ಟಯನೃಪಂ ವಿ[ತ್ರ]ಸ್ತವಿದ್ವಿಡ್ನೃಪ ॥ [೮*] ನೆಗಳ್ದ ತುಳಾಪುರಷಮನೇನಗ–

೧೪ ಣಿತವೆನಲಿರ್ದ್ದು ಪಲವು ಪೆಸರೂರ್ಗ್ಗಳವೀ ಜಗವಱಿಯೆ ವಿಪ್ರಸಮಿತಿಗೆ ಮಿಗೆ ಕೊಟ್ಟಂ ನೃಪಲಲಾಟಪಟ್ಟಂ ಚಟ್ಟ ॥ [೯*] ಎನಿತೊಳವೆ ಯಜ್ಞ ಕೋಟಿಗಳನಿತುಂ ಮನ–

೧೫ ಮುದದೆ ನೆಱೆಯೆ ಮಾಡಿಸಿ ನೆಗರ್ದ್ದಿರ್ದ್ದನಿತೊಳವೆ ದಾನಕೋಟಿಗಳನಿತುಮನಿತ್ತಂ ದ್ವಿಜರ್ಗ್ಗೆ ಚಟ್ಟಯದೇವ ॥ [೧೦*] ಶರನಿಧಿಯೊಳ್ ವಿಳಾಸದೊಳೆ ಚಟ್ಟಯದೇವನು–

೧೬ ದಾತ್ತವಿಕ್ರಮಂ ಬರೆ ನೆಗರ್ದ್ದಿರ್ದ್ದ ಠಾಣೆಯದ ಮುಮ್ಮುರಿ ಕೇಳ್ದಿದಿರ್ವ್ವನ್ದು ಕಣ್ಡು ತನ್ನರಮನೆಗೊಯ್ದು ಭಕ್ತಿಭರಮಂ ಮೆಱೆಯುತ್ತಿರೆ ಪುತ್ರಿಯಂ ಸವಿಸ್ತರ–

೧೭ ದೊಳೆ ಕೊಟ್ಟು ಕೊಟ್ಟನಳಿಯಂಗೆ ಸುವರ್ಣ್ಣಮನಯ್ದುಲಕ್ಕಮಂ ॥ [೧೧*] ಎನಗಿರಿ ಪ್ರತ್ಯು[ಪಕಾರ] [– U U]ವೆ ಬೇಱೆನ್ನೇನನಾಂ ಮಾಳ್ಪೆನೀ ವನಧೀಶಂಗೆನುತಂತೆ ಮುಮ್ಮುರಿನೃ–

೧೮ ಪಂ ಶ್ರೀ ಚಟ್ಟಭೂಪಂಗೆ ನೆಟ್ಟನೆ ಕೊಟ್ಟಂ ಧರೆ ಮೆಚ್ಚೆ ಚಾಗಜಗಝಂಪಂ ಝಂಪಳಾಚಾರ್ಯ್ಯನೆಂ[UU––U]ಯನಾಳ್ದು ಮಾಳೆಯನೆನಲ್ಕಾರ್ದ್ಧನ್ಯರಿಂತುರ್ವ್ವಿಯೊಳ್ ॥ [೧೨*]

೧೯ ಅನ್ತು ನೆಗರ್ತ್ತೆಯಂ ತಳೆದ ಚಟ್ಟಯದೇವನ ನನ್ದನಂ ದಿಶಾಕಾನ್ತೆಯರಂ ನಿಜಪ್ರಬಳಕೀರ್ತ್ತಿಸು [ಧಾರಸವಾರ್ಧಿಪೂರ]ದೊಳ್ತಿಂತಿಣಿಯಾಗೆ ಕೂಡೆ ಜಳಕೇಳಿಯನಾಡೆ ಸರಾ–

೨೦ ಗದಿನ್ದೆ ದಿಗ್ದಂತಿಗಳಂ ಮುಳಿಂಗಿಸಿದನೂರ್ಜ್ಜಿತದಾನಜಳಪ್ರವಾಹದಿ ॥ [೧೩*] ಪಲವುಂ ಯಜ್ಞಮನೊದವಿಸಿ ಪಲವುಂ ತುಳಾಪುರಷವಿರ್ದು ಋತ್ವಿಜರ್ಗ್ಗೆಲ್ಲಂ ಪ–

೨೧ ಲವಗ್ರಹಾರಮಂ ಬಿಟ್ಟೊಲವಿಂ ಜಯಕೇಸಿ ಕೀರ್ತ್ತಿಯಂ ಪ್ರಕಟಿಸಿದ ॥ [೧೪*] ತೋಳ್ವಲಮುಂ ಪದಾತಿಬಲಮಂ ಪಿರಿದುಂಟೆನಗೆನ್ದು ಗರ್ವ್ವದಿಂದಾಳ್ವರ ಚಕ್ರ[ವ]–

೨೨ ರ್ತ್ತಿ ಮಲೆಯಲ್ ಜಯಕೇಸಿನೃಪಾಳನೆತ್ತಿ ಬಂದೇಳ್ವರಲಿಕ್ಕೆ ಜಿಂಕರಿಸಲೋಡಿಸಿ ತೆತ್ತಿಸಿದಂ ವಿರೋಧಿ ಬೆಂಕೊಳ್ವನೆನಿಪ್ಪ ಪೊನ್ನೊಱೆಯನಾ ರಿಪುರಾಜನ ರಾಜ–

೨೩ ಧಾನಿಯೊಳ್ ॥ [೧೫*] ಮುದದಿಂ ತನ್ನಯ ದೇಶದತ್ತಲಧಿಪಂ ಪೆರ್ಮ್ಮಾಡಿದೇವಂ ಬರಲ್ಕಿದಿರ್ವ್ವನ್ದಾಗಡೆ ಕೂರ್ಪ್ಪ ತನ್ನ ಮಗಳಂ ಧಾರಾನ್ವಿತಂ ಕೊಟ್ಟು ಪೆರ್ಚ್ಚಿದಲಂಪಂ ಪಲವ–

೨೪ [U]ಯಂ ಕುಮರೆಯಂ ಭಣ್ಡಾರಮಂ ಲೆಕ್ಕವಿಲ್ಲದೆ ತೆಲ್ಲಂಟಿಯನಾರ್ತ್ತು ಕೊಟ್ಟು ನೆಗಳ್ದಂ ಲೋಕೈಕಕಳ್ಪದ್ರುಮ ॥ [೧೬*] ತದನಂತರಂ ॥ ಎಲೆ ಪೆರ್ಮ್ಮಾಡಿ ನೃಪಾಳ[–U]ನೊಲ–

೨೫ ವಿಂದಂ ಪೋಗಿ ಕಲ್ಯಾಣದೊಳ್ವಲರುಂ ಮಣ್ಡಳನಾಥರಾನಱೆವೆ ವಂದಿರ್ಬ್ಬೆಕ್ಕಸಂಬಟ್ಟಿರಲ್ ಚಲದಿಂ ಪಟ್ಟಮನೊಲ್ದು ಕಟ್ಟಿದಪನೆಂದಾವೇಗದಿಂದೆತ್ತಿದೋರ್ವ್ವಳ [– – U U -]

೨೬ [U – U U U U -] ಕೊಂಕಣಾಧೀಶನ ॥ [೧೭*] ಬನವಸೆಂಯು ಕೀರ್ತ್ತಿರಾಜನನನುವ[ಂ]ಶಮಪ್ಪನ್ತು ಮಾಡಿ ಪೆರ್ಮ್ಮಾಡಿಗೆ ತಾಂ ವನಧಿಪತಿ ಕೀರ್ತ್ತಿಯಂ ನೆಟ್ಟನೆ ತಳೆದ ನೆಗಳ್ದ . . . .

೨೭ ತ್ತ . . . . ॥ [೧೮*] ಅದಲ್ಲದೆಯುಂ ॥ ವಾರಿಧಿ ಮೇರೆದಪ್ಪಿ ಕವಿತಪ್ಪವೊಲೋವದೆ ಬಂದ ಚೋಳನಂ ವಾರಿನಿಧೀಶನಪ್ಪ ಜಯಕೇಸಿನೃಪಂ ಚಲದಿಂ ತಱುಂಬಿ [– – U U]–

೨೮ ನ[U – U U]ಯನಂ ನೆಱೆ ಮೆಚ್ಚಿಸಿದೊಂದಗುರ್ವ್ವ ಪೇಳಾರ ಮನಕ್ಕೆ ಕೌತುಕಮನಾಗಿಸದೀ ಭುವನಾಂತರಾಳದೊಳ್ ॥ [೧೯*] ಮಣ್ಡಳನಾಥನೆನ್ದುಱದೆ ಕಾಣಿಸಿದೊಳ್ವದೆ [–] –

೨೯ ಲ [–U – – U U]ನಂ ಸಮಾನದೊಳೆ ಕಾಣಿಸಿಕೊಳ್ವುದೆನಲ್ಕೆ ಪೂಣ್ದು ಕೈಕೊಣ್ಡೆನಿದಂ ದಿಟಕ್ಕೆ ಬರವೇಳೆನೆ ಬನ್ದು ಸಮಾನಗಾಣ್ಕೆಯಂ ಕಣ್ದು ಮಹತ್ವ [– U U U]

೩೦ ಪೇಳ್ [U U] ಕೊಂಕಣ ಚಕ್ರವರ್ತ್ತಿಯ ॥ [೨೦*] ಆ ವಸುಧಾಧಿಪಂಗೆ ಜಯಕೇಸಿಗೆ ಕೇಸರಿ ಪುಟ್ಟುವನ್ದದಿಂ ಗೂವಲ ದೇವನೂರ್ಜ್ಜಿತ ಪರಾಕ್ರಮಿ ಪುಟ್ಟಿ ನಿಜಾಸಿದಂಷ್ಟ್ರೆಯ

೩೧ [–UU–U–] [ರಿನೃಪ]ಸಾಮಜಮಂ ತಡೆದಗ್ರಕುಂಭಮುಕ್ತಾವಳಿಯಂ ದಿಶಾವನಿತೆಯರ್ಗ್ಗೆ ವಿಭೂಷಣಮಾಗೆ ಮಾಡಿದ ॥[೨೧*] ಮದವದ್ವೀರಾ[U] ನೀ[–] –

೩೨ ರು [U U U U]ತಿ ಸಂಕೋಚಿಸಲ್ ಪೆರ್ಚ್ಚಿದುತ್ಸಾಹದೆ ಮಿತ್ರಾನೀಕಪದ್ಮಪ್ರಕರವೆಲರೆ ಸದ್ಧರ್ಮ್ಮಚಕ್ರಾಳಿಚೆಲ್ವಿಂ ಪೊದವಲ್ ಕಾದಂಬವಂಶಸ್ಫುರದುದಯಗಿರೀಂದ್ರಾಗ್ರದೊಳ್ [–U––]

೩೩ ಪದೆಯಂಗೆಯ್ದೊಪ್ಪುತಿರ್ದ್ದಂ ತದನುಜ ವಿಜಯಾದಿತ್ಯದೇವಕ್ಷಿತೀಶಂ ॥ [೨೨*] ಎನಿಸಿದ ವಿಜಯಾದಿತ್ಯನ ತನೂಭವಂ ನೆಗಳ್ದನಖಿಳಲಕ್ಷ್ಮೀನಿಳಯಂ ವನಧಿಪರೀತಧಾತ್ರೀಜನನುತ . . . . .

೩೪ ನೆನಿಸಿ ಜಯಕೇಸಿನೃಪ ॥ [೨೩*] ಆ ಜಯಕೇಸಿಯೆ ತಾನೆನಲೀ ಜಯಕೇಸಿ ಕ್ಷಮಾಧಿನಾಥಂ ನೆಗರ್ದ್ದೀ ಜಗಮಂ ತನ್ನಯೆ ಭುಜರಾಜಿತಘನಶೌರ್ಯಮುದ್ರೆಯಿಂ ಮುದ್ರಿಸಿದ ॥ [೨೪*] [– U]–

೩೫ ಮಣಾಧಿರಾಜನ ವಶೀಕರಣಾಸ್ತ್ರದತಿಪ್ರಭಾಸ್ಫುರತ್ಕೀರ್ತ್ತಿದಿಗಂಗನಾವದನದರ್ಪ್ಪಣವಾರ್ಪ್ಪು ವಸುಂಧರಾಗ್ರಸಂವರ್ತ್ತಿತ ಯಾಚಕಪ್ರಕರತುಷ್ಟಿಕರಂ ಭುಜಶಕ್ತಿವೀರಸಂಕೀರ್ತ್ತಿ–

೩೬ ತಮೆಂದೊಡೇಂ ಪೊಗಳ್ವುದುನ್ನತಿಯಂ ಜಯಕೇಸಿದೇವನ ॥ [೨೫*] ಅನ್ತುನೆಗರ್ತ್ತೆವೆತ್ತ ಜಯಕೇಸಿಯ ಭಾಸುರ ಮೂರ್ತ್ತಿಯಂ ಜಗತ್ಕಾಂತನ ಕೀರ್ತಿಯಂ ಭುವನ ಭುಂಬುಕನೇ [U U -] ವಿರೋಧಿ ವಿಕ್ರಾಂ–

೩೭ ತಗಜೇಂದ್ರಕೇಸರಿಯ ವಿಕ್ರಮಮಂ ನೆಱೆ ಕೇಳ್ದುಗೇಳ್ದಣಂ ಕುಂತಳಚಕ್ರವರ್ತ್ತಿ ಹರಿಮೂರ್ತ್ತಿ ಜಗಂನ್ನುತಕೀರ್ತ್ತಿರಾಗದಿಂ ॥ [೨೬*] ಎನಗೆ ಜಯಕೇಸಿ ಮುನ್ನಂ ಮನದೊಲವಿಂ . . . .

೩೮ ರಮನೆಂಬಿನಲೀ ಜಯಕೇಸಿ ನೆಟ್ಟನೆ ಸಫಳಂ ಮಾಳ್ಪೆನೀ ಜಗಂ ಪೊಗಳ್ವಿನೆಗ ॥ [೨೭*] ಎಂದು ವಿಭೂತಿಯಂ ಧರಿಸಿ ಹೇಮನಗೇಂದ್ರಮೆ ಮುಂದೆ ಬಂದು ನಿಂದಂದದಿನಪ್ಪುಕೆಯ್ದು ಮ–

೩೯ ಣಿಮಂಡಪದೊಳ್ಪದಪದ್ಮಮಂ ನಿಜಾನಂದದೆ ಕರ್ಚ್ಚಿ ಪೂ[ರ್ಣ್ಣ]ಕಳಶೋಜ್ವಳಧಾರೆ ವಿರಾಜಿಸಲ್ಕೆ ತಾಂ ನನ್ದನೆಯಂ ಕುಮಾರಕಶಿಖಾಮಣಿಗಿತ್ತಸಿಳಾತಳೇಶ್ವರ ॥ [೨೮*] ತದನಂತರಂ ॥ ಕನಕಾದ್ರ್ಯ–

೪೦ ಗ್ರಂಗಳೇನಚ್ಚರಿಯೆ ಪಲವೆನಲ್ ಹೇಮಪುಂಜಗಳಂ ರೋಹನಗೇಂದ್ರವ್ರಾತವಿತ್ತೆತ್ತೆನೆ ಪಲವು ಮಹಾ[ರತ್ನಪುಂಜಗಳಂ] ಶಕ್ರನ ಗಂಧೇಭಕ್ಕಮುಚ್ಚೈಶ್ರವದ ಮಹಿಮೆ–

೪೧ ಗಂ ಮೇಲೆನಲ್ಸಂದುವಂ ನೂತನಭದ್ರೇಶ್ವಾಕೋಟಿಪ್ರಕರಮನಳಿಯಂಗಿತ್ತನಾ ಕುಂತಳದೇಶ ॥ [೨೯*] ಸಿರಿಯುಂ ಹರಿಯುಂ [ಶಿವನುಂ] ಗಿರಿಜೆಯುಮೆಸೆವಂದದಿನ್ದೆ ಜಯಕೇಶಿಯು–

೪೨ ವಾದರದಿಂ ಮೈಲಳದೇವಿಯುವುರುತರ ಸುಖನಿಳಯರೆಸೆದರೀ ಧರೆ ಪೊಗಳೆ ॥ [೩೦*] ಆ ಮೈಳಲದೇವಿಯ ರೂಪಂ ಮಹಿಮೆಯೊಳು ರಂಭೆಗಂ ತಿಳೋತ್ತಮೆಗಂ ಮಿಕ್ಕೊ–

೪೩ ನರಾ ವಧೂಟಿಗವೇ ಮಾತೋ ಬಗೆದು ನೋಡೆ ನೂರ್ಮ್ಮಡಿಯಲ್ತೆ ॥ [೩೧*] ಇದೆ ಲಾವಣ್ಯಸುಧಾಬ್ಧಿ ನೋರ್ಪ್ಪಡಿದೆ ಚಂದ್ರಭ್ರೂವಿಳಾಸಂ ಸಮಂತಿದೆ ಕಾಂತಿಪ್ರಸರಕ್ರಮಂ [U U U]

೪೪ ದಲ್ ವಾಸಂತಿಕಾ ಲಕ್ಷ್ಮೀ ನೋಡಿದೆ ಸಾರಸ್ವತಜನ್ಮಭೂಮಿಯೆನೆ ಲೋಕಂ ಲೋಕದೊಳ್ ರೂಡಿಯಂ ಪದೆಪಿಂ ಮೈಳಲದೇವಿ ಮೂರ್ತಿಮಹಿಮಾ ವಿಸ್ತಾರ [– – U -] ॥ [೩೨*]

೪೫ ಲೀಳೆಯ ಪೆಂಪು ಚಿತ್ತಜನ ವಲ್ಲಭೆಗಿರ್ಮ್ಮಡಿ ಭಾವಿಸಲ್ ಮಿಗಿಲ್ ಶೀಳದ್ ಪೆಂಪು ಸೀತೆಗೆ ಪದಿರ್ಮ್ಮಡಿ ಚಾಗದ ಪೆಂಪು ಲೋಕಮಂ ಪಾಳಿಪ ಕಳ್ಪವಲ್ಲರಿಗೆ [– U U – U]

೪೬ ಜಸಕ್ಕೆ ನೋಂತಳಂ ಮೈಳಲದೇವಿಯಂ ಪೊಗಳ್ವುದೀ ಧರೆ ಪೂರ್ಣ್ಣಶಶಾಂಕವಕ್ತ್ರೆಯ ॥ [೩೩*] ವಿನುತಂ ವಿಕ್ರಮ ಚಕ್ರವರ್ತ್ತಿ ವಿದಿತಂ ಸ್ತ್ರೀರತ್ನಮಂ ಭೋಗಭಾಗಿ[ನಿ] [– – U U -] –

೪೭ ವಿಯಂ ವಿಭವದಿಂ ಕಾದಂಬಚಕ್ರೇಶನೋಳಂ(ಳ್) ಘನವಿಕ್ರಾಂತನೊಳೊಲ್ದು ಕೂಡಿ ನೆಗಳ್ದಂ ಕಾದಂಬರಾಜ್ಯಾಭಿವರ್ದ್ಧನ ಸತ್ಕೀರ್ತ್ತಿ ವಿರಾಜಿಸಲ್ಕೆ ಜಸಮಂ ಸಂತೋಷ [– – U -] ॥ [೩೪*]

೪೮ ಎನಿಸಿದ ಮೈಳಲದೇವಿಗಮನುಪಮಗುಣನೆನಿಸಿ ನೆಗಳ್ದ ಜಯಕೇಸಿಗವಿನ್ನನವರತಂ ರಾಜ್ಯವಿವರ್ದ್ಧನಮಂ ಮಾರ್ಪ್ಪಡೆಗೆನೆ [ರಾಜ್ಯಲಕ್ಷ್ಮ್ಯಪೇಕ್ಷಂ] ॥ [೩೫*] [U U U] [ಕುಲ]–

೪೯ ಕ್ರಮಾಗತರುಮಂ ನಯಶುದ್ಧರುಮಾಪ್ತರುಂ ದಿಟಕ್ಕನುವಶರುಂ ವಿಚಾರಿಸೆ ಪೆಱಿರ್ಪೃತನಾಧಿಪರಾರೆನುತ್ತೆ ಮತ್ತೆನಿಸದೆ ನಿನ್ನುದಾತ್ತ ಭುಜಪಂಜರ [–UU–U-U]

೫೦ ನಂದನೆಯೊಡನರ್ತ್ತಿಯಿಂ ಬೆಸಸಿದಂ ಪೃಥಿವೀಪತಿ ಲಕ್ಷ್ಮರಾಜನ ॥ [೩೬*] ಬೆಸಸೆ ಚಳುಕ್ಯರಾಮ ವಿಭು ಮೈಳಲ ದೇವಿಯುಮಂ ಧರಿತ್ರಿ ಬಣ್ಣಿಸೆ [U U – U – U]

೫೧ ನುಮನುತ್ಸವದಿಂದೊಡಗೊಂಡು ಬಂದು ಕಣ್ಗೆಸೆವ ಗಿರೀಂದ್ರನಂದನೆಯುಮಂ ಭುವನೇಶನುಮಂ ಸುಭಕ್ತಿ [–U U U] ಸೆದೇವಿ ಸಂತೆಡೆ [U–U U–U U–]–

೫೨ ದ್ಘ ರಾಜ್ಯದೊಳ್ ॥ [೩೭*] ನುಡಿದು ಪಸಾಯಿತಂ ಸಹಜಬುದ್ಧಿಯ ಪೆರ್ಚ್ಚುಗೆಯಿಂ ಪಸಾಯಿತಂ ತೊಡೆವರಿಸೇನೆಯಂ ಬವರದೊ [UU-UU -] ಪಸಾಯಿತಂ[UU U–]

೫೩ ದವಿರ್ದ್ದ ಶೌಚದೆ ಪಸಾಯಿತನಾವೆಡೆಗಂ ಪಸಾಯಿತಂ ಕಡು ದಿಟದಿಂದೆ ಚಕ್ರಿಗೆನೆ ಧನ್ಯನೊ ಲಕ್ಷ್ಮಣದಣ್ಡನಾಯಕ ॥ [೩೮*] ಆ ನೆಗಳ್ದಿರ್ದ್ದ ಲಕ್ಷ್ಮಣ ಚ[ಮೂಪ ಸುತಂ ಸುಗಭೀ]–

೫೪ ರವೃತ್ತಿಗಂಭೋನಿನಿಧಿಗುನ್ನತಿಕ್ಕೆಗೆ ಸುರಾದ್ರಿಗೆ ಧೈರ್ಯ್ಯಗುಣಕ್ಕೆ ಧಾತ್ರಿಗಿಂ ತಾನೆ ಮಿಗಿಲ್ ವಿಚಾರಿಪದೆ ತಾನೆ ದಲಗ್ಗಳವೆಂತು ನೋರ್ಪ್ಪಡಂ ತಾನೆ ವಿಶೇಷ [–U U U –] –

೫೫ ತ್ರಮೊ ಸವ್ಯತ ಭವ್ಯರಾಜನ ॥ [೩೯*] ಆ ನೆಗಳ್ದ ಭವ್ಯರಾಜನ ಮಾನಿನಿ ಲೋಕತ್ರಯೈಕಪಾವನೆ ವಿವಳಜ್ಞಾನಪ್ರವಾಹ ವಿಸ್ತೃತೆ ತಾನೆಸೆದಳ್ ಗಂಗೆದೇವಿ . . . . ಧ–

೫೬ ರೆಯೊಳ್ ॥ [೪೦*] ಸರಸತಿಸಹಚರಿ ವಿದ್ಯಾಪರಿಣತಿಯಿಂ ತಂಗೆ ಗಂಗೆ ಶುದ್ಧತಿಯಿಂ ಭಾಸುರನೀತಿತನುಜೆ ತನಗಾಭರಣದಿನೆನೆ ಗಂಗೆಯಂತು ನೋ . . . . ॥ [೪೧*]

೫೭ ಇರುಳೊಳ್ಪರ್ತ್ತಿಸುತಿರ್ಪ್ಪರುನ್ನತಿಯುಮುಗ್ರಾಭೀಳದುಶ್ಶೀಳಶೂಕರದಂಷ್ಟ್ರಾಗ್ರದೊಳಿರ್ಪ್ಪ ಧಾರಿಣೀಯುಮುದ್ಯತ್ಪಂಕಚೋದ್ಭೂತನೂತ್ನರಜಟಿಶ್ರೋ [U U – U] [ಸಾಂ] –

೫೮ ಗಧೃತಿಗೆಟ್ಟೋತಿರ್ದ್ದ ಸಾವಿತ್ರಿಯುಂ ದೊರೆಯೇ ಚಾರುಚರಿತ್ರದೊಳ್ನೆಗರ್ದ್ದ ಗಂಗಾದೇವಿಗೀ ಧಾತ್ರಿಯೊಳ್ ॥ [೪೨*] ನೆಗಳ್ದವರ ಪಿರಿಯ ಮಗಂ ನಿಜ . . . ನಿಜ . . . . .

೫೯ ಯಿಂದಂ ಮಿಗೆ ಬೆಳಗಿ ಬನ್ಧುಜನವಾರ್ದ್ಧಿಗೆ ಪೆರ್ಚ್ಚಂ ಪಡೆದು ಸೋಮವಿಭು ವರ್ತ್ತಿಸಿದ ॥ [೪೩*] ಕೃತವಿದ್ಯಂ ಶಬ್ದಶಾಸ್ತ್ರಾಗಮದೊಳಧಿಗತಾರ್ತ್ಥಂ ಮಹಾತರ್ಕ್ಕಶಾಸ್ತ್ರಶ್ರುತಿಯೊಳ್ ಸಾ–

೬೦ ಹಿತ್ಯಶಾಸ್ತ್ರಪ್ರಕರದೊಳಧಿಕಂ ಕೋವಿದಂ ಶುಕ್ರಶಾಸ್ತ್ರೋನ್ನತಿಂಯೊಳ್ ಭೂಲೋಕದೊಳ್ಭಾರ್ಗ್ಗವನೆನಿಸಿ ಜಸಂಬೆತ್ತು ಸಂಪಸ್ತುತ್ಯಸಾರಸ್ವತಲಕ್ಷ್ಮೀಶುದ್ಧಜಿಹ್ವಂ ನೆಗರ್ದ್ದನವ–

೬೧ ನಿಯೊಳ್ಸೋಮದಣ್ಡಾಧಿನಾಥಂ ॥ [೪೪*] ತ್ರಿಜಗತ್ಸೇವ್ಯನೆ ಭವ್ಯರಾಯಕನೆಯಂ ಪೇಳ್ ಧ್ವನಯೇ ಲಕ್ಷ್ಮಣಾಗ್ರಜನತ್ಯುನ್ನತಶೌಚಸಂಪದನೆ ಗಂಗಾಪುತ್ರಕಂ ಶಾನ್ತನೇ ನಿಜನಾ–

೬೨ ಮಕ್ಕೆಣೆ ಶೌರ್ಯ್ಯಸಂಗತನೆ ಸಿಂಹಜ್ಯೇಷ್ಠನೆಂಬೀ ವಚೋವ್ರಜಮನ್ವರ್ತ್ಥಕಮಾಯ್ತು ಸೋಮವಿಭುಗೀ ವಿಶ್ವಂಭರಾ ಭಾಗದೊಳ್ ॥ [೪೫*] ಪ್ರವಿದಿತಕೌತ್ಸಗೋತ್ರ ಘನದುಗ್ಧಪಯೋ–

೬೩ ಧಿಯೊಳುದ್ಭಲೀಳನುದ್ಭವಿಸಿ ಕರಾಗ್ರಪೂರ್ಣ್ಣತೆಗೆ ನಿರ್ಮ್ಮಳಕಾನ್ತಗೆ ಲೋಕಲೋಚನೋತ್ಸವಕೆ ಸುವೃತ್ತವೃತ್ತಿಗೆ ಬುಧಸ್ತುತಿಗಾಶ್ರಯವಾಗಿ ಸೋಮನೇ ಭುವನಮ–

೬೪ ನಾವಗಂ ನಿಜಶಯಟ್ಪ್ರಿಥುಚಂದ್ರಿಕೆಯಿಂದೆ ತೀವಿದ ॥ [೪೬*] ಇನಿತುಂ ಪೆರ್ಮ್ಮೆಗೆ ನೆರ್ಮ್ಮವಾಗಿ ನೆಗರ್ದ್ದಿದರ್ದ್ದಾ ಸೋಮದಣ್ಡಾಧಿನಾತನ ತಮ್ಮಂ ತ್ರಿಜಗದ್ವಿನೂತ ಶಿವಪಾದಾಂಭೋಜಭೃಂ–

೬೫ ಗಂ ಜಗಜ್ಜನಸಂಸ್ತುತ್ಯಸಮಸ್ತತತ್ವಕುಶಳಂ ಸಂಶುದ್ಧಧರ್ಮ್ಮೋದ್ಯಮಂ ಮನುಮಾರ್ಗ್ಗಾಚರಣಂ ನೆಗರ್ತ್ತೆವಡೆದಂ ಶ್ರೀ ಸಿಂಹದಣ್ಡಾಧಿಪ ॥ [೪೭*] ಜಳಧಿಪ್ರಾವೃತಧಾತ್ರಿಯೊ–

೬೬ ಳ್ನೆಗರ್ದ್ದನೆಲ್ತೇ ಶಬ್ದವಿದ್ಯಾಪತಂಜಳಿ ಪಟ್ತರ್ಕ್ಕಷಡಾನನಂ ಸಕಳಲೋಕಸ್ತುತ್ಯಸಾಹಿತ್ಯ ಸಂಕುಳಸರ್ವ್ವಜ್ಞನುದಾತ್ತ ನೀತಿನಿಕರಪ್ರಖ್ಯಾತ ಜಾಣಕ್ಯನುಜ್ವಳವಾಣೀವನಿ –

೬೭ ತಾನಟೀನಟನಲೀಲಾಪ್ರಾಂಗಣಂ ಸಿಂಗಣ ॥ [೪೮*] ಅತಿವಿಷಮರಸತುರಂಗಮಪತಿಯಂ ರೇವಂತನಂತಿರೇಱಿಲು ಸಕಳ ಕ್ಷಿತಿ ಪೊಗಳುತ್ತಿರೆ ಸೇನಾಪತಿತಿಳಕಂ

೬೮ ಸಿಂಹದಣ್ಡನಾಥನೆ ಬಲ್ಲಂ ॥ [೪೯*] ಸಿಂಗದ ಜಸದೊಂದೆಡೆ ಮಾತಂಗಂ ಭಯದಿಂದೆ ಭಿನ್ನಲೋಡಂ ಪರಿಮೂತ್ರಂ ಗೊಳ್ಗುನೆಸ್ಸೊಡ್ಡೇಱುವುದೇಂ ಗಹನಮೆ ನೆಗಳ್ದ ಸಿಂಹರಾಜಂಗಿಭ–

೬೯ ಮಂ ॥ [೫೦*] ನೆಗಳ್ದಂ ಮುನ್ನೆ ಪಿನಾಕಿ ದಲ್ ಕೃತಯುಗವ್ಯಾಪಾರದೊಳ್ ತ್ರೇತೆಯೊಳ್ನೆಗಳ್ದಂ ರಾಮನುದಾತ್ತಚಾಪ ಚರಿತಂ ದ್ವಾಪಾರದೊಳ್ಫಲ್ಗುಣಂ ನೆಗಳ್ದಂ ಕೇಳ್ ಕಲಿಕಾ –

೭೦ ಲದೊಳ್ ಧರಣಿಯೊಳ್ ಬಿಲ್ವಿದ್ದೆಯೊಳ್ಸಿಂಗಣಂ ನೆಗಳ್ದಂ ಕುಂತಳಚಕ್ರವರ್ತ್ತಿ ಕಟಕಪ್ರಸ್ತುತ್ಯ ದಣ್ಡಾಧಿಪ ॥ [೫೧*] ನಯದೊಳ್ ಶೌರ್ಯ್ಯದೊಳಾರ್ಪ್ಪಿನೊಳ್ ವಿನಯ–

೭೧ ದೊಳ್ ಚಾತುರ್ಯ್ಯದೊಳ್ ಮಂತ್ರನಿಶ್ಚಯದೊಳ್ ಚಾರುಚರಿತ್ರದೊಳ್ ವಿಭವದೊಳ್ ಸಾಹಿತ್ಯದೊಳ್ವಿಶ್ರುತಾನ್ವಯದೊಳ್ ದೋರ್ವ್ವಲದೊಳ್ ನಿಜೇಶಹಿತದೊಳ್

೭೨. ಸಾಮರ್ತ್ಥ್ಯದೊಳ್ ಸದ್ಗುಣಾಶ್ರಯನೇಂ ಬಣ್ಣಿಪುದುರ್ವ್ವಿ ಕೂರ್ತ್ತು ಮುದದಿಂ ಶ್ರೀ ಸಿಂಹದಣ್ಡೇಶನ ॥ [೫೨] ಇನಿತು ಪೊಗರ್ತ್ತೆಯಂ ತಳೆದ ಸಿಂಹಚಮೂಪನ ಪೆಂಪುವೆತ್ತ

೭೩ ಮಾನಿನಿ ನಿಜನಾಥನುನ್ನತಭುಜಕ್ಕೆ ಜಯಾಂಗನೆ ವಕ್ತ್ರಪಂಕಜಕ್ಕನುಪಮವಾಗ್ವಧೂಟಿ ಸುಭಗತ್ವದೆ ಪೆರ್ಚ್ಚಿದುರಸ್ಥಳಕ್ಕೆ ಸಜ್ಜನನುತಲಕ್ಷ್ಮಿ ತಾನೆನೆ ಕೃತಾರ್ತ್ಥೆ–

೭೪ ಯೊ ಮೈಳಲದೇವಿ ಧಾತ್ರಿಯೊಳ್ ॥ [೫೩*] ಪರಿಜನಪಾರಿಜಾತಲತೆ ಬನ್ಧುಜನಾಮರಧೇನು ಧಾರಣೀಸುರಚಿರಹೇಮವೃಷ್ಟಿ ಪತಿಭಕ್ತಿಧರಾತ್ಮದೆ ರಮ್ಯಹರ್ಮ್ಯ –

೭೫ ಭಾಸುರನವರತ್ನದೀಪಿಕೆ ದಯಾರಸವಾರ್ದ್ಧಿಸುಧಾಂಶುಲೇಖೆಯೆಂಬರನುಡಿಗಳ್ಗಡರ್ಪ್ಪೆನಿಪ ಮೈಳಲದೇವಿಗೆ ಮೆಯ್ಮೆಯೊಪ್ಪದೇ ॥ [೫೪*] ತತ್ತ್ರುಜನಮಳವಾ–

೭೬ ಣೀವೃತ್ತಸ್ತನಕಳಶಲುಳಿತಮಣಿಭೂಷಣನುದ್ವೃತ್ತರಿಪುಕುಧರಪವಿ ಲೋಕೋತ್ತಮನೆನೆ ಬೊಪ್ಪದೇವನಂ ಮೆಚ್ಚದರಾರ್ ॥ [೫೫*] ಜನನಯನೋತ್ಪಳಕ್ಕೆ ಶಶಿಬಿಂಬಮೆ–

೭೭ ನಿಪ್ಪುದು ಮೂರ್ತ್ತಿಕೀರ್ತ್ತಿದಿಗ್ವನಿತೆಯಗ್ಗಾಗಳುಂ ತುಡುವ ಮೌಕ್ತಿಕದಾಮಮೆನಿಪ್ಪುದಾರ್ಪ್ಪು ಮೇದಿನಿಗೆ ಸುವರ್ಣ್ಣ ಪೂರ್ಣ್ಣ ಘನವೃಷ್ಟಿಯೆನಪ್ಪುದು ಕೂ–

೭೮ ರ್ಪ್ಪು ಯುದ್ಧಭಾಜನರಿಪುದಂತಿಸಂಹತಿಗೆ ಸಿಂಹಮೆನಿಪ್ಪುದು ಬೊಪ್ಪದೇವನ ॥ [೫೬*] ಇನ್ತು ಕಳತ್ರಪುತ್ರಬಹು ಭಾನ್ಧವಮಿತ್ರಸಮನ್ವಿತಂ ಸುನಿಶ್ಚಿಂತ–

೭೯ ದೆ ವಿಕ್ರಮಾಂಕ ಸುತೆ ಮೈಳಲದೇವಿಗಮತ್ಯುದಾತ್ತವಿಕ್ರಾಂತನೆನಲ್ಕೆ ಮಿಕ್ಕ ಜಯಕೇಸಿಗವೂರ್ಜ್ಜಿತ ರಾಜ್ಯಲಕ್ಷ್ಮಿಯಂ ಸಂತತಮುತ್ತರೋತ್ತರಮೆನಲ್ ಪರಿವರ್ದ್ಧಿಸು–

೮೦ ತಿರ್ದ್ದ ಧಾತ್ರಿಯೊಳ್ ॥ [೫೭*] ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾಸಾಮನ್ತಾಧಿಪತಿ ಮಹಾಪ್ರಚಣ್ಡದಣ್ಡನಾಯಕ ವಿಬುಧವರದಾಯಕ ಗೋತ್ರಪ–

೮೧ ವಿತ್ರ ಪರಾಂಗನಾಪುತ್ರ ಬನ್ಧುಚಿನ್ತಾಮಣಿ ವಿವೇಕಚೂಡಾಮಣಿ ದುಷ್ಟಾಶ್ವಮಲ್ಲ ಸೆಣಸಹೃತ್ಸೆಲ್ಲ ಕೋದಣ್ಡರಾಮ ರಣರಂಗ ಭೀಮ ಸಾಹಿತ್ಯವಿದ್ಯಾಧರ ನಿ–

೮೨ ಖಿಳಕಳಾಧರ ಸಂಗೀತಕಪ್ರಸಂಗಸಂಸೇವ್ಯಭರತ ಸೌಜನ್ಯಸಾವ್ರಾಜ್ಯನಿರತ ಧೈರ್ಯ್ಯಕುಳಪರ್ವ್ವತ ಸತ್ಯಸತ್ಯವ್ರತ ಮಂತ್ರಿಚಾಣಕ್ಯ ಮನುಜಮಾಣಿಕ್ಯ

೮೩ ಸಜ್ಜನಸಭಾಮಣಿಪ್ರದೀಪ ವಿಕ್ರಮಾದಿತ್ಯದೇವಪ್ರತಾಪಸ್ವರೂಪ ನಾಮಾದಿಸಮಸ್ತಪ್ರಸಸ್ತಿಸಹಿತ ಶ್ರೀಮನ್ಮಹಾಪ್ರಧಾನನನ್ತಪಿಪ್ಪಿರಾಧ್ಯಕ್ಷಂ ಪ–

೮೪ ಸಾಯಿತಂ ಮನೆವೆರ್ಗ್ಗಡೆ ದಣ್ಡನಾಯಕಂ ಸಿಂಗರಸಸ್ಸು[ಖದಿ]ನಿರ್ದ್ದು ॥ ಜಳನಿಧಿಮೇಖಳಾಕಳಿತಭೂಮಿಗೆ ಕುನ್ತಳಶೋಭೆಯನ್ತೆ ಕುನ್ತಳವಿಷಯಂ ಮನಂಗೊಳಿ–

೮೫ ಸಿ ತೋರ್ಪ್ಪುದು ತದ್ವಿಷಯಕ್ಕೆ ಚಂಕನತ್ತಿಳಕದವೊಲ್ ವಿರಾಜಿಸುತಮಿರ್ಪ್ಪುದು ಭಾವಿಸೆ ಚಿತ್ತದೋಹಲಂ ಹಲಸಿಗೆನಾಡು ನಾಡುಗಳ ಬಲ್ಲಹನುತ್ತಮಂ[1] ವ–

೮೬ ಸ್ತು ವಿಸ್ತ್ರಿತ ॥ [೫೮*] ಆ ರಮಣೀಯವಪ್ಪ ವಿಷಯಕ್ಕೆ ವಿಭೂಷಣವಾಗಿ ತೋರ್ಪ್ಪ ಕುಂದೂರನದೊಂದು ನಾಲಗೆಯ ಮಾನವನೇವೊಗಳ್ದಪ್ಪನೆಯ್ದೆ ಕೈವಾರ–

೮೭ ದೊಳಾ ನೆಗರ್ತ್ತೆಯಮರಾವತಿ ಮಿಕ್ಕಳಕಾಪುರಂ ಜಗತ್ಸಾರವೆನಿಪ್ಪ ಭೋಗವತಿ ತಾನೆನಿಕುಂ ವಸುಧಾಂತರಾಳದೊಳ್ ॥ [೫೯*] ಎನಿಸಿದ ಕುಂದೂರ ದಕ್ಷಿಣಗಿದ್ವಿಭಾ–

೮೮ ಗದೊಳ್ ॥ ಇದೆ ದಲ್ ಭಾವಿಸಲಗ್ಘ್ಯತೀರ್ತ್ಥವಿದೆ ದಲ್ ವಾರಾಣಸೀತೀರ್ತ್ಥವಿಂತಿದೆ ದಲ್ ತೀರ್ತ್ಥವರಂ ಪ್ರಯಾಗೆ ಪಲವುಂ ತೀರ್ತ್ಥಂಗಳುಂ ಮತ್ತವಿಂತಿದೆ ದಲ್

೮೯ ನಿಶ್ಚಯವೆಂದು ಸಿಂಗಣಚಮೂಪಂ ಬೇಱೆ ಕೈಳಾಸಮಂ ಪದಳಂ ಮಾಡಿಸಿದಂ ಜಗಕ್ಕೆನಿಸುಗುಂ ಶ್ರೀ ಲಕ್ಷ್ಮ ಲಕ್ಷ್ಮೇಶ್ವರ ॥ [೬೦*] ವಿದಿತಂ ಶ್ರೀಪರ್ವ್ವತಂ ಬಂದವ–

೯೦ ತರಿಸಿದುದೋ ರಮ್ಯಹಿಮ್ಯಾಚಳಂ ಪುಟ್ಟಿದುದೋ ಬೇಱೊಂದು ಮೇರುಕ್ಷಿತಿಧರಮೆ ದಿಟಂ ದೇವತಾಗಾರದಂತಿರ್ದ್ದುದೊ ಪೇಳೆಂಬನ್ನೆಗಂ ಪೆರ್ಮ್ಮೆಯಿನೆಸೆ–

೯೧ ದು ಜಗಕ್ಕೊಪ್ಪುಗುಂ ಧರ್ಮ್ಮಹರ್ಮ್ಯಾಸ್ಪದರಂಗಂ ಸಿ[ಂ*]ಗಣ[ಂ*] [ಮಾಡಿ]ಸಿದ ಶಿವಗೃಹಂ ಲಕ್ಷ್ಮನಾಮಾಭಿರಾಮ ॥ [೬೧*] ಸಕಳವಿಳಾಸಸಂಕುಳವದಿಲ್ಲಿಯೆ ನಿಂ–

೯೨ ದುದು ತುಂಗಮಂಗಳಪ್ರಕರವದೆಲ್ಲವಿಲ್ಲಿ ನೆಲೆಗೊಂ[ಡುದು] ಕೂಡೆ ಜಗತ್ತ್ರಯಸ್ಫುರತ್ಸುಕೃತಮದೆಲ್ಲವಿಲ್ಲಿ ನೆಲಸಿರ್ದ್ದುದು ನಿಶ್ಚಯದಿಂದವೆಂಬಿನಂ

---

೧. ಬಿಂದು ಅನವಶ್ಯ.

೯೩ ಪ್ರಕಟಿತ ದಿವ್ಯತೀರ್ತ್ಥವೆಸೆಗುಂ ತ್ರಿಜಗನ್ನುತ ಲಕ್ಷ್ಮಣೇಶ್ವರ ॥ [೬೨*] ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪ್ರಿಥ್ವೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರ

೯೪ ಪರಮಭಟ್ಟಾರಕ ಸತ್ಯಾಶ್ರಯಕುಳತಿಳಕ ಚಾಳುಕ್ಯಾಭರಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧ-

೯೫ ಮಾನಮಾಚಂದ್ರಾರ್ಕ್ಕತಾರಂ ಸಲೆ ಜಯಂತಿಪುರದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥ ಸ್ವಸ್ತಿ ಸಮಧಿಗತಪಂಚಮಹಾ-

೯೬ ಶಬ್ದ ಮಹಾಮಣ್ಡಳೇಶ್ವರಂ ಬನವಾಸೀಪುರವರಾಧೀಶ್ವರಂ ಸಮಸ್ತಭುವನಸಂಸ್ತೂಯಮಾನ ಹರಧರಣೀಪ್ರಸೂತತ್ರಿಲೋಚನಕದಂಬವಂಶಮಹೋ-

೯೭ ದಯ ಮಹೀಧರೇಂದ್ರಶಿಖರಾಭ್ಯುದಯಮಾನಮಹಾಪ್ರಚಣ್ಡಮಾರ್ತ್ತಣ್ಡ ಮಾರ್ತ್ತಣ್ಡ ಕರಾತಿತೀವ್ರನಿಜಪ್ರತಾಪವಶೀಕೃತ ಸಕಳಮಹೀಮ-

೯೮ ಣ್ಡಳನುತ್ತುಂಗಸಿಂಹಲಾಂಚ್ಛನ ವಾನರಮಹಾಧ್ವಜ ಪೆರ್ಮ್ಮಟ್ಟಿತೂರ್ಯ್ಯನಿರ್ಗ್ಘೋಷಣ ಚತುರಾಶೀತಿನಗರಾಧಿಷ್ಠಿತಾಷ್ಟಾ ದಶಾಶ್ವಮೇಧದೀಕ್ಷಾದೀಕ್ಷಿ-

೯೯ ತಕುಳಪ್ರಸೂತ ಹಿಮವದ್ಗಿರೀಂದ್ರರುಂದ್ರಶಿಖರಸ್ಥಾಪಿತಮಹಾಶಕ್ತಿಪ್ರಭಾವ ತ್ಯಾಗಜಗಝುಂಪಿ ಝುಂಪಳಾಚಾರ್ಯ್ಯ ನಿಶ್ಶಂಕರಾಮ ಸುಭಟಕನಕ-

೧೦೦ ನಿಕಶೋಪಳ ಶರಣಾಗತವಜ್ರಪ್ರಕಾರಲೊಕೈಕಕಲ್ಪದ್ರುಮ ಸಂಕ್ರಾಂತಿಧವಳ ಮೂರ್ತ್ತಿನಾರಾಯಣ ಕೀರ್ತ್ತಿಮಾರ್ತ್ತಣ್ಡ ಮಣ್ಡಳಿಕಲಲಾಟಪಟ್ಟ ವೈ-

೧೦೧ ರಿಘರಟ್ಟ ಸುಭಟರಾಜಶಿಖಾಮಣಿ ಕಾದಂಬಚೂಡಾಮಣೀತ್ಯಖಿಳನಾಮಾದಿ ಸಮಾಳಂಕ್ರಿತರಪ್ಪ ಶ್ರೀಮನ್ಮಹಾಮಣ್ಡಳೇಶ್ವರಂ ಜಯಕೇಸಿ-

೧೦೨ ದೇವರುಂ ॥ ಸ್ವಸ್ತ್ಯನವರತಭೂಮಿಭಾಮಿನಿ ಧವಳಮಂಗಳಶ್ರಿಂಗಾರಾಯಿತಬಹಳವಿಮಳ ಯಶಶ್ಚಂದ್ರಚಂದ್ರಿಕಾ ವಿರಾಜಮಾನೆ ಗನ್ಧೇಭಯಾನೆ

೧೦೩ ಚತುರದಧಿವೇಳಾವಳಯವಳಯಿತಸಕಳಜಗದಧೀಶ್ವರ ಶ್ರೀಮಚ್ಚಾಳುಕ್ಯಚಕ್ರಾಧೀಶ್ವರಪ್ರಿಯಸುತೆ ವಂದಿಜನಕಲ್ಪಲತೆ ಸುಭಟ-

೧೦೪ ಕನಕನಿಕಶೋಪಳೆ ರಾಜ್ಯಾಭ್ಯುದಯಶುಭಸೂಚನಾನೇಕಶುಭಲಕ್ಷಣಲಕ್ಷಿತಾಂಗಿ ತ್ಯಾಗಜಗಝುಂಪನರ್ದ್ಧಾಂಗಿ ಮೃದು ಮಧುರ ವಚನಚತು-

೧೦೫ ರಕಳಾಕಳಾಪೋಪೇತೆ ಶ್ರಿಂಗಾರಸಾರಸರ್ವ್ವಸ್ವಭೂತೆ ಶ್ರೀಮಜ್ಜಯಕೇಸಿದೇವರ ವಿಶಾಳವಕ್ಷಸ್ಥಳನಿವಾಸಿನಿಯರಪ್ಪ ಶ್ರೀಮತ್ಪಿರಿಯ-

೧೦೬ ರಸಿ ಮೈಳಲಮಹಾದೇವಿಯರುಂ ಕೊಂಕಣವೊಂಭಯ್ನೂಱುಂ ಪಲಸಿಗೆಪನ್ನಿರ್ಚ್ಛಾಸಿರಮು ಪಯ್ವೆಯಯ್ನೂಱುಂ ಕವಡಿದ್ವೀಪಸವಲಕ್ಕಮು-

೧೦೭ ಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನೆಯಿಂ ರಾಜ್ಯಂಗೆಯ್ಯುತ್ತಮಿರ್ದ್ದ ॥ ಶ್ರೀಮನ್ಮಹಾಪ್ರಧಾನಂ ದಣ್ಡನಾಯಕಂ ಪಸಾಯಿತ[ಂ] ಮೈಳಲ-

೧೦೮ ಮಹಾದೇವಿಯರ ಮನೆವೆರ್ಗ್ಗಡೆ ಸಿಂಗರಸರು ಮಾಡಿಸಿದ ಲಕ್ಷ್ಮಣೇಶ್ವರದೇವರ್ಗ್ಗೆ ಶಕವರ್ಷಂ ೧೦೪೭ನೆಯ ವಿಶ್ವಾವಸು ಸಂವತ್ಸರದ ಭಾ-

೧೦೯ ದ್ರಪದ ಬ ೧೩ ಶುಕ್ರವಾರ ಮಹಾತಿಥಿ ಯುಗಾದಿಯಂದು ದೇವರಪೂಜೆ ನೈವೇದ್ಯವಂಗಭೋಗ ನಂದಾದೀವಿಗೆ ಪಾತ್ರ ಪಾವುಳಂ ವಿದ್ಯಾ[ದಾ]-

೧೧೦ ನ ತಪೋಧನಚ್ಛಾತ್ರಗ್ರ್ಗಾಹಾರವಸ್ತ್ರದಾನ ಬ್ರಾಹ್ಮಣರಾಹಾರದಾನ ಖಣ್ಡಸ್ಫುಟಿತ ಜೀರ್ಣ್ಣೋದ್ಧಾರಕ್ಕೆ ಪಲಸಿಗೆಪನ್ನಿರ್ಚ್ಛಾಸಿರದೊಳಗ[ಣ]-

೧೧೧ ಯ್ನೂಱಱ ಮೊದಲಬಾಡ[ಂ] ರಾಜಧಾನಿ ಕುಂದೂರಲು ತಳವೃತ್ತಿಯಾಗಿ ಬಿಟ್ಟಪುರದ ಸೀಮೆ [।*] ಮೂಡಲು ಕೆನ್ನಲೆಗೆ ಪೋದ ಪೆರ್ವಟ್ಟೆ ತೆಂಕ[ಲು]

೧೧೨ ಕುಂಬಾಱಗೆಱೆ ಪಡುವಲು ಸವಣನಪಳ್ಳಿಯ ಬಟ್ಟೆ ಬಡಗಲು ಬೆಟ್ಟದ ಬಸದಿಯ ಭೂಮಿ [।*] ಪುರದಿಂ ಮೂಡಲು ಕೆಱೆಯೊಳಗೆ ಯಭಿನ[ಳ]

೧೧೩ ಗಾವುಂಡನ ಸ್ಥಳದ ತೋಂಟ ಮತ್ತರು ೧ ನೈರಿತ್ಯದ ಕೋಣ ಬೈಸಗಱೆಯ ಕೆಳಗಣ ಗರ್ದ್ದೆ ನೆಱೆ [॥*] ಮತ್ತವಯ್ನೂಱಱ ಬಳಿಯ ಬಾಡ ದಾರವಾಡದ

೧೧೪ ಮೂಡವೊಲದಲಾಲನೆಯಸುಂಡಿಲಿ ಪಡುವಲು ನವಿಲೂರ ಸೀಮೆಯಿಂ ಬಡಗಲು ಮತ್ತರು ೫೦ [।*] ಮತ್ತಂ ಕುಂದೂರಯ್ನೂಱ ಬಳಿಯ

೧೧೫ ಬಾಡಂ ಕೌವಲಗೇರಿಯ ಸ್ಥಾನಮಾನ್ಯಂ ಪೊಱಗಾಗಿ ಚತುರಾಘಾಟಸಮೇತ ತ್ರಿಭೋಗಾಭ್ಯಂತರಶುದ್ಧಿಯಿಂ ಕೊಟ್ಟರು ॥

The present epigraph is standing near the site of a ruined temple of Mallikārjuna, which is situated at a distance of 1 kilometer from the village. The epigraph is damaged to some extent, there being some scratches and worn out spots The epigraph mentions the reign of Vikramāditya VI and his feudatory Jayakēsi II of the Kadambas of Goa and his queen Maiḷaldēvi.

The Subject matter of the epigraph is the construction of the Lakshamaṇ ēśvara temple in the place by Siṁgarasa the maneverggaḍe of Maiḷaladēvi and the grant of lands and the village Kaulagēri to the temple. The date of the epigraph corresponds to A. D. 1125, August 28, Friday. Dr. Barnet states that the name of the deserted village may be Kumbhāpura. It is note worthy that the tithi Yugādi is called "Mahā-tithi" in the inscription.

1 Śrî ōṁ namaś = Śivāya Namas = tuṁga-śiraś-chuṁbi-chaṁdra-chāmara-chāravē [I*] trailōkya-nagar-āraṁbha-mūla-staṁbhāya- Śaṁbhavē || [I*] Śivāya ōṁ [||*]

2 Śrî-kāantā-kānta-tuṁga-stana-yuga-nibiḍ-āliṁgit-ōra- sthaḷaṁ lōkayka-prastutya-dōrmmaṇḍita samara-jay-śrî-patākaṁ

3 dharitrî-prākāra-prāya-dhairyyaṁ prakaṭita-mahimaṁ prājya- Kādaṁba-rājya-śrî-kēḷî-lileyoḷtaḷt = eseg = anavarataṁ paśchi-

4 m-āṁbhōdhi-nāthaṁ || [2*] Śrîmat- Traiḷōkya-nāthaṁ tripura-vijayaṁ bhāḷa-loḷ - ākshiyiṁd = uddāmaṁ māḍalke bēgaṁ śramam = oḍarise baṁ-

5 d = oṁdu bhāsvat- Kadaṁb-ārām-ōdych-chāyeyoḷ niṁd = eseva vemaran-urvvi-taḷakk = ikke lakshmî-dhāmaṁ puṭṭittu bhūbhṛin = Makuṭa- maṇi-gaṇ-aḷaṁba-

6 Kādaṁba-vaṁśa || [3*] Kaṁda || Ā vaṁśadalli sauṁdaryy-āvishkṛita-mūrttigaḷ diśā-gaja-daṁta prāvṛita-kirttigaḷ = a - suhṛij-jiv-ākarsha-

7 prapūrttigaḷu palar = esedar || [4*] Ā mahā-mahiśaroḷage || Jaya-lakshmî - narttakî-narttana-pariṇata-śailiūshan = urvvi-vadhūṭi-priya- bhāsva[n]

8 nūtna-ratnaṁ bhuvana-bhavans-dîpāyamāna- pratāp-ōdayan uḍyat-paśchim-áṁbhōnidhi - pati dhareyoḷ bāppu sāmānanē Chaṭṭayadēvaṁ Dēva-rāja-prakaṭita-

9 vibharaṁ śvîkṛit = āścharyya-śauryya || [5*] Kavaḍi-dvipamum = ādiy-āge palavuṁ dvipaṁgaḷaṁ koṇḍu Laṁke-varaṁ taḷta bahitra-saṁtatigaḷ iṁdaṁ sētuvaṁ kaṭṭi kappavan = ugr-āsura-

10 ralli bēḍa palaruṁ Rāma-pratishṭh-āgrahārnv = enal = māṇḍaḷav = aty-udātta[v = eḷnikuṁ Kādaṁba-chakrēśana || [6*] Banav = ettaṁ dhavaḷ āravaṁ kaḍakaḷam vaihāli-pū-dōṁṭav = iṁbine

11 taḷt-aṁgaḍi sūle-gēri keṟegaḷ = kaṅg-oppamam = māḍe neṭṭane bhaitraṁgaḷa mēle Gōve-veras = aṁbhōrāśiyoḷ Iileyiṁ vanadhîśaṁ naḍedaṁ mahā-mahimeyiṁ

12 saurāshṭra-ḍēśaṁ baraṁ || [7*] Aṇakaṁ pēḷv-aḍe Sōma-nātha-vibhuvaṁ karppūrdiṁd = eyde pūraṇeyaṁ māḍi baḷikke kabhilar = adaṁ nirmmāllyamaṁ kūḍe dhāriṇiyo-

13 ḷ = tōṟuguv = eṁdu suṭṭu beleyaṁ bērpp = annegaṁ koṭṭu bhūshaṇam = ādaṁ bhuvanakke Chaṭṭaya-nṛipaṁ v[itr]asta-vidviḍ-nṛipa || [8*] Negaḷ da tuḷā-purushaman = ēn = aga-

14 ṇitav = enal = irddu palavu pesar-ūrggaḷav = î jagav = aṟiye vipra-samitige mige koṭṭaṁ nṛipa-lalāṭa-paṭṭaṁ Chaṭṭa || [9*] Enit = oḷave yajña-kōṭigal = anituṁ mana-

15 mudade neṟeye māḍisi negardd = irdd = enit = oḷave dāna-kōṭigaḷ = anituman = ittaṁ dvijargge Chaṭṭaya-dēva || [10*] Śara-nidhiyoḷ vilāsadoḷe Chaṭṭaya- dēvan = u-

16 dātta-vikrmaṁ bare negardd = irdda Ṭhāṇeyada Mummuri kēld = idir = vvanda kaṇḍu tann = ara-maneg = oydu bhakti-bharamaṁ meṟeyutt-ire putriyaṁ savistara-

17 doḷe koṭṭu koṭṭan-aḷiyaṁge suvarṇṇaman = aydu lakkamaṁ || [11*] Enagiṁ praty-u [pakāra[- U U]ve bēṟ = inn = ēnan = āṁ māḷpen = î vanadhîśaṁg = enut = aṁte Mommuri-nṛi-

18 paṁ śrî-Chaṭṭa-bhūpaṁge neṭṭane koṭṭaṁ dhare mechohe chāga-jaga-jhaṁpaṁ Jhaṁpaḷā - chāryyan = eṁ [U U - - U]yan = āḷdu māḷeyan = enalk = oḷār-ddhanyar = iṁt urvviyoḷ || [12*]

19 Antu negartteyaṁ taḷeda Chaṭṭaya-dēvana nandanaṁ diśā-kānteyaraṁ nija-prabaḷa -kîrtti-su[dhā-rasa- vārddhi-pūraḷdoḷ = tiṁtiṇiy = āge kūḍe jaḷa-kēḷiyan = āḍe sa-rā-

20 gadiṁde dig-daṁtigaḷam muḷimgisidan = ūrjjita-dāna-jaḷa-pravā hadi || [13*] palavuṁ yajñaman = odavisi palavuṁ tuḷā-purushav = irdda ṛitvijargg = ellaṁ pa-

21 lav = agrahāramaṁ biṭṭa = olaviṁ Jayakēsi kirttiyaṁ prakaṭisida || [14*] Tōḷ-valamuṁ padāti-balamuṁ pirid = uṁṭ = enag = endu garvvadiṁd-Āḷ vara chakra[va]-

22 rtti maleyal Jayakēsi-nṛipāḷan = etti baṁd-ēḷ- varalikke jiṁhkarisal = ōḍ isi tettisidaṁ virōdhi beṁ-koḷvan = enippa ponn-oṟeyan = ā ripu-rājana rāja-

23 dhāniyoḷ || [15*] Mudadiṁ tannaya dēśadattal = adhipaṁ permmāḍi-dēvaṁ baralk = idir-vvand =āgaḍe kūrppa tunna magaḷaṁ dhār-ānvitaṁ koṭṭu perchohid = alaṁpaṁ palava-

24 [U]yaṁ kumareyaṁ bhaṇḍāraṁaṁ lekkav = illade tellaṁṭiyan =ārttu koṭṭu negaḷdaṁ lōk-aik-kaḷpa-druma || [16*] Tad-anaṁtaraṁ || Ele Permmāḍi-nṛipāḷa [- U] n-ola-

25 viṁdaṁ pōgi Kalyāṇadoḷ = palaruṁ maṇḍaḷa-nāthar = an = aṟive vaṁdir = bbekkasaṁ-baṭṭ-iral chaladiṁ paṭṭaman = oldu kaṭṭidapan = eṁd-āvēgadiṁd = etti dōr-vvaḷa [- - ∪ ∪-]

26 [∪ - ∪∪∪ -] Koṁkaṇ-ādhîśana || [17*] Bansvaseya Kîrttirajanan = anuva[ṁ]śam = app = antu māḍi Permmāḍige tāṁ vanadhi-pati kîrttiyaṁ neṭṭane taḷeda negaḷda . . . .

27 tta . . . . || [18*] Ad-alladeyuṁ || Vāridhi mēre-dappi kavit = appa-vol = ōvade baṁda Chōḷanaṁ vāri-nidhîsan = appa Jayakēsi-nṛipaṁ chaladim taṟumbi [- - ∪ ∪]-

28 na[∪ - ∪ ∪] yanaṁ neṟe mechchisid = oṁd = agurva pēḷ = āra manakke kautukaman = āgisad = î bhuvan-āṁtarāḷadoḷ || [19*] Maṇḍaḷa -nāthan = eṃd = uṟade kānisid = oḷvade [-] -

29 la[- - - - ∪ ∪] naṁ samānadoḷe kāṇisi-koḷvud = enalke pūṇdu kailkoṇḍen = idaṁ diṭakke baravē ḷ = ene bandu samāna gāṇkeyaṁ kaṇḍu mahatva [- ∪ ∪ ∪]

30 pēḷ [∪ ∪] Koṁkaṇa - chakravarttiyn || [20*] Ā vasudh-ādhipaṁge Jayakēsige kēsari puṭṭuv = andadiṁ Gūvala dēvan = ūrjjita parākrami puṭṭi nij-āsi-deṁshṭreya

31 [- ∪ ∪ - ∪ -][ri-nṛipa]- sāmajamaṁ taḍed = agra-kuṁbha-mukt-āvaḷiyaṁ disā vaniteyargge vibhūshaṇam = āge māḍida || [21*] Madavad = virā[∪] ni [-] -

32 ru [∪∪∪∪]ti saṁkōchisal perchchid = utsāhade mitr-ānika-padga-prakarav = elare sad-dharmma chakra-āḷi-chelviṁ poduval Kādaṁba vaṁśa-sphurad-udaya -girîṁdr-āgradoḷ [- - -]

33 padeyaṁ-geyd = opput-irddaṁ tad-anuja Vijayādityn-dēva-kshitîśaṁ || [22*] Enisida Vijayā-dityana tanū-bhavaṁ negaḷdan = akhiḷa-lakshmi-niḷ ayaṁ vana-nidhi-parîta-dhātrî-jana - nuta . . . .

34 n = enisi Jayakēsi-nṛipa || [23*] Ā Jayakēsiye tān = enal = î Jayakēsi ksham-ādhināthaṁ negardd = î jagamaṁ tannaye bhuja-rājita.ghana-śauryya - raudreyiṁ mudrisida || [24*] [- ∪]-

35 maṇ-ādhirājana vaśî-karaṇ-āstrad = ati-prabhā-sphurat- kîrti-dig-aṁganā- vadana-darppaṇav = ārpu vasuṁdhar-āgra-saṁvarttita-yāchaka-prakara-tushṭikuraṁ bhuja-śakti-vîra-saṁkîrtti-

36 taṁ = eṁd = oḍ = ēṁ vogaḷvud = unnatiyaṁ Jayakēsi-dēvana || [25*] Antu negartte-vetta Jayakēsiya bhāsura - mūrttiyaṁ jagat -kāṁtana kîrttiyaṁ bhuvana-bhuṁbukanē [∪∪-] virōdhi-vikrāṁ.

37 ta-gajēṁdra-kēsariya vikramamaṁ neṟe kēḷdu-gēld = aṇaṁ Kuṁtaḷa-chakravartti Hari-mūrtti jagan-nuta-kîrtti rāgadiṁ || [26*] Enage Jayakēsi munnaṁ manad-olaviṁ . . . .

38 raman = eṁbinal = î Jayakēsi neṭṭane saphaḷaṁ māḷpen = î jagaṁ pognḷ v = inega || [27*] Eṁdu vibhūtiyaṁ dharisi hēma-nagēṁdrame muṁde baṁdu niṁd = aṁdain = appu-keydu ma-

39 ṇi-maṁḍapadoḷ = pada-padmamaṁ nij-ānaṁdade karchchi pū[ṛṇṇa]-kaḷ aś-ōjvaḷa-dhāre virājisalke tāṁ nandaneyaṁ kumāraka śikhāmaṇig = ittan-iḷā taḷ ēśvara || [28*] Tad-anaṁtaraṁ || Kanakādry-a-

40 graṁgaḷ = ēn = achehariye palav = enal hēma-puṁjagaḷaṁ Rōha-nagē ṁdra -vrātav = itt = ett = ene palavu mahā[ratna-puṁbjagaḷaṁ] Śakruna gaṁdh-ēbhakkam = uchchaiśravada mahime-

41 gaṁ mēl = enal = saṁduvaṁ nūtana bhadr-ēbh-āśva-kōṭi-parakaraman = aḷiyaṁg - ittan - ā kuṁtaḷadeśa || [*29] Siriyuṁ Hariyuṁ [Śivanuṁ] Girijeyum = esev = aṁdadinade Jayakēsiyu-

42 v = ādaradiṁ Maiḷala-dēviyuv = urutara - sukha -niḷayar = esedar = i dhare pogaḷe || [30*] Ā Maiḷala- dēviya rūpaṁ mahimeyoḷu Raṁbhegaṁ Tilōttamegaṁ mikk-o-

43 nar-ā vadhūṭigav = ē mātō bagedu nōḍe nūrmmaḍiy = alte || [31*] Ide lā aṇya-sudhābdhi nōrppaḍ = ide chaṁdra-bhrū-viḷāsaṁ samaṁt - ide kāṁti-prasara - kramaṁ [U U U]

44 dal vāsaṁtikā - lakshmi nōḍ-ide sārasvata-janma -bhūmiy = ene lōkaṁ lōkadol rūḍiyaṁ padepiṁ Maiḷala-dēvi-mūrtti-mahimā-vistāra- [- - U -] [32*]

45 Lîḷeya peṁpu chittajana vallabheg = irmmaḍi bhāvisal migil śîḷada peṁpu Sîtege padirmmaḍi chāgada peṁpu lōkamaṁ pāḷipa kaḷpa-vallarige [- U U - U]

46 jasakke nōṁtaḷaṁ Maiḷala-dēviyaṁ pogaḷvud = î dhare pūrṇṇa-śaśāṁka-vaktreya || [33*] Vinutaṁ Vikrama - chakravartti strî-ratnamaṁ bhōgu-bhāgi[ni] [- - U U -]-

47 viyaṁ vibhavadiṁ Kādaṁba-chakrēśanoḷaṁ(l) guṇa-vikrāṁtanoḷ = oldu kūḍi negḷdaṁ Kādaṁba - rājy -ābhivarddhana-sat-kîrtti virājisalke jasamaṁ saṁtōsha [- - U -] || [34*]

48 Enisida Maiḷala-dēvigam = anupama = guṇan = enisi negaḷda Jayakēsigav = inn = anavarataṅ rājya vivarddhanamaṁ mārppaḍeg = ene [rājya-lakshmy-apēkshaṁ] || [35*) [U U U] [kula]-

49 kram-āgataruvaṁ naya-śuddharuv = āptaruṁ diṭakk = anuvaśaruṁ vichārise peṟar = pṛitan-ādhipar = ār = enutte matt enisa de ninn = udātta-bhuja-paṁjara [- U U - U - U]

50 naṁdaney = oḍan = arttiyiṁ besasidaṁ pṛithivi-pati Lakshma-rājana || [36*] Besase Chaḷuky-rāma vibhu Maiḷala-dēviyumaṁ dharitri baṇṇise [U U - U - U]

51 numan = utsevadimd -oḍagoṁḍu baṁdu kaṇg = eseva Girîṁdra-naṁdaneyumaṁ bhuvanēśanumaṁ su-bhakti [- U U U] se dēvi saṁteḍe [U - U U - U U -]-

52 dgha-rājyadoḷ || [37*] Nuḍidu pasāyitaṁ sahaja -buddhiya perchchuge yiṁ pasāyitaṁ toḍev-ari-sēneyaṁ bavaradoḷ [U U - U U -] pasāyitṁ [U U U]-

53 dav = irdda śauchade pasāyitan = āv = eḍegaṁ pasāyitaṁ kaḍu diṭ adiṁde chakrig = ene dhanyano Lakshmaṇa daṇḍanāyaka || [38*] Ā negaḷd = irdda Lakshmaṇa-cha[mūpu-sutaṁ su-gabhi]-

54 ra-vṛittig = aṁbhōnidhig = unnatikkege sur-āddrige dhairyya-guṇakke dhātrigim tāne migil vichāripade tāne dal = aggaḷav = eṁtu nōrppaḍam tāne viśēsha [- U U U -] -

55 tramo savyata Bhavya-rājana || [39*] Ā negaḷda Bhavya-rājana mānini lōka -tray-aika-pāvane vivaḷa-jñāna-pravāha- vistṛite tān = esedaḷ Gaṁge-dēvi . . . . dha-

56 reyoḷ || [40*] Sarasati-sahachari vidyā-pariṇatiyiṁ taṁge Gaṁge śuddhatiyiṁ bhāsura-niti-tanuje tanag = abharaṇadin = ene Gaṁgey = aṁtu - nō . . . . || [41*]

57 Iruḷol-varttisut-irppar = unnatiyum = ugr-ābhiḷa duśśiḷa śūkara-daṁshṭr-āgradoḷ = irppa dhāriṇi-yam = udyat-paṁkaj-ōdbhūta -nūtna-rajaḷ-pō [U U - U] [sāṁ]-

58 ga-dhṛiti-geṭṭ-ōtirdda Savitriyuṁ doreyē chāru-charitradoḷ = negardda Gaṁgā - dēvig = î dhātriyoḷ || [42*] Negaḷd = avara piriya magaṁ nija . . . nija.....

59 yiṁdaṁ mige beḷagi bandhu-jana-vārddhige percheham paḍedu Sōma-vibhu varttisida || [43*] kṛita-vidyaṁ śabda-śāstra-āhamadoḷ = adhigat - ārtthaṁ mahātatkka - śāstra-śrutoyoḷ sā-

60 bitya-śāstra-prakaradoḷ = adhikaṁ Śukra-śāstr-ōnnatiyoḷ bhūlōkadoḷ Bhārggavan = enisi jassṁ = bettu saṁpastutya-sāraavata-lakshmi śuddha-jihvaṁ nogarddan = ava-

61 niyoḷ = Sōma-daṇḍādhināthaṁ || [44*] Trijagat-sēvyane Bhavya-rāya-kaneyam pēḷ Dhvaniyē Lakshimaṇ-āgrajan = atv-unnata -śaucha-saṁpadane Gaṁgā-putrakaṁ śāntanē nija-nā-

62 makk = ene śauryya-saṁgatane Siṁha-jyēshṭhan = eṁb = î vachō-vrajam = anvartthakam = āytu Sōma-vibhug - î viśvaṁbharā-bhāgadoḷ || [45*] pravidita Kantsa -gōtra- ghana-dugdha-payō-

63 dhiyoḷ = udgha-liḷan = udbhavisi ka:·āgra -purṇṇatege nirmaḷa-kāntige lōka-lōchan-ōtsavake suvṛitta-vṛittige bulha-stutig = āśrayav = āgi Sōman = î bhuvanama-

64 n = āvagaṁ nija-yaśaḷ -prithu-chaṁdrikeyiṁda tîvida || [46*] Inituṁ pemmage nermmav = āgi negardd = irdd = ā Sōma-daṇḍādhināthana tammaṁ tri-jagad-vinūta-Śiva-pād-aṁbhōja-bhṛiṁ-

65 gaṁ jagaj-jana-saṁstutya-samasta-tatva-kuśaḷam saṁśuddha-dharmm-ōdyamaṁ Manu-mārgg-ācharaṇaṁ negartte- vaḍedaṁ śri-Siṁha-daṇḍ ādhipa || [47*] Jaḷadhi-prāvṛita- dhātriyo-

66 ḷ = negarddan = altē śabda-vidyā- Pataṁjaḷi shaṭ-tarkka-Shaḍānanaṁ sakaḷa-lōka-stutya-sāhitya saṁkuja-sarvvjñan = udātta-niti-nikara-prakhyāta Chāṇakayan = ujvaḷa-vāṇi-vani-

67 tā-naṭi-naṭana - lilā- prāṁgaṇaṁ Siṁgaṇa || 48*] Ati-vishama rasa-turaṁgama- patiyaṁ Rēvaṁ-tan = aṁt = ir = ēṟalu sakaḷa-kshiti pogaḷ uttire = sēnāpati-tiḷakaṁ

68 Siṁha - daṇḍanāthane ballaṁ || [49*] Siṁgada jasad = oṁd = aḍe mātaṁgaṁ bhayadiṁde bhinnal-ōḍaṁ pari mūtraṁ-goḷguv = end = oḍ = ēṟuvuḍ = eṁ gahaname negaḷda Siṁha-rājaṁg = ibha-

69 maṁ || [50*] Negaḷdaṁ munne pināki dal kṛita-yuga-vyāpāradoḷ trēteyoḷ = negaḷdaṁ Rāman = udātta-chāpa-charitaṁ dvāpāradol-phalguṇaṁ negaḷ daṁ kēḷ kali-kā-

70 ladoḷ dharaṇiyoḷ bil-viddeyoḷ = Siṁgaṇaṁ negaḷdaṁ Kutṁaḷa-chakravartti-kaṭaka- prastutya-daṇḍādhipa || [5*] Nayadoḷ śauryyadoḷ = ārppinoḷ vinaya-

71 doḷ chāturyyadoḷ maṁtra-niśchayadoḷ chāru-charitradoḷ vibhavadoḷ sāhityadoḷ-viśrut-ānvyadoḷ dōr-vvaladoḷ nij-ēśa-hitadoḷ

72 sāmartthyadoḷ sad-guṇ-āśrayan = ēṁ-baṇṇipud = urvvi kūrttu mudadiṁ śrî - Siṁha-daṇḍēśana || [52*] Initu pogartteyaṁ taḷeda Siṁha chamūpana peṁpu-vetta

73 mānini nija-nāthan = unnata- bhujakke jay-āṁgane vaktra-paṁkajakk = anupama - vāg-vadhūṭi subbagatvade perchehid = ura-sthaḷakke sajjana-nuta -lakshmi tān = ene kṛitārtthe-

74 yo Maiḷala-dēvi dhātriyoḷ || [53*] Parijana-pārijāta - late bandhu-jan-āṁ ara-dhēnu dhāriṇî-su-ruchira-hēma-vṛishṭi pati-bhakti-Dhar-ātmaje ramya-harmya -

75 bhāsura-nava-ratna-dîpika dayā-rasa-vārddhi-sudhāṁśu-lēkhey = eṁb-ara-nuḍigalg = aḍarpp = enipa Maiḷala-dēvige meymey = oppadē || [54*1 Tat-tanūjan- amaḷa-vā-

76 nî-vṛitta-stana-kaḷaśa-luḷita- maṇi-bhūshaṇan = udvṛitta-ripu-kudhara-pavi lōk-ōttaman = ene Boppadēvanaṁ mechadar = ār || [55*] Junanayan-otpaḷakke śaśi-biṁbam = e-

77 nippudu mūrtti kîrtti-dig-vaniteyargg = āgaḷuṁ tuḍuvn mauktika -dāmam = enippud = ārppu mēdinige suvarṇṇa-pūrṇa ghana-vṛishtiy = enippudu kū-

78 rppu yuddha-bhājana-ripu-daṁti-saṁhatige siṁham enippudu Boppadēvana || [56*] Intu kaḷatra-putra-bahu-bāndhava- mitra-samanvitaṁ su-niśchiṁta-

79 de Vikramāṁka-sute Maiḷala-dēvigam = aty-udātta-vikrāṁtan = enalke mikka-Jayakēsigav - ūrjjita-rājya-lakshmiyaṁ saṁtatam-uttara-ōttaram-enal parivarddhisu-

80 tirddu dhātriyoḷ || [57*] Svasti Samadhigata- paṁcha mahā-śabda mahā-sāmant-ādhipati mahā-prachaṇḍa-daṇḍanāyaka vibudha-vara dāyaka gōtra-pa-

81 vitra par-āṁganā-puvtra-bandhu-chintā maṇi vivēka-chūḍāmaṇi dushṭ-āśva-malla seṇasa-hṛit-sella Kōdaṇḍa-Rāma raṇa-raṁga-Bhima sāhitya-vidyād hara ni-

82 khiḷa-kaḷā-dhara saṁgîtaka-prasaṁga saṁsēvya- Bharata saujanya-sāmrājya - nirata dhairyya-kuḷa-parvvata satya-Satyavrata maṁtri-Chāṇ akya manuja-māṇikya

83 Sajjana-sahbhā-maṇi-pradipa Vikramāditya-dēva-pratāpa -svarūpa nām-ādi samasta-prasasti-sahitaṁ śrîman-mahā-pradhānan - antaḥpur-ādhyakshaṁ pa-

84 sāyitaṁ mane -verggaḍe daṇḍnāyakaṁ Siṁg-arasar-ssu[kha di]n-irddu || Jala-nidhi-mēkhaḷā-kaḷika-bhūmige Kuntaḷa-śōbhey-ante Kuntaḷa-vishayaṁ manaṁ-goḷi-

85 si tōrppudu tad-vishayakke chaṁkanat-tiḷakada - vol virājisutam-irppudu bhāvise chitta-dōhalaṁ Halasige nāḍu nāḍugaḷa ballahan-uttamaṁ[1]-va-

86 stu-vistrita || [58*] Ā ramaṇîyav = appa vishayakke vibhūshaṇav = āgi toṟppa Kuṁdūran -ad-oṁdu nālageya mānavan-ē-vogaḷdappan-eyde kaivāra-

87 doḷ-ā negarttey = Aamarāvati mikka Aḷakā-puraṁ jagat- sārav = enippa Bhōgavati tān = enikuṁ vasudh-āṁtarāḷadoḷ || [59*] Enisida Kuṁdūra daksbiṇa-dig-vibhā-

88 gadoḷ || Ide dai bhāvisnl = argghya - tîrtthav = ide dal Vārāṇasî tirtthav= iṁt=ide dal tîrttha-varam Prayāge palavuṁ tîrtthaṁgaḷum mattav = iṁt— ide dal

89 niśchayav = eṁdu Siṁgaṇa-chamūpaṁ bēṟe kaiḷāsamaṁ padaḷaṁ māḍ isidaṁ jagakk = enisuguṁ śrî-lakshma-Lakshmēśvara || [60*] Viditaṁ Śrîparvvataṁ baṁd = ava-

90 tarisidudō ramya-Hirmyāchaḷaṁ puṭṭidudō bēṟ = oṁdu Mēru-kshitidhara me diṭaṁ dēvat - āgarad = aṁt-irddudo pēl = eṁb = annegaṁ permmeyin = ese-

---

1. The anusvāra(o) is not necessary

91 du jagakk = oppuguṁ dharmma-harmy -āsvada- raṁgaṁ Si[ṁ*] gaṇ a[ṁ] [māḍi]sida Śiva-gṛihaṁ Laksma-nām-ābhirāma || [61*] Sakaḷa-viḷ āsn-saṁkuḷav = ad = illiye niṁ-

92 dudu tuṁga- maṁgaḷa - prakaravadellav = illi nelegoṁ[ḍudu] kūḍe jagat-traya-sphurat-sukṛitam = ad = ellav = illi nelasirddudu niśchayadiṁdav = embinaṁ

93 prakaṭita-divya- tîrtthav = eseguṁ tri-jagan-nuta Lakshmaṇēśvar || [62*] Svasti Samasta-bhuvan-āśraya śrî-prithvî-vallabha mahā - rāj-ādhirāja paramēśvara

94 parama-bhaṭṭāraka Satyāśraya-kuḷa -tiḷaka Chāḷuky-ābharaṇaṁ śrîmat-Tribhuvanamalla -dēvara vijaya-rājyam-uttar-ōttar- ābhivṛiddhi-pravarddba-

95 mānam = ā - chaṁdr-ārkka -tāraṁ sale Jayaṁtipurada neleviḍinoḷu sukha-saṁkathā-vinōdadiṁ rājyaṁ-geyynttam = ire || Svasti Samadhigata-paṁcha-mahā-

96 sabda mahā-maṇḍalēśvaraṁ Banavāsî-pura-var-ādhîśvaraṁ samasta-bhuvana-saṁstūyamāna-Hara-Dhariṇî-prasūta Triḷōchana- Kadaṁba - vaṁśa- mah -ō-

97 daya-mahîdhareṁdra-śikhar-ābhyudayamāna-mahā -prachaṇḍa-mārtta ṇḍa mārttaṇḍakar āti - tîvra-nija- pratāpa-vaśîkṛita - sakaḷa mahîma-

98 ṇḍalan = uttuṁga-simha-lāṁchchana vānara-mahā-dhvaja permmaṭṭi-tūryya-nirgghōshaṇa chatura-āsîti-nagar-ādhishṭhit- ashṭādaś-āśvamēdha dîkshā - dîkshi-

99 ta-kuḷaprasūta Himavad-girîṁdra-ruṁdra - śikhara-sthāpita - mahā-śakti-prabhāva tyāga-jaga-jhaṁpi-Jhampaḷācharyya niśśaṁka-Rāma su-bhaṭ a-kanaka -

100 nikaś-ōpaḷa śaraṇ āgata-vajra- prākāra lōkaika -kalpa- druma saṁkrānti-dhavaḷa mūrti-Nārāyaṇa kirtti-mārttaṇḍa maṇḍaḷika - lalāṭa-paṭṭa vai-

101 ri-gharaṭṭa su-bhaṭa-rāja-śikhāmaṇi Kādaṁba-chūḍāmaṇ = îty = akhiḷa-nām-ādi-samāḷaṁkritar =appa śrîman-maha-maṇḍaḷēśvaraṁ Jayakesi-

102 dēvaruṁ || Svasty - anavarta - bhūmi-bhāmini dhavaḷa - maṁgaḷa - śriṁgār-āyita-bahaḷa - vimaḷa-yaśaś-chaṁdra- chaṁdrika - virājamāne gandh-ēbha-yāne

103 chatur-udadhi-vēḷā-vaḷaya-vaḷayita- sakaḷa-jagad-adhîśvara - śrîmach - Chāḷukya-chakrādhîśvara-priya-sute vaṁdi-jana- kulpa - late subhaṭa-

104 kanaka-nikaś-ōpaḷe rājy-ābhyudaya - śubha-sūchan-ānēka-śubha - lakshaṇa- lakshit-āmgi tyāga-jaga-jhaṁpan = arddhāṁgi mṛidu- madhura-vachana - chatu-

105 ra-kaḷā-kaḷāp-ōpēte śriṁgāra-sāra-sarvasva-bhūte śrîmaj-Jayakēsi-dēvara viśāḷa-vaksha-sthaḷa-nivāsiniyar = appa-śrîmat-piriy-a-

106 rasi Maiḷala-mahādēviyaruṁ Koṁkaṇa-voṁbhaynūṟuṁ Palasige-pannirchehsiramu Payvey-aynūṟuṁ Kavaḍi-dvîpa- sava-lakkamu-

107 maṁ dushṭa-nigraha śishṭa-pratipāḷaneyiṁ rājyaṁ-geyyutam = irdda || Srîman - mahā-pradhānaṁ daṇḍanāyakaṁ pasāyita[ṁ] Maiḷala-

108 mahā-dēviyara mane-verggaḍe Siṁgarasaru māḍisida Lakshmaṇēśvara - dēvargge Śaka-varshaṁ1047 neya Viśvāvasu- saṁvatsarada Bhā-

109 drapada ba 13 Śukravāra mahātithi yugādiyaṁdu dēvara pūje-naivēdyav = aṁga-bhōga-naṁdā - dîvige-pātra-pāvuḷṁ vidyā-[dā]-

110 na tapōdhana-chchātrargg = āhāra - vastra -dāna brāhmaṇar = āhāra-dāna khaṇḍa-sphuṭita -jîrṇṇō-ddhārukke Pilasige - pannirchchāsiradoḷaga[ṇ = a] -

111 ynūṟaṟa modala-bāḍa[ṁ] rājadhāni Kuṁdūralu taḷa-vṛittiy = āgi biṭṭa purada sîme [|*] Mūḍalu Kennālege pōda per-vaṭṭe teṁka[ḷu]

112 kuṁbāṟa-geṟe paḍuvalu Savaṇana - paḷḷiya baṭṭe baḍagalu beṭṭada basadiya bhūmi [|*] Puradiṁ mūḍalu keṟeyoḷage yabhina [la]

113 gāvuṁḍana sthaḷada tōṁṭa matteru I nairityada kōṇa Baisa-geṟey keḷ agaṇa gardde neṟe [||*] Mattav = aynūṟaṟa baḷiy bāḍa Dāravāḍada

114 mūḍa voladal = Āneya suṁḍili paḍuvalu Navilūra sîmeyiṁ baḍagalu mattaru 50 [|*] Mattaṁ Kuṁḍūr = aynūṟa baḷiya

115 bāḍaṁ Kauvalagēriya sthāna- mānyaṁ poṟag = āgi ohatur-āghāṭa-samēta tri-bhōg-ābhyaṁtara -koṭṭaru ||

೪೦

ನರೇಂದ್ರ

ಕ್ರಿ. ಶ. ೧೧೨೭

ಫಕೀರಪ್ಪ ಬಸಪ್ಪ ತರಗಾರ ಮನೆಯ ಹಿತ್ತಲದಲ್ಲಿರುವ ಮುರುಕು ಕಂಬದ ಮುಂಭಾಗದಲ್ಲಿ ಕಂಡಿರಿಸಿದ ಈ ಶಾಸನ, ಸಾಧಾರಣ ಸ್ಥಿತಿಯಲ್ಲಿದೆ. ಇದು ಕಲ್ಯಾಣ ಚಾಲುಕ್ಯ ಅರಸರ ಆಳಿಕೆಯಲ್ಲಿ ಹುಟ್ಟಿದ ಶಾಸನ. ದೇವರಿಗೆ ಚಿನ್ನದಾನ ನೀಡಿದುದು ಇಲ್ಲಿಯ ವಿಷಯ. ಸಾಲು ೧-೨ ರಲ್ಲಿ "ಚಾಳುಕ್ಯ . . . [ವ]ರ್ಷ ೫೨ನೆಯ ಪ್ಲವಂಗ ಸಂವತ್ಸರ . . . . . ಸುದ್ಧ ಪಾಡಿವ ವಾ." ಎಂದು ಬಂದಿರುವ ಮಿತಿ, ಕ್ರಿ. ಶ. ೧೧೨೭ ಕ್ಕೆ ಸಮಾನವಾಗುತ್ತದೆ.

೧ ಸ್ವಸ್ತಿ ಶ್ರೀಮಚ್ಚಾಳುಕ್ಯ . . . [ವ]ರ್ಷ ೫೨ ನೆಯ

೨ ಪ್ಲವಂಗ ಸಂವತ್ಸರ . . . . . ಸುದ್ಧ ಪಾಡಿವವಾ-

೩ . [ದಂದು] . . . . ದೇವರಿಗೆ ಹೊ-

೪ ನ್ನಮು[ಂ] ಬಿ . . . . [ಮ]ತ್ತ ಕೊಟ-

೫ ಸೆ . . . . ಬೊಸವ [ಬಿ]-

೬ . ಯ[ಂ] ಹೆ . . . . ತ್ತಾ ಈ

೭ . ರ್ಮ್ಮ . . ಪಾಲಿಸಿ . . . ಕೊಟ್ಟಡಂ ಅಳಿದವ[ಂ]

೮ . . . . . ಯೊಳು ಸಹಸ್ರ ಬ್ರಾಹ್ಮಣ . -

೯ . . . . ಲೆಯ ಕೊಂದ ಪಾತಕವನೆಯ್ದುವರು

[ಸವೆದಿದೆ]

This epigraph is on the front side of a broken pillar. It is in the backyard of the bome of Fakirappa Basappa Taregār. This inscription belongs to the Chālukya family of Kalyāna. A grant of Gold to god is its Subject.

The date of this inscription corresponds to A. D. 1127.

1 Svasti Śrî-mach-chāḷukya . . . [va]rsha 52 neya

2 Plavaṁga-saṁvatsara. . . . . suddha Pāḍivavā-

3 . [daṁdu] . . . . dēvarige ho-

4 nnamu[ṁ] bi . . . . [ma]tta koḷa-

5 se. . . . . bosaṇa [bi]-

6 . ya[ṁ] he . . . . ttā î

7 . rmma . . pālisi . . . koṭṭaḍaṁ aḷidava [ṁ]

8 . . . . . yoḷu sahasra-brāhmaṇa . -

9 . . . . ley koṁda pātakavan = eyduvaru

[Worn out]

೪೧

ನರೇಂದ್ರ

ಸು. ಶ. ೧೨

ಫಕೀರಪ್ಪ ಬಸಪ್ಪ ತರಗಾರ ಮನೆಯ ಹಿತ್ತಲದಲ್ಲಿರುವ ತುಂಡುಕಂಬದ ಬಲಭಾಗದಲ್ಲಿ ಕಂಡರಿಸಲಾದ ಈ ಶಾಸನ, ಮಧ್ಯಮ ಸ್ಥಿತಿಯುಳ್ಳದಾಗಿದೆ. ಇದು ಕೇವಲ ದತ್ತಿಯ ವಿಷಯವನ್ನು ಉಲ್ಲೇಖಿಸುತ್ತದೆ. ಲಿಪಿಸ್ವರೂಪವನ್ನು ಗಮನಸಿ, ಇದರ ಕಾಲ ಸುಮಾರು ೧೨ನೆಯ ಶತಮಾನವೆಂದು ಹೇಳಬಹುದು.

೧ . . . . ಧಯ .

೨ . . . . . . ವಾರದಂದು

೩ . . . . ದೇವರು

೪ . . . . . . [ಕಂ] ಪಣ್ಣಾಯದೇ-

೫ . . . . ಪರಿಹಾ-

೬ . . . . . . ಧರ್ಮ್ಮಮಂ ಪ್ರತಿ-

೭ . . . . . . [ಕ]ವಿಲೆಯ ಸಾ-

೮ . . . . . . [ಬ್ರಾ]ಹ್ಮಣರುಮ-

೯ . . . . . . ತ್ಯಾಯನ[ಮಃ] [||*]

The epigraph is on the right side of a fragment pillar and is now lying in the backyard of the house of Fakirappa Basappa Taragār. The letters are worn out here and there.

This inscription mentions a grant only

On palaeographical grounds it can be ascribed to about twelfth century.

1 . . . . dhaya -

2 . . . . . . vāradaṁdu

3 . . . . . . dēvaru

4 . . . . . . [kaṁ] paṇṇaya-dē-

5 . . . . parihā-

6 . . . . dharmmamaṁ prati-

7 . . . . . . [ka]vileya sā-

8 . . . . [brā]hmaṇaruma-

9 . . . . . . tyāya-na[maḥ] [||*]

೪೨

ನರೇಂದ್ರ

ಸು. ಶ. ೧೨

ಗುಡ್ಡದಮಠದ ದಿಬ್ಬದ ಮೇಲಿರುವ ಈ ಶಾಸನ ಎರಡು ತುಣುಕಾಗಿದ್ದು, ಉತ್ತಮಸ್ಥಿತಿಯಲ್ಲಿಲ್ಲ. ನಾಗಚಂದ್ರಸಿದ್ಧಾಂತದೇವ, ಕನಕಶಾಂತಿಮುನಿಗಳ ವರ್ಣನೆ ಮತ್ತು ಕನಕಶಾಂತಿಮುನಿಯ ಸಮಾಧಿಮರಣದ ಸ್ಮರಣಾರ್ಥವಾಗಿ ಬಾಹುಬಲಿಮುನಿ ನಿಷಧಿಕಲ್ಲನ್ನು ನಿಲ್ಲಿಸಿದ ವಿಷಯಗಳು ಇದರಲ್ಲಿವೆ.

ಲಿಪಿಸ್ವರೂಪವನ್ನು ಗಮನಿಸಿ, ಇದು ಸುಮಾರು ೧೨ನೆಯ ಶತಮಾನದ ಶಾಸನವೆಂದು ಪರಿಭಾವಿಸಬಹುದು.

೧–೪ [ಅಸ್ಪಷ್ಟ]

೫ ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ [।*] ಜೀಯಾತ್ರೈಲೋಕ್ಯ . . .

೬ ಶಾಸನಂ ಜಿನಶಾಸನಂ ॥ . . . .

೭–೧೭ [ಸವೆದಿದೆ]

೧೮ . . . . ॥ ಸ್ವಸ್ತಿ ಸಮಸ್ತ–

೧೯ ಭುವನವ[ರ್ಷ]ವೆನ್ತಿರೆ . . . . . . ಜ್ಞಾನತ್ರಿಲೋ . . ನೇತ್ರ ವೀರ . . . .

೨೦ . . . ರ್ವ್ವಜ್ಞ . . ಪರಮೇಶ್ವರ ಪರಮಭಟ್ಟಾರಕ[ಂ] ಮುಖಕಮಳವಿನಿರ್ಗ್ಗತ ಸದ–

೨೧ ಸದಾದಿ . . ಸಪ್ತಭಂಗಿ ಸಮಾಲಿಂಗಿತ . . . . . ರೂಪಣ ಪ್ರವೀಣ

೨೨ . ರಾದ್ಧಾನ್ತಾಮೃತ ಪಾರಾವಾರಪಾರಗರು . . . . ಮಕುಟ . . ಪಂಡಿತಮ–

[ಸವೆದಿದೆ]

೨೫ ಹ ಪ್ರವೀಣ ವಿಜ್ಞಾನಕುಶಳ . ಬ್ರಹ್ಮರಾಕ್ಷಸ ಭೂತಪಿಶಾಚ

೨೬ ಭಯ . . . . ॥ ಜೈನ–

೨೭ ಶಾ[ಸ್ತ್ರ] . . . . ರುಮಪ್ಪ ಶ್ರೀಮನ್ನಾಗಚಂದ್ರಸಿದ್ಧಾನ್ತದೇವರ

೨೮ ಶಿಷ್ಯ . . . .

೨೯ ರಮಳ ವಾರಣ ವಾರಣೇಂದ್ರಃ ಚಾರಿತ್ರರತ್ನ ಸಮಾಳಂಕೃತ

೩೦ [ಪೂ]ತ . ತ್ರಃ ಸೈದ್ಧಾನ್ತಿಕ ಕನಕಶಾನ್ತಿ ಮುಮುಕ್ಷು ರಾಜಃ ॥

೩೧ ಜೀಯಾಜ್ಜಿತಃ . . ನಾತಿಃ . . . ಶ್ರೀ ಕನಕಶಾನ್ತಿ ಸೃದ್ಧಾನ್ತಃ [।*]

೩೨ ಕಾರೇಯಗಣದ . . ಕಾಧಾರಿ . . . . ತೊಪ್ಪು ಕೀರ್ತ್ತಿನಿಧಾನಃ ॥

೩೩ ಪರಮಚರಿತ್ರ . . . . ವ್ವಿಶಿಷ್ಟ ದುಷ್ಪರತರ

೩೪ . . . .

೩೫ ಗಮಂಗೆದೆಯ . . . . ನುತಿ ಜಗಃ

೩೬ ಕನಕಶಾನ್ತಿಮುನೀಶನ . . . . ಪೋಗುಪೋಗು

೩೭ . . . . ಪುಙ್ಪಬಾಣ ಸಕುಲ ಮನವಟ್ಟಿ[ತೋ]

೩೮ . . . . ಬರ್ಮ್ಮದೇ .

೩೯ . . . . ಗರ್ವ್ವಮಂ ತೊಲಗಿಸು ಬಾಪ್ಪುರೆ ಕನಕ-

೪೦ ಶಾನ್ತಿಮುನೀಶ್ವರ . . ಸಲ್ವುದಂ ॥ . . . . ರೋವ್ವಿ ಪರಿಗಣಿ-

೪೧ ತ . . . . ಸೌಮ್ಯಸ್ವಾತಿ . ವರ್ತಿಸೆ ಕಲಿ-

೪೨ ಯುಗ . . . . ಸ್ಥಳಿತಾತಿಯಾಪ . ಸನ್ಯಾಸ-

೪೩ ನದೆ ಕನಕಶಾನ್ತಿಬ್ರತೀನ್ದ್ರ ತ್ರಿ . ತ್ಮೋತ್ಪಳ ಚಂದ್ರವಾರ . . .

೪೪ ಸವಪುರವರದೊಳಂ ಮುಕ್ತಿ ಸಂಪ್ರಾಪ್ತವಾದರ್ ॥ ಗುರುಗಳ ಸುಕೀರ್ತ್ತಿಲ-

೪೫ ತಿಕಾಪರಮೆನಿಸಿ ನಿಶಿಧಿಕಾ ಶಿಳಾಸ್ತಂಭಮನಾದರದಿಂ ನಿರಿಸಿದ-

೪೬ ರುರ್ವ್ವರೆ ಪರಿಕೀರ್ತ್ತಿನೆ ನೆಗಟ್ದಿ ಬಾಹುಬಲಿಮುನಿನಾಥರ್ ॥

This epigraph is of two fragments which are on the hillock of the Guḍḍada Matha. It is not well preserved.

The epigraph mentions the priests Nāgachaṁdradēva and Kanakaśāmti. It also mentions that Bāhubalimuni established a nishidhi- stone in memory of the samādhi-maraṇa of the kanakaśāṁti muni.On palaeographical grounds it can be ascribed to about twelfth century.

1-4 [Worn out]

5 Śriman-parama-gambhîra- syād-vād-āmogha -lāṁchhanaṁ [I*] Jîyat-trail ōkya . . .

6 Śāsanaṁ jina-śāsanaṁ || . . . .

7-17 [Worn out]

18 . . . . || Svasti samasta-

19 bhuvana-va[rsha]v = entire. . . . . . jñāna-tritō. . nētra vira . . . .

20 . . . rvvajña . . paramēśvara parama- bhaṭiāraka[ṁ] mukha-kamaḷa vinirggata sada-

21 sad-ādi . . sapta-bhaṁgi-samāliṁgita . . . . rūpaṇa praviṇa

22 rāddhānt-āmṛita-pārāvāra-pāragaru . . . . makuṭa . . paṁḍita ma-

[Worn out]

25 ha-praviṇa vijñāna-kuśaḷa . brahma-rākshasa bhūta-piśācha

26 bhaya . . . . || Jaina-

27 śā[stra] . . . . rum appa śrîman-Nāgachaṁdra-siddhañta-dēvara

28 śishya . . . .

29 r = amaḷa vāraṇa-vāraṇēṁdraḥ chāritra-ratna samāḷaṁkṛita

30 [pū]ta . traḥ Saiddhāntika- Kanakaśānti mumukshu- rājaḥ ||

31 Jiyāj-jataḥ . . nātiḥ . . . śrî Kanakaśānti- saiddhāntaḥ [|*]

32 kārēya-gaṇada . kādhāri . . . . toppu kîrtti-nidhānaḥ ||

33 Parama-charitra . . . . r-vviśishṭa-dushṭaratara

34 . . . .

35 gamaṁg-edeya . . . . nuti jagaḥ

36 Kanakaśānti-munîśana . . . . pōgu-pōgu

37 . . . . purpaḥ-bāṇa sa-kulaman = avaḷji [tō]

38 . . . . Barmmadē . -

39 . . . . garvvamaṁ tolagisu bāppure Kanaka-

40 śānti-munîśvara . . salvudaṁ || . . . . rorvvi pariganị-

41 ta . . . . saumya swāti. varttise kali-

42 yuga . . . . sthaḷitāti-yupa . sanāsa -

43 nade Kanakaśānti-bratîndra tri . tnōt-paḷa chaṁdravāra . . .

44 Savapuravaradoḷaṁ mukti-saṁprāptav-ādar || Gurugaḷa su-kirtti-la-

45 tikā-param = enisi niśidhikā śiḷāstaṁbhaman-ādaradiṁ nir isida-

46 r = urvvare parikîrttise negaḷda Bāhubali- munināthar ||

೪೩

ನವಿಲೂರ

ಸು. ಶ. ೧೩

ಚಿಕ್ಕಮಠದ ಹೊರಗೋಡೆಯಲ್ಲಿರುವ ಮಧ್ಯಮಸ್ಥಿತಿಯ ಶಾಸನವಿದು. ಮಹಾದೇವಗುಡಿಯಲ್ಲಿರುವ ಅಗಸ್ತೇಶ್ವರದೇವರ ಹೊಲದ ಸೀಮೆಯ ಉಲ್ಲೇಖ ಮಾತ್ರ ತಿಳಿದುಬರುತ್ತದೆ.

ಲಿಪಿಸ್ವರೂಪವನ್ನು ಗಮನಿಸಿ, ಇದು ಸುಮಾರು ೧೩ನೆಯ ಶತಮಾನದ ಶಾಸನವೆಂದು ಹೇಳಬಹುದು.

೧ ಶ್ರೀ ಮದೇವ ಗುಡಿಯಗಸ್ತೇಶ್ವರ-

೨ ದೇವರ ಕೆಯ್ಯ ಮೂಡಣ

೩ ತೆಂಕಣ ಗುಡ್ಡೆ [||*]

This ephigraph is fixed in the outside wall of the Chikka-matha, It is not well preserved.

It records the border of gifted land of Agastēśvara god in the Mahdēva temple.

From palaeography the epigraph may be assigned to the thirteenth century.

1 Śrî Madēva-guḍiy Agastēśvara-

2 dēvara keyya mūdaṇa

3 teṁkaṇa guḍḍe [||*]

೪೪

ನಿಗದಿ

ಕ್ರಿ. ಶ. ೧೧೧೧

AR. 1925-26, No. 466 **SII. XI-ii-160**

ಧಾಜಿಸೂ, ಸಂ. ೩೭

ನಿಗದಿ ಗ್ರಾಮ, ಧಾರವಾಡದಿಂದ ನೈಋತ್ಯಕ್ಕೆ ಸುಮಾರು ೧೦ ಕಿ. ಮೀ. ಅಂತರದಲ್ಲಿದೆ. ಪ್ರಸ್ತುತ ಶಾಸನ, ಇಲ್ಲಿಯ ಕೆರೆ ಏರಿಯ ಮೇಲಿನ ಕಲ್ಮೇಶ್ವರ ದೇವಾಲಯದ ಎದುರು ನಿಂತಿದೆ. ಅಕ್ಷರಗಳು ಸಾಧಾರಣವಾಗಿದ್ದು, ಶಾಸನ ಸುಸ್ಥಿತಿಯಲ್ಲಿದೆ.

ಪ್ರಾರಂಭದಲ್ಲಿ ಗೋವೆಯ ಕದಂಬಮನೆತನದ ಮಹಾಮಂಡಳೇಶ್ವರ ಮೂರನೆಯ ಗೂವಲದೇವನ ನಂತರ ಅಧಿರಾಜನಾದ ಚಾಳುಕ್ಯ ಕುಲದ ಪೆರ್ಮಾಡಿದೇವನ (ಆರನೆಯ ವಿಕ್ರಮಾದಿತ್ಯನ) ಆಳಿಕೆಯ ಉಲ್ಲೇಖವಿದೆ. ನಿಗುಂದೆಯ ಡಾಯಿಮಸೆಟ್ಟಿಯ ಅಳಿಯ ನನ್ನಗಾವುಂಡ ಮತ್ತು ನನ್ನಗಾವುಂಡನ ಅಳಿಯ ಚಾವುಂಡಗಾವುಂಡರು ನಿಗುಂದೆಯ ಮೂಲಸ್ಥಾನದೇವರು ಭಿನ್ನವಾದ ಕಾಲದಲ್ಲಿ ತೇಜೋರಾಶಿಪಂಡಿತರಿಗೆ ಎರಡು ಭೂಮಿಗಳನ್ನು ಮತ್ತು ಒಂದು ಮಠವನ್ನು ದಾನ ನೀಡಿದುದು ಇಲ್ಲಿಯ ವಿಷಯ.

ಸಾಲು ೨೧-೨೨ ರಲ್ಲಿ "ಮಧ್ಯಮ ನಂದನಸಂವಚ್ಛರದ ವೈಶಾಖ ಕೃಷ್ಣಪಕ್ಷ ಶಿವರಾತ್ರೆ ಸೋಮವಾರ" ಎಂದು ಮಿತಿಯ ಉಲ್ಲೇಖವಿದೆ. ಮಧ್ಯಮವೆಂದರೆ ಬಹುಶಃ ನಂದನ ಸಂವತ್ಸರದ ಹಿಂದಿನ ಖರ ಸಂವತ್ಸರವಾಗಿರಬಹುದು. ಗೂವಲದೇವ ಮತ್ತು ಆರನೆಯ ವಿಕ್ರಮಾದಿತ್ಯದೇವರ ಕಾಲದಲ್ಲಿ ಖರ ಸಂವತ್ಸರ, ಶಕವರ್ಷ ೧೦೩೩ ರಂದು ಬರುತ್ತದೆ. ಶಾಸನೋಕ್ತ ತಿಥಿಯು ಈ ಸಂವತ್ಸರದಲ್ಲಿಯ ತಿಂಗಳು, ಪಕ್ಷ, ತಿಥಿ ಮತ್ತು ವಾರಗಳಿಗೆ ಪೂರ್ಣವಾಗಿ ಸರಿಹೋಗುತ್ತಿದ್ದು, ಇದಕ್ಕೆ ಸಮಾನವಾದುದು ಕ್ರಿ. ಶ. ೧೧೧೧, ಮೇ ೮, ಸೋಮವಾರ.

- 'ಮಧ್ಯಮ ನಂದನ ಸಂವಚ್ಛರ' ಎಂಬುದು ಅಪರೂಪ ಪ್ರಯೋಗ.

೧ ಓಂ ನಮಃ ಶಿವಾಯಾ [॥*] ನಮಸ್ತುಂಗಸ್ಸಿರಶ್ಚುಂಬಿಚಂದ್ರಚಾಮರ [ಚಾರ*] ವೇ[।*] ತ್ರೈಳೋಕ್ಯ–

೨ ನಗರಾರಂಭಮೂಲಸ್ತಂಭಾಯಸ[ಂ]ಭಯೇ ಭುವಿ ॥ ಕ್ರಿಯಾಸಕ್ತಿಪಂಡಿತ–

೩ ರ ಸಿಸ್ಯ ತೇಜೋರಾಸಿಪಂಡಿತರ್ಗ್ಗೆ ಆ ಗದ್ದೆಯ ಹೊರೆಯ ಹಕ್ಕಲು ॥

೪ ಸ್ವಸ್ತಿ ಸಮಧಿಗತಪಂಚಮಹಾಸಬ್ದ ಮಹಾಮಂಡಳೇಶ್ವರ [ಬನವಾಸಿಪು]–

೫ ರವರೇಸ್ವರ ಸಮಸ್ತಭುವನಸಂಸ್ತೂಯಮಾನ ಹರಧರಣೀಪ್ರಸೂ–

೬ ತ ತ್ರಿಳೋಚನಕದಂಬವಂಸಮಹೋದಯಮಹೀಧರೇಂದ್ರಸಿಖರಾಭ್ಯು–

೭ ದಯಮಾನಮಹಾಪ್ರಚಂಡಮಾರ್ತ್ತಣ್ಡ ಕರಾತಿತೀಬ್ರನಿಜಪ್ರತಾಪ–

೮ ವಾ(ವ)ಸೀಕ್ರಿತಸಕಳಮಹೀಮಂಡಳಪ್ರಪಂಡಮಂಡಳಿಕಮದವೇದಣ್ಡಗಣ್ಡಸ್ಥಳ–

೯ ಖಣ್ಡನಪಟಿಷ್ಠ(ಷ್ಠ)ನಿಷ್ಠುರಭುಜದಣ್ಡ ಪಡೆಮುಟ್ಟಿಗಣ್ಡನನೂನದಾನವಾರಿಸನ್ತ[ರ್ಪ್ಪಿ]–

೧೦ ತಸಕಳವಿಬ್ಧಜನಸಸ್ಯನುತ್ತುಂಗ[ಸಿಂಹಲಾಂ]ಚನ ವಾನರಮಹಾಧ್ವಜ ಪೆರ್ಮಟ್ಟಿ–

೧೧ ತೂರ್ಯ್ಯನಿರ್ಗ್ಘೋಶಣ ಚತು[ರ]ಸೀತಿನಗರಾಧಿಷ್ಠಿತನಷ್ಟಾದಸಾಸ್ವಮೇದದೀಕ್ಷಾದ್ದೀ(ದೀ)–

೧೨ ಕ್ಷಿತಕುಳನ[೧]ಪ್ರಸೂತ ಹಿಮಾವಧುಗಿ(ಹಿಮವದ್ಗಿ)ರೀಂದ್ರಸಿಖರಸ್ಥಾಪಿತ ಮ–

೧೩ ಹಾಶಕ್ತಿಪ್ರೌಢವ ವೈ[ರಿಇಭ]ಕಣ್ಠೀರವ ಹಾರದೀ ಪರಸುರಾಮ ನಿಸ್ಸಂಕರಾಮ

೧೪ ವಿದ್ವತ್ಸರೋಜಿನೀರಾಜಹಂಸ ಸರಸ್ವತೀಕರ್ಣ್ಣಾಪ(ವ)ತಂಸ ತ್ಯಾಗಝು(ಜ) ಗಝುಂಪಿಝುಂಪ–

೧೫ ಳಾಚಾರ್ಯ್ಯ ಸುಭಟಕನಕಸೆ(ನಿ)ಕಸೋಪಳ ಸರಣಾಗತವಜ್ರಪಂಜರ ಮಂಣ್ಡ–

೧೬ ಳಿಕತ್ರಿಣೇತ್ರ ಲೋಕೈಕಕಳ್ಪದ್ರುಮ ಸಂಕ್ರಾಂತಿದವಳ ಮೂರ್ತ್ತಿನಾರಾಯಣ

೧೭ ಕೀರ್ತ್ತಿಮಾರ್ತ್ತಣ್ಡ ಮಂಡಳಿಕಲಲಾಟಪಟ್ಟ ವೈರಿಘರಟ್ಟ ಸುಭಟರಾಜಸಿಖಾಮಣಿ

೧೮ ಕದಂಬಚೂಡಾಮಣೀತ್ಯಕಿಳರಾಜಾವಳೀವಿರಾಜಿತಮಪ್ಪ ಶ್ರೀಮನ್ಮಹಾಮ–

೧೯ ಣ್ಡಳೇಸ್ವರ ಗೂವಲದೇವಂ ನಿಜರಾಜಧಾನಿ ಗೋವೆಯೊಳಿರ್ದ್ದು ಕೊಂಕಣಮಣ್ಡಳಮಂ ದುಷ್ಟ–

೨೦ ನಿಗ್ರಹ ವಿಸ್ರಿ(ಶ್ರಿ)ಷ್ಟಪ್ರತಿಪಾಳನೆಯಿಂದುತ್ತರೋತ್ತರಾಭಿವ್ರಿದ್ಧಿ ರಾಜ್ಯಂಗೆಯು–

---

[೧] 'ನ' ಅನವಶ್ಯ

೨೧ ತ್ತಿರೆ [॥*] ಸ್ವಸ್ತಿ ಚಾಳುಕ್ಯ ಕುಲದ ಪೆರ್ಮ್ಮಾಡಿದೇವಂ ಪ್ರಿಥ್ವೀರಾಜ್ಯಂಗೆಯುತ್ತಿರೆ । ಮಧ್ಯಮ ನಂದನ–

೨೨ ಸಂವಚ್ಛರದ ವೈಸಾಖ ಕ್ರಿಷ್ಣಪಕ್ಷ ಸಿವರಾತ್ರೆ ಸೋಮವಾರದೊಳು ಮಾರಜವಾಡಿ ನಾಡ–

೨೩ ಕ[ಂ]ಪಣ ಮುಗುಂದಮೂವತ್ತಱ ಬಳಿಯ ಬಾಡ ನಿಗುಂದೆಯ ಡಾಯಿಮಸೆಟ್ಟಿಯ–

೨೪ ಳಿಯ ನನ್ನಗಾಉಣ್ಡಂ ನನ್ನಗಾಉಣ್ಡನಳಿಯಂ ಜಾಉಣ್ಡಗಾಉಣ್ಡ ನಿಗುನ್ದೆಯ ಮೂಲಸ್ಥಾನುದೇವರು

೨೫ ಬಿನ್ನವಾದ ಕಾಲ ಹಿರಿಯ ಕೆಱೆಯ ನೀರೊತ್ತಿನ ಕೆಯ್ಯು ಎರಡು ಕೊಳನು ಮಠವು

೨೬ ತೇಜೋರಾಸಿಪಂಡಿತರ್ಗ್ಗೆ ಧಾರಾಪೂರ್ವ್ವಕಂ ಮಾಡಿ ಕಾಲಂ ಕರ್ಚ್ಚಿ ಕೊಟ್ಟ ಧರ್ಮ ಸರ್ವ್ವ–

೨೭ ಬಾಧೆ ಪರಿಹಾರವಾಗಿ ತಮ್ಮ ಬಿಟ್ಟ ಧರ್ಮ್ಮ[ಮಂ] ಸಲಿಸುವರು । ಸ್ವದತ್ತಂ ಪ–

೨೮ ರದತ್ತಂ ವಾ ಯೋ ಹರತಿ ವಸುನ್ಧರಾ । [ಷಷ್ಟಿರ್ವರ್ಷ] ಸಹಸ್ರಾಣಿ ವಿಷ್ಠಾ–

೨೯ ಯಾಂ ಜಾಯತೇ ಕ್ರಿಮಿ ॥

The village Nigadi is situated to the South-West of Dhārwar t a distance of about 10 Kilometers. The present epigraph is kept infront of the Kalmēśvara temple on the tank bund in the village. The letters are ordinary. The epigraph is well preserved.

The reigns of the Goa Kadamba king Gūvaladēva III and the Chālukya monarch Vikramāditya IV are mentioned in the epigraph.

It records that Nanna-gāvuṁḍa, the brother-in-law of Ḍāyimaseṭṭi and Chāvuṃḍa-gāhvuṁḍa the brother-in-law of Nanna-gāvuṁḍa made the grants of Two lands and o maṭha to Tējōrasi paṁḍita at the time when the idol of god Mūlasthānadēva of Nigunde was broken The record is dated on A. D. 1111, May 8, Monday. The mention of 'Madhyama Naṁdana-Saṁvachchara' is a rare ussge.

1 Ōṁ namaḥ Śivāyā [|| *] Namas = tuṁga- ssiraś-chuṁbi-chaṁdra-chāmara-(chāra*]vē [|*] trailōkya-

2 nagar-āraṁbha-mūla-staṁbhāya Śa[ṁ]bhayē bhuvi || Kriyāsakti-paṁḍ ita-

3 ra sisya Tējōrāsi-paṁḍitargge ā gaddeya horeya halkalu ||

4 Svasti samadhigata-paṁeha -mahā-śabda mahāmaṁḍaḷēsvara [Banavāsi - pu]-

5 ravar-ēsvara samasta-bhuvana-saṁstūyamāna Hara- Dharaṇî-prasū-

6 ta-Triḷōchana- Kadaṁba-vaṁsa- mahōdaya- mahî- dharēṁdra-sikhar-ābhyu-

7 dayamāna -mahā- prachaṁḍa-mārttaṇḍa-kar-āti-tibra-nija-pratāpa-

8 vā(va)sikrita-sakaḷa- mahî- maṁḍala-prachaṁḍa -maṁḍaḷika - mada-vēdaṇḍa-gaṇḍa- sthaḷa-

9 khaṇḍana peṭishti(shṭha)-nishṭura - bhuja-daṇḍa paḍe-muṭṭi-gaṇḍan = anūna-dāna-vāri-santa[rppi]-

10 ta-sakaḷa-vibdha-jana-sasyan = uttuṁga-[siṁha-lāṁ]chana vānara-mahā-dhvaja permaṭṭi-

11 tūryya-nir-gghōśaṇa chatur-asîti-nagar-ādhishṭitan-ashṭādas- āsvamēda -dîkshā-ddî(dî) -

12 kshita-kuḷana[1]-prasūta Himāvadhu-gi (himavad-gi)rîṁdra-ruṁdra-sikhara - sthāpita-ma-

13 hā-śakti-prabhāva vai[rîibha]-kaṇṭhîrava hāradi- Parsurāma nissaṁka -Rāma

14 vidvat-sarōjinî-rāja-haṁsa Sarasvati-karṇṇā- pa(va)taṁsa tyāga-jha(ja)ga-jhaṁpi-Jhaṁpa-

15 ḷāchāryya su-bhaṭa-kanaka-se(ni)kas-ōpaḷa saraṇ-āgata-vajra-paṁjara maṁṇḍa-

16 ḷika-Triṇētra lōkaika-kaḷpa-druma saṁkrāṁti-davaḷa mūrtti-Narāyaṇa

17 kîrtti-marttaṇḍa maṁḍaḷika-lalāṭa-paṭṭa vairi-gharaṭṭa su-bhaṭa-rāja-sikhāmaṇi

---

1. The 'Na' is not necessary.

18 Kadaṁba-chūḍāmaṇ = îty = akiḷa-rājāvaḷi-virājitam = appa śrîman-mahāma-

19 ṇḍaḷēsvara Gūvaladēvaṁ nija-rājadhāni Gōveyoḷ = irddu Koṁkaṇa-maṇḍalamaṁ dushṭa-

20 nigraha-visri (śi)shṭa-pratipāḷaneyiṁd = uttar-ōttar-ābhivriddhi rājyaṁ-geyu-

21 tt = ire [||*] Svasti Chāḷukya- kulada Permmāḍi dēvaṁ prithvi-rājyaṁ-geyutta = ire | Madhyama-Naṁdana-

22 saṁvachcharada Vaisākha-krishṇa -paksha Sivarātre Sōmavāradoḷu Mārajavāḍi-nāḍa-

23 ka(ṁ]paṇa Muguṁda-mūvattaṟa baḷiya bāḍa Niguṁdeya Diyimasettiya-

24 ḷiya Nanna-gāūṇḍaṁ Nanna-gāüṇḍan = aḷiyaṁ Chāūṇḍa-gāüṇḍa Nigundeya Mūlasthānu-dēvaru

25 binnavāda kāla hiriya keṟeya nîr-ottina keyyu eraḍu koḷanu maṭhavu

26 Tējōrāsi-paṁḍitargge dhārā-pūrvvakaṁ māḍi kālaṁ karchehi koṭṭa dharmma sarvvā-

27 bādhe paribārav = āgi tamma biṭṭa dharmma[maṁ] salisuvaru | Sva-dattaṁ pa-

28 ra-dattaṁ vā yō harati vasuṁdharā [sashṭir-varśa]- sahasrāṇi vishṭhā

29 yāṁ jāyatē krimi ||

೪೫

ನುಗ್ಗಿಕೇರಿ

ಸು. ಶ. ೧೨

ನುಗ್ಗಿಕೇರಿ, ಧಾರವಾಡದಿಂದ ದಕ್ಷಿಣಕ್ಕೆ ಸುಮಾರು ೬ ಕಿ. ಮೀ. ಅಂತರದಲ್ಲಿದೆ. ತೀರ್ಥಂಕರವಿಗ್ರಹದ ಪಾದಪೀಠದ ಮೇಲಿರುವ ಈ ಶಾಸನವನ್ನು ಈಗ ಕನ್ನಡ ಅಧ್ಯಯನಪೀಠದಲ್ಲಿ ತಂದಿಡಲಾಗಿದೆ. ಇದು ಅಲ್ಲಲ್ಲಿ ತ್ರುಟಿತವಾಗಿದೆ.

ಸಾಸಿರ್ವರು, ಅರುವತ್ತೊಕ್ಕಲು ಹಾಗೂ ಉಗುರಮುನ್ನೂರ್ವರು ೀರಿ ಕೇಮಣ-ರೇಚಣರು ಜೀರ್ಣೋದ್ಧಾರ ಮಾಡಿಸಿದ ಚಂದ್ರನಾಥ ಬಸದಿಗೂ ಋಷಿಗಳ ಆಹಾರದಾನಕ್ಕೂ, ನರೇಂದ್ರದ ಬಸದಿಯ ಆಚಾರ್ಯ ಬಾಹುಬಲದೇವರ ಶಿಷ್ಯತಿ ರಾಜಮತಿಕನ್ತಿಯರ ಕಾಲು ತೊಳೆದು ಹಣವನ್ನು ದಾನನೀಡಿದ ವಿಷಯವಿಲ್ಲಿದೆ.

ಲಿಪಿಸ್ವರೂಪವನ್ನು ಗಮನಿಸಿ, ಈ ಶಾಸನದ ಕಾಲ ಸುಮಾರು ೧೨ನೆಯ ಶತಮಾನವೆಂದು ಹೇಳಬಹುದು.

೧ ಶ್ರೀಮತು [ಪಿ]ರಿಯ ಅಗ್ರಹಾರಂ ನವಿಲೂರ ಬಳಿಯ ಬಾ . . . ಹಳ್ಳಿಯ ಫ . . .

೨ . ಸದಿ ಮೈಳಾಪಾನ್ವಯ ಕಾರೆಯಗಣದ ಗುಡ್ಡ ಕೇಮಣರೇಚಣ ಜೀರ್ನ್ನೋ . ರಂ ಮಾಡಿಸಿದ ಬಸದಿ .

೩ [ಚ]ಂದ್ರನಾಥಸ್ವಾಮಿಗಳಷ್ಟವಿಧಾರ್ಚ್ಚನೆಗೆ ರಿಷಿಯರಜ್ಜೆಯರಾಹಾರದಾನಕ್ಕೆ ಆ ಸ್ಥಳದ ಅಱುವತೊ .

೪ ಲು ಸಾಸಿರ್ವರುಂ ಉಗುರಮೂನೂರ್ವ್ವರು ಹೇಜೆಂಗೆ ವೀಸ ಎಣಗೆ ಹಾಗ ಶ್ರೀ ರಾಜಧಾನಿ ನರೇಂದ್ರ-

೫ . ದ ಕುಳಿಯ ಬಸದಿಯಾಚಾರ್ಯ್ಯ ಬಾಹುಬಲದೇವರ ಶಿಷ್ಯತಿ ರಾಜಮತಿಕನ್ತಿಯರ ಕಾಲಂ ಕರ್ಚ್ಚಿ ಆ ಚಂದ್ರಾರ್ಕ್ಕ-

೬ ತಾರಂಬರ ಧಾರಾಪೂರ್ವ್ವಕಂಮಾಗೆ ಬಿ(ಂ)ಟರು ॥ ಮಂಗಳ ಮಹಾಶ್ರೀ [॥*]

Nuggikēri is at a distance of about 6 Kilometers to the south of Dharwar. This epigraph is on the pedestal of a tîrthaṁkara image. Now it has been kept in the Institute of Kannada studies.

It records a gift of money by Thousand, Aruvattokkalu and Ugura three hundred, for the offerings of Chaṁdranāth basadi, which was renovated by Kēmaṇa- Rēchaṇa and for the feeding of ascetics, after washing the feet of Rājamati Kaṁti, the disciple of bāhubala- dēva, the āchārya of Narēṁdra basadi.

The epigraph is of about the twelfth century.

1 Śri-matu [pi]riya-agrahāraṁ Navilūra-baḷḷiya bāgha . . .

2 . sadi maiḷāp-ānvaya kāreya-gaṇada guḍḍa Kēmaṇa-Rēchaṇa jîrnnō . raṁ-māḍisida basadi .

3 [Cha]ṁdranātha-swāmiga] = ashṭavidh - ārchchanege rishiyar = ajjeyar-āhāra-dānakke ā sthaḷada aṟuvato .

4 lu sāsirvvaruṁ ugura-mūnūrvvaru hēṟiṁge-vîsa eṇage-hāga srî rājadhāni Narēṁdra-

5 . da kuḷiya basadiy -āchāryya Bāhubala-dēvara śishyati Rājamati-kaṁtiyara kālaṁ-karchchi ā-chaṁdr-ārkka-

6 tāraṁ bara dhārāpūrvvakaṁ-māge bi(ṁ)ṭaru || Maṁgaḷa-mahā śrî [||*]

೪೬

ನುಗ್ಗಿಕೇರಿ

ಸು. ಶ. ೧೮

ಹಾಳು ನುಗ್ಗಿಕೇರಿಯ ಹೊಲದ ಸೀಮೆಯಲ್ಲಿಯ ವಿಗ್ರಹವೊಂದರ ಪಾದಪೀಠದ ಮೇಲೆ ಕಂಡರಿಸಲಾದ ಈ ಶಾಸನ, ಮಧ್ಯಮ ಸ್ಥಿತಿಯಲ್ಲಿದೆ. ಇಲ್ಲಿ ನುಗ್ಗಿಕೇರಿಯ ಉಲ್ಲೇಖಮಾತ್ರ ಕಾಣಿಸುತ್ತದೆ. ಲಿಪಿಸ್ವರೂಪವನ್ನು ಗಮನಸಿ, ಇದು ಇತ್ತೀಚಿನಕಾಲದ ಶಾಸನವೆಂದು ಹೇಳಬಹುದು.

೧ ಶ್ರೀ ಮನ್ನುಗೆಕೇಱಿಯ

೨ . . . . ಮಗಂ . .

This epigraph is on the pedestal of an image which is in a field in Hāḷu-Nuggikēri. It is preserved in fair condition. It mentions the name of Nuggikēri. Letters of this epigraph are in modern character.

1 Śrîman-Nugekēṟiya

2 . . . . magaṁ . .

೪೭

ಬಾಡ

ಸು. ಶ. ೧೨

AR. 1925-26, No. 436 **SII. XV-551**

ಧಾಜಿಸೂ, ನಂ. ೩೯

೧. ನಮಸ್ತುಂಗಶಿರಶ್ಚುಂಬಿ . . . . . ಚಾರವೇ [।*] ತ್ರೈಲೋಕ್ಯನಗ-

೨. ರಾರಂಭ . . . .

೩. ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರ-

೪. ರಂ ಬನವಾಸೀಪುರವರಾಧಿಶ್ವರಂ ಸಮಸ್ತಭುವನಸಂ-

೫. ಸ್ತೂಯಮಾನಹರಧರಣೀಪ್ರಸೂತತ್ರಿಲೋಚನಕ-

೬. ಡಂಬವಂಶಮಹೋದಯಮಹೀಧರೇಂದ್ರಶಿಖರಾಭ್ಯುದ-

೭. ಯಮಾನಮಹಾಪ್ರಚಂಡಮಾರ್ತ್ತಂಣ್ಡ ಮಾರ್ತ್ತಂಣ್ಡ ಕರಾತಿ-

೮. ತೀಬ್ರನಿಜಪ್ರತಾಪವಶೀಕ್ರಿತಸಕಳಮಹೀಮಣ್ಡಳ-

೯. ನುತ್ತುಂಗಸಿಂಹಲಾಂಛನಂ ವಾನರಮಹಾಧ್ವಜಂ ಪೆರ್ಮ್ಮಟ್ಟಿತೂ . .

೧೦. ರ್ಯ್ಯನಿರ್ಗ್ಘೋಶಣಂ ಚತುರಾಶೀತಿನಗರಾಧಿಷ್ಟಿತಾಷ್ಟಾದ-

೧೧. ಶಾಶ್ವಮೇಧಯಜ್ಞದೀಕ್ಷಾದೀಕ್ಷಿತಕುಳಪ್ರಸೂತಹಿಮ-

೧೨. ವದ್ಗಿರೀಂದ್ರರುಂದ್ರಸಿಖರಸ್ಥಾಪಿತಮಹಾಶಕ್ತಿಪ್ರಭಾ-

೧೩. ವ ತ್ಯಾಗಜಗಝುಂಪಝುಂಪಣಾಚಾರ್ಯ್ಯ ನಿಶ್ಶಂಕರಾಮ

೧೪. ಶುಭಟಕನಕನಿಕಶೋಪಳ ಶರಣಾಗತವಜ್ರಪ್ರಾಕಾರಂ

೧೫. ಲೋಕೈಕಕಳ್ಪದ್ರುಮಂ ಸಂಕ್ರಾನ್ತಿಧವಳ ಮೂರ್ತ್ತಿನಾರಾಯ-

೧೬. ಣ ಕೀರ್ತ್ತಿಮಾರ್ತ್ತಂಣ್ಡ ಮಂಡಳಿಕಲಲಾಟಪಟ್ಟ ವೈರಿಘ-

೧೭. ರಟ್ಟ ಶುಭಟರಾಜಶಿಖಾಮಣಿ ಕಾದಂಬಚೂಡಾಮಣೀತ್ಯ-

೧೮. ಖಿಳನಾಮಾವಳೀಸಮಾಳಂಕ್ರಿತರಪ್ಪ ಶ್ರೀಮನ್ಮಹಾಮ-

೧೯. ಣ್ಡಳೇಶ್ವರಂ ಶ್ರೀ ಶಿವಚಿತ್ತವೀರಪೆರ್ಮ್ಮಾಡಿದೇವರಸರು ಶ್ರೀ-

೨೦. ಮದ್ಯುವರಾಜಕುಮಾರಂ ಶ್ರೀ ವಿಜಯಾದಿತ್ಯ ದೇವರ-

೨೧. ಸರುಂ ಸಂಪಗಾಡಿಯ ನೆಲೆವೀಡಿನೊಳಿರ್ದ್ದು ಪಲಸಿಗೆಪನ್ನಿ-

೨೨. ಚ್ಛಾಸಿರಮುಮಂ ಕೊಂಕಣವೊಂಭಯ್ನೂಱುಮಂ ದುಷ್ಟನಿ-

೨೩. ಗ್ರಹಶಿಷ್ಟಪ್ರತಿಪಾಳನೆಯಿಂದಾಳ್ದು ಸುಖಸಂಕಥಾವಿನೋ-

೨೪. ದದಿಂ ರಾಜ್ಯಂಗೆಯ್ಯುತ್ತಮಿರೆ [॥] ಸ್ವಸ್ತಿ ಯಮನಿಯಮಸ್ವಾ-

೨೫. ಧ್ಯಾಯಧ್ಯಾನಧ್ಯಾ(ಧಾ)ರಣಮೋನಾನುಸ್ಥಾಣಜಪಸಮಾ-

೨೬. ಧಿಶೀಳಸಂಪನ್ನರಪ್ಪ ಹೊಸವೊಳಲ ಪ್ರಭುಮುಖ(ಖ್ಯ)-

೨೭. ದಾಮೋದರಭಟ್ಟೋಪಾಧ್ಯಾಯರು ಅನಂತಭಟ್ಟೋಪಾ-

೨೮. ಧ್ಯಾಯರೊಳಗಾಗಿ ನಾಲುವರು ಪ್ರಭುಮುಖ್ಯವಱು-

೨೯. ವತ್ತೊಕ್ಕಲುಂ ತೋಂಟಿಗರುಮೈನೂರ್ವ್ವರುಮಿರ್ದ್ದು ಬಿಟ್ಟ ಧ-

೩೦. ರ್ಮ್ಮಮೆಂತೆಂದಡೆ [॥*] ಶಕವರ್ಶಂ ೧೦೮೦ನೆಯ ಬಹುಧಾನ್ಯಸಂ-

೩೧. ವತ್ಸರದ ಆಶಾಡದಮವಾಸ್ಯೆ ಸೋಮವಾರದಂದು ದ-

೩೨. ಕ್ಷಿಣಾಯನ ಸಂಕ್ರಾನ್ತಿ ವ್ಯತೀಪಾತದ ಪುಣ್ಯತಿಥಿಯೊಳು

೩೩. ಕಿತ್ತೂರು ಮೂವತ್ತಱ ಬಳಿಯ ಬಾಡ ಹೊಸವೊಳಲ ಶ್ರೀ-

೩೪. ಪಂಚಲಿಂಗದೇವರಂಗಭೋಗ ನಿವೇದ್ಯಕ್ಕಂ ಖಂಡಸ್ಫುಟಿತ-

೩೫. ಜೀರ್ಣ್ಣೋದ್ಧಾರಕ್ಕಂ ಅಱುವತ್ತೊಕ್ಕಲ ಒಕ್ಕಲಲ್ಲಿ ಬಣ್ಣಿಗೆ ಗೊ-

೩೬. ಳಗ ೧ ಒಂದು ಹೊಱಿ ೧ [।*] ತೋಂಟಿಗರು ಒಕ್ಕಲಲ್ಲಿ ಚೈತ್ರಕ್ಕೆ ಪಾ-

೩೭. ಗ ೧ ಪವಿತ್ರಕ್ಕೆ ಪಾಗ ೧ ಅಯ್ನೂಱನಾಲುವರು ಒಕ್ಕ-

೩೮. ಲಲ್ಲಿ ಚೈತ್ರಕ್ಕೆ ಪಾಗ ೧ ಪವಿತ್ರಕ್ಕೆ ಪಾಗ ೧ ಅವರಲ್ಲಿ

೩೯. ಗಾತ್ರಕ್ಕೆ ಪಾಗ ೧ ಉಗುರಮೂನೂರ್ವ್ವರು ಒಕ್ಕಲಲ್ಲಿ [ಚೈ]-

೪೦. ತ್ರಕ್ಕೆ ಪಾಗ ೧ ಪವಿತ್ರಕ್ಕೆ ಪಾಗ ೧ . . . . . .

೪೧. [ವೀ]ಸ ೧ ಹೊಱಿಗೆ ಅರೇವಿಸ . . . .[೧]

---

೧ ಮುಂದಿನ ಭಾಗ ನಾಶವಾಗಿದೆ.

The epigraph, which was lying in the Paṁchaliṁga temple of the delapidated village, is now removed and kept in the "Rāṇi Channamma Museum" at Kittur about 3-4 years back. The invocatory and the imprecatory passages are broken away.

The inscription belongs to the independent reign period of the Goa Kadaṁba king Śivachitta Vira Permmāḍidēva.

The inscription records the grant to the temple of Paṁchaliṁga by the four prabhus of Hosavoḷala together with the bodies of Aruvattokkalu and the Tōṁṭiga-ainūrvvaru.

The date of the epigraph corresponds to A. D. 1158, June 30, Monday.

1 Namas = tuṁga-śiraś-chuṁbi . . . . . chāravē [|*] traiḷōkya -naga -

2 r-āraṁbha . . . .

3 Svasti samadhigata-paṁcha- mahā- śabda - mahāmaṁḍaḷeśva-

4 raṁ Banavāsî-pura -var - ādhîśvaraṁ samasta-bhuvana-saṁ-

5 stūyamāna Hara-Dharaṇî-prasūta Triḷōchana - Ka -

6 ḍaṁba-vaṁśa- mahōdaya-mahî-dharēṁdra - śikhar-ābhyuda-

7 yamāna-mahā - prachaṁḍa-mārttaṁṇḍa mārttaṁṇḍa - kar - āti-

8 tîbra-nija-pratāpa-vaśîkrita -sakaḷa- mahî-maṇḍaḷa -

9 n = uttuṁga-siṁha- lāṁchhanaṁ vānara-mahā-dhvajaṁ permmaṭṭi-tū-

10 ryya-nirgghōśaṇaṁ chatur-āśiti-nagar- ādhishṭit-āshṭāda-

11 ś-āśvamēdha-yajña-dîkshā-dîkhita- kuḷa-prasūta Hima-

12 vad-giriṁdra-ruṁdra-śikhara-sthāpita-mahā - śakti-prabhā-

13 va tyāga-jaga -jhaṁpa-Jhaṁpan-āchārrya niśśaṁka-Rāma

14 śubhaṭa-kanaka -nikas-ōpaḷa śaraṇ-āgata- vajra- prākāraṁ

15 lōkaika-kaḷpadrumaṁ saṁkrānti- dhavaḷa mūrtti-Nārāya-

16 ṇa kîrtti-marttaṁṇḍa maṁḍaḷika-lalāṭa-paṭṭa vairi-gha-

17 raṭṭa śubhaṭa-rāja- śikhāmaṇi Kādaṁba-chūḍa maṇ = îty = a-

18 khiḷa-nāmāvaḷi-samāḷaṁkritar = appa śrîman = mahāma-

19 ṇḍaḷēśvaraṁ śrî Śivachitta Vîra Permmāḍi-dēv- arasaru śrî-

20 mad-yuvarāja-kumāraṁ śrî Vijayāditya-dēv-ara -

21 saruṁ Saṁpagāḍiya nelevîḍinoḷ = irddu Palasige-panni-

22 chchhāsiramumaṁ Koṁkaṇa-voṁbhay-nūṟumaṁ dushṭa-ni-

23 graha-śishṭa-pratipāḷaneyiṁd = āḷdu sukha- saṁkathā-vinō-

24 dadiṁ rājyaṁ-geyyuttam- ire [||] Svasti yama -niyama - svā-

25 dhyāya-dhyāna-dhyā (dha) raṇa-mōn-ānusṭhāṇa-japa-samā-

26 dhi-śiḷa-saṁpannar = appa Hosavoḷala prabhu-mukha (khya) -

27 Dāmōdara-bhaṭṭōpādhyāyaru Anaṁta- bhaṭṭōpā-

28 dhyāyar = oḷag = āgi nāluvaru prabhu-mukhyav = aṟu-

29 vatt-okkaluṁ tōṁṭigarum = ainūrvvarum = irddu biṭṭa dha-

30 rmmam = eṁt = eṁd = aḍe [||*] Śaka-varśaṁ 1080 neya Bahudhānya-saṁ-

31 vatsarada Āśāḍad = amavāsye Sōmavāradaṁdu da-

32 kshiṇāyana - saṁkrānti vyatîpātada puṇya-tithiyoḷu

33 Kittūru-mūvattaṟa baḷiya bāḍa Hosavoḷala śrî-

34 Paṁchaliṁga-dēvar = aṁga -bhōga- nivēdyakkaṁ khaṁḍ-sphuṭita-

35 jîrṇṇōddhārakkaṁ aṟuvattokkalu okkalalli baṇṇige-go-

36 ḷaga 1 oṁdu hoṟe 1 [|*] Tōṁṭigaru okkalalli chaitrakke pā

37 ga 1 pavitrakke pāga 1 aynūṟ-naluvaru okka-

38 lalli chaitrakke pāga 1 pavitrakke pāge 1 avaralli

39 gātrakke pāga 1 Ugura-mūnūrvvaru okkalalli [chai]-

40 trakke pāga 1 pavitrakke pāga 1 . . . . . .

41 [vî]sa 1 hoṟege are-visa . . . .[1]

---

1. The remaining portion is broken off.

೬೯

ಸಿದ್ದಾಪುರ

ಸು. ಶ. ೧೨

AR. 1925-26, No. 462 **SII. XV-554**

ಧಾಜಿಸೂ, ನಂ. ೬೧

ಈ ಗ್ರಾಮದ ಸಿದ್ಧೇಶ್ವರ ದೇವಾಲಯದ ಎದುರಿನ ಶಿವಮಂಟಪದ ಹತ್ತಿರವಿರುವ ಭಗವತಿಮೂರ್ತಿಯ ಪಾದಪೀಠದ ಮೇಲಿನ ಶಾಸನವಿದು, ಇದನ್ನು ಮಾಡಿಸಿದವ ಸಾಗ[ಲ]ರ ಕಮ್ಮರಸೆಟ್ಟಿ.

೧. ಶ್ರೀ ಮೂಲಸ್ಥಾನದೇವರ ಭಗವತಿ-

೨. ಯ ಸಾಗ[ಲ]ರ ಕಂಮಱ-

೩. ಸೆಟಿ ಮಾಡಿಸಿದ ಮಂಗಳ-

೪. ಮಹಾ ಶ್ರೀ ಶ್ರೀ [॥*]

The present inscription is engraved on the pedestal of the Bhagavati image in the maṁṭapa infront of the Siddhēśvara temple in the village. The idol was got prepared by one Sāgalara Kammiseṭṭi.

The writing belongs to about the twelfth century.

1 Śri-Mūlasthāna-dēvara Bhagavati-

2 ya Sāga[la]ra Kaṁmaṟa-

3 seṭi māḍisida maṁgala-

4 mahā-śrî-śrî [||*]

೭೦

ಸಿದ್ದಾಪುರ

ಸು. ಶ. ೧೨

AR. 1925-26, No. 463 **SII. XV-555**

ಧಾಜಿಸೂ, ನಂ. ೬೨

ಸಿದ್ಧಾಪುರ ಗ್ರಾಮದ ಸಿದ್ಧೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಗಣೇಶ ವಿಗ್ರಹದ ಕೆಳಗೆ ಬರೆದ ಶಾಸನವಿದು. ಈ ಬರೆವಣಿಗೆ, ಸುಮಾರು ೧೨ನೆಯ ಶತಮಾನಕ್ಕೆ ಸಂಬಂಧಿಸಿದೆ.

೧. ಶ್ರೀಮತು . . .

೨. ಯಕನ ಸುಪುತ್ರ

೩. ತ್ರ . ಲದೇ . ನನ

೪. ಸಿದಲ . . . .

೫. ದಿ ವಿನಾಯಕನ ಮಾಡಿಸಿದ ಮಂಗಳ ಮಹಾ ಶ್ರೀ [॥*]

The present inscription is engraved on the pedestal of the Ganēśa idol, connected with Siddhēśvara temple in the village.

Thee writing belongs to about the twelfth century.

1 Śrîmatu . . .

2 yakana suputra

3 tra . ladē . nana

4 sidala . . . .

5 di Vināyakana māḍisida maṁgaḷa mahā-śrî [||*]

೭೧

ಹೆಬ್ಬಳ್ಳಿ

ಕ್ರಿ. ಶ. ೧೨೪೪

ಧಾಜಿಸೂ, ನ. ೬೪

ಹೆಬ್ಬಳ್ಳಿ ಗ್ರಾಮ, ಧಾರವಾಡದಿಂದ ಪೂವಕ್ಕೆ ೧೨ ಮೈಲು ಅಂತರದಲ್ಲಿದೆ. ಇಲ್ಲಿಯ ಶಂಭುಲಿಂಗ ದೇವಾಲಯದಲ್ಲಿ ಈ ಶಾಸನವಿದೆ.

ಯಾದವಚಕ್ರವರ್ತಿ ಸಿಂಹಣದೇವನ ಆಳಿಕೆಯ ಕಾಲದಲ್ಲಿ ಹುಟ್ಟಿದ ಶಾಸನವಿದು. ಅನಾದಿಬಣಂಜುಪಟ್ಟಣವಾದ ಹೆಬ್ಬಳ್ಳಿಯಲ್ಲಿನ ದೇವಾಲಯವೊಂದಕ್ಕೆ ಸುಂಕವನ್ನು ವಿನಾಯತಿ ಮಾಡಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ.

ಸಾಲು ೧೧-೧೩ರಲ್ಲಿ "[ಕ]ಲಿಯುಗ ಸ . . . . . . ೧೧೬೬ನೆಯ ಕ್ರೋಧಿಸಂವತ್ಸರದ ಭಾದ್ರಪದ ಸು . . . ಸುಕ್ರವಾರ ಸೋಮಗ್ರಹಣ" ಎಂದು ಮಿತಿಯ ಉಲ್ಲೇಖವಿದೆ. ಇದು ಕ್ರಿ. ಶ. ೧೨೪೪, ಅಗಸ್ಟ ೧೯, ಶುಕ್ರವಾರಕ್ಕೆ ಸಮಾನವಾಗಿದೆ.

೧. . . . . . [ಯಾ]ದವ ನಾರಾಯಣ ಭುಜಬಳಪ್ರ . . .

೨. . . . . . [ಣ]ದೇವವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿ [ಪ್ರ] . . .

೩. . . . . . .ಂಬರಂ ಸಲುತ್ತಮಿರೆ ॥ ತತ್ಪಾದಪದ್ಮೋಪ . . .

೪. . . . . [ಧಾ]ನಂ ಸರ್ವ್ವಾಧಿಕಾರಿ ಬಾಹತ್ತರನಿಯೋಗಾ . . .

೫. . . . [ಕ್ಷ್ಮೀ]ಪತಿ ನಿಯೋಗಯೋಗಂಧರಂ ಪತಿಕಾರ್ಯ್ಯಧುರಂಧ . . .

೬ . . . . ಪಿತ ಶ್ರೀಮತ್ಸುಂಕಾಧಿಕಾರಿ [ಕೂಡಿ ಮೂ] . . .

೭ . . . . ಮದನಾದಿಯ ಬಣಂಜುಪಟ್ಟಣಂ ಹೆ[ಬ್ಬ] . . . .

೮. . . . ಗಭೋಗ ರಂಗಭೋಗ ನೈವೇದ್ಯ ನಂದಾದೀವಿಗೆ . . . .

೯. . . . ಚಂಡದೇವರ ಕಪಿಲೆಯ ಹೋರಿ ದೇವರ ಶ್ರೀ ಕಾ . . . .

೧೦. . . . ಯ ವಿಕ್ರಯಕ್ಕೆ ವೊಯ್ದಡಂ ತಂದಡಂ ಸ . . . .

೧೧. . . . ಯವಾಗಿ ಕೊಟ್ಟ ಎತ್ತು ಆಯ್ದು [॥*] ಸ್ವಸ್ತಿ ಶ್ರೀ [ಕ]ಲಿಯುಗ ಸ-

೧೨. . . . ೧೧೬೬ನೆಯ ಕ್ರೋಧಿಸಂವತ್ಸರದ ಭಾದ್ರಪದ ಸು

೧೩. . . . ಸುಕ್ರವಾರ ಸೋಮಗ್ರಹಣದಲಿ ಧಾರಾಪೂರ್ವ್ವಕಂ ಮಾಡಿ ಕೊ-

೧೪. . . . ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾ [।*] ಶಷ್ಟಿರ್ವ್ವರ್ಶ [ಸ]ಹಸ್ರಾ-

೧೫. . . [ಷ್ಟಾ]ಯಾಂ ಜಾಯತೇ ಕ್ರಿಮಿ ॥

Hebbaḷḷi is situated to the east of Dharwar at a distance of about 12 Kilometers. The present epigraph is found in the Śaṁbhuliṁga temple in the village.

At the time of the record, Siṁhaṇadēva of the Sēvuṇas of Dēvagiri was the reigning monarch.

It records the remission of customs for the benefit of a temple situated in the merchant- city Hebbaḷḷi.

The date corresponds to A. D. 1244, August 19, Friday,

1 . . . . . [Yā]dava-Nārāyaṇa bhuja- bala- pra . . .

2 . . . . . [ṇa]-dēva-vijaya-rājyam = uttar-ōttar-ābhivriddhi - [pra]. . .

3 . . . . . . ṁ baraṁ saluttam = ire || Tat-pāda-padm - ōpa . . .

4 . . . . [dhā]nam sarvādhikāri bāhattara-niyog-ā . . .

5 . . . [kshmî]-pati niyōga-yōgaṁdharaṁ pati-kāryya-duraṁdha . . .

6 . . . . pita śrîmat = suṁkādhikāri [kūḍi mū] . . .

7 . . . . mad = anādiya banaṁju-paṭṭaṇaṁ He[rbba] . . . .

8 . . . ga-bhōga-raṁga-bhōga - naivēdya- naṁdā-dîvige . . . .

9 . . . chaṁḍa-dēvara kapileya hōri dēvara śrîkā . . . .

10 . . . ya vikrayakke voyd = aḍaṁ taṁd = aḍaṁ sa . . . .

11 . . . yav = āgi koṭṭa ettu aydu [||*] Svasti śrî [Ka]liyuga saṁ-

12 . . . 1166 neya Krōdhi- saṁvatsarada Bhādrapada su

13 . . . Sukravāra- Sōmagrhaṇadalli dhārāpūrvvakaṁ māḍi kō-

14 ... Sva-dattaṁ para-dattaṁ vā yō harēti vasuṁdharā [|*]śashṭir = vvarśa-[sa]hasrā-

15 .. [shṭā]yāṁ jāyatē krimi ||

೭೨

ಹೆಬ್ಬಳ್ಳಿ

ಕ್ರಿ. ಶ. ೧೨೪೮

ಧಾಜಿಸೂ, ನಂ. ೬೫

ಈ ಗ್ರಾಮದ ಶಂಭುಲಿಂಗ ದೇವಾಲಯದ ದ್ವಾರದ ಎಡಭಾಗದಲ್ಲಿ ನಿಂತಿರುವ ಈ ಶಾಸನವು, ಅಲ್ಲಲ್ಲಿ ತ್ರುಟಿತವಾಗಿದೆ. ಯಾದವ ಕನ್ನರದೇವರ ಆಳಿಕೆಯ ಕಾಲದಲ್ಲಿ ಈ ಶಾಸನ ಹುಟ್ಟಿದೆ.

ಸರ್ವಾಧಿಕಾರಿ ಅಳಿಯ ಮಲ್ಲಿಸೆಟ್ಟಿಯು ಬ್ರಹ್ಮಪುರಿಯ ಹಲವು ಬ್ರಾಹ್ಮಣರಿಗೆ ನೀಡಿದ ದತ್ತಿ, ಈ ಶಾಸನದ ವಿಷಯ.

ಸಾಲು ೬-೮ರಲ್ಲಿ "ಕಹ್ನಾರದೇವವರ್ಷ[ದ] ಮೂಱನೆಯ ಕೀಲಕಸಂವತ್ಸರದ ಪುಷ್ಯ ಶುದ್ಧ ೯ ಭ್ರುಗುವಾರಧಂಧು ಉತ್ತರಾಯಣ ಸಂ[ಕ್ರಾಂ]ತಿ" ಎಂದು ಮಿತಿ ಉಲ್ಲೇಖ ಬರುತ್ತದೆ. ಇದು ಕ್ರಿ. ಶ. ೧೨೪೮, ಡಿಸೆಂಬರ ೨೫, ಶುಕ್ರವಾರಕ್ಕೆ ಸಮಾನವಾಗುತ್ತದೆ.

೧. ಶ್ರೀ ಪಂಡರಂಗೆಯ ಶ್ರೀ ವಿಠಲದೇವರ ವಾರಿಯ ಶ್ರೀ ಹರಿದಾ-

೨. [ಸಂ]ಗಳ [ದೇವರ್ಗ್ಗೆ] ಕಲುವರಸಿಂಗಗಾವುಂಡನು ಕೊಟ್ಟ ವೃತ್ತಿವೊಂದು ॥

೩. ನಮಸ್ತುಂಗಶಿರಶ್ಚುಂಬಿಚಂ[ದ್ರ]ಚಾಮರಚಾರವೇ [।*] ತ್ರೈಲೋಕ್ಯನಗರಾರಂಭಮೂಲಸ್ತಂ-

೪. ಭಾಯ ಶಂಭವೇ [॥*] [೧*] ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ಣವಂ [।*] ದ-

೫. ಕ್ಷಿಣೋನ್ನತದಂಷ್ಟ್ರಾಗ್ರವಿಶ್ರಾಂತಭುವನಂ ವಪುಃ ॥ [೨*]

೬ ಸ್ವಸ್ತಿ ಶ್ರೀಮತು ಯಾದವನಾರಾಯಣ ಭುಜಬಳಪ್ರತಾಪಚಕ್ರವರ್ತ್ತಿ ಶ್ರೀ ಕಹ್ನಾರದೇವವರ್ಷ[ದ]

೭ ಮೂಱನೆಯ ಕೀಲಕಸಂವತ್ಸರದ ಪುಷ್ಯ ಶುದ್ಧ ೯ ಭ್ರುಗುವಾರಧಂದು ಉತ್ತರಾಯಣ ಸಂ[ಕ್ರಂ]-

೮. ತಿಯಲ್ಲಿ ಶ್ರೀಮನ್ಮಹಾಪ್ರಧಾನಂ ರಾಯದಂಡಾಧಿಪತಿ ಬೀಚಿಸೆಟ್ಟಿಯರ ನಿರೂಪದಿಂ ಶ್ರೀಮ[ತು]

೯. ಸರ್ವ್ವಾಧಿಕಾರಿ ಅಳಿಯ ಮಲ್ಲಿಸೆಟ್ಟಿಯರು ಶ್ರೀಮದ್ರಾಜಧಾನಿಪಟ್ಟಣಂ ಅಣ್ಣಿಗೆಱೆಯ ಶ್ರೀ ಅ[ಮ್ರಿ]–

೧೦. ತೇಶ್ವರದೇವರ ಸನ್ನಿಧಾನದಲ್ಲಿ ಶ್ರೀಮದನಾದಿಯ ಬಣಂಜುವಟ್ಟಣಂ [ಹೆ]ಬ್ಬಳ್ಳಿಯ . . . .

೧೧. ಡುಗಳು ಎಂಟುಹಿಟ್ಟು ಪಂಚಮಠದ[ವ]ರ ಕಯ್ಯಲಿ ಆ ಅಳಿಯ ಮಲ್ಲಿಸೆಟ್ಟಿಯರು ಭೂಮಿ[ಯ]–

೧೨. ನು ಧಾರೆಯ ಕಡದುಕೊಂಡು ಬ್ರಹ್ಮಪುರಿ ವೃತ್ತಿಗಳನು ಸಹಿರಣ್ಯವಾಗಿ ಧಾರಾಪೂರ್ವ್ವಕ . .

೧೩. ಕೊಟ್ಟ ಕ್ರಮ ॥ ಶ್ರೀ [ಮಾಧ]ವನಾರಾಯಣದೇವರು ಭಾರದ್ವಾಜಗೋತ್ರ[ದವ . .] ಮಾಧವಸುತ ಕೇಶವಭಟ್ಟರು [ಮಾ]–

೧೪. ಧವಸುತ ಸೋಮನಾಥಭಟ್ಟರು ಸೋಮನಾಥಸುತ ರುಷಿಯಣಭಟ್ಟರು ರೇಚಿದೇವಸುತ ಕೃಷ್ಣಭಟ್ಟರು . .

೧೫. ಸುತ ಜನಾರ್ದನಭಟ್ಟರು ಕೇಶವಸುತ ವಿಷ್ಣುಭಟ್ಟರು ಚಂದ್ರದೇವಸುತ ನಾರಾಯಣಭಟ್ಟರು ತಿವಿಕ್ರ[ಮಸು]–

೧೬. ತ ಪುರ್ಷೋತ್ತಮಭಟ್ಟರು ಬ್ರಹ್ಮದೇವಸುತ ಮಾಧವಭಟ್ಟರು ರೇಚಿಯಣಸುತ [ಮುಪ್ಪ]ಡಿಭಟ್ಟ[ರು] .

೧೭. ರಿಯಣಸುತ ನಾರಾಯಣಭಟ್ಟರು ಬಸವಿದೇವಸುತ ಸ್ವಾಮಿಭಟ್ಟರು ಜಾಮ[ದ]ಗ್ನವತ್ಸಗೋತ್ರದ[ವರು ನರ]–

೧೮. ಸಿಂಹಸುತ ವಿಷ್ಣುಭಟ್ಟರು ವಾಗೀಶ್ವರಸುತ ಕಾವದೇವಭಟ್ಟರು ನರಸಿಂಹಸುತ ಲಕ್ಷ್ಮೀಧರಭಟ್ಟರು [ನರಸಿಂ]–

೧೯. ಹಸುತ ಬ್ರಹ್ಮದೇವಭಟ್ಟರು ಭಾನುಸುತ ಯೋ[ಗಿ]ಭಟ್ಟರು ಸಪ್ತನಾಥಸುತ ದಾ[ಶ್ಯ]ಣಭ[ಟ್ಟರು]

೨೦. ವಾಗೀಶ್ವರಸುತ ನಾಗದೇವಭಟ್ಟರು ಕೊ[ಂ]ಮ್ಮಣಸುತ ನಾರಾಯಣಭಟ್ಟರು ದೇವರು ಭರದ್ವಾ[ಜ]

೨೧. ಜಾಮದಗ್ನರು ಅಂತು ವೃತ್ತಿಯೆಪ್ಪತ್ತುವೊಂದು ॥ ಕಾಶ್ಯಪಗೋತ್ರದವರು ಲಕ್ಷ್ಮೀಧರಸುತ ಮಾಧ[ವಭಟ್ಟ]–

೨೨. ರು ಮ[ಲ್ಲಿ]ದೇವಸುತ ಕಾವದೇವಭಟ್ಟರು ಜನಾರ್ದನಸುತ ಸಪ್ತನಾಥಭಟ್ಟರು ನಾರಾಯಣಸುತ ಸೋ[ಮನಾ]–

೨೩. [ಥ]ಭಟ್ಟರು ವಿರುಪಾಕ್ಷಸುತ ಬಲದೇವಭಟ್ಟರು ಉ[ಪೇಂ]ದ್ರಭಟ್ಟರು ವಿಶ್ವಾಮಿತ್ರಗೋತ್ರದವರು ಕೇಶವಸುತ . .

೨೪. ದೇವಭಟ್ಟರು ರಾಯಿಭಟ್ಟಸುತ ಬ್ರಹ್ಮದೇವಭಟ್ಟರು ಜಾತದೇವಸುತ ರವಿದೇವಭಟ್ಟರು ಆತ್ರೇಯ . . . .

೨೫. ರು ದೇವಣ್ಣ ಸುತ ಭಾಸ್ಕರಭಟ್ಟರು ಅಲ್ಲಾ[ದೆ] ಪಿರುಮಾಳಸುತ ಚೂಡಾಮಣಿಗಳು ಗೋವಿಂದ . . .

೨೬. . ವಿಭಟ್ಟರು ಮಲ್ಲಿದೇವಸುತ ತಿಪ್ಪಣಭಟ್ಟರು ಶ್ರೀರಾಮಸುತ ರವಿದೇವಭಟ್ಟರು ಕೌಂಡಿಂನ್ಯಗೋತ್ರದ . . .

೨೭. . ವಸುತ ಮಾಇಭಟ್ಟರು ಹರಿಹರಸುತ ರುದ್ರಭಟ್ಟರು ಕೇಶವಸುತ ಮಾಧವಭಟ್ಟರು ಲಕ್ಷ್ಮೀಧ[ರ] . .

೨೮. . ರಸ್ವತಿಭಟ್ಟರು ಅನ್ತು ವ್ರಿತ್ತಿ ಹದಿನೆಂಟು ॥ ಶ್ರೀವತ್ಸಗೋತ್ರದವರು ಗಣಪತಿಸುತ ಮಾಧದಭ[ಟ್ಟ] . .

೨೯. . ಸುತ ವಿಷ್ಣುಭಟ್ಟರು ಚೌಡರಾಯಸುತ ಶ್ರೀರಾಮಭಟ್ಟರು ಗೌತಮಗೋತ್ರದಲ್ಲಿ ವಾಮನಸುತ . . .

೩೦. . [ಭಟ್ಟ]ರು ಕೌಶಿಕಗೋತ್ರದಲ್ಲಿ ಚಟ್ಟಿಯಣಸುತ ವೆಣ್ಣಿಭಟ್ಟರು ವಾಶಿಷ್ಟಗೋತ್ರದಲ್ಲಿ ವಿಷ್ಣುಸು[ತ] . .

೩೧. . . . ರು ಚಕ್ರಪಾಣಿಸುತ ಮಲ್ಲಿದೇವಭಟ್ಟರು ಸಾಂಖ್ಯಾಯನಗೋತ್ರದಲ್ಲಿ ಗೊ . . .

೩೨. . . [ಸು]ತ ಸೋಮನಾಥಭಟ್ಟಸ್ಯ ದ್ವಯವಿತ್ತಿ [।*] ಹಾರೀತಗೋತ್ರದಲ್ಲಿ ಲಕ್ಷ್ಮೀಧರಸುತ ಸುದರ್ಷನ[ಭ] . . .

೩೩. . . . ತ್ರದ ಬ್ರಹ್ಮದೇವಸುತ ಸೋಮನಾಥಭಟ್ಟರು [।*] ಅಗಸ್ತ್ಯಗೋತ್ರದ ಆದಿತ್ಯಸುತ ಲಕ್ಷ್ಮೀಧ[ರ] . . .

೩೪. . . . ಗೆಯ ಚೌಂಡರಾಯಭಟ್ಟರು ಕಾಶ್ಯಪಗೋತ್ರದ ಮಹಾದೇವಸು[ತ] ಹರಿಹರ [ಭ] . . .

೩೫. . [ಭಾರದ್ವಾ]ಜಗೋತ್ರದ ಕೇಶವಸುತ ಅಮಿತೇಶ್ವರಭಟ್ಟರು [ಒಣಹಳ್ಳಿ]ಯ ಭಾರದ್ವಾಜಗೋ[ತ್ರ] . . .

೩೬. . . . . ಹಸುತ ಕಾವದೇವಭಟ್ಟಸ್ಯ ತ್ರಯವಿತ್ತಿ ॥ ಈಂತೀ ವೃತ್ತಿಗಳಿಗೆ ಈಕ್ಕಿದ ಕ್ಷೇ[ತ್ರ] . . . .

೩೭. . . . . . ದಮು ಬಡಗ ಮುಂದಾಗಿ ಕರುವಗೆಯಿಂದಮು ಮೂಡ ಮುಂದಾಗಿ . . . . . .

೩೮. . . . . ದಮು ತೆಂಕ ಮುಂದಾಗಿ ಅಯ್ವತ್ತ ಎರಡು ಗೇಣ ಘಳೆಯಲ್ಲಿ ಪ್ರತ್ಯೇಕವೃತ್ತಿಗೆಯಿಂಮತ್ತರ . . . .

೩೯. . . . . ತ್ತ ಏಳು ವೃತ್ತಿಗೆಮೂ ಹಳ್ಳ ಹಂಚಕಬಟ್ಟೆಯ ಯಿದು ಸಹಿತ ನೂಱ . . . .

೪೦. . . . . ತ್ತರು ಕೆಯ ॥ ಈ ವೃತ್ತಿಗಳಿಗೆ ಯೆಕ್ಕದ ಗ್ರುಹ

೪೧. . . . . . ಮ ವೀಥಿಯಿಂ ಮೂಡ ಮುಂದಾಗಿ ಕಲುವರ ಪ್ರಿಥುವಿಸೆಟ್ಟಿಯ . . . .

೪೨. . . . . . ಗುಡ್ಡೆಯಿಂದ ತೆಂಕ ಮುಂದಾಗಿ ಕೋಟೆಯ ಹಳೆಯ ಹುತ್ತಿಂ ಪಡುವಲು . . . .

೪೩. . . . . ದಲು ಹದಿನಾಲ್ಕು ಕೈ ನೀಳ ಅಱುಗೈಯಗಲದ ನಿವೇಶನ ಫೊಂಭತ್ತು ಕೈ . . . .

೪೪. . . . . . . ಹ್ಮಪುರಿಯ ಕೇರಿಯ . . . . ಕೋಟೆಯ ಹಳೆಯ ಹುತ್ತಿಂ . . . .

೪೫. . . . . . . ನೂಱು ಕೈಯಗಲದ ನಿವೇಶನವನು ಬಣಬೆ ಕೋಠಾರಕ್ಕೆ ಯಿಕ್ಕಿದರು [॥] ಯಿ . . . .

೪೬. . . . . . ರಿಯ ಕೇರಿವೊಳಗೆ . . . . . . ಬಾಡ . . . . ತೆಱ ಮಾನ್ಯ [॥*] ಈ ಬ್ರಹ್ಮಪುರಿ . . .

೪೭ . . . . ದಂಡದೋಷ ಅಪುತ್ರಿಕವಿಲ್ಲ ॥ ಬಹುಬಿರ್ವ . . .

೪೮. . . . . ರಾದಿಭಿಃ [।*] ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ ॥ ಸಾಮಾನ್ಯೋ . . .

೪೯. . . . . ಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ [।*] ಸರ್ವ್ವಾನೇತಾನ್ ಭಾವಿನಃ . .

೫೦. . . . ಯೋ ಭೂಯೋ ಯಾಚತೇ ರಾ[ಮಭ]ದ್ರಃ ॥ ದಾನಂ ಚ ಪಾಲನಂ ಚಯ್ಪು ನಿಶ್ರೇಯ . .

೫೧. . . . ತ್ಸ್ವರ್ಗ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇ . . .

೫೨. . . . . ರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿಃ ॥ ಮಂಗಳ ಮಹಾ [ಶ್ರೀ] [॥]

The present epigraph is kept on the left side of the gate of the Śambhuli[illegible]ga temple in the village. It is partially damagd, especially in the latter half.

It mentions the reign of the Yādava king Kannaradēva.

It records the grant of several shares to a number of brahmins along with house-sites, etc, by sarvādhikāri Aḷiya Mallisetti

The date of the record corresponds to A. D. 1248, December 25, Friday

1 Śrî paṁḍaraṁgeya śrî Viṭhala-dēvara vāriya śrî-Haridā-

2 [saṁ]gaḷa [dēvargge] Kaluvara-Siṁga- gāvuṁḍanu koṭṭa vṛitti-voṁdu ||

3 Namas = tuṁga-śiraś-chuṁbi-chaṁdra- chāmara-chārave [|*] traiḷōkya-nagar -āraṁbha- mūla-staṁ

4 bhāya Śaṁbavē [||*] [1*1 Jayaty = āvishkṛitaṁ vishṇōr = vvārāhaṁ kshōbhit-ārṇṇavaṁ [|*] da-

5 kshiṇ-ōnnata-daṁshṭr-āgra-viśrāṁta-bhuvanaṁ vapuḥ || [2*]

6 Svasti śrîmatu Yādava-Nārāyaṇa bhuja-baḷa-pratāpa - chakravartti śrî-Kahnāradēva-varsha[da]

7 mūṟaneya Kîlaka-saṁvatsarada pushya śudhdha 9 Bhruguvāradhaṁdhu uttarāyaṇa-saṁ[krāṁ]-

8 tiyalli śrîman-mahāpradhānaṁ rāya-daṁḍādhipati Bîchiseṭṭiyara nirūpadiṁ śrîma [tu]

9 sarvvādhikāri Aḷiya Malliseṭṭiyaru śrîmad-rājadhāni-paṭṭaṇaṁ Aṇṇigeṟeya śrî-A[mri]-

10 tēśvara-dēvara sannidhānadalli śrîmad-anādiya baṇaṁju-vaṭṭaṇaṁ [He]bbaḷḷiya . . . . .

11 ḍugaḷu eṁṭu-hiṭṭu paṁcha-maṭhadavara kayyali ā Aḷiya Malliseṭṭiyaru bhūmi[ya]-

12 nu dhāreya kaḍadu-koṁḍu brahmapuri vṛittigaḷanu sa-hiraṇyav = āgi dhāra-pūrvvaka . . .

13 koṭṭa krama || Śrî [Mādha]va- Nārāyaṇa-dēvaru Bhāradvāja-gōtra [davaru] Mādhava-suta Keśava - bhaṭṭaru [Mā]-

14 dhava-suta Sōmanātha-bhaṭṭaru Sōmanātha-suta Rushiyaṇa-bhaṭṭaru Rēchidēva- suta Krishṇa-bhaṭṭaru . .

15 suta Janārdana-bhaṭṭaru Kēśava-suta Vishṇu -bhaṭṭaru Chaṁdradēva-suta Nārayaṇa-bhaṭṭaru Trivikra[ma-su]-

16 ta Purshōttama-bhaṭṭaru Brahmadēva-suta Mādhava-bhaṭṭaru Rēchiyaṇ a-suta [Muppa]ḍi-bhaṭṭa[ru] .

17 riyaṇa-suta Nārāyaṇa-bhaṭṭaru Basavidēva-suta Svāmi-bhaṭṭaru Jāma[da]gna-vats- gōtrada -[varu Nara]-

18 siṁha-suta Vishṇu-bhaṭṭaru Vāgîśvara-suta Kāvadēva-bhaṭṭaru Narasiṁha-suta Lakshmîdhara -bhaṭṭaru [Narasiṁ]-

19 ha-suta Brah madēva - bhaṭṭaru Bhānu-suta Yō[gi]-bhaṭṭaru Sapta-nātha-suta Di[śya]ṇa-bha -[ṭṭaru]

20 Vāgîśvara-suta Nāgadēva-bhaṭṭaru Ko[ṁ]mmaṇa-suta Nārāyaṇa-bhaṭṭ aru dēvaru Bharadvā[ja]

21 Jāmadagnaru aṁtu vṛitti yeppattuvoṁdu ‖ Kāsyapa-gōtradavaru Lakshmîdhara-suta Mādha[va-bhaṭṭa]-

22 ru Ma[lli]dēva-suta Kāvadēva-bhaṭṭaru Janārdana-suta Saptanātha- bhaṭ ṭaru Nārāyaṇa-suta Sō[manā]-

23 [tha]-bhaṭṭaru Virupākshạ-suta Baladēva-bhaṭṭaru U[pē]ṁdra-bhaṭṭaru Viśvāmitra -gotradavaru Kēśava-suta . .

24 dēva-bhaṭṭaru Rāyibhaṭṭa-suta Brahmadēva-bhaṭṭaru Jātadēva-suta Ravidēva-bhaṭṭaru Ātrēya . . . .

25 ru Dēvaṇṇa-suta Bhāskara bhaṭṭaru Allā[de] pirumāḷa-suta Chūḍāmaṇ igaḷu Gōviṁd . . .

26 . vi-bhaṭṭaru Mallidēva-suta Tippaṇa -bhaṭṭaru Śrîrāma-auta Ravidēva-bhaṭṭaru Kauṁḍiṁnya-gōtrada . . .

27 . va-suta Māï-bhaṭṭaru Harihara-suta Rudra-bhaṭṭaru Kēśava-suta Mādhava-bhaṭṭaru Laksmî-dha[ra] . .

28 . rasvati-bhaṭṭaru antu vritti hadineṁṭu || Śrîvatsa-gōtradavaru Gaṇapati-suta Mādhava-bha[ṭṭa] . .

29 . suta Vishṇu-bhaṭṭaru Chauḍarāya-suta Śrîrāma-bhaṭṭaru Gautam-gōtradalli Vāmana-suta . . .

30 . [bhaṭṭa]ru Kauśika-gōtradalli Chaṭṭiyaṇa-suta Veṇṇi-bhaṭṭaru Vāśishṭa-gōtradalli Vishṇu-su[ta] . .

31 . . . ru Chakrapāṇi-suta Mallidēva-bhaṭṭaru Sāṁkhyāyana-gōtradalli Go . . .

32 . . [su]ta Sōmanātha-bhaṭṭasya dvaya-vritti [|*] Hārîta-gōtradalli Lakahmîdhara-suta Sudha-rshana-[bha] . . .

33 . . . trada Brahmadēva-suta Sōmanātha-bhaṭṭru [|*] Agastya-gōtrada Āditya-suta Lakshmî-dha[ra] . . .

34 . . . geya Chauṁḍarāya-bhaṭṭaru Kāśyapa-gōtrada Mahādēva- su[ta] Harihara-[bha] . . .

35 . [Bhāradvā]ja-gōtrada Kēśava-suta Amitēśvara-bhaṭṭaru [Oṇaha]ḷi] ya Bhāradvāja-gō[tra] . . .

36 . . . . ha-suta Kāvadēva-bhaṭṭasya traya-vritti || Íṁt = î vṛittigaḷige îkkida kshē[tra] . . . .

37 . . . . . . damu baḍaga-muṁd-āgi Karuvageyiṁdamu mūḍa-muṁd-āgi . . . . .

38 . . . . damu Teṁka-muṁd-āgi ayvatta-eraḍu-gēṇa ghaḷeyalli pratyēka vṛittige yiṁ-mmattara . . . .

39 . . . . tta ēḷu-vṛittigemū haḷḷa-haṁchaka-baṭṭeya yidu sahita nūṟa . . . .

40 . . . . ttaru keya || Í vṛittigaḷige yekkada-gruha

41 . . . . . ma vîthiyiṁ mūḍa-muṁd-āgi Kaluvara Prithuviseṭṭiya . . . .

42 . . . . . guḍḍeyiṁda Teṁka-mumd-āgi kōṭeya haḷeya huttiṁ paḍuvalu . . . .

43 . . . . dalu hadinālku kai nîḷ aṟu-gai-yagalada nivēśana voṁbhattu kai . . . .

44 . . . . . . hmupuriya kēriya . . . . kōṭeya haḷeya huttiṁ . . . .

45 . . . . . . nūṟu kai-yagalada nivēśanavanu baṇabe-kōṭhārakke yikkidaru [||] Yi . . . .

46 . . . . . riya kērivoḷage . . . . . . bāḍa . . . . teṟe mānys [||*] Í brahmapuri . . .

47 . . . . . daṁḍa-dōsha aputrikav = illa || Bahubir = v . . .

48 . . . . rādibhị [|*] yasya yasya yadā bhūmis = tasya- tasya tadā phalaṁ || Sāmānyo . . .

49 . . . . ṇāṁ kālē kālē pālanîyō bhavabhiḥ [|*] sarvvān = ētān bhāvinaḥ . .

50 . . . yō bhūyō yāchatē Rā[mabha]draḥ || Dānaṁ-cha pālanaṁ-chaypa niśrēya . .

51 . . . t = svarggam = avāpnōti pālanād = achyutaṁ padaṁ || Sva-dattāṁ para-dattāṁ vā yō harē . . .

52 . . . . r = varsha sahasrāṇi visṭhāyāṁ jāyatē krimiḥ || Maṁgaḷa-mahā-[śrî] [||]

೭೩

ಹೆಬ್ಬಳ್ಳಿ

ಸು. ಶ. ೧೩

ಧಾಜಿಸೂ, ನಂ. ೬೬

ಹೆಬ್ಬಳ್ಳಿ ಗ್ರಾಮದ ಶಂಭುಲಿಂಗ ದೇವಾಲಯದ ಸಮೀಪದಲ್ಲಿ ಈ ತುಂಡು ಶಾಸನವಿದೆ. ಯಾಪನೀಯ ಸಂಘ, ಪುನ್ನಾಗವೃಕ್ಷ ಮೂಲಗಣಗಳ ಉಲ್ಲೇಖ ಹಾಗೂ ತಲೆಮೊರಬ ಗ್ರಾಮವನ್ನು ತೆರಿಗೆಗಳಿಂದ ಮುಕ್ತಗೊಳಿಸಿ ದತ್ತಿಕೊಟ್ಟ ವಿಷಯಗಳು ಇಲ್ಲಿವೆ. ಇದು ಸುಮಾರು ೧೩ನೆಯ ಶತಮಾನದ ಮಧ್ಯಭಾಗಕ್ಕೆ ಸಂಬಂಧಿಸಿದುದಾಗಿದೆ.

೧. ಶ್ರೀ ಯಾಪನೀಯ ಸಂಘ ಪುಂ-

೨. ನಾಗವಿಕ್ಷಮೂಲ ಗಣಸ್ಯ ॥

೩. ಸ್ಥಿರಮಾಗಿರೆ ತಲೆಮೊರ-

೪.	ಬಮನುರುಮುದದಿಂ

೫.	ಕೊಟ್ಟನಖಿಳಬಾಧಾರಹಿ-

೬.	ತಂ ಸುರುಚಿರಮ[ಯ್ನೂ][೧]

The present epigraph is found near the Śaṁbhuliṁga temple in the village. It records the grant of Tale-moraba village, free from imposts and mentions the Yāpanîya saṁgha and Punnāga-Vṛiksha-mūla -gaṇa.

It appe..rs to belong to the middle of the thirteenth century.

1	Śrî-yāpanîya-saṁgha - puṁ-

2	nāga-vriksha - mūla-gaṇasya ||

3	Sthiram = āgire Tale-mora-

4	baman = uru-mudadiṁ

5	koṭṭan = akhiḷa-bādhā-rahi-

6	taṁ suruchirm = a[ynū][2]

೧. ಮುಂದಿನ ಭಾಗ ಒಡೆದುಹೋಗಿದೆ.

2. The remaining portion is broken off.

೭೪

ಹೆಬ್ಬಳ್ಳಿ

ಸು. ಶ. ೧೬

ಶಂಭುಲಿಂಗ ಗುಡಿಯ ಕಂಬದ ಮೇಲೆ ಕಂಡರಿಸಿದ ಪಟ್ಟಿಕೆ ಶಾಸನವಿದು. 'ಸ್ವಯಂಭುದೇವರ ಸಿವಯನು' ಎಂಬ ಉಲ್ಲೇಖ ಈ ಶಾಸನದಲ್ಲಿದೆ.

ಲಿಪಿಸ್ವರೂಪವನ್ನಾಧರಿಸಿ ಈ ಶಾಸನದ ಕಾಲ ಸುಮಾರು ೧೬ನೆಯ ಶತಮಾನವೆಂದು ನಿರ್ಧರಿಸಬಹುದು.

೧. ಶ್ರೀ ಸ್ವಯಂಭುದೇವರ ಸಿವಯನು

This is a small label inscription on a pillar in the temple of Śaṁbhuliṅga. It mentions Sivaya of the god Svayaṁbhu-dēva.

From the palaeography we may assign the date of this epigraph to sixteenth century.

1 Śri Svayaṁbhu-dēvara Sivayanu

❖❖

ಅನುಬಂಧ

APPENDI

ಪದಸೂಚಿ

ಈ ಪದಸೂಚಿಯಲ್ಲಿ ಬಳಸಿದ ಸಂಕೇತಗಳು ಹಾಗೂ ಅವುಗಳಿಗೆ ಸಮಾನವಾದ ಪದಗಳು ಹೀಗಿವೆ:

ಅಗ್ರ–ಅಗ್ರಹಾರ, ಅಧಿ–ಅಧಿಕಾರಿ, ಅಳ–ಅಳತೆ, ಐ, ವ್ಯ – ಐತಿಹಾಸಿಕ ವ್ಯಕ್ತಿ, ಉಪಾ–ಉಪಾಧ್ಯಾಯ, ಕ–ಕವಿ, ಕದ.ರಾ–ಕದಂಬರಾಜಧಾನಿ, ಕದ.ಅ–ಕದಂಬ ಅರಸು, ಕಲ.ಅ–ಕಲಚುರಿ ಅರಸು, ಕ್ಷೇ–ಕ್ಷೇತ್ರ, ಗ–ಗಣ, ಗಾ–ಗಾವುಂಡ, ಗೋ–ಗೋತ್ರ, ಗ್ರಾ–ಗ್ರಾಮ, ಚಾ.ರಾ–ಚಾಲುಕ್ಯ ರಾಜಧಾನಿ, ಚಾ.ರಾಣಿ–ಚಾಲುಕ್ಯರಾಣಿ, ಚಾ.ಅ–ಚಾಲುಕ್ಯ ಅರಸು, ಜೈನ.ಆ–ಜೈನ ಆಚಾರ್ಯ, ಜೈ.ಸಂ–ಜೈನಸಂಘ, ತೆ–ತೆರಿಗೆ, ತೀರ್ಥ–ತೀರ್ಥಂಕರ, ದಾ–ದಾನ, ದೇ–ದೇವರು, ದೇವತೆ, ನಾ–ನಾಣ್ಯ, ಪಾರಿ–ಪಾರಿಭಾಷಿಕಪದ, ಪೌ.ವ್ಯ–ಪೌರಾಣಿಕ ವ್ಯಕ್ತಿ, ಬ–ಬಸದಿ, ಬಿ–ಬಿರುದು, ಮಂ–ಮಂಡಲಿಕ, ಯಾ.ಅ–ಯಾದವ ಅರಸು, ರಾ–ರಾಜಧಾನಿ, ರೂ–ರೂವಾರಿ, ಲಿಪಿ–ಲಿಪಿಕಾರ, ವಂ–ವಂಶ, ವ್ಯ–ವ್ಯಕ್ತಿ, ವೃ–ವೃತ್ತಿ, ವಿ–ವಿಭಾಗ, ವಿಜ.ಅ–ವಿಜಯನಗರ ಅರಸು, ವ್ಯಾ–ವ್ಯಾಪಾರಿ, ಶಿ.ಶ.–ಶಿವಶರಣ, ಶೈವ.ಆ–ಶೈವಆಚಾರ್ಯ, ಸಾ–ಸಾಮಂತ, ಸಂ–ಸಂಘ.

ಇಲ್ಲಿಯ ಮೊದಲಿನ ಅಂಕಿ ಶಾಸನಸಂಖ್ಯೆಯನ್ನು, ಎರಡನೆಯ ಅಂಕಿ ಆ ಶಾಸನದ ಚರಣಸಂಖ್ಯೆಯನ್ನು ಸೂಚಿಸುತ್ತದೆ.

ನಾಗವರ್ಮ್ಮ	ಅಧಿ	೪೯:೨೧
ನಾಗವರ್ಮ್ಮಯ್ಯ	ವ್ಯ	೩೧:೨
ನಾಗಾರ್ಜ್ಜುನಪಣ್ಡಿತ	ಕ	೫೭:೧೦೩
ನಾಬಳ	ವಂ	೪೯:೩೨
ನಾಮಗಾಮಣ್ಡ	ಗಾ	೪೯:೩೩
ನಾರಾಯಣಭಟ್ಟ	ವ್ಯ	೭೨:೧೫-೧೭
ನಾರಾಯಣ ಭಟ್ಟೋಪಾಧ್ಯಾಯ	ಉಪಾ	೫೩:೭೧
ನಾವಿಂದರು	ವ್ಯ	೯:೧೦, ೨೮:೧೪
ನಿಗುಂದ	ಗ್ರಾ	೪೪:೨೩
ನೀರುಸಾಗರ	ಗ್ರಾ	೫೧:೫೬, ೫೩:೮೦
ನುಗೆಕೆರೆ	ಗ್ರಾ	೪೬:೧
ನುಗ್ಗಿಯಹಳ್ಳಿ	ಗ್ರಾ	೫೧:೫೪
ನೇಮಿತೀರ್ಥಂಕರ	ತೀರ್ಥ	೧೦:೨
ಪಂಚಮಹಾಶಬ್ದ	ಪಾರಿ	೩೪:೮
ಪಂಚಲಿಂಗದೇವ	ದೇ	೬೮:೩೪
ಪಂದ	ರೂ	೬೩:೯೩
ಪಟ್ಟಸಾಹಣಿ	ಅಧಿ	೪:೯
ಪಡವಳರು	ಅಧಿ	೪:೧೪
ಪಣ	ನಾ	೬೬:೫
ಪಣ್ಡಿತರ ಹಂಪಗಾವುಣ್ಡ	ಗಾ	೩:೨೮
ಪದುಮಯ್ಯ	ವ್ಯ	೫೩:೭೨
ಪದ್ಮಲದೇವಿ	ಸ್ತ್ರೀ	೬೪:೪
ಪರಮ	ದೇ	೫೧:೩೯
ಪರಮೇಶ್ವರದತ್ತಿ	ದಾನ	೪:೨೫
ಪಲಸಿಗೆಪನ್ನಿರ್ಚ್ಛಾಸಿರ	ವಿ	೨:೫, ೩:೧, ೧೧:೨೧, ೩೯:೧೦೬, ೪೯:೧೫, ೫೩:೧೧-೪೬, ೫೬:೪೦, ೫೮:೧೦, ೬೮:೨೧
ಪಲಸುಗೆನಾಡು	ವಿ	೫೧:೬

❖❖

Word Index

The abbreviations and their equivalent words used in this index are as follows

agr-agrahāra, b-basadi, c-coin, cap-capital, chā.k-chālukya king, chā.q-chālukya queen, eng-engraver, f-family, fe-female, fes-festival, feu-feudatory, fl-flag, g-god, gā-gāmuṁḍa, gov-governor, gr-grant, gu-guild, h-holy place, h.p-historical person, j.as-jain ascetic, j.n.-jain nun, j.s- jaina saṁgha, kad.cap-kadaṁba capital, kad.k-kadaṁba king, kad.q-kadaṁba queen, kal.k-kalachuri king, lin-lineage, l.p-legendary person, m-merchant, mea-measure, off-officer, p-poet, per-person, pl-place, pro-profession, ś.as-śaiva ascetic, śiv-śivaśaraṇa, t-tax, tea-teacher, te.t-technical term, tit-title, tir-tirthaṁkar, vi-village, vij.k-vijayanagara king, wr-writer, yā.k-yādava king.

The first number indicates the number of the inseription and the second one that of the line.

Anaṁta-bhaṭṭa	tea	68:28
Aṇilāpura	kad,cap	1:33
Aṇṇigere	cap	72:9
Appayya	per	53:50
Arakeṛe	vi	38 : 22
Arasiṁgeṛe	vi	48:18
Arevisa	c	68:41
Aruvana	t	56:56
Ayyvale	vi	51:59
Āditya	per	72:33
Ādityaēva	per	3:11
Ādityadēva	p	63:91
Āhavamalla	chā.k	56:38
Āhavamalla	kal.k	62:30
Āytavarma	per	2:15
Baladēva	per	50:45
Baḷḷa	mea	2:30,33:31
Ballalārāva-vaḍēru	per	10:2
Baṁma-seṭṭi	m	53:67
Baṁmi-seṭṭi	m	6:1
Bammadēva	feu	57:85
Baṇamjiga	m	51:30
Banavi-seṭṭi	m	18:5
Barmmana-chamūpati	off	4:11
Basavidēva	per	72:17
Baysara-sabbayya	per	16:1
Bāḍa	vi	47:14
Bādasa-dēvaṇna	per	3:31
Bāhubaladēva	j.as	45:5

Chāvundarāya	off	54:14
Chenna-pārisva	tir	61:4
Chidayya	p	52:56
Chikka-mallisetti	per	14:8
Chiṇṇaya-nāyaka	per	51:64
Dasavarmma	per	3:27
Dāmōdara-bhaṭṭa	tea	68:27
Dāśyana-bhaṭṭa	per	72:1
Dāyimaseṭṭi	m	44:23
Dehārada-nāgavarmma	per	2:13
Dēmana-bhaṭṭa	per	53:73
Dēma-nāyaka	gov	17:45
Demaṇṇa	per	72:25
Dēraṇṇa	per	29:1
Dērumma	g	64:28
Dēvadāsi-seṭṭi	m	51: 31
Dēvarāsi-paṁḍita	ś.as	32: 52, 67 : 22
Dēvi-seṭṭi	m	27:19
Dhannēsvara-bhaṭṭa	tea	67:18
Dharmmēsvara		33:27
Dhāravāda	vi	27:17,33:25
Doddavāda	vi	16:2
Dramma		29:2
Dummavāḍa	vi	48:28
Eranigere-haḷḷi	vi	62:19
Gadyāṇa	c	4:69,15:6,50:26
Gajādinātha	g	2:13
Gaṁgaṇa	off	49:22
Gaṁgaṇa	per	51:32

Gaṁgādēvi	fe	39:58
Gaṇapati	per	72:28
Gautama-gōtra	lin	72:29
Gātrigaru	m	27:26,52:35
Girijādhiśa	a	51:13
Gojjiyakka	fe	57:41,58:25
Goravagēri	vi	3:28
Goravaṁbola	pl	3:24,5:14
Gōvage	cap	2:6
Gōvarddhanadēva	j.as	56:20,56:29
Gōve kad.	cap	5:5,44:19
Gōvimda	per	72:25
Govipayya-nāyaka	off	38:54
Grāmēvaradēva	j. as	51:71
Gōviṁda	per	72 : 25
Govinpayya-nāyaka	off	38 : 54
Grāmeśvadēva	g	51 : 71
Gūgeyahaḷḷi	vi	1 : 2
Gūvaladēva	kad.k	11:20,12:1, 26:8,44:19, 57:12,58:9
Hagaratage	vi	57:12,58:9 53:72
Haivey-aynūṛu	div	38:11
Halasige	div	5:6,17:54
Halasige-pannirchchhāsira	div	26:8,27:16
Halgaṁḍi	vi	38:27,49:24
Haḷigeṛe	vi	55:3
Haḷḷa-gauṁḍa	ga	67:30

Kuṁābhēsvara	g	2:22
Kuṁdūra-gaḷe	mea	65:29
Kuṁdūr-ainūṛu	div	2:5,11:21 29:11,33:25
Kumdūra-viśaya	div	17:55
Kuṁmaḍi-gaṇa	gana	21:2
Kuṁmudi-gaṇa	gana	22:2
Kuṁtaḷa	div	53:10
Kumudi-gaṇa	gana	56:3
Kundūra-kōḷu	mea	38:52
Kuṛiyagētaṇa	per	51:79
Lakhumaṇēśvara	vara	54:2
Lakshmaṇa-daṇḍānyaka	off	39:53
Lakshmaṇṇēśvara	g	39:108, 52:53
Lakshmarasa	otf	38:15
Lakshmi-seṭṭi	m	3:68
Lakshmidhara	per	72:21
Lokkipriya-śrāheya- gadyāṇa	c	51:72,53:58
Madivaḷa	pro	8:2,50:28
Madhupa	per	4:71,50:45
Madhuvayya	per	29:3
Madhuvōja	per	28:23
Mahādēva	per	72:34
Mahādēvaṇṇa	off	38:55
Mahādēvaraya	yāk	17:40
Mahālakshmidēvi	g	27:1
Mahēśvara-prayāge bhaṭṭayya	per	38:31

Pāri-seṭṭi	m	6:1
Pārītēśvara	tir	14:14
Pārva-gōlu	mea	5:15
Peṁrmmāḍidēva	kad.k	44:21,50:32
Pirumāla	per	72:25
Polalagunda-mūvattu	div	38:10
Polliyakka	fe	57:20,58:18
Posavoḷala	vi	66:3,67:17
Prabhāśāṁka-muni	j.as	56:8
Prithuvi-seṭṭi	per	72:41
Puṁnāgavriksha-mūla	gaṇa	73:2
Purshōttama-bhaṭṭa	per	72:16
Puruhūta	1.p	51:13
Ravidēva	per	72:24
Rājamati- ganti	j.n	45:5
Rāma	1.p	51:13
Ramachamdra-brati	J.as	53:38
Rāmachaṁdra-dēvarāya	yāk	20:3,25:1
Rāmarājadēva	gov	9:6
Rāmarājayya	off	28:9
Rajāditya	per	3:27
Rēchaṇa	per	45:2
Rēchiyaṇa	per	72:16
Rudradēva	per	4:19
Rushiyana-bhaṭṭa	per	72:14
Rūvāri-kumuda-chaṁdra	tit	50:44
Sabbi	div	38:9
Sachchidānaṁda-svāmi	per	52:54, 53:71
Sadāśivadēva	vij.k	9:3, 28:8
Sakaḷēśvara-paṁḍita	ś.as	52:32

Śivachittavira-permmāḍi	kad.k	5:5,48:12,
Sivachittavira-tribhuvanamalla	kad.k	51:8,68:19,7:1
Śivadāsayya	per	2:17
Śivarāja	off	49:21
Śivarāsi-paṁḍita	ś.as	2:6
Śivaśaktidēva-munipa	ś.as	59:19
Śiva śakti- paṁḍita	ś. as	48:27
Sivuṇūru	vi	53:72
Śivuramga-bhaṭa	per	37:1
Soṁṭige	mea	3:81
Sonnalige	h	17:48,51:58
Sōiseṭṭi	m	53:79
Sōma-dadādhipa	off	39:61
Sōmanātha		15:74
Sōnanātha-bhaṭṭa	per	72:14,22:23
Sōmesvara-paṁḍia	S.as	33:31
Sōmi-seṭṭi	m	53:80
Sōsani-seṭṭi	m	27:19
Śriyadēvi	fe	38:42
Śubhachamdra	j.as	56:16
Śudarśaṇa	per	72:32
Suvamrṇna-guḍḍa-dhvaja	fl	27:15
Svarnapāshāṇa-gachcha	gachchha	24:1
Svayaṁbhudēva	g	48:18,50:24, 74:1
Svāmibhaṭṭa	per	72:17
Taḍakōda	vi	27:17,48:28,53:79
Taḷāṛa	pro	1:64
Taḷāri	pro	50:27

Telliga	m	50:28,51:61
Tējōrāsi-parṁḍita	ś.as	44:3
Timmōji	per	28:10
Tippa-gauṁḍu	per	53:46
Tippa-gāuṁḍa	ga	52:30
Tippavve	fe	51:6
Tikayya	per	51:67
Toṁṭigaru	pro	51:34,68:29
Tribhuvanamalla	cha.k	2:2, 15:42, 23:3,26:3, 33:4,51:3, 52:18,57:3, 68:3,62:3
Tribhuvana-vidyā chakravartti	tit	63:91
Trivikrama	per	72:15
Tulāpurusha		4:39,39:13
Turugōḷa	te.t	59:6
Ubhayamukhi	gr	33:35
Udayama-gavuḍa	ga	62:15
Udayavarmmadēva	per	38:28
Ugura-mūnūrvvaru	gu	45:1, 51:36,37; 68 : 39
Ugurēśvaradēva	g	51:36
Uṁmachige	vi	53:79
Uṇkala	vi	3:19
Uṇukal-sabbi-yeraḍu-mūvattu	div	38:9
Upēṁdra-bhaṭṭa	per	72:23
Utsugrāme	div	38:10
Uttavarāśi-paṇḍita	as	3:19

❖❖

ಸಂಕ್ಷೇಪಗಳು

ಕ. ನು.	ಕನ್ನಡ ನುಡಿ
ಕ.ಭಾ.	ಕರ್ನಾಟಕ ಭಾರತಿ
ಕಿ. ಮೀ.	ಕಿಲೋ ಮೀಟರ
ಕ್ರಿ.ಶ.	ಕ್ರಿಸ್ತಶಕ
ಧಾಜಿಸೂ	ಧಾರವಾಡ ಜಿಲ್ಲೆಯ ಶಾಸನಸೂಚಿ
ನಂ	ನಂಬರು
ಪು	ಪುಟ
ಸು.ಶ.	ಸುಮಾರು ಶತಮಾನ
AR	Archaeological Report on South Indian Epigraphy
EI	Epigraphia Indica
IA	Indian Antiquary
KI	Karnatak Inscriptions
KK	Kadaṁba Kula
KRI	Kannada Research Institute
No	Number
SII	South Indian Inscriptions

❖❖

ಮುತ್ತಿನ ಹಾರ ಮಾಲಿಕೆ-೫೦

ಶಾಸನ ಸೂಕ್ತಿಸುಧಾರ್ಣವ

ಆಯ್ಕೆ

ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨
೧೯೯೭

*

ಅರಿಕೆ

'ಸೂಕ್ತಿಸುಧಾರ್ಣವ' ಪ್ರಾಚೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಒಂದು ವಿಶಿಷ್ಟಕೃತಿ. ಉತ್ತಮೋತ್ತಮ ಪದ್ಯಗಳ ಆಯ್ಕೆ, ಕಳೆದು ಹೋದ ಕೃತಿಗಳ ಪದ್ಯಗಳನ್ನು ಉಳಿಸಿಕೊಟ್ಟ ಪ್ರಯತ್ನ –ಈ ಕಾರಣಗಳಿಂದಾಗಿ ಇದಕ್ಕೆ ಮಹತ್ವ ಸಂದಿದೆ. ತನಗೆ ಪ್ರಾಚೀನವಾಗಿದ್ದ ಕೃತಿಗಳಿಂದ ಪದ್ಯಗಳನ್ನು ಆಯ್ದು ರಾಶಿ ಹಾಕುವ ಮೂಲಕ ಕೇವಲ 'ಸಂಗ್ರಹ'ವಾಗಬಹುದಿದ್ದ ಇದಕ್ಕೆ ಹದಿನೆಂಟು ಸ್ಥಲದ ಚೌಕಟ್ಟನ್ನು ಒದಗಿಸಿ, 'ಸಂಕಲನ' ಮಟ್ಟಕ್ಕೆ ಏರಿಸಿದ್ದಾನೆ. ಕವಿ ಮಲ್ಲಿಕಾರ್ಜುನ. ಈ ಕೃತಿಯನ್ನು ಆದರ್ಶವಾಗಿಟ್ಟುಕೊಂಡು ೧೯೨೩ರಷ್ಟು ಹಿಂದೆಯೇ ಆರ್. ನರಸಿಂಹಾಚಾರ್ ಅವರು ಶಾಸನಗಳಿಂದ ಪದ್ಯಗಳನ್ನು ಆಯ್ದುಕೊಂಡು 'ಶಾಸನ ಪದ್ಯಮಂಜರಿ'ಯನ್ನು ಪ್ರಕಟಿಸಿದ್ದಾರೆ. ಇಂತಹದೇ ವಿಭಿನ್ನ ಪ್ರಯತ್ನ ಶ್ರೀ. ಎ.ಎಂ. ಅಣ್ಣಿಗೇರಿ ಮತ್ತು ಶ್ರೀ ಮೇವುಂಡಿ ಮಲ್ಲಾರಿ ಸಂಯೋಜಿಸಿದ 'ಶಾಸನ ಸಾಹಿತ್ಯ ಸಂಚಯ' ಇವುಗಳಿಗಿಂತ ಭಿನ್ನವಾಗಿದೆ, ಈ 'ಶಾಸನ ಸೂಕ್ತಿಸುಧಾರ್ಣವ'. ಸಂಸ್ಕೃತಿಯ ವಿವಿಧ ನೆಲೆಗಳಲ್ಲಿ ಸಾಹಿತ್ಯಿಕ ರಚನೆಗಳನ್ನು ಸಂಗ್ರಹಿಸಿದುದು ಇದರ ವೈಶಿಷ್ಟ್ಯವಾಗಿದೆ.

ಭಾಷಾಮಾಧ್ಯಮದಲ್ಲಿ ಬದುಕನ್ನು ಚಿತ್ರಿಸುವ ಎರಡು ಸಾಧನಗಳೆಂದರೆ ದಾಖಲೆ ಮತ್ತು ಸಾಹಿತ್ಯ. ಇವುಗಳಲ್ಲಿ ಶಾಸನಗಳು ದಾಖಲೆ ವರ್ಗಕ್ಕೆ ಸೇರುತ್ತವೆ. ಹೀಗಿದ್ದೂ ಸಾಹಿತ್ಯಿಕವಾಗಿ ಬರೆಯುತ್ತ ಬಂದ ಕಾರಣ, ಕರ್ನಾಟಕದ ಶಾಸನಗಳು ಸಾಹಿತ್ಯಕ್ಕೆ ಸಾಹಿತ್ಯ, ದಾಖಲೆಗೆ ದಾಖಲೆ ಎನಿಸಿವೆ. ಇಲ್ಲಿ ಸಾಹಿತ್ಯಿಕ ಗುಣದ ಪ್ರಮಾಣ ಅಧಿಕವಾಗಿರುವುದರಿಂದಲೇ ಅವುಗಳನ್ನು ನಮ್ಮ ಪ್ರಾಚೀನ ಸಾಹಿತ್ಯದ ಒಂದು ಮುಖ್ಯ ಭಾಗವೆಂದು ಪರಿಗಣಿಸುತ್ತ ಬರಲಾಗಿದೆ. ಕವಿಚರಿತೆಕಾರರು ತಮ್ಮ ಸಂಪುಟಗಳಲ್ಲಿ ಶಾಸನ ಕವಿಗಳಿಗೂ ಅವಕಾಶ ನೀಡಿದುದು, ಮೇವುಂಡಿ ಅವರು ೧೫೦ರಷ್ಟು ಶಾಸನಕವಿಗಳನ್ನು ಗುರುತಿಸಿ 'ಶಾಸನ ಕವಿಚರಿತೆ' ಬರೆದುದು ಇದಕ್ಕೆ ನಿದರ್ಶನವೆನಿಸಿದೆ.

ಶಾಸನಗಳೆಂಬ ದಾಖಲೆಗಳು ಕಲೆಯನ್ನು ಮೈಗೂಡಿಸಿಕೊಳ್ಳಲು ಕಾರಣ, ಅವುಗಳಿಗೆ ಸಾಹಿತ್ಯಕೃತಿಗಳೇ ಆದರ್ಶವಾದುದು ಮತ್ತು ಕೆಲವೊಮ್ಮೆ ಜನ್ನನಂಥ ಕವಿಗಳೇ ಶಾಸನಪಾಠ ರಚಿಸಿಕೊಟ್ಟುದು. ಹೀಗಾಗಿ ಇವು ಕಾವ್ಯಗಳಂತೆ ಪ್ರಾರ್ಥನೆ, ಸಮುದ್ರ ಇತ್ಯಾದಿ ವರ್ಣನೆಗಳಿಂದಲೇ ಆರಂಭವಾಗುತ್ತ ದಾರಿಯನ್ನು ಕಂಡುಕೊಂಡವು. ನೂರಾರು ಸಾಲುಗಳಷ್ಟು ಹಬ್ಬಿರುವ ಕೆಲವು ಶಾಸನಗಳಂತೂ 'ಚಾರಿತ್ರಿಕಕಾವ್ಯ'ದಷ್ಟು ಮಹತ್ವ ಪಡೆದವು.

ನಮ್ಮ ಶಾಸನಗಳಲ್ಲಿ ಮೊದಮೊದಲು ಸಾಹಿತ್ಯಿಕ ಬಿಡಿ ಪದ್ಯಗಳು ಕಾಣಿಸಿಕೊಂಡರೆ, ಕವಿರಾಜಮಾರ್ಗೋತ್ತರ ಕಾಲದಲ್ಲಿ ಈ ಪದ್ಯಗಳನ್ನು ಗದ್ಯದೊಂದಿಗೆ ಸಂಯೋಜಿಸುವ 'ಚಂಪೂಮಾದರಿ' ಇಲ್ಲಿ ರೂಪಗೊಂಡಿತು. ಮೂಲತಃ ದಾಖಲೆಗಳಾಗಿರುವುದರಿಂದ ಶಾಸನಗಳಿಗೆ ದಾಖಲೆ ಸಂದರ್ಭದಲ್ಲಿ ಗದ್ಯವು ಅಗತ್ಯವೆನಿಸಿ, ದಾಖಲೇತರ ಸಂದರ್ಭಗಳಲ್ಲಿ ಪದ್ಯಗಳೂ ಸೇರಿಕೊಂಡು, ರೂಪ ತಾಳಿದ ಗದ್ಯ-ಪದ್ಯ ಮಿಶ್ರಣದ ಚಂಪೂ ಸಂಪ್ರದಾಯವೇ ಉದ್ದಕ್ಕೂ ಮುನ್ನಡೆಯಿತು. ಬರುಬರುತ್ತ ಪದ್ಯವ್ಯಾಮೋಹ ಎಷ್ಟು ಅಧಿಕವಾಯಿತೆಂದರೆ ಗದ್ಯದಲ್ಲಿಯೇ ಹೇಳಬೇಕಾದುದನ್ನು,

ಬಯ್ದಂಗೆ ಪಣಮುವೊಂದುಂ
ಪೊಯ್ದಂಗಾರು ಪಣಮಿರಿಯೆ ಪನ್ನೆರಡು ಪಣಂ
ಪೊಯ್ದಿರದೆ ಸುರಿಗೆಗಿರ್ತಿರ
ದೆಯ್ದಿದವಂಗೆಂಟು ಪಣಮೆ ದಂಡಂ ನಿರುತಂ॥

ಎಂಬಂತೆ ಪದ್ಯದಲ್ಲಿ ಹೇಳಿ ಮುಗಿಸಿದರು. ಹೀಗಿದ್ದೂ ಸಾಹಿತ್ಯಿಕ ಪದ್ಯಗಳಿಗೆ ಶಾಸನಗಳಲ್ಲಿ ಕೊರತೆಯಿಲ್ಲ. ಕ್ವಚಿತ್ ಎಂಬಂತೆ ಸಾಹಿತ್ಯಿಕ ಗದ್ಯಸೃಷ್ಟಿಯನ್ನೂ ಮರೆಯಲಿಲ್ಲ. ಆದುದರಿಂದ ಇಲ್ಲಿ ಒಂದೆರಡು ಸಾಹಿತ್ಯಿಕ ಗದ್ಯ ಮಾದರಿಗಳನ್ನು ಸೇರಿಸಲಾಗಿದೆ.

ಶಾಸನಗಳು ಮುಖ್ಯತಃ ಮಾರ್ಗಛಂದಸ್ಸಿಗೆ ಒಲಿದಿದ್ದರೂ ದೇಶೀ ಛಂದಸ್ಸೂ ಅಲ್ಲಲ್ಲಿ ಕಾಣಿಸಿಕೊಂಡಿದೆ. ಇದಕ್ಕೂ ಅವಕಾಶ ಸಿಗಲೆಂಬ ದೃಷ್ಟಿಯಿಂದ ಈ ಕೃತಿಯಲ್ಲಿ ಅಕ್ಷರವೃತ್ತಗಳೊಂದಿಗೆ ಮಾತ್ರಾಛಂದಸ್ಸಿನ ರಗಳೆ. ಉತ್ಸಾಹವೃತ್ತಗಳನ್ನೂ ಅಂಶಛಂದಸ್ಸಿನ ತ್ರಿಪದಿ, ಪಿರಿಯಕ್ಕರ, ಅಂಶ ಷಟ್ಪದಿಗಳನ್ನೂ ಎತ್ತಿಕೊಳ್ಳಲಾಗಿದೆ.

ಪದ್ಯವೇ ಇರಲಿ, ಗದ್ಯವೇ ಇರಲಿ, ಸಂಸ್ಕೃತದ ಪ್ರವೇಶ ಕಾರಣವಾಗಿ ನಮ್ಮ ಸಾಹಿತ್ಯಭಾಷೆಯಲ್ಲಿ ದೇಶಿ ಮತ್ತು ಮಾರ್ಗ ಎಂಬ ಎರಡು ಶೈಲಿ ಕವಲುಗಳು ಕಾಣಿಸಿಕೊಂಡವು. ಕನ್ನಡದ ಕವಿ ಸಾಹಿತ್ಯ ಪಂಪಯುಗದಲ್ಲಿ ಮಾರ್ಗಶೈಲಿ ಪ್ರಧಾನವಾಗಿ, ಬಸವಯುಗದಲ್ಲಿ ದೇಶಿ ಶೈಲಿ ಪ್ರಧಾನವಾಗಿ ಮುನ್ನಡೆದರೆ, ಶಾಸನಸಾಹಿತ್ಯ ಉದ್ದಕ್ಕೂ ಮಾರ್ಗಶೈಲಿ ಪ್ರಧಾನವಾಗಿಯೇ ಮುನ್ನಡೆಯಿತು. ಇದಕ್ಕೆ ಕಾರಣ ಅದು, ವೈಭವಯುತ ಜೀವನ ನಡೆಸಿದ 'ಯಜಮಾನ ಸಂಸ್ಕೃತಿ'ಯನ್ನು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಬದುಕನ್ನು) ಕುರಿತ ದಾಖಲೆಯಾಗಿರುವುದು. ಹೀಗಿದ್ದೂ ಕ್ವಚಿತ್ ಎಂಬಂತೆ ಶಾಸನಗಳಲ್ಲಿ

ಒತ್ತಿರೆ ಗಂಗೆಯ ಪನಿಗಳ್
ಮುತ್ತಿನ ಬಾಸಿಗಮಿದೆನಿಸಿ ವಾಸುಗಿ ಸುಖದಿಂ
ಸುತ್ತಿರ್ದ ಜೂಟದಾ ದೇ-
ವೋತ್ತಮನೆಮಗೊಸೆದು ಕುಡುಗೆ ಸುಖಸಂಪದಮಂ॥

ಎಂಬಂಥ ದೇಶೀಶೈಲಿಯ ರಚನೆಗಳು ಕಾಣಿಸಿಕೊಂಡಿವೆ. ಇಂಥ ಅಪವಾದಗಳನ್ನು ಬಿಟ್ಟರೆ ಮಾರ್ಗಶೈಲಿಯ ರಚನೆಗಳೇ ಶಾಸನಗಳಲ್ಲಿ ಮೆರೆದಿವೆ. ಇವುಗಳಲ್ಲಿ ಅನುಕರಣ ರೀತಿಯಲ್ಲಿ ಆಕಾರ ಪಡೆದವು ಹೆಚ್ಚು, ಸ್ವಯಂಪ್ರತಿಭೆಯ ಸೃಷ್ಟಿಗಳು ಕಡಿಮೆ. ಹೀಗಿದ್ದೂ ಸ್ವಯಂಪ್ರತಿಭೆಯ ರಚನೆಗಳನ್ನು ಆಯ್ದುಕೊಳ್ಳಲು ಇಲ್ಲಿ ವಿಶೇಷ ಗಮನಕೊಡಲಾಗಿದೆ.

* * *

ಈ ಸಂಕಲನವನ್ನು ರೂಪಿಸುವಲ್ಲಿ ಗಮನದಲ್ಲಿಟ್ಟುಕೊಂಡ ಇನ್ನೊಂದು ಮುಖ್ಯ ಅಂಶವೆಂದರೆ, ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ವಿಭಿನ್ನ ಮಗ್ಗಲುಗಳನ್ನು ಕಾಣಿಸಿಕೊಡುವುದು. ಸಂಸ್ಕೃತಿ ಎನ್ನುವುದು ಒಂದು ಸಮಾಜ ಒಪ್ಪಿಕೊಂಡ ಸಮೂಹ ಜೀವನ ಪದ್ಧತಿಯಾಗಿದೆ. ಇದರಲ್ಲಿ ಜೀವಪರ ಮತ್ತು ಜೀವವಿರೋಧಿ ಎರಡೂ ಅಂಶಗಳು ಸೇರಿಕೊಂಡಿರುತ್ತವೆ. ಹೀಗಾಗಿ ಒಂದು ಜನಾಂಗದ ಸಂಸ್ಕೃತಿಯನ್ನು ಪ್ರತಿನಿಧಿಸುವ ಇಂಥ ಸಂಕಲನವನ್ನು ರೂಪಿಸುವ ಸಂದರ್ಭದಲ್ಲಿ, ಅದರ ಉತ್ತಮ ಮುಖಗಳೊಂದಿಗೆ ಅನುತ್ತಮ ಮುಖಗಳನ್ನೂ ಗಮನಿಸಬೇಕಾಗುತ್ತದೆ. ಪ್ರಸ್ತುತ ಕೃತಿರಚನೆಯಲ್ಲಿ ಈ ದೃಷ್ಟಿಯನ್ನು ಇಟ್ಟುಕೊಳ್ಳಲಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದುದು ಯಜಮಾನಪರ ಸಂಸ್ಕೃತಿ. ಅಲ್ಲಿ ಅಧಿಕಾರಮೂಲ ರಾಜಶಾಹಿ, ಜಾತಿಮೂಲ ಪುರೋಹಿತಶಾಹಿ, ಅರ್ಥಮೂಲ ಬಂಡವಾಳಶಾಹಿಗಳಿಗೆ ಹೆಚ್ಚು ಪ್ರಾಧಾನ್ಯ. ಹೀಗಾಗಿ ಇಂಥವರ ಬದುಕಿನ ದಾಖಲೆಗಳಾದ ಶಾಸನಗಳಲ್ಲಿ ಇವರ ಮೌಲ್ಯಗಳು ಹೆಚ್ಚು ಕಾಣಿಸಿಕೊಂಡಿವೆ. ಇವು ವಿಸ್ತಾರವಾಗಿರುವುದೂ, ಅಂದವಾಗಿರುವುದೂ ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಇದಕ್ಕೆ ವಿರುದ್ಧವೆಂಬಂತೆ ಇವರ ರಕ್ಷಣೆಗಾಗಿ ಹೋರಾಡಿ ಸತ್ತ ಯಜಮಾನ ರಲ್ಲದವರಿಗಾಗಿ ನಿಲ್ಲಿಸಿದ ವೀರಗಲ್ಲುಗಳು ಶಿಲ್ಪ, ಸಾಹಿತ್ಯ, ವಿಸ್ತಾರ ದೃಷ್ಟಿಯಿಂದ ಉಪೇಕ್ಷೆಗೆ ಗುರಿಯಾಗಿವೆ. ಆದುದರಿಂದಲೇ ಮಿಕ್ಕವುಗಳೊಂದಿಗೆ ಹೋಲಿಸಿದರೆ ಸಾಹಿತ್ಯಿಕ ವೀರಗಲ್ಲುಗಳು ಕಡಿಮೆ ಪ್ರಮಾಣದಲ್ಲಿ ಹುಟ್ಟಿಕೊಂಡವು. ಇದಕ್ಕಿಂತ ದುರ್ದೈವದ ಸಂಗತಿಯೆಂದರೆ ಮಾಸ್ತಿಕಲ್ಲುಗಳ ವಿಷಯ. ಭಾರತೀಯ ಪರಂಪರೆಯಲ್ಲಿ ಹೆಣ್ಣಿಗೆ ಗೌಣಸ್ಥಾನ. ಆಕೆ ಗಂಡನ ಮರಣ ಸಂದರ್ಭದಲ್ಲಿ ಚಿತಾಪ್ರವೇಶದಂಥ ತ್ಯಾಗಮಾಡಿದರೂ, ಸಮಾಜ ಅವಳಿಗಾಗಿ ನಿಲ್ಲಿಸಿದ ಸ್ಮಾರಕಗಳು ಶಿಲ್ಪ, ಸಾಹಿತ್ಯ ದೃಷ್ಟಿಯಿಂದ ಇನ್ನೂ ಉಪೇಕ್ಷೆಗೆ ಗುರಿಯಾದವು. ದೇಕಬ್ಬೆಯ ಬೆಳತೂರು ಶಾಸನವನ್ನು ಬಿಟ್ಟರೆ ಕರ್ನಾಟಕದಲ್ಲಿ ಇನ್ನೊಂದು ಕಾವ್ಯಾತ್ಮಕ ಮಾಸ್ತಿಕಲ್ಲು ಸಿಗದಿರುವುದೇ ಇದಕ್ಕೆ ನಿದರ್ಶನವೆನಿಸಿದೆ.

ಯಜಮಾನಪರ ಸಂಸ್ಕೃತಿಯ ರಾಜಸತ್ತೆ ಸ್ಥಿರವಾಗಿ ನಿಲ್ಲಲು ವೀರ ಅತಿ ಅಗತ್ಯ. ಅದಕ್ಕಾಗಿಯೇ ಪ್ರಾಚೀನಕಾಲದಲ್ಲಿ ವೀರ ಒಂದು ಮೌಲ್ಯವಾಗಿದ್ದಿತು. ಇದನ್ನು ಆಳಿದ, ಬಾಳಿದ ರಾಜರು, ಪ್ರಜೆಗಳು ಕಾರಣವಾಗಿ ನಮ್ಮಲ್ಲಿ ವೀರರಸ ಪ್ರಧಾನ ಶಾಸನಗಳು ಹೆಚ್ಚು ಸಂಖ್ಯೆಯಲ್ಲಿ ಹುಟ್ಟಿಕೊಂಡವು. ಈ ಕಾರಣದಿಂದಾಗಿ ರಾಜರು, ಗಣ್ಯವ್ಯಕ್ತಿಗಳು, ಯುದ್ಧವೀರ, ವೀರಗಲ್ಲು ಈ ಶೀರ್ಷಿಕೆಗಳ ಮೂಲಕ ವೀರಮೌಲ್ಯ ಅಧಿಕ ಪ್ರಮಾಣದಲ್ಲಿ ಕಾಣಿಸಿಕೊಳ್ಳುವಂತೆ ಇಲ್ಲಿ ನೋಡಿಕೊಳ್ಳಲಾಗಿದೆ. ರಾಜಸತ್ತೆಯನ್ನು ಬಿಟ್ಟರೆ ಪ್ರಾಚೀನ ಕಾಲದ ಇನ್ನೊಂದು ಮುಖ್ಯ ಮೌಲ್ಯ ಧರ್ಮಸತ್ತೆ. ಇದಕ್ಕೂ ಅಧಿಕ ಪ್ರಾತಿನಿಧ್ಯ ಸಿಗಲೆಂಬ ಉದ್ದೇಶದಿಂದ ಈ ಕೃತಿಯಲ್ಲಿ ಗಣ್ಯರು, ಧರ್ಮವೀರರು, ಅಗ್ರಹಾರ ಇತ್ಯಾದಿ ಶೀರ್ಷಿಕೆಗಳನ್ನು ಕಲ್ಪಿಸಿಕೊಳ್ಳಲಾಗಿದೆ. ಸನ್ಯಾಸಿಗಳೂ ಸಂಸಾರಿಗಳೂ ಈ ಮೌಲ್ಯವನ್ನು ಬಾಳಿದುದಕ್ಕೆ ಇಲ್ಲಿಯ ಅನೇಕ ಶಾಸನಗಳು ಸಾಕ್ಷಿ ನುಡಿಯುತ್ತಿವೆ.

ಸಮಕಾಲೀನ 'ಸಾಮಾಜಿಕಮೌಲ್ಯ'ಗಳೊಂದಿಗೆ 'ಸಾರ್ವಜನಿಕ ಆದರ್ಶ'ಗಳನ್ನೂ ವ್ಯಕ್ತಿ ಬಾಳಬೇಕಾಗುತ್ತದೆ. ಇಂಥ ಆದರ್ಶಗಳನ್ನು ಬಾಳಿದ ಅನೇಕ ವ್ಯಕ್ತಿಗಳ ಗುಣಮೌಲ್ಯಗಳೂ ಶಾಸನಗಳಲ್ಲಿ ದಾಖಲಾಗಿವೆ. ಇದಕ್ಕೆ ನಿದರ್ಶನವಾಗಿ ಲಕ್ಷ್ಮೀಧರಾಮಾತ್ಯನಿಗೆ ಸಂಬಂಧಿಸಿದ 'ಕೆರೆಯಂ ಕಟ್ಟಿಸು

ಬಾವಿಯಂ ಸವೆಸು...' ಎಂಬಂಥ ಪದ್ಯಗಳನ್ನು ಇಲ್ಲಿ ನೋಡಬಹುದು. ಇಂಥ ಆದರ್ಶಗಳನ್ನು ಕೇವಲ ಘೋಷಣೆಯ ಮಟ್ಟದಲ್ಲಿ ನಿಲ್ಲಿಸದೆ, ಅನುಷ್ಠಾನಕ್ಕೆ ತಂದ ಅನೇಕ ಸಾಮಾಜಿಕ ಕಾರ್ಯಗಳನ್ನು ಶಾಸನಗಳು ಗುರುತಿಸಿವೆ. ಈ ಕೃತಿಯ ಕೆರೆ, ಅನ್ನಸತ್ರ, ಅರವಟ್ಟಿಗೆ, ಬಾವಿ, ಉದ್ಯಾನ ಶೀರ್ಷಿಕೆಗಳ ಅಡಿಯಲ್ಲಿ ಈ ಲೋಕೋಪಕಾರ ದಾಖಲೆಗಳನ್ನು ಸಂಗ್ರಹಿಸಲಾಗಿದೆ.

ಸಂಸ್ಕೃತಿ ಎನ್ನುವುದು ವಿಕೃತಿಯನ್ನೂ ಒಳಗೊಂಡಿರುತ್ತದೆ. ಪ್ರಾಚೀನ ಕರ್ನಾಟಕದ ಇಂತ ಮುಖಗಳನ್ನೂ ತೋರಿಸಿಕೊಟ್ಟರೆ ಮಾತ್ರ ನಮ್ಮ ಸಂಸ್ಕೃತಿಯ ಪೂರ್ಣಪರಿಚಯ ಓದುಗರಿಗಾಗುತ್ತದೆ. ಈ ಉದ್ದೇಶದಿಂದ ಇಲ್ಲಿ ಪವಾಡ, ದಿವ್ಯ, ನಂಬಿಕೆ, ಸಂಘರ್ಷ, ದಂಡನೆ ಪ್ರಕರಣಗಳನ್ನು ಕಲ್ಪಿಸಲಾಗಿದೆ.

ಹೀಗೆ ಸಂಸ್ಕೃತಿಯ ಸಾಧ್ಯವಿದ್ದಷ್ಟು ಮುಖಗಳನ್ನು ಕಾಣಿಸಿಕೊಡಬೇಕೆಂಬ ಹಂಬಲದ ತೀವ್ರತೆ ಕಾರಣವಾಗಿ ಕೆಲವೊಮ್ಮೆ ಸಾಮಾನ್ಯ ಪದ್ಯಗಳನ್ನೂ ಇಲ್ಲಿ ಆಯ್ದುಕೊಳ್ಳುವುದು ಅನಿವಾರ್ಯವೆನಿಸಿದೆ. ಅದೇನೇ ಇದ್ದರೂ ಏಕಕಾಲಕ್ಕೆ ಸಾಹಿತ್ಯ-ಸಂಸ್ಕೃತಿಗಳ ಸಂಗಮವಾಗುವಂತೆ ಈ ಕೃತಿಯನ್ನು ರೂಪಿಸಲಾಗಿದೆ.

ಕರ್ನಾಟಕದ ಸುಮಾರು ೨೫ ಸಾವಿರ ಶಾಸನಗಳಿಂದ ಒಳ್ಳೆಯ ಪದ್ಯ ಆಯ್ದುಕೊಳ್ಳುವುದು ಶ್ರಮದಾಯಕ. ಹೀಗೆ ಆಯ್ದುಕೊಂಡ ಪದ್ಯರಾಶಿಯಲ್ಲಿ ಯಾವುದನ್ನು ಇಟ್ಟುಕೊಳ್ಳುವುದು? ಯಾವುದನ್ನು ಬಿಡುವುದು? ಎಂದು ನಿರ್ಣಯಿಸುವುದು ಸಮಸ್ಯಾತ್ಮಕ. ಹೀಗಿದ್ದೂ ಕೃತಿಯ ಕೇಂದ್ರ ಉದ್ದೇಶಕ್ಕೆ ನ್ಯಾಯ ಸಿಗುವಂತೆ ಇಲ್ಲಿ ಪ್ರಯತ್ನಿಸಲಾಗಿದೆ. ಈ ಕೃತಿಯಲ್ಲಿ ಯೋಜಿಸಿರುವ ಸಾಂಸ್ಕೃತಿಕ ವಿನ್ಯಾಸವನ್ನು ಇನ್ನಷ್ಟು ಸುಧಾರಿಸಲು ಪದ್ಯಗಳ ಆಯ್ಕೆಯನ್ನು ಇನ್ನಷ್ಟು ಉತ್ತಮ ಪಡಿಸಲು ಸಾಧ್ಯವಿದೆ. ಯುವವಿದ್ವಾಂಸರು ಈ ಕೆಲಸವನ್ನು ಪೂರೈಸುವರೆಂದು ನಂಬಿದ್ದೇನೆ. ಇದು ಜನಪ್ರಿಯ ಆವೃತ್ತಿಯಾಗಿರುವುದರಿಂದ 'ಱ', 'ೞ'ಗಳ ಸ್ಥಾನದಲ್ಲಿ 'ರ', 'ಳ' ಗಳನ್ನಿಟ್ಟುಕೊಳ್ಳಲಾಗಿದೆ. 'ಶ, ಷ, ಸ,'ಗಳ ಅಪಪಾಠಗಳನ್ನು ಸರಿಯಾಗಿ ತಿದ್ದಿಕೊಳ್ಳಲಾಗಿದೆ. ಇದೇ ರೀತಿ 'ಉ' ಕಾರಾಂತ ಪದಗಳನ್ನು ವ್ಯಂಜನಾಂತ ಮಾಡಿಕೊಳ್ಳಲಾಗಿದೆ(ಮನೆಯೊಳು>ಮನೆಯೊಳ್). ಆದುದರಿಂದ ಇದು ಶಾಸನಗಳ ಜನಪ್ರಿಯ ಪಾಠವೆಂದು ಭಾವಿಸಲು ಕೋರುತ್ತೇನೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಕೈಗೆತ್ತಿಕೊಂಡ ಮಹತ್ವದ ಯೋಜನೆಗಳಲ್ಲಿ 'ಮುತ್ತಿನ ಹಾರ' ತುಂಬ ವಿಶಿಷ್ಟವಾದದು. ಪ್ರಾಚೀನ ಸಾಹಿತ್ಯವನ್ನು ಸಾರವತ್ತಾಗಿ ಸಂಗ್ರಹಿಸುವುದು, ಕನ್ನಡಿಗರಲ್ಲಿ ಅದರ ಬಗೆಗೆ ಅಭಿರುಚಿ ಕುದುರಿಸುವುದು-ಈ ಮಾಲೆಯ ಮುಖ್ಯ ಉದ್ದೇಶ. ಈ ಉದ್ದೇಶವನ್ನು ಪೂರ್ಣಪ್ರಮಾಣದಲ್ಲಿ ಪೂರೈಸುವ ರೀತಿಯಲ್ಲಿ ಈ ವರೆಗೆ ಅನೇಕ ಕೃತಿಗಳನ್ನು ಪ್ರಕಟಿಸಿದ ಅಕಾಡೆಮಿ, ಈ ಮಾಲೆಯಲ್ಲಿ 'ಶಾಸನ ಸೂಕ್ತಿಸುಧಾರ್ಣವ' ಪ್ರಕಟಣೆಗೆ ಅವಕಾಶ ಮಾಡಿಕೊಟ್ಟಿದೆ. ಇದಕ್ಕಾಗಿ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶಾಂತರಸ ಅವರಿಗೂ ಸದಸ್ಯರಿಗೂ ಕೃತಜ್ಞನಾಗಿದ್ದೇನೆ. ಅಡಿಟಿಪ್ಪಣಿಗಳನ್ನು ಸಂಗ್ರಹಿಸುವಲ್ಲಿ ನನ್ನೊಂದಿಗೆ ಶ್ರಮಿಸಿದ ಶ್ರೀ ಎಸ್. ಬಿ. ಹಿರೇಮಠ ಅವರ ನೆರವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಧಾರವಾಡ — ಎಂ. ಎಂ. ಕಲಬುರ್ಗಿ

❖❖

*

ಪರಿವಿಡಿ

❖❖

೧. ಪ್ರಾರ್ಥನೆ

ಆತ್ಮಶುದ್ಧಿಯ ಸಾಧನವಾದ 'ಪ್ರಾರ್ಥನೆ'ಯನ್ನು ಮನುಷ್ಯ ವಿಘ್ನನಿವಾರಣೆಯ ಸಾಧನವಾಗಿಯೂ ಬಳಸಿಕೊಂಡಿದ್ದಾನೆ. ಹೀಗಾಗಿ ಕವಿಗಳಂತೆ ಶಾಸನಕವಿಗಳೂ ದೇವರನ್ನು, ದೇವಮಾನವರನ್ನು ಪ್ರಾರ್ಥಿಸುವುದರೊಂದಿಗೆ ತಮ್ಮ ಬರವಣಿಗೆಯನ್ನು ಆರಂಭಿಸುತ್ತ ಬಂದಿದ್ದಾರೆ. ಕೇವಲ ಮೂರ್ತಿವರ್ಣನೆಗೆ ನಿಲ್ಲದೆ, ತತ್ವನಿರೂಪಣೆಗೂ ವಿಸ್ತರಿಸಿರುವ ಈ ಶಾಸನ ಪ್ರಾರ್ಥನಾಪದ್ಯಗಳು ಭಕ್ತಿಮೌಲ್ಯ, ಜೀವನಾದರ್ಶ, ಕಾವ್ಯಸೌಂದರ್ಯಗಳನ್ನೊಳಗೊಂಡಿವೆ.

ಶಿವ :

ಪತ್ತಿರೆ ಗಂಗೆಯ ಪನಿಗಳ್
ಮುತ್ತಿನ ಬಾಸಿಗಮಿದೆನಿಸಿ, ವಾಸುಗಿ ಸುಖದಿಂ
ಸುತ್ತಿರ್ದ ಜೂಟದಾ ದೇ
ವೋತ್ತಮನೆಮಗೊಸೆದು ಕುಡುಗೆ ಸುಖಸಂಪದಮಂ ॥ ೧ ॥

ವಿಷ್ಣು :

ಶ್ರೀ ತನ್ನಂದದರೂಪು ಕೌಸ್ತುಭದೊಳಜ್ಯೋತಿರ್ದವೋಲ್ ತೋರೆ ಕಂ
ಡೇತರ್ಕೀಕೆ ಮದೀಯ ವಾಸಗೃಹಮಂ ತಾಂ ಪೊಕ್ಕಳೆಂದೀರ್ಷೆಯಿಂ
ದಾ ತಾಮ್ರಾಕ್ಷಿ ನಿರೀಕ್ಷಿಸುತ್ತಮಿರೆ ತನ್ಮುಗ್ಧತ್ವಮಂ ಕಂಡು ಸಂ
ಜಾತಾಂತಃಸ್ಮಿತನಾದ ಕೃಷ್ಣನೊಲಿದೀಗಾನಂದ ಸಂದೋಹಮಂ ॥ ೨ ॥

ಹರಿಹರ :

ಹರಿಯಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್,
ಹರನಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್,

ನರರಾ ಸಂದೇಹಮಂ ಪಿಂಗಿಸಲತಿಶಯದಿಂ ಕೂಡಲೂರಲ್ಲಿ ಶೋಭಾ
ಕರಮಪ್ಪಂತೊಂದೆ ರೂಪಂ ತಳೆದ ಹರಿಹರಂ ಕೂರ್ತು ರಕ್ಷಿಕ್ಕೆ ನಮ್ಮಂ ॥ ೩ ॥

ಹರಿ-ಹರ-ಬ್ರಹ್ಮ :

ಶ್ರೀವಾಣೀಗಿರಿಜಾಧಿಪರ್ ಗರುಡಹಂಸೋಕ್ಷಾಸನರ್ ವಾರ್ಧಿರಾ
ಜೀವಾದ್ರೀಂದ್ರ ನಿವಾಸಿಗಳ್ ಮಧುಪರಕ್ತಾಂಭೋರುಹೇಂದುಪ್ರಭರ್
ದೇವರ್ ಸತ್ವರಜಸ್ತಮೋಗುಣಯುತರ್ ದ್ವ್ಯಷ್ಟತ್ರಿನೇತ್ರೋತ್ಪಲರ್
ಗೋವಿಂದಾಬ್ಜಜಶಂಕರತ್ರಿಪುರುಷರ್ ಪಾಲಿಕ್ಕೆ ನಿಮ್ಮಂ ಚಿರಂ ॥ ೪ ॥

ಭೇದಂ ಮೂರ್ತಿಯೊಳಲ್ಲದೆ
ಭೇದಂ ಪರಮಾರ್ಥತತ್ವದೊಳ್ ಸಲ್ಲದೆನಲ್
ಮೂದೇವರಾದ ಭೇದದ
ಮಾದೇವಂ ದೇವನೀಗೆ ಸುಖಸಂಪದಮಂ ॥ ೫ ।

ಜಿನ :

ಎರಗುವ ದಿವಿಜರ ಮುಕುಟದ
ತುರುಗಿದ ಮಾಣಿಕದ ತಣ್ಬೆಸಿಲ್ಗಳ ಪೊಳಪಿಂ
ಮಿರುಗುವ ಜಿನಪದನಖರುಚಿ
ಮರಿಯಾನೆಗೀಗೆ ಸಕಲಮಹಿಮಾಸ್ಪದಮಂ ॥ ೬ ॥

ಸರಸ್ವತಿ :

ಶಾರದಾದೇವಿಗೆ ಗದ್ಯವೆ ತನಗೆ ಗದ್ದಿಗೆಯಾಗೆ, ವೃತ್ತವೆ ತನಗೆ ಕಟಿಕುಚ ಪ್ರದೇಶವಾಗೆ, ಮಾಳಾವೃತ್ತವೆ ತನಗೆ ಮುಕುಟಮಂಡಳವಾಗೆ, ಅಂಕಿತೆಯೆ ತನಗೆ ಸುಳಿಕುಂತಳವಾಗೆ, ಛಂದವೆ ತನಗಂದವೆನಿಪ ಲಲಾಟಪಟ್ಟವಾಗೆ, ರಾಗಂಗಳ ಸುಳಿವುಗಳೆ ತನಗೆ ಕುರುಳೋಳಿಗಳಾಗೆ, ರಾಗಂಗಳ ಕೊಂಕುಗಳೆ ತನಗೆ ಕುಡುವುರ್ವುಗಳಾಗೆ, ನಾಟಿಯೆ ತನಗೆ ನೋಟವಾಗೆ....ಪಂಜಳವೆ ತನಗೆ ರಂಜಿಸುವಧರೋಷ್ಠವಾಗೆ, ಪದರಚನೆಯೆ ತನಗೆ ತನಗೆ ಮೃದುಪದವಾಗೆ, ಅಂಬುವೆ ತನಗೆ ಕಂಬುಗ್ರೀವವಾಗೆ, ಪೂರ್ಣರಾಗವೆ ತನಗೆ ಕರ್ಣಾಭರಣವಾಗೆ, ದೌವಾಳವೆ ತನಗೆ ನೇವಾಳವಾಗೆ, ಅಕ್ಕರವೆ ತನಗೆ ಅರಗಿಣಿಯಾಗೆ, ತಿವದಿಯೆ ತನಗೆ ತೆಳುವಸಿರಾಗೆ, ದೋಹಳಮೆ ತನಗೆ ಬಾಹುಬಲವಾಗೆ, ಚವುಪದಿಯೆ ತನಗೆ ಮುರಜವಾಗೆ, ಸಾಮತವೆ ತನಗೆ ವಿರಿದ ಪಲ್ಗಳಾಗೆ, ರಾಗಂಗಳಣುಗುಗವಿತವೆ ತನಗೆ ಸೆಳ್ಳುಗುರ್ಗಳಾಗೆ [ಶೋಭಿಪಳೀಗೆ ಸೌಖ್ಯಮಂ] ॥ ೭ ॥

ಬಸವೇಶ್ವರ :

ಮಂಗಳಕೀರ್ತಿ ಪುರಾತನ
ಜಂಗಮಲಿಂಗೈಕಭಕ್ತಿ ನಿರ್ಭರ ಲೀಲಾ
ಸಂಗಂ ಸಂಗನಬಸವಂ
ಸಂಗತಿಯಂ ಮಾಳ್ಕೆ ಭಕ್ತಿಯೊಳಗನವರತಂ ॥ ೮ ॥

೨. ಸಮುದ್ರ

ಘಟನೆಯೊಂದರ ಸಂಭವಿಸುವಿಕೆಗೆ ಕಾಲದಷ್ಟೇ ಅಗತ್ಯವಾದುದು ದೇಶ. ಈ ದೇಶವನ್ನೊಳಗೊಂಡಿರುವ ಭೂಮಿಯನ್ನು ಸಮುದ್ರ ಸುತ್ತುವರಿದಿದೆ. ಹೀಗಾಗಿ ನಮ್ಮ ಕಾವ್ಯಗಳು ಘಟನೆಯೊಂದರ ಬರೆವಣಿಗೆಯನ್ನು ಸಮುದ್ರವರ್ಣನೆಯಿಂದಲೇ ಆರಂಭಿಸುತ್ತವೆ. ಈ ಮಾದರಿಯನ್ನು ಒಪ್ಪಿಕೊಂಡಿರುವ ಕಾರಣ ಶಾಸನಗಳೂ ಕೆಲವೊಮ್ಮೆ ಸಮುದ್ರ ವರ್ಣನೆಯಿಂದಲೇ ಆರಂಭಗೊಂಡಿವೆ.

ಭಾಳಾಕ್ಷದ್ಯುತಿ ಬಾಡಬಾಗ್ನಿಗೆ, ಜಟಾಜೂಟಂ ಪ್ರವಾಳಕ್ಕೆ, ಸ
ರ್ಪಾಳಂಕಾರಮದಾಹಿಕೋಟಿಗೆ, ಕರೋಟೀಮಾಲೆ ಶಂಖಾಳಿಗಾ
ಭೀಳಧ್ವಾನವುದೀರ್ಣ ಘೋಷಕೆಣೆಯಾಗಲ್, ಕಾಳಿಕಾಭೈರವ
ಶ್ರೀಲೀಲಾಕೃತಿವೋಲ್ ಮನಂಗೊಳಿಸಿತೋ ರತ್ನಾಕರಂ ಶ್ರೀಕರಂ ॥ ೯ ॥

ಮುತ್ತಿನ ಮುತ್ತಿನ ತಡಿವಿ
ಡಿದುತ್ತಮದುತ್ತಮದ ವರ್ಣ ವರ್ಣಂ ಪೂರ್ಣಂ
ಸುತ್ತಿಪ್ಪುದು ನದಿಯೊಳ್(ಕ)ರ
ಸುತ್ತಿಪ್ಪುದು ರತ್ನಮುದ್ರ ಲವಣಸಮುದ್ರಂ ॥ ೧೦ ॥

ಸಿರಿಯ ತವರ್ಮನೆ ಹವಳದ
ಹರಿವರಿ ಮುತ್ತುಗಳ ಹುಟ್ಟಜಂ ಚಂದ್ರನ ತಾಯ್
ಹರಿಯಿರ್ಪ ಸೆಜ್ಜೆವನೆ ರ
ತ್ನರಾಶಿಯಮರ್ದಿನ ನಿಧಾನವೆಳೆವೆಣ್ಣುಡೆನೂಲ್ ॥ ೧೧ ॥

೩. ಭರತವರ್ಷ–ಕುಂತಳನಾಡು–ಕರ್ಣಾಟದೇಶ

ಸಮುದ್ರಮುದ್ರಿತ ಭೂಮಂಡಲದಲ್ಲಿ ಸುಪ್ರಸಿದ್ಧವಾದುದು ಜಂಬೂದ್ವೀಪ. ಇದರ ದಕ್ಷಿಣಭಾಗ ಭರತವರ್ಷ. ಈ ಭರತವರ್ಷದ ಸಮೃದ್ಧಭೂಮಿ ಕುಂತಳನಾಡು. ಇದರ ಪರ್ಯಾಯನಾಮ ಕರ್ಣಾಟದೇಶವೆಂದು ಪ್ರಾಚೀನ ದಾಖಿಲೆಗಳು ತಿಳಿಸುತ್ತವೆ.

ಭರತವರ್ಷ :

ಅಂಬುಧಿ ಕಮಲಾಕರದೊಳ್
ಜಂಬೂದ್ವೀಪಾಬ್ಜದೊಂದು ಕರ್ಣಿಕೆಯೆನಿಕುಂ
ಪೊಂಬೆಟ್ಟದರಿಂ ತೆಂಕಲ್
ಚೆಂಬೆತ್ತೆಸಳೆನಿಪುದಲ್ತೆ ಭಾರತಕ್ಷೇತ್ರಂ ॥ ೧೨ ॥

ಬಾಜಿಸೆ ಡಕ್ಕೆಯಂ ಪ್ರಿಯರ ಮೆಲ್ಲೆರ್ದೆ, ತುಂಬಿಗಳಿಂಬುವೆತ್ತಿರಲ್
ರಾಜಿಸಿ ಪಾಡೆ, ಕೆಂದಳಿರೆ ಕೈದಳಮಾಗಿರೆ, ಮಂದಮಾರುತಂ
ಯೋಜಿಸೆ ತಾಳಮಂ, ರತಿಯನಾಡಿಸೆ ಮನ್ಮಥನಂತರಂಗದೊಳ್,
ಸಾಜಮೆನಿಪ್ಪುದಲ್ತೆ ಭರತಾಹ್ವಯಮಾ ಭರತೋರ್ವಿಗುರ್ವಿನಿಂ ॥ ೧೩ ॥

ಕುಂತಳನಾಡು :

ಪೊಲನೆಲ್ಲಂ ಗಂಧಶಾಲಿಪ್ರಕರ ಪರಿವ್ರತಂ, ನಂದನಶ್ರೇಣಿಯೆಲ್ಲಂ
ಫಲಭಾರಾನಮ್ರ ಚೂತಾವನಿಜ ವಲಯಿತಂ, ದೀರ್ಘಿಕಾನೀಕಮೆಲ್ಲಂ
ದಲಿತಾಂಭೋಜಾತ ರೇಣುಸ್ಥಗಿತ ಲಲಿತಮೂರೂರ್ಗಳೆಲ್ಲಂ ಪ್ರಜಾಸಂ
ಕುಲ ಗೋಧಾನ್ಯ ಪ್ರಕೀರ್ಣಾಂಚಿತಮೆನಲೆಸೆಗುಂ ಕುಂತಳೋರ್ವೀವಿಳಾಸಂ ॥ ೧೪ ॥

ಬಗೆಗೊಳೆ ಖರ್ವಡಂ, ಪುರವಗುರ್ವಿಸೆ, ರಾಜಿಸೆ ರಾಜಧಾನಿ, ದಿ
ಟ್ಟಿಗೆವರೆ ಪಟ್ಟಣಂ, ಪ್ರತಿದಿನಂ ಪರಿಶೋಭಿಸೆ ಖೇಡಮಿಂತಿದೇಂ
ಸೊಗಯಿಸುತಿರ್ದುದೋ ತದವನೀಪತಿಪಾಳನ ಸುಸ್ಥಿತಾ ಸುಖ
ಸ್ಥಗಿತ ಜನಪ್ರಮೋದಭರ ರಾಜಿತ ಕುಂತಳದೇಶವುರ್ವಿಯೊಳ್ ॥ ೧೫ ॥

ಜಿನಧರ್ಮಾವಾಸಮಾದತ್ತಮಳವಿನಯದಾಗಾರಮಾದತ್ತು, ಪದ್ಮಾ
ಸನನಿರ್ಪಾ ಸದ್ಮಮಾದತ್ತತಿ ವಿಶದಯಶೋಧಾಮಮಾದತ್ತು, ವಿದ್ಯಾ
ಧನಜನ್ಮಸ್ಥಾನಮಾದತ್ತಸಮತರಳಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾ ಮಹಿಮೆಯೊಳೆಸೆಗುಂ ಚಾರು ಕರ್ಣಾಟದೇಶಂ ॥ ೧೬ ॥

೪. ಕರ್ನಾಟಕದ ಆಡಳಿತ ವಿಭಾಗಗಳು

ಪ್ರಾಚೀನ ಕರ್ನಾಟಕವನ್ನು ಆಡಳಿತದ ಅನುಕೂಲಕ್ಕಾಗಿ ಹಲವು ವಿಭಾಗಗಳಲ್ಲಿ ವಿಂಗಡಿಸಲಾಗಿದ್ದಿತು. ಬನವಾಸಿ ಮಂಡಲ, ನಾಗರಖಂಡ, ಬಲ್ಲಕುಂದೆನಾಡು – ಹೀಗೆ ಕರೆಯಿಸಿಕೊಳ್ಳುತ್ತಲಿದ್ದ ಈ ವಿಭಾಗಗಳ ಹೃದಯಂಗಮ ವರ್ಣನೆ ಶಾಸನಗಳಲ್ಲಿ ಕಂಡುಬರುತ್ತದೆ.

ಬನವಾಸಿ ಮಂಡಲ :

ಇದು ಸುಖದಾಗರಂ, ಸಿರಿಯ ಪುಟ್ಟಿದ ಸಾಗರಮಾರಯಲ್ ಸಮ
ಭ್ಯುದಯದ ಗೊತ್ತು, ಸತ್ಯದ ತವರ್ಮನೆ, ಚಿತ್ತಜನಿರ್ಕೆದಾಣಮು
ನ್ಮ ದಯುವತೀಜನಂಗಳೆರೆವೆಟ್ಟು, ಬುಧಾಳಿಯ ಜನ್ಮಭೂಮಿಯೆಂ
ಬುದನೆನೆ ಶೋಭೆಯಂ ತಳೆದುದಿಂತನಿಶಂ ಬನವಾಸಿಮಂಡಲಂ ॥ ೧೭ ॥

ನಾಗರಖಂಡ :

ಫಲಭರವಾಂತ ಶಾಳಿ – ತಳಿರೇರಿದ ಚೂತಕುಜಾಳಿ, ತೆಂಗು–ಕ
ಣ್ಗೊಳಿಸುವ ಕೌಂಗು, ಪೂತ ಲತೆ–ಪೂಗಿಡು–ಪೂಮರದೋಳಿ, ಪಲ್ಲವಂ
ಗಳ ಪೊಳೆಪೊಂದಿ, ತಾಂ ನಿಮಿರ್ವಶೋಕಕುಜಂ, ತಿಳಿನೀರ್ಗೊಳಂಗಳಿಂ,
ಸುಲಲಿತಮಾಗಿ ರಂಜಿಪುದು ನಾಗರಖಂಡಮದೆತ್ತ ನೋಳ್ಪೊಡಂ ॥ ೧೮ ॥

ಬಲ್ಲಕುಂದೆನಾಡು :

ಊರೂರ್ದಪ್ಪದೆ ಪೂತ ಚೂತಲೆಯಿಂ, ಮತ್ತಾಳಿಯಿಂ ಶಾಳಿಯಿಂ,
ದೂರೂರ್ದಪ್ಪದೆ ಗಂಗರಿಂ–ಕುಡಿಯರಿಂ–ಶ್ರೀಮಂತರಿಂ–ಕಾಂತರಿಂ,
ದೂರೂರ್ದಪ್ಪದೆ ದೇವತಾನಿಳಯದಿಂ–ಸದ್ಭಕ್ತರಿಂ, ಚೆಲ್ವುವೆ
ತ್ತೂರೂರ್ದಪ್ಪದೆ ಬಲ್ಲಕುಂದೆ ನಾಡುನಾಳ್ ಸಂತಂ ಬಸಂತಂ ಕರಂ ॥ ೧೯ ॥

ಕೋಗಳಿನಾಡು :

ನಾಡುಗಳೊಳಗೆಲ್ಲ ಗಾಡಿವೆತ್ತಸಮದ
ನಾಡುಗಳರಸನತಿ ಚೆಲ್ವ । ಕೋಗಳಿ
ನಾಡು ನೋಡಲ್ಕೆ ಸೊಗಯಿಕ್ಕುಂ ॥ ೨೦ ॥

೫. ಕರ್ನಾಟಕದ ಗ್ರಾಮಗಳು

ಆಡಳಿತ ವಿಭಾಗದ ಅರ್ಥವತ್ತಾದ ಘಟಕಗಳೆಂದರೆ ಹಳ್ಳಿ-ಪಟ್ಟಣಗಳು. ಇವು ಕೇವಲ ಜನವಸತಿಗಳಲ್ಲ. ನೈಸರ್ಗಿಕ, ಭೌತಿಕ ಮತ್ತು ಸಾಂಸ್ಕೃತಿಕ ಸಂಪತ್ತಿನ ನೆಲೆಯಾಗಿದ್ದವು. ಕೆರೆ-ದೇವಾಲಯಗಳಿಂದ ಗದ್ದೆ-ತೋಟಗಳಿಂದ, ವಿಲಾಸ-ವಿದ್ವತ್ತುಗಳಿಂದ ವಿಭಿನ್ನ ಜನವರ್ಗದ ಬೀದಿಗಳಿಂದ ಕಂಗೊಳಿಸುತ್ತಿದ್ದವು, ಕರ್ನಾಟಕದ ಗ್ರಾಮಗಳು.

ಇಂಡಿ :

ಎಳಮಾವಿಂ ಗಿಳಿಯಿಂ ಲತಾಪ್ರತತಿಯಿಂ ಭೃಂಗಾಳಿಯಿಂ ಪೂತಪೂ
ಗೊಳದಿಂ ಶಾಳಿವನಾಳಿಯಿಂ ಶಿವಗೃಹವ್ರಾತಂಗಳಿಂ ಮತ್ತಕೋ
ಕಿಳದಿಂ ಶೋಭಿಸುವಿಕ್ಷುವಾಟತತಿಯಿಂ ಪೂಗೀವನ ಶ್ರೇಣಿಯಿಂ
ದಿಳೆಗಾ ದರ್ಪದ ಭಂಗಿಯಿಂ ಸೊಗಯಿಕುಂ ಚಿಕ್ಕಿಂಡಿಯೀ ಧಾತ್ರಿಯೊಳ್ ॥ ೨೧ ॥

ಹರಗೃಹದಿಂ ಸುರಗೃಹದಿಂ
ದರುಹಗೃಹದೆ ಬೌದ್ಧಾಲಯದಿಂ ಗೊರವರ ಸವ
ಣರ ಬೌದ್ಧರ ನೆರವಿಗಳಿಂ
ದಿಂಡಿ ನಾಡೆ ಸೊಗಯಿಸಿ ತೋರ್ಕುಂ ॥ ೨೨ ॥

ಬಳ್ಳಿಗಾವಿ :

ಹರಿಹರ ಕಮಳಾಸನ ವೀ
ತರಾಗ ಬೌದ್ಧಾಲಯಂಗಳಿಂದಿಂತು ವಸುಂ
ಧರೆಗೆಸೆವ ಪಂಚಸರದಂ
ತಿರೆ ಪಂಚಮಠಂಗಳೆಸೆವುವಾ ಪಟ್ಟಣದೊಳ್ ॥ ೨೩ ॥

ಪಂಪಾಕ್ಷೇತ್ರ :

ಅದು ಪುಣ್ಯೋದಯ ಜನ್ಮಭೂಮಿ ದುರಿತೌಘಚ್ಛೇದನಾವಾಸಮ
ಭ್ಯುದಯಾನೀಕ ಫಲಪ್ರದಂ ಸುಖಲತಾ ಸಂವರ್ಧನಂ ಕ್ಷೇತ್ರಮಂ
ತುದು ಭಕ್ತರ್ಗಭಿವಾಂಛಿತಾರ್ಥ ಸುಖಮಂ ತಾನೀವ ಸಂಸ್ಥಾನಮೆಂ
ಬುದು ಲೋಕಂ ಭುವನತ್ರಯೈಕ ಹಿತಮಂ ಪಂಪಾವರಕ್ಷೇತ್ರಮಂ ॥ ೨೪ ॥

ಸೊಗಲ :

ಪಾಪಿ ಪುಗಲ್ ಪುಗಲುಗ್ರದ
ಕೋಪಿ ಪುಗಲ್ ಪುಗಲಶೇಷಧರ್ಮದ್ರೋಹ
ವ್ಯಾಪಾರಿ ಪುಗಲ್ ಪುಗಲೆಂ
ದಾ ಪೊರ್ತುಂ ಕೋಕಿಲಂಗಳುಲಿಗುಂ ಬನದೊಳ್ ॥ ೨೫ ॥

ಇಟ್ಟಿಗೆ :

ಆಡುವ ಸೋಗೆ, ಪಾಡುವಳಿಗಳ್, ನಡೆದಾಡುವ ಹಂಸೆ, ಪಂಚಮಂ
ಬಾಡುವ ಗಂಡುಗೋಗಿಲೆ, ಕೆಲರ್ ನುಡಿದಂತುಟನಾಗಳಂತೆ ಮಾ
ತಾಡುವ ರಾಜಕೀರಮೊಲವಳ್ಕಿಸಲಾರದಗಲ್ದು ಪೂವಿನಂ
ಬಾಡೆ ಲತಾವನಂಬುಗುವ ನಲ್ಲವರಲ್ಲಿಯ ನಂದನಂಗಳೊಳ್ ॥ ೨೬ ॥

ಕೋಳೂರು :

ಬೆಳೆದು ಫಳಭರದಿನೆರಗಿ
ರ್ದೆಳೆ ಜೋಳದ ಕೆಯ್ಗಳಂ ಮನೋಹರಿ ಕಾಂತಾ
ಕುಳಮೆಳಸುವ ಗಿಳಿ ಸೋವರ್
ಬಳಲುವ ಮುಡಿ ಬೆನ್ನಮೇಲಲೆಯೆ ಧವಳೇಕ್ಷಣೆಯರ್ ॥ ೨೭ ॥

ಕಾಡಿಯೂರು :

ಮತ್ತಮಲ್ಲಿ ಬಡಿವುದುಂ ಬಿಡುವುದುಂ ಚಾಪವಿದ್ಯೆಯೊಳ್, ಕೃತ್ರಿಮ ಮುಮನಿತ್ಯಮುಮಿಂದ್ರಜಾಲದೊಳ್, ಕಡಂಗುವುದುಂ ಇಸುವುದುಮಭ್ರಪಟಳದೊಳ್, ಸರಳತೆಯುಂ ಬಡತನಮುಮಬಳಾಮಧ್ಯದೊಳ್, ನಡುಕಮುಮಾರಡಿಯುಂ ಚೂತಮಂಜರಿಯೊಳ್; ಕುಂದುಂ ಕಳಂಕಮುಂ ಹರಿಣಾಂಕನೊಳ್, ಉರ್ಕುಮಂ ಕಂಪಮುಂ ಮಂಡಳಾಗ್ರದೊಳ್, ಸೆರೆಯುಮೇರುಂ

ನೆತ್ತಮಾಡುವರೊಳ್, ಲೋಭಮುಮೆಳೆಕೊನೆಯೊಳ್ಪಿನೊಳ್, ನಿರೋಧಮುಂ ನಿಷ್ಪರಿಗ್ರಹಮುಂ ತಪೋವೃತ್ತಿಯೊಳ್, ಪೆರತೊಂದೆಡೆಯೊಳಿಲ್ಲೆನಿಸಿದ; ತಾರ್ಕ್ಷ್ಯಪಕ್ಷದನ್ತೈಕ್ಯಪಕ್ಷ ಪ್ರತಿಪನ್ನರೆಯು ಮರ್ನ್ನುರೆಯನ್ತೆ ಕ್ಷಾನ್ತಿಯುಮಂ, ಕವಿರಾಜಾರಾಜವಚಃ ಪ್ರಭಾವದಂತಳಂಕಾರಮು ಮನೊಳಕೊಂಡ ಜನಂಗಳಿಂ ಮನಂಗೊಳಿಸುತ್ತಮಿರ್ಪ್ಪುದು ॥ ೨೮ ॥

ಪೊಸವಡಂಗಿಲೆ :

ಮನೆ ಮನೆ ಶಂಕರಾಚ್ಯುತಬುಧಾತಿಥಿಪೂಜೆಯಿನಗ್ನಿ ಹೋತ್ರದಿಂ
ದನುಪಮ ವೇದನಾದ ಮಠಸತ್ರಸಭಾ ಶಿವವಿಷ್ಣುವಾಗ್ನಿಕೇ
ತನತತಿ ಕೇರಿ ಕೇರಿ ಜನರಿಂ ಸಲೆ ತಿಂತಿಣಿ ಬೀದಿ ಬೀದಿ ತಾ
ನೆನಿಸುವುದಾಗಳುಂ ಪೊಸವಡಂಗಿಲೆ ವಿಶ್ವಮಹೀತಳಾಗ್ರದೊಳ್ ॥ ೨೯ ॥

ಪೊಸ ಕಾವ್ಯಂ ಪೊಸ ಗೇಯಂ
ಪೊಸ ವಾದ್ಯಂ ಪೊಸ ವಿನೂತರಸ[ವು]ಂ ವೃತ್ತಂ
ಪೊಸ ವಸ್ತು ಪೊಸ ವಿಳಾಸಂ
ಪೊಸ ದೇಸೆ ಸಮಂತು ಪೊಸವಡಂಗಿಲೆಗೆಲ್ಲಾ ॥ ೩೦ ॥

ಸಿಂದಗಿ :

ತಾವರೆ ನೆಯ್ದಿಲುಂ ಕೊಸಗು ಸಂಪಗೆ ಮಲ್ಲಿಗೆ ಮೊಲ್ಲೆಯೆಲ್ಲಿಯುಂ
ತೀವಿದ ಪೆರ್ಗೊಳಂ ಕೆರೆಯು ಬಾವಿಯುಮೊಪ್ಪುವ ದೇವತಾಚಯಂ
ಮಾವಿನ ತೋಟಮುಂ ಕಳವೆ ಗದ್ದೆಯ ರಾಟಣವಲ್ಲಿಗಲ್ಲಿಗಂ
ಭಾವಿಸಿ ನೋಡಲಿಂದ್ರನ ಪುರಕ್ಕೆಣೆಯಾದುದು ಸಿಂದಿಕಾಪುರಂ ॥ ೩೧ ॥

ಕುರುಗೋಡು :

ಭಕ್ತಿಯ ಮನೆ ಭಕ್ತಿಯ ನೆಲೆ
ಭಕ್ತಿಯವತಿ ಭಕ್ತಿಯೇಳ್ಗೆ ಭಕ್ತಿಯ ರಾಜ್ಯಂ
ಭಕ್ತಿಯ ಭಂಡಾರಂ ಶಿವ
ಭಕ್ತಿಯ ಸಿರಿ ಬಂದು ನೆಲೆಸಿತೀ ಕುರುಗೋಡೊಳ್ ॥ ೩೨ ॥

ಪುಲಿಗೆರೆ :

ತೆವರೆಲ್ಲಂ ದೇವತಾಮಂದಿರ ನಿವಹಮೆ, ನಿಮ್ನಸ್ಥಳೀರಾಜಿಯೆಲ್ಲಂ
ಸುವಿರಾಜದ್ದೀರ್ಘಿಕಾ ಸಂಕುಲಭರಿತಪಯಃಪೂರನೀರೇಜ ಕಾಸಾ
ರವೆ, ಮತ್ತಂ ತತ್ಸಮಾಳಂಕೃತ ವಸುಧೆಯದೆಲ್ಲಂ ಲಸಚ್ಚಂದನೋದ್ಯಾ
ನವೆನಲ್, ರಮ್ಯಂ ದಲೆಂದುಂ ಪುರಿಕರನಗರೀ ಲೀಲೆ ಲೋಕಾವಲೋಕಂ ॥ ೩೩ ॥

ಒಂದೊಂದಕ್ಷತೆಯಂ ಸಾ
ನಂದದಿನಭ್ಯರ್ಚಿಸಲ್ಕೆ ಕೊಳಗಂ ತೀವಿ
ತ್ತೆಂದೊಡೆ ಶಿವಲಿಂಗದ ಸಮ
ಸಂದ ಮಹೋನ್ನತಿಯ ಪವಣನರಿಯೆಂ ಪೊಗಳಲ್ ॥ ೩೪ ॥

ಸಂಗೀತಪುರ :

ಕವಿ ಗಮಕಿ ವಾದಿ ವಾಗ್ಮಿ
ಪ್ರವೇಶ ಸಂಗೀತ ವಿಷಯ ಸಾಹಿತ್ಯ ರಸೋ
ದ್ಭವ (ಭಾವ) ಚತುರ ಸಂಸ್ತುತ
ವಿವಿಧ ಕಲಾಭಂಗಿ ಸಂಗಿ ಸಂಗೀತಪುರಂ ॥ ೩೫ ॥

ಲಕ್ಕುಂಡಿ :

ಸರಸಿಜಯೋನಿ ಬಿಣ್ಬನರಿಯಲ್ಕಮರಾವತಿ ಲೊಕ್ಕಿಗುಂಡಿಯೆಂ
ಬೆರಡುಮನೆಯ್ದೆ ತೂಗಲಮರಾವತಿ ಮುಟ್ಟಿದುದೂರ್ಧ್ವಲೋಕಮಂ
ಧರೆಯೊಳು ಲೊಕ್ಕಿಗುಂಡಿ ನೆಲಸಿತ್ತೆನೆ ಬಣ್ಣಿಪರಾರ್ ಜಗಕ್ಕಲಂ
ಕರಿಸುವ ಲೊಕ್ಕಿಗುಂಡಿಯ ಮಹತ್ವಮುಮಂ ದೊರೆವೆತ್ತ ಬಿಣ್ಪುಮಂ ॥ ೩೬ ॥

ಕುಕನೂರಿನ ಕೇರಿಗಳು :

ಸಾರ ನಾಲ್ವತ್ತೆಂಟುಂ
ಕೇರಿಗಳಿಂ ಬಳಸಿ ಬೆಳೆದ ಬಾಳೆಯ ಬನದಿಂ
ನಾರಂಗದ ತನಿವಣ್ಗಳಿ
ನೋರಂತಿರೆ ಕುಕ್ಕನೂರು ಕಣ್ಗೆಸೆದಿರ್ಕುಂ ॥ ೩೭ ॥

ಹೂಲಿಯ ಶಿವಗೇರಿ :

ಒರ್ವೊರ್ವರ್ ಪರಿಭಾವಿಸೆ ।
ಸರ್ವಜ್ಞರ್ ನೆಗಳ್ದ ವೇದಶಾಸ್ತ್ರಂಗಳೊಳೆಂ ।
ದುರ್ವೀತಳಮಭಿವರ್ಣಿಸೆ ।
ನೂರ್ವರ್ ಶ್ರೀ ಶಿವಗೇರಿಯೊಳ್ ಕರಮೆಸೆದಿರ್ದರ್ ॥ ೩೮ ॥

ಕುರುಗೋಡ ವ್ಯಾಪಾರಿಗಳ ಬೀದಿ :

ಧನದಿಂ ಧನದನಿನಗ್ಗಳ
ಮೆನಿಸುವ ಪರದರಿನಮೂಲ್ಯ ರತ್ನಂಗಳಿನ
ತ್ಯನುಪಮ ವಿಚಿತ್ರವಸ್ತ್ರಾ
ದ್ಯನೇಕದಿಂದೊಪ್ಪುಗುಂ ವಣಿಗ್ವಾಟಂಗಳ್ ॥ ೩೯ ॥

ಕುರುಗೋಡ ಸೂಳೆಗೇರಿ :

ಸ್ಮರರಾಜ ರಾಜಧಾನಿಯೊ
ಸುರವನಿತಾಜನ್ಮಭೂಮಿಯೋ ಚೆಲ್ವಿಂಗಾ
ಗರಮೋ ಪೇಳೆಂಬಿನೆಗಂ
ಕರಮೆಸೆಗುಂ ಸೂಳೆಗೇರಿಗಳ್ ತತ್ಪುರದೊಳ್ ॥ ೪೦ ॥

ಪುತ್ತೂರ ಹೊಲಗೇರಿ :

ಊರ ಕಡೆಯ ತೊರೆಯ ತಡಿಯ ಕರಿಯ ಕಲ್ಲ ಮೋರದಿಂ ಪು
ತ್ತೂರ ಪೊಲೆಯರಿಪ್ಪ ಕೇರಿಯೊವಳ ನೀರ ಭೂಮಿಯಂ
ಸಾರಭೂರುಹಂಗಳೋಳಿಯೊಳಗೆ ನೆರೆದ ಕೇರಿಯಂ
ಭೋರುಹಾಕ್ಷಿ ತನ್ನ ಧನದಿನೊಪ್ಪೆ ಮಾಡಿಸಿಲ್ದುದಂ ॥ ೪೧ ॥

೬. ವೃತ್ತಿ-ಸಂಘಗಳು

ಜೀವನ ನಿರ್ವಹಣೆಗೆ ವೃತ್ತಿ-ದುಡಿಮೆ ಅಗತ್ಯ. ಇದನ್ನು ಪ್ರೀತಿಸುವ, ಗೌರವಿಸುವ, ಮೇಲಾಗಿ ಲೋಕಹಿತಕ್ಕಾಗಿ ಬಳಸುವ ಮನೋಧರ್ಮ ಭಾರತದಲ್ಲಿ ಒಂದು ಪರಂಪರೆಯಾಗಿ ಬೆಳೆದಿದೆ. ದೈಹಿಕವೇ ಇರಲಿ, ಬೌದ್ಧಿಕವೇ ಇರಲಿ, ತಮ್ಮ ತಮ್ಮ ವೃತ್ತಿಗಳ ಅಭಿವೃದ್ಧಿಗಾಗಿ ಪ್ರಾಚೀನ ಕನ್ನಡಿಗರು ಸಂಘಗಳನ್ನು ಅಸ್ತಿತ್ವಕ್ಕೆ ತಂದಿದ್ದರು. ಮುಂದಿನ ಕಾಲಾವಧಿಯಲ್ಲಿ ಇವು ತಮ್ಮ ಅಸ್ತಿತ್ವವನ್ನು

ಕಳೆದುಕೊಂಡರೂ ಅನಯಾಯಿಗಳು ಮಾತ್ರ ಅವುಗಳ ಹೆಸರನ್ನು ಬಳಸುತ್ತ ಬರುತ್ತಿದ್ದರು. ಶಾಸನಗಳಲ್ಲಿ ಇಂಥ ವೃತ್ತಿಜೀವಿಗಳ. ವೃತ್ತಿಸಂಘಗಳ ವಿಷಯ ಪದೇ ಪದೇ ದಾಖಲಾಗಿದೆ.

ಗಾವುಂಡರು :

ಪರಹಿತರೆಂದು ನೀತಿವಿದರೆಂದು ಗುಣೋರ್ಜಿತರೆಂದು ಸತ್ಕಳಾ
ಪರಿಣತರೆಂದು ಸತ್ಯಪರರೆಂದು ದಯಾನ್ವಿತರೆಂದು ಸತ್ಕವೀ
ಶ್ವರಜನ ಸೇವ್ಯರೆಂದು ಶರಣಾಗತರಕ್ಷಣದಕ್ಷರೆಂದು ಬಿ
ತ್ತರಿಪುದು ಕೂರ್ಮೆಯಿಂದೆ ಪಿರಿಸಿಂಗಿಯ ಗೌಂಡುಗಳಂ ಜಗಜ್ಜನಂ ॥ ೪೨ ॥

ಕರಣಿಕರು :

ಪರಹಿತಕಾರ್ಯರಬ್ಧಿಸಮ ಧೈರ್ಯರಬಾಧಿತ ಮಂತ್ರವೀರ್ಯರು
ದ್ಧುರುತರ ಸಿಂಹಶೌರ್ಯರುಪದಾ ಚತುರಾರ್ಯರವಾರ್ಯ ಕಾರ್ಯರು
ತ್ಸ್ಫುರಿತ ಯಶೋನದತ್ರಬಳತೂರ್ಯರುಪಾರ್ಜಿತ ಪುಣ್ಯವರ್ಯರೀ
ಶ್ವರಪದಭಕ್ತಿಧುರ್ಯರೆನಿಪರ್ ಕರಣಂಗಳಿದೇಂ ಮಹತ್ಮರೋ ॥ ೪೩ ॥

ಅರುವತ್ತೊಕ್ಕಲು :

ಈ ವಸುಮತಿಯೊಳ್ ಬುಧ ಜ
ನಾವಳಿಗೆ ನಟಂಗೆ ನಗ್ನಭಗ್ನಾಳಿಗೆ ಕ
ಳ್ಪಾವನಿಜರೆನಿಸಿ ನೆಗಳ್ದರ್
ಕೇವಳಮೆ ಪರಹಿತಾರ್ಥರರುವತ್ತೊಕ್ಕಲ್ ॥ ೪೪ ॥

ತೋಂಟಿಗರೈನೂರ್ವರು :

ತ್ಯಾಗದ ಪೆಂಪಿನ ನೆಲೆ ರ
ತ್ನಾಗರ ಮುನಿಪುರದ ತೋಂಟಿಗರೆಸರ್ವಡೆದರ್
ಭೋಗದ ನನ್ನಿಯ ಛಲದು
ದ್ಯೋಗದ ಕಲಿತನದ ಬಲುಪಿನಾರ್ಪಿಂ ಕೂರ್ಪಿಂ ॥ ೪೫ ॥

ಸಾಲೆ ಸಾಸಿರ್ವರು :

ಅಜನೆಂತಂತೆ ಮತಪ್ರಯುಕ್ತರಿನನೆಂತಂತುಜ್ವಳರ್ ಶಂಕರಾ
ತ್ಮಜನೆಂತಂತಿರೆ ದಾನಿಗಳ್ ಧನದನೆಂತಂತರ್ಥ ಸಂಯುಕ್ತರಂ

ಗಜನೆಂತಂತೆ ಸುರೂಪಿಗಳ್ ಶಿವಪದಾಂಭೋಜಾತ ಷಟ್ಪಾದರೆಂ
ದು ಜನಂ ಬಣ್ಣಿಸುಗುಂ ಗುಣಾಗ್ರಣಿಗಳಂ ಶ್ರೀ ಸಾ[ಲೆ ಸಾಸಿರ್ವ]ರಂ ॥ ೪೬ ॥

ವೈಶ್ಯರು :

ಮನುಮುನಿಮಾರ್ಗರೆಂದು ಸುಜನಾಶ್ರಯರೆಂದು ಮಹಾನುರಾಗರೆಂ
ದನುಪಮರೆಂದು ಧರ್ಮಗುಣರೆಂದು ಸಮಸ್ತಸುಗಂಧವಸ್ತುವಾ
ಹನ ಕನಕಾದಿ ಲಕ್ಷಣವಿಚಕ್ಷಣರೆಂದು ಮಹಾನುಭಾವರೆಂ
ದನುದಿನಮಳ್ತಿಯಿಂ ಪೊಗಳ್ವುದೀ ಧರೆಯೀ ನಿಡುಗಲ್ಲ ವೈಶ್ಯರಂ ॥ ೪೭ ॥

ಅಯ್ಯಾವೊಳೆಯ ಐನೂರ್ವರು :

ಸ್ವಸ್ತಿ ಗವರೇಶಪದಪದ್ಮ ಷಟ್ಚರಣರುಂ
ವಿಸ್ತೀರ್ಣ ವಸ್ತುಗುಣವಿನಿಹಿತಾಚರಣರುಂ
ಪಂಚಶತವೀರಶಾಸನ ಗುಣೋದ್ಧರಣರುಂ
ಸಂಚಿತ ಸಮಸ್ತ ಧರ್ಮೈಕ ನಿಸ್ತರಣರುಂ
ಬ್ಯವಹಾರನಯವಿನಯ ವಿಜ್ಞಾನವಿದ್ಯರುಂ
ನವರತ್ನವಾಹನ ಪರೀಕ್ಷಾನವದ್ಯರುಂ
ತೋಟಿಯೆಂದಡೆ ಕೋಟಿಲಾಭವೆಂದುಲಿವರುಂ
ಆಟಂದ ಬವರಕ್ಕೆ ನಾಟಕಂ ನಲಿವರುಂ
ಅಯ್ಯಾವೊಳೆಯ ತಳದಿನಿದುವೆ ನೇರ್ಗಿರಿದೆನಿಪ
ರಯ್ಯಮಾ ದ್ವಾರಾವತೀಪುರಕೆ ಕುರುವೆನಿಪ
ಕುರುಗೋಡ ತಳದೊಳಗೆ ತಳರದಯ್ನೂರ್ವರುಂ
ನೆರೆ ನೊರ್ಪಡವರೊಳಗೆ ಪಗೆಗಂಜರೊರ್ವರುಂ ॥ ೪೮ ॥

ನಕರರು :

ಕಿಡುವೊಡಮೆಯನೊಂದನೆ ಕೊ
ಟ್ಟಡೆ ಮಡಗದಿಹಂ ಪರಂಗಳೆಂಬೆರಡುಮನಂ
ಗಡಿಯೊಳ್ ಕಿಡದೊಡಮೆಯನಡಿ
ಗಡಿಗಾರ್ಜಿಪರಲ್ಲಿ ನೆಗರ್ದ ನ[ಕ]ರ ಜನಂ ॥ ೪೯ ॥

ತೆಲ್ಲಿಗರು :

ಕತ್ತಲೆಯಾಡುತಿಪ್ಪ ಶಿವಗೇಹಮನಾದರದಿಂ ಬೆಳರ್ಪ ಲೋ
ಕೋತ್ತಮರಯ್ವತೊಕ್ಕಲವರಿಲ್ಲದ ಮಂಡಳಮುಂಟೆ? ಮತ್ತವ
ರುತ್ತಮನೀಯದೊಂದು ತಿಥಿಯಿಂಟೆ ? ತಥಾಮರರ್ಗಂ ತಪೋಧನ
ರ್ಗುತ್ತಮ ಪಾತ್ರದಾನಮನೆ ಮಾಳ್ಪವರೆಲ್ಲಿಯುಮಲ್ತೆ ತೆಲ್ಲಿಗರ್ ॥ ೫೦ ॥

ಎಲ್ಲಾ ಧರ್ಮಗಳುಮಂ
ತೆಲ್ಲಿಗರಾರಯ್ವರವರವೊಲು ಮತ್ತೊರ್ವರು
ಬಲ್ಲರೆ ಪುಣ್ಯಮನಾರ್ಜಿಸ
ಲೆಲ್ಲಾ ನಾಡೊಳಗೆ ಅವರ ಧರ್ಮಮೆ ಧರ್ಮಂ ॥ ೫೧ ॥

ತಂಬುಲಿಗ ಸಾಸಿರ್ವರು :
ಮರಿಮಂತರ್ ಮಹಿಮಾ ಸಮರ್ಥರತಿ ಶುದ್ಧಾಚಾರರತ್ಯಂತ ಸ
ನ್ನುತ ಸೂಚಿತ್ತರುದಾತ್ತರಪ್ರತಿಮರಿಂತೀ ಧಾತ್ರಿಯೊಳ್ ಸಂಪದು
ನ್ನತಿಯೊಳ್ ಕೇವಳಮೇ ಮಹಾಮಹಿಮರೆಂಬೀ ಪೆರ್ಮೆಯಂ ಬೆತ್ತರೆಂ
ಬತಿ ಶುದ್ಧರ್ ಸುಚರಿತ್ರರುತ್ತಮರಿವರ್ ಸಾಸಿರ್ವರೇಂ ಧನ್ಯರೋ ॥ ೫೨ ॥

ಉಗುರು ಮೂನೂರ್ವರು :
ಜಲಮಂ ಕಾಂತೆಯರಾರ್ತು ದಾಂಟುವೊಡವರ್ ಗೇಣಂತರಕ್ಕಣ್ಮರೀ
ನೆಲದೊಳ್ ಚೋದ್ಯಮಿದೇನೊ ಕೇಳುಗುರುಮೂನ್ನೂರ್ವರ್ಕಳೊಳ್ ಕೂಡಿ ನಿ
ರ್ಮಲೆ ಕೀರ್ತ್ಯಂಗನೆಯಂಬುಧಿಪ್ರಕರಮಂ ದಾಂಟಿರ್ದು ದಿಗ್ದಂತಿ ಸಂ
ಕುಲದಂತಾಗ್ರದೊಳೆಯ್ದೆ ನರ್ತಿಸುತುಮಿರ್ಪಳ್ ಗಾಳುವಿಂತಾವಳೋ ॥ ೫೩ ॥

ಬಿಲ್ಲ ಮೂನೂರ್ವರು :
ಶರಣಾಗತ ರಕ್ಷಕರಂ
ಹರಿಹರ ಪಾದಾಬ್ಜಭೃಂಗರಂ ಧಾರಿಣಿಯೊಳ್
ಸೆರಗಿಲ್ಲದ ಬಲ್ಲಾಳ್ಗಳ
ನೆರೆ ಮುದದಿಂ ಪೊಗಳ ಬಿಲ್ಲಮೂನೂರ್ವರಂ ॥ ೫೪ ॥

ದ್ರೋಣಿ ಸಾಸಿರ್ವರು :

ನುಡಿಯಿಸುವುದರಿಗು, ನುಡಿದಡೆ
ಮೃಡನ ಬರ, ರಾಮರೇಸು, ಕರ್ಣನ ವಚನಂ,
ಕಡೆದ ಶಿಲಾಶಾಸನಮೆನೆ
ನುಡಿದೇವಣ್ಣಿಸುವೆ ದ್ರೋಣಿಸಾಸಿರ್ವರುಮಂ ॥ ೫೫ ॥

ಲೆಂಕರು :

ನುಡಿವುದು ನನ್ನಿ ಮಾಡುವುದು ಕೀರ್ತನಮೀವುದೆ ಸದ್ವಿನೋದಮೊ
ಯ್ಯನೆ ಮರೆವೊಕ್ಕರನ್ನೆರೆಯೆ ಕಾವ ಗುಣಂ ಬೆಸನಂ ಮಹಾಜಿಯೊಳ್
ಸೆಡೆಯ[ದೆ ನು]ಗ್ಗಿಯೆಂದು ನುಡಿವೀ ನುಡಿ ಲೆಂಕರೊಳಾವ ಕಾಲಮುಂ
ನಡೆವುದು ಪಂಡಿತರ್ ಪೊಗಳೆ ಭೇರಿಯ ಗೋಸನೆ ಭೂತಳಾಗ್ರದೊಳ್ ॥ ೫೬ ॥

೭. ರಾಜರು–ಗಣ್ಯಪುರುಷರು

'ಸುಭಟರ್ಕಳ್ ಕವಿಗಳ್ ಸುಪ್ರಭುಗಳ್' ಎನಿಸಿದ ಕನ್ನಡ ಪ್ರಜಾವರ್ಗದಲ್ಲಿ ಶಾಸನಗಳು ಪ್ರಸ್ತಾಪ ಮಾಡುವುದು, ಪ್ರಸಿದ್ಧ ಪ್ರಜಾಸಮೂಹವನ್ನು, ಸುಪ್ರಸಿದ್ಧ ರಾಜಸಮೂಹವನ್ನು. "ಈಯುವುದು ಇರಿಯುವುದು ಶರಣ್ಬುಗೆ ಕಾಯವುದು" ಈ ಮೂರು ಮೌಲ್ಯಗಳಿಗೆ ಬದ್ಧರಾಗಿ ರಾಜರು ಆಳುತ್ತಿದ್ದರು. 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ರಾಜನಿಗೆ ಅನುಗುಣರೆನಿಸಿ ಸಾಮಂತ, ಮಾಂಡಳಿಕ, ಸೇನಾಪತಿ ಇತ್ಯಾದಿ ಗಣ್ಯವ್ಯಕ್ತಿಗಳು ಸಮಾಜದ ಲೇಸಿಗಾಗಿ ದುಡಿಯುತ್ತಿದ್ದರು. ಇವರೆಲ್ಲರ ದೊಡ್ಡ ಬದುಕಿನ ವೈವಿಧ್ಯಪೂರ್ಣ ವರ್ಣನೆ ಶಾಸನಗಳಲ್ಲಿದೆ.

ಕದಂಬ ಮಯೂರವರ್ಮ :

ಹಿಮವಂತಸ್ಫಟಿಕಶ್ಶಿಳಾತಳದ ಶುಂಭಸ್ತಂಭದೊಳ್ ಕಟ್ಟಿದಂ
ಸಮದೇಭಂಗಳನಶ್ವಮೇಧಮೆನಿಪೀ ಯಜ್ಞಂಗಳಂ ಮಾಡಿದಂ
ಕ್ರಮದಿಂದಂ ಪದಿನೆಂಟನಾ ದ್ವಿಜರುಮಂ ತಾನಂದಹಿಚ್ಛತ್ರದಿಂ
ದಮೆ ತಂದೆಯ್ದೆ ಸಕುಂತಳಾವನಿಯೊಳಂ ಸಂಸ್ಥಾಪ್ಯಮಂ ಮಾಡಿ ವಿ
ಕ್ರಮಮಂ ತಾಳ್ದಿ ಮಯೂರವರ್ಮನೆಸೆದಂ ವಿಶ್ವಂಭರಾ ಭಾರದೊಳ್ ॥ ೫೭ ॥

ಬಾದಾಮಿ ಚಾಲುಕ್ಯರು :

ಅನಲಂ ಕೊಟ್ಟರುಣಧ್ವಜಂ ವನಜನಾಭಂ ಕೊಟ್ಟ ವಾರಾಹಲಾಂ
ಛನವಾ ಕೌಶಕಿ ಕೊಟ್ಟ ಬೆಳ್ಗೊಡೆ ಕುಮಾರಂ ಕೊಟ್ಟ ಮಾಯೂರಪಿಂ
ಛನಿಕಾಯಾಂಚಿತ ಕುಂತಮಿಂತಿನಿತುಮಂ ಕೆಯ್ಕೊಂಡು ಲೋಕೈಕ ಮಂ
ಡನರಾಳ್ದರ್ ಸಕಳಾವನೀತಳಮುಮಂ ಚಾಲುಕ್ಯ ಚಕ್ರೇಶ್ವರರ್ ॥ ೫೮ ॥

ಗಂಗ ರಕ್ಕಸಗಂಗ :

ನುಡಿದುದೆ ನನ್ನಿ, ಮಾಡಿದುದೆ ಶಾಸನಮಿತ್ತುದೆ ರಾಮರೇಸು, ಮಾ
ರ್ಪಡಿದುದೆ ವಜ್ರಲೇಪ, ಮುಳಿದಿರ್ದುದೆ ಮೃತ್ಯು, ಪರೋಪಕಾರದೊಳ್
ನಡೆದುದೆ ಬಟ್ಟೆ, ಸದ್ಗುಣಮೆ ಮೆಯ್ಯೆನೆ, ನಿನ್ನವೊಲಿಂತು ನೀತಿಯೊಳ್
ನಡೆವ ನೃಪೇಂದ್ರನಾವನಖಿಲಾವನಿಯೊಳ್ ಕಲಿ ಗಂಗಭೂಪತೀ ॥ ೫೯ ॥

ಸ್ಥಿರನೇ ? ಮೇರುಗಿರಿಂದ್ರನೊಳ್ ಸೆಣಸುವಂ, ಗಂಭೀರನೇ ? ವಾರ್ಧಿಯೊಳ್
ಪುರುಡಿಪ್ಪಂ, ಕಲಿಯೇ ? ಸುರೇಂದ್ರಸುತನಂ ಮೆಚ್ಚಂ, ಮಹಾದಾನಿಯೇ ?
ಸುರಭೂಜಕ್ಕೊರೆಗಟ್ಟುವಂ, ಚದುರನೇ ? ಪಾಂಚಾಳನಂ ಗೆಲ್ದನೆಂ
ದಿರದೀ ಧಾರಿಣಿ ಬಣ್ಣಿಕುಂ ರಣಜಯಪ್ರೋತ್ತುಂಗನಂ ಗಂಗನಂ ॥ ೬೦ ॥

ಗಂಗ ಮಾರಸಿಂಹ :

ನುಡಿದನೆ ಕಾವುದನೇ ? ಎರ್ದೆ
ಗಿಡದಿರು ಜವನಿಟ್ಟ ರಕ್ಕೆ. ನಿನಗೀವುದನೇಂ
ನುಡಿದನೆ ? ಏ ಅದು ಕೆಯ್ಯದು.
ನುಡಿದುದು ತಪ್ಪುಗುಮೆ ಗಂಗಚೂಡಾಮಣಿಯಾ ॥ ೬೧ ॥

ಗಂಗ ರಾಚಮಲ್ಲ – ಚಾವುಂಡರಾಯ :

ಶ್ರುತಮುಂ ದರ್ಶನಶುದ್ಧಿಯುಂ ವಿಭವಮುಂ ಸದ್ವೃತ್ತಮುಂ ದಾನಮುಂ
ಧೃತಿಯುಂ ತನ್ನೊಳೆ ಸಂದ ಗಂಗಕುಳಚಂದ್ರಂ ರಾಚಮಲ್ಲಂ ಜಗ
ನ್ನುತನಾ ಭೂಮಿಪನದ್ವಿತೀಯ ವಿಭವಂ ಚಾಮುಂಡರಾಯಂ ಮನು
ಪ್ರತಿಮಂ ಗೊಮ್ಮಟನಲ್ತೆ ಮಾಡಿಸಿದನಿಂತೀ ದೇವನಂ ಯತ್ನದಿಂ ॥ ೬೨ ॥

ರಾಷ್ಟ್ರಕೂಟ ಕೃಷ್ಣ :

ಸೋಲದೆ ಪರವನಿತೆಗೆ ಕಣ್
ಸೋಲದು, ಮೊಲೆವಾಲನೂಡಿ ನಡಪಿದ ತಾಯಿಂ
ಮೇಲೆನೆ ಬಗೆಗುಂ, ನೋಡಿರೆ
ಸೋಲದು ಚಿತ್ತಂ ಪರಾಂಗನಾ ಪುತ್ರಕನಾ ॥ ೬೩ ॥

ನೋಡಿರೆ ಪರವಧುಗೆ ಮನಂ
ಕೂಡದು ಸೂಳ್ಸೂಳೊಳೆತ್ತಿ ನಡಪಿದ ತೋಳುಂ
ಡಾಡಿದ ಮೊಲೆ ಬಸಿರೊಳಗಿ
ರ್ದಾಡಿದ ಚಿತ್ತಂ ಪರಾಂಗನಾ ಪುತ್ರಕನಾ ॥ ೬೪ ॥

ಕಲ್ಯಾಣ ಚಾಲುಕ್ಯ ತೈಲಪ :

ಧರೆಯಂ ದಾನವನುಯ್ದಡೆ
ಮುರರಿಪು ತಪ್ಪಂತೆ ರಾಷ್ಟ್ರಕೂಟರ ಕೆಯ್ಯಿಂ
ಸ್ಥಿರೆಯಂ ನಿಜಭುಜದೊಳ್
ಸ್ಥಿರೆಯಾಗಿರೆ ತಂದು ನಿಲಿಸಿದಂ ತೈಲನೃಪಂ ॥ ೬೫ ॥

ಬಂಟಿನ ಮೆಯ್ಗಲಿ ತೈಲಂ
ಟೆಂಟೆಣಿಸುವರಳವೆ ಕಾಳೆಗಮಂ ನೂ
ರೆಂಟಂ ಕಾದಿದನೆಣ್ಬ
ತ್ತೆಂಟಂ ಕೊಂಡಂ ಪ್ರತಾಪದಿಂ ಕೋಟೆಗಳಂ ॥ ೬೬ ॥

ಕಲ್ಯಾಣ ಚಾಲುಕ್ಯ ವಿಕ್ರಮಾದಿತ್ಯ :

ಎಸೆವ ಶಕವರುಷಮಂ ಮಾ
ಣಿಸಿ ವಿಕ್ರಮವರುಷಮೆಂದು ತನ್ನಯ ಹೆಸರಂ
ವಸುಮತಿಗೆ ನೆಗರ್ಚಿದಂ ಸಾ
ಹಸಿಗಂ ಜಗದೇಕದಾನಿ ಧರ್ಮವಿನೋದಂ ॥ ೬೭ ॥

ತನ್ನಾಜ್ಞೆ ತನ್ನ ತೇಜಂ
ತನ್ನುನ್ನತಿ ನೆಗಳೆ ರಾಯರಿನ್ನುಂ ಮುನ್ನಂ
ತನ್ನ ಹೊರೆಯೆನಿಪರಿಲ್ಲೆಂ
ಬನ್ನಂ ಪೆರ್ಮಾಡಿರಾಯನೆಸೆದಂ ಧರೆಯೊಳ್ ॥ ೬೮ ॥

ನಿಜ ಖಳ್ಗಂ ವೀರಲಕ್ಷ್ಮೀವದನ ಲುಳಿತ ಸದ್ದರ್ಪಣಂ, ತೇಜವಾಶಾ
ಗಜಕುಂಭಾಳಂಕೃತಾ ಲೇಪಿತ ಸುರುಚಿರ ಸಿಂಧೂರವುತ್ತುಂಗ ಕೀರ್ತಿ
ಧ್ವಜವಾಕಾಶಾಗ್ರ ಗಂಗಾಜಳ ಧವಳರುಚಿರಸ್ಪರ್ಧಿಯಾಯ್ತೆಂಬಿನಂ ವಿ
ಶ್ವ ಜಗದ್ವಿಖ್ಯಾತನಾದಂ ನೃಪಮುಖತಿಳಕಂ ವೀರಪೆರ್ಮಾಡಿದೇವಂ ॥ ೬೯ ॥

ನಿನಗೇಕಛತ್ರಮಕ್ಕೀ ಭುವನಭವನಮೀ ಲೋಕಧಾಯುಷ್ಯಮೆಲ್ಲಂ
ನಿನಗಕ್ಕನ್ಯಾವನೀಪಾಳಕರತಿಭಯದಿಂ ತಮ್ಮ ಸರ್ವಸ್ವಮಂ ತೆ
ತ್ತು ನಿಜಶ್ರೀಪಾದ ಪದ್ಮಕ್ಕೆರಗುಗೆ ಪಿರಿದುಂ ಪ್ರೀತಿಯಿಂ ವಿಶ್ವಧಾತ್ರೀ
ಜನಮಂ ಭೂಲೋಕಮಲ್ಲ ಕ್ಷಿತಿಪತಿ ದಯೆಯಿಂ ರಕ್ಷಿಸಾ ಚಂದ್ರತಾರಂ ॥ ೭೦ ॥

ಕಲ್ಯಾಣ ಚಾಲುಕ್ಯ ಜಗದೇಕಮಲ್ಲ II :
ಮಲೆಯದೆ ಮೀರಿ ಕೀರಿ ತಲೆದೋರದೆ ಕಪ್ಪಮನಿತ್ತು ಬಂದು ಬಾ
ಳ್ದಲೆಯನೆ ಕೊಟ್ಟು ಪೊತ್ತು ವೆಸಗೆಯ್ವುದದಲ್ಲದೊಡಿಕ್ಕಿ ಮೆಟ್ಟಿ ಪಂ
ದಲೆಯನೆ ಕೊಳ್ಗುಮೆಂದು ರಿಪುರಾಯರ ನೆತ್ತಿಯ ಮೇಲೆ ನರ್ತಿಕುಂ
ವಿಳಸಿತ ಕೀರ್ತಿ ವಿಶ್ವಜಗತೀತಳದೊಳ್ ಜಗದೇಕಮಲ್ಲನ ॥ ೭೧ ॥

ಕಲಚುರಿ ಕನ್ನಮರಸ :
ಮುಳಿಸಿಂ ಮುಯ್ಯೇಳ್ ಸೂಳ್ ಕ್ಷತ್ರಿಯರನರಸಿ ಕೊಂದಿಕ್ಕಿದಾ ರಾಮನಿಂದ
ಗ್ಗಳಮೆಂಬಂತಾವಗಂ ಮನ್ನೆಯರನರಸಿ ಪನ್ನಿರ್ವರಂ ಕೊಂದು ಬಾಹು
ಬಳಂದಿನ್ನಯ್ವತ್ತೇಳ್ ಕಾಳಗಮನದಟಿನಿಂ ಗೆಲ್ದು ನಿರ್ವ್ಯಾಕುಳಂ ಮಂ
ಗಳಿವೇಡಂ ಬೀಡುದಾಣಂ ತನಗೆನೆ ಜನ್ಮಂ ತಾಳ್ದಿದಂ ಕೃಷ್ಣರಾಜಂ ॥ ೭೨ ॥

ಕಲಚುರಿ ಪೆರ್ಮಾಡಿ :

ಅರಿಭೂಪಾಳರ ಮೀಸೆ ಭೋಂಕೆನೆ ಕರಿಂಕೇಳ್ವನ್ನೆಗಂ ತೇಜಮಾ
ವರಿಸಿತ್ತುರ್ವಿಯನಾ ಪದಬ್ಧಿ ವಿನಿಮಗ್ನೋನ್ಮಗ್ನರಂ ದಾನಮು
ದ್ಧರಿಸಿತ್ತರ್ಥಿಜನಂಗಳಂ ಮನು ಪವಿತ್ರಾಚಾರಮಂ ತಾಂ ತಿರ
ಸ್ಕರಿಸಿತ್ತಾತ್ಮಚರಿತ್ರಮೇನಧಿಕನೋ ಪೆರ್ಮಾಡಿಭೂಪಾಳಕಂ ॥ ೭೩ ॥

ಕಲಚುರಿ ಬಿಜ್ಜಳ :

ಧರೆಯಂ ವಾರಿಧಿಮೇಖಳೋಲ್ಲಸಿತೆಯಂ, ಲೀಲಾಲತಾಪಲ್ಲವಾ
ಧರೆಯಂ, ವಿಸ್ತೃತಪೀನವೃತ್ತಕಠಿನಪ್ರೋತ್ತುಂಗಭೂಭೃತ್ಪಯೋ
ಧರೆಯಂ, ಬಂಧುರನಂದನಾಳಿವಿಳಸತ್ಪೂಗಪ್ರಕಾಂಡೋದ್ಧ ಕಂ
ಧರೆಯಂ, ದೋರ್ಬಳ ಚಕ್ರವರ್ತಿ ತಳೆದಂ ಶ್ರೀ ಬಿಜ್ಜಳೋರ್ವಿಶ್ವರಂ ॥ ೭೪ ॥

ಹೊಯ್ಸಳ ವಿನಯಾದಿತ್ಯ :

ಬಲಿದೊಡೆ ಮಲೆದೊಡೆ ಮಲೆಪರ
ತಲೆಯೊಳ್ ಬಾಳಿಡುವನುದಿತ ಭಯರಸವಶದಿಂ
ಬಲಿಯದ ಮಲೆಯದ ಮಲೆಪರ
ತಲೆಯೊಳ್ ಕೈಯಿಡುವನೊಡನೆ ವಿನಯಾದಿತ್ಯಂ ॥ ೭೫ ॥

ಹೊಯ್ಸಳ ಎರೆಯಂಗ :

ಚಲದೆರೆಯಂಗೆ ಚಾಗದೆರೆಯಂಗೆ ಜಸಕ್ಕೆರೆಯಂಗೆ ಮಿಕ್ಕ ದೋ
ರ್ವಲದೆರೆಯಂಗೆ ವೀರದೆರೆಯಂಗೆ ಕುಲೋನ್ನತಿ ತನ್ನೊಳೊಪ್ಪುವೇ
ಚಲೆಯೆರೆಯಂಗೆ ಕೀರ್ತಿಯೆರೆಯಂಗೆರೆಯಂಗನೃಪಂಗೆ ನಂದನಂ
ಜಲಧಿಪರೀತ ಭೂವಲಯ ವರ್ಧನನಂಕದ ವಿಷ್ಣುವರ್ಧನಂ ॥ ೭೬ ॥

ಹೊಯ್ಸಳ ಬಲ್ಲಾಳ I :

ಚೇರಮ ಬೀರಮಂ ಬಿಸುಡು ಪಾಂಡ್ಯ ಕಡಂಗದಿರಂಧ್ರ ರಂಧ್ರಮಂ
ಪಾರದಿರೊಡ್ಡ ಗೊಡ್ಡಮನದಂ ಬಿಡು ಮಾಳವ ಕಾಳೆಗಕ್ಕೆ ಮೆ
ಯ್ದಾರದೆ ಸಾರೆಲೇ ತಿಗುಳ ನಿಂ ಜಗುಳೆಂಬುದಪಾರವೀರದು
ರ್ವಾರಗಭೀರಧೀರತೆಯ ವಿಶ್ರುತಘೋಷಣೆ ಬಲ್ಲುಭೂಪನಾ ॥ ೭೭ ॥

ಹೊಯ್ಸಳ ವಿಷ್ಣುವರ್ಧನ :

ಎಲೆ ಕಾವೇರಿಯ ವಾರಿ ಕೂಡೆ ಪೊಲಸಾದತ್ತೆಂದು ಪೇವೈಸುತುಂ
ಕೆಲದೊಳ್ ಕೂಪಜಲಾ(ಶಿ)ಯಪ್ಪಿನೆಗಮಾ ರಾಜೇಂದ್ರಚೋಳಂ ಭುಜಾ
ಬಲದಿಂ ವಿಷ್ಣು ತದೀಯ ಸೇನೆಯ ಪೆಣಂಗಳ್ ತನ್ನದೀಪೂರದೊಳ್
ಕಲಸಲ್ ವಿಕ್ರಮಕೇಳಿಯಂ ಮೆರೆದನತ್ಯುಗ್ರಪ್ರತಾಪೋದಯಂ ॥ ೭೮ ॥

ಹೊಯ್ಸಳ ಉದಯಾದಿತ್ಯ :

ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಕಾನೀನನಂ ದಾನದೊಳ್
ಹರಿಯಂ ವಿಕ್ರಮಶಕ್ತಿಯೊಳ್ ಯಮಜನಂ ಸತ್ಯೋಕ್ತಿಯೊಳ್ ತೀವ್ರ ಭಾ
ಸ್ಕರನಂ ತೇಜದೊಳಂಬುಜಪ್ರಭವನಂ ಚಾತುರ್ಯದೊಳ್ ಹೇಮ ಭೂ
ಧರಮಂ ಧೈರ್ಯದೊಳೆಯ್ದೆ ಪೋಲ್ವನುದಯಾದಿತ್ಯೋರ್ವರಾವಲ್ಲಭಂ ॥ ೭೯ ॥

ಹೊಯ್ಸಳ ನರಸಿಂಹ I :

ಇದಿರಾದರಿಭೂಪಾಲರ
ಮದದಾನೆಯ ಕೊಂಬನುಡಿದು ದಂತದ ಬಳೆಯಂ,
ಬಿದುವಿನ ಮುತ್ತಿನ ಹಾರಮ
ನೊದವಿಸಿ ಜಯಸಿರಿಗೆ ತುಡಿಸುವಂ ನರಸಿಂಹಂ ॥ ೮೦ ॥

ಹೊಯ್ಸಳ ಬಲ್ಲಾಳ II :

ಕೇಳ ವಸಂತ, ಬಾಳ ಸಹಕಾರದ ತಣ್ಣೆಳಲಾಶ್ರಿತಾಳಿಗಾ
ಭೀಳಲಯಾಹಿನಿಷ್ಠುರಫಣೌಘದ ಮೆಯ್ನೆಳಲುದ್ಧತಾರಿಗು
ನ್ಮೀಳಿತ ಪುಂಡರೀಕದ ನೆಳಲ್ ಜಯಲಕ್ಷ್ಮಿಗೆನಿಪ್ಪ ವೀರಬ
ಲ್ಲಾಳನ ತೋಳ ಬಾಳ ನೆಳಲಾದುದು ಧಾತ್ರಿಗೆ ವಜ್ರಪಂಜರಂ ॥ ೮೧ ॥

ಹೊಯ್ಸಳ ನರಸಿಂಹ II :

ತೆರಳದಾರತಿ ಭೂಭುಜರ ನಿಟ್ಟೆಲುವಂ ಸಲೆ ತೇದು ಬೊಟ್ಟನಿ
ಟ್ಟುರುಳ್ವ ಶಿರಂಗಳಂ ಬಲುಗರುಳ್ಗಳೊಳಾಗಳೆ ಕೋದು ಕಂಠದೊಳ್
ಧರಿಸಿ ಕಪಾಳಮಂ ಪಿಡಿದು ನೆತ್ತರನೀಂಟಿ ಮನೋನುರಾಗದಿಂ
ಧುರದೊಳೆ ಖಡ್ಗಕಾಳಿ ಕುಣಿದಾಡುವಳೀ ನರಸಿಂಹಭೂಪನಾ ॥ ೮೨ ॥

ಶ್ರೀವಧು ಮುತ್ತಿನೆಕ್ಕಸರದಂತುರದೊಳ್ ನಲಿವಂತು, ವಿಕ್ರಮ
ಶ್ರೀವಧು ಬಾಹುಪೂರಕದವೊಲ್ ಭುಜದೊಳ್ ನಲಿವಂತು, ಕೀರ್ತಿ ದಿ
ಗ್ದೇವಿಯರೊಳ್ ನಿಜಾಜ್ಞೆವೆರಸಾದರದಿಂ ನಲಿವಂತು, ಧರ್ಮಲ
ಕ್ಷೀವರನಾಗಿ ಪಾಲಿಸಿದನುರ್ವರೆಯಂ ನರಸಿಂಹಭೂಭುಜಂ ॥ ೮೩ ॥

ಹೊಯ್ಸಳ ಸೋಮೇಶ್ವರ :
ಹೋಗು ಬಾ ಹಮ್ಮೀರ, ಹೋ ಗೂರ್ಜರ ಹೆರ ತೆಗೆ, ನಿಂದಲ್ಲೆ ನಿಲ್ಲಂಧ್ರ, ನಿನ್ನೋ
ಲಗವೇಳಿತ್ತಿತ್ತ ಸಾರ್ ಮಾಳವ, ಕುಡು ತೆರಹಂ ಲಾಳ ಗೌಳಂಗೆ, ಮಾಣ್ಮಾ
ತುಗಳಂ ಬಂಗಾಳ, ದೇವಂ ಬೆಸಸುವ ನುಡಿಯಂ ವಂಗ ಕೇಳೆಂಬರೆತ್ತಂ
ನೆಗಳ್ದೀ ಸೋಮೇಶನಾಸ್ಥಾನದೊಳರಿಬಿರುದ ಕ್ಷತ್ರರಂ ವೇತ್ರಹಸ್ತರ್ ॥ ೮೪ ॥

ಸೇವುಣ ರಾಮಚಂದ್ರ :
ಕಾಮಂ ಖ್ಯಾತಂ ಚೆಲ್ವಿಂ,
ಭೀಮಂ ಭುಜಬಲದಿನಮೃತ ತನುಮಿಂ ಸೋಮಂ,
ಕಾಮಂ ಭೀಮಂ ಸೋಮಂ
ರಾಮಮಹೀಪತಿಯೆ ತದ್ಗುಣಂಗಳಿನೆನಿಪಂ ॥ ೮೫ ॥

ವಿಜಯನಗರ ದೇವರಾಯ :
ಸಲೆ ನಾನಾ ಸಸ್ಯಸಂಪತ್ತಿಯನೊದವಿಸಿ, ಸಂತುಷ್ಟಿ[ಯಿ]ಂ ದಾನಧಾರಾ
ಜಲದಿಂ ಸಂತಾಪಮಂ ತಳ್ಗಿಸಿ, ವಿತತ ಸಿತಚ್ಛತ್ರ ಸುಚ್ಛಾಯೆಗೊಯ್ದು
ಜ್ವಲಿಪಾಜ್ಞಾದಾಮದಿಂದಂ ನಿಯಮಿಸಿ, ನಿಜದೋರ್ಸ್ತಂಭದೊಳ್ ಕಟ್ಟಿ, ಗೋಮಂ
ಡಲಮಂ ಸತ್ಕೀರ್ತಿ ದುಗ್ಧಂಗರೆದನರಿಕೆಯಿಂ ದೇವರಾಜಾವನೀಂದ್ರಂ ॥ ೮೬ ॥

ನೊಳಂಬ ಜಯಸಿಂಹ :
ಪೊಗೆಯುತ್ತಿರ್ದಪ್ಪುದಿನ್ನುಂ ದಹಳೆ, ಹಿಮನಗಾರಣ್ಯಮಂ ಲಾಳನಿನ್ನುಂ
ಪುಗಲೆಂದಿರ್ದಪ್ಪನಿನ್ನುಂ ನೆಲಸದೆ ತಿವುಳಂ ಲಂಕೆಯಿಂ ತೆಂಕಲೋಡಲ್
ಬಗೆಯುತ್ತಿರ್ದಪ್ಪನಿನ್ನುಂ ಮುಳಿದಪನೆನುತುಂ ಕೊಂಕಣಂ ಸಂಕೆಯಿಂ ಗುಂ
ಡುಗೊಳುತ್ತಿರ್ದಪ್ಪನೇಂ ಬಲ್ಲದನೊ ಚಕಿತವಿದ್ವಿಟ್ಕದಂಬಂ ನೊಳಂಬಂ ॥ ೮೭ ॥

ತೈಲ ಸಾಂತರ :

ಅದಟಿನಳುರ್ಕೆ – ಮೈಮೆಯ ನಿಮಿರ್ಕೆ – ಯಶೋಧನದಿರ್ಕೆ, ರಾಜವಂ
ಶದ ಕಡುವೆಳ್ಪು – ದಾನಗುಣದೊಳ್ಪು – ಗುಣಂಗಳ ತಳ್ಪು, ರಾಜ್ಯಸಂ
ಪದದ ಪೊದಳ್ಕೆ – ತೇಜದ ತೆರಳ್ಕೆ – ವಿರೋಧಿಯ ಬಾಳ್ಕೆ, ತನ್ನದೆಂ
ಬುದನೆನೆ ಪೆರ್ಮೆಯಂ ತಳೆದನಾ ನೃಪರೊಳ್ ನೃಪ ತೈಲ ಸಾಂತರಂ ॥ ೮೮ ॥

ಸಿಂದ ರಾಚಮಲ್ಲ :

ಪೊಡವಿಯ ಸಮಸ್ತ ಭಕ್ತರ
ನಡುವೆ ಮೃಡಂ ಮೆಚ್ಚಿ ನಿಚ್ಚ ವರಮಂ ಕುಡಲಿ
ರ್ಮಡಿ ರಾಚಮಲ್ಲದೇವಂ
ಪಡೆದಂ ನಿತ್ಯ ಪ್ರಸಾದ ರಾಜ್ಯಶ್ರೀಯಂ ॥ ೮೯ ॥

ಉದ್ವೃತ್ತಮಂಡಲಿಕ ತಾರಕ ಷಡಾನನಂ
ವಿದ್ವಿಷ್ಟರಿಧ್ವಂಸ ಸಬಳ ಪಂಚಾನನಂ
ಅಸದಳಂಕಾರನ್ಯ ನಾರೀ ವಿದೂರನಂ
ಅಸದೃಶ ಮಹಾಘೋರ ಸಂಗ್ರಾಮಧೀರನಂ
ವಿಪುಲ ವಿದ್ವದ್ವಿನುತ ಸಾಹಸೋತ್ತುಂಗನಂ
ನೃಪತಿಳಕ ಸಾಯಿದೇವನ ವೀರಸಿಂಗನಂ
ಕಲಿದೇವ ದಿವ್ಯ ಪದಪಂಕಜಾರಾಧಕಂ
ಬಲವದರಿಭೂಪಾಳ ಕುಳಸೈನ್ಯ ಸಾಧಕಂ ॥ ೯೦ ॥

ಸಿಂದ ವಿಕ್ರಮಾದಿತ್ಯ :

ಪ್ರಜೆಯಂ ಪಾಲಿಸಿ, ಧರ್ಮಮಂ ನಿಲಿಸಿ, ಶಿಷ್ಟವ್ರಾತಮಂ ಕಾದರಿ
ವ್ರಜಮಂ ಸೋದು, ನಿರಂತರಂ ವಿಪುಳ ಲಕ್ಷ್ಮೀಧಾಮನಾದಂ, ಮಹೀ
ಭುಜ ಚೂಡಾಮಣಿ ಸಿಂದವಂಶನಜಿತಂ ಶ್ರೀ ವಿಕ್ರಮಾದಿತ್ಯನಾ
ಪ್ತಜನೋದ್ಯನ್ನಿಧಿ ಮಂಡಳೇಶತಿಲಕಂ ಚಾವುಂಡದೇವಾತ್ಮಜಂ ॥ ೯೧ ॥

ಕಾಮನೃಪ :

ಮೊರೆಯೆಂಬುದು ಬಾಂಧವರೊಳ್
ತೊರೆಯೆಂಬುದು ಮದನದೀನಿಕಾಯದೊಳಾದಂ
ಸೆರೆಯೆಂಬುದು ಜೂದುಗಳೊಳ್
ಪೆರತೆಡೆಯೊಳವಿಲ್ಲ ಕಾಮನೃಪನಾಳ್ವಿಳೆಯೊಳ್ ॥ ೯೨ ॥

ಧರೆಗುರುಳೆ ತಮ್ಮ ತಲೆಗಳ್,
ಕರಿಶಿರಮಂ ನಿಟಕಬಂಧದೊಳ್ ಪತ್ತಿಸಿ, ಬೀ
ರರ ತಂಡಂ ಗಣಪರವೊಲ್
ಕರಮೆಸೆದರ್ ಕಾಮಭೂಪನಿರಿದಾಹವದೊಳ್ ॥ ೯೩ ॥

ಪೋಲ್ವಾಳ ದಂಡನಾಥ :

ಜಗಮಂ ಝುಂಪಿಸುತಿರ್ಪ ಕೀರ್ತಿ, ಮುಗಿಲು ಮುಟ್ಟಿರ್ಪ ಪೆಂಪಂಬುರಾ
ಶಿಗೆ ಮಾರಂಡಲಮಾದ ಗುಣ್ಪು, ಪತಿರಾಜ್ಯಶ್ರೀಗಡರ್ಪಾದ ಮಂ
ತ್ರಗುಣಂ, ರಾಗಮನುರ್ಬಿಗೀವ ಸಿರಿ, ಸಾಯುಜ್ಯಾದಿಸಂಪತ್ತಿಯಂ
ನಗುತಿರ್ಪಚ್ಯುತಭಕ್ತಿ, ತನ್ನೊಳೆನಿಪಂ ಪೋಲಾಳ್ವದಂಡಾಧಿಪಂ ॥ ೯೪ ॥

ಅಮೃತ ದಂಡನಾಥ :

ಮಡಗಿದ ತಾಮ್ರ ಶಾಸನಮದೊಂದೆಡೆಗೆತ್ತಿದ ಕಲ್ಲ ಶಾಸನಂ
ನುಡಿವುವೆ ? ಮಂತ್ರಿಮುಖ್ಯನಮಿತಂ ನೆರೆ ಕಾವುದನೀವುದಂ. ತೊಡ
ರ್ಪಡಸಿರೆ ಕಾದ ಮಾನಸರ ಮೆಯ್ಸಿರಿಗಳ್ ನರಶಾಸನಂ, ಮನಂ
ಬಡೆವಿನಮಿತ್ತುದಂ ಪೊಗಳ್ವ ಲೋಕದ ನಾಲಗೆ ತಾಮ್ರಶಾಸನಂ ॥ ೯೫ ॥

ಗೊಂಕಭೂಪಾಳ :

ಮದನವ್ಯಾಜದಿನೊರ್ಮೆ ಪೊರ್ತುಗಳೆವಂ, ಮತ್ತೋರ್ವ ಸಂಗೀತ ಸ
ಮ್ಮದದಿಂದಿರ್ಪನದೊಮ್ಮೆ ವಾರವನಿತಾ ಲೀಲಾಕಟಾಕ್ಷೇಕ್ಷಣಾ
ಸ್ಪದನಿರ್ಪಂ, ಪರಿಹಾಸಗೋಷ್ಠಿಗಳಿನಿರ್ಪಂ, ಮತ್ತಮಂತೋರ್ಮೆ ದೋ
ರ್ಮದನುದ್ಯನ್ಮೃಗಯಾ ವಿನೋದಭರದಿಂ ಶ್ರೀ ಗೊಂಕಭೂಪಾಳಕಂ ॥ ೯೬ ॥

ಮಾಳಿಮಯ್ಯ :

ಒಡಲಂ ತಾಂ ಸುಚರಿತ್ರದೊಳ್, ಧನಮನುದ್ಯತ್ ದಾನದೊಳ್ ನನ್ನಿಯಂ
ನುಡಿಯೊಳ್, ಭಕ್ತಿಯನೆಯ್ದೆ ತಂದೆಯೊಳುದಗ್ರಂ ಚಿತ್ತಮಂ ಸಂತತಂ
ಮೃಡಪಾದಾಬ್ಜದೊಳಾವಗಂ ಬ್ಯಸನಮಂ ಸದ್ಧರ್ಮ್ಮದೊಳ್, ತಾಳ್ದಿದಂ
ಗಡದೇವಣ್ಣಿಪೆನಣ್ಣ ಸಚ್ಚರಿತಮಂ ಶ್ರೀ ಮಾಳಿಮಯ್ಯಾಂಕನ ॥ ೯೭ ॥

ಮುದ್ದಸಾಮಂತ :

ಕವಿಗಳ ಮುದ್ದನಾಶ್ರಿತರ ಮುದ್ದನನಾಥರ ಮುದ್ದನಿಷ್ಟರ
ಪ್ಪವರ್ಗಳ ಮುದ್ದನರ್ಥಿಗಳ ಮುದ್ದನೆಡರ್ ನೆಲೆಗೊಂಡ ಶಿಷ್ಟಬಾಂ
ಧವರೆಸೆವೊಂದು ಮುದ್ದನೆನಸುಂ ಪರಿವಾರದ ಮುದ್ದನಂಗನಾ
ನಿವಹದ ಮುದ್ದನೆಯ್ದೆ ಸಲಿಪಂ ಪ್ರಭು ಮುದ್ದನಿಳಾತಳಾಗ್ರದೊಳ್ ॥ ೯೮ ॥

ಲೋಕಗೌಡ :

ಎತ್ತಿಸಿದಂ ಜಿನೇಂದ್ರಗೃಹಮಂ, ಧರೆ ಬಣ್ಣಿಸಲೆಯ್ದೆ ತನ್ನ ಮೆ
ಯ್ವತ್ತಿಸಿದಂ ಪ್ರಜಾಪ್ರಕರಮಂ, ರಿಪುವರ್ಗದ ಬಾಯ ಬಾಗಿಲೊಳ್
ತೆತ್ತಿಸಿದಂ ಪಲರ್ ಬೆದರೆ ಕೂರಲಗಂ, ನಿಜಕೀರ್ತಿವಲ್ಲಿಯಂ
ಪತ್ತಿಸಿದಂ ದಿಗಂತಮನಿದೇಂ ಕೃತಕೃತ್ಯನೊ ಲೋಕನುರ್ವಿಯೊಳ್ ॥ ೯೯ ॥

ತಾರಕಗೌಂಡ :

ಎತ್ತಿಸಿದಂ ಶಿವಗೃಹಮಂ,
ಸುತ್ತಿಸಿದಂ ಕೀರ್ತಿಲತಿಕೆಯಿಂ ದಶದಿಶೆಯಂ,
ಮತ್ತೆನಿಸದೆ ಪ್ರಜೆಯಂ ಮೆ
ಯ್ವತ್ತಿಸಿದಂ, ಸತ್ಯದಿಂದೆ ತಾರಕಗೌಂಡಂ ॥ ೧೦೦ ॥

ತೇಜರಾಯ :

ಓಡದವರಿಲ್ಲ ಭೂಪರ್,
ಬೇಡದ ಜನಮಿಲ್ಲ, ಪೊಗಳದವರಿಲ್ಲಣಮ
ಳ್ಕಾಡದ ಪರಧರೆಯಿಲ್ಲೆನ
ಲಾಡಂಬರಮಾಯ್ತು ತೇಜರಾಯನ ತೇಜಂ ॥ ೧೦೧ ॥

ಕುಂಜಸೆಟ್ಟಿ :

ವೀರದ ಕಣಿ, ವೀರದ ನಿಧಿ,
ವೀರದ ನೆಲೆ, ವೀರದಾಗರಂ, ಮತ್ತಂ ತಾ
ವೀರದ ನಿಧಾನನೆನಿಪಂ
ವೀರಗ್ರಣಿ ಕುಂಜಸೆಟ್ಟಿ ವೀರವಿನೋದಂ ॥ ೧೦೨ ॥

ಚೌಡಿಗಾಂಕ :

ಪಡೆದೊಡಮೆಯಪ್ಪುದೆಂತುಂ
ಕಿಡುವುದೆ, ಕಿಡದೊಡಮೆ ಧರ್ಮಮೆಂದಾರ್ಜಿಸುವರ್
ತಡೆಯುದೆ ಧರ್ಮವನಾರಿಂ
ಕಡು ಜಾಣರೊ ಚೌಡಿಗಾಂಕನುಂ ಹಾಚಲೆಯುಂ ॥ ೧೦೩ ॥

ಸೋಮ ದಂಡೇಶ :

ಚಿರಕೀರ್ತಿಲತಾ ಸಂತತಿಯ ಬಳವಿಗಾದರ್ಕರಿಂ ಪೊಯ್ವ ಪೊಯ್ನೀರ್,
ಶರಣಾಯಾತಂಗೆ ಮುನ್ನೀರುರದ ಪಗೆಯ ಬೇರ್ಗಾವಗಂ ತಾನೆ ಬೆನ್ನೀರ್,
ಪರಭೂಪಾಳರ್ಗುಗುಳನೀರ್, ಜಯವನಿತೆಯ ವೈವಾಹಿಕ್ಕಾದ ಕೆಯ್ನೀರ್,
ಧರೆಯೊಳ್ ದಂಡೇಶ ಸೋಮ ಪ್ರಬಳ ನಿಜಭುಜೋಚ್ಚಾಸಿ ಧಾರಾಜಳೌಘಂ ॥ ೧೦೪ ॥

ಚಟ್ಟ :

ಚಟ್ಟಂ, ಪರವನಿತೆಯರಂ
ಮುಟ್ಟಂ, ವಿತರಣಮನಮರಭೂರುಹದೊಳ್ ಕೋ
ಡಿಟ್ಟಂ, ಪಾಪದ ಪಥಮಂ
ಮೆಟ್ಟಂ, ಶಾಶ್ವತಪದಕ್ಕೆ ಕಳಸಮನಿಟ್ಟಂ ॥ ೧೦೫ ॥

ಕಲಿದೇವ ಸೆಟ್ಟಿ :

ಚಿಂತಾಮಣಿಲಿಂಗಂ ಹೃದ
ಯಾಂತರದೊಳ್ ನಿಂದು, ಕಲ್ಲಿಸೆಟ್ಟಿಗೆ ದಯೆಯಿಂ
ದಿಂತು ನಡೆಯಿಂತು ನುಡಿಯೆಂ
ದಿಂತು ಸದಾ ಶಿಕ್ಷಿಸುತ್ತೆ ರಕ್ಷಿಸುತ್ತಿರ್ಪಂ ॥ ೧೦೬ ॥

ಕಟ್ಟಿಸಿದ ಕೆರೆ, ಮನೋಮುದ
ದಿಟ್ಟಾರವೆ, ಪಸಿಯಲೀಯದಿಕ್ಕುವ ಸತ್ರಂ,
ಬಿಟ್ಟ ಬೆಳಗೆಯ್ಗಳೆರೆವರ
ವಟ್ಟಿಗೆ ಕಲಿದೇವಸೆಟ್ಟಿ ಮಾಡಿದ ಧರ್ಮ್ಮಂ ॥ ೧೦೭ ॥

ಇರುಗ ದಂಡನಾಥ :

ನುಡಿವುದು ಸತ್ಯದೊಳ್, ನಡೆವುದುತ್ತಮ ಧರ್ಮದೊಳೊಳ್ಪಿನೇಳ್ಗೆಯಂ
ಪಿಡಿ, ಪಿಡಿದಂತುಟಂ ಬಿಡದಿರೆಂದಿರುಗಂ ಮೊಲೆಯುಣ್ಬ ಕಾಲದೊಳ್
ತಡೆಯದೆ ಕೇಳುದಾತ್ತ ಗುಣ ನೀಂ ತಿಳಿ(ಯೆಲ್ಲ)ವನೆಂದು ಗಲ್ಲಮಂ
ಮಿಡಿಮಿಡಿದಂದು ತಾಯ್ ಕಲಿಸೆ ಕಲ್ತನಖಂಡಿತ ಚಂಡವಿಕ್ರಮಂ ॥ ೧೦೮ ॥

ಲಕ್ಷ್ಮೀಧರಾಮಾತ್ಯ :

ಕೆರೆಯಂ ಕಟ್ಟಿಸು, ಬಾವಿಯಂ ಸವಸು, ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗಿಂಬುಕೆಯ್, ನಂಬಿದ
ರ್ಗೆರೆವೆಟ್ಟಾಗಿರು, ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾಯ್
ಎರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ ॥ ೧೦೯ ॥

ಮಾಧವ–ಸಾಯಣ :

ತೋಡದ ಬಾವಿಯಿಲ್ಲಮರೆ ಕಟ್ಟದ ಪೆರ್ಗೆರೆಯಿಲ್ಲ ಲೀಲೆಯಿಂ
ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾರಮಿ
ಲ್ಲಾಡಲದೇನೊ ಭೂಭುವನ ಭುಂಭುಕಮಾದುದು ಕೀರ್ತಿ ಭಾಪು ನಾ
ಡಾಡಿಯೆ ಸೈಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ ॥ ೧೧೦ ॥

ಹಬ್ಬೆಯ ನಾಯಕ :

ಹುಸಿವನೆ ? ಮಾತುಗುಟ್ಟದಿರು, ಲೋಭನೆ ? ಮಾತನಡಂಗಿಸಾಜಿಯೊಳ್
ಕುಸಿವನೆ ? ಮಾತುಗೇಳದಿರು, ಹಂದೆ[ಯೆ ?] ಮಾತನದರ್ಮ್ಮ, ಕಂಡೆ ಛಿ
ದ್ರಿಸುವನೆ ? ಮಾತುಗೊಳ್ಳದಿರು, ಬಣ್ಣಿಮೊಡರ್ಕಜ ಮುಖ್ಯರಂ ವಿವ
ರ್ಣಿಸು ಬುಧ ಸದ್ಗುಣಾಂಬುನಿಧಿ ಹಬ್ಬೆಯನಾಯಕನಿರ್ದ ತಾಣದೊಳ್ ॥ ೧೧೧ ॥

ಹುಸಿಯಂ – ಹುಸಿಮಾತಂ ಸೈ
ರಿಸನೆಂದುಂ, ನನ್ನಿಕಾರ– ನನ್ನಿಗೆ ಸಂ
ತಸಮೆಯ್ದುವನಿಂತಿದು ಭಾ
ವಿಸೆ ಹಬ್ಬೆಯ ನಾಯಕಂಗೆ ಸಲೆ ಸಹಜಗುಣಂ ॥ ೧೧೨ ॥

ರವಿ ಚಮೂಪ :

ಕವಿತಾಕಲ್ಪಲತಾರ್ಪಣಕ್ಕೆ ಸುರಭೂಜಂ, ಶಬ್ದವಿದ್ಯಾಪಯೋ
ಬ್ಧಿ ವಿಳಾಸಕ್ಕಮೃತಾಂಶು, ತರ್ಕ ವಿಮಳವ್ಯೋಮ ಪ್ರಕಾಶಕ್ಕೆ ಭಾ
ನು, ವಿಶುದ್ಧಾಗಮ ತತ್ವ ಕೇಳಿ ಸದನದ್ಯೋತಕ್ಕೆ ರತ್ನಪ್ರದೀ
ಪವೆನಿಪ್ಪಂ ಕುಳದೀಪಕಂ ರವಿಚಮೂಪಂ ಬಂಧುಕಲ್ಪದ್ರುಮಂ ॥ ೧೧೩ ॥

ಶಿವಭಕ್ತ ಬೆಳ್ಳಪ :

ನಡೆಗಲ್ತಂ ದೇವಾಲಯ
ಕ್ಕೆಡೆಮಾಡಿಯು, ನುಡಿಗಲ್ತಂ ನಮಃ ಶಿವಾಯವೆಂಬೀ
ನುಡಿಯಂ ಪಡೆದಾತಂ ಧ
ರ್ಮಾರ್ಜಿತ ಮೃಡಭಕ್ತ ಕೃತಾರ್ಥನಪ್ಪುದೊಂದಚ್ಚರಿಯೇ ॥ ೧೧೪ ॥

ಮಾದಿರಾಜ :

ಸ್ಥಿರನೇ ? ಮೇರು. ಸುರೂಪಿಯೇ ? ಮದನನ್, ಅತ್ಯೌದಾರಿಯೇ ? ಕಲ್ಪಭೂ
ಮಿರುಹಂ. ಶೌಚಿಯೆ ? ಸಿಂಧುಪುತ್ರಗಧಿಕಂ. ಗಂಭೀರನೇ ? ವಾರ್ಧಿ. ಭಾ
ಸುರತೇಜಾಧಿಕನೇ ? ಸಹಸ್ರಕಿರಣಂ. ನೇತ್ರಪ್ರಿಯಕಾರನೇ ?
ಪರಮಾರ್ಥಂ. ದ್ವಿಜರಾಜನೆಂದು ನೆಗಳ್ದ ಶ್ರೀಮಾದಿರಾಜಾಂಕಿತಂ ॥ ೧೧೫ ॥

ಮಾಚಯ್ಯ ನಾಯಕ :

ಶರಣೆಂದರೆದೆಯ ಕೈ, ಮ
ಚ್ಚರಿಪಥಟರ ಮುಗಿದ ಕೈ, ಬೇ ।
ಳ್ವರ ಪಿಡಿವ ಕೈ, ಮಾಚಿಗಂ ಚತುರ್ಭುಜನಾದಂ ॥ ೧೧೬ ॥

ಚಡಚಣದ ಮುದ್ದರಾಜ :

ಬಾಣರಾಸಿಯವೋಲ
ಕ್ಷೂಣ ಸದ್ಧರ್ಮ ಪ್ರ
ವೀಣರಿಂ ಶಿವ ಮಹಾರ್ಚನೆಗಳಿಂದಂ ।
ಕ್ಷೋಣಿಗೊಪ್ಪುವ ಚಟ್ಟೆ
ತಾಣದೊ(ಳೊಪ್ಪು)ವ
ಬಾಣನಂತಿರ್ಪಂ ಮುದ್ದರಾಜಂ ॥ ೧೧೭ ॥

೮. ರಾಣಿಯರು – ಗಣ್ಯಸ್ತ್ರೀಯರು

ರಾಜರಿಗೆ ಅನುರೂಪರೆಂಬಂತೆ ಅನೇಕ ಜನ ರಾಣಿಯರು ಐತಿಹಾಸಿಕ ಬದುಕನ್ನು ಬಾಳಿದ್ದಾರೆ. 'ಶಯನೇಷು ರಂಭಾ' ಎನಿಸುತ್ತಲೇ 'ಕಾರ್ಯೇಷು ಮಂತ್ರಿ'ಯಾಗಿ ವಿಸ್ತರಿಸಿಕೊಂಡ ವ್ಯಕ್ತಿತ್ವ ಅವರದಾಗಿದ್ದಿತು. ಸುಂದರವಾದ ರೂಪ. ಇನ್ನೂ ಸುಂದರವಾದ ಗುಣಗಳ ಸಂಗಮವೆನಿಸಿದ್ದ ನೂರಾರು ಜನ ರಾಣಿಯರ, ಸಮಾಜ ಮಧ್ಯದಿಂದ ತಲೆಯೆತ್ತಿದ್ದ ಹಲವಾರು ಜನ ಸಾಧ್ವಿಯರ ಚಿತ್ರ ಶಾಸನಗಳಲ್ಲಿ ಮೂಡಿ ನಿಂತಿದೆ.

ಜಕ್ಕಿಯಬ್ಬೆ :

ಉತ್ತಮಪ್ರಭುಶಕ್ತಿಯುಕ್ತೆ, ಜಿನೇಂದ್ರಶಾಸನಭಕ್ತೆ, ಕಾಂ
ತ್ಯಾತ್ತ ವಿಭ್ರಮೆ, ಜಕ್ಕಿಯಬ್ಬೆ ಸಮೆಂತು ನಾಗರಖಂಡಮೆ
ಳ್ಪತ್ತುಮಂ ವಧುವಾಗಿಯುಂ ನಿಜ ವೀರವಿಕ್ರಮ ಗರ್ವದಿಂ
ಪೆತ್ತದಂ ಪ್ರತಿಪಾಲಿಸುತ್ತೆಸೆದಿಳ್ದಳಿಳ್ದವಸಾನದೊಳ್ ॥ ೧೧೮ ॥

ಸಾವಿಯಬ್ಬೆ :

ಶ್ರಾವಕಧರ್ಮದೊಳ್ ದೊರೆಯೆನಲ್ ಪೆರರಿಲ್ಲೆನೆ, ಸಂದ ರೇವತೀ
ಶ್ರಾವಕಿ ತಾನೆ, ಸಜ್ಜನಿಕೆಯೊಳ್ ಜನಕಾತ್ಮಜೆ ತಾನೆ, ರೂಪಿನೊಳ್
ದೇವಕಿ ತಾನೆ, ಪೆಂಪಿನೊಳರುಂಧತಿ ತಾನೆ, ಜಿನೇಂದ್ರಭಕ್ತಿ ಸ
ದ್ಭಾವದೆ ಸಾವಿಯಬ್ಬೆ ಜಿನಶಾಸನದೇವತೆ ತಾನೆ ಕಾಣಿರೇ ॥ ೧೧೯ ॥

ಅತ್ತಿಮಬ್ಬೆ :

ಜಿನಪದ ಪಂಕಜಭ್ರಮರನೆಂಬ ನೆಗಳ್ತೆಯಾನಾಳ್ದ ಮಲ್ಲಪ
ಯ್ಯನ ನೆಗಳ್ದಪ್ಪಕಬ್ಬೆಯ ಮಗಳ್, ಸಚಿವೋತ್ತಮನಪ್ಪ ಧಲ್ಲಪ

ಯ್ಯನ ಸೊಸೆ, ನಾಗದೇವನ ಕುಳಾಂಗನೆ, ತೈಲನ ತಾಯ್, ಜನಕ್ಕೆ ಭಾ
ಜನಮೆನಿಪತ್ತಿಮಬ್ಬೆ ಜಿನಶಾಸನಮಂ ಬೆಳಗುತ್ತಮಿರ್ದಪಳ್ ॥ ೧೨೦ ॥

ಎಣೆ ಮರುದೇವಿ, ಪಾಸಟಿ ಸುಷೇಣೆ, ಸಮಂ ಶಿವದೇವಿ, ಪಾಟಿ ಲ
ಕ್ಷ್ಮಣೆ, ಸದೃಶಂ ಮಹಾವಿಜಯಸೇನೆ, ಸಮಾನೆ ಸುಶೀಲೆ, ಪೋಲ್ವಿ ರು
ಗ್ಮಿಣಿ, ಸರಿ ಸತ್ಯಭಾಮೆ, ತೊಣೆ ಮಿಕ್ಕ ಸುಲೋಚನೆ, ತತ್ಸ್ವರೂಪೆ ರೋ
ಹಿಣಿ, ದೊರೆ ಸಂದರುಂಧತಿ, ಪೆರರ್ ದೊರೆಯೇ ಗುಣದಂಕಾರ್ತಿಯೊಳ್ ॥ ೧೨೧ ॥

ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತೆ ಪೋಗಿ ಕಾ
ಣ್ಬನ್ನೆಗಮನ್ನಮಂ ತೊರೆದು ಪರ್ವತಮಂ ಮುದದೇರೆ, ತಜ್ಜಿನಾ
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಾದೊಡಕಾಳವೃಷ್ಟಿಯಾ
ಯ್ತಿನ್ನವು ದೇವಭಕ್ತಿಗದು ಚೋದ್ಯಮೆ ? ಕೊಳ್ಳವೆ ಪುಷ್ಪವೃಷ್ಟಿಗಳ್ ॥ ೧೨೨ ॥

ಆ ಸತಿ ಮುಮ್ಮಾಡಿಸಿದಾ
ಸಾಸಿರದೈನೂರು ಬಸದಿಗಿದು ಕಳಶಮೆನಲ್
ಭಾಸುರಮಾಯ್ತು ಜಿನೇಂದ್ರಾ
ವಾಸಂ ತೊಳಗುವ ಸುವರ್ಣ ಕಳಸೋನ್ನತಿಯಿಂ ॥ ೧೨೩ ॥

ಚಾಲುಕ್ಯ ಜಾಕಲದೇವಿ :

ಸ್ವಸ್ತ್ಯನವರತ ಪರಮಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ,
ಸಕಳ ದೀನಾನಾಥ ಮನಃಸಂತರ್ಪಣೋದ್ಯೋಗಿನಿ,
ಸಮಸ್ತಾಂತಃಪುರ ನಿತಂಬಿನೀ ಕದಂಬ ಚೂಡಾಮಣಿ, ಚತುರ್ವಿಧದಾನಚಿಂತಾಮಣಿ,
ರಂಭಾವಿಳಾಸೋಪಹಸಿತಸನ್ಮೂರ್ತಿ, ದಿಗ್ವಿಜಯವಿಳಸಿತೋಜ್ವಳಕೀರ್ತ್ತಿ,
ಕಲಿಕಾಲ ಪಾರ್ವತಿ, ಅಭಿನವಸರಸ್ವತಿ,
ರಾಯಚೇತೋ ವಶೀಕರಣವಿಧ್ಯಾಧರಿ, ಸಕಳಕಳಾಧರಿ,
ಸೀತಾದ್ಯನೇಕಮಹಾಸತೀಜನ ಪತಿಬ್ರತಾಚಾರಶೀಲೋದಾರ ವರ್ಣನಕಥಾಪ್ರಸಂಗೆ,
ಜಿನಗಂಧೋದಕಪವಿತ್ರೀಕೃತೋತ್ತಮಾಂಗೆ,
ಶ್ರೀಮದರ್ಹತ್ ಪರಮೇಶ್ವರಚಾರುಚರಣಾರ್ಚನವಿನೋದೆ, ಮೃಗಮದಾಮೋದೆ,
ಸಹಜಬೆಡಂಗಿ, ತಿಕ್ಕಣನಣುಂಗಿ,

ಶ್ರೀಮತ್ ತ್ರಿಭುವನಮಲ್ಲದೇವವಿಶಾಳವಕ್ಷಃಸ್ಥಳ ನಿವಾಸಿನಿಯರಪ್ಪ
ಶ್ರೀಮಜ್ಜಾಕಳದೇವಿಯರರಲ್ಮೂನ್ನೂರರೊಳಗಣಿಂಗುಣಿಗೆಯಂ ತ್ರಿಭೋಗಾಭ್ಯಂತರ
ಸಿದ್ಧಿಯಿನಾಳುತ್ತಮಿರೆ ॥ ೧೨೪ ॥

ಹೊಯ್ಸಳ ಕೆಳೆಯಬ್ಬರಸಿ :

ಕೆಳೆ ನಡೆಯಿಂ ಕಳಹಂಸೆಗೆ,
ಕೆಳೆ ನುಡಿಯಿಂ ಕೋಕಿಳಕ್ಕೆ, ಸೋಗೆಗೆ ಮುಡಿಯಿಂ
ಕೆಳೆ, ಕೆಳೆಯಬ್ಬರಸಿಯೆ ತತ್
ಕುಳವಧುವಾದಳ್, ತದೀಯ ಸುತನೆರೆಯಂಗಂ ॥ ೧೨೫ ॥

ಕೆಳೆ ಗಂಗೆಯೊಳಮಳತೆಯಿಂ,
ಕೆಳೆ ಸೊಬಗಿಂ ಗಿರಿಜೆಯೊಡನೆ, ಸಿರಿಯೊಡನೆಂದುಂ
ಕೆಳೆ ನಿಜಪತಿಯಭಿವೃದ್ಧಿಗೆ,
ಕೆಳೆಯಬ್ಬೆಗೆ ನಾಮಮಾದುದಿಂತನ್ವರ್ಥಂ ॥ ೧೨೬ ॥

ಹೊಯ್ಸಳ ಶಾಂತಲದೇವಿ :

ಗಿರಿಜೆಯ ಪಾದಪದ್ಮವಿಗಳತ್ ಜಳದಿಂದಮೆ ಕೊರ್ಬಿ, ನೀತಿ ವಿ
ಸ್ತರಿಸಿರೆ ಸೊಂಪುವೆತ್ತು, ಪುರುಷಬ್ರತದಿಂ ದಳವೇರಿ, ಭಾಗ್ಯಮಂ
ಜರಿಗಳನಾಂತು, ರಂಜಿಸುವ ಶಾಂತಲದೇವಿಯ ರೂಪಕಲ್ಪವ
ಲ್ಲರಿಯಡರ್ದತ್ತು ವಿಷ್ಣುನೃಪನೆಂಬ ಸಮುನ್ನತ ಕಲ್ಪವೃಕ್ಷಮಂ ॥ ೧೨೭ ॥

ಸತತಂ ನೋಳ್ಪೊಡೆ ಲಕ್ಷ್ಮಿದೇವತೆ, ರಣವ್ಯಾಪಾರದೊಳ್ ಖಡ್ಗದೇ
ವತೆ, ಬಿಣ್ಪಿಂದಮೆ ಭೂಮಿದೇವತೆ ಜನಕೆಲ್ಲಂದದಿಂದ ಪುಣ್ಯ ದೇ
ವತೆ, ವಾಗ್ದೇವತೆ ವಿದ್ಯೆಯೊಳ್, ಸಕಲಕಾರ್ಯೋದ್ಯೋಗದೊಳ್ ಮಂತ್ರದೇ
ವತೆ, ನಾಥಂಗೆನೆ ಶಾಂತಿದೇವಿಯನದಿನ್ನೇವಣ್ಣಿಪಂ ಬಣ್ಣಿಪಂ ॥ ೧೨೮ ॥

ಹೊಯ್ಸಳ ಲಕ್ಷ್ಮಿದೇವಿ :

ಪವಳಂ ಬಾಯ್, ನವಮೌಕ್ತಿಕಾಳಿ ಸುಲಿಪಲ್, ಶಂಖಂ ಕೊರಲ್, ಚಂದ್ರನೊ
ಪ್ಪುವ ಭಾಳಂ, ನವಮೇಘಜಾಳಮಳಕಂ, ಸ್ವಚ್ಛಾಂಬು ಲಾವಣ್ಯಮು

ಣ್ಮುವ ಪಿಯೂಷರಸಂ ತೊದಳ್ನುಡಿ, ಚಳದ್ವೀಚೀಚಯಂ ತೋಳೆನಲ್
ನವದುಗ್ಧಾಬ್ಧಿ ವಿಳಾಸಲಕ್ಷ್ಮಿಯೆನೆ ಲಕ್ಷ್ಮೀದೇವಿ ಕಣ್ಗೊಪ್ಪುವಳ್ ॥ ೧೨೯ ॥

ದೇಮಲದೇವಿ :

ಜಳಮೆನೆ ದೇಹಕಾಂತಿ, ನಳಿತೋಳ್ಗಳೆ ನೋಡೆ ತರಂಗಮಾಲೆ, ಕ
ಣ್ಗಳೆ ವಿಚಳೋತ್ಪಳಂ, ನಗೆಮೊಗಂ ಕಮಳಂ, ಕುರುಳೋಳಿ ಷಟ್ಪದಾ
ವಳಿಯೆನೆ, ಚಕ್ರವಾಕ ಕುಚ, ದೇಮಲದೇವಿ ಸರೋವಿಳಾಸದಿಂ
ತಳೆದಳನೂನ ರಾಗದೆ ಚವುಂಡನೃಪಾಳ ಮನೋಮರಾಳಮಂ ॥ ೧೩೦ ॥

ಬಮ್ಮಲೆ :

ಮಲೆಮಲೆದು ಮಲೆದು ಮಲೆಪರ
ಕುಲಮಂ ಬೇರ್ವೆರಸಿ ಕಿತ್ತು, ಬಮ್ಮಲೆ ಮುದದಿಂ
ಫಲಫಲಕು ಫಲಕು ಫಲಕೆನ
ಲಲೆವಳ್ ಪರಸತಿಯರ ವರ ಕೀರ್ತ್ಯುನ್ನತಿಯಂ ॥ ೧೩೧ ॥

ಚಾಗಲದೇವಿ :

ಗುಣದೊಳ್ ರೂಪಿನೊಳೊಳ್ಪಿನೊಳ್ ಸೊಬಗಿನೊಳ್ ಶೃಂಗಾರದೊಳ್ ಸೌಮ್ಯಲ
ಕ್ಷಣದೊಳ್ ಮೈಮೆಯೊಳೋಜೆಯೊಳ್ ವಿಭವದೊಳ್ ಶೀಲಂಗಳೊಳ್ ಭೃತ್ಯಪೋ
ಷಣದೊಳ್ ಭೋಗದೊಳಾರ್ಪಿನೊಳ್ ವಿಭುತೆಯೊಳ್ ಕಾರುಣ್ಯದೊಳ್ ಪೋಲಿಸ
ಲ್ಕೆಣೆಯಾರ್ ಗೆಲ್ವ ಬೆಡಂಗಿಗೆಂದನುದಿನಂ ವಿದ್ವಜ್ಜನಂ ಬಣ್ಣಿಕುಂ ॥ ೧೩೨ ॥

ಕಾಮಲದೇವಿ :

ತಳಿರಂ ಕೆಂದಳಮಿಂದುವಂ ವದನಮುದ್ಭೃಂಗಾಳಿಯಂ ಕುಂತಳಾ
ವಳಿ ಚೆಂಬೊಂಗೊಡನಂ ಪೊದಳ್ದ ಮೊಲೆ ಮುಕ್ತಾನೀಕಮಂ ದಂತಮು
ತ್ಫಳಮಂ ಲೋಚನಮಿಕ್ಷುಚಾಪಲತೆಯಂ ಭ್ರೂವಿಭ್ರಮಂ ಪೋಲ್ವೆಯಂ
ತಳೆಯಲ್ ಕಾಮಲದೇವಿ ಮನ್ಮಥಧನುರ್ಜ್ಯಾಲೇಖೆಯಂತೊಪ್ಪಿದಳ್ ॥ ೧೩೩ ॥

ಮಾದೇವಿ :

ಚರಣಾಬ್ಜಂ ಬೆರಲುಂಗುಟಂ ನಖಕುಳಂ ಮೇಂಗಾಲ್ ಮಡಂ ಜಂಘೆಗಳ್
ವರವೃತ್ತೋರುನಿತಂಬ ಬಿಂಬಮಧರಂ ವಕ್ಷೋರುಹಂ ತೋಳ್ ತಳಂ
ಕೊರಲೋಷ್ಠಂ ಸುಲಿಪಲ್ ಕಪೋಲಫಲಕಂ ಕಣ್ಬುರ್ವು ಕರ್ಣಂ ನೊಸಲ್
ವರ ನೀಲಾಳಕವೊಪ್ಪೆಯೊಪ್ಪಿದಪಳೀ ಮಾದೇವಿ ಮಾದೇವಿಯೊಳ್ ॥ ೧೩೪ ॥

ಅಣ್ಣಲದೇವಿ :

ಪೊಳೆವಲರ್ಗಣ್ಗಳೊಪ್ಪೆ, ನಳಿತೋಳ್ಗಳ ಭಾವಮದೊಪ್ಪೆ, ಕೋಮಳಾಂ
ಗುಳಿನಖವೊಪ್ಪೆ, ದಂತನಿಕರಂಗಳ ರೋಚಿಗಳೊಪ್ಪೆ, ಜಂಘೆಯುಂ
ಸೆಳೆನಡುವುಂ ನಿತಂಬಮಮದೊರ್ಪ್ಪಿ (ರೆಯ)ಣ್ಣ ಲದೇವಿಯೊಪ್ಪುತುಂ
ಸುಳಿವಳಪೂರ್ವ ರೂಪೆಯೆನೆ ಕೇಶವದೇವನ ಲಕ್ಷ್ಮಿಲೀಲೆಯಿಂ ॥ ೧೩೫ ॥

ಸಿರಿದೇವಿ :

ಅಳಿನೀಳಾಳಕಿ, ಹಂಸಗಾಮಿನಿ, ಲತಾತನ್ವಂಗಿ, ಬಿಂಬೋಷ್ಠೆ, ನಿ
ರ್ಮಳ ಚಂದ್ರಾನನೆ, ಕಂಬುಕಂಠೆ, ವಿದಳತ್ಪಾಠೀನ ದೃಗುಯುಗ್ಮೆ, ಕೋ
ಕಿಳನಾದಾಂಚಿತೆ, ತುಂಗವೃತ್ತಕುಚೆಯೆಂಬೀ ರೂಪಿನಿಂ ಪೋಲ್ವರಾ
ರಿಳೆಯೊಳ್ ಪೇಳ್ ಸಿರಿದೇವಿಯಂ ವರಕಳಾಸಂಪನ್ನೆಯಂ ಚೆನ್ನೆಯಂ ॥ ೧೩೬ ॥

ಸೋಮಲದೇವಿ :

ಎರೆಯನ ದೈವಮಾವುದದು ತನ್ನಯ ದೈವಮದಾವುದಾತನೊಳ್
ನೆರೆದ ಗುಣೋನ್ನತಿಕ್ಕೆಯದು ತನ್ನಯ ಮಿಕ್ಕ ಗುಣೋನ್ನತಿಕ್ಕೆ, ಕ
ಣ್ದೆರೆದುದದಾವ ಧರ್ಮಮಧಿನಾಥನೊಳಂತದೆ ತನ್ನ ಧರ್ಮಮೆಂ
ದೆರಕದೆ ಮಂತ್ರಿಯೇಚಣನ ವಲ್ಲಭೆ ಸೋಮಲದೇವಿ ಭಾವಿಪಳ್ ॥ ೧೩೭ ॥

ವೆಣ್ಣೆಲೆ ಸೆಟ್ಟಿಕವ್ವೆ :

ಖಳರಳವಂ ಕಳಲ್ಚಿ, ನೆರೆ ಕಳ್ಳರ ಕೊಳ್ಳಿಯ ಬಾಧೆಯ(ಂ) ಬೆಗ
ಳ್ದಳರೆ ತೆರಳ್ಚಿ ತೂಳ್ದಿ, ನೆರೆ ಮನ್ನೆಯರನ್ನೆಯವಂ ನಿರಾಕುಳಂ
ಕಳೆದು, ಬಣಂಜುಧರ್ಮ್ಮಮನೆ ಪಾಳಿಸಿ, ಭೀತರನೆಯ್ದೆ ಕಾದು, ನಿ
ರ್ಮ್ಮಳತರ ಕೀರ್ತ್ತಿಯಂ ಪಡೆದಳಾರ್ಪಡಿ ವೆಣ್ಣೆಲೆ ಸೆಟ್ಟಿಕವ್ವೆಯೊಳ್ ॥ ೧೩೮ ॥

ಖಳರನೆ ಕೊಂದು, ಮೀರುವರ ಬಲ್ಗುರುಳಂ ಪಿಡಿದುರ್ಚ್ಚಿ, ಕೀರಿ ಮಾ
ರ್ಮಲೆವರ ಮೂಳೆಯಂ ಮುರಿದು, ಮೆಚ್ಚದರಂ ಕಡಿದಿಕ್ಕಿ, ಕೋಪದಿಂ
ಹಳಿವರನಾವಗಂ ಕಳೆದು, ದುಷ್ಟರ ನಿಟ್ಟೆಲುವಂ ನಿರ್ಮಿರ್ಚಿದಳ್,
ಬಳಯುತೆ ದುರ್ಗೆಯೊಲ್ ಪ್ರಥವಿಸೆಟ್ಟಿಯ ವೆಣ್ಣಲನಾರಿ ನಾಮದಿಂ ॥ ೧೩೯ ॥

ಮಡದಿಯರಾವಗಂ ಕೆರಸಿ ಕಾವಲಿ ತಂಬುಗೆ ಹುಟ್ಟು ಸಟ್ಟುಗಂ
ಕೊಡನೊರಲಕ್ಕಿಯೆಂಬಿವನೆ ಚಿಂತಿಸಿ ಕೋಟಲೆಗೊಂಬರಲ್ಲದೇಂ
ಮೃಡನನೆ ಸುಪ್ರತಿಷ್ಠೆಯನೆ ಮಾಡಿಸಿ ಕಲ್ವೆಸದಿಂದೆ ಗೇಹಮಂ
ಮೊಡವಿಯೊಳೊಪ್ಪೆ ಮಾಡಿಪರೆ ಸನ್ನುತೆ ವೆಣ್ಣಲೆ ಸೆಟ್ಟಿಕವ್ವೆವೊಲ್ ॥ ೧೪೦ ॥

ಚಾಗಿಯಬ್ಬರಸಿ :
ಪತಿಯಂ ವಂಚಿಸಿ ಸತಿ ನಿಜ
ಕೃತಕದಿನರ್ಥಾವಳೋಕನಾಕ್ಷಿಗಳಿಂ ಭ್ರೂ
ಲತೆಯೊಳಮೊಳಪೋಯ್ವೀ ದು
ರ್ವ್ರತೆಯರ್ ಪೋಲ್ತಪರೆ ಚಾಗಿಯಬ್ಬರಸಿಯರಂ ॥ ೧೪೧ ॥

ಮಾಳಲದೇವಿ :
ಕುಟಿಲೆ ಕುಮಾರ್ಗೆ ಕುತ್ಸಿತೆ ಕುರೂಪಿ ಕುಭಾಗ್ಯೆ ಕುಶೀಳೆ ಜಿಹ್ವಲಂ
ಪಟೆ ಶಠೆ ದೂರ್ತೆ ದುರ್ಗುಣೆ ದುರನ್ವಿತೆ ದುರ್ಜನೆ ದುಷ್ಟೆ ಕಷ್ಟೆಯೆಂ
ಬಟಮಟಕಾರ್ತಿಯರ್ ಸತಿಯರೇ ಗುಣದೊಳ್ ಸಲೆ ಮಾಳಿಯವ್ವೆಯುಂ
ಗುಟಕೆಣೆಯಾಗದೆಂದೊಡಿತರಾಂಗನೆಯರ್ ಭುವನಾಂತರದೊಳ್ ॥ ೧೪೨ ॥

ಮನೆಗೀ ಬಂದರೆ ಬಿರ್ದಿನ
ರೆನಲೊಳಯಿಂಕೋಡಿ ಪೋಗಿಯಡಗುವ, ಸಮುಖಂ
ತನಗಾದೊಡೆ ನೀವಾರೆಂ
ಬಬಲೆಯರೀ ಮಾಳಿಯವ್ವೆಗೆಂತೆಣೆಯಪ್ಪರ್ ॥ ೧೪೩ ॥

ಹಾಚಲೆ :

ಅನುಪಮ ಪಾತ್ರದಾನ ವರ ಹಸ್ತಿನಿ, ಶಂಭುಪದಾರವಿಂದ ಚಿ
ತ್ತಿನಿ, ದುರಿತೌಘ ಶಂಕಿನಿ, ಲಸಚ್ಚವುಡಯ್ಯನ ಹೃತ್ಸರೋಜ ಪ
ದ್ಮಿನಿಯೆನೆ ನಾಲ್ಕು ಜಾತಿಯಬಲಾ ಗುಣಮಂ ಗುಣದಿಂದೆ ತಾಳ್ದಿದಳ್,
ವಿನಯ ನಿಧಾನೆ ಹೆಗ್ಗಡಿತಿ ಹಾಚಲೆಯೆಂಬುದು ಧಾರಿಣೀಜನಂ ॥ ೧೪೪ ॥

ಪೋಚಿಕಬ್ಬೆ :

ತನುವಂ ಜಿನಪತಿ ನುತಿಯಿಂ
ಧನಮಂ ಮುನಿಜನದ ತೃಪ್ತಿಯಿಂ, ಸಫಳದಿಂ
ನ್ನೆನಗೆಂಬೀ ನಂಬುಗೆಯೊಳ್
ಮನಮಂ ಜಗದೊಳಗೆ ಪೋಚಿಕಬ್ಬೆಯೆ ನಿರಿಪಳ್ ॥ ೧೪೫ ॥

ಕನಕಿಯಬ್ಬೆ :

ಜಿನಗೃಹಮಿಲ್ಲದಲ್ಲಿ ಜಿನಮಂದಿರಮಂ ಜಿನಗೇಹಮಾಗಿಯುಂ,
ಜಿನಮುನಿಗಳ್ಗೆ ದಾನ ನಿಚಯಂ ದೊರೆಕೊಳ್ಳದ ಠಾವಿನಲ್ಲಿಗಾ
ಮುನಿಜನಕಿತ್ತು, ಕೀರ್ತಿಲತೆ ಪಲ್ಲವಿಸುತ್ತಿರೆ ಲೋಕದಲ್ಲಿಯಂ
ತನುಪಮಮಾಗಲಾ ಕನಕಿಯಬ್ಬರಸೊಪ್ಪುತಮಿರ್ಕು ಧಾತ್ರಿಯೊಳ್ ॥ ೧೪೬ ॥

ಬಾಚವ್ವೆ :

ಆ ಶಂಕರದೇವನ ಸತಿ
ಪಾಶಾಂಕುಶವಭಯವಕ್ಷಮಾಳಿಕೆಯೆಂಬೀ
ವೇಷದ ಡೊಂಬಿಲ್ಲದ ಗಿರಿ
ಜೇಶನ ಸತೀಸದೃಶೆ ಬಾಚವ್ವೆಯೆ ಧರೆಯೊಳ್ ॥ ೧೪೭ ॥

೯. ಯುದ್ಧವೀರ

ಪ್ರಾಚೀನ ಕರ್ನಾಟಕದ ಜೀವನಮೌಲ್ಯಗಳಲ್ಲಿ ಬಹಳ ಮುಖ್ಯವಾದುದು ವೀರ. ತಾಯಿ 'ವೀರಜನನಿ' ಎನಿಸಿಕೊಳ್ಳಲು, ಹೆಂಡತಿ 'ವೀರಪತ್ನಿ' ಎನಿಸಿಕೊಳ್ಳಲು ಉತ್ಸುಕರಾಗಿದ್ದ ಕಾಲವದು. ರಾಜರಿಗೆ, ಸಾಮಂತರಿಗೆ, ಸೇನಾಪತಿಗಳಿಗೆ, ಸಾಮಾನ್ಯ ಪ್ರಜೆಗಳಿಗೆ ಆದರ್ಶವಾಗಿದ್ದುದು ಈ ವೀರ. ಇದನ್ನು ಮೆರೆದ ಮಹಾವೀರರನ್ನು, ಅವರ ವೀರದ ಪರಿಗಳನ್ನು ಅನೇಕ ಶಾಸನಗಳು ಪರಿಣಾಮಕಾರಿಯಾಗಿ ಚಿತ್ರಿಸಿವೆ.

ಶ್ರೀವಿಜಯ ದಂಡನಾಯಕ :

ತುರಗದಳಂಗಳನೊಡ್ಡಿದ
ಕರಿಘಟೆಯಂ ಪಿರಿಯ ನೆರವಿಯಂ ಬಲ್ಲಣಿಯಂ
ಧುರದೆಡೆಯೊಳಿರಿದು ಗೆಲ್ಗುಂ
ಕರದ(ಸಿ) ಕರಮರಿದು ರಣದೊಳನುಪಮ ಕವಿಯಾ ॥ ೧೪೮ ॥

ಚಂಡಪರಾಕ್ರಮನುರದರಿ
ಮಂಡಲಿಕರನಟ್ಟಿ ಪಿಡಿದು ಪತಿಗೊಪ್ಪಿಸುವೊ
ಳ್ಗಂಡಂ ಪ್ರಚಂಡನೀ ಭೂ
ಮಂಡಲದೊಳ್ ದಂಡನಾಯಕಂ ಶ್ರೀವಿಜಯಂ ॥ ೧೪೯ ॥

ಓಳಿಯೆಕೋದು, ಪಲ್ಲವರ ಪಂದಲೆಯೆಲ್ಲಮನೆಯ್ದೆ ದಟ್ಟಿ, ಕಾ
ಪಾಳಿಕರೂರಿ ಸಾರಿ ಪರಮಂಡಳಿಕರ್ಕಳನಮ್ಮ ನೀವುಮೀ
ಯೋಳಿಗೆ ನಿಮ್ಮ ಪಂದಲೆಗಳಂ ಬರಲೀಯದೆ ಕಂಡು ಬಾಳ್ವುದಾ
ಳೋಳಿಯೊಳೆಂಬಿನಂ ನೆಗಳ್ದುದೊಟ್ಟಜೆ ಮಂಡಳಿಕತ್ರಿಣೇತ್ರನಾ ॥ ೧೫೦ ॥

ಚಾಲುಕ್ಯ ತ್ರೈಲೋಕ್ಯಮಲ್ಲ :

ಅದಟಿನಳುರ್ಕೆಯಂ ನೃಪನ ಸಾಹಸಮಂ ಧರೆಗಾನದಿಂತುಟೆ
ನ್ನದೊಡವೆ ತಾಮೆ ಪೇಳವೆ ವಿರೋಧಿಯ ಪೆಂಡಿರ ಕಂಕಣಂಗಳಿ
ಲ್ಲದ ಕರಮಾರಮಿಲ್ಲದುರಮಂಜನಮಿಲ್ಲದ ಕಣ್ಗಳೋಲೆಯಿ
ಲ್ಲದ ಕಿವಿ ಕಾಂಚಿಯಿಲ್ಲದುಡೆ ನೂಪುರಮಿಲ್ಲದ ಪಾದಪಂಕಜಂ ॥ ೧೫೧ ॥

ರಣಭೈರವಿ ಅಕ್ಕಾದೇವಿ :

ಗುಣದ ಬೆಡಂಗಿಯೆನಲ್ ಸ
ದ್ಗುಣಮಂ ನೆಗಳ್ದೇಕವಾಕ್ಯೆಯೆನೆ ಸೂನೃತಮಂ
ರಣಭೈರವಿಯೆನೆ ಶೌರ್‍ಯದ
ಗುಣಮನದೇನೆಂದು ಬಣ್ಣಿಪೆಂ ನೃಪಸುತೆಯಂ ॥ ೧೫೨ ॥

ಕಲಚುರಿ ಬಿಜ್ಜಳ :

ಕೆದರಿದರಾತಿಭೂಮಿಪರ ಶಿರೋಮಣಿಗಳ್ ನೆಗಳ್ದಾಲಿಕಲ್ಗಳು
ರ್ವಿದ ಭಟಶಸ್ತ್ರಸಂಚಯದ ಮಿಂಚುಗಳೊಪ್ಪುವ ಮಿಂಚುಗಳ್ ಸಮಂ
ತೊದವಿದ ರಕ್ತಜಾಳ ಜಳಧಾರೆಗಳಾಗಿರೆ ವರ್ಷಮಿಂತು ಪೋ
ಲ್ತುದು ಮಳೆಗಾಲಮಂ ನೆಗಳ್ದ ಬಿಜ್ಜಳದೇವನ ಸಂಗರಾಂಗಣಂ ॥ ೧೫೩ ॥

ಸುರಿದ ಕರುಳ್, ಕರುಳ್ ತೊಡರೆ ಬಿಳ್ದ ಭಟರ್, ಭಟರಸ್ತ್ರಘಾತದಿಂ
ದುರುಳ್ದ ಹಯಂ, ಹಯಂಗಳೆಡೆಯೊಳ್ ಕುಣಿವಟ್ಟೆಗಳಟ್ಟೆಯಂ ಭಯಂ
ಕರತರಮಾಗೆ ನೋಳ್ಪ ಮರುಳಾ ಮರುಳಂ ಗೆಲೆ ಸೋವ ತನ್ನಿಶಾ
ಚರಿಯರೆನಲ್ಕೆ ನೋಡಲರಿದಾಯ್ತು ರಣಂ ಗಿರಿದುರ್ಗಮಲ್ಲನಾ ॥ ೧೫೪ ॥

ಹೊಯ್ಸಳ ವಿಷ್ಣುವರ್ಧನ :

ಅರಿಪುರದೊಳ್ ಧಗದ್ಧಗಿಲು ಧಂಧಗಿಲೆಂಬುದರಾತಿ ಭೂಮಿಪಾ
ಳರ ಶಿರದೊಳ್ ಗರಿಗರೀಗರಿಲೆಂಬುದು ವೈರಿಭೂತಳೇ
ಶರ ಕರುಳೊಳ್ ಚಿಮಿಚಿಮೀಚಿಮಿಲೆಂಬುದು ಕೋಪವಹ್ನಿ ದು
ರ್ಧರತರವೆಂದೊಡಳ್ಕುರದೆ ಕಾದುವರಾರ್ ಮಲೆರಾಜರಾಜನೊಳ್ ॥ ೧೫೫ ॥

ತಳಕಾಡೊಳ್ ಸುಳಿದಾಡಿ, ತುಂಗಗಜವಪ್ಪುಚ್ಚಂಗಿಯಂ ಸಾರ್ದು, ಆ
ಕುಳಚಿತ್ತಂ ಬನವಾಸಿಯಾಗೆ, ನಡೆದಾರ್ಪಿಂ ಬೆಳ್ವೊಲಂಗೊಂಡು, ನಿ
ಶ್ಚಳಿತಂ ಪೆರ್ದೊರೆಗಂ ಸತೋಷದೊಸೆದಾ ಹಾನುಂಗಲೊದ್ದತ್ತು, ಹೊಯ್
ಸಳಭೂಪಾಳನ ಶೌರ್‍ಯಸಿಂಹವಸುಹೃತ್ ಭೂಪರ್ ಭಯಂಗೊಳ್ವಿನಂ ॥ ೧೫೬ ॥

ಮಾಚರಸ :

ಗಂಡುಳಿದು ಸಿತಗರೆಲ್ಲಂ
ಪೆಂಡಿರವೋಲ್ ಕುರುಳ ಬೆರಳ ಹುರುಳಂ ಕೊಟ್ಟುಂ
ಕಂಡುಂ ನಡೆವರ್, ಸಿತಗರ
ಗಂಡಂ ಶ್ರೀಮಾಚಿ ಜಡಿವನಸಿಯನೆನುತ್ತುಂ ॥ ೧೫೭ ॥

ಮಲ್ಲಿದೇವ :

ಅರಿನರಪಾಳರೊಳ್ಗರುಳ ಬಂಬಲೆ ಬಾಸಿಗಮೆಚ್ಚು ಪಾಯ್ವ ನೆ
ತ್ತರೆ ಹೊಸ ಕುಂಕುಮಂ, ಮುರಿದು ಸೂಸುವ ಪಲ್ಗಳೆ ಸೇಸೆ, ವೈರಿ ಕಿಂ
ಕರ(ರ) ಕರೋಟಿ(ಕೋಟಿ)ಗಳೆ ಸೊನ್ನಲಿಯಾಗಿರೆ, ಮಲ್ಲದೇವನು
ದ್ಧರ ಜಯಕನ್ಯಕಾ ಪರಿಣತೋತ್ಸವಮಂ ಮೆರೆದಂ ಮಹಾಜಿಯೊಳ್ ॥ ೧೫೮ ॥

ಬರ್ಮಗೌಂಡ :

ಅರಿಶಿರವಂಬುಜಂ ಕರುಳಮಾಲೆ ಪೊದಳ್ದ ಮೃಣಾಳಮಾಲೆ, ನೆ
ತ್ತರೆ ವಿಮಳಾಂಬು, ಬಾಳುರಿಯೆ ಬಾಳೆಗಳಾಗೆ, ರಣಾಗ್ರಮೆಂಬ ತಾ
ವರೆಗೊಳನಂ ಕಲುಂಕಿ ಜಯಮಂ ಗೆಡೆಗೊಳ್ವುದು ಬರ್ಮನೆಂಬ ಭೀ
ಕರ ಮದವಾರಣಂ ಜಿತರಣಂ ಕಲಿ ಸಿಂಗನ ಗಂಧವಾರಣಂ ॥ ೧೫೯ ॥

ಕೇತ ಸಾಮಂತ:

ಛಟ ಛಟ ಛಟ್ಟಟಚ್ಛಟ ಎನಲ್ ಮುರಿದತ್ತಿದಿರಾಂತ ಬೀರರಂ,
ಘಟೆಘಟೆ ತಾಗೆ ನುರ್ಗಿದುದು ಕೋಳೆಲುಗಳ್ ನೆ(ಡಿ)ಲುಂ ನೆಡಿಲ್ಲೆನಲ್,
ಭಟರನನೇಕರಂ ಭರದೆ ಸೀಳ್ದುದು ಸರ್ರನೆ ಸರ್ರೆನಲ್, ಮದೋ
ತ್ಕಟಮಿದೆ ಕೇತನೆಂಬ ಕಲಿನಾಗಗವುಂಡನ ಗಂಧವಾರಣಂ ॥ ೧೬೦ ॥

ದೇಸು ನಾಯಕ :

ತೋಳ್ಗಳ ಸಾಲ್ಗಳಿಂ, ತೊಡೆಯ ತಂಡಗಳಿಂ, ಭಟರಟ್ಟೆಯೊಟ್ಟಲಿಂ,
ಬಾಳ್ಗಳ ಘಾಯದಿಂ, ಪರಿದ ಪಂದಲೆಯೋಳಿಯಿನೆಲ್ಲಿ ನೋಳ್ಪೊಡಂ
ಕೀಳ್ಗಳನಡ್ಡಗರ್ಚಿ ಕೆಡೆದಿರ್ದ ತುರಂಗದ ಪೆರ್ವೆಣಂಗಳಿಂ
ದಾಳ್ಗಳ ದೇವ ದೇಸುವಿರಿದಾಹವಮದ್ಭುತಮಾಯ್ತು ಧಾತ್ರಿಯೊಳ್ ॥ ೧೬೧ ॥

ಅಂಕೆ ನಾಯಕ :

ಕಿಡಿ ಕಿಡಿ ಸೂಸೆ, ಮಸ್ತಕದ ಸಿಪ್ಪುಗಳಾಗಳೆ ಪಾರೆ, ವಾಜಿಗಳ್
ಕಡಿಕಡಿಯಾಗೆ ನೆತ್ತರ ಕಡಲ್ ಪರಿಯಲ್, ಕಲಿಯಂಕನೇರಿ ಮೊ
ಯ್ದೊಡೆ ಹರಿಪಾಳನಳ್ಕಿದನು ಸಾಳುವನೋಡಿದನೇವೆನೆಂದು ಬಾ
ಯ್ವಿಡುತುಮೆ ಜೇಯಿದೇವನನುವಿಲ್ಲದೆ ಮೆಯ್ದೆಗೆದಂ ಮಹಾಜಿಯೊಳ್ ॥ ೧೬೨ ॥

ತೇಜರಾಯನ ಮಗ ಪಾಂಡ್ಯ :

ನೆಣದ ಬಳಂಬೆ, ಕೋಳ್ಮಿದುಳ ತಿಂತಿಣಿ, ಮೂಳೆಯ ತೋರವೆಟ್ಟು, ಬ
ಲ್ವೆಣಗಳಗುಂತಿ, ನೆತ್ತರ ಕಡಲ್, ಪರಿವಟ್ಟೆ, ಕರೋಟಿಮಾಲೆ, ಸಂ
ದಣಿಸುವ ಭೂತಕೋಟಿಗಳಿನೊಪ್ಪಿರೆ ಪೆರ್ಚಿದ (ರು)ಂದ್ರ ಸಂಗರಾಂ
ಗಣಮದು ತಾನೆ ಪೇಳದೆ ವಿರಾಜಿಪ ಪಾಂಡ್ಯನ ಗಂಡಗರ್ವಮಂ ॥ ೧೬೩ ॥

ಚೌಡ :

ಸೆಡೆದು ದವಾನಳಂ ನಡೆಯುತ್ತಿಪ್ಪುದು ಪುಲ್ವಿಡಿದಾಂತ ಭೀತಿಯಿಂ
ಮಿಡುಕುವುದಲ್ತು ನೀರೊಳಗಣಿಂ ಬಡಬಾನಳನಪ್ಪಿ ಶಂಭುವಂ
ಬಿಡದೆ ಲಲಾಟನೇತ್ರಶೀಖಿಯಾದುದು ಚೌಡನ ತೇಜದೇಳ್ಗೆಯು
ಗ್ಗಡಕಗಿದುಗ್ರವಹ್ನಿಯೆನಲಾರ್ ಗಳ ತೇಜಮನಾಂತು ಬಾಳ್ವವರ್ ॥ ೧೬೪ ॥

ಹರಿತನುವಿನ ಶಶಿಬಿಂಬದ
ಹರಕಂಠದ ಕಪ್ಪು ಹಿಂಗೆ ಚವುಡನ ಜಸದಿಂ,
ಸಿರಿ ಹರಿಯಂ ಕುಮುದಿನ ಶಶ
ಧರನಂ ಶಂಕರನನಗಜೆಯರಿಯಳ್ ಕುರುಪಿಂ ॥ ೧೬೫ ॥

ಅನಂತಪಾಳ ದಂಡನಾಥ :

ಗಗನತಳಂಬರಂ ನೆಗೆದ ದಾಳಿಯ ಧೂಳಿಗೆ ಬೆರ್ಚಿ ದಾಳಿಗಂ
ತೆಗೆದು ವನಾಂತಮಂ ಪುಗೆ, ಗುಹಾಂತರಮಂ ಪುಗೆ, ಶೈಲಕುಂಜಮಂ
ಪುಗೆ, ಪರಭೂಮಿಯಂ ಪುಗೆ, ತಪೋವನಮಂ ಪುಗೆ, ಸಿಂಧುಕೂಟಮಂ
ಪುಗೆ, ಚಲದಿಂ ತಗುಳ್ದ ಭುಜಗರ್ವಮನಂತಮನಂತಪಾಳನಾ ॥ ೧೬೬ ॥

ಏಚಣ :
ಪಲರಂ ಕುರಿದರಿದರಿದಂ
ಪಲರಂ ಸೀಳ್ದೊಟ್ಟೆ ಕಡಿದು ದೆಸೆವಲಿಗೆಯ್ದಂ
ಪಲರಂ ಬಾಳ್ದಲೆವಿಡಿದಂ
ಕಲಿ ಚಲದೆ ಕಟಾರದೇಚಿಗಂ ರಣಧೀರಂ ॥ ೧೬೭ ॥

ಬಾಳೆಯಮ್ಮ :
ಮೂಳೆಯ ಸನ್ನೆಗಾಳೆವಿಡಿಯಲ್, ನೊರೆನೆತ್ತರನೀಂಟಿ ಸೊಕ್ಕಿ, ಕ
ಣ್ಣಾಲಿಯ ಮಾಲೆ ಸೂಡಿ, ಬಲುಗಂಡದ ದಂಡೆಯನೊಪ್ಪೆ ಕಟ್ಟಿಕೊಂ
ಡಾಳಿಸಿಯುಟ್ಟು ಪಂದೊವಲನಾಹವದೊಳ್ ನಲಿದಾಡಿ ಪಾಡಿದರ್,
ಸೂಳೆಮರುಳ್ಗಳುಗ್ಗಡಿಸಿ ಹೆಗ್ಗಡೆ ಬಾಳೆಗನಂಕಮಾಲೆಯಂ ॥ ೧೬೮ ॥

ಕೂರುಕ :
ಮರುಳುಗಳು ಕರುಳ ಮಾಲೆಯ
ಕೊರಳೊಳು ಸರವಿಟ್ಟು, ರುಧಿರತಿಲಕಮನಿಟ್ಟುಂ
ಹರಸುತಿದರೀ ಕೂರಕ
ನುರವಣೆಯೊಳುತಸಕೆ ಮೆಚ್ಚಿ ಸಮರಾಂಗಣದೊಳ್ ॥ ೧೬೯ ॥

ಚಟ್ಟ :
ಎಡೆಗಡಿವ ಬಿಡುವ
ಪಿಡಿದೊತ್ತುವ ಪೊತ್ತು ಪರಿವ ಕುತ್ತುವ ಬಲ್ಪು
ಗ್ಗಡಮೊಟ್ಟಜೆಯಿಂ ಚಟ್ಟಯ
ನೊಡನಾರ್ ಮಾರ್ಕೊಳಲನಿಲ್ಲಿ ಬಿಡಲೊಡರಿಸುವರ್ ॥ ೧೭೦ ॥

ಹರಹ :
ತುರಗದ ಖುರಪುಟ ವಾದ್ಯಂ,
ಬಿರುದರ ಕೂರಲಗಿಂದೆಸೆವ ನಾದಮೆ ತಾಳಂ,
ನರರಟ್ಟೆಯ ಪೆಕ್ಕಣದಿಂ
ಕರಮೆಸೆದುದು ಹರಹನಿರದ ರಣಭೂಮಿಕೆಯೊಳ್ ॥ ೧೭೧ ॥

ಸಾಹಣಿ ಮಲ್ಲ :

ಮಾರಿಯ ಮೂರಿ, ರಕ್ಕಸನ ರೌದ್ರತೆ, ನಂಜಿನ ಪುಂಜಮುಗ್ರಕಂ
ಠೀರವದೆಳ್ತರಂ, ಸಿಡಿಲ ಕಾಯ್ದು, ಕೃತಾಂತನ ಕೋಪದುರ್ಬ, ಮಾ-
ರಾರಿಯ ಭಾಳನೇತ್ರಶಿಖಿ, ಸಂಗರರಂಗದೊಳಾಂತು ನಿಂದ ವೀ
ರಾರಿಗೆ ಸಂತತಂ ನೆಗಳ್ದ ಸಾಹಣಿ ಮಲ್ಲನ ಬಾಹುವಿಕ್ರಮಂ ॥ ೧೭೨ ॥

ಸೋಮೆಯ ದಣ್ಣಾಯಕ :

ಜೀಯೆನುತಿರೆ ಪರಿವಾರಂ,
ರಾಯಂ ಬಲ್ಲಾಳದೇವ ಚಾಗೆನೆ, ರಿಪುಗಳ
ಬಾಯನೊರೆ ಮಾಡಿ ಖಳ್ಗಮ
ನಾಯತದಿಂ ತೊಡಿಸುತಿರ್ಪ ಮಯ್ದುನ ಸೋಮಂ ॥ ೧೭೩ ॥

ಬೀರಗಾವುಂಡ :

ತೊಂಡರಗಂಡನುದ್ಧಟದ ಗಂಡನೊರಂಟರ ಗಂಡನುಕ್ಕಿದು
ದ್ದಂಡರ ಗಂಡನೀ ಬೇಡರ ಗಂಡನ(ದೇ) ಪಡೆಮಾತೊ ಮೀರಿ ಮಾ
ರ್ಕೊಂಡರ ಗಂಡನೇಳಿಸುವ ವೀರರ ಗಂಡನೆನುತ್ತ ಬೀರಗಾ
ವುಂಡನನಕ್ಕರಿಂ ಪೊಗಳ್ವುದೀ ಭುವನಂ ಪ್ರಜೆಮೆಚ್ಚಿ ಗಂಡನಂ ॥ ೧೭೪ ॥

೧೦. ತ್ಯಾಗವೀರ

ಪ್ರಾಚೀನ ಕನ್ನಡಿಗರ ಮನಸ್ಸನ್ನು 'ವೀರ' ದಂತೆ ಆಳಿದ ಇನ್ನೊಂದು ಮೌಲ್ಯ 'ತ್ಯಾಗ'. 'ಪ್ರಾಣಮುಳ್ಳಿನಂ ಇರಿವುದು. ಅರ್ಥಮುಳ್ಳಿನಂ ಈವುದು' – ಇದು ಅವರ ಆದರ್ಶವಾಗಿದ್ದಿತು. ಈ ಆದರ್ಶದ ಅನುಷ್ಠಾನಕ್ಕಾಗಿ ಅವರು ದೇವಾಲಯ, ಕೆರೆ, ಬನ, ಅನ್ನಸತ್ರ, ಆರವೆಗಳನ್ನು ಸ್ಥಾಪಿಸಿ, ತ್ಯಾಗವನ್ನು ಮೆರೆದ ವಿಷಯ ಅನೇಕ ಶಾಸನಗಳಲ್ಲಿದೆ.

ಬೊಪ್ಪಣ ಚಮೂಪ :

ಅಳಿದಿತ್ತಂ ಬಲಿ, ಭಾನುಜಾತನೆಣಿಸಿತ್ತಂ, ತೂಕದಿಂದಿತ್ತಂ
ತಳಿಪಿಂದಂ ಶಿಬಿಯೆಂದಿವಂ ಪಳಿದು, ತನ್ನಂ ಬೇಳ್ಪುದಂ ಬೇಳ್ಪವ
ರ್ಗಳೆಯಂ ಲೆಕ್ಕಿಸನೊಲ್ದು ತೂಗನನಿವಾರ್ಯಂ ಕೊಟ್ಟಪಂ ನೋಡದಾ
ಗಳಿನರ್ಥಾರ್ಥಿಗೆ ಕೂರ್ತು ಬೊಪ್ಪಣಚಮೂಪಂಗಾರ್ ಸಮಂ ದಾನಿಗಳ್ ॥ ೧೭೫ ॥

ಸೋಮ :

ಮೊಗಮಂ ನೋಡುವೊಡಟ್ಟಿ ಪತ್ತಿದಪರೆಂಬಾ ಶಂಕೆಯಿಂ ಬಾತು, ಬ
ಲ್ಮೊಗದಿಂದಿರ್ದು, ಪ[ರಾ]ರ್ಥಮಂ ಬಿಸುಟು, ತಮ್ಮಳ್ಳರ್ಥಮಂ ಬಯ್ತು, ಬಂ
ದಿಗೆ ಕಳ್ಳಂಗರಸಿಂಗೆ ದಾಯಿಗರಿಗಂ [ಕೊ]ಟ್ಟೋವುತಂ ಮಾಳ್ಪ ಲೋ
ಭಿಗಳೇಂ ಪೋಲ್ವರೆ ಸಾಕ್ಷರೀಕ ಶುಕಚೂತಾರಾಮನಂ ಸೋಮನಂ ॥ ೧೭೬ ॥

ಬರ್ಮಣ :

ಪಡೆದಪೆವೆಂದು ನೆತ್ತಿಯ ಬೆಮರ್ ಮುಡಿಯಿಂದಿಳಿವಂತು ದುಃಖದಲ್
ದುಡಿಯುತಮಿರ್ಪರಲ್ಲದೆ, ಜಸಂಬಡೆವಲ್ಲಿಗೆ ಧರ್ಮದಲ್ಲಿಗೇಂ
ಬಿಡುವರೆ ಪೊನ್ನನೊಕ್ಕಲಿಗರಮ್ಮ ಬಬಾಪ್ಪೆನೆ ವಿಷ್ಣುಗೇಹಮಂ
ನಿಡುವಣಿಯಲ್ಲಿ ಮಾಡಿ[ಪರೆ] ಮೇಂಟೆಯ ಬರ್ಮಣನಂತಿರೊರ್ಪರಂ ॥ ೧೭೭ ॥

ಗಿಡಿಗಿಡಿದುರ್ತಿ ಬಿತ್ತಿ ಫಲಮಂ ಪಡೆದುಣ್ಣದೆ, ಲಾಭಲೋಭದಿಂ
ಮಡಗಿ ಬಳಿಕ್ಕೆ ಗಾವಣಿಗೆ ಗಂಟೆಗೆ ಟೊಪ್ಪರವಿಟ್ಟುಕೊಳ್ವ ನಿ
ಗ್ಗಡ ನೃಪಗಿತ್ತು ತೆತ್ತು, ಬರಿದಾಗಿ ಬೆಗಳ್ಮೊಗದಿಂದವಿರ್ಪ ಬೆ
ಳ್ಗುಡಿಯರನೇಕೆ ಪೋಲಿಸುವೆ ಬರ್ಮಣನೊಳ್ ಹಿತಧರ್ಮಕಾರ್ಯದೊಳ್ ॥ ೧೭೮ ॥

ಹರಿಯವ್ವೆ :

ಧರೆಯೊಳನಂತ ದಿವ್ಯಯತಿ ಸಂತತಿಗನ್ನಮನಾದ ಭೀತಿಯಿಂ
ಬರೆ ಪಲರಂಜದೆಂಬಭಯ ವಾಕ್ಯಮನಾತುರರಾಗಿ ಬೇರ್ಪವ
ೞರದೆ ಶರೀರರಕ್ಷಣಮನೋದಲು ಶಾಸ್ತ್ರಮನೀವ ಪೆಂಪಿನಿಂ
ಹರಿಯವೆ ತಾಳ್ದಿದಳ್ ಪರಹಿತೋಕ್ತ ಚತುರ್ವಿಧ ದಾನಶಕ್ತಿಯಂ ॥ ೧೭೯ ॥

ಕೇಶವಭೂಪ :

ಸುರಲೋಕದ ಸುರತರುವಿನ
ಗುರು ಫಲಮಂ ಮೆಲ್ದು, ತೃಪ್ತಿಯಿಲ್ಲದೆ ಸುರರುಂ
ಧರೆಯೊಳ್ ಭೂಸುರರಾದರ್,
ವರ ಕೇಶವಭೂಪ ಕಲ್ಪಭೂಜಸ್ಪೃಹೆಯಿಂ ॥ ೧೮೦ ॥

ರೇವಗಾವುಂಡ :

ಪಡೆದೊಡಮೆಯೊಳಿನಿತಿನಿತಂ
ಮಡಗದೆ, ಕೆರೆ ಬಾವಿ ದೇಗುಲಂಗಳ ಕೆಲಸ
ಕ್ಕೊಡಮೆಯನೆ ತವಿಸಿ, ಧರ್ಮ್ಮಮ
ನುಡುಗದೆ ಬಯ್ತಿಟ್ಟನಿಂತು ರೇವಗವುಂಡಂ ॥ ೧೮೧ ॥

ನಾಕಿರಾಜ :

ಸುರಭಿತೊರೆದತ್ತು, ಸುರಭೂ
ಮಿರುಹಂ ಫಲಮಾಯ್ತು, ಸಿದ್ಧರಸದೊಂದು ಪೊನಲ್
ಪರಿದುದೆನೆ, ಧರೆಗೆ ಧನಮಂ
ಪಿರಿದಿತ್ತಂ ನಾಕಿ ತತ್ ಪ್ರತಿಷ್ಠೋತ್ಸವದೊಳ್ ॥ ೧೮೨ ॥

ವಿದ್ಯೆರಾಪಿ :

ಅಕ್ಕರಿಗಂಗೆ ಬೇಡಿದ ನರಂಗೆ ತಪಸ್ವಿಗೆ ದೇಸಿಗಂಗೆ ಕ
ಟ್ಟೊಕ್ಕಲಿಗಂಗೆ ದೀನ ನಟ ಪಾಠಕ ವಂದಿ ಜನಕ್ಕೆ ರಾಗದಿಂ
ನಕ್ಕೊಡೆ ನಿಂದು ನೋಡಿದೊಡೆ ಮಚ್ಚಿದೊಡೋತೊಡೆ ಕೂರ್ತೊಡೀಗಳು
ಮಿಕ್ಕೆಡರ್ಗೀವೆನೆಂಬುದಿದುವೀವ ಗುಣಂ ಸಲೆ ವಿದ್ಯೆರಾಶಿಯಾ ॥ ೧೮೪ ॥

ಸಾಳ್ವಮಲ್ಲ :

ಬಲಿಯಿಂ ಕರ್ಣನೆ ಚಾಗಿಯಾ ಬಲಿಯಿನುದ್ಯತ್ಕರ್ಣನಿಂ ಭೋಜನಾ
ಬಲಿಯಿಂ ಕರ್ಣನಿನಂತೆ ಭೋಜ ವಿಭುವಿಂ ಮಾಂಧಾತನೀ ಲೋಕದೊಳ್
ಬಲಿಯಿಂ ಕರ್ಣನಿನಂತೆ ಭೋಜ ವಿಭುವಿಂ ಮಾಂಧಾತನಿಂ ಚಾಗದ
ಗ್ಗಲನಾದಂ ಕಲಿ ಸಾಳ್ವ ಮಲ್ಲನವನಂತಾರ್ ನೋಂತರೀ ಧಾತ್ರಿಯೊಳ್ ॥ ೧೮೫ ॥

ನಾಗರಾಜ :

ಇದು ದೀಪಕ್ಕಿದು ಪೂಜೆಗಿಂತಿದು ನಿವೇದ್ಯಕ್ಕೆಂದು ತಮ್ಮ ಪ್ರಭು
ತ್ವದ ಸಾಮ್ಯಂಗಳೊಳಾದ ಗಾಣಮುಮನೊಂದಂ ತೋಂಟವೊಂದಂ ಪ್ರಸಿ
ದ್ಧದೆರಳ್ಕೊಂಟೆಗಳಂ ನಮಸ್ಯವೆನೆ ಬಿಟ್ಟಂ ರೇವಣೇಶಾಲಯ
ಕ್ಕೆ ದಯಾಂಬೋನಿಧಿ ನಾಗರಾಜನನಘಂ ಚಂದ್ರಾರ್ಕಮುಳ್ಳನ್ನೆಗಂ ॥ ೧೮೬ ॥

೧೧. ಧರ್ಮವೀರ

ಮಾನವರಾಗಿ ಜನಿಸಿ, ಮಹಾಮಾನವರಾಗಿ ಬೆಳಗಿದವರು ಧರ್ಮವೀರರು, ಆತ್ಮಕಲ್ಯಾಣ, ಲೋಕಕಲ್ಯಾಣಗಳನ್ನು ಬದುಕಿನ ಪರಮ ಗಂತವ್ಯವೆಂದು ಬಾಳಿದ ಇವರು, 'ಮೃದೂನಿ ಕುಸುಮಾದಪಿ, ಕಠೋರಾಣಿ ವಜ್ರಾದಪಿ'. ಇಂಥ ಸಾವಿರ ಸಾವಿರ ಮಹಾತ್ಮರು ಶಾಸನಗಳಲ್ಲಿ ಕಂಡು ಬರುತ್ತಾರೆ.

ಕಪ್ಪೆ ಆರಭಟ್ಟ :

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ । ವಿಪರಿತನ್
ಮಾಧವನೀತನ್ ಪೆರನಲ್ಲ ॥ ೧೮೭ ॥

ಗುಣಗಳ್ಳ ಮುನಿ :

ಮುಕ್ತಿಶ್ರೀ ಸತಿಗನುರಕ್ತಂ ಸಂಸಾರ ವಿ
ರಕ್ತಂ ನಿರ್ವಿಷಯ ನಿರಪೇಕ್ಷಂ । ಶುಚಿ ಜೀವ
ನ್ಮುಕ್ತಂ ನಿರ್ವಾಣಿ ಗುಣಗಳ್ಳಂ ॥ ೧೮೮ ॥
ಅರಿವಣ್ಮು ವೈರಾಗ್ಯಂ ತರಿಸಲವಭ್ಯಾಸಂ
ನೆರೆ ಭಕ್ತಿ ಶಾಂತಿ ಧೃತಿ ತುಷ್ಟಿ । ಯೆಂಬಿವ
ರ್ಕೆರೆವೆಟ್ಟಾಗಿರ್ದಂ ಗುಣಗಳ್ಳಂ ॥ ೧೮೯ ॥

ರುದ್ರಶಕ್ತಿ :

ಗಿರಿಜೆಯ ಸಂಗಮಿಲ್ಲದ, ಮರುನ್ನದಿಯೊಳ್ ಸಮಸಲ್ಲದಾವಗಂ
ಮರುಳ ಗಣಂಗಳೊಳ್ ಬೆರಿಯಾಡದ, ಶೂಲಮನೊಲ್ದು ಹಸ್ತದೊಳ್
ಧರಿಸದ, ರುಂಡಮಾಲೆ ಕೊರಲಲ್ಲಿನಿಸಿಲ್ಲದ ಶಂಭುವೆಂಬುದೀ
ಶ್ವರ ವರಮುರ್ತಿಯೆಂಬುದು ಯತೀಂದ್ರನತಂದ್ರನ ರುದ್ರಶಕ್ತಿಯಂ ॥ ೧೯೦ ॥

ಸರ್ವೇಶ್ವರ :

ಕೊರಲೊಳ್ ಕರೆ, ಶಿರದೊಳ್ ಪೆರೆ,
ಪಿರಿದುಂ ಜಡೆಯಲ್ಲಿ ಗಂಗೆ, ತೊಡೆಯೊಳ್ ಶಿವೆ, ಮ
ತ್ತುರದೊಳ್ ಕರೋಟಿ ತೊಲಗಿದ
ಹರನೆಂಬುದು ಯತಿವರೇಣ್ಯ ಸರ್ವೇಶ್ವರನಂ ॥ ೧೯೧ ॥

ಅಮೃತರಾಸಿ :

ಅಮೃತಗುಣನಮೃತ ಮಾನಸ
ನಮೃತೋತ್ತಮ ವಾಣಿಯಮೃತ ಹೃದಯಾಂಬುಜಮಂ
ತಮೃತ ಮತಿಯಮೃತ ಮಹಿಮಾ
ಪ್ರಮಿತನೆನಿಪ್ಪಮೃತರಾಸಿ ಮುನಿ ಕೃತಕೃತ್ಯಂ ॥ ೧೯೨ ॥

ಚಿಲ್ಲುಕಾರ್ಯ :

ಅರಿದಾಗಮೋಕ್ತಿಯಿಂದಂ
ನಿರಿಸಿ ಶಿವಜ್ಯೋತಿಯಂ ಸ್ವಚಿತ್ತದ ಗತಿಯಂ
ಮೆರೆದಸೆ ಸಚ್ಚಾರಿತ್ರದೆ
ಕುರುವತ್ತಿಯ ಚಿಲ್ಲುಕಾರ್ಯಮುನಿ ಮನುಚರಿತಂ ॥ ೧೯೩ ॥

ಕಳೇಶ್ವರಾರ್ಯ :

ಶಾಂತಿಯನಪ್ಪುಕೆಯ್ದು ಶಿವಯೋಗಿ ಜನಸ್ತುತನಾದ, ಶೈವ ಸಿ
ದ್ಧಾಂತಮನಪ್ಪುಕೆಯ್ದು ಸಮುನೀಂದ್ರ ಜನಸ್ತುತನಾದ, ಸಾತ್ವಿಕ
ಸ್ವಾಂತಮನಪ್ಪುಕೆಯ್ದು ಸುಜನಸ್ತುತನಾದ, ಕಳೇಶ್ವರಾರ್ಯ ಸೈ
ದ್ಧಾಂತಿಕ ರಾಜ ರಾಜಗುರು ಲೋಕಗುರುತ್ವನೆಯ್ದೆ ತಾಳ್ದಿದಂ ॥ ೧೯೪ ॥

ಹುಳಿಯಮೇಶ್ವರ ಚಿಕ್ಕಯ್ಯ :

ದಿಕ್ಕರಿಯ ಕಟದ ತಳದೊಳ್
ಮಿಕ್ಕ ಸುರದ್ರುಮದ ಮೇರುಗಿರಿ ಮಂದಿರದೊಳ್
ಬೊಕ್ಕನೆ ಕೀರ್ತಿಲತಾವಧು
ಚಿಕ್ಕಯ್ಯನ ಹೆಸರ ಜಸವ ಬರೆಯಿಸುತಿರ್ದಳ್ ॥ ೧೯೫ ॥

ಶಿವದೇವ :

ಲಿಂಗವನಪ್ಪಿದ ತೋಳ್ಗಳಿ
ನಂಗನೆಯರನಪ್ಪೆನಳಪಿ ನೋಡೆಂ ಕೂಡೆ ಮ
ನಂಗೊಡೆನವಧಾರೆನುತಮ
ಭಂಗಂ ಬ್ರತಿ ಶಂಕರಂಗೆ ಬಾಸೆಯ ಕೊಟ್ಟಂ ॥ ೧೯೬ ॥

ಆಸೆಯ ಪಾಶಮಂ ಪರಿದು, ರೋಷದ ಮೀಸೆಯ ಕಿತ್ತು, ಕಾಮ ಬಿ
ಟ್ಟೋಸರಿಸೆಂದು, ಲೋಭಮದಮೆಂಬುದನಟ್ಟುತ, ಮಾನಮೋಹ ತೃ
ಷ್ಣಾಸಬಲಂಗಳಂ ಜರಿದು, ಬಗ್ಗಿಸಿ ಗೆಲ್ದುರೆ ತೊತ್ತುಮಾಡಿದಂ,
ದೂಷಕ ಧೂಮಕೇತು ಶಿವದೇವನತರ್ಕ್ಯ ಗುಣಪ್ರಭಾವನುಂ ॥ ೧೯೭ ॥

ಎಲೆ ಗಳ ವಾದಿ – ಗೀದಿ, ಫಡ ವೈಷ್ಣವ – ಗೀಷ್ಣವ, ಸೌರ – ಗ್ರೀವ್ರ, ಮಾ
ಣೆಲೆ ಗಳ ಬೊಮ್ಮಿ – ಗಿಮ್ಮಿ, ನಿಗಮಾರ್ಥವನರಿಯದ ಅಜ್ಜಿ – ಗಿಜ್ಜಿ, ಬೇ
ಡೆಲೆಗಳ ಬೌದ್ಧ – ಗಿದ್ಧ, ಬರಿಯಾಗಮಿ – ಗೀಗಮಿ, ಮಂತ್ರವಾದಿ ಸಾ
ಕುಲಿಯದಿರೆಂದು ಬಗ್ಗಿಪುದು ಶ್ರೀ ಶಿವದೇವನ ಕಾಲ ಹೊಂದೊಡರ್ ॥ ೧೯೮ ॥

ಲಿಂಗಕ್ಕೆ ಜಂಗಮಕ್ಕಂ
ಹಿಂಗದೆ ದಾಸತ್ವ ಮಾಳ್ಪುದೇ ಬೆಸನೆಂದಾ
ಸಂಗನಬಸವಂ ಬೆಸಸೆ ಮ
ನಂಗೊಂಡರ್ಚಿಸುವನುಭಯ ಲಿಂಗವ ಮುದದಿಂ ॥ ೧೯೯ ॥

ಮೃಡಗಣ ವರ ಪ್ರಸಾದಮ
ಪಡೆದಂ ಜಗವರಿಯಲಂದು ಸಂಗನಬಸವಂ,
ಪಡೆದಾ ಪ್ರಸಾದ ಸಿದ್ಧಿಯ
ಕಡು ವೀರಬ್ರತದಿ ಪಡೆದನೀ ಶಿವದೇವಂ ॥ ೨೦೦ ॥

ನನೆಯದೇವ :

ನಯನಂಗಳ್ ಕರುಣಾರಸಾರ್ದ್ರ ಮಧುರಂಗಳ್, ಮಾತುಗಳ್ ತತ್ವನಿ
ಶ್ಚಯದೀಕ್ಷಾಗುರುಗಳ್, ವಿಶುದ್ಧಚರಿತಂಗಳ್ ಶೈವಯೋಗಿಶ್ವರಾ
ನ್ವಯಚೂಡಾಮಣಿಗಳ್, ಪದಂಗಳವನೀ ಸೇವ್ಯಂಗಳೆಂಬಂತು ನ
ನ್ನೆಯದೇವರ್ ಮೆರೆವರ್ ಪ್ರಸಿದ್ಧ ಶಿವಧರ್ಮಪ್ರಾಭವೋದ್ಧಾರಕರ್ ॥ ೨೦೧ ॥

ಚಂದ್ರವಿಭೂಷಣ :

ಒದವಿದ ಮೋಹಪಾಶಮನದಂ ಪರಿದಿಕ್ಕಿ, ಕಳತ್ರಮೆಂಬ ಕಂ
ಬದ ತೊಡರಂ ಬಿದಿರ್ಚಿ, ವಿಯಶಂಗಳನೆಯ್ದೆ ಕಿವಿರ್ಚಿ, ರಾಗಮೆಂ
ಬುದಧಿಯನೀಂಟಿ ಬಂದು, ಶಿವಯೋಗ ಸುಧಾಂಬುನಿಧೀ ಪ್ರವಾಹದೊಳ್
ಮುದದವಗಾಹಮಿರ್ದುದಹ ಚಂದ್ರವಿಭೂಷಣ ಗಂಧಸಿಂಧುರಂ ॥ ೨೦೨ ॥

ವಾಮಶಕ್ತಿ :

ವ್ರತದೀಕ್ಷಾ ವಿಧಿ, ಕಂಡಮಂಡಳವಿಧಾನಂ, ಲಿಂಗಪೀಠಕ್ರಮಂ,
ಪ್ರತಿಮಾದೂಷಣ ಶೋಷಣಂ, ಭುವನಕೋಶಂ, ವಾಸ್ತುಭೂದೇವ ಸಂ
ಸ್ಮೃತಿ, ಭೂಭೇದಪರೀಕ್ಷೆ, ದೇವನಿವಹ ಪ್ರಾಸಾದಮೆಂಬಾಗಮ
ಸ್ಥಿತಿ ವಿದ್ಯಾವಳಿ ವಾಮಶಕ್ತಿಮುನಿಯಿಂ ವಿಖ್ಯಾತಮಾಯ್ತುರ್ವಿಯೊಳ್ ॥ ೨೦೩ ॥

ಸೋಮೇಶ್ವರ ಸೂರಿ :

ಕೆಲಬರ್ ತರ್ಕವಿಶಾರದರ್, ಕೆಲಬರಾತ್ಮಾಳಾಪ ಸಂಬೋಧಕರ್,
ಕೆಲಬರ್ ನಾಟಕಕೋವಿದರ್, ಕೆಲಬರೋಳ್ಗಬ್ಬಂಗಳಂ ಬಲ್ಲವರ್,
ಕೆಲಬರ್ ವ್ಯಾಕರಣಜ್ಞರಿಂತಿನಿತುಮಂ ಬಲ್ಲನ್ನರಿಲ್ಲೆಲ್ಲಮಂ
ಸಲೆ ಸೋಮೇಶ್ವರಸೂರಿ ಬಲ್ಲನನಘಂ ನೈಯಾಯಿಕಾಗ್ರೇಸರಂ ॥ ೨೦೪ ॥

ಶಿವಶಕ್ತಿ :

ಉರದಾಂತೀ ಶಿವಶಕ್ತಿಯ
ಸೆರೆಗೋಲಿಂಗಳ್ಕಿ ಮನ್ಮಥಂ ಸತಿಯರ ಕಿ
ಕ್ಕಿರಿದಿರ್ದ ಕುಚದ ಸಾರ್ಕೆಯ
ಸೆರೆಯೊಳಡಂಗಿದನಿದೇಂ ಕರಂ ವಿಸ್ಮಯಮೋ ॥ ೨೦೫ ॥

ಹಡೆದ ಹಣ ಹಾಗಮೆಲ್ಲಮ
ಜಡೆಯಿಡುಕುರ ಮಡಗಿ ಮಿಂಡಿದೊಳ್ತಿರ್ಗಿವೀ
ತುಡುಗುಣಿ ಗೊರವರ ಮೆಚ್ಚಂ
ಪೊಡವಿಗೆ ಶಿವಶಕ್ತಿ ತಾನೆ ನೈಷ್ಠಿಕ ಮುನಿಪಂ ॥ ೨೦೬ ॥

ದೇವಿಶೆಟ್ಟಿ :

ಧರ್ಮದ ಮೇರು, ಧರ್ಮದ ತವರ್ಮನೆ, ಧರ್ಮದ ಜನ್ಮಭೂಮಿ, ಸ
ದ್ಧರ್ಮಗುಣ ಪ್ರಭಾವ, ಮಹಿಮಾಂಬುಧಿ, ನಿರ್ಮಳ ಧರ್ಮದಾಗರಂ ।
ಧರ್ಮದ ಬಿತ್ತು, ಧರ್ಮನಿಧಿ, ಧರ್ಮಪರಂ, ಶಿವಧರ್ಮದೀಪಕಂ,
ಧರ್ಮಸಖಾಯನೆಂದು ಧರೆ ಕೀರ್ತಿಕು ಶೈವರ ದೇವಿಸೆಟ್ಟಿಯಂ ॥ ೨೦೭ ॥

ಕುಂಜಶೆಟ್ಟಿ :

ಹರಪದ ಪೂಜೆಯೊಳ್, ಹರಕಥೋಚಿತ ತತ್ವಸುಖಾನುಸೇವೆಯೊಳ್,
ಹರಸಮಯ ಪ್ರಭಾವ ಪರಿವರ್ತನದೊಳ್, ಹರಭಕ್ತಿಯೊಳ್, ಹರ
ಸ್ಮರಣದೊಳಾವಗಂ ತನು ಧನಂ ಮನಮೆಂಬಿವನೆಯ್ದು ಕೂಡಿ, ಸು
ಸ್ಥಿತಮೆನಿಸಿರ್ದನೇಂ ಸುಕೃತಪುಂಜನೊ ಕುಂಜನಿಳಾತಳಾಗ್ರದೊಳ್ ॥ ೨೦೮ ॥

ತನುವಂ ಜಂಗಮದೆಡೆಯೊಳ್,
ಮನಮಂ ಶ್ರೀ ಸೋಮನಾಥ ಪದಪಂಕಜದೊಳ್,
ವಿನಿಯೋಗಿಸಿ ಕುಂಜಂ ನೆ
ಟ್ಟನೆ ಪಡೆದಂ ಪುಣ್ಯಪದಮುಮಂ ಶಿವಪದಮಂ ॥ ೨೦೯ ॥

ಹೊನ್ನಬೊಮ್ಮ ಶೆಟ್ಟಿ :

ಜಂಗಮದಿಚ್ಛೆ, ಜಂಗಮದ ನಚ್ಚಿಕೆ, ಜಂಗಮ ಮಚ್ಚು, ಮತ್ತಮಾ
ಜಂಗಮದಾಟ, ಜಂಗಮದ ನೋಟಮೆ, ಜಂಗಮ ಕೂಟವಾಗಳುಂ,
ಜಂಗಮದಾಸೆ, ಜಂಗಮದ ಭಾಸೆಯೊಳುದ್ಭವಿಕಾಸಿ ರಾಜಿಸಿ
ಪ್ಪಂ ಗಡನೆಂದು ಬಣ್ಣಿಪುದು ಭೂವಳಯಂ ನೆರೆ ಹೊನ್ನಬೊಮ್ಮನಂ ॥ ೨೧೦ ॥

ಲಿಂಗಮೆ ಜನನೀ ಜನಕಂ,
ಲಿಂಗಮೆ ನನಗಾಳ್ದನಾಪ್ತಬಾಂಧವ ಭ್ರಾತ್ರು,
ಲಿಂಗಮೆನೆ ಸರ್ವಮೆನಿಸುವ
ಸಂಗಂ ದೊರಕೊಳ್ಗೆ ಜನ್ಮಜನ್ಮಾಂತರದೊಳ್ ॥ ೨೧೧ ॥

ತೋಂಟದ ಸಿದ್ಧಲಿಂಗ :

ಈ ಮಹಾ ಸಿದ್ಧೇಶ್ವರನ ಅತಿಶಯಯೆಂತೆಂದಡೆ: ಶ್ರೀಮತ್‌ಸಚ್ಚಿದಾನಂದ ನಿತ್ಯಪರಿಪೂರ್ಣನಪ್ಪ ಅನಾದಿಭಕ್ತ, ಆ ಭಕ್ತನ ಪ್ರಾಣಕಳಾಚೈತನ್ಯ ಸ್ವರೂಪೇ ತೋಂಟದ ಸಿದ್ಧಲಿಂಗೇಶ್ವರನು. ಆ ಸಿದ್ಧೇಶ್ವರನ ಮೂರ್ತಿಕ್ರಮವೆಂತೆಂದಡೆ: ಪ್ರಣಮವೆ ಸಿರಸು, ನಮಃಕಾರವೇ ಭುಜ, ಶಿಕಾರವೇ ದೇಹ, ವಾಯಃಕಾರವೇ ಪಾದ, ಅನಂತಕೋಟಿಬ್ರಹ್ಮಾಂಡಗಳೇ ಮಕುಟ, ಸಮಸ್ತಲೋಕಾದಿಲೋಕಂಗಳೇ ದೇಹದ ಜಳವಳೆಯ, ಆಕಾಶವೇ ಮುಖ, ದಶದಿಕ್ಕುಗಳೇ ತೋಳು, ಚಂದ್ರಸೂರ್ಯಾದಿಗಳೇ ನಯನ, ಪಾತಾಳವೇ (ಎದೆ), ಮೇಘಂಗಳೇ ಜಟಾಬಂಧ, ಆ ಜಟಾಬಂಧದಲ್ಲಿ ಶೂನ್ಯಲಿಂಗ, ವೇದಪುರಾಣಂಗಳೇ ಕ್ರಿ, ನಕ್ಷತ್ರಂಗಳೇ ಪುಷ್ಪ, ಚಂದ್ರಪ್ರಕಾಶವೇ ವಿಭೂತಿ, ಅಷ್ಟಕುಲಪರ್ವ್ವತಂಗಳೇ ರುದ್ರಾಕ್ಷೆ, ಸಪ್ತಸಮುಂದ್ರಂಗಳೇ ಕಮಂಡಲ, ಭುವನಸ್ರುಷ್ಟಿಯೇ ಕಂತೆ, ದಿವಾರಾತ್ರಿಗಳೇ ಮಠ, ಷಡುಋತುಗಳೇ ಷಟುಸ್ಥಲ, ಮಹಾಶೇಷನೇ ಕಟಿಸೂತ್ರ, ಪರಿಪೂರ್ಣಜ್ಞಾನವೇ ಪಂಚಮುದ್ರೆ, ತ್ರಿಕಾಲಜ್ಞಾನವೇ ಮಹದೈಶ್ವರ್ಯ, ಮಹಾ ಮೇರುವೇ ದಂಡ, ಸದ್ಗುಣವೇ ಖರ್ಪ್ಪರ, ಕುಲವೆ ಶಿವಕುಲ, ಇಂತಪ್ಪ ಅನಾದಿ ಜಂಗಮವೆ ಜಗಹಿತಾರ್ತ್ಥವಾಗಿ ಚರಿಸಿದ ಕ್ರಮವೆಂತೆಂದರೆ: ಜ್ಞಾನಕ್ರಿಯಾಸ್ವರೂಪನು, ಸರ್ವಾಂಗಲಿಂಗಿ, ಷಟ್‌ಸ್ಥಲಜ್ಞಾನಿ, ಸರ್ವಾಚಾರಸಂಪನ್ನ, ಪಾದೋದಕಪ್ರಸಾದ ಪ್ರತಿಷ್ಠಾಚಾರ್ಯರು, ಅಷ್ಟಾವರಣಾಲಂಕರಣ, ದ್ವೈತಾದ್ವೈತತಿಮಿರಮಾರ್ತಂಡನುಂ, ಇಂತಪ್ಪ ದಿವ್ಯಶಿವಯೋಗಿ ಸಿದ್ಧಲಿಂಗೇಶ್ವರಂಗೆ ಸಂಮ್ಯಜ್ಞಾನೋದಯವಾಗಿ, ಸಂಸಾರ ಹೇಯಮಂ ಮಾಡಿ, ಶರಣುಹೊಕ್ಕ ಶಿಷ್ಯಜನಗಳ ನಾಮ ಪರಿಕ್ರಮಗಳೆಂತೆಂದಡೆ: ಸಪ್ಪೆದೇವರು, ಉಪ್ಪಿನಹಳ್ಳಿಯ ಸ್ವಾಮಿ, ಸಿದ್ಧೇದೇವರು, ನಂಜೇದೇವರು, ಬೋಳಬಸವರಾಜದೇವರು, ಗುಮ್ಮಳಾಪುರದ ಸಿದ್ಧಲಿಂಗದೇವರು, ಪಟ್ಟಣದೇವರು, ರೇವಣಸಿದ್ಧೇದೇವರು, ಶೀಲವಂತದೇವರು, ಚಿಟ್ಟಿಗದೇವರು – ಇಂತಿವರು ಮುಖ್ಯವಾದ ಭಕ್ತಮಹೇಶ್ವರರ್ಗೆ ಷಡುಸ್ಥಲಜ್ಞಾನ ಲಿಂಗಾಂಗಸಂಬಂಧ ಸಮರಸ ಏಕಾರ್ಥಮಂ ಬೋಧಿಸಿ, ಮುಕ್ತರಂ ಮಾಡಿ, ಷಡುಸ್ಥಲ ಏಕಾರ್ಥವಾಗಿ ಮಾಡುವ ಕ್ರೀಗಳೆಲ್ಲ ನಿಷ್ಪತ್ತಿಯಾಗಿ, ಎಡೆಯೂರಲ್ಲಿ ತಮಗೆ ಕಟ್ಟಿಸಿದ ಮಠದಲ್ಲಿ ಶಿವಯೋಗಸಮಾಧಿ ಸನ್ನದ್ಧರಾದರು. ॥ ೨೧೨ ॥

ಪರ್ವತಯ್ಯ ಅಪ್ಪರಸ : ಸ್ವಸ್ತಿ ಸಮಸ್ತ ಸಮುದ್ರಮುದ್ರಿತಮಪ್ಪ ಧರಾಕಾಂತೆಯ ಶಿರಃಕಂಜದಂತೆ, ಪುರತ್ರಯವಿಪಿನ ದಹನದಾವಾನಳನ ಸುಕೃತಸರ್ವಸ್ವದ ಗವಸಣಿಗೆಯಂತೆ, ಸಕಳಭಕ್ತರ ಪುಣ್ಯಶಾಲೆಯಂತೆ, ಮುಕ್ತ್ಯಂಗನೆಯ ತಾಯ್ಮನೆಯಂತೆ, ಧರ್ಮಾರ್ಥಕಾಮಮೋಕ್ಷಂಗಳಪ್ಪ ಚತುರ್ವಿಧ ಪುರುಷಾರ್ಥಂಗಳ ಜನ್ಮಕ್ಷೇತ್ರದಂತೆ ಮೆರೆವ ಶ್ರೀಪರ್ವತದ ಮೇಲೆ ಮೂಜಗಕೆ ಸೋಜಿಗಮಪ್ಪೋಜೆಯಿಂ ರಾಜಿಸುವ ರಾಜೇಂದ್ರಚೂಡಾಮಣಿಯ, ಮನ್ಮಥಮತ್ತೇಭ ಮೃಗಾಧಿಪನ, ಕೀನಾಶಬಳ ಬಳಾಹಕ ಮಹಾಬಳನ, ಶಾರ್ದೂಲ ದೈತ್ಯಧ್ವಾಂತ ಪ್ರದ್ಯೋತನನ, ದರ್ಪಿಷ್ಟ ಕುಂಜರಾಸುರ ಮರಾಳ ಹರ್ಷ ವಿಳಯಜಳದ ಗರ್ದನನ, ಸುರಸರಿತ್ಸಮುದ್ಭೂತ ಲೋಲತರ ಕಲ್ಲೋಲಮಾಲಾ ಸಂಘಟ್ಟಿತ ಜಟಾಜಾಲನ, ಶ್ರೀಪರ್ವತಾಧೀಶ್ವರನಪ್ಪ ಮಲ್ಲಿಕಾರ್ಜುನನ ಕಾರುಣ್ಯಕಾಂತಿ ಕಾಯಮಂ ತಳೆದಂತೆ ಜನಿಯಿಸಿದ ಪರ್ವತಯ್ಯ, ಚಂದ್ರನುದಯದಿಂ ಮುನ್ನಂ ಬೆಳ್ದಿಂಗಳೊಗೆವಂತೆ, ಫಳರಸಮನೀಂಟುವುದರಿಂ ಮುನ್ನಂ ಸವಿ ಜಿಹ್ವೆಯಂ ಮುತ್ತುವಂತೆ, ತನಗೆ ಗುರುಪ್ರಾಪ್ತಿಯಪ್ಪುದರಿಂ ಮುನ್ನಮೆ ಪೂರ್ವ ವಾಸನಾಸಂಬಂಧದಿಂದುರ್ವಿ, ಕೊರ್ವಿ ಪರ್ವತಮನೇರಿ, ಶ್ರೀ ಮಲ್ಲಿಕಾರ್ಜುನನಂ

ಸುತ್ತಿ ಮುತ್ತಿ ಪತ್ತಿ ಪರಿದು ನೆರೆದಾಲಿಂಗಿಸಿ ತನ್ನ ಚಿತ್ತವನೀಶಾಂಘ್ರಿಯೊಳ್ ಸೆರೆಯಿಟ್ಟ ನೇಹಮಂ ಕಂಡು, ಶ್ರೀ ಮಲ್ಲಿಕಾರ್ಜುನಂ ಕಾರುಣ್ಯಂ ಮಾಡೆ, ಗುರು ಕರುಣ್ಯಂ ಬಡೆದು, ಶಾಂತಿಯಂ ತಳೆದ ನಿರ್ಮಳ ಜ್ಯೋತಿಯಂತೆ ಮೆರೆಯುತ್ತಿರೆ.

ಶಿವನುಭಯನೇತ್ರದಿಂ ಚಂದ್ರ ಸೂರ್ಯರೊಗೆದಂತೆ, ಪರ್ವತಯ್ಯನುಭಯವಹ ಕಾರುಣ್ಯಕಟಾಕ್ಷದಿಂದುದಯಿಸಿದ ಅಪ್ಪರಸ ದೇವರಸರ್ಗೆ ಚಂದ್ರಂಗೆ ಬೆಳ್ದಿಂಗಳಂ, ಬೆಳ್ದಿಂಗಳಿಂಗೆ ಪರಿಮಳಮಂ, ಪರಿಮಳಕ್ಕೆ ಸವಿಯಂ, ಸವಿಗೆ ರೂಪಂ, ರೂಪಿಂಗೆ ಸೌಂದರ್ಯಮಂ ಕೊಡುವಂತೆ ಉಪದೇಶಂ ಮಾಡೆ, ಕೈಕೊಂಡ ಅಪ್ಪರಸ ದೇವರಸರ್ ಪುಟವಿಟ್ಟ ಪುಣ್ಯಂ ಪುರುಷಾಕಾರವಾದಂತೆ, ಶಾಂತಿ ಸಾಕಾರವೆತ್ತಂತೆ, ಪರಮಾರ್ಥಂ ಶರೀರವಡೆದಂತೆ, ಭಕ್ತಿಜ್ಞಾನಂ ಸಂಸಾರವಂ ಸವಿದಂತೆ ಮೆರೆಯುತ್ತೆ, ಲೋಭವಡಿಯಿಡದ ಕರಪಲ್ಲವಂಗಳ, ಅನೃತವಂಕುರಿಸದ ರಸನಾಪ್ರದೇಶದ, ಸಂಸೃತಿ ಸರಸವಾಡದ ಚರಿತಶುದ್ಧಿಯ, ಕಾಮನ ಡಾಮರಕೊಳಸೋರದ ಮನದ ಬಿನದದ, ಮಾಯೆಯಾಜ್ಞೆಯನುಲ್ಲಂಘಿಸಿದ ಚಿತ್ತವೃತ್ತಿಯ ಶಬ್ದ ಸ್ಪರ್ಶ ರೂಪ ರಸ ಗಂಧಾದಿ ಭೋಗಕ್ಕೆಲಸದ ಕರಣಾವಳಿಯ ಮಹಾಮಹಿಮರೆನಿಸಿ, ತಿಲ ಮಧ್ಯದೊಳಿರ್ಪ ತೈಲದಂತೆ, ಕಾಷ್ಠ ಮಧ್ಯದೊಳಿರ್ಪ ಅಗ್ನಿಯಂತೆ, ಜಲಮಧ್ಯದೊಳಿಪ್ ಕಮಳದಂತೆ, ತಾಂ ಮಾನುಷ ಚರಿತರಪ್ಪುದರಿಂ ಸಂಸಾರಮಂ ಸೋಂಕದೆ, ಅನವರತಂ ಶಿವನೊಳವಿರಳ ಪೂಜೆಯಂ ಮಾಡುತಂ, ಮುಲೋಕಮಂ ತೀವಿದ ಶೈವಕೀರ್ತಿಯಂ ತಳೆದು ಸುಖದೊಳಿರ್ದರ್. ॥ ೨೧೩ ॥

ಕಲ್ನೆಲೆ ದೇವರು :

ಸ್ಥಾವರ ಜಂಗಮತೀರ್ಥಂ
ಭಾವಿಸಿ ಪೇಳ್ದಾಗಳೊಂದೆ, ಗೊಮ್ಮಟದೇವಂ
ಸ್ಥಾವರ ತೀರ್ಥಂ, ಕಲ್ನೆಲೆ
ದೇವರ್ ಭೂವಳಯದೊಳಗೆ ಜಂಗಮತೀರ್ಥಂ ॥ ೨೧೪ ॥

ಮಾಘಣಂದಿ :

ಎಳಮಾವಿಂ ಬನಮಬ್ಜದಿಂ ತಿಳಿಗೊಳಂ ಮಾಣಿಕ್ಯದಿಂ ಮಂಡನಾ
ವಳಿ ತಾರಾಧಿಪನಿಂ ನಭಂ ಶುಭದಮಾಗಿರ್ಪಂತಿರಿರ್ದತ್ತು ನಿ
ರ್ಮಳಮೀಗಳ್ ಕುಲಚಂದ್ರದೇವಚರಣಾಂಭೋಜಾತ ಸೇವಾವಿನಿ
ಶ್ಚಳ ಸೈದ್ಧಾಂತಿಕ ಮಾಘಣಂದಿಮುನಿಯಿಂ ಶ್ರೀಕೊಂಡಕುಮದಾನ್ವಯಂ ॥ ೨೧೫ ॥

ನಯನಕೀರ್ತಿ :

ಸಸಿಯಿಂದಂಬರಮಂಬುವಿಂ ತಿಳಿಗೊಳಂ ನೇತ್ರಂಗಳಿಂದಾನನಂ
ಪೊಸಮಾವಿಂ ಬನಮಿಂದ್ರನಿಂ ತ್ರಿದಿವಮಾಶ್ರೇಷ್ಠಂ ಮಣಿವಾತ್ರದಿಂ

ದೆಸೆವಂತೀ ನಯಕೀರ್ತಿದೇವಮುನಿಯಿಂ ಸಿದ್ಧಾಂತ ಚಕ್ರೇಶನಿಂ
ದೆಸಗುಂ ಶ್ರೀ ಜಿನಧರ್ಮಮೆಂದೊಡೆ ಬಳಿಕ್ಕೇವಣ್ಣಿಪೊಂ ಬಣ್ಣಿಪೊಂ ॥ ೨೧೬ ॥

ಮೇಘಚಂದ್ರ :
ಇದೆ ಹಂಸೀಬೃಂದಮೀಂಟಲ್ ಬಗೆದಪುದು, ಚಕೋರೀಚಯಂ ಚಂಚುವಿಂದಂ
ಕರ್ದುಕಲ್ ಸಾರ್ದಪ್ಪುದೀಶಂ ಮುಡಿಯೊಳಿರಿಸಲೆಂದಿರ್ದಪಂ, ಸೆಜ್ಜೆಗೇರಲ್
ಪದೆದಪ್ಪಂ ಕೃಷ್ಣನೆಂಬಂತೆಸೆದು ವಿಲಸತ್ಕಂದಳೀಕಂದಕಾಂತಂ
ಪುದಿದತ್ತೀ ಮೇಘಚಂದ್ರವ್ರತಿತಿಳಕಜಗದ್ವರ್ತಿ ಕೀರ್ತಿಪ್ರಕಾಶಂ ॥ ೨೧೭ ॥

ವಾದಿರಾಜ :
ಆದಿತ್ಯನ ಕೆಲದೊಳ್ ಚಂ
ದ್ರೋದಯಮೆಸೆಯದವೊಲೀ ಧರಾಮಂಡಳದೊಳ್
ವಾದಿಗಳೆವೆಂಬ ಟುಂಟುಕ
ವಾದಿಗಳೆಸೆದಪರೆ ವಾದಿರಾಜನ ಸಭೆಯೊಳ್ ॥ ೨೧೮ ॥

ಗೋಪನಂದಿ :
ಮಲೆಯದೆ ಸಾಂಖ್ಯ ಮಟ್ಟಮಿರು, ಭೌತಿಕ ಪೊಂಗಿ ಕಡಂಗಿ ಬೀಗದಿರ್,
ತೊಲತೊಲಗತ್ತ ಬೌದ್ಧ, ತಲೆದೋರದೆ ವೈಷ್ಣವ ನೀನಡಂಗು, ವಾ
ಗ್ಬಲದ ಪೊಡರ್ಪು ಬೇಡ ಗಡ ಚಾರ್ವಕ, ಚಾರ್ವಕ ನಿಮ್ಮ ದರ್ಪಮಂ
ಸಲಿಪನೆ ಗೋಪನಂದಿಮುನಪುಂಗವನೆಂಬ ಮದಾಂಧಸಿಂಧುರಂ ॥ ೨೧೯ ॥

ಮಲಧಾರಿದೇವ :
ನೆರೆಯೆ ತನುತ್ರಮಿಕ್ಕಿದವೊಲಿರ್ದ ಮಲಂ, ತಿನೆ ಮೆಯ್ಯನೊರ್ಮೆಯುಂ
ತುರಿಸುವುದಿಲ್ಲ, ನಿದ್ದೆವರೆ ಮಗ್ಗುಲನಿಕ್ಕುವುದಿಲ್ಲ, ಬಾಗಿಲಂ
ಕಿರು ತೆರೆಯೆಂಬುದಿಲ್ಲುಗುಳ್ವುದಿಲ್ಲ, ಮಲಂಗುವುದಿಲ್ಲಹೀಂದ್ರನುಂ
ನೆರೆವನೆ ಬಣ್ಣಿಸಲ್ ಗುಣಗಣಾವಳಿಯಂ ಮಳಧಾರಿದೇವರಾ ॥ ೨೨೦ ॥

ನಯಸೇನ ಸೂರಿ :
ನಿನಗೇನೆಂಬೆನೊ ಶಾಕಟಾಯನಮುನೀಶಂ ತಾನೆ ಶಬ್ದಾನುಶಾ
ಸನದೊಳ್, ಪಾಣಿನಿ ಪಾಣಿನೀಯದೊಳೆ, ಚಂದ್ರಂ ಚಾಂದ್ರದೊಳ್, ತಜ್ಜಿನೇಂ

ದ್ರನೆ ಜೈನೇಂದ್ರದೊಳಾ ಕುಮಾರನೆ ಗಡಂ ಕೌಮಾರದೊಳ್ ಪೋಲ್ವ(ರಿ)ಂ
ತೆನೆ ಪೋಲರ್ ನಯಸೇನಪಂಡಿತರೊಳನ್ಯರ್ ವಾರ್ಧಿವೀತೋರ್ವಿಯೊಳ್ ॥ ೨೨೧ ॥

ಸರಸತಿಯಂ ಮನೋಮುದದೆ ತಾಳ್ದಿದನೆನ್ನನವಜ್ಞೆಗೆಯ್ದ ನಾ
ನಿರೆನವಳಿರ್ಕೆ, ಚಿಃ ಸವತಿಯೊಳ್ ಪುದುವಾಳ್ವುದು ಕಷ್ಟಮೆಂದು, ನಿ
ಷ್ಠುರವಚನಂಗಳಂ ನುಡಿದು, ದಿಕ್ಕರಿಯಂ ಪರಿದೇರಿ, ಕೀರ್ತಿ ತಾಂ
ಪುರುಡಿಸಿ ದೂರಿಪಳ್ ವರ ತಪೋನಿಧಿಯಂ ನಯಸೇನಸೂರಿಯಂ ॥ ೨೨೨ ॥

ನರೇಂದ್ರಸೇನ ಮುನಿ :

ಚಾಂದ್ರಂ ಕಾತಂತ್ರಂ ಜೈ
ನೇಂದ್ರಂ ಶಬ್ದಾನುಶಾಸನಂ ಪಾಣಿನಿ ಮ
ತ್ರೈಂದ್ರಂ ನರೇಂದ್ರಸೇನ ಮು
ನೀಂದ್ರಂಗೇಕಾಕ್ಷರಂ ಪೆರಂಗಿವು ಮೊಗ್ಗೇ ॥ ೨೨೩ ॥

ಶುಭಕೀರ್ತಿ :

ಘನದರ್ಪೋರ್ನ್ನದ್ಧ ಬೌದ್ಧಕ್ಷಿತಿಧರಪವಿ ಯೀ ಬಂದನೀ ಬಂದನೀ ಬಂ
ದನೆ, ಸನ್ನೈಯಾಯಿಕೋದ್ಯತ್ತಿಮಿರ ತರಣಿ ಯೀ ಬಂದನೀ ಬಂದನೀ ಬಂ
ದನೆ, ಸನ್ಮೀಮಾಂಸಕೋದ್ಯತ್ಕರಿ ಕರಿರಿಪು ಯೀ ಬಂದನೀ ಬಂದನೀ ಬಂ
ದನೆ, ಪೋ ಪೋ ವಾದಿ ಪೋಗೆಂದುಲಿವುದು ಶುಭಕೀರ್ತಿದ್ಧತ ಕೀರ್ತಿ ಪ್ರಘೋಷಣಂ ॥ ೨೨೪ ॥

ಇಂದ್ರಕೀರ್ತಿ ಮುನಿ :

ಶ್ರೀಮದರುಹಚ್ಚರಣಸರಸಿರುಹಭೃಂಗನಂ
ಭೂಮಿ ಕೀರ್ತಿಸೆ ನೇಗಳ್ದ ಗುಣಗಣೋತ್ತುಂಗನಂ
ಮನುಚರಿತನಿರತನಂ ಗುರುಚರಣಭಕ್ತನಂ
ವಿನಮಿತಜಗಜ್ಜನಂ ಧರ್ಮಾನುರಕ್ತನಂ
ಪರಹಿತ ದಿಳೀಪನಂ ನೃಗಭೂಪಚರಿತನಂ
ಸುರುಚಿರ ಯಶೋಧರನನಕಳಂಕಚರಿತನಂ
ಪಂಡಿತಮುಖಾಂಬುರುಹಷಂಡ ಮಾರ್ತಂಡನಂ
ಕೊಂಡಕುಂದಾನ್ವಯ ಸಮೂಹಮುಖಮಂಡನಂ ॥ ೨೨೫ ॥

ಪಾಂಬಬ್ಬೆ :

ಪರಸೆ ಮಹಾಪ್ರಸಾದದೊಳೆ ರೇವಕನಿಮ್ಮಡಿ, ದೋರನೊಲ್ದು ತ
ನ್ನರಸುಮ ಮೌಲ್ಯವಸ್ತುಗಳುಮಂ ಕುಡೆ, ಬೂತಗನಕ್ಕನೆಂದು ವಿ
ಸ್ತರಿಸೆ, ಧರಿತ್ರಿ ಜೀಯ ಬೆಸಸೇನೆನೆ ಸಂದಿವು ಸಂದುವಲ್ಲುವಿಂ
ದರೆ ಸುಡಲೆಂದು ಪಾಂಬಬೆಗಳಂತುಗ್ರ ತಪೋನಿಯಮಸ್ಥರಾದೊರ್ ॥ ೨೨೬ ॥

ನರೇಂದ್ರಕೀರ್ತಿ :

ಸದಮಳ ಶಬ್ದಶಾಸ್ತ್ರಮೆನಿಪೆ(ಂ)ಬುದಶೋಕೆ ವಿಳಾಸದಿಂ ತಳಿ
ರ್ತುದು, ನಯಶಾಸ್ತ್ರಮೆಂಬ ಪೊಸಮಲ್ಲಿಗೆ ಪುಷ್ಪಿತಮಾಗಿ ಚೆಲ್ವನಾ
ಳ್ದುದು, ಫಳಮಾಗಿ ನಿರ್ಮಳಜಿನಾಗಮೆಂ(ಬುದು) ನೋಂತು ವ್ಯಂಜಮೊ
ಪ್ಪಿದುದು ನರೇಂದ್ರಕೀರ್ತಿ ಮುನಿಪುಂಗವನೆಂಬ ವಸಂತಕಾಲದೊಳ್ ॥೨೨೭॥

ಬಾಚಿದೇವ:

ಉದ್ಧರಿಸಿ ಜೈನಭವನಮ
ನುದ್ಧರಿಸಿ ಶಿವಾಲಯಂಗಳಂ ಮುದದಿಂದಂ
ತುದ್ಧರಿಸಿ ವಿಷ್ಣುಗೇಹಮ
ನುದ್ಧರಿಸಿದನಲ್ತೆ ಬಾಚಿ ಜಸದುನ್ನತಿಯಂ ॥೨೨೮॥

೧೨. ವೀರಮರಣ

ಪ್ರಾಚೀನಕಾಲದಲ್ಲಿ ವ್ಯವಸ್ಥಿತ ಅರಕ್ಷಕ ಬಲವಿರಲಿಲ್ಲ. ತಮ್ಮ ಗ್ರಾಮಗಳನ್ನು ಗ್ರಾಮೀಣರು, ತಮ್ಮ ರಾಜ್ಯವನ್ನು ಜೋಳವಾಳಿಗಳು (ಸೈನಿಕರು) ದಾಳಿಗಳಿಂದ ರಕ್ಷಿಸಲು ಹೋರಾಡುವುದು ಅನಿವಾರ್ಯವಾಗಿದ್ದಿತು. ಈ ಅನಿವಾರ್ಯತೆ 'ವೀರ'ವನ್ನು ಜೀವನದ ಪರಮಮೌಲ್ಯವನ್ನಾಗಿಸಿತು. ಗೋಗ್ರಹಣ, ರಾಜ್ಯಯುದ್ಧ, ಆಪ್ತರ ಸಹಾಯ, ಗ್ರಾಮದ ದಾಳಿ, ಸ್ತ್ರೀಮಾನ ರಕ್ಷಣೆ ಮೊದಲಾದ ಸಂದರ್ಭಗಳಲ್ಲಿ ಹೋರಾಡಿ ಸಾಯುವುದು ವೀರಮರಣ. ಇದರಿಂದ ವೀರಸ್ವರ್ಗ ಪ್ರಾಪ್ತಿ - ಎಂಬ ಭಾವನೆ ಅವರದಾಗಿದ್ದಿತು. ಇಂಥವರ ಸ್ಮರಣೆಗಾಗಿ ನಿಲ್ಲಿಸಿದವುಗಳೇ ವೀರಗಲ್ಲುಗಳು. ಇವುಗಳ ಮೇಲೆ ಬರೆದುದೇ ವೀರಶಾಸನ.

ಬೇಟೆಯಲ್ಲಿ ಹೋರಾಡಿದ ನಾಯಿ ಕಾಳಿಯ ವೀರಮರಣ :

ಸ್ವಸ್ತಿ ಸತ್ಯವಾಕ್ಯ ಕೊಂಗಣಿವರ್ಮ ಧರ್ಮ ಮಹಾರಾಜಾಧಿರಾಜಂ ...... ಶ್ರೀಮತ್ ಪೆರ್ಮಾನಡಿಗಳ್ ...... ತನ್ನಾಳು ...... ಸಗರತ್ರಿಣೇತ್ರಂ ...... ಕದನೈಶೂದ್ರಕಂ ಶ್ರೀಮತ್ ಮಣಲರತಂಗನುವರದೊಳ್ ಮೆಚ್ಚಿ ಬೇಡಿಕೊಳ್ಳೆಂದೊಡೆ ..... ಕಾಳಿಯಂ ದಯಗೆಯ್ಯೆಂದು ಕೊಂಡನಾ ನಾಯಂ ಕೆಳಲೆನಾಡ ಬೆಳತೂರ ಪಡುಪಣದೆಸೆಯ ಮೊರಡಿಯೊಳ್ ಪಿರಿದುಂ ಪಂದಿಗೆವಿಟ್ಟೊಡೆ, ಪಂದಿಯುಂ ನಾಯುಮೊಡಸತ್ತುವದರ್ಕೆಯತುಕೂರೊಳ್ ಚೆಲ್ಲೇಶ್ವರದ ಮುಂದೆ ಕಲ್ಲನ್ನಡಿಸಿ ಪಿರಿಯ ಕೆರೆಯ ಕೆಳಗೆ ..... ಇರ್ಛಂಡುಗ ಮಣ್ಣಂ ಕೊಟ್ಟರಾಮಣ್ಣಂ ..... ಅಳಿದನಾ ನಾಯಗೆಯ್ದ ಪಾಪಮಂ ಕೊಂಡೊನಾ ಸ್ಥಾನಮನಾಳ್ವ ಗೊರವನಾ ಕಲ್ಲಂ ಪೂಜಿಸದುಂಡರಪ್ಪೊಡೆ ನಾಯಗೆಯ್ದ ಪಾಪಮಂ ಕೊಂಡೊನ್. ॥ ೨೨೯ ॥

ಗೋಗ್ರಹಣದಲ್ಲಿ ಹೋರಾಡಿದ ದೇವಗೌಡ-ಮಲ್ಲಗೌಡರ ವೀರಮರಣ :

....ಮದಸಾಲೆಯ ಕಾಳರಸಂ ಸಮಸ್ತ ಸಾಮಾತ್ತಿಯಂ ಬೆರಸು ಬಂದು....ಕೊರಕೋಡನಿರಿದು, ತುರುವಂ ಕೊಂಡುಡೆಯುಚ್ಚಿ ಹೋಹಾಗಳಲ್ಲಿ ಹುಟ್ಟಿದ ಬಾವಗಾವುಂಡನ ಮಗಂದಿರು ದೇವಗಾವುಂಡನುಂ ಮಲ್ಲಗಾವುಂಡನುಂ ಬಿಲ್ಲುಮಂಬುಮಂ ಕೊಂಡಿರ್ವರುಂ ಹೆಬ್ಬಾಗಿಲೊಳಡ್ಡಂ ನಿಂದು, ಗುಹೆಯ ಬಾಗಿಲೊಳು ಸಿಂಹನಿರ್ಪಂತೆ ತಾಗಿ ತಳ್ತೆಸುವಾಗಳ್.

ಕಾರಮಳೆ ಕರೆದಂತೆಯುಂ, ಕಡಂದುರ ಹುಟ್ಟಿಯ ಕೆಣಕಿದಂತೆಯುಂ, ಕವಿದ ಕಾಲ ಬಾಯೊಳಂ ಜವನೊಕ್ಕಲಿಕ್ಕಿದಂತೆ ತೊತ್ತಳದುಳಿದು ...... ಕಟ್ಟಿದಲಗಂ ಕಿತ್ತು, ಕುರಿಯ ಹಿಂಡಂ ತೋಳ್ ಪೊಕ್ಕಂತೆಯುಂ, ಕರ್ಬುದೋಂಟವನಾನೆ ಪೊಕ್ಕಂತೆಯುಂ, ನಿಕ್ಕುರಳಿಲು ಪೊಕ್ಕು ದೋಳಹಿಂಡು ಕುತ್ತಿ, ನೂಂಕುತ್ತ ಬಪ್ಪಾಗಳು.

ಮಲೆದಿದಿರಾಂತ ಮಾರ್ವಲಮನಳ್ಕುರೆ ತಾಗಿ ಭುಜಪ್ರತಾಪದಿಂ
ದಲಗನೆ ಕಿರ್ತು ಪೊಯ್ಯೆ ನಿರತಂ ಕಣಕಾಲ್ ಮೊಳಕಾಲ್ ಮುಖಂ ಭುಜಂ
ತಲೆಗಳೆಯಾಗೆ ಸಂಬಳಿತಯೋಪಿನದೊಂದೆರಡಟ್ಟೆಯೋಡಲುಂ
ತೊಲಗದೆ ನಿಂದು ತಳ್ತಿರಿದರಿರ್ಬರುಮಾಹವರಂಗಭೂಮಿಯೊಳ್ ॥ ೨೩೦ ॥

ಅಂತವರಿಬ್ಬರುಂ ಪೋಗದೆ ನಿಂದುದಂ ಕಂಡು, ಪೊರಿದಾಳು ಕುದುರೆಯ ಮೊರ್ಬಂ ತಾಗಿಯೆಸಲ್ವರಿಯಲುಂ, ಕೋಲ್ ಕೊಂತಂಗಳ್ಗೂಡಾಗಿ ಬಿರ್ದು ಸುರಲೋಕ ಪ್ರಾಪ್ತರಾದರಿಬ್ಬರ ಪೆಣನಂ ಮೆಟ್ಟಿ ತುರುಪರಿಯಲವರಿಬ್ಬರಿಂ ಕಿರಿಯ ಬೊಪ್ಪಗಾವುಂಡ ತಮ್ಮಣ್ಣಂದಿರಿಬ್ಬರ ಕಳೇವರವಂ ಕಂಡು ಸೈರಿಸಲಾರದೆ ನೀಮಾದುದನಪ್ಪೆನಲ್ಲದೊಡೇಂ ತುರುವಂ ಮಗುಳ್ಚಿ ಬಪ್ಪೆ(ನೆಂದು) .... ಹಾಲ್ಗಟ್ಟದ ಬಯಲೊಳೊಡ್ಡನೊಡ್ಡಿದರಿಬಲಮಂ ...... ಕೊಂದು, ತುರುವಂ ಮಗುಳ್ಚಿ ಕೊಂಡುಬಂದಣ್ಣಂದಿರಂ ಸಂಸ್ಕಾರಿಸಿ, ಜಳದಾನಕ್ರಿಯೆಯಂ ಪರೋಕ್ಷವಿನಯಮುಮಂ ಮಾಡಿ, ಇರ್ಬರ್ಗಂ ಕಲ್ಲಂ ನಿರಿಸಿದಲ್ಲಿ ಮಂಗಲಮಹಾಶ್ರೀ ......

ಗೋಗ್ರಹಣದಲ್ಲಿ ಹೋರಾಡಿದ ಕನ್ನೆಯನ ವೀರಮರಣ :

ರಣದೊಳ್ ತಾಗಿದ ಸುಭಟರ
ಪೆಣಮಯಮಂ ಮಾಡಿದಾಗಳರಿಬಲಮೆಲ್ಲಂ
ಕಣೆಯ ಮಯವಾಗಿ ಕರೆದೊಡೆ
ಕಣೆಹಂಜರದಲ್ಲಿ ಕನ್ನ ಮರೆದೊರಗಿರ್ದಂ ॥ ೨೩೧ ॥

ಗೋಗ್ರಹಣದಲ್ಲಿ ಹೋರಾಡಿದ ರಾಮಗೌಡನ ವೀರಮರಣ :

ಸುರಿದರ್ ಪೂವಿನ ಮಳೆಯಂ
ಸುರ ದುಂದುಭಿಯೊಡನೆ ಶಂಖ ಕಹಳಾ ರವಮುಂ
ಬೆರಸು ಸುರಾಂಗನೆಯರ್ ತಾಂ
ಪಿರಿಯನನಾ ರಾಮಗವುಡನಂ ದಿವಕುಯ್ದರ್ ॥ ೨೩೨ ॥

ಗೋಗ್ರಹಣದಲ್ಲಿ ಹೋರಾಡಿದ ದೇಕಭೂಪತಿಯ ವೀರಮರಣ :

ತುರು ಪರಿದವೆಂಬ ಪುಯ್ಯಲ
ನೆರೆಯಾಲಿಸಿ ಕೇಳ್ದು ದೇಕಭೂಪತಿ ಬೇಗಂ
ಪೊರಮಟ್ಟು ಬಂದು ತಾಗಿದ
ನೆರವಿನ ದೋರ್ವಳದಾ ಖಳರನಾ ಕ್ಷಣದಿಂದಂ ॥ ೨೩೩ ॥

ಹೊತ್ತಗೆಯಟ್ಟವಣೆ ಕೋಲ್ಗ
ಳೆತ್ತಿದ ತೆರದಂತೆ ಸರದ ತಂದಲು ತನುವಂ
ತೆತ್ತಿರಲ್ಕಮರ ಕಾಂತಾ
ಜತ್ತಕಿಯರುಯ್ಯೆ ದೇಕಂ ನಾಕಕ್ಕೋದಂ ॥ ೨೩೪ ॥

ಗೆಳೆಯನಿಗಾಗಿ ಹೋರಾಡಿದ ಮಲ್ಲಿಗನ ವೀರಮರಣ :

ಒಡನುಂಡ ಕೆಳೆಯನಂ ಸಂ
ಗಡದಾಳಂ ಮೇಳದಾಳನನುವರದೆಡೆಯೊಳ್
ಬಿಡಲಗದೆಂದು ಬೋಸಿಗ
ನೊಡನಳಿದಂ ಮಲ್ಲಿಗಂ ಪ್ರತಾಪೋನ್ನತಿ(ಯಿಂ) ॥ ೨೩೫ ॥

ಕಳ್ಳರೊಡನೆ ಹೋರಾಡಿದ ಬಿನವನ ವೀರಮರಣ :

ತಾಗಿದೊಡೆ ಮುಳಿದು ಕಳ್ಳರ್
ಪೋಗದೆ ನಿಲ್ ನೆಲ್ಲೆನುತ್ತೆ ಕವಿತರೆ ಬಿನವಂ
ರಾಗಿಸಿ ಬೊಬ್ಬಿರಿದಳ್ಕದೆ
ನಾಗಂಗಳ ಕಂಡ ಗರುಡನಂತಾಂತಿರಿದಂ ॥ ೨೩೬ ॥

ಜವನುಂಡು ಕಾರಿದಂದದಿ
ನವಂದಿರಂ ಕೊಂದು ಬಿನವ ತಾಂ ಬಸವಳಿಯ
ಲ್ಕವನಂ ವಿಮಾನದೊಳ್ ವಾ
ಸವನ ಪುರಕ್ಕೊಯ್ದರಮರ ಗಣಿಕೆಯರೊಲವಿಂ ॥ ೨೩೭ ॥

ಗೋಗ್ರಹಣದಲ್ಲಿ ಹೋರಾಡಿದ ಚಟ್ಟೆಯನಾಯಕನ ವೀರಮರಣ :

ಚಟ್ಟನೃಪಾಳಕಂ ಬೆರಸು ಪಾಂಡ್ಯನುಮೋವದೆ ನೇಲಿವರ್ತಿಯಂ
ತೊಟ್ಟನೆ ಪಾಯ್ದು ಜೀವಧನಮೆಲ್ಲಮನಾಗಳೆ ಕೊಂಡು ಪೋಗೆ ಬೆ
ನ್ನಟ್ಟಿ ತೆರಳ್ಚಿ ತಳ್ತಿರಿದು ಪೆರ್ವಡೆಯಂ ತುರುವಂ ಮಗುಳ್ಚಿ ತಾಂ
ಚಟ್ಟೆಯ ನಾಯಕಂ ಪಡೆದು ಮೆಚ್ಚಿದ(ನಾ) ಸುರಕನ್ನೆಯರ್ಕಳಂ ॥ ೨೩೮ ॥

ಕಂಡದೊಳಿಂಡೆಯಾಡಿ ಬಿಸುನೆತ್ತರೊಳೋಕುಳಿಯಾಡಿ ಪೆಚ್ಚಿ ಮಾ
ರ್ಕೊಂಡೊಡನೆಚ್ಚ ಪೂಣಿಗರ ಪಂದಲೆಯಂ ಪೊಡೆಸೆಂಡನಾಡೆ ದೋ
ರ್ಗಂಡನಿವಂ ದಲೆಂದು ಪೊಸಮುತ್ತಿನ ಸೇಸೆಯನಿಕ್ಕಿ ಕೂಡೆ ಕೈ
ಕೊಂಡೊಡನೊಯ್ದರಚ್ಚರಸಿಯರ್ ಕಲಿ ಚಟ್ಟನನಾಜಿರಂಗದೊಳ್ ॥ ೨೩೯ ॥

ಯುದ್ಧದಲ್ಲಿ ಹೋರಾಡಿದ ಬೇಳೆಯನ ವೀರಮರಣ :

ಆಂತ ವಿರೋಧಿ ಸೇನೆಯನಗುರ್ಬಿನೊಳಾಂತಿರಿವಲ್ಲಿ ವೀರವಿ
ಕ್ರಾಂತ ಸರಾಳಿಗಳ್ ತನುವನುರ್ಚಲೊಡಂ ಶಿವಯೆಂದು ವೀರಸಿ
ದ್ಧಾಂತದ ಪುಸ್ತಕಂ ತವಣೆ ಕೋಲೊಳೊಳುರ್ವಿಸಿದಂತೆ ವೀರ ವಿ
ಕ್ರಾಂತವನಾಸೆವಟ್ಟು ಕಲಿ ಬೇಳೆಯನೆಯ್ದಿಧ ದೇವಲೋಕಮಂ ॥ ೨೪೦ ॥

ಯುದ್ಧದಲ್ಲಿ ಹೋರಾಡಿದ ಚಾವುಂಡನ ವೀರಮರಣ :

ಭೂತಳದಲ್ಲಿಯ ಭೋಗಂ
ತೀರ್ದುದು ಈತಂಗೆ ಮರ್ತ್ಯದಲಿರಬಾರದು
ಬೇಗಂ ತನ್ನರೆಯೆಂದಚ–
ಳೇಶ್ವರನಂದೊಪ್ಪುಗೊಂಡ ಚಾವುಂಡನುಮಂ ॥ ೨೪೧ ॥

ಮರೆದಿರ್ದನಂದು ಮರ್ತ್ಯದ
ಬಳಕೆಯ ನೆರೆದರಿದನಲ್ಲಿ ಮೋಕ್ಷಲಕ್ಷ್ಮಿಯಂ
ಸದುಗುರು ಲಕ್ಷ್ಮೀನಾಥಂ
ಇದಿರ್ಗೊಂಡಂ ಚಟ್ಟನಣುಗ ಚಾವುಂಡನುಮಂ ॥ ೨೪೨ ॥

ಕಟ್ಟಿಸಿದುಪ್ಪರನುಡಿಯಂ
ಎತ್ತಿಸಿದಂ ಅಭವನೊಲ್ದು ನಂದಿಯ ಸಿಂದಂ
ಹೋ ಉಘೇ ಎಂದೆನುತುಂ
ವೀರೇಶ್ವರನೊಪ್ಪುಗೊಂಡ ಚಾವುಂಡನುಮಂ ॥ ೨೪೩ ॥

ಯುದ್ಧದಲ್ಲಿ ಹೋರಾಡಿದ ಕಲಿರಾಯನ ವೀರಮರಣ :

ಸುರಿವ ಸರಲ್ಗೆ ಪಾಯ್ವ ಚತುರಂಗದಳಕ್ಕಣೆದಾರ್ದು ನೂಂಕುವಾ
ಸುರತರಮಪ್ಪ ಸಿಂಧುರ ಘಟಾವಣಿಗಳ್ಕದೆ ಕಾದಿ ಬೀರರ
ಚ್ಚರಿವಡೆ ಮಾಚಗೌಂಡನ ಮಗಂ ಕಲಿರಾಯನ ಕೀರ್ತಿಯಂ ವಸುಂ
ಧರೆ ಪೊಗಳ್ವನ್ನೆಗಂ ಪಡೆದನಾಹವದೊಳ್ ರಣರಂಗಶೂದ್ರಕಂ ॥ ೨೪೪ ॥

ಎತ್ತಿದ ಮೊನೆಯೊಳ್ ರಾಯಂ
ಕುತ್ತಲ್ ಕಾಲಾಳುಮಶ್ವಮಂ ಮೇಲಾಳಂ
ತೆತ್ತಮುರುಳ್ದೊಡೆ ಪೆಣನಂ
ಬಿತ್ತಿದ ತೆರನಾಯ್ತು ಸುರಿಯೆ ಪೂಮಳೆ ನಭದಿಂ ॥ ೨೪೫ ॥

ಕರಿತುರಗ ವೀರಭಟರಂ
ಧುರದೊಳ್ ತಳ್ತಿರಿದು ಕೊಂದ ರಾಯನನಾಗಳ್

ಸುರಗಣಿಕೆಯರುಯ್ದರ್ ವಿ
ಸ್ತರದಿಂ ಪುಷ್ಪಕ ವಿಮಾನಮೇರಿಸಿ ನಭದೊಳ್ ॥ ೨೪೬ ॥

ಯುದ್ಧದಲ್ಲಿ ಹೋರಾಡಿದ ಸಾವುಳನ ವೀರಮರಣ :
ಪರಿಕಿಸೆ ತನ್ನ ತಂದೆಯ ಕುಳಕ್ರಮಮಂ ನಮಗಾಜಿರಂಗದೊಳ್
ಪರಿಭವಮಾಗಿ ಮುಂತಡಿಯ ಪಿಂತೆಯಿಟ್ಟಡೆ ನಮ್ಮ ಪೂರ್ವದಾ
ಪುರುಷರು ನಾಕವಾಸಿಗಳಧೋಗತಿಗೆಯ್ದುವರೆಂದು ಸಾವಳಂ
ಪರಿದರಿದಲ್ಲಿಯಂಬುಧಿಯನಂಬುಧಿ ತಾಪವೊಲೆಯ್ದಿ ತಾಗಿದಂ ॥ ೨೪೭ ॥

ಸುರವಧುವಿಕ್ಕಲದೊಳ್ ಸೀ
ಗುರಿ ಚಾಮರವಿಕ್ಕೆ ರತ್ನಖಚಿತ ವಿಮಾನಂ
ಬರಲೇರಿ ಸಾವುಳಂ ತಾಂ
ಹರಭವನಕ್ಕೆಯ್ದೆ ಕೂಡಿದಂ ಶಂಕರನಂ ॥ ೨೪೮ ॥

೧೩. ವೇಳೆವಾಳಿ ಮರಣ

ರಾಜನ ಪರವಾಗಿ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುವ ಸೈನಿಕರು ಜೋಳವಾಳಿಯಾದರೆ, ಅವನಿಗೆ ಪುತ್ರ ಸಂತಾನ, ಯುದ್ಧ ವಿಜಯಗಳಂಥ ಶುಭವನ್ನು ಹಾರೈಸಿ, ಇಲ್ಲವೆ ಅವನ ಮರಣ ದುಃಖದಲ್ಲಿ ಸಹಾನುಭೂತಿಯನ್ನು ತೋರಿ, ಪ್ರಜ್ಞಾಪೂರ್ವಕ ಪ್ರಾಣತ್ಯಾಗ ಮಾಡಿಕೊಳ್ಳುವವರು ವೇಳೆವಾಳಿಗಳು. ತೀರ ಪ್ರಾಚೀನಕಾಲದಲ್ಲಿ ರಾಜನೊಂದಿಗೆ ಸುಡಿಸಿಕೊಳ್ಳುವವರಿಗೆ 'ವೇಳೆವಡಿಚ' ಎಂದೂ, ಹುಗಿಸಿಕೊಳ್ಳುವವರಿಗೆ 'ಕಿಳ್ಗುಂಟೆ' ಎಂದೂ ಕರೆಯುತ್ತಿದ್ದರು. ಮುಂದಿನ ದಿನಗಳಲ್ಲಿ ಈ ಎರಡೂ ವಿಧಾನಗಳನ್ನನುಸರಿಸುವವರಿಗೆ 'ಲೆಂಕ' ಎಂದು ಕರೆಯುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಇವರಿಗೆ 'ಗರುಡ' ಎಂಬ ಬೇರೊಂದು ಪದ ಬಳಕೆಗೆ ಬಂದಂತಿದೆ. ವಂಶಪಾರಂಪರ್ಯವಾಗಿ ಈ ಮರಣ ಸ್ವೀಕಾರಮಾಡುವವರು 'ಅನ್ವಯಾಗತ ವೇಳೆವಾಳಿಗಳು'.

ಚಾಳುಕ್ಯ ಪರಹಿತರಾಜನ ವೇಳೆವಾಳಿ ಶಂಭು :
ಶ್ರೀ ಜಯಯುತಂಗೆ ಪರಹಿತ
ರಾಜಂಗೆ ಚಾಳುಕ್ಯವಂಶದಾತಂಗೆ ಲಸ
ದ್ರಾಜಿತ ಗುಣಂಗೆ ಶಂಭು
ವಿರಾಜಿತಮತಿ ವೇಳೆಗೊಂಡ ಭಯರಹಿತ ಮನಂ ॥ ೨೪೯ ॥

ಪೊಗಳಲ್ಕಳುಂಬಮಪ್ಪೊ
ಳ್ಪುಗಳನೆ ತನಗವನೆ ಶಾಶ್ವತಂ ಮಾಡಿ ಧಗ
ದ್ಧಗಿತ ಶಿಖಿ ಸೆಕೆಯ ಕೊಳೆ ನಗೆ
ಮೊಗದಿಂ ಶಂಭುವನೆ ಶಂಭು ನೆನೆಯುತ್ತಿರ್ದಂ ॥ ೨೫೦ ॥

ಮುನ್ ನೆಗಳ್ದ ವೇಳೆವಡಿಚರು
ಮಿನ್ನಪ್ಪೊರುಮೀಗಡುಳ್ಳೊರುಂ ಬಗೆವೊಡವರ್
ನಿನ್ನನ್ನರೆ? ನಿನ್ನನ್ನರೆ?
ನಿನ್ನನ್ನರೆ? ನಿನಗೆ ನೀನೆ ದೊರೆಯಯ್ ಶಂಭೂ ॥ ೨೫೧ ॥

ಉರಿಗೊಡ್ಡಿ ಮೆಯ್ಯನಳ್ಕದೆ
ಪರಮ ತಪೋಧನ ನಿವಿರ್ತಿಯಿಂದಳಿದು ಮಹೇ
ಶ್ವರನನೆ ಚಿಂತಿಸಿ ದಿವ್ಯಾ
ಪ್ಸರೆಯರೊಡ ನೆರೆದು ಶಂಭು ಸಂತೋಷದಿಳ್ದನ್ ॥ ೨೫೨ ॥

ಹೊಯ್ಸಳ ಎರಡನೆಯ ಬಲ್ಲಾಳನ ಲೆಂಕವಾಳಿ ಕುವರಲಕ್ಷ್ಮ :
ಅರಮನೆ ತೊಟ್ಟಿಲ್ ನೆಗಳ್ದಾ
ದರಮದು ಬಾಯ್ವೆಣ್ಣೆ ದಾದಿಯರ್ ತನ್ನಂತಃ
ಪುರಮೆನೆ ಬಲ್ಲಾಳನೃಪಂ
ಪೊರೆದ ಮಗಂ ಕುವರಲಕ್ಷ್ಮ ದಂಡಾಧೀಶಂ ॥ ೨೫೩ ॥

ತೊಡರುಂ ಪಾಪೆಗಳುಂ ಝುಣಜ್ಝಣ ರವಂ ಕೆಯ್ಗಗ್ಣೆ ವಾಮಾಂಘ್ರಿಯೊಳ್
ನುಡಿಯುತ್ತಿರ್ಪುವು ಕೊಟ್ಟ ಭಾಷೆಗಿವನೊಳ್ ಮತ್ತಾರುಮೇನಾರ್ಪರೇ
ನುಡಿದಂತಣ್ಮಲದೆಂದುಮೆಂಬ ನುಡಿಯಂ, ಬಲ್ಲಾಳದೇವಂಗೆ ಕೈ
ಪಿಡಿಯಂ ಕಟ್ಟಿದ ಗೇಣುಮೀತನೆ ವಲಂ ದಂಡೇಶ ಲಕ್ಷ್ಮೀಧರಂ ॥ ೨೫೪ ॥

ತಾರಗೆಯಂತೆ ತಳ್ತೆಸೆವ ಮುತ್ತಿನ ಮೊತ್ತದಿನಾದ ಗಂಡಪೆಂ
ಡಾರಮುಮಿಕ್ಕೆ ಚಂಪಕ ನವೋದ್ಗಮ ದಾಮದ ಚೆಲ್ವನಾಳ್ದು ವಾ
ಮಾರುಣಪಾದದೊಳ್ ಪೊಳೆವ ಪೊಂದೊಡರುಂ ಪತಿಭಕ್ತಿಯುಕ್ತಿ ವಿ
ಸ್ತಾರ ಕುಮಾರಲಕ್ಷ್ಮ ರಥಿನೀಪತಿಗೊಪ್ಪುಗುಮೊಪ್ಪವನ್ಯರೊಳ್ ॥ ೨೫೫ ॥

ಇಲ್ಲದ ಸಲ್ಲದ ಭಾಷೆಗೆ
ಕಲ್ಲಂ ನಿರಿಸುವರನುರದೆ ನಗುವವೊಲಿರ್ಕುಂ
ಪಲ್ಲವಿಸಿ ಕುವರಲಕ್ಷ್ಮನ
ಕಲ್ಲ ಕವಲ್ತೆಸೆವ ಕಾಂತಿ ದಿಗ್ಭಿತ್ತಿಗಳೊಳ್ ॥ ೨೫೬ ॥

ತನ್ನೊಡನೆ ತೊರೆದ ಸುಭಟರ,
ತನ್ನ ಮನಃಪ್ರಿಯೆಯ, ತನ್ನ ಪರಮಾಯುಷ್ಯಂ
ತನ್ನಾಳ್ದಂಗಾಯ್ತೆನಿಸಿದ
ನೇನ್ನೆಟ್ಟನೆ ಕಲಿಯೊ ಕುವರಲಕ್ಷ್ಮಚಮೂಪಂ ॥ ೨೫೭ ॥

ಎಡಗಾಲೊಳ್ ತೊಡರಂ ತೊಡರ್ಚೆ ಪತಿಯಂ ಬೇಳ್ಮಾಡಿ ನಿನ್ನೊಂದು ಪಿಂ
ಬಡಿನೊಳ್ ನಿಲ್ವವಳಲ್ಲೆನೆಂದು ಸುಖದಿಂದುಂಡುಟ್ಟು ಕಾಲಂ ಕರು
ತ್ತಡಸಲ್ ಪುಚ್ಚಳಿವನ್ಯ ಕಾಮಿನಿಯರಂ ರೋಡಾಡುವಂತಿಕ್ಕಿದಳ್
ತೊಡರಂ ಸುಗ್ಗಲದೇವಿ ತನ್ನೆಡದ ಪಾದಾಂಭೋಜದೊಳ್ ಲೀಲೆಯಿಂ ॥ ೨೫೮ ॥

ಇದು ಬಲ್ಲಾಳ ನೃಪಾಳಕಂಗೆ ಪಿರಿದುಂ ನಿತ್ಯತ್ವಮಂ ಮಾಳ್ಪುದ
ಭ್ಯುದಯಕ್ಕಾಗರಮೆಂದು ಬಣ್ಣಿಸೆ ಜಗಂ ಭಾನ್ವಚ್ಛಿಲಾಸ್ತಂಭಮಂ
ಸದಳಂಕಾರದ ವೀರಶಾಸನಮನೀ ದಂಡೇಶ ಲಕ್ಷ್ಮೀವರಂ
ಸುದತೀ ಸಂಯುತನೇರಿದಂ ಪತಿಹಿತವ್ಯಾಪಾರಮಂ ತೋರಿದಂ ॥ ೨೫೯ ॥

ಧರೆಗೆ ನೆಗಳ್ತೆವೆತ್ತೆಸೆವ ಶಕ್ತಿಗೆ ಶೂದ್ರಕ ಭೂಭುಜಂಗೆ ಭಾ
ಸುರಮೆನೆ ಭಾಷಿತಂ ನೆರಪುವಗ್ಗದ ಬೀರರದಯ್ವದಯ್ವದಿಂ
ಬರೆ, ಸುಭಟೋತ್ತಮರ್ ಕುವರ ಲಕ್ಷ್ಮಚಮೂಪತಿಗಿತ್ತು ಭಾಷೆಯಂ
ಧರೆ ಪೊಗಳ್ವನ್ನೆಗಂ ನೆರಪುವಗ್ಗದ ವೀರರದೊಂದು ಸಾಸಿರಂ ॥ ೨೬೦ ॥

ಪೊರೆದಾಳ್ದನೊಡನೆ ಸಾಯದೆ
ಪೆರಗುಳಿದುಂ ತೊರೆದು ಸತ್ತವನ ವೇಳೆ ದಲಾ
ವರಿಯೆವದನೆಂಬ ಗಂಡರ್
ತೊರೆದರ್ ಕಲಿ ಕುವರಲಕ್ಷ್ಮನೊಡನತಿಸುಭಟರ್ ॥ ೨೬೧ ॥

ಕಲ್ಲವ್ವೆ ಜವನವ್ವೆ ಉಮ್ಮವ್ವೆಯರ ಅನ್ವಯಾಗತ ವೇಳೆವಾಳಿ ಮರಣ :

ಅತಿಧೃತಿಯಿಂದವಂಗಯಿಸಿ ಕನ್ನೆಯನಾಯಕನಿರ್ದು ನೋಡೆ, ಸಂ
ತತಿ ಬೆರಗಾಗೆ, ಬಂಧುಜನ ಆ ! ಎನೆ, ಲೋಕದ ಪೆಂಡಿರೆಲ್ಲವಾ
ಯತಿಕೆಗೆ ಮೆಚ್ಚಿ, ಬಿತ್ತರಿಸೆ, ಕಲ್ಲವೆಯಾ ಜಮನವ್ವೆಯುಮ್ಮವಾ
ರತಿಗಳನೆತ್ತಿದರ್ ತೊಳಪ ಪಂದಲೆಯಿಂ ಪತೆಮೆಚ್ಚಿ ಮೂವರುಂ ॥ ೨೬೨ ॥

೧೪. ಮಹಾಸತಿ ಮರಣ

ರಾಜನ ಮರಣ ಸಂದರ್ಭದಲ್ಲಿ ಪುರುಷರು ಆತ್ಮ ಬಲಿಯಾಗುತ್ತಿದ್ದಂತೆ, ಪತಿಯ ಮರಣ ಸಂದರ್ಭದಲ್ಲಿ ಸತಿಯರು ಆತ್ಮಬಲಿಯಾಗುತ್ತಿದ್ದರು. ಈ ಅರ್ಥದಲ್ಲಿ ಇವರು ಗಂಡನ ವೇಳೆವಾಳಿಗಳು. ಇವರು ಗಂಡನ ಶವದೊಡನೆ ಸಾಯುತ್ತಿದ್ದುದು 'ಸಹಗಮನ', ದೂರದಲ್ಲಿ ಗಂಡ ಸತ್ತ ಸುದ್ಧಿ ಕೇಳಿ ಸಾಯುತ್ತಿದ್ದುದು 'ಅನುಗಮನ'. ಈ ಎರಡೂ ಸಂದರ್ಭದ ಸ್ಮಾರಕಗಳೇ ಮಾಸ್ತಿಶಿಲೆಗಳು.

ದೇಕಬ್ಬೆಯ ಅನುಗಮನ :

ಚಾರುತರಿತ್ರೆ ನಯವಿನಯಾಕಾರೆ ಗೋತ್ರಪವಿತ್ರೆ ಸುಶೀಳಯುಕ್ತೆ
ನಾರೀಜನರನ್ನಮೆನಿಪ ಪೊನ್ನಬ್ಬೆಗಂ ರವಿಗಂಗಂ ಪುಟ್ಟಿದ ದೇಕಬ್ಬೆ
ಯರಂ ನವಲೆನಾಡಧಿಪತಿ ಕುರುವಂದಕುಲದ ಪೆರ್ವಯಲಾತನೇಚಂಗೀಯೆ
ವಾರಿಜಾನನೆ ವಿನಯಚಿಂತಾಮಣಿ ಪತಿಹಿತೆಯೊಡಗೂಡಿ ಸುಖದಿನಿಳ್ದು ॥ ೨೬೩ ॥

ಜೆಟ್ಟಿಗನೆನೆ ನೆಗರ್ದಹಿತ ಘ
ರಟ್ಟಂ ಸುಖಮಿಳ್ದು ತನ್ನ ದಾಯಿಗರಂ ತ
ಳ್ತೊಟ್ಟಜೆಯಿರಿದಡವನಂ
ನೆಟ್ಟನೆ ತಲೆಕಾಡಲುಯ್ದು ಕೊಂದಂ ನರಪಂ ॥ ೨೬೪ ॥

ಕಲಿಕಾಲ ವೇಳನೆನಿಸಿದ
ಕಲಿಚಾಗಿಯನಿರಿದು ಕೊಂದರೆಂಬುದು ಮಾತಂ
ಲಲಿತಾಂಗಿ ಕೇಳ್ದು ರವಿಗನ
ಕುಲದೀಪಕಿ ಸಾಯಲೆಂದು ಕೊಂಡಕೆ ನಡೆದಳ್ ॥ ೨೬೫ ॥

ತಂದೆಯುಮಬ್ಬೆಯುಮೊಡನೆಯೆ
ಬಂಧುಗಳುಂ ಬಂದು ಮಗಳೆ ಸಾಯದೆ ಮಾಣ್ ನೀ
ನೆಂದೆಲ್ಲಂ ಕಾಲ್ವಿಡಿದಡ
ನಿಂದಿತೆ ದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್ ॥ ೨೬೬ ॥

ನುಗುನಾಡಧಿಪತಿ ರವಿಗನ
ಮಗಳಾಗಿಯುಮಂತೆ ನವಿಲೆನಾಡಧಿಪತಿಗಾಂ
ನೆಗಳೆ ಸತಿಯಾಗಿ ಬಾಳ್ವುದು
ಬಗೆದರ್ಪನೆ ಕೊಟ್ಟಕೊಂಡ ಮನೆಯೆಸಮಳಿಯಲ್ ॥ ೨೬೭ ॥

ಎಂದು ಪರಿಚ್ಛೇದಿಸಿ ನಯ
ದಿಂದಂ ದೇವಂಗೆ ತೋಂಟ ಖಂಡುಗ ಮಣ್ಣಂ
ನಂದಾದೀವಿಗೆಗಿತ್ತರ
ವಿಂದಾನನೆ ಸಲೆ ನಿವೇದ್ಯಕೆಂದನುನಯದಿಂ ॥ ೨೬೮ ॥

ನೆರೆದೆಲ್ಲಂ ಬೇಡ ಮಾಣೆಂದಡೆ ನುಡಿಯದಿರಿಂ ಪೋಗಿಮಾಂ ಮಾಣೆನೆಂದಾ
ದರದಿಂದಂ ಭೂಮಿ ಪೊಂಪುಟ್ಟಿಗೆ ಪಸು ಧನಮಂ ನೀಡುತುಂ ..... ದೇ
ವರದೇವಂಗಳ್ತಿಯಿಂ ಕೆಯ್ಮುಗಿದುರಿವುರಿಯಂ ಪೊಕ್ಕು ದೇಕಬ್ಬೆ ತನ್ನಂ
ಧರೆಯೆಲ್ಲಂ ಮೆಚ್ಚಿ ನಿಚ್ಚಂ ಪೊಗಳೆ ನೆಗಳುತುಂ ದೇವಲೋಕಕ್ಕೆವೋದಳ್ ॥ ೨೬೯ ॥

ಶ್ರೀರಮಣಿ ಗೌರಿ ಶಚಿ ಧಾರಿಣಿಯ ಪುತ್ರಿ ರತಿ
ಭೂರಮಣಿಯಂದದ ಸುರೂಪ ವರವೊಳ್ವಾ
ಧಾರೆ ಜಯಧಾರೆ ಜಸಧಾರೆ ನಯಧಾರೆ ಭಯ
ಹಾರೆ ಪತಿಭಕ್ತೆ ಧೃತಶಕ್ತಿಯನೆ ಸಂದೀ
ವೀರನಿಧಿಯಂ ಚಲದ ವಾರಿನಿಧಿಯಂ ಗುಣದ
ಚಾರುನಿಧಿಯಂ ನೆಗಳ್ದ ದೇಕಲೆಯನಿಂತೀ
ನಾರಿಜನರನ್ನಮನದಾರೊ ಮರೆವರ್ ಸಕಳ
ಧಾರಿಣಿಯೊಳಿಂತು ವರಕಾಂತೆ ದೊರೆಯಾವಳ್ ॥ ೨೭೦ ॥

ಪಂಡಿತಾಶ್ರಯಂ ನುಗುನಾಡ ರಾಘವಂ ಮುನಿವರ ಸಿಂಘ ಮಾಚಕಹಾವಳಂ
ಚಂಡವಿಕ್ರಮಂ ಕುಡಿಯರ ವಲ್ಲಭಂ ಕಲಿಕಾಲಕರ್ಣಂ ಮಚ್ಚರಿಪವರ
ಗಂಡಂ ವಂದಿಚಿಂತಾಮಣಿ ಶಿವಪಾದಶೇಖರಂ ನಿಜಸುತೆಗನುರಾಗದಿಂ
ಮಂಡಲಕೆಲ್ಲಂ ಪಡಿಛಂದಮಾಗೆ ಶಿಲಾಸ್ತಂಭ ಶಾಸನಮಾಗೆ ನೆಟ್ಟಂ ॥ ೨೭೧ ॥

ಮಹಾದೇವಿಯ ಸಹಗಮನ :

ಅನುಪಮ ದಾನಿ ಗಂಡುಗಲಿ ಸಜ್ಜನವಂದ್ಯನನೂನಕೀರ್ತಿ ಮಾ
ನಿನಿವರನಾಥ ಧರ್ಮಧರನುದ್ಧಟವೈರಿ ವಿರೋಧಿ ಮಾರದೇ
ವನ ರಮಣೀ ಮನೋಹರಿ ಮಹಾಸತಿ ಶೀಲಗುಣೌಘಭೂಮಿಕಾ
ಮಿನಿ ಮಹದೇವಿ ತನ್ನ ವರನೊಳ್ ಪ್ರತಿಪನ್ನದಿ ಸಂದಳಾ ದಿವಂ ॥ ೨೭೨ ॥

೧೫. ಸಲ್ಲೇಖನ ಮರಣ

ನೈಸರ್ಗಿಕವಾಗಿಯೋ, ಅನೈಸರ್ಗಿಕವಾಗಿಯೋ ಮರಣ ಸಮೀಪ ಬಂದ ಸಂದರ್ಭದಲ್ಲಿ ಉಪವಾಸವ್ರತ ಹಿಡಿದು ಸಾಯುವುದು, ಜೈನ ಧರ್ಮದ ಒಂದು ಮುಖ್ಯ ಅಂಶವಾಗಿದ್ದು, ಇದನ್ನು 'ಸಲ್ಲೇಖನ ಮರಣ' ಎನ್ನುತ್ತಾರೆ. ಹೀಗೆ ಮರಣವನ್ನು ಪ್ರಜ್ಞಾಪೂರ್ವಕ ಸ್ವಾಗತಿಸಿ ನಿಧನರಾದ ಗೃಹಸ್ಥಜೀವನದ ಸ್ತ್ರೀ–ಪುರುಷರ, ಸನ್ಯಾಸಜೀವನದ ಮುನಿ–ಕಂತಿಯರ ಸ್ಮಾರಕಗಳೇ 'ನಿಷಧಿ ಶಿಲೆ'ಗಳು.

ನಂದಿಸೇನಮುನಿಯ ಸಲ್ಲೇಖನ :

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೋಲ್ ಮಂಜುವೋಲ್ ತೋರಿ ಬೇಗಂ
ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚೆನಾನೀ ಧರಣಿಯುಳಿರವಾನೆಂದು ಸನ್ಯಸನಂಗೆ
ಯ್ದುದು ಸತ್ವನ್ ನಂದಿಸೇನಪ್ರವರಮುನಿವರನ್ ದೇವಲೋಕಕ್ಕೆ ಸಂದಾನ್ ॥ ೨೭೩ ॥

ಜಕ್ಕಿಯಬ್ಬೆಯ ಸಲ್ಲೇಖನ :

ಸಲೆ ಮೋಹಧ್ವಾಂತದಿಂದಂ ಮುಗಿದ ಹೃದಯನಿರೇಜಮಂ ಜೈನವಾಕ್ಯಾ
ಮಲಭಾನುಜ್ಯೋತಿಯಿಂದಂ ವಿಕಸಿಸಿ, ಅದರೊಳ್ ದೇವದೇವೇಶನಂ ನಿ
ಶ್ಚಲಮಾಗಿರ್ದಾತ್ಮಸಂತೋಷದೊಳ್ ಜಿನಪನಂ ಜಾನಿಸುತ್ತ, ಲತಾಕೋ
ಮಲೆ ಬಿಟ್ಟಳ್ ಜಕ್ಕಿಯಕ್ಕಂ ತನುವನುಳಿದರಾರ್ ಪೋಲ್ವರ್ ತನ್ನಂ ॥ ೨೭೪ ॥

ಹರ್ಯಲೆಯ ಸಲ್ಲೇಖನ :

ಅನುಪಮಪುಣ್ಯಭಾಜನೆ ಜಿನೇಂದ್ರಪದಾಬ್ಜವಿಲೀನಚಿತ್ತೆ ಪಾ
ವನ ಸುಚರಿತ್ರೆ ಹರ್ಯಲೆ ಮಹಾಸತಿ ತನ್ನವಸಾನಕಾಲದೊಳ್
ಮನುಜ ಮನೋಜನಂ ಕರೆದು ಬೂವಯನಾಯಕ ಕೆಮ್ಮಗೆನ್ನ ನೀಂ
ಕನಸಿನೊಳಪ್ಪೊಡಂ ನೆನೆಯದಿರ್ ನೆನೆ ಶಾಶ್ವತಮಪ್ಪ ಧರ್ಮಮಂ ॥ ೨೭೫ ॥

ಎನಗನುಮೋದನ ಪುಣ್ಯಂ
ನಿನಗಂ ನಿಸ್ಸೀಮಮಪ್ಪ ಪುಣ್ಯಂ ಸಾರ್ಗುಂ
ಮನವೊಸೆದು ಮಾಡಿಸೊಂದಂ
ಜಿನಗೃಹಮಂ ಬೂವಿದೇವ ಧರ್ಮಧುರೀಣಾ ॥ ೨೭೬ ॥

ತದನಂತರಮಭಿಷವಮಂ
ಮುದದಿಂ ಜಿನಪತಿಗೆ ಮಾಡಿ ಗಂಧೋದಕಮಂ
ಸದಮಳ ಚರಿತ್ರೆ ಕೊಂಡಳ್
ಬೆದರಿಪೆನಘ ಬಲಮನೆಂಬೊಂದುತ್ಸವದಿಂದಂ ॥ ೨೭೭ ॥

ತೊಳೆದು ಜಿನೇಂದ್ರಚಂದ್ರಪದ ಸನ್ನಿಧಿಯೊಳ್ ಪದ ಪಂಚಕಂಗಳಂ
ಮರೆಯದೆ ಭೋರನುಚ್ಚರಿಸುತಂ ನೆರೆ ಸುತ್ತಿದ ಮೋಹಪಾಶಮಂ
ಪರಿದು ಜಗಜ್ಜನಂ ಪೊಗಳೆ ಹರ್ಯಲೆ ನಾರಿ ಸಮಂತು ಸೈಪು ಕ
ಣ್ದೆರೆದವೊಲೇಂ ಸಮಾಧಿವಿಧಿಯಿಂದಿರದೆಯ್ದಿದಳಿಂದ್ರಲೋಕಮಂ ॥ ೨೭೮ ॥

ಬರವಂ ಕೇಳ್ದಮರಾವತೀಪುರದ ದೇವೀಸಂಕುಲಂ ಬಂದು, ನೂ
ಪುರಮಂ ಮುತ್ತಿನ ಹಾರಮಂ ಕಟಕಮಂ ಕೇಯೂರಮಂ ವಜ್ರದುಂ
ಗುರಮಂ ಮಾಣಿಕದೋಲೆಯಂ ತುಡಿಸಿ, ಬೇಗಂ ದೇವಿ ನೀನೇರು ರಾ
ಗರಸಂ ಕೆಯ್ಮಿಗಲೀ ವಿಮಾನಮನೆನುತ್ತುಂ ತಂದವರ್ ಸಾರ್ಚಿದರ್ ॥ ೨೭೯ ॥

ಏರಿ ವಿಮಾನಮಂ ಬರೆ ಸುರಾಂಗನೆಯರ್ ನಳಿತೋಳ ನುಣ್ಬೊಗರ್
ತೋರುವಿನಂ ಮಹೋತ್ಸವದೆ ಸೇಸೆಯನಿಕ್ಕೆ ಸುರಾನಕಸ್ವನಂ

ಮೀರೆ ಘನಾಘನಧ್ವನಿಯನೆತ್ತಿದ ಸತ್ತಿಗೆ ಚಂದ್ರಬಿಂಬಮಂ
ಬೀರಿ ವಿಲಾಸದಿಂ ಪಿಡಿದು ಚಾಮರಮಿಕ್ಕೆ ಸಮಂತು ಪೊಕ್ಕಳಾ
ನೀರೆ ಮಹಾನುಭಾವೆ ಸತಿ ಹರ್ಯಲದೇವಿ ಸುರೇಂದ್ರಲೋಕಮಂ ॥ ೨೮೦ ॥

ಶಾಂತಲೆಯ ತಾಯಿ ಮಾಚಿಕಬ್ಬೆಯ ಸಲ್ಲೇಖನ :

ಅರಸಿ ಸುರಗತಿಯನೆಯ್ದಿದ
ಳಿರಲಾಗೆನೆಂದು ಬಂದು ಬೆಳಗೊಳದಲು ದು
ರ್ಧರ ಸನ್ಯಾಸನದಿಂ
ಪರಿಣತೆ ತಾಯಿ ಮಾಚಿಕಬ್ಬೆ ತಾನುಂ ತೊರೆದಳ್ ॥ ೨೮೧ ॥

ಅರೆಮುಗುಳ್ದಿರ್ದ ಕಣ್ಮಗ್ಗಳೋದುವ ಪಂಚಪದಂ ಜಿನೇಂದ್ರನಂ
ಸ್ಮರಿಯಿಸುವೋಜೆ ಬಂಧುಜನಮಂ ಬಿಡಿಪುನ್ನತಿ ಸನ್ಯಸಕ್ಕೆವಂ
ದಿರಲೊಸೆದೊಂದು ತಿಂಗಳುಪವಾಸದೊಳಿಂಬೆನೆ ಮಾಚಿಕಬ್ಬೆ ತಾಂ
ಸುರಗತಿಗೆಯ್ದಿದಳ್ ಸಕಳಭವ್ಯರ ಸನ್ನಿಧಿಯೊಳ್ ಸಮಾಧಿಯಿಂ ॥ ೨೮೨ ॥

ಪೆಂಡಿರ್ ಸನ್ಯಾಸನಂಗೊಂಡವರೊಳಗಿನಿತಂ ಬಲ್ಲರಾರೆಂಬಿನಂ ಕೈ
ಕೊಂಡಾಗಳು ಘೋರ ವೀರಬ್ರತ ಪರಿಣತೆಯಂ ಮೆಚ್ಚಿ ಸಂತೋಷದಿಂದಂ
ಪಾಂಡಿತ್ಯಚಿತ್ತದೊಳ್ ತಳ್ತಿರೆ ಜಿನಚರಣಾಂಭೋಜಮಂ ಭಾವಿಸುತ್ತಂ
ಕೊಂಡಾಡಲು ಧಾತ್ರಿ ತನ್ನಂ ಸುರಗತಿವಡೆದಳ್ ಲೀಲೆಯಿಂ ಮಾಚಿಕಬ್ಬೆ ॥ ೨೮೩ ॥

೧೬. ಪವಾಡ–ದಿವ್ಯ–ನಂಬಿಕೆ

ಪವಾಡ–ದಿವ್ಯ–ನಂಬಿಕೆ ಭಾರತೀಯರ ಬದುಕಿನ ಭಾಗವಾಗಿ ಬಂದಿವೆ. ಶಾಸನಗಳಲ್ಲಿಯೂ ಕಂಡು ಬರುವ ಇಂಥ ವಿರವರಗಳು ನಮ್ಮ ಪ್ರಾಚೀನರ ಬದುಕಿನ ಒಂದು ಮುಖವನ್ನು ಪ್ರಕಟಿಸುತ್ತವೆ.

ಪ್ರಮಥಗಣಂಗಳ ಅದ್ಭುತಗಳು :

ಕರಕಮಳಂಗಳಂ ಮುರಿದುಮಾಪತಿಗೇರಿಸಿ ಮೀಂಟಿ ಕಂಗಳಂ
ಹರನ ಶಿಖಾಗ್ರದೊಳ್ನಿರಿಸಿ ದಂಡೆಗರುಳ್ಗಳೊಳೆಡೆಯಂ ಭಯಂ
ಕರಮೆನೆ ಮಾಡಿ ಶಂಕರನನರ್ಚಿಸಿ ಪಂದಲೆಯಿಂ ನಿವಾಳಿಯಂ
ಪುರಮಥನಂಗೆ ಕೊಟ್ಟು ಮಗುಳ್ದುಂ ಪಡೆವರ್ ಪ್ರಮಥರ್ಕಳದ್ಭುತಂ ॥ ೨೮೪ ॥

ಅತ್ತಿಮಬ್ಬೆ – ಮಂತ್ರಿ ಗಂಗರಾಜನ ಪವಾಡಗಳು :

ಜಿನಧರ್ಮಾಗ್ರಣಿಯತ್ತಿಮಬ್ಬರಸಿಯಂ ಲೋಕಂ ಗುಣಂಗೊಳ್ವುದೇ
ಕೆನೆ ಗೋದಾವರಿ ನಿಂದ ಕಾರಣದಿನೀಗಳ್ ಗಂಗದಂಡಾಧಿನಾ
ಥನುಮಂ ಕಾವೇರಿ ಪೆರ್ಚಿ ಸುತ್ತಿ ಪಿರಿದುಂ ನೀರೆತ್ತಿಯುಂ ಮುಟ್ಟಿತಿ
ಲ್ಲೆನೆ ಸಮ್ಯಕ್ತ್ವದ ಪೆಂಪನೇಂ ನೆರೆಯೆ ಬಣ್ಣಿಪ್ಪಣ್ಣನೇವಣ್ಣಿಪಂ ॥ ೨೮೫ ॥

ಕುರುಗೋಡ ರಾಚಮಲ್ಲನ ಶಿವಲೋಕ ಪ್ರವೇಶ :

ಧರೆಗತ್ಯಂತ ಚೋದ್ಯಾವಹಮೆನೆ ಶಿವಲಿಂಗಾರ್ಚನಂ ಮಾಡಿ, ಪ್ರಿಥಿವೀ
ಭರರಾಜ್ಯಶ್ರೀಯುಮಂ ಸಂತತಿಗೆ ನಿಲಿಸಿದಂ. ರಾಚಮಲ್ಲಂ ಶರೀರಂ
ಬೆರೆಸುತ್ತುಂಗಾಶ್ವ ಚಂಚಚ್ಚಮರರುಹ ಸಿತಚ್ಛತ್ರ ಚಿಹ್ನಾನ್ವಿತಂ ಶಂ
ಕರನೊಳ್ ಸಾಲೋಕ್ಯಮಂ ಪೊರ್ದಿಯುಮವನಿಗೆ ಸಾಯುಜ್ಯದಿಂ ಲಿಂಗವಾ(ದಂ) ॥ ೨೮೬ ॥

ಸುಗ್ಗಲದೇವಿಯ ಘಟಸರ್ಪ ದಿವ್ಯ :

ಸತತ ಮದೀಯ ದೈವ್ವ ಅಮೃತೇಶ್ವರನೀ ನಿಗಳಂಕ ಬರ್ಮಭೂ
ಪತಿ ಪತಿಯನ್ಯಥಾಪಿ ಶರಣಿಲ್ಲೆನಗೆಂದು ತ್ರಿಗುಪ್ತಿಯುಕ್ತ ಶು
ದ್ಧತೆಯಿನುದಗ್ರ ಪುಣ್ಯನಿಧಿ ಸುಗ್ಗಲದೇವಿ ಲಸಚ್ಚರಿತ್ರಭೂ
ಷಿತೆ ಘಟಸರ್ಪವಂ ಹಿಡಿದು ಗೆಲ್ದಳಿಳಾತಳವೈದೆ ಬಣ್ಣಿಸಲ್ ॥ ೨೮೭ ॥

ವಿಷ ಪರಿಹಾರ – ರೋಗ ಪರಿಹಾರ :

ಅಹಿ ಕೊಂಡಡೆ ತೇಳ್ ತಿಂದಡೆ
ದಹನಂ ಪತ್ತಿದಡೆ ಬಂದು ತತ್‍ಕ್ಷಣದೊಳ್ ತ
ದ್ಗೃಹಮಂ ಬಲಗೊಳೆ ತದ್ವಿಷ
ರಹಿತತೆ ಮನುಜರ್ಗೆ ನಿಮಿಷಮಾತ್ರದಿನಕ್ಕುಂ ॥ ೨೮೮ ॥

ಜರಿತಂಗೆ ನೇತ್ರರೋಗಿಗೆ
ಶಿರೋವ್ಯಥಾರ್ತಂಗೆ ಕರ್ಣಶೂಳಿಗೆ ನೀರೋ
ದರಿಗೆ ರುಜಾಹರಣಂ ತ
ಚ್ಚರಣಯುಗಸ್ಮರಣಮಾತ್ರದಿಂ ದೊರೆಕೊಳ್ಗುಂ ॥ ೨೮೯ ॥

ರೇವಣದೇವನ ಪವಾಡ :

ತೊರೆ ತುಂಬಿ ಬಂದಡರೆ ತಾ
ಹರುಗೋಲಂ ತನ್ನಿವೆನ್ನದಾಜ್ಞಾಬಲದಿಂ
ತೊರೆಯಂ ದಾಂಟುವನಿಂತೀ
ಕುರುಪಿನ ತತುಕಾರನೀತ ರೇವಣದೇವಂ ॥೨೯೦ ॥

ರೇವಣಯ್ಯನ ಮಂತ್ರವಿದ್ಯೆ :

ಗೆಡೆಗೊಂಡೆಂಬತ್ತನಾಲ್ಕುಂ ತೆರದ ವಿಷಚಮತ್ಕಾರದೊಳ್ ರೂಢಿಯಂ ಮುಂ
ಪಡೆದಾಲಂಪಂಗೆ ಗೆಲ್ಲುಂಗುಡದ ಮಹಿಮೆಯಂ ತಾಳ್ದಿ ಮೂರುಂ ವಿಷಂಗ
ಳ್ನಡೆ ನೋಡಲ್ ಮಂತ್ರಿಸಲ್ ತಂತ್ರಿಸಲವಯವದಿಂ ನಿರ್ವಿಷಂ ತಾವೆನಲ್ ಗಾ
ರುಡಿಗಂ ಶ್ರೀ ರೇವಣಯ್ಯಂ ನೆಗಳ್ದನವನಿಯೊಳ್ ಮಂತ್ರವಿದ್ಯಾಸಮುದ್ರಂ ॥ ೨೯೧ ॥

ಮಾರಗೌಡನಿಂದ ಹೆಳವರಿಗೆ ಕಾಲು ದಯಪಾಲಿಸುವಿಕೆ :

ಕುಡುವರ್ ಬೇಡಿದಡರ್ಥಿಗರ್ಥಚಯಮಂ ಶ್ರೀಮಂತರುಂತೇನುಮಂ
ಕುಡರೀ ಕೋಕದೊಳೊಂದಪೂರ್ವವೆನಿಸಲ್ ಕಾಲಿಲ್ಲದರ್ ಬೇಡಿ ಬಂ
ದಡೆ ಕಾಲಂ ನಿಜಶಕ್ತಿಯಿಂ ಪಲರ್ಗೆ ಕೊಟ್ಟಂ ಮಾರಗಾವುಂಡನೆಂ
ದಡೆ ತತ್ಸತ್ವದ ತತ್ವದುನ್ನತಿಯನಂತಿಂತುಂತೆನಲ್ ಬೇರ್ಕುಮೇ ॥ ೨೯೨ ॥

೧೭. ಬಸದಿ

ಕರ್ನಾಟಕದ ಜೈನಸಂಸ್ಕೃತಿ ತುಂಬ ಶ್ರೀಮಂತವಾದುದು. ಇದರ ಭಾಕ್ತಿಕ ಮತ್ತು ಕಲಾತ್ಮಕ ಜೀವನಕ್ಕೆ ನಿದರ್ಶನವೆಂಬಂತೆ ಸಾವಿರಾರು ಬಸದಿಗಳು ನಮ್ಮ ನಾಡಿನ ಹಳ್ಳಿ-ಪಟ್ಟಣಗಳಲ್ಲಿ ತಲೆಯೆತ್ತಿ ನಿಂತಿವೆ. ಇವುಗಳಿಗೆ ಪೂರಕವಾಗಿ ಅನೇಕ ಭವ್ಯ-ಸುಂದರ ವಿಗ್ರಹಗಳೂ ಸ್ಥಾಪಿತವಾಗಿವೆ. ಇವುಗಳ ನಿರ್ಮಾತೃ, ನಿರ್ಮಾಣ ಕಾರ್ಯ ಇತ್ಯಾದಿ ಕುರಿತ ಏಕೈಕ ಆಕರಗಳೆಂಬಂತೆ ಶಾಸನಗಳು ವಿವರಗಳನ್ನೊದಗಿಸುತ್ತವೆ.

ಹೊಯ್ಸಳ ವಿನಯಾದಿತ್ಯ :

ಇಟ್ಟಿಗೆಗೆಂದುಗುಳ್ದ ಕುಳಿಗಳ್ ಕೆರೆಯಾದುವು, ಕಲ್ಗೆಗೊಂಡ ಪೆ
ರ್ವೆಟ್ಟು ಧರಾತಳಕ್ಕೆ ಸರಿಯಾದುವು, ಸುಣ್ಣದ ಭಂಡಿ ಬಂದ ಪೆ

ವರ್ಟ್ಟಿಯೆ ಪಳ್ಳಮಾದುವೆನೆ ಮಾಡಿಸಿದಂ ಜಿನರಾಜಗೇಹಮಂ
ನೆಟ್ಟನೆ ಪೊಯ್ಸಳೇಶನನೆ ಬಣ್ಣಿಪರಾರ್ ಮಲೆರಾಜರಾಜನಂ ॥ ೨೯೩ ॥

ಮಂತ್ರಿ ಗಂಗರಾಜ :

ಗಂಗವಾಡಿಯ ಬಸದಿಗಳೆನಿತೊಳವನಿತುಮಂ ತಾನೆಯ್ದೆ ಪೊಸಯಿಸಿದಂ,
ಗಂಗವಾಡಿಯ ಗೊಮ್ಮಟದೇವರ್ಗೆ ಸುತ್ತಾಲಯಮನೆಯ್ದೆ ಮಾಡಿಸಿದಂ,
ಗಂಗವಾಡಿಯ ತಿಗುಳರಂ ಬೆಂಕೊಂಡು ವೀರಗಂಗಂಗೆ ನಿಮಿರ್ಚಿ ಕೊಟ್ಟಂ,
ಗಂಗರಾಜನಾ ಮುನ್ನಿನ ಗಂಗರ ರಾಯಂಗಂ ನೂರ್ಮಡಿ ಧನ್ಯನಲ್ತೇ ॥ ೨೯೪ ॥

ಎತ್ತಿದನೆಲ್ಲಿಗಲ್ಲಿ ನೆಲೆವೀಡನೆ ಮಾಡಿದಲ್ಲಿಗಲ್ಲಿ ಕಣ್
ಪತ್ತಿದೊಡೆಲ್ಲಿಗಲ್ಲಿ ಮನಮಾವೆಡೆಗೆಯ್ದಿದುದಲ್ಲಿಗಲ್ಲಿ ಸಂ
ಪತ್ತಿನ ಜೈನಗೇಹಮನೆ ಮಾಡಿಸೆ ದೇಶದೊಳಲ್ಲಿಗಲ್ಲಿಗೆ
ತ್ತೆತ್ತಲುಮಾವಗಂ ಪಳೆಯ ಮಾಳ್ಕೆವೊಲಾದುದು ಗಂಗರಾಜನಿಂ ॥ ೨೯೫ ॥

ಮತ್ತಿನ ಮಾತವತ್ತಿರಲಿ ಜೀರ್ಣಜಿನಾಲಯ ಕೋಟಿಯಂ ಕ್ರಮಂ
ಬೆತ್ತಿರೆ ಮುನ್ನಿನಂತಿರನಿತುರ್ಗಳೊಳಂ ನೆರೆ ಮಾಡಿಸುತ್ತುಮ
ತ್ಯುತ್ತಮ ಪಾತ್ರದಾನವೊದವಂ ಮೆರೆಯುತ್ತಿರೆ ಗಂಗವಾಡಿ ತೊಂ
ಬತ್ತರುಸಾಸಿರಂ ಕೊಪಣಮಾದುದು ಗಂಗಣದಂಡನಾಥನಿಂ ॥ ೨೯೬ ॥

ಹುಳ್ಳ ದಂಡಾಧಿಪತಿ :

ಜಿನಗೇಹೋದ್ಧರಣಂಗಳಿಂ ಜಿನಮಹಾಪೂಜಾ ಸಮಾಜಂಗಳಿಂ
ಜಿನಯೋಗಿಬ್ರಜದಾನದಿಂ ಜಿನಪದಸ್ತೋತ್ರಕ್ರಿಯಾ ನಿಷ್ಠೆಯಿಂ
ಜಿನಸತ್ಪುಣ್ಯ ಪುರಾಣ ಸಂಕ್ರಮಣದಿಂ ಸಂತೋಷಮಂ ತಾಳ್ದಿ ಭ
ವ್ಯನುತಂ ನಿಚ್ಚಲುಮಿಂತೆ ಪೊಳ್ತುಗಳೆವಂ ಶ್ರೀ ಹುಳ್ಳದಂಡಾಧಿಪಂ ॥ ೨೯೭ ॥

ಸ್ಥಿರಜಿನಶಾಸನೋದ್ಧರಣರಾದಿಯೊಳಾರೆನೆ ರಾಚಮಲ್ಲಭೂ
ವರ ವರಮಂತ್ರಿ ರಾಯನೆ ಬಳಿಕ್ಕೆ ಬುಧಸ್ತುತನಪ್ಪ ವಿಷ್ಣುಭೂ
ವರ ವರಮಂತ್ರಿ ಗಂಗಣನೆ ಮತ್ತೆ ಬಳಿಕ್ಕೆ ನೃಸಿಂಹದೇವಭೂ
ವರ ವರಮಂತ್ರಿ ಹುಳ್ಳನೆ ಪೆರಂಗಿನಿತುಳ್ಳಡೆ ಪೇಳಲಾಗದೇ ॥ ೨೯೮ ॥

ಏಚಣ :

ಊರೂರ್ ತಪ್ಪದೆ ಬಸದಿಯ
ನೋರಂತಿರೆ ಮಾಡಿ ಬೆಳಗವತ್ತಿಯ ನಾಡಂ
ಧಾರಿಣಿಗೆ ನೆಗಳ್ದ ಕೊಪಣ
ಕ್ಕೋರಗೆಮಾಡಿದನುದಾರನಿಧಿ ಏಚರಸಂ ॥ ೨೯೯ ॥

ಸಾಗರಣಂದಿ :

ಭರದಿಂ ಜೋಳದ ಕೂಳುಮೆಣ್ಣೆಯುಮನುಂಡತ್ಯಾಸೆಯಿಂ ಪನ್ನೆರ
ಳ್ವರಿಸಂ ಕೂಡಿ ಸಹಸ್ರಕೂಟಗೃಹಮಂ ಶ್ರೀರೇಚಿದಂಡೇಶನಿಂ
ಪರಿಪೂರ್ಣಬ್ರತನಾಗಿ ಮಾಡಿಸಿದನೀ ಸೈದ್ಧಾಂತಿಕಾಗ್ರಂಗೆ ಸಾ
ಗರಣಂದಿಬ್ರತಿಪಾಳಕಂಗೆ ದೊರೆಯಾರಾರಬ್ಧನಿರ್ವಾದಲೇ ॥ ೩೦೦ ॥

ಆಂಧ್ರಪ್ರದೇಶದ ಪುದೂರಿನ ಚಂದ್ರಪ್ರಭ ಜಿನಾಲಯ :

ಲೀಲೆಯಿನೆಸೆವೇಕ
ಶಾಲ ದ್ವಿಶಾಲ ತ್ರಿ
ಶಾಲ ಚತುಃಶಾಲ ಪಂಚಶಾಲಂ
ಮೇಲೆನಿಸಿತ್ತಲ್ಲಿಂ
ಮೇಲೆ ಪಲ್ಲವನ ಜಿ
ನಾಲಯಂ ಸರ್ವತೋಭದ್ರದಿಂದಂ ॥ ೩೦೧ ॥

ಮೂಡಬಿದಿರೆ ತ್ರಿಭುವನ ಚೂಡಾಮಣಿ ಬಸದಿ :

ಸುರಪತಿಗಂಜಿ ರೋಹಣನಗಂ ಮರೆವೊಕ್ಕುದೊ, ಮೇಣ್ ದಶಾಸ್ಯಗ
ಳ್ಕಿರದೆ ಹರಾದ್ರಿ ಬಂದು ನೆಲಸಿತ್ತೊ, ಕುಬೇರನು ದೈತ್ಯ ಭೀತಿಯಿಂ
ದಿರಿಸಿದ ತನ್ನ ಪುಷ್ಪಕಮದಲ್ಲದೊಡಿಂತು ವಿಚಿತ್ರಕೂಟದಿಂ
ಕರ ಚೆಲುವಾದ ಚಂದ್ರಜಿನ ಮಂದಿರಮಂ ಪೊಗಳಲ್ಕೆ ಬರ್ಕುಮೇ ॥ ೩೦೨ ॥

ಲಲಿತಸ್ತಂಭ ಕದಂಬಮಂ ಮದನಕಯ್ಯಂ ಲೋವೆಯಂ ದ್ವಾರ ಚಿ
ತ್ರಲತಾ ಬಂಧಮನುದ್ಘಭಿತ್ತಿಯವಧಿಷ್ಠಾನಾದಿಯಂ ಬೇರೆ ಬೇ
ರೊಲವಿಂ ಬಣ್ಣಿಸಿ ಪೇಳಲಾನರಿಯೆನೊಂದಂ ಬಲ್ಲೆನಾ ಚೈತ್ಯ ಕೌ
ಶಲಮಂ ಭಾವಿಸಿ ವಿಶ್ವಕರ್ಮನಣುಗಿಂದಂ ಶೀರ್ಷಮಂ ತೂಗುವಂ ॥ ೩೦೩ ॥

ಬೆಳ್ಗೊಳದ ಗೊಮ್ಮಟೇಶ ವಿಗ್ರಹ :

ಅತಿತುಂಗಾಕೃತಿಯಾದೊಡಾಗದದರೊಳ್ ಸೌಂದರ್ಯಮೌನ್ನತ್ಯಮುಂ
ನುತಸೌಂದರ್ಯ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ
ನುತಸೌಂದರ್ಯಮುಮಾರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರ ಜಿನ ಶ್ರೀರೂಪಮಾತ್ಮೋಪಮಂ ॥ ೩೦೪ ॥

ರಾಜವ್ವೆ ನಿರ್ಮಿಸಿದ ಕುಂಥುಜಿನ ವಿಗ್ರಹ :

ಪರಮಾರ್ಹಂ ತನಗಿಷ್ಟದೆಯ್ವಮಮಳ ಪ್ರಖ್ಯಾತನುರ್ವೀ ನುತರ್
ಗುರು ತ್ರೈವಿದ್ಯನರೇಂದ್ರಸೇನಮುನಿಪಂ ವೈಶ್ಯಾನ್ವಯಾಂಭೋಜಭಾ
ಸ್ಕರನುದ್ಯದ್ಗುಣಿ ಜೇಮಿಶೆಟ್ಟಿಯ ಮಗಳ್ ರಾಜವ್ವೆ ಬೋಧೋದಯಾ
ಕರನಂ ಕುಂಥುಜಿನೇಂದ್ರನಂ ಪದಪಿನಿಂ ನಿರ್ಮಾಪಣಂ ಮಾಡಿದಳ್ ॥ ೩೦೫ ॥

ಗೇರುಸೊಪ್ಪೆಯ ಕಂಚಿನ ಮಾನಸ್ತಂಭ :

ಭರದಿಂ ಜನ್ಮಾಬ್ಧಿಯಂ ದಾಂಟಿಸುವ ವರ ಮಹಾಧರ್ಮಮೆಂದೆಂಬ ಪೋತ
ಕ್ಕುರು ಕೂಪಸ್ತಂಭಮಂಬಾಂಕನ ವಿಶದ ಯಶಃಪಟ್ಟಿಕಾ ಸ್ತಂಭಮೆಂಬಂ
ತಿರೆ ಮಾನಸ್ತಂಭಮಾ ಕೂಟದೊಳೆಸೆವ ಚತುರ್ಜೈನ ಬಿಂಬಾಂಘ್ರಿ ಪೂಜಾ
ಪರಿಕೀರ್ಣಾಸ್ಫಾರ ಪುಷ್ಪಾಂಜಲಿವೊಲೆಸೆವುದೀ ವ್ಯೋಮತಾರಾ ಕದಂಬಂ ॥ ೩೦೬ ॥

೧೮. ದೇವಾಲಯ

ಭಾರತೀಯರ ಬದುಕಿನಲ್ಲಿ ದೇವಾಲಯಗಳು ವಹಿಸಿದ ಪಾತ್ರ ಮಹತ್ವಪೂರ್ಣವೆನಿಸಿದೆ. ಆಧ್ಯಾತ್ಮ, ಕಲೆ, ಸಾಮಾಜಿಕ ನ್ಯಾಯ ಮೊದಲಾದ ಚಟುವಟಿಕೆಗಳ ಕೇಂದ್ರವೆನಿಸಿದ ಕಾರಣ, ಇವುಗಳ ನಿರ್ಮಾಣ ಒಂದು ಚಳುವಳಿ ರೂಪದಲ್ಲಿ ಸಾಗಿಬಂದಿದೆ. ರಾಜರ, ಶ್ರೀಮಂತರ ತ್ಯಾಗದಲ್ಲಿ ಹುಟ್ಟಿದ ಇವು ಕನ್ನಡಿಗರ ಸೌಂದರ್ಯ, ಭಕ್ತಿ, ಸಮೂಹಜೀವನ ಇತ್ಯಾದಿ ಪ್ರಜ್ಞೆಗಳ ಸಾಕಾರ ರೂಪವೆನಿಸಿವೆ.

ಹರಿಹರದ ಹರಿಹರೇಶ್ವರ ದೇವಾಲಯ :

ಗಿರಿಯೋ ಕೂಟಮೊ ಸೂರ್ಯನೋ ಕಲಶಮೋ ದಿಗ್ಭಿತ್ತಿಯೋ ಭಿತ್ತಿಯೋ
ದೊರೆವೆತ್ತಾ ದೆಸೆವೆಣ್ಗಳೋ ಪರಿಲಸತ್ ಪಾಂಚಾಳಿಕಾ ಜಾಳಮೋ

ಪಿರಿದುಂ ನಿಟ್ಟಿಸಬಾರದೆಂದೆನೆ ಜನಂ ಪೋಲಾಳ್ವದಂಡೇಶನ
ಚ್ಚರಿಯಪ್ಪಂತಿರೆ ಮಾಡಿದಂ ಹರಿಹರ ಶ್ರೀದೇವತಾವಾಸಮಂ ॥ ೩೦೭ ॥

ಚಟ್ಟಸಮುದ್ರದ ಜಟ್ಟೇಶ್ವರ ದೇವಾಲಯ :

ನರತುರಗಾಳಿಯಿಂ ಗಜರಥಾವಳಿಯಿಂ ಪೊಸ ಪೊನ್ನರಾಶಿಯಿಂ
ಸ್ಥಿರಪರಿಪೂರ್ಣಮಾಯ್ತಿದುವೆ ರಾಜ್ಯಮದೇವುದು ಬೆಳ್ಳಿ(ಬೆ)ಟ್ಟು ಬೆ
ಳ್ಕರಿಪುದು ಕೆಮ್ಮನೆಂದು ರಜತಾದ್ರಿಯಿನಿಲ್ಲಿಯೆ ಬಂದು ನಿಲ್ವಿನಂ ಗಿ
ರಿಪತಿ ಶಂಭುಮಂದಿರಮನೆತ್ತಿಸಿದಂ ಗುಣಿ ಕೂಸ ಚಟ್ಟಯಂ ॥ ೩೦೮ ॥

ಮುತ್ತನ ಹೊಸವೂರು ಕುಂಜೇಶ್ವರ ದೇವಾಲಯ :

ಇದು ಕೈಲಾಸಮೊ ಮೇಣದೆತ್ತಿಸಿದರುದ್ಯತ್ ಪುಣ್ಯಸಂಶುದ್ಧಬೀ
ಜದ ಹೇರೊಟ್ಟಿಲೊ ಮೇಣಿದಂತವರ ಭಾಸ್ವತ್ ಕೀರ್ತಿ ತನ್ವಂಗಿ ಕೂ
ಡೆ ದಿಶಾಲೋಕ ನಿಮಿತ್ತಮೇರುವೆಡೆಗೆಂದಿಕ್ಕಿರ್ದ ವೇದೀವಿಳಾ
ಸದ ವಿಸ್ತಾರಮೊ ಪೇಳೆನಲ್ಕೆ ಮೆರೆಗುಂ ಶ್ರೀಕುಂಜನಾಥಾಶ್ರಯಂ ॥ ೩೦೯ ॥

ಇಟ್ಟಿಗೆಯ ಮಹಾದೇವ ದೇವಾಲಯ :

ಧರೆ ರಂಗಂ ಕುಲಪರ್ವತಾಳಿ ತಳಗಂಬಂಗಳ್ ದಿಶಾಭಿತ್ತಿ ಭಿ
ತ್ತಿ ರಸಾಲಂಕೃತಚಿತ್ರಪುತ್ರಿಕೆಯರಾ ದಿಗ್ದೇವಿಯರ್ ದೇಗುಲಂ
ಗಿರಿರಾಜಂ ಕನಕಾದ್ರಿ ಪೊಂಗಳಸಮಾಗಲ್ಕಾ ಮಹಾದೇವರಾ
ದರದಿಂದೆತ್ತಿಸಿದಂತೆ ದೇವಕುಲಮೊಪ್ಪಿರ್ಕುಂ ಮಹಾದೇವನಾ ॥ ೩೧೦ ॥

ಮಹಾದೇವ ದಂಡನಾಯಕ ಕಟ್ಟಿಸಿದ ದೇವಾಲಯಗಳು :

ಜಗಮೆಲ್ಲಂ ಕಂಡು ಕೈಯ್ಯಂ ಮುಗಿಯೆ ಸವಸಿ ಕುಂದುಂಗೊಳಂ ಕಾಡಲೂರಿ
ಟ್ಟಿಗೆ ವೇಳುಗ್ರಾಮ ವಾರಣಾಸಿ ಜನವಿನುತಂ ಸ್ವಾಮಿ ಪಂಪಾಸ್ಥಳಂ ಮೋ
ದೆಗನೂರ್ ಶ್ರೀರಾಯನಾರಾಯಣಪುರಿ ನರೆಯಂಗಲ್ಗಳೆಂಬಲ್ಲಿ ಪುಣ್ಯಂ
ನೆಗಳಲ್ ಧರ್ಮಂಗಳಂ ಮಾಡಿದನೆಸೆಯೆ ಮಹಾದೇವ ದಂಡಾಧಿನಾಥಂ ॥ ೩೧೧ ॥

ಕಡುಚೆಲ್ವಂ ನಿಡುಗುಂಡಿ ಮಂಗಳವುರಂ ಶ್ರೀಲಟ್ಟಿಲೂರ್ವೆಣ್ಣೆಕ
ಲ್ವಡವೂರ್ಕೋರವುರಂ ಪೊಗರ್ತೆವಡೆದಿರ್ದಾರಿಧ್ಧಿಗಾವಂಗಳೆಂ

ಬೆಡೆಯೊಳ್ ನಿರ್ಮಿಸಿ ಧರ್ಮಮಂ ಸಲೆ ಮಹಾದೇವಂ ಯಶೋಲಕ್ಷ್ಮಿಯಂ
ಪಡೆದಂ ಧಾರಿಣಿ ಕೂರ್ತು ಕೀರ್ತಿಸುವಿನಂ ಚಂದ್ರಾರ್ಕತಾರಂಬರಂ ॥ ೩೧೨ ॥

ಇಟ್ಟಿಗೆಯ ಸರಸ್ವತೀ ದೇವಾಲಯ :

ಸಕಲಕಲಾ ಸರಸ್ವತಿಗೆ ವಾಙ್ಮಯಮೂರ್ತಿಗೆ ವೇದಮೂರ್ತಿಗೆ
ಪ್ರಕಟನಮಂತ್ರ ಮೂರ್ತಿಗಮಲಾಕ್ಷರಮೂರ್ತಿಗಿರಲ್ಕೆ ಭಕ್ತಿಯಿಂ
ಸಕಲಕಲಾ ಸರಸ್ವತಿಯೆ ಮಾಡಿಸಿದಂ ಮಠಮಂ ಸಮಸ್ತ ಶಾ
ಬ್ದಿಕ ಕವಿ ತಾರ್ಕಿಕಾಗಮಿಕ ವೈದಿಕ ಸಾಕ್ಷರ ಸಜ್ಜನಾಶ್ರಯಂ ॥ ೩೧೩ ॥

ಬಡುರಾಳಿನ ಮಲ್ಲಿಕಾರ್ಜುನ ದೇವಾಲಯ :

ಮೊದಲಿಂದಂ ಕಳಶಂಬರಂ ಮೆರೆವ ನಾನಾಚಿತ್ರಪತ್ರಂಗಳಿಂ
ಮುದಮಂ ಬೀರುವ ಭಾರತಾದಿ ಕಥೆಯಿಂ ಮೆಯ್ವೆತ್ತ ಕೂಟಂಗಳಿಂ
ದಿದು ಪಾಂಚಾಳಿಕೆ ತಳ್ತ ಮೇರುಗಿರಿಯೋ ಪೇಳೆಂಬಿನಂ ವಿಭ್ರಮಾ
ಸ್ಪದಮಾಗಿರ್ಪುದು ಮಲ್ಲಿಕಾರ್ಜುನ................ ದೇವಾಲಯಂ ॥ ೩೧೪ ॥

ಏಹೂರ ಸ್ವಯಂಭೂ ದೇವಾಲಯ :

ಮಾಡಿಸಿದೊಂ ಸ್ವಯಂಭು ಶಿವಮಂದಿರಮಂ ನಿಯತವ್ರತಂಗಳೊಳ್
ಕೂಡಿ ಸಕೂಟಕೋಟಿ ಶಿವತೀರ್ಥಮನರ್ತಿಯಿನೇಕಭುಕ್ತದಿಂ
ಮಾಡಿಸಿದೊಂ ಸುಶಾಳಿವನ ಪುಷ್ಪವನಾಂಬ್ರವನೇಕ್ಷುವಾಟಮಂ
ಮಾಡಿಸಿದೊಂ ಶಿವಾರ್ಥದಿನೆನಲ್ ದೊರೆಯಾರ್ ನಾಗವರ್ಮನೊಳ್ ॥ ೩೧೫ ॥

ಸಿರಸಂಗಿಯ ಹಬ್ಬೇಶ್ವರ ದೇವಾಲಯ :

ಎಲ್ಲ ಆಸಂಪತ್ತುಗಳ್ಗೆ ಪುಣ್ಯಮೆ ಮೊದಲಾ ಪುಣ್ಯಕ್ಕೆಲ್ಲಮೀಶ್ವರ ಪ್ರತಿಷ್ಠೆಯೆ ಮೊತ್ತಮೊದಲೆಂತೆನಲಾ ಪುಣ್ಯದ ಬಳಿವಿಡಿದೆಲ್ಲಾ ಪುಣ್ಯಂಗಳುಂ ದೊರೆಕೊಳ್ಗುಂ. ಮತ್ತವೆಲ್ಲ ಪ್ರತಿಮೆಗಳಂ ಪ್ರತಿಷ್ಠೆಮಾಡಿದೊಡಾ ದೇವರ್ಕಳ ಪೆಸರೆಯಕ್ಕುಮೀಶ್ವರ ಪ್ರತಿಷ್ಠೆಯಂ ಮಾಡಿದವನೀಶ್ವರನೆಯಕ್ಕುವೆಂಬುದನಾ ದೇವರ ಪೆಸರಾತನ ಪೆಸರಕ್ಕುಮೆಂದರಿದುಕೊಳ್ವುದುಂ. ಆ ದೇವಾಯತನಂ ದಾರುಕರ್ಮ ವಿಷ್ಟಿಕಾಕರ್ಮ ಶಿಲಾಕರ್ಮಂಗಳೊಂದೊಂದಕ್ಕೆ ಸಹಸ್ರಾಧಿಕ ಗುಣ ಫಳದಾಯಿಗಳೆಂದು ಶಿಲಾಕರ್ಮದಿಂದ ದೇವಾಯತನಮಂಮ ವಿನಿರ್ಮಿಸುವುಪಕ್ರಮಮ ನೆತ್ತಿಕೊಂಡು ನಿಜಸಂಪತ್ತಿಯ ವೃತ್ತಿಯನೀಸಿ

ಸ್ಥಿರವೆನಿಪ ರಿಷ್ಯಶೃಂಗೀ
ಪುರದೊಳ್ ಹಬ್ಬೇಶ್ವರ ಪ್ರತಿಷ್ಠೆಯನಾ ಮಂ
ದಿರಮಂ ಕಲ್ವೆಸನೊಪ್ಪು
ತ್ತಿರೆ ಹಬ್ಬೆನಾಯಕ ವಿನಿರ್ಮಿಸಿದನದಂ ॥ ೩೧೬ ॥

೧೯. ಕೆರೆ-ಕಾಲುವೆ-ಕೋಟೆ

ಸಾರ್ವಜನಿಕ ಜೀವನದ ಸುಖ-ನೆಮ್ಮದಿಗಳಿಗಾಗಿ ಅನೇಕ ಜನ ಗಣ್ಯರು ದೊಡ್ಡ ತ್ಯಾಗದ ಮೂಲಕ ಕೆರೆ-ಕಾಲುವೆಗಳನ್ನು ನಿರ್ಮಿಸಿದರು. ರಾಜರಾದವರು ರಾಜ್ಯದ ರಕ್ಷಣೆಗಾಗಿ ಗಗನಚುಂಬಿ ಕೋಟೆಗಳನ್ನು ಕಟ್ಟಿಸಿದರು. ಅವರ ಔದಾರ್ಯ, ಯುದ್ಧನೀತಿಗಳಿಗೆ ಮಾದರಿಯಾಗಿ ಅಲ್ಲಲ್ಲಿ ಈ ಕೆರೆ, ಕಾಲುವೆ, ಕೋಟೆಗಳು ನಿಂತಿದ್ದು, ಇವುಗಳ ನಿರ್ಮಾಣ, ಸ್ವರೂಪ, ಸಾರ್ಥಕತೆಗಳ ಕಥೆ ಶಾಸನಗಳಲ್ಲಿ ನೆಲೆನಿಂತಿದೆ.

ಕುರ್ತುಕೋಟಿಯ ಕಡಲಗೆರೆ :

ಅತಿಮಧುರಂ ಪ್ರಸನ್ನ ಕವಿ ನಿರ್ಮಿಸಿದುನ್ನತ ಕಾವ್ಯದಂತೆ, ನಿ
ರ್ವೃತಿಯುತಮೆಯ್ದೆ ಮೋಕ್ಷದವೊಲ್ಚಿತ್ತಜನಪ್ಪನ ಚಿತ್ತದಂತೆ, ಸಂ
ತತಮತಿನಿರ್ಮಳಂ ಪೆರರನೆಂದುಮಪೇಕ್ಷಿಸುತಿರ್ಪನಂತೆ, ತಾ
ನತಿಲಘುವೆನ್ನದೀ ಚಣಕದುದ್ಘ, ತಟಾಕಮನಾರೊ ಬಣ್ಣಿಸರ್ ॥ ೩೧೭ ॥

ಕಳ್ಳಿಹಾಳದ ಅರಗೆರೆ :

ಕಟ್ಟುಪ್ಪು ವಿಷದ ಮಧ್ಯದಿ
ಪುಟ್ಟಿದ ನೆಲೆ ಜಳದಿ, ಜಳಧಿಯಂ ಪೊಗಳದೆ ನೀಂ
ಮಟ್ಟಮಿರು, ರಾಚಮಲ್ಲಂ
ಕಟ್ಟಿಸಿದರಗೆರೆ ಸಮುದ್ರದಿಂದ ಮಿಗಿಲಲ್ತೇ ॥ ೩೧೮ ॥

ಚಟ್ಟಸಮುದ್ರದ ಕೆರೆ :

ನಾಡೆನ್ನಂ ನಸುವಿಟ್ಟುಕೊಂಡುದದರಿಂ ಮಜ್ಜೀವನಂ ಸಾರ್ಥಕಂ,
ನಾಡಿಂದಂ ಪೊರಗಯ್ತುಸೇವ್ಯ ಸಲಿಲಂ ತಾನುಪ್ಪುನೀರೆಂದು ರೋ
ಡಾಡುತ್ತಿರ್ಪುದು ನಿರ್ಮಳಾಂಬುಭರಿತ ಶ್ರೀ ಸಾರ ಸಾರೋವರಂ
ನೋಡೋ ಚಟ್ಟಸಮುದ್ರಮಿಲ್ಲಿ ಲವಣಾಂಭೋರಾಶಿಯಂ ಪೆರ್ಮೆಯಿಂ ॥ ೩೧೯ ॥

ಹರೀಶಪುರದ ಕಾಲುವೆ :

ವೀರ ಭಗೀರಥಂ ಗಗನ ಗಂಗೆಯನುರ್ವಿಗೆ ತಂದನಂತದೇಂ
ಪೌರುಷಮಲ್ತು, ಕೆಳ್ ಗಗನದಿಂ ಕೆಳಗಿರ್ದ ಹರಿದ್ರೆಯೆತ್ತಲುಂ
ಬಾರದಿರಲ್ಕೆ ಕಟ್ಟಿ ಪಿಡಿದಟ್ಟಿ ಹರೀಶಪುರಕ್ಕೆ ಕೊಂಡು ಬಂ
ದೀ ರಸೆಯೊಳ್ ಪೆಸರ್ವಡೆದ ಬುಳ್ಳಚಲುಪನಿದೇಂ ಸುಭಾಗ್ಯನೋ ॥ ೩೨೦ ॥

ಓರಂತೆ ತೀವಿ ಬಹ ಕೆ
ನ್ನೀರಿಂ ಪರಿಕಾಲ್ವಿರಾಜಿಕುಂ ಬುಳ್ಳನೃಪಂ
ಧಾರಿಣಿಗೆ ರಚಿ(ಯಿ)ಸಿದಂ ವಿ
ಸ್ತಾರದ ಸೀಮಂತದಗ್ರ ಸಿಂಧೂರದವೋಲ್ ॥೩೨೧ ॥

ಸೇಡಿಂಬ ಗ್ರಾಮದ ಕೋಟೆ :

ಅಂಬರಮಂ ಪಳಂಚಲೆವುತಿರ್ದಪುದಿಕ್ಕಿದ ಕೋಟೆ, ನಾಗಲೋ
ಕಂಬರಮೆಯ್ದೆ ಮುಟ್ಟಿದುದಗಳ್ದಗಳಿತ್ತ ದಿಶಾದಿಶಾಂತರಾ
ಳಂಬರಮೆಯ್ದೆ ಪರ್ವಿದುದು ತೇಜದ ಸಾಜದಗುರ್ವೆನಲ್ಕೆ ಸೇ
ಡಿಂಬದೊಳೆತ್ತಿ ಕಾದುವದಟರ್ಗಿಯ ಮಸ್ತಕಶೂಲಮಲ್ಲ(ವೇ) ॥ ೩೨೨ ॥

ಕುರುಗೋಡ ಗ್ರಾಮದ ಕೋಟೆ :

ಚೋಳನನಾಳು ಮಾಡುವುದು, ಗೂರ್ಜರರಂ ಸಲೆ ತರ್ದಿಕುಂ, ಕರಂ
ಲಾಳನನಾಳಿ ಮಾಡುವುದು, ಪಾಂಡ್ಯನನಂಡಲೆಗುಂ, ತೆಲುಂಗ ಭೂ
ಪಾಲನನೇಳಿದಿಕ್ಕೆಯನೆ ಮಾಡುವುದೀ ಕುರುಗೋಡ ಕೋಟೆ ತಾಂ
ಕಾಳಗಮೆಂದಡೇಳುಮಡಿ ಪೆರ್ಚುವುದಚ್ಚರಿಯಾರೊ ಕಾದುವರ್ ॥ ೩೨೩ ॥

ಕೆಲಬಲದ ಜಲದ ದುರ್ಗಂ
ಗಳನಲೆವುದು, ನೆರೆಯ ಹೊರೆಯ ತರುಗಿರಿದುರ್ಗಂ
ಗಳನಿಳಿಸಿ ತನ್ನ ಮೆರೆವುದು,
ಕುಲಗಿರಿ ಕುರುಗೋಡ ದುರ್ಗಮಾರ್ಗಂ ದುರ್ಗಂ ॥ ೩೨೪ ॥

೨೦. ಅಗ್ರಹಾರ

ವಿದ್ವಾಂಸ ಬ್ರಾಹಣ ಕುಟುಂಬಗಳ ಉಪಜೀವನಕ್ಕೆ ದಾನವಗಿ ನೀಡಿದ ಗ್ರಾಮ ಅಗ್ರಹಾರವೆನಿಸಿಕೊಳ್ಳುತ್ತಿದ್ದಿತು. ಈ ಕುಟುಂಬದ ಸದಸ್ಯರನ್ನು 'ಮಹಾಜನ'ರೆಂದು ಕರೆಯುತ್ತಿದ್ದರು. ದೈಹಿಕ ಶ್ರಮವಿಲ್ಲದೆ ಎಲ್ಲ ಬೌದ್ಧಿಕ ಶ್ರಮವನ್ನು ವಿದ್ವತ್ತಿನ ಬೆಳವಣಿಗೆಗಾಗಿ ಕೇಂದ್ರೀಕರಿಸಲು ಪ್ರಾಚೀನ ಕನ್ನಡಿಗರು ಮಾಡಿದ್ದ ಒಂದು ಅನುಕೂಲತೆ ಇದು. ಹೀಗಾಗಿ ಇಂಥ ಗ್ರಾಮಗಳು ಪಾಂಡಿತ್ಯಪ್ರಧಾನ ನೆಲೆಗಳಾಗಿ ಬೆಳಗುತ್ತಿದ್ದವು. ತಾಳಗುಂದವನ್ನು ಅಗ್ರಹಾರವನ್ನಾಗಿಸುವ ಮೂಲಕ ಬನವಾಸಿ ಕದಂಬರು ಕರ್ನಾಟಕದಲ್ಲಿ ಇಂಥ ಅಗ್ರಹಾರ ವ್ಯವಸ್ಥೆಯನ್ನು ಆರಂಭಿಸಿದರು. ಬಳಿಕ ನಮ್ಮ ನಾಡಿನ ಉದ್ದಗಲಕ್ಕೂ ಸಾವಿರಾರು ಅಗ್ರಹಾರಗಳು ಬೆಳೆದು ಬಂದವು.

ಪಲ್ಲವಪುರ ಅಗ್ರಹಾರ :

ಒಂದೆಡೆ ವೇದನಾದಮಯವೊಂದೆಡೆ ವಾದವಿನೋದರಮ್ಯ ಮ
ತ್ತೊಂದೆಡೆ ವಿಸ್ತೃತಸ್ಮೃತಿವಿಭೂಷಿತವೊಂದೆಡೆ ತಂತ್ರಸೇವ್ಯಮಿ
ನ್ನೊಂದೆಡೆ ಶಬ್ದಶಾಸ್ತ್ರಪರಿಭಾವಿತಮೆಂಬಿನೆಗಂ ವಿದಗ್ಧತಾ
ಮಂದಿರಮಾಯ್ತು ಪಲ್ಲವಪುರಂ ದ್ವಿಜ ಪಾವನಮಗ್ರಹಾರದೊಳ್ ॥ ೩೨೫ ॥

ಅಗ್ರಹಾರ ನರಗುಂದ :

ವರ ಜಂಬೂದ್ವೀಪದೊಳ್ ರಂಜಿಸುವುದು ಭರತಕ್ಷೇತ್ರಮಾ ಭರತಕ್ಷೇತ್ರದೊಳ್ ಬಂ
ಧುರಮಂತಾ ಕುಂತಳಂ ತದ್ವಿಷಯದೊಳತಿ ಶೋಭಾಸ್ಪದಂ ಬೆಳ್ವಲಂ ಬಿ
ತ್ತರದಿಂದಾ ನಾಡೊಳೊಪ್ಪಂ ಬಡದುದು ಪದಿನೆಂಟಗ್ರಹಾರಂ ತದಭ್ಯಂ
ತರದೊಳ್ ಲಕ್ಷ್ಮೀವಿಹಾರಂ ನೆಗರ್ದುದು ನರಗುಂದಾಭಿಧಾನಾಗ್ರಹಾರಂ ॥ ೩೨೬ ॥

ಅಗ್ರಹಾರ ಹಾವೇರಿ :

ಆ ನಾಡೊಳಗ್ರಹಾರಂ
ಭೂನಾರೀ ಕುಚತಟಾಗ್ರಹಾರಂ ವಿಪುಳ
ಶ್ರೀನಿಳಯಂ ಸದ್ವಿದ್ಯಾ
ಸ್ಥಾನಂ ಪಾವರಿ ನಿರಂತರಂ ರಂಜಿಸುಗುಂ ॥ ೩೨೭ ॥

ಹೂಲಿ ಅಗ್ರಹಾರದ ಮಹಾಜನರು :

ಸಕಲ ವ್ಯಾಕರಣಾರ್ಥಶಾಸ್ತ್ರ ಚಯದೊಳ್, ಕಾವ್ಯಂಗಳೊಳ್, ಸಂದ ನಾ

ಟಕದೊಳ್, ವರ್ಣಕವಿತ್ವದೊಳ್, ನೆಗಳ್ದ ವೇದಾಂತಂಗಳೊಳ್, ಪಾರಮಾ
ರ್ಥಿಕದೊಳ್, ಲೌಕಿಕದೊಳ್, ಸಮಸ್ತ ಕಳೆಯೊಳ್, ವಾಗೀಶನಿಂದಂ ಯಶೋ
ಧಿಕರಾದರ್ ಪೊಗಳ್ವಲ್ಲಿಗಾರಳವೊ ಪೇಳ್ ಸಾಸಿರ್ವರ ಖ್ಯಾತಿಯಂ ॥ ೩೨೮ ॥

೨೧. ಘಟಿಕಾಸ್ಥಾನ

'ಘಟಿಕಾಸ್ಥಾನ'ವೆನ್ನುವುದು ಬ್ರಾಹ್ಮಣರ ಲೌಕಿಕ-ಧಾರ್ಮಿಕ ವಿದ್ಯೆಗಳ ಅಧ್ಯಯನ-ಅಧ್ಯಾಪನ ಕೇಂದ್ರ. ಈ ಕೇಂದ್ರದ ಮುಖ್ಯಲಕ್ಷಣ ತ್ರೈಪುರುಷ ದೇವಾಲಯವನ್ನೊಳಗೊಂಡುದು. ಬಹುಶಃ ವಿದ್ಯಾರ್ಥಿಗಳಲ್ಲಿ ಸರ್ವಧರ್ಮ ಸೌಹಾರ್ದತೆ ನೆಲೆಗೊಳ್ಳಲೆಂಬ ಕಾರಣದಿಂದ ಈ ದೇವತೆಯ ಸ್ಥಾಪನೆಗೆ ಇಲ್ಲಿ ಅವಕಾಶವಿದ್ದಂತೆ ತೋರುತ್ತದೆ. ಶಿಕ್ಷಕರ, ವಿದ್ಯಾರ್ಥಿಗಳ, ಗ್ರಂಥಪಾಲಕರ ಉಪಜೀವನಕ್ಕೆ ಇಲ್ಲಿ ಸರಿಯಾದ ವ್ಯವಸ್ಥೆಯಿದ್ದಿತು.

ನಾಗಾವಿ ಘಟಿಕಾಸ್ಥಾನ :

ಕುಂತಳ ಮಹೀತಳಕ್ಕೆ ಮುಖವಿದೆಂಬಂತಿರ್ದಿರ್ಪಲು ಮೂನೂರಕ್ಕೆ ತಿಳಕದಂತಿರ್ದ ಮಹಾಗ್ರಹಾರಂ ನಾಗವಾವಿಯೊಳನೇಕ ಜನ್ಮೋಪಾರ್ಜಿ ತಾತ್ಮೀಯ ಪುಣ್ಯಪುಂಜಮುಮಂ, ನಿಜಗುಣಗಣೋಪಾರ್ಜಿತ ಯಶೋಲತಾ ವಿಶಾಲಕಂದಮುಮಂ ಅಖಿಲ ಜಗತೀತಳಕ್ಕೆ ಪ್ರತ್ಯಕ್ಷಂ ಮಾಡಿ ತೋರುವಂತೆ 'ಕಟಕಕಮಳಾರ್ಕ'ವೆಸರ ತ್ರೈಪುರುಷದೇವರ ಶಾಲೆಯಂ ...... ಮಾಡಿಸಿ, ಘಟಿಕಾಸ್ಥಾನಮೆನಿಪ ಶಾಲೆಯುಲೋದುವ ವೇದಾಧ್ಯಾಯಿಗಳಿನ್ನೂರ್ವರ್ಗಂ, ಶಾಸ್ತ್ರಾಧ್ಯಾಯಿಗಳಯ್ವದಿಂಬರ್ಗಂ, ತದುಪಾಧ್ಯಾಯಿಗಳು ೩: ಭಟ್ಟದರ್ಶನ ನ್ಯಾಸ ಪ್ರಭಾಕರವ್ಯಾಖ್ಯಾತೃಗಳ್ಮೂವರ್ಗಂ, ವೇದವನೋದಿಸುವು ಪಾಧ್ಯಾಯರ್ಮೂವರ್ಗಂ, ಶಾಲೆಯ ಸರಸ್ವತೀಭಂಡಾರಿಗ(ರೊ)ರ್ವರ್ಗಮಂತು ೨೫೭ ಮಾನಸರ ಅಶನಾಚ್ಛಾದನಕ್ಕಂ ಜೀರ್ಣೋದ್ಧಾರ ಖಂಡಸ್ಫುಟಿತ ನವಸುಧಾಕರ್ಮಕ್ಕಂ ಗಂಧಾಕ್ಷತ ಪುಷ್ಪಧೂಪದೀಪ ನಿವೇದ್ಯಕ್ಕಂ ತ್ರೈಪುರುಷದೇವರ ಶಾಲೆಯ ಪರಿಷಮಾಣಿಯರ್ಗೆ ಸರ್ವನಮಸ್ಯಮಾಗಿ ಕೊಟ್ಟ ಕೆಯ್, ಮಾಣಿಕೇಶ್ವರದ ಬಡಗ ಮತ್ತರು ೧೦೦೦. ॥ ೩೨೯ ॥

೨೨. ಮಠ

ಬ್ರಾಹ್ಮಣರಿಗೆ ಘಟಿಕಾಸ್ಥಾನದಂತೆ ಕಾಳಾಮುಖಶೈವರಿಗೆ ವಿದ್ಯಾಕೇಂದ್ರಗಳಾಗಿದ್ದವು. 'ಮಠ'ಗಳು. ಇವು ಕೇವಲ ಧಾರ್ಮಿಕ ಶಿಕ್ಷಣ ಸಂಸ್ಥೆಗಳಾಗಿ ಉಳಿಯದೆ, ನ್ಯಾಯ, ಆರೋಗ್ಯ, ಗ್ರಂಥಸಂಗ್ರಹ ಕೇಂದ್ರಗಳಾಗಿ ಬೆಳೆದುದು ಒಂದು ವಿಶೇಷ. ಕಾಳಾಮುಖ ಆಚಾರ್ಯರ ನೇತೃತ್ವದಲ್ಲಿ ಇಂಥ ಮಠಗಳು ಕರ್ನಾಟಕದ ತುಂಬ ಹರಡಿಕೊಂಡಿದ್ದವು. ಇವುಗಳ ಆಚಾರ್ಯರು ನೈಷ್ಠಿಕ ಬ್ರಹ್ಮಚಾರಿಯಾಗಿರಬೇಕಾದುದು ಕಡ್ಡಾಯವಾಗಿದ್ದಿತು.

ಮಾಯಿತಮ್ಮನ ಮುಚ್ಚಡಿ ಗ್ರಾಮದ ಮಠ :

ಮಠಮಿದು ನೈಷ್ಠಿಕ ಮಠಮೀ
ಮಠದೊಡೆಯಂ ಬ್ರಹ್ಮಚರ್ಯಮಿಲ್ಲದೊಡಮೀ
ಮಠದಿಂ ಪೊರಮಡಿಸುವುದೀ
ಮಠ ಸಾರಥಿಯ ಮಠದ ಸಂತತಿಯ ಮಠಂ ॥ ೩೩೦ ॥

ಬಳ್ಳಿಗಾವಿಯ ಕೋಡಿಯ ಮಠ :

ದಕ್ಷಿಣ ಕೇದಾರಸ್ಥಾನಮುಂ, ಶಿವಲಿಂಗಪೂಜಾಪುಳಕಸಸ್ಯಸರಸ ಕೇದಾರಸ್ಥಾನಮುಂ, ನೈಷ್ಠಿಕ ಬ್ರಹ್ಮಚರ್ಯ ಶಿವಮುನಿಜನಾಷ್ಠಾನ ನಿಷ್ಠಿತಸ್ಥಾನಮುಂ, ಸಾಂಗಋುಗ್ಯಜುಸ್ಸಾಮಾಥರ್ವ ಚತುರ್ವೇದ ಸ್ವಾಧ್ಯಾಯ ಸ್ಥಾನಮುಂ, ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ ಸ್ಥಾನಮುಂ, ನ್ಯಾಯ ವೈಶೇಷಿಕ ಮೀಮಾಂಸಾ ಸಾಂಖ್ಯ ಬೌದ್ಧಾದಿ ಷಡುದರ್ಶನ ವ್ಯಾಖ್ಯಾನ ಸ್ಥಾನಮುಂ, ಲಾಕುಳಸಿದ್ಧಾಂತ ಪಾತಂಜಳಾದಿ ಯೋಗಶಾಸ್ತ್ರ ವ್ಯಾಖ್ಯಾನ ಸ್ಥಾನಮುಂ, ಅಷ್ಟಾದಶಪುರಾಣ ಧರ್ಮಶಾಸ್ತ್ರ ಸಕಳ ಕಾವ್ಯ ನಾಟಕ ನಾಟಿಕಾದಿ ವಿವಿಧ ವಿದ್ಯಾಸ್ಥಾನಮುಂ, ದೀನಾನಾಥ ಪಂಗ್ವಂಧ ಬಧಿರ ಕಥಕ ಗಾಯಕ ವಾದಕ ವಾಂಶಿಕ ನರ್ತಕ ವೈತಾಳಿಕ ನಗ್ನಭಗ್ನ ಕ್ಷಪಣಕೈಕದಂಡಿ ತ್ರಿದಂಡಿ ಹಂಸ ಪರಮಹಂಸಾದಿ ನಾನಾ ದೇಶ ಭಿಕ್ಷುಕಜನಾನಿವಾರ್ಯನ್ನದಾನಸ್ಥಾನಮುಂ, ದೀನಾನಾಥರೋಗಿಜನ ಭೈಷಜ್ಯಸ್ಥಾನಮುಂ. ಸಕಲಭೂತಾಭಯ ಪ್ರದಾನಸ್ಥಾನಮುಮಾಗಿ ಕೋಡಿಯ ಮಠಮಿರ್ಪುದು.

...... ಆ ಮಠಂ ಪುರಾಣಕಮಠನಂತೆ ಸಕಳಲೋಕಾಧಾರಮುಂ, ಪುರುಷಸಿಂಹನಂತೆ ಹಿರಣ್ಯಕಶಿಪುದಾನ ಸಂಶೋಭಿತಮುಂ, ಕುರುಕ್ಷೇತ್ರದಂತೆ ಸರಸ್ವತೀ ವಿಳಸಿತಮುಂ, ಖಚರಲೋಕದಂತೆ ವಿದ್ಯಾಧರಾಧೀಶ್ವರ ಪರಿವೃತಮುಂ, ಮಂದರ ಮಹಾಮಹೀಧರದಂತೆ ಸರ್ವದೀಕ್ಸಾರಭೂತಮುಂ, ವಾಸುದೇವನಂತೆ ಕ್ರೂರೋಕ್ತಿ ಶ್ರವಣ ರಮಣೀಯಮುಂ, ಭವಾನೀಭವನದಂತೆ ಬ್ರಹ್ಮಚಾರಿ ಸದಾಚಾರ ಸಂಭಾವಿತಮುಮಾಗಿರ್ಪುದು. ॥ ೩೩೧ ॥

೨೩. ಅನ್ನಸತ್ರ–ಅರವಟ್ಟಿಗೆ–ಬಾವಿ–ಉದ್ಯಾನ–ಸಂತೆ

ಲೋಕೋಪಕಾರ, ಜೀವನದ ಪರಮಮೌಲ್ಯ, ಪ್ರಾಚೀನ ಕರ್ನಾಟಕದಲ್ಲಿ ಆಳುವ ವರ್ಗ, ಅಧಿಕಾರವರ್ಗ, ಶ್ರೀಮಂತವರ್ಗದ ಸ್ತ್ರೀ–ಪುರುಷರು ಉದ್ದಕ್ಕೂ ಅನ್ನಸತ್ರ, ಅರವಟ್ಟಿಗೆ, ಬಾವಿ, ಉದ್ಯಾನ ಮೊದಲಾದ ಪರೋಪಕಾರಗಳನ್ನು ಕೈಕೊಂಡುದಕ್ಕೆ ಶಾಸನಗಳಲ್ಲಿ ನೂರಾರು ನಿದರ್ಶನಗಳಿವೆ.

ಜಕ್ಕಿಯಬ್ಬೆ :

ದಾನದೊಳನ್ನಮೆ ಸಾರಂ
ದೀನಾನಾಥರ್ಗೆ ತುಷ್ಟಿದಾನಮೆನುತ್ತಂ ।

ತಾನದು ಜಕ್ಕಿಯಬ್ಬೆ ಯ
ಶೋನಿಧಿ ಸತ್ರಕ್ಕೆ ಭೂಮಿದಾನಮನಿತ್ತಳ್ ॥ ೩೩೨ ॥

ಆದಿಗೌಡ :

ಹಸಿದರ ಮೊಗಮಂ ನೋಡಂ
ಹಸಿವುಂ ನೀರಳ್ಕೆಯಿಲ್ಲ ಕಂಡೊಡೆ ತನ್ನಂ
ವಸುಮತಿಗೆನಿಪ ಮಹಾಪ್ರಭು
ವಸುಧೆಯೊಳಾರ್ ಕಾಣ್ಬರಾದಿಗೌಂಡಂಗೆಣೆಯಂ ॥ ೩೩೩ ॥

ಹಸುಗೂಸುಗಳ್ಗೆ ಹಾಲಂ,
ಹಸಿದರ್ಗನ್ನಮುಮನಳ್ಕರಿಂದಂ ನಿಚ್ಚಂ
ಹಸಗಾಲದೊಳಂ ಸಲಿಸುವ
ಬೆಸನದಿನಾರಾದಿಗೌಂಡನಂ ಪೋಲ್ವನ್ನರ್ ॥ ೩೩೪ ॥

ಕೆರೆಯಂ ಕಟ್ಟಿಸುತಿರ್ಪುದು
ಮರವಂಟಿಗೆಯಿಡಿಸುತಿರ್ಪುದೆಸೆವಾರವೆಯಂ
ನೆರೆ ಮಾಡಿಸುವುದುಮಲ್ಲದೆ
ಪೆರತೊಂದಿಲ್ಲಾದಿಗೌಂಡನುಜ್ಜುಗಮೆಂದುಂ ॥ ೩೩೫ ॥

ಮಾಚಿಮಯ್ಯ ನಿರ್ಮಿಸಿದ ಬಾವಿ :

ಜಗತೀಜನ ಹಿತಮಂ ವಿಬು
ಧಗಣಾಗ್ರಣಿ ಮಾಚಿಮಯ್ಯನುರ್ವೀವಳಯಂ
ಪೊಗಳಲ್ ರೋಣದ ಮಣಿಯರ
ನೆಗಳ್ದಾರಮೆಯೊಳಗೆ ಬಾವಿಯಂ ತೋಡಿಸಿದಂ ॥ ೩೩೬ ॥

ಸಿರಿದೇವಿಯ ಕ್ಷಿತಿರುಹನೋಂಪಿ :

ವ್ರತಸಾರ ಸಮುಚ್ಚಯದೊಳ್
ಸ್ಮೃತಿಯೊಳ್ ಕೇಳ್ದನಿತು ನೋಂಪಿಯೊಳವೆನಿತನಿತಂ
ಸತತಂ ನೋಂತೊಲವಿಂದಂ
ಕ್ಷಿತಿರುಹವಿದುವೊಂದು ನೋಂಪಿಯುಂಟೆನೆ ಕೇಳ್ದಳ್ ॥ ೩೩೭ ॥

ಪರಮಾನಂದದೆ ಕೇಳ್ದು ಭೂತಳದ ಕಳ್ಪೋರ್ವೀಜವೆಂದೆಂದು ಮಾ
ಮರವಂ ನೇರಿಲನೀಳೆಯಂ ಪಲಸುಮಂ ಖರ್ಜೂರಮಂ ತೆಂಗುಮಂ
ವರ ಪೂಗೀತರುವಂ ವನಸ್ಪತಿಯನತ್ಯಾನಂದದಿಂದಿಟ್ಟು ತಾಂ
ಧರೆ ಮೆಚ್ಚಿತ್ತಿರೆ ಮಾಯಿದೇವನೆಸೆವೀ ಧರ್ಮಂದಿದಿಕ್ಕಂದದಿಂ ॥ ೩೩೮ ॥

ಶ್ರೀಮತು ತಲೆಯಕಾವದೇವರ್ಗೆ ಮಾವಿನಮರ ಮೂರು ಪುಣಸೆ ಒಂದು ನೇರಿಲು ಒಂದು, ರೇವಣೇಶ್ವರದೇವರ್ಗೆ ಮಾವಿನಮರ ಮೂರು ಪುಣಸೆ ಒಂದು ನೇರಿಲೊಂದು, ಭೋಗೇಶ್ವರದೇವರ್ಗೆ ಮಾವಿನಮರ ಮೂರು ಪುಣಸೆಯೊಂದು ನೇರಿಲೊಂದು, ಸಾತೇಶ್ವರದೇವರ್ಗೆ ಮಾಮರಂ ಮೂರು ನೇರಿಲೊಂದು ಪುಣಸೆಯೊಂದು, ಬ್ರಹ್ಮಪುರಿಗೆ ಮಾಮರನೆಂಟು ಪುಣಸೆಯೊಂದು ನೇರಿಲೊಂದು, ಶಾಸನವ ಪೇಳ್ದ ಬೆಡಗಿನ ಸೋಮನಾಥಪಂಡಿತರ್ಗೆ ಮಾಮರನೆ[ರಡು], ಸೆಟ್ಟಿಗುತ್ತ ಮುಮ್ಮುರಿದಂಡರ್ಕೆ ಮಾಮರನಯ್ದು, ಖೇಡಗೆ ಸ್ವಯಂಭುದೇವರ್ಗೆ ಮಾಮರನೆಂಟು ಪುಣಸೆಯೊಂದು ನೇರಿಲೊಂದು.

ಧರ್ಮಸಂತೆ :

ಮೂವತ್ತಾರುಂ ಬೀಡಂ
ಗಾವುಂಡರ್ ಸೆಟ್ಟಿಗುತ್ತ ಮುಮ್ಮರಿದಂಡಂ
ಶ್ರೀ ವೀರಬೀರವಣಿಗಂ
ಭಾವಿಸಲಾಗವರೆ ಗಾತ್ರಿಗರ್ ಸುಂಕಿಗರಂ ॥ ೩೩೯ ॥

ನೆರಪಿಯವರೆಲ್ಲರಂ ಕು
ಳ್ಳಿರಿಸಿಯೆ ಕೇಳ್ದು ಧರ್ಮಸಂತೆ[ಯನೆಸೆಯೆ] ಮಾಯ್ದೇ
ವರಸಂ ಮಾಡಿದ ಧರ್ಮಂ
ಧರೆಯೊಳಗಿದು ಧರ್ಮಸಂತೆಯಾಚಂದ್ರಾರ್ಕಂ ॥ ೩೪೦ ॥

ನೆರೆದೀ ಸಂತೆಯೊಳಾನೆ ಮಾಣಿಕ ತುರಂಗಂ ಪಟ್ಟಕರ್ಮಾದಿಯಂ
ಬರ ಧಾನ್ಯಂ ಧನ ಶಾಶ್ವತಂ ಪಲವು ಭಂಡಂ ಮಾರಲೇನಾದಡಂ
ಪಿರಿದುಂ ತನ್ನಯ ನಾಡನಾಳ್ವವ[ರು ದಾ]ಯಂ ಸುಂಕವೆಂದೆಂದವರ್
ನಿರುತಂ ರೌರವದಲ್ಲಿ ತಮ್ಮ ಸಕುಟುಂಬಂ ಬೀಳ್ವರಂತಾಕ್ಷಣಂ ॥ ೩೪೧ ॥

ಈ ಸಂತೆಯಲ್ಲಿ ಕೆಲಬರ್
ಪೇಸದೆ ಕೇಳ್ ಸುಂಕವೆಂದು ನುಡಿವ ಖಳರ್
ಸಾಸಿರ್ವ ಪಶುವಂ ಪಾರ್ವರ
ನಾಸುರವೆನೆ ವಾರಣಾಸಿಯೊಳ್ ಕೊಂದವರ್ಗಳ್ ॥ ೩೪೨ ॥

ಮನ್ನೆಯರಾಳು ಮನ್ನೆಯರ ಪೆರ್ಗಡೆ ಮನ್ನೆಯ ನಾಡನಾಳ್ವವರ್
ಮನ್ನಿಪ ಮಾನಸರ್ ಕರಣ ಪೆರ್ಗಡೆ ನಾಡಧಿಕಾರಿ ತೇಜ ಸಂ
ಪನ್ನರೆನಿಪ್ಪ ಸುಂಕಿಗರಿವರ್ ವನದೊಳ್ ನೆರಿದಿರ್ದ ಸಂತೆಯೊಳ್
ಮನ್ನಿಸದಾಳಿ ಮಾಡಿದಡೆ ಗೋದ್ವಿಜ ಮಾಂಸವನೊಲ್ದು ತಿಂದವರ್ ॥ ೩೪೩ ॥

೨೪. ಸಾಹಿತ್ಯ–ಶಾಸ್ತ್ರ–ಕಲೆ–ಕ್ರೀಡೆ

ಮನುಷ್ಯನ ಬದುಕಿಗೆ ಪೂರ್ಣತೆ ಬರುವುದು ಭೌತಿಕ ಜೀವನದೊಂದಿಗೆ ಸಾಂಸ್ಕೃತಿಕ ಜೀವನವು ಮೇಳವಿಸಿದಾಗ. ಪ್ರಾಚೀನ ಕರ್ನಾಟಕದಲ್ಲಿ ಈ ಸಾಂಸ್ಕೃತಿಕ ಬದುಕಿನ ಭಾಗಗಳಾದ ಸಾಹಿತ್ಯ–ಸಂಗೀತ–ಶಾಸ್ತ್ರ ಇತ್ಯಾದಿಗಳಿಗೆ ತುಂಬ ಪ್ರೋತ್ಸಾಹವಿದ್ದಿತು. ಈ ಮಾತಿಗೆ ನೂರಾರು ಶಾಸನಗಳು ಸಾಕ್ಷಿ ನುಡಿಯುತ್ತವೆ.

ಅಚಲನ್ :
ಖ್ಯಾತಮಹಾಪ್ರಭಾವ ಭರತಾಗಮಯುಕ್ತಿ ಬಹುಪ್ರಕಾರದಾ
ಮಾತಿನೊಳೊಲ್ಲಮೇನೊ ನಟಸೇವ್ಯನ ಮುಂತೆ ಯಥೋಕ್ತಮಾರ್ಗದಿಂ
ದೀ ತೆರದಿಂದಿದಗ್ರ ತಲ ಸಂಚರಮೆಂಬುದಿದೆಂದು ಪೇಳ್ದೊಡಿ
ನ್ನಾತನೆ ನರ್ತಕಂ ನಟರೊಳಗ್ಗಳಮೀ ಭುವನಾಂತರಾ(ಳ)ದೊಳ್ ॥ ೩೪೪ ॥

ಗಂಗ ಶಿವಮಾರನ ಕವಿತಾಗುಣ :
ಏವೇಳ್ವುದೊ ಶಿವಮಾರ ಮ
ಹೀವಳಯಾಧಿಪನ ಸುಭಗಕವಿತಾಗುಣಮಂ
ಭೂವಳೆಯದೊಳ್ ಕಜಾಷ್ಟಕ
ಮೋವನಿಗೆಯುಮೊನಕೆವಾಡುಮಾದುದೆ ಪೇಳ್ಗುಂ ॥ ೩೪೫ ॥

ಗಂಗ ರಾಚಮಲ್ಲನ ಕವಿತ್ವ :

ಶ್ರೀ ರಾಚಮಲ್ಲದೇವಂ
ಭಾರವಿ ಕೇಯೂರ ರಾಜಶೇಖರನಾತಂ
ಭಾರವಿ ಸಾಕ್ಷಾದ್ಬಾಣ ಮ
ಯೂರಂ ವಾಲ್ಮೀಕಿ ಕಾಳಿದಾಸಂ ವ್ಯಾಸಂ ॥ ೩೪೬ ॥

ನಾರಣನ ಕವಿತೆ :

ವೇದ ವೇದಾಂಗಮನೋದದೆ ಶಾಸ್ತ್ರಮ
ನಾದಿಮಧ್ಯಾಂತಮರಿಯದೆ । ನಾರಣಂ
ಗಾದುದು ಕವಿತೆ ಸಹಜಮೇ ॥ ೩೪೭ ॥

ಪ್ರತಿಕಂಠಸಿಂಗನ ವಿದ್ವತ್ತು :

ಬರೆಪದ ಬಲ್ಮೆ ಬಾಜನೆಯ ಬಿನ್ನಣಮೊಪ್ಪುವ ಲೆಕ್ಕದೋಜೆ ಶಂ
ಕರ ಸುತನೊಳ್ ಸರಸ್ವತಿಯೊಳಂಬುರುಹಾಸನನೊಳ್ ವಿಚಾರಿಸಲ್
ದೊರೆ ಸರಿ ಪಾಟಿಯೆಂದು ನಿಖಿಳೋರ್ವರೆ ಬಣ್ಣಿಸುತಿರ್ಪುದಂದೊಡೇಂ
ಪಿರಿಯನೊ ಸಿಂಗನುಜ್ವಲಯಶೋವಿಭವಂ ಪ್ರತಿಪನ್ನಮಂದರಂ ॥ ೩೪೮ ॥

ಸಾಹಿತ್ಯರಸಪ್ರಪೂರ್ಣ ಶಂಕರಸ್ವಾಮಿ :

ಬಗೆ ಸಾಹಿತ್ಯರಸಪ್ರಪೂರ್ಣವಿಪುಳಸ್ರೋತಂ, ಶ್ರುತಂ ವಾಗ್ವಧೂ
ಟಿಗೆ ಕೈಗನ್ನಡಿ, ಸೂಕ್ತಿ ಸೂನೃತಸುಧಾವಾರಾಶಿಮುಕ್ತಾಳಿ, ನಾ
ಲಗೆ ಸಾರಸ್ವತಪೀಠಮಾರ್ಪು ವರ ಪ್ರವ್ರಾತವಿದ್ವಜ್ಜನಾ
ಳಿಗೆ ಕಲ್ಪದ್ರುಮಮೆಂದು ಧಾತ್ರಿ ಪೊಗಳ್ಗುಂ ಶ್ರೀಶಂಕರಸ್ವಾಮಿಂ ॥ ೩೪೯ ॥

ಶಾಸನಕವಿ ಚಿದಾನಂದ :

ಧರೆಪೊಗಳೆ ಚಿದಾನಂದ
ವಿರಚಿಸಿದಂ ಸತ್ಕವೀಶ್ವರಂ ಶಾಸನಮಂ
ಪರಮ ಪ್ರಕಾಶಯೋಗೀ
ಶ್ವರ ತನಯಂ ಬ್ರಹ್ಮವಿದ್ಯೆಗಾಸ್ಪದ ರೂಪಂ ॥ ೩೫೦ ॥

ಕನ್ನಡಜಾಣ ಬಿಜ್ಜನಾಯಕ :

ಕಳಚುರಿರಾಜ್ಯ [ರಾಜ]ಗೃಹದೀಪಕನೆಂಬ ಮಹತ್ತ್ವದೇಳ್ಗೆ ತ
ನ್ನೊಳೆ, ರಿಪುರಾಯದಂಡುಗೆ ಪಡಿಗ್ಗಹವೆಂಬುರುವೀರದೇಳ್ಗೆ ತ
ನ್ನೊಳೆ, ಬುಧರೀಯೆ ವರ್ಣಕವಿ ಕನ್ನಡ ಜಾಣನೆನಿಪ್ಪ ಬಲ್ಮೆ ತ
ನ್ನೊಳೆ, ನೆಲಸಲ್ಕುದಾತ್ತನೆನೆ ಬಿಜ್ಜಯನಾಯಕನಿರ್ದನುರ್ಬಿಯೊಳ್ ॥ ೩೫೧ ॥

ಶಾಸನಕವಿ ದೇವಭದ್ರಮುನಿ :

ಉಚಿತ ಪದಾಳಂಕಾರಂ
ಪ್ರಚುರರಸಂ ನೆಗಳಲಿಂತು ಜಿನಶಾಸನಮಂ
ರಚಿಯಿಸಿದಂ ಹರಹಾಸ
ದ್ರುಚಿಯಶ ದೇವಭದ್ರಮುನಿಪೋತ್ತಂಸಂ ॥ ೩೫೨ ॥

ಚತುರ್ಭಾಷಾ ಕವಿಚಕ್ರವರ್ತಿ ಕವಿಕಂದರ್ಪ :

ದೋಷವ್ಯತೀತಮರ್ಥ ವಿ
ಶೇಷಮಿದೆನೆ ಪೇಳ್ದನೊಲ್ದು ಶಾಸನಮಂ ಪೀ
ಯೂಷ ಸಮಸೂಕ್ತಿ ಚಾತು
ರ್ಭಾಷಾ ಕವಿಚಕ್ರವರ್ತಿ ಕವಿಕಂದರ್ಪಂ ॥ ೩೫೩ ॥

ಶಾಸ್ತ್ರಜ್ಞರಾಮಸೇನ :

ಒದವಿದ ಶಬ್ದಶಾಸ್ತ್ರದೆಡೆಯೊಳ್ ಭುವನಸ್ತುತ ಪೂಜ್ಯಪಾದರೆಂ
ಬುದು, ನೆರೆ ತರ್ಕಶಾಸ್ತ್ರದ ವಿವೇಕದೊಳಿಂತಕಳಂಕದೇವರೆಂ
ಬುದು, ಕವಿತಾಗುಣೋತ್ಕರ ಮಹತ್ವದೊಳೆಯ್ದೆ ಸಮಂತಭದ್ರರೆಂ
ಬುದು, ಸಲೆ ರಾಮಸೇನ ವಿಭುದೋತ್ತಮರಂ ನಿಖಿಳೋರ್ವಿ ರಾಜನಂ ॥ ೩೫೪ ॥

ಅವಧಾನಿ ಮಲ್ಲಿದೇವ :

ಪರಿಕಿಸೆ ಮಲ್ಲಿದೇವವಿಭುಗಾರ್ ಸಮನಿರ್ಬರುಮಿಕ್ಕೆಲಂಗಳೊಳ್
ಬರೆದುದನಂತ್ಯದಿಂ ಬರೆವ ಬಾಜಿಪ ಬಾಜಿಪ ಕಬ್ಬಮೆಂತುಟಂ
ತಿರ ಪೊಸಕಬ್ಬಮಂ ನುಡಿವ ಭಾವಿಪ ಕೇಳ್ವ ಕಥಾಚತುಷ್ಕಮಂ
ಧರೆ ಪರಿಕರ್ಮಮೆಂದೆನಿತುಮಂ ಗುಣಿಯಿಪ್ಪ ಮತಿಪ್ರಭಾವದೊಳ್ ॥ ೩೫೫ ॥

ಅಲಂಕಾರಲಿಪಿಜ್ಞರೂವಣ :
ಆನೆಯ ಸಿಂಘದ ಗಿಳಿಗಳ
ನಾನಾ ರೂಪಗಳನಕ್ಕರಂಗಳೊಳೆಸೆಯಲು
ತಾನಳವಡಿಸುವನೆಂದಡ
ದೇನ ಮರುಳೆ ತೊಡರ್ದಪ್ಪೈ ರೂವಣನೊಳ್ ॥ ೩೫೬ ॥

ಶಾಸ್ತ್ರಶುದ್ಧಲಿಪಿಜ್ಞ ಇಕ್ಕುಡ :
ಪೊಕ್ಕಳು ತಲೆಕಟ್ಟುಮನ
ನಂತರದವಯವಮನರಿದು ಖಂಡರಿಸಲುಕೀ
ಇಕ್ಕುಡೆನ ಬಲ್ಲನರಿಯರ್
ಮಿಕ್ಕವರೆಂದು ಧರಣಿ ಬಣ್ಣಿಸುತಿರ್ಕುಂ ॥ ೩೫೭ ॥

ಬಹುಲಿಪಿಜ್ಞ ರವಿದೇವ :
ಅನುಮಾನಕ್ಕೆಡೆಯಿಲ್ಲ ಬಾಜಿಪೊಡೆ ರೇಖಾಶುದ್ಧಿ ಬೇರೊಂದೆ ಭಿ
ತ್ತಿ ನಯಮಂಬೆತ್ತೆಸೆದಪ್ಪುವೀ ನಿಮಿರ್ದ ಚಂಚನ್ಮಾತ್ರೆಗಳ್ ಪದ್ಮಗ
ರ್ಭನುಮೇಂ ಬಲ್ಲನೆ ಪೇಳಿಮಿಂತು ಬರೆಯಲ್ಕೆಂಬನ್ನೆಗಂ ತಾನೆ ನೆ
ಟ್ಟನೆ ಬಲ್ಲಂ ಬರೆಯಲ್ಕನೇಕಲಿಪಿಯಂ ಶ್ರೀವಿಪ್ರವಿದ್ಯಾಧರಂ ॥ ೩೫೮ ॥

ವಾದನಕುಶಲ ರವಿದೇವ :
ಇದು ನವಮಧುಧಾರಾಸಾರವೋ ಮೇಣ್ಸುಧಾಂಭೋ
ನದಿಯೊ ಕವಿವುದೆಂಬೊಂದಂದದಿಂ ನುಣ್ಣನಿಂಪಂ
ಪುದಿದು ರವಿಚಮೂಪಂ ಬಾಜಿಪೊಂದೋಜೆ ಪೇಳೇ
ನೊದವಿಸುಗುಮೊ ಕರ್ಣಾನಂದಮಂ ಧಾತ್ರಿಗೆಲ್ಲಂ ॥ ೩೫೯ ॥

ಕಂಖರಿವಾದಕ ಜಿನವರ್ಮ :
ಜಿನವರ್ಮನ ಕಂಖರಿಯ
ಧ್ವನಿ ಕಿವಿವುಗೆ ದುರ್ಜನಂಗೆ ಭಯಮುಂ ಸುಜನಂ
ಗನುರಾಗಮುಮುದಯಿಸುಗುಂ
ಘನನಾದದಿನೆಂತು ಹಂಸೆಗಂ ನವಿಲಿಂಗಂ ॥ ೩೬೦ ॥

ಮಂಡಳೇಸ್ವರ ಜೋಮನ ಆಸ್ಥಾನ ಕಲಾಮೇಳ :

ರಸಮೊಸರ್ವಂತೆ ಪಾಡುತಿರೆ ಪಾಡುವವರ್, ಮನಮೆಂಬ ಕೋಕಿ ನ
ರ್ತಿಸೆ, ಘನನಾದಮಂ ಮೆರಯೆ ವಾದಕರಿಂದ್ರಧನುಃಪ್ರಭಾವಮಂ
ಪಸರಿಸೆ, ಪಚ್ಚನಾಡುತಿರೆ ಜಂತ್ರದ ಮಿಂಚಿನ ಪೆಣ್ಣಿದೆಂಬಿನಂ
ಮಸುಗುವ ಪಾತ್ರಮೊಪ್ಪಿದುದು ಜೋಮನ ಮುಂತೆ ಸುಖಾಂಬುರಾಗಮಂ ॥ ೩೬೧ ॥

ಪಾತ್ರಜಗದಳೆ ಬಾಚಲದೇವಿ :

ಅರಿಬಿರುದ ಪಾತ್ರಜಗದಳೆ
ಧರೆಗೆಲ್ಲಂ ನೀನೆ ರಾಯಜಗದ[ಳ] ನಾನೀ
ಧರೆಗೆಲ್ಲಮೆಂದು ಪಿರಿದಾ
ದರದಿಂದೆತ್ತಿಸಿ ಪಾತ್ರಜಗದಳೆ ಪೆಸರಂ ॥ ೩೬೨ ॥

ಕಲಾಪರಿಣತ ತಿಪಪ್ಪೋಜ :

ಭರತಾಗಮ ಶಾಸ್ತ್ರಕಳಾ
ಪರಿಣತಿಯೊಳ್ ವರ್ಣಕವಿತೆಯೊಳ್ ದಾನಗುಣೋ
ತ್ಕರದೊಳ್ ಸರಿಯಾರ್ ವಂಕೇ
ಶ್ವರದೇವರ ತಿಪ್ಪಣೋಜನೊಳ್ ಭೂತಳದೊಳ್ ॥ ೩೬೩ ॥

ಪ್ರಾಸಾದಿ ಪ್ರತಿಮಾದಿ ಲಕ್ಷಣದೊಳ್ ಹೊಲ್ಲೋಜನೊಳ್ ವಾದಿಯಾರ್
ಲೇಸೆಂದುರ್ವರೆ ಬಣ್ಣಿಸಲ್ ಮುದದಿನಿರ್ಪಂ ಬಾಗೆಯೊಳ್ ತತ್ಸುತಂ
ದೇಸೀಯಾ ಬಗೆಕಾರ ಬಲ್ಲವರ ಬಲ್ಲಂ ಯಾಚಕೋದ್ಧಾರನೆಂ
ಬೀ ಸತ್ಕೀರ್ತಿಗೆ ತಿಪ್ಪಣೋಜನಧಿಪಂ ಬಂಕೇಶ ದಾಸೋತ್ತಮಂ ॥ ೩೬೪ ॥

ಕಮ್ಮರ ವೃತ್ತಿಯ ಅಯ್ಯಣ :

ಪುರಿಕರ ಪಟ್ಟಣೋದ್ಭವನ ಕಂಟದ ಬಮ್ಮನ ಪುತ್ರನಯ್ಯಣಂ
ಮರವೆಸದೊಪ್ಪುವಿಟ್ಟಿಗೆಯ ದಂತದ ಚಿತ್ರದ ಶಾಸ್ತ್ರಯುಕ್ತಮಾ
ಗಿರೆ ಬೆಸಗೆಯ್ವ ಕಲುಭರಿವ ಕಮ್ಮರವಿನ್ನಣದೋಜೆಗೆಲ್ಲಿಯುಂ
ಪರಿಕಿಸೆ ವಿಶ್ವಕರ್ಮನಿನವಂ ಮಿಗಿಲೆಂಬುದಶೇಷ ಭೂತಳಂ ॥ ೩೬೫ ॥

ಅಕ್ಕಸಾಲಿ ವೃತ್ತಿಯ ಕೇತೋಜ :

ಪದಕದ ಮಕುಟದ ಕೇಯೂ
ರದ ಕೆಲಸದೊಳಕ್ಕಸಾಲಿ ಬಸವೋಜಸುತಂ
ಚದುರಂ ಕೇತೋಜಂ ಮ
ತ್ತಿದೆಂತು ಕಂಡರಸಿ ಕಡೆದನೀ ಶಾಸನಮಂ ॥ ೩೬೬ ॥

ರಾಷ್ಟ್ರಕೂಟ ಇಂದ್ರರಾಜನ ಕಂದುಕಕ್ರೀಡೆ :

ಶ್ರೀಗೆ ವಿಜಯಕ್ಕೆ ವಿದ್ಯೆಗೆ
ಚಾಗಕ್ಕದಟಿಂಗೆ ಜಸಕೆ ಪೆಂಪಿಂಗಿನಿತ
ರ್ಕಾಗರಮಿದೆಂದು ಕಂದುಕ
ದಾಗಮದೊಳೆ ನೆಗಳ್ಗುಮಲ್ತೆ ಬೀರರ ಬೀರಂ ॥ ೩೬೭ ॥

ಒಳಗಣ ದಕ್ಷಿಣ ಸುಕರ ದುಷ್ಕರಮಂ ಪೊರಗಣ ಸುಕರ ದುಷ್ಕರ ಭೇದಮಂ
ಒಳಗೆ ವಾಮದ ವಿಷಮಮನಲ್ಲಿಯ ವಿಷಮ ದುಷ್ಕರಮನಿನ್ನದರ ಪೊರಗ
ಗ್ಗಳಿಕೆಯೆನಿಪತಿ ವಿಷಮಮನದರತಿ ವಿಷಮ ದುಷ್ಕರಮೆಂಬ ದುಷ್ಕರಮಂ
ಎಳೆಯೊಳೊರ್ವನೆ ಚಾರಿಸಲ್ ಬಲ್ಲಂ ನಾಲ್ಕು ಪ್ರಕರಣಮುಮನಿಂದ್ರರಾಜಂ ॥ ೩೬೮ ॥

ಅಶ್ವಾರೋಹಿ ಏಚಣ :

ಬಾರಿಸೆ ದಂಡೆಯಂ ಕೊರಲಕೊಂಕಳವಟ್ಟಿರೆ, ಕಾಲ ವೇಗಮೀ
ಧಾರಿಣಿಯೊಳ್ ಬೆಡಂಗನೊಳಕೊಂಡಿರಲೇರಿ ತುರಂಗರಾಜನಂ
ವೀರಮುಮಂ ವಿಳಾಸಮುಮನೀತನೆ ತಾಳ್ದಿದನೆಂದು ನೋಡಿ ಕೆ
ಯ್ವಾರದಿನೆಲ್ಲರುಂ ಪೊಗಳೆ ತನ್ನನೆ ಏಚಣಮಂತ್ರಿ ರಂಜಿಪಂ ॥ ೩೬೯ ॥

೨೫. ರಾಜಮಾನ್ಯತೆ

ಸಾಮಾಜಿಕ ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ಸಾಧನೆ ಮಾಡಿದವರಿಗೆ ರಾಜನಾದವನು ಉಚಿತ ಕಾಣಿಕೆ ಸಹಿತ ಗೌರವಿಸುತ್ತಿದ್ದುದು, ಸ್ಥಾನ–ಮಾನ ನೀಡುತ್ತಿದ್ದುದು, ಪ್ರಾಚೀನ ಕಾಲದಲ್ಲಿಯೂ ರೂಢಿಯಲ್ಲಿತ್ತು. ತುಂಬ ಆಪ್ತ ಸಂದರ್ಭಗಳಲ್ಲಿ ರಾಜನಾದವನು ತನ್ನ ಹೆಸರನ್ನೋ, ಬಿರುದನ್ನೋ ದಯಪಾಲಿಸುತ್ತಿದ್ದನು.

ವೀಸೋತ್ತರ ಪಂಡಿತ:

ಗುಡಿ ಶಂಖಂ ಚಾಮರಂ ಬೆಳ್ಗೊಡೆ ಘಳಿಗೆ ವಿಚಿತ್ರಾತಪತ್ರವ್ರಜಂ ಪೆ
ರ್ವಿಡಿ ಸೌಧಂ ಚಿತ್ರದಂಡಂ ಪಳಿಯೆಸೆವ ಝಳಂಬಂ ಗಜೇಂದ್ರಂ ತುರುಂಗಂ
ನಡೆಮಾಡಂ ದಂಡನಾಥೋತ್ತಮ ಪದವಿ ಮಹಾತೂರ್ಯಮೆಂಬಿಂತಿವಂತುಂ
ಪಡೆದು ಚೆಲ್ವಿಂದೆ ವೀಸೋತ್ತರ ವಿದಿತ ಧರಾದೇವನಿಷ್ಪಪ್ರಭಾವಂ ॥ ೩೭೦ ॥

ಕೇಶಿಗಾವುಂಡ :

ಪಡೆದಂ ಕಾದಂಬವಂಶಾಗ್ರಣಿ ಹರಿಗಮಹೀಪಾಳನೊಳ್ ಚಾಮರೌಘಂ
ಗುಡಿ ಚೌಕಂ ಭೇರಿ ಶಂಖಂ ಬರುಹಿ ಬಹಳ ಪಿಂಛಾತಪಂ ವಾರಣಂ ಬೆ
ಳ್ಗೊಡೆಯೆಂಬೀ ರಾಜ್ಯಚಿಹ್ನವ್ರಜಮನುದಿತ ತೀವ್ರಪ್ರಭಾಭಾಸಿ ತಾನೆಂ
ದಡೆ ಹೋ ಬಾಪ್ಪಪ್ಪುದಿಂತೀ ಭುವನ ಭವನದೊಳ್ ಕೇಶಿ ತೇಜೋವಿಳಾಸಂ॥ ೩೭೧ ॥

ಮಗನೆನಗೀತನೆ 'ಚಾಳು
ಕ್ಯ ಗಂಗಪೆರ್ಮಾಡಿ'ಯೆಂದು ಪೆಸರ್ಗೊಟ್ಟಂ ಕೇ
ಸಿಗೆ ಮೆಚ್ಚಿ ನಚ್ಚಿ ಚಾಳು
ಕ್ಯ ಗಂಗಪೆರ್ಮಾಡಿ ವಿಕ್ರಮಾದಿತ್ಯನೃಪಂ ॥ ೩೭೨ ॥

ಪರಮೋತ್ಸಾಹದಿನಿತ್ತನುತ್ತಮ ಸಿತಚ್ಛತ್ರಾಸ್ಪದಂ ಹೇಮ ಚಾ
ಮರಯುಗ್ಮಂ ಗುಡಿ ವೀರಭೇರಿ ಶಿಖಿ ಪಿಂಛಚ್ಛತ್ರೆಂದಿಂತು ಗಂ
ಗರ ಚಾಳುಕ್ಯರ ರಾಜ್ಯಚಿಹ್ನ ಚಯಮಂ ಶ್ರೀ ವಿಕ್ರಮಾದಿತ್ಯ ಭೂ
ಧರನೆಂಬುನ್ನತಿ ಕೇಶಿರಾಜವಿಭುವಿಂಗಕ್ಕುಂ ಪೆರರ್ಗಕ್ಕುಮೇ ॥ ೩೭೩ ॥

ಮಾಹಾಮಾತ್ಯ ನಾಗರಸ :

ಅಂತಃಪುರದಧ್ಯಕ್ಷಂ
ಕುಂತಳಪತಿಯಿತ್ತ ಸುರಿಗೆವಿಡಿವಧಿಕಾರಂ
ಸಂತತದ ತಂತ್ರಹಾಳಿಕೆ
ಇಂತು ಮಹಾಮಾತ್ಯಪದವಿಗಿವು ಸಂಚಕರಂ ॥ ೩೭೪ ॥

ಆಯ್ತವರ್ಮ :

ಜವಳಿ ಝುಣಂಬಮಂ ಕೊಡೆಯನಂದಳಮಂ ಚಮರೀರುಹಂಗಳಂ
ಭುವನದ ಕಣ್ಣ ಪುಣ್ಯದ ಫಳಂ ದಿಟಮೆಂಬಿನವಂಗಚಿತ್ತಮಂ
ತಂದೊಲವಿಂದೆ ಚಕ್ರಿ ಕುಡಲಂಕದ ಕಾಳೆಗಮಾದಿಯಾಗಿರಲ್
ವಿವಿಧ ಗುಣಾರ್ಣವಂ ಪಡೆದನೆನ್ನದರಾರ್ ನೆಗಳ್ದಾಯ್ತವರ್ಮನಂ ॥ ೩೭೫ ॥

೨೬. ಸಂಘರ್ಷ–ತೀರ್ಪು–ದಂಡ–ತೆರಿಗೆ

ಸಾಮಾಜಿಕ, ಧಾರ್ಮಿಕ ಸಂಘರ್ಷ, ವೈಯಕ್ತಿಕ ಪ್ರಮಾದಗಳು ಬದುಕಿನ ಭಾಗ. ಇಂಥ ಸಂದರ್ಭಗಳ ದಾಖಲೆ, ಪ್ರಮಾದ ಸಂದರ್ಭದಲ್ಲಿ ನೀಡಲಾದ ತೀರ್ಪು, ನಿರ್ಣಯಿಸಿದ ದಂಡಗಳ ಉಲ್ಲೇಖ ಶಾಸನಗಳಲ್ಲಿ ಆಗಾಗ ಕಂಡುಬರುತ್ತದೆ. ಸಾಮಾಜಿಕ ಸುವ್ಯವಸ್ಥೆಗಾಗಿ ಆಕರಿಸಲಾಗುತ್ತಿದ್ದ ತೆರಿಗೆಗಳ ಉಲ್ಲೇಖವೂ ಶಾಸನಗಳಲ್ಲಿದೆ.

ಏಕಾಂತದ ರಾಮಯ್ಯನ ಶಿರಸ್ಸು ಪವಾಡ :

ಏಕಾಂತದ ರಾಮಯ್ಯನಬ್ಬಲೂರು ಬ್ರಹ್ಮೇಶ್ವರ ಸ್ಥಾನದೊಳು ನಿಸ್ಪೃಹ
ವೃತ್ತಿಯಿಂದಮಿರೆ,
ಉಲಿದೊಡ್ಡಿ ಬಂದು ಜೈನರ್
ಪಲರಂತಾ ಸಂಕಗೌಂಡ ಸಹಿತಂ ಪಿರಿದುಂ
ಚಲದಿಂ ಕೈವಾರಿಸಿದರ್
ತೊಲಗದೆ ಜಿನ ದೈವವೆಂದು ಶಿವಸನ್ನಿಧಿಯೊಳ್ ॥ ೩೭೬ ॥

ಹರನಂತಿರೀವನೆ ನಿ
ಮ್ಮರುಹಂ ಮುಂ ಕೊಟ್ಟ ಟಾವದಾವುದು ಮುನ್ನಂ
ಹರನೊಳ್ ಪಡೆದರನೇಕರ್
ವರಮಂ ಬಾಣ (ಸಿರಿಯಾ)ಳ ಭಕ್ತಗಣಂಗಳ್ ॥ ೩೭೭ ॥

ಎನೆ ಜೈನರೆಂಗುಂ ನೀಂ ಮು
ನ್ನಿನ ಹಿತರರ ಹೇಳಲೇಕೆ ನಿನ್ನಯ ಶಿರಮಂ

ಜನಮರಿಯಲರಿದು ಕೊಟ್ಟಾ
ತನೊಳಿಂ ಪಡೆ ನೀನೆ ಭಕ್ತನಾತನೆ ದೈವಂ ॥ ೩೭೮ ॥

ಎನಲೇಕಾಂತದ ರಾಮಂ
ಮನಸಿಜರಿಪುಗಿತ್ತು ತಲೆಯನಾಂ ಪಡೆದಡೆ ನೀ
ವನಗೀವ ಪಣಮದೇನೆನೆ
ಮುನಿದೆಂದರ್ ಜಿನನ ಕಿತ್ತು ಶಿವನಂ ನಿಲಿಪೆವು ॥ ೩೭೯ ॥

ಎನೆ ಕುಡುವುದೋಲೆಯ ನೀ
ವೆನಗೆಂದಿತ್ತೋಲೆಗೊಂಡು ಶಿರಮಂ ತಾಂ ಭೋಂ
ಕೆನಲರಿದು ಕುಡುವ ಪದದೊಳ್ ಶಿ
ವನಂ ಸಾನಿಧ್ಯಮಾಡಿ ರಾಮಂ ನುಡಿಗುಂ ॥ ೩೮೦ ॥

ಉಡುಗದೆ ಶಂಭು ನೀನೆ ಶರಣೆನ್ನದಡಂ ಮನಮನ್ಯಭಾವದೊಳ್
ತೊಡರ್ದೊಡಮೀ ಕೃಪಾಣಮುಖದಿಂ ತಲೆ ಪೋಗದೆ ನಿಲ್ಕದಲ್ಲದಿ
ರ್ದಡೆ ಶಿವ ನಿನ್ನ ಮುನ್ನಡಿಗುರುಳ್ಗೆನುತಂ ಕಲಿ ರಾಮನಾರ್ದು ಕೆ
ಯ್ಗಿಡದರಿದಿಕ್ಕಲಾಟಿಸಿದ(ನಾ) ಶಿರಮಂ ಶಿವನಂಘ್ರಿಯುಗ್ಮದೊಳ್ ॥ ೩೮೧ ॥

ಅರಗಯ್ಗೊಂಡನೆ ? ಕಿಳ್ತು ನೋಡಿದನೆ ? ಕೂರ್ಪಿಂಗಳ್ಕಿ ಮೆಯ್ಗಾಗ್ಯದನೇ ?
ಸೆರಗಂ ಪಾರ್ದನೆ ? ಬಾಳ್ಗೆ ಭಕ್ತರೆನುತಂ ಬಲ್ಲಾಳು ರಾಮಂ ಸ್ವಕಂ
ಧರಮಂ ಚಕ್ಕನೆ ಹುಲ್ಲ ಕಟ್ಟನರಿವಂತಕ್ಲೇಶದಿಂದಾ ಗಳಂ
ತರಿದೀಶಾಂಘ್ರಿಯೊಳಿ(ಕ್ಕಿ ಶಂಕರ)ಗಣಕ್ಕಾನಂದವಂ ಮಾಡಿದಂ ॥ ೩೮೨ ॥

ಅರಿದ ತಲೆ ಏಳು ದೆವಸಂ
ಬರೆಗಂ ಮೆರೆದಿಂ ಬಳಿಕ್ಕವಿತ್ತಂ ಹರನಾ
ದರದಿಂ ತಲೆ ಕಲೆಯಿಲ್ಲದೆ
ತಿರವಾದುದು ಲೋಕವರಿಯೆ ರಾಮಂ ಪಡೆದಂ ॥ ೩೮೩ ॥

ಬಡಿಗೊಂಡೊರ್ಬನೆ ಸೊಕ್ಕಿ ಬಾಳೆ ವನಮಂ ಕಾಡಾನೆ ಪೊಕ್ಕಂತಿರು
ರ್ಕಡಗಲ್ ಕಾಪಿನ ವೀರರಂ ತುರಗಮಂ ಸಾಮಂತರಂ ತೂಳ್ದು ಮಾ
ರ್ಪಡೆಗಳ್ ಜೈನರ ಮಾರಿ ಬಂದುದೆನುತಂ ಬೆಂಗೊಟ್ಟು ಪೋಗಲ್ ಜಿನಂ
ಕೆಡೆವನ್ನಂ ಬಡಿದಲ್ಲಿ ಕೈಕೊಳಿಸಿದಂ ಶ್ರೀವೀರಸೋಮೇಶನಂ ॥ ೩೮೪ ॥

ವೀರ ಗೊಗ್ಗಿದೇವ :
ಜೈನಮೃಗಬೇಂಟೆಕಾರಂ
ಜೈನಾಗಮ ಧೂಮಕೇತು ಜೈನಕುಠಾರಂ
ಜೈನಫಣಿ ವೈನತೇಯಂ
ಜೈನಾಂತಕನೆನಿಸಿ ನೆಗಳ್ದನೀ ಗೊಗ್ಗರಸಂ ॥ ೩೮೫ ॥

ತೇರದಾಳ ಗೊಂಕಜಿನಾಲಯ :
ಬಸದಿಯ ಮೇಲೆ ಶೂದ್ರಕನ ಸಿಂಹದ ಚಕ್ರದ ಚಿಹ್ನಮೆಂಬಿವಂ
ತಿಸುಳದ ಘಂಟೆಯಂ ಪಡೆಯದಾಗದೆನಿಪ್ಪವನೇಳು ಕೋಟಿ ತಾ
ಪಸರ್ಗೆ ಮಹಾವಿರೋಧಿಯವನೀಶ್ವರ ವೈರಿಯೆನುತ್ತವಿಕ್ಕಿದರ್
ಮಿಸುಗುವ ಜೋಗವಟ್ಟಿಗೆಯನಾ ಮುನಿಸಂಖ್ಯೆಯ ಕೋಟಿ ತಾಪಸರ್ ॥ ೩೮೬ ॥

ಗೂಳಿಯ ಮರಣಕ್ಕೆ ಕಾರಣನಾದ ವಾಮಭಟ್ಟನಿಗೆ ಶಿಕ್ಷೆ :
ಜಂಬೂದ್ವೀಪದೊಳದು ತಾಂ
ಗಂಭೀರತೆವೆರಸು ನೆಗಳ್ದ ಕೈಕೇಶ್ವರದೊಳ್
ಶಂಭು ನೆಲಸಿರ್ಪನದರಿಂ
ದಿಂಬಾಗಿರೆ ಕೂರ್ದವಳ್ಳಿಯೆಸೆವುದು ಗ್ರಾಮಂ ॥ ೩೮೭ ॥

ಶಿವನಿಳಯದಿಂದೆ ಪೊರಮ
ಟ್ಟು ವೇಗದಿಂ ಪೋಗಿ ವಾಮನಯ್ಯನ ಕೆಯ್ಯಂ
ಕ್ರಮದಿಂದೆ ಮೇವ ವೃಷಭನ
ನವಯವದಿಂ ಪೋಗಿ ಕಂಡು ಕಡುಮೂರ್ಖತೆಯಿಂ ॥ ೩೮೮ ॥

ಮರೆಕೋಲ ಕಳೆದುಕೊಳ್ಳುತೆ
ಬರಸಿಡಿಲೆರಪಂತೆ ಬಂದು ವಾಮನಭಟ್ಟಂ
ಕರುಪಿಂದಮೆಯ್ದಿ ಪೊಯ್ಯಲ್
'ಕರೆಕಂಠ ಶರಣ್ಯ' ಎಂದು ಬಿಳ್ದುದು ವೃಷಭಂ ॥ ೩೮೯ ॥

ಅತ್ತಲ್ ವೃಷಭನ ಪ್ರಾಣಂ
ಮತ್ತೆನಿಸದೆ ಪೋದುದಮರವಾಸಮನೆಯ್ದಲ್
ಇತ್ತಲ್ ದೇಹಂ ಬಿಳ್ದೊಡೆ
ಎತ್ತಿನ ಮಣ್ಣೆಂಬುದಾದುದಂದಿಂದಿತ್ತಲ್ ॥ ೩೯೦ ॥

ಪರಿಕಿಸದಾ ಪಾರ್ವ ನಡೆದು
ಪರಮಾರ್ಥಂ ಕೊಂದಳಿಂತು ಮುಂಗುರೆಯಂ ತಾ
ನೆರಡಿಲ್ಲದೆಂಬ ನಾಳ್ನುಡಿ
ಪೊರೆದುದಿದರ್ಕೆಂದೊಡಂದು ಮರುಗುತೆ ಮನದೊಳ್ ॥ ೩೯೧ ॥

ಊರ ಮಹಾಜನಮೆಲ್ಲಮ
ನೋರಂತಿರೆ ನೆರಹಿ ತಂದು ವಾಮನಭಟ್ಟಂ
ಪಾರದೆ ಸ್ವಯಂಭುದೇವರ್ಗೆ
ಧಾರೆಯನೆರೆದಿತ್ತನೆರಡುವಡ್ಡದ ಕೆಯ್ಯಂ ॥ ೩೯೨ ॥

ಬ್ರಾಹ್ಮಣರನ್ನು ಕೊಂದ ಮನ್ನೆಯ ಬೊಪ್ಪನಿಗೆ ಶಿಕ್ಷೆ :

ವ ॥ ಚಾಳುಕ್ಯ ವಿಕ್ರಮವರ್ಷದ ೨೯ನೆಯ ತಾರಣ ಸಂವತ್ಸರದ ವೈಶಾಖ ಶುದ್ಧ ತದಿಗೆ ಆದಿತ್ಯವಾರದಂದು, ಅಗ್ರಹಾರಂ ಗಂಡರಾದಿತ್ಯನ ಹೊಳಲ ಮಹಾಜನಂಗಳು, ಮನ್ನೆಯಂ ಬೊಪ್ಪಯಂ ಹೊಳಲನಿರಿದು ಸರ್ವಸ್ವಹರಣಂ ಮಾಡಿ ಸೂರೆಗೊಂಡುದುಮಂ ಬ್ರಾಹ್ಮಣರಂ ಕೊಂದುದುಮಂ ಚಕ್ರವರ್ತಿಗೆ ಬಿನ್ನಪಂಗೆಯ್ಯಲು.

ಕೇಳ್ದವಧಾರಿಸಿ, ಬೊಪ್ಪನಂ ದಂಡಿಸಿ, ಸಮಸ್ತಪ್ರಧಾನರ ಸಂನಿಧಾನದಲು ಆ ಅಗ್ರಹಾರಕ್ಕೆ ಮಂನೆಯರಾರುವಿಲ್ಲದಂತಾಗಿ ನಿಯಾಮಿಸಿ ಕುಡಿಮೆಂದು ಪ್ರಧಾನರ್ಗಂ ಶ್ರೀಮನು ಮಲೆಯಾಳಪಂಡಿತದೇವರ್ಗಂ ಸೋಮೇಶ್ವರಭಟ್ಟಯಂಗಳಿಗಂ ಚಕ್ರವರ್ತಿ ಬೆಸಸಲನಿಬರುವಿರ್ದು, ಬೊಪ್ಪನಂ ಕರೆದು, ನೀನುಂ ನಿನ್ನ ವಂಶದವರುಂ ಹೊಳಲ ಮನ್ನೆಯಮಂ ಮಾಣ್ಬುದೆಂದು ಮಾಣಿಸಲಾತನುವಂತೆ ಗೆಯ್ವೆನೆಂದು ಆಣೆಪತ್ರಮಂ ಕೊಟ್ಟು, ತ್ರಿಪುರಾಂತಕದೇವರ ಬಳಿ ನೀರಂ

ಕುಡಿದೀ ಪರಿಯಲ್ ಶಾಸನಮಂ ಕುಡುವಂತಾಗಿಯೊಡಂಬಟ್ಟು ಬಂದನಾ ಕ್ರಮದಲೆ ಮಲೆಯಾಳಪಂಡಿದೇವರುಂ ತಾನುವಿರ್ದು ಮನ್ನೆಯಮಂ ಬಿಟ್ಟು, ಬೆಂಣೆವೂರು ಹನ್ನೆರಡರ ಪ್ರಭುಗಾವುಂಡಗಳ ನೀರಗುಂದದ,. ಎರಡುಂ ಹಡಂಗಿಲೆಯ, ಮಾಂಗೊಳದ, ಬಿದಿರಹಳ್ಳಿಯ, ಹಹನೂರ (ಹಾವನೂರ), ಹೊನ್ನವತ್ತಿ, ಕುರುವತ್ತಿಯ, ಬಾಳ್ಗುಳಿಯಂತು ಮೂವತ್ತಿರ್ಚ್ಛಾಸಿರದ ಸನ್ನಿಧಾನದಲು ತ್ರೈಲೋಕ್ಯಮಲ್ಲೇಶ್ವರದೇವರ ಮುಂತೆಯುಂ ಹೊಳಲಲುಂ ಶಾಸನಮಂ ನಿಲಿಸಿದಂ.

॥ ೩೯೩ ॥

ತುರುಕರಿಂದ ಬಸದಿ ನಾಶ :

ಸಿಡಿಲ ಶ್ರೀ ಜಿನಪಾರ್ಶ್ವನಾಥನ ಮಹಾಚೈತ್ಯಾಲಯಂ ದುರ್ಮುಖರ್
ಕಡು ಮೂರ್ಖರ್ ತುರುಕರ್ ಸುಡಲ್ಕೆ ತೊಲೆಗಳ್ ಕಂಬಂಗಳುಂ ಭಿತ್ತಿಗಳ್
ಕೆಡೆಯಲ್ ಕಂಡು ಸುವಜ್ರದಂತೆ ಬಲುಪಂತುಂ ತಾಳ್ದಿರಲ್ ಮಾಡಿದಂ
ಪೊಡವೀ ಖ್ಯಾತ ಸಹಸ್ರಕೀರ್ತಿಯತಿಪಂ ದೇಶೀಗಣಾಗ್ರೇಸರಂ ॥ ೩೯೪ ॥

ದುರುಳಮತಿ ತುರುಕರು ಬಂ
ದರುಹನ ಆಲಯವ ಹೊಕ್ಕು ಕೆಡಿಸಲ್ ಮತ್ತಾ
ದೊರೆ ನಾಗಭೂಪನರಸಿಯು
ನಿರುತದಿ ನೆಗಳಿದಳು ಪಂಚಕಲ್ಯಾಣವನಂ ॥ ೩೯೫ ॥

ಅಪರಾಧಿಗೆ ದಂಡಗಳು :

ಬಯ್ದಂಗೆ ಪಣಮುಮೊಂ(ದುಂ)
ಪೊಯ್ದಂಗಾರು ಪಣಮಿರಿಯೆ ಪನ್ನೆರಡು ಪಣಂ
(ಪೊಯ್ದಿ)ರದೆ ಸುರಿಗೆಗಿರ್ತಿರ
ದೆಯ್ದಿದವಂಗೆಂಟು ಪಣಮೆ ದಂಡಂ ನಿರುತಂ ॥ ೩೯೬ ॥

ಇರಿದಡೆ ಪನ್ನೆರಡು ಪಣಂ
ಕಳ್ದುಬಂದು ಪೊಯ್ದೊಡಾರು ಪಣಮು ದಂಡಂ
ನೆರೆ ಬಯ್ದಡೆ ಮೂರು ಪಣಂ
ಕೆರೆಗೆಂದು ದಂಡಮಾಗಿ ನಡೆವುದು ನಿಯತಂ ॥ ೩೯೭ ॥

ವಿಪ್ರರ ವಿವಾಹಮುಮಾ
ಗಪ್ಪನಿತರೊಳೆಲ್ಲಮೊಸಗೆ ದ್ರಮ್ಮಮಾರುಂ
ತಪ್ಪದೆ ಮಾಣಿಯೊಳೆರಡಂ
ತಪ್ಪಿದರೀ ಶೂದ್ರಗಣದ ಮದುವೆಯೊಳೊಂದಂ ॥ ೩೯೮ ॥

೨೭. ಫಲಶ್ರುತಿ

ಪ್ರಾರ್ಥನೆಯಿಂದ ಪ್ರಾರಂಭವಾಗುವ ಶಾಸನಗಳು ಫಲಶ್ರುತಿಯಿಂದ ಮುಕ್ತಾಯಗೊಳ್ಳುತ್ತವೆ. ಶಾಸನದ ದಾಖಲೆಗೆ ತಪ್ಪಿ ನಡೆದರೆ, ಶಾಸನ ಶಿಲೆಯನ್ನು ನಾಶಗೊಳಿಸಿದರೆ ಶಾಪವನ್ನು ಸಾರುವ ಇವು, ರಕ್ಷಿಸಿದರೆ ಶುಭವನ್ನು ಕೋರುತ್ತವೆ.

ಶಾಸನಮಿದಾವುದೆಲ್ಲಿಯ
ಶಾಸನಮಾರಿತ್ತರೇಕೆ ಸಲಿಸುವೆ ನಾನೀ
ಶಾಸನಮನೆಂಬ ಪಾತಕ
ನಾ ಸಕಳಂ ರೌರವಕ್ಕೆ ಗಳಗಳನಿಳಿಗುಂ ॥ ೩೯೯ ॥

ಪ್ರಿಯದಿಂದಿಂತಿದನೆಯ್ದೆ ಕಾವ ಪುರುಷಂಗಾಯುಂ ಮಹಾಶ್ರೀಯುಮ
ಕ್ಕೆಯಿದಂ ಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರೋರ್ವಿಯೊಳ್ ವಾರಣಾ
ಸಿಯೊಳೇಳ್ಕೋಟಿ ಮುನೀಂದ್ರರಂ ಕವಿಲೆಯಂ ವೇದಾಢ್ಯರಂ ಕೊಂದುದೊಂ
ದಯಶಂ ಸಾರ್ಗುಮಿದೆಂದು ಸಾರಿದಪುದೀ ಶೈಲಾಕ್ಷರಂ ಧಾತ್ರಿಯೊಳ್ ॥ ೪೦೦ ॥

❖❖

ಆಕರ ಸೂಚಿ

ಇಲ್ಲಿಯ ಕ್ರಮಾಂಕ ಪಠ್ಯದಲ್ಲಿಯ ಪದ್ಯ, ಗದ್ಯ ಕ್ರಮಾಂಕಗಳನ್ನು ಸೂಚಿಸುತ್ತವೆ.

---

೧. EC. XII ಚಿಕ್ಕನಾಯಕನಹಳ್ಳಿ – ೯, ಬೂದಿಹಾಳು
೨. EC. III ಶ್ರೀರಂಗಪಟ್ಟಣ – ೬೪, ತೊಣ್ಣೂರು
೩. EC. XI ದಾವಣಗೆರೆ – ೨೫, ಹರಿಹರ
೪. EC. VII ಷಿಕಾರಿಪುರ – ೧೧೮, ಬೇಗೂರು
೫. EC. V ಅರಸಿಕೆರೆ – ೬೨, ಹಲಕೂರು
೬. EC. VI ಚಿಕ್ಕಮಗಳೂರು – ೧೬೦, ಸಿಂಧಗಿರಿ
೭. INKK (Kundangar) – ೧, ಕೊಲ್ಲಾಪುರ
೮. ಶಿವಾನುಭವ III – ೯೪, ಅರ್ಜುನವಾಡ
೯. ಶಾಸನ ಪರಿಚಯ – ೫೩, ಕುಕನೂರು
೧೦. INKK (Kundangar) – ೧೩, ಮುತ್ತಗೆ
೧೧. ಶಾಸನ ಪರಿಚಯ – ೫೩, ಕುಕನೂರು
೧೨. EC. VIII ಸೊರಬ – ೨೮, ಸೊರಬ
೧೩. EC. VII ಷಿಕಾರಿಪುರ – ೨೩೬, ಬಳ್ಳಿಗಾವೆ
೧೪. EI XIX – ೨೨೬, ರೋಣ
೧೫. ಕಲ್ಬುರ್ಗಿ ಜಿಲ್ಲೆಯ ಶಾಸನಗಳು ಪು. ೪೯೧, ಸೇಡಂ
೧೬. EC. VIII ಸೊರಬ – ೨೬೧, ಕುಪ್ಪಟೂರು
೧೭. EC. XI ದಾವಣಗೆರೆ – ೩೫, ಹರಿಹರ
೧೮. EC. VIII ಸೊರಬ – ೩೨೯, ಭಾರಂಗಿ
೧೯. EI XIV – ೨೭೦, ಕುರುಗೋಡ

೨೦. SII. IX-I – ೧೪೧, ನೀಲಗುಂದ
೨೧. SII. XVIII – ೧೯೯, ಇಂಡಿ
೨೨. SII. XVIII – ೧೯೯, ಇಂಡಿ
೨೩. EC. VII ಶಿಕಾರಿಪುರ – ೧೦೦, ಬಳ್ಳಿಗಾವಿ
೨೪. ಕಕಚ, I ಪು. ೫೨೯
೨೫. EI XVI ಪು. ೩, ಸೊಗಲ
೨೬. EI XIII - ೪೧, ಇಟ್ಟಗಿ
೨೭. SII IX-I – ೨೪೯, ಕೋಳೂರು
೨೮. EI. XIII– ಪು. ೩೨೯, ಕಳಸ
೨೯. SII IX-I – ೧೧೮, ಹಿರೇಹಡಗಲಿ
೩೦. SII IX-I – ೧೧೮, ಹಿರೇಹಡಗಲಿ
೩೧. SII XX – ೮೦, ಸಿಂದಗಿ
೩೨. EI XIV – ೧೯, ಕುರುಗೋಡ
೩೩. EI XVI – ೩೭, ಲಕ್ಷ್ಮೇಶ್ವರ
೩೪. EI XVI – ೩೭, ಲಕ್ಷ್ಮೇಶ್ವರ
೩೫. EC. VIII ಸಾಗರ – ೧೬೩, ಹೊಗೆಕೆರೆ
೩೬. EC. XV – ೩೪೮, ಗದಗ
೩೭. ಶಾಸನ ಪರಿಚಯ – ೫೨, ಕುಕನೂರು
೩೮. EC. XVIII – ೨೦೮, ಹೂಲಿ
೩೯. SII. IX-I – ೨೯೭, ಕುರುಗೋಡ
೪೦. SI. IX-I – ೨೯೭, ಕುರುಗೋಡ
೪೧. EI. XXIX – ಪು. ೨೦೩, ತಳ್ಳಂಗೆರೆ
೪೨. KI. I – ೨೪, ಸಿರಸಂಗಿ
೪೩. EC. VII ಶಿಕಾರಿಪುರ – ೧೦೨, ಬಳ್ಳಿಗಾವಿ
೪೪. KI. V – ೨೦, ಬಾಳೂರು
೪೫. KI. I – ೬೯, ಮುನವಳ್ಳಿ
೪೬. ಧಾ. ತಾ. ಶಾ. – ೨, ಅಮ್ಮಿನಭಾವಿ
೪೭. EC. XII ಪಾವಗಡ – ೫೦, ನಿಡುಗಲ್ಲುಬೆಟ್ಟ
೪೮. SII. IX-I – ೨೯೬, ಕುರುಗೋಡ

೪೯. EC. VII ಶಿಕಾರಿಪುರ – ೧೦೦, ಬಳ್ಳಿಗಾವಿ

೫೦. SII. XX – ೧೯೩, ಗುಡಗೇರಿ

೫೧. SII. XX – ೧೯೩, ಗುಡಗೇರಿ

೫೨. ಧಾ. ತಾ. ಶಾ. ನಂ. ೫೧, ಮನಗುಂಡಿ

೫೩. EC. V ಅರಸಿಕೇರೆ – ೭೯, ಅರಸಿಕೆರೆ

೫೪. ಧಾ. ತಾ. ಶಾ. ನಂ. ೫೭, ಮನಗುಂಡಿ

೫೫. SII. XI-ii – ೧೫೮, ಎಲಿಶಿರೂರ

೫೬. SII. IX-I – ೧೦೧, ಮೋರಿಗೇರಿ

೫೭. IA. X ಪು. ೨೫೧, ಕರಗುದರಿ, (ಹಾನಗಲ್ ತಾ., ಧಾರವಾಡ ಜಿಲ್ಲೆ)

೫೮. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೫೨೦, ನಿಂಬರಗಿ

೫೯. EC. VII ಶಿವಮೊಗ್ಗ – ೫೭, ನಿಗದಿಗ್ರಾಮ

೬೦. EC. VII ಶಿವಮೊಗ್ಗ – ೫೭, ನಿಗದಿಗ್ರಾಮ

೬೧. EC. II ಶ್ರವಣಬೆಳ್ಗೊಳ – ೫೯

೬೨. EC. II ಶ್ರವಣಬೆಳ್ಗೊಳ – ೨೩೪

೬೩. EI. XIX – ೨೮೭, ಜುರ

೬೪. EI. XIX – ೨೮೭, ಜುರ

೬೫. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೫೨೧, ನಿಂಬರಗಿ

೬೬. EI. V ಪು. ೯, ಮನಗೂಳಿ

೬೭. SII. XVIII – ೧೨೫, ವಿಜಾಪುರ

೬೮. SII. IX-ii – ೧೧೯, ನರೇಗಲ್ಲ

೬೯. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೫೨೧, ನಿಂಬರಗಿ

೭೦. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೫೦೨, ಸೇಡಂ

೭೧. ಶಾಸನ ಪರಿಚಯ – ೧೯, ಅಳವಂಡಿ

೭೨. SII. XX – ೧೩೩ ಚಡಚಣ

೭೩. EC. XI ದಾವಣಗೆರೆ – ೪೨, ಹರಿಹರ

೭೪. EC. XI ದಾವಣಗೆರೆ – ೪೪, ಹರಿಹರ

೭೫. EC. V ಅರಸಿಕೆರೆ – ೧೪೧, ಕರುಗುಂದ

೭೬. EC. VI ತರೀಕೆರೆ – ೪೨, ಅಮೃತಾಪುರ

೭೭. EC. V ಅರಸಿಕೆರೆ – ೬೨, ಹಲಕೂರು

೭೮. EC. V ಬೇಲೂರು – ೫೮, ಬೇಲೂರು

೭೯. SII. IV ೭೯೮, ತಾಡಪತ್ರ

೮೦. EC. V ಅರಸಿಕೆರೆ – ೬೨, ಹಲಕೂರ

೮೧. EC. IV ನಾಗಮಂಗಲ – ೭೦, ಹಟ್ಟಣ

೮೨. EC. VII ಷಿಕಾರಿಪುರ – ೧೦೫, ಬಳ್ಳಿಗಾವಿ

೮೩. EC. VI ಕಡೂರ – ೧೨, ದೇವನೂರು

೮೪. EC. XV ಪು. ೮೯, ಬೆಣ್ಣೆಗುಡ್ಡ

೮೫. EC. XI ದಾವಣಗೆರೆ – ೭೦, ಭಾನುವಳ್ಳಿ

೮೬. SII. IV ೨೬೭, ಹಂಪಿ

೮೭. EC. VII ಷಿಕಾರಿಪುರ – ೨೯೭, ತುಂಬರಹೊಸೂರು

೮೮. EC. VII ಸಾಗರ – ೧೫೯, ಹಿರೇಕೆರ

೮೯. SII, IX-i ೨೯೭, ಕುರುಗೋಡು

೯೦. SII, IX-i ೨೯೭, ಕುರುಗೋಡು

೯೧. SII, XIX ೨೨೬, ರೋಣ

೯೨. EC. VIII ಸೊರಬ – ೧೭೯, ಕುಪ್ಪಟೂರು

೯೩. EC. VIII ಸೊರಬ – ೧೭೯, ಕುಪ್ಪಟೂರು

೯೪. EC. XI ದಾವಣಗೆರೆ – ೨೫, ಹರಿಹರ

೯೫. EC. VI ತರಿಕೆರೆ – ೪೫, ಅಮೃತಾಪುರ

೯೬. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೧೬೮, ತೇಂಗಳಿ

೯೭. EI. XIX – ೨೨೨, ರೋಣ

೯೮. EC. VII ಷಿಪಾಕರಿಪುರ – ೨೨೫, ಬಂದಲಿಕೆ

೯೯. EC. VIII ಸೊರಬ – ೩೪೫, ತೆವರತೆಪ್ಪ

೧೦೦. EC. VIII ಸೊರಬ – ೨೮೬, ಕಲ್ಲೂರು

೧೦೧. EC. V ಅರಸಿಕೆರೆ – ೧೦೨ a, ಕಾಟಕೆರೆ

೧೦೨. EC. V ಅರಸಿಕೆರೆ – ೧೦೮, ಹಿರಿಯೂರು

೧೦೩. SII. V – ೨೬೦, ಹಂಪಿ

೧೦೪. ಶಾಸನ ಪರಿಚಯ – ೩೧, ಮುಧೋಳ

೧೦೫. EC. VIII ಸೊರಬ – ೩೨೫, ಭಾರಂಗಿ

೧೦೬. SII. IX-i ಪು. ೩೧೮, ಕುರುಗೋಡು

೧೦೭. SII. IX-i ಪು. ೩೧೮, ಕುರುಗೋಡು

೧೦೮. EC. VII ಚೆನ್ನಗಿರಿ – ೬೧, ತಿರುಮಲಾಪುರ

೧೦೯. SII. IV – ೨೬೭, ಹಂಪಿ

೧೧೦ ಕಕಚ. I ಅನು. ಪು. ೬೨, ಹಂಪಿ

೧೧೧. INKK (Kudanagar) – ೧೫, ಸಿರಸಂಗಿ

೧೧೨. INKK (Kudanagar) – ೧೫, ಸಿರಸಂಗಿ

೧೧೩. EI. XII ಪು. ೨೭೮, ಐವೂರು

೧೧೪. EC. V-ii ಚೆನ್ನರಾಯಪಟ್ಟಣ – ೨೧೦, ಬಿದಿರೆ

೧೧೫. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೨೮೦, ಆಂದೋಲ

೧೧೬. EC. VII ಷಿಕಾರಿಪುರ, ೨೩೬, ಬಳ್ಳಿಗಾವಿ

೧೧೭. SII. XX – ೧೩೩, ಚಡಚಣ

೧೧೮. EC. VII ಷಿಕಾರಿಪುರ – ೨೧೯, ಬಂದಳಿಕೆ

೧೧೯. EC. II ಶ್ರವಣಬೆಳ್ಗೊಳ – ೧೩೯

೧೨೦. SII. XI-i – ೫೨, ಲಕ್ಕುಂಡಿ

೧೨೧. SII. XI-i – ೫೨ ಲಕ್ಕುಂಡಿ

೧೨೨. SII. XI-i – ೫೨ ಲಕ್ಕುಂಡಿ

೧೨೩. SII. XI-i – ೫೨ ಲಕ್ಕುಂಡಿ

೧೨೪. ಜೈ. ಸೌ. ಇಂ (ದೇಸಾಯಿ), ಪು. ೨೩೬, ಇಂಗಳಗಿ

೧೨೫. EC. VI ತರೀಕೆರೆ – ೪೨, ಅಮೃತಾಪುರ

೧೨೬. EC. IV ನಾಗಮಂಗಲ – ೨೨, ಲಾಲನಕೆರೆ

೧೨೭. EC. V ಹಾಸನ – ೧೧೬, ಶಾಂತಿಗ್ರಾಮ

೧೨೮. EC. V ಹಾಸನ – ೧೧೬, ಶಾಂತಿಗ್ರಾಮ

೧೨೯. EC. V ಬೇಲೂರು – ೧೯೩, ಹುಲಿಕೆರೆ

೧೩೦. ಶಾಸನ ಪದ್ಯಮಂಜರಿ – ೧೪೮, ಪಟ್ಟದಕಲ್ಲು

೧೩೧. EC. V ಅರಸಿಕೆರೆ – ೬೨, ಹಲಕೂರು

೧೩೨. EC. VIII ನಗರ – ೪೭, ಹುಮ್ಮಚ

೧೩೩. EC. IV ನಾಗಮಂಗಲ – ೭೬, ಮಲ್ಲಾದಹಳ್ಳಿ

೧೩೪. EC. V ಬೇಲೂರು – ೧೯೩, ಹುಲಿಕೆರೆ

೧೩೫. EC. V ಚೆನ್ನರಾಯಪಟ್ಟಣ – ೧೮೬, ಬಾಗೂರು

೧೩೬. SII. XX – ೧೧೫, ಯರಗಲ್ಲ
೧೩೭. EC. VII ಷಿಕಾರಿಪುರ – ೩೧೭, ಗೊಗ್ಗ
೧೩೮. KI. IV – ೧, ಸಾತೇನಹಳ್ಳಿ
೧೩೯. KI. IV – ೧, ಸಾತೇನಹಳ್ಳಿ
೧೪೦. KI. IV – ೧, ಸಾತೇನಹಳ್ಳಿ
೧೪೧. EC. VIII ನಗರ – ೪೭, ಹುಮ್ಮಚ
೧೪೨. SII. XX – ೨೪೮, ಸವದತ್ತಿ
೧೪೩. SII. XX – ೨೪೮, ಸವದತ್ತಿ
೧೪೪. SII. IV – ೨೬೦, ಹಂಪೆ
೧೪೫. EC. II ಶ್ರವಣಬೆಳ್ಗೊಳ – ೧೩೬
೧೪೬. EC. VIII ಸೊರಬ – ೨೩೩, ಉದ್ರಿ
೧೪೭. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೧೯೯, ತೆಂಗಳಿ
೧೪೮. EI. X ಪು. ೧೫೦, ದಾನವುಲಪಾಡು
೧೪೯. EI. X ಪು. ೧೫೦, ದಾನವುಲಪಾಡು
೧೫೦. EC. II ಶ್ರವಣಬೆಳ್ಗೊಳ – ೫೯
೧೫೧. ಕಲ್ಬುರ್ಗಿ ಜಿಲ್ಲೆಯ ಶಾನಸಗಳು, ಪು. ೧೮೬, ನಾಗಾಯಿ
೧೫೨. IA. XVIII ಪು. ೨೭೩, ಬೇಲೂರು
೧೫೩. EC. VII ಷಿಕಾರಿಪುರ – ೧೦೨, ಬಳ್ಳಿಗಾವಿ
೧೫೪. EC. VII ಷಿಕಾರಿಪುರ – ೧೦೨, ಬಳ್ಳಿಗಾವಿ
೧೫೫. EC. II ಶ್ರವಣಬೆಳ್ಗೊಳ – ೧೩೩
೧೫೬. EC. VI ಕಡೂರು – ೬೯, ಕಬಳಿ
೧೫೭. EC. VII ಷಿಕಾರಿಪುರ – ೨೩೬, ಬಳ್ಳಿಗಾವಿ
೧೫೮. SII. XVIII – ೧೨೪, ಹೊನ್ನತ್ತಿ
೧೫೯. SII. XVIII – ೧೧೭, ಕಾಗಿನೆಲೆ
೧೬೦. EC. VI ತರೀಕೆರೆ – ೪೨, ಅಮೃತಾಪುರ
೧೬೧. EC. VIII ಸಾಗರ – ೧೪೦, ಹೊಸಗುಂದ
೧೬೨. EC. V ಬೇಲೂರು – ೧೬೫, ಕಟ್ಟೇಸೋಮನಹಳ್ಳಿ
೧೬೩. EC. V ಅಸರಿಕೆರೆ – ೧೦೨, ಕಾಟಿಕೆರೆ
೧೬೪. SII. IV – ೨೬೦, ಹಂಪೆ

೧೬೫. SII. IV – ೨೬೦, ಹಂಪೆ

೧೬೬. SII, XI-ii – ೧೪೭, ಚಿಕ್ಕಹಂದಿಗೋಳ

೧೬೭. EC. VII ಹೊನ್ನಾಳಿ – ೫೫, ಕುಳ್ಳಹಳ್ಳಿ

೧೬೮. EC. VIII ಸಾಗರ – ೧೫, ನಾಡಕಲಸಿ

೧೬೯. EC. VIII ನಗರ – ೧೯, ಹೊಸಕೋಟೆ

೧೭೦. EC. V ಬೇಲೂರು – ೧೯೩, ಹುಲಿಕೆರೆ

೧೭೧. EC. VI ಕಡೂರು – ೧೪೯, ಆಸಂದಿ

೧೭೨. EI. XV – ೩೪, ಮುತ್ತಗೆ

೧೭೩. EC. XV ಹೊಳೆನರಸಿಪುರ – ೮೩, ಬಾಗಿವಾಳು

೧೭೪. SII. IX-i – ೨೫೭, ಉತ್ತಂಗಿ

೧೭೫. SII. XX – ೧೭೯, ಸಾಲೋಟಗಿ

೧೭೬. ಹೈ. ಆ. ಸೀ. V, ಪು. ೬, ಮುನಿರಾಬಾದ

೧೭೭. ಶಾಸನ ಪರಿಚಯ, (ಶೇಷಶಾಸ್ತ್ರಿ), ಪು. ೧೦೬

೧೭೮. SII. XVIII – ೧೧೦, ನಿಡೋಣಿ

೧೭೯. EC. VI ಮೂಡಿಗೆರೆ – ೨೨, ಹಂತೂರು

೧೮೦. MAR. ೧೯೨೮ – ೧೦೫, ಗೆರಸೊಪ್ಪೆ

೧೮೧. SII. IX-i ಪು. ೨೪೯, ಕೋಳೂರು

೧೮೨. EC. VI ಕಡೂರು – ೫೧, ಬ್ರಹ್ಮಸಮುದ್ರ

೧೮೩. SII. XI – ೨೩೧, ಮುಗದ

೧೮೪. SII. VII – ೫೩೫, ಧರ್ಮಪುರಿ (ಧರ್ಮಪುರಿ ತಾ., ಸೇಲಂ ಜಿಲ್ಲೆ)

೧೮೫. ಪಂಚಕಜ್ಜಾಯ, ಪು. ೧೫೩–೧೬೩ ಮೂಡಬಿದಿರೆ

೧೮೬. Inscriptions from Nanded Dt. ನಂ. ೨೩ ಬಿಮರಾ (ದೇಗಲೂರು ತಾ.)

೧೮೭. IA. X ಪು. ೬೧, ಬಾದಾಮಿ

೧೮೮. EC. VII ಷಿಕಾರಿಪುರ – ೧೨೯, ಬಳ್ಳಿಗಾವಿ

೧೮೯. EC. VII ಷಿಕಾರಿಪುರ – ೧೨೯, ಬಳ್ಳಿಗಾವಿ

೧೯೦. EC. VIII ಸೊರಬ – ೨೭೫, ಕುಪ್ಪಟೂರು

೧೯೧. EC. VIII – ೨೯೬, ಸೊರಬ – ೨೭೫, ಕುಪ್ಪಟೂರು

೧೯೨. SII. IX-i – ೨೯೬, ಕುರುಗೋಡು

೧೯೩. SII. IX-i – ೧೦೨, ಮೈಲಾರ (ಹಡಗಲಿ ತಾ., ಬಳ್ಳಾರಿ ಜಿ.)

೧೯೪. ಶಾಸನ ಪರಿಚಯ (ದೇಸಾಯಿ) – ೫೩, ಕುಕನೂರು
೧೯೫. ಶಾಸನಗಳಲ್ಲಿ ಶಿವಶರಣರು, (ಪ್ರ, ಆ.), ಪು, ೮೬
೧೯೬. ಶಾಸನಗಳಲ್ಲಿ ಶಿವಶರಣರು, (ಪ್ರ, ಆ.), ಪು, ೧೧೬
೧೯೭. ಶಾಸನಗಳಲ್ಲಿ ಶಿವಶರಣರು, (ಪ್ರ, ಆ.), ಪು, ೧೧೭
೧೯೮. ಶಾಸನಗಳಲ್ಲಿ ಶಿವಶರಣರು, (ಪ್ರ, ಆ.), ಪು, ೧೧೮
೧೯೯. ಶಾಸನಗಳಲ್ಲಿ ಶಿವಶರಣರು, (ಪ್ರ, ಆ.), ಪು, ೧೧೮
೨೦೦. ಶಾಸನಗಳಲ್ಲಿ ಶಿವಶರಣರು, (ಪ್ರ, ಆ.), ಪು, ೧೧೮–೧೧೯
೨೦೧. EC. VI ಕಡೂರು – ೧೨, ದೇವನೂರು
೨೦೨. SII. XVIII – ೧೩೯, ಬಂಕಾಪುರ
೨೦೩. ಕರ್ನಾಟಕ ಲಾಕುಳ ಶೈವರ ಇತಿಹಾಸ, ಪು. ೭
೨೦೪. EI. V – ೨೩೧, ಅಬ್ಬಲೂರು
೨೦೫. EC. XII ಚಿಕ್ಕನಾಯಕನಹಳ್ಳಿ – ೩೦, ಡಿಂಕನಹಳ್ಳಿ
೨೦೬. EC. XII ಚಿಕ್ಕನಾಯಕನಹಳ್ಳಿ – ೩೦, ಡಿಂಕನಹಳ್ಳಿ
೨೦೭. EC. XI ದಾವಣಗೆರೆ – ೩, ಆನೆಕೊಂಡ
೨೦೮. EC. V ಅರಸಿಕೆರೆ – ೧೦೮, ಹಿರಿಯೂರು
೨೦೯. EC. V ಅರಸಿಕೆರೆ – ೧೦೮, ಹಿರಿಯೂರು
೨೧೦. KI. VI – ೪೪, ರಟ್ಟೀಹಳ್ಳಿ
೨೧೧. MAR. ೧೯೨೬ – ೪೧
೨೧೨. EC. XII ಕುಣಿಗಲ್ಲು – ೪೯, ಎಡೆಯೂರು
೨೧೩. EC. XV ಹೊಳೆನರಸಿಪುರ – ೧೧೨, ಮಾವನೂರು
೨೧೪. EC. XIV ಎಡತೊರೆ – ೮೪, ಚಿಕ್ಕಹನಸೋಗೆ
೨೧೫. EC. II ಶ್ರವಣಬೆಳ್ಗೊಳ – ೬೪
೨೧೬. EC. IV ನಾಗಮಂಗಲ – ೭೦, ಹಟ್ಟಣ
೨೧೭. EC. II ಶ್ರವಣಬೆಳ್ಗೊಳ – ೧೨೭
೨೧೮. EC. V ಅರಸಿಕೆರೆ – ೧೪೧, ಕರುಗುಂದ
೨೧೯. EC. V ಚೆನ್ನರಾಯಪಟ್ಟಣ – ೧೪೮, ಹಳೆಬೆಳ್ಗೊಳ
೨೨೦. EC. II ಶ್ರವಣಬೆಳ್ಗೊಳ – ೩೫೧
೨೨೧. EI. XVI ಪು. ೫೧, ಲಕ್ಷ್ಮೇಶ್ವರ
೨೨೨. EI. XVI ಪು. ೫೯, ಲಕ್ಷ್ಮೇಶ್ವರ

೨೨೩. EI. XVI ಪು. ೫೯, ಲಕ್ಷ್ಮೇಶ್ವರ

೨೨೪. EC. II ಶ್ರವಣಬೆಳ್ಗೊಳ - ೭೨

೨೨೫. SII. IX-i - ೧೧೭, ಕೋಗಳಿ

೨೨೬. EC. VI ಕಡೂರು - ೧, ಕಡೂರು

೨೨೭. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೩೦೧, ಕುಳಗೇರಿ

೨೨೮. EC. XII ತುಮಕೂರು - ೯, ಕೈದಾಳ

೨೨೯. EC. III ಮಂಡ್ಯ - ೪೧, ಆತಕೂರು

೨೩೦. EC. VIII ಸೊರಬ - ೧೭೫, ಕೊರಗೋಡು

೨೩೧. EC. VIII ಸೊರಬ - ೩೬೯, ಕಾಟವಳ್ಳಿ

೨೩೨. MAR. ೧೯೨೭ - ೧೩೬, ಗುತ್ತನಹಳ್ಳಿ (ಷಿಕಾರಿಪುರ ತಾ., ಶಿವಮೊಗ್ಗ ಜಿ.)

೨೩೩. EC. XII ಚಿಕ್ಕನಾಯಕನಹಳ್ಳಿ - ೧೮, ತಂಡಗದ ಗ್ರಾಮ

೨೩೪. EC. XII ಚಿಕ್ಕನಾಯಕನಹಳ್ಳಿ - ೧೮, ತಂಡಗದ ಗ್ರಾಮ

೨೩೫. EI. XVIII- ೧೯೯, ಹೂಲಿ

೨೩೬. EC. VIII ಸೊರಬ - ೨೨೪, ಗೆಂಡಳ

೨೩೭. EC. VIII ಸೊರಬ - ೨೨೪, ಗೆಂಡಳ

೨೩೮. EC. VII ಹೊನ್ನಾಳಿ - ೩೫, ಬೆಳಗುತ್ತಿ

೨೩೯. EC. VII ಹೊನ್ನಾಳಿ - ೩೫, ಬೆಳಗುತ್ತಿ

೨೪೦. ಶಾಸನ ಪರಿಚಯ (ಶೇಷಶಾಸ್ತ್ರಿ), ಪು. ೧೦೦

೨೪೧. ಶಾಸನ ಪರಿಚಯ (ಶೇಷಶಾಸ್ತ್ರಿ), ಪು. ೧೦೦

೨೪೨. ಶಾಸನ ಪರಿಚಯ (ಶೇಷಶಾಸ್ತ್ರಿ), ಪು. ೧೦೦

೨೪೩. ಶಾಸನ ಪರಿಚಯ (ಶೇಷಶಾಸ್ತ್ರಿ), ಪು. ೧೦೦

೨೪೪. EC. V ಬೇಲೂರು ೨೦೨, ದಬ್ಬೆ ಅಗ್ರಹಾರ

೨೪೫. EC. V ಬೇಲೂರು ೨೦೨, ದಬ್ಬೆ ಅಗ್ರಹಾರ

೨೪೬. EC. V ಬೇಲೂರು ೨೦೨, ದಬ್ಬೆ ಅಗ್ರಹಾರ

೨೪೭. ಬೆಂಗೇರಿಯವರ ಬರಹಗಳು, ಪು. ೧೭೫, ತಿಳವಳ್ಳಿ ಶಾಸನ

೨೪೮. ಬೆಂಗೇರಿಯವರ ಬರಹಗಳು, ಪು. ೧೭೫, ತಿಳವಳ್ಳಿ ಶಾಸನ

೨೪೯. IA. XX - ೬೯, ಕೋಟೂರು

೨೫೦. IA. XX - ೬೯, ಕೋಟೂರು

೨೫೧. IA. XX - ೬೯, ಕೋಟೂರು

೨೫೨. IA. XX – ೬೯, ಕೋಟೂರು

೨೫೩. EC. V ಬೇಲೂರು – ೧೧೨, ಹಳೇಬೀಡು

೨೫೪. EC. V ಬೇಲೂರು – ೧೧೨, ಹಳೇಬೀಡು

೨೫೫. EC. V ಬೇಲೂರು – ೧೧೨, ಹಳೇಬೀಡು

೨೫೬. EC. V ಬೇಲೂರು – ೧೧೨, ಹಳೇಬೀಡು

೨೫೭. EC. V ಬೇಲೂರು – ೧೧೨, ಹಳೇಬೀಡು

೨೫೮. EC. V ಬೇಲೂರು – ೧೧೨, ಹಳೇಬೀಡು

೨೫೯. EC. V ಬೇಲೂರು – ೧೧೨, ಹಳೇಬೀಡು

೨೬೦. EC. V ಬೇಲೂರು – ೧೧೨, ಹಳೇಬೀಡು

೨೬೧. EC. V ಬೇಲೂರು – ೧೧೨, ಹಳೇಬೀಡು

೨೬೨. EC. IV ಕೃಷ್ಣರಾಜಪೇಟೆ ೯, ೧೦ ಅಗ್ರಹಾರ ಬಾಚಹಳ್ಳಿ

೨೬೩. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೬೪. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೬೫. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೬೬. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೬೭. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೬೮. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೬೯. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೭೦. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೭೧. EC. IV ಹೆಗ್ಗಡ ದೇವನಕೋಟೆ – ೧೮, ಬೆಳತೂರು

೨೭೨. EC. IV ನಾಗಮಂಗಲ – ೯೬, ಕಸಲಗೆರೆ

೨೭೩. EC. II ಶ್ರವಣಬೆಳ್ಗೊಳ – ೮೮

೨೭೪. EC. VII ಶಿಕಾರಿಪುರ – ೧೯೬, ಚಿಕ್ಕಮಾಗಡಿ

೨೭೫. EC. XII ತಿಪಟೂರು – ೯೩, ಕರಡಾಳು

೨೭೬. EC. XII ತಿಪಟೂರು – ೯೩, ಕರಡಾಳು

೨೭೭. EC. XII ತಿಪಟೂರು – ೯೩, ಕರಡಾಳು

೨೭೮. EC. XII ತಿಪಟೂರು – ೯೩, ಕರಡಾಳು

೨೭೯. EC. XII ತಿಪಟೂರು – ೯೩, ಕರಡಾಳು

೨೮೦. EC. XII ತಿಪಟೂರು – ೯೩, ಕರಡಾಳು

೨೮೧. EC. II ಶ್ರವಣಬೆಳ್ಗೊಳ – ೧೪೩
೨೮೨. EC. II ಶ್ರವಣಬೆಳ್ಗೊಳ – ೧೪೩
೨೮೩. EC. II ಶ್ರವಣಬೆಳ್ಗೊಳ – ೧೪೩
೨೮೪. SII. XVII – ೪೪, ಕುಡತಿನಿ
೨೮೫. EC. II ಶ್ರವಣಬೆಳ್ಗೊಳ – ೭೩
೨೮೬. EI. XIV - 19, ಕುರುಗೋಡು
೨೮೭. IA. XII ಪು. ೯೫, ತೊರಗಲ್ಲು
೨೮೮. ಸುರಪುರ ತಾಲೂಕಿನ ಶಾಸನಗಳು, ಪು. ೨೩, ಏವೂರು
೨೮೯. ಸುರಪುರ ತಾಲೂಕಿನ ಶಾಸನಗಳು, ಪು. ೨೩, ಏವೂರು
೨೯೦. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೪೪೩, ಸಿರಿವಾಳ
೨೯೧. Inscriptions From Nanded Dt. ನಂ. ೨೩, ಬಿಮರಾ/ದೇಗಲೂರು ತಾ.
೨೯೨. EI. XVI ಪು. ೮೩, ಹೊಟ್ಟೂರು
೨೯೩. EC. II ಶ್ರವಣಬೆಳ್ಗೊಳ – ೧೪೩
೨೯೪. EC. II ಶ್ರವಣಬೆಳ್ಗೊಳ – ೭೩
೨೯೫. EC. II ಶ್ರವಣಬೆಳ್ಗೊಳ – ೭೩
೨೯೬. EC. II ಶ್ರವಣಬೆಳ್ಗೊಳ – ೧೨೭
೨೯೭. EC. II ಶ್ರವಣಬೆಳ್ಗೊಳ – ೪೭೬
೨೯೮. EC. II ಶ್ರವಣಬೆಳ್ಗೊಳ – ೪೭೬
೨೯೯. EC. VII ಶಿಕಾರಿಪುರ – ೩೧೭, ಗೊಗ್ಗ
೩೦೦. EC. XV (ಹಾಸನ Sup.) ಅರಸಿಕೆರೆ – ೨೦೧, ಅರಸಿಕೆರೆ
೩೦೧. EI. 40. Plate - ii ಪುದೂರು
೩೦೨. SII. VII – ೨೦೨, ಮೂಡಬಿದರೆ
೩೦೩. SII. VII – ೧೯೬, ಮೂಡಬಿದರೆ
೩೦೪. EC. II ಶ್ರವಣಬೆಳ್ಗೊಳ – ೨೩೪
೩೦೫. SII. XVIII – ೪೦೧, ಲಕ್ಕುಂಡಿ
೩೦೬. EC. VIII ಸಾಗರ – ೫೫, ಗೋವರ್ಧನಗಿರಿ
೩೦೭. EC. XI ದಾವಣಗೆರೆ – ೨೫, ಹರಿಹರ
೩೦೮. EC. V ಬೇಲೂರು – ೧೯೩, ಹುಲಿಕೆರೆ
೩೦೯. EC. V ಅರಸಿಕೆರೆ – ೧೦೮, ಹಿರಿಯೂರು

೩೧೦. EI. XIII ಪು. ೪೧, ಇಟ್ಟಗಿ

೩೧೧. EI. XIII ಪು. ೪೧, ಇಟ್ಟಗಿ

೩೧೨. EI. XIII ಪು. ೪೧, ಇಟ್ಟಗಿ

೩೧೩. EI. XIII ಪು. ೪೧, ಇಟ್ಟಗಿ

೩೧೪. ಕಕಚ I ಪು. ೪೧೧

೩೧೫. ಸುರಪುರ ತಾಲೂಕಿನ ಶಾಸನಗಳು, ಪು. ೨೪, ಏವೂರ

೩೧೬. KI-i – ೨೫, ಸಿರಸಂಗಿ

೩೧೭. BKI, I-ii ನಂ. ೧೨೭, ಸಿರಸಂಗಿ

೩೧೮. SII. XVIII – ೪೪, ಕಳ್ಳಿಹಾಳ

೩೧೯. EC. V ಬೇಲೂರು, ೧೮೩, ನಾರಣಪುರ

೩೨೦. ಶಾಸನ ಪರಿಚಯ (ಶೇಷಶಾಸ್ತ್ರಿ), ಪು. ೧೧೦

೩೨೧. ಶಾಸನ ಪರಿಚಯ (ಶೇಷಶಾಸ್ತ್ರಿ), ಪು. ೧೧೦

೩೨೨. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೪೯೨, ಸೇಡಂ

೩೨೩. SII. IX-i – ೨೯೬, ಕುರುಗೋಡು

೩೨೪. SII. IX-i – ೨೯೬, ಕುರುಗೋಡು

೩೨೫. EC. V ಅರಸಿಕೆರೆ – ೧೨೭, ತಳಲೂರು

೩೨೬. ಕಕಚ I ಅನು. ೧ ಪು. ೧೭

೩೨೭. ಕಕಚ I ಅನು. ೧ ಪು. ೧೬

೩೨೮. EI. XVIII – ೧೭೪, ಹೂಲಿ

೩೨೯. ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು. ೧೯೧–೧೯೨, ನಾಗಾವಿ

೩೩೦. EC. VII ಷಿಕಾರಿಪುರ – ೨೭೬, ಮಾಯಿತಮ್ಮನ ಮುಚ್ಚಡಿ

೩೩೧. EC. VII ಷಿಕಾರಿಪುರ – ೧೦೩, ಬಳ್ಳಿಗಾವಿ

೩೩೨. BKI. I-ii – ೧೩೭, ಸೊರಟೂರು

೩೩೩. EC. V ಬೇಲೂರು – ೧೩೭, ಹಿರೇಹಳ್ಳಿ

೩೩೪. EC. V ಬೇಲೂರು – ೧೩೭, ಹಿರೇಹಳ್ಳಿ

೩೩೫. EC. V ಬೇಲೂರು – ೧೩೭, ಹಿರೇಹಳ್ಳಿ

೩೩೬. EI. XIX ಪು. ೨೨೩, ರೋಣ

೩೩೭. SII. XX – ೧೭೫, ಹಿರೇಬೇವಿನೂರು

೩೩೮. SII. XX – ೧೭೫, ಹಿರೇಬೇವಿನೂರು

೩೩೯. SII. XX – ೧೭೫, ಹಿರೇಬೇವಿನೂರು
೩೪೦. SII. XX – ೧೭೫, ಹಿರೇಬೇವಿನೂರು
೩೪೧. SII. XX – ೧೭೫, ಹಿರೇಬೇವಿನೂರು
೩೪೨. SII. XX – ೧೭೫, ಹಿರೇಬೇವಿನೂರು
೩೪೩. SII. XX – ೧೭೫, ಹಿರೇಬೇವಿನೂರು
೩೪೪. ಜಯಕರ್ನಾಟಕ, ೯–೬, ಪು. ೪೩೧
೩೪೫. EC. VIII ನಗರ – ೩೫, ಹುಮ್ಮಚ
೩೪೬. EC. VIII ನಗರ – ೩೫, ಹುಮ್ಮಚ
೩೪೭. SII. XI-i – ೪೨, ಸವಡಿ
೩೪೮. EC. VII ಶಿಕಾರಿಪುರ – ೧೨೪, ಬಳ್ಳಿಗಾವಿ
೩೪೯. EI. XV – ೩೪, ಮುತ್ತಗೆ
೩೫೦. EC. III-i ಮಂಡ್ಯ – ೧೨೨, ಬಸುರಾಳು
೩೫೧. EI. XV – ೩೧೫, ಮೂಡಗಿಹಾಳ
೩೫೨. EI. XII ಚಿಕ್ಕನಾಯಕನಹಳ್ಳಿ – ೨೧, ಹೆಗ್ಗೆರೆ
೩೫೩. EI. XIII – ೧೫, ಬೆಳಗಾವಿ
೩೫೪. EC. VII ಶಿಕಾರಿಪುರ – ೧೨೪, ಬಳ್ಳಿಗಾವಿ
೩೫೫. ಕಕಚ (೧೯೬೧) – ೧೩೫, ಬಳ್ಳಿಗಾವಿ
೩೫೬. EC. XI ಚಿತ್ರದುರ್ಗ – ೪೭, ಭೀಮಸಮುದ್ರ
೩೫೭. EC. XI ದಾವಣಗೆರೆ – ೧೪೯, ಕೊಡಗನೂರ
೩೫೮. ಸುರಪುರ ತಾಲೂಕಿನ ಶಾಸನಗಳು, ಪು. ೨೧, ಏವೂರು
೩೫೯. ಸುರಪುರ ತಾಲೂಕಿನ ಶಾಸನಗಳು, ಪು. ೨೧, ಏವೂರು
೩೬೦. EC. II ಶ್ರವಣಬೆಳ್ಗೊಳ – ೩೧೪
೩೬೧. KI. VI – ೩೯, ಹರಳಹಳ್ಳಿ
೩೬೨. EC. VII ಶಿವಮೊಗ್ಗ – ೯೭, ಆಲಹಳ್ಳಿ
೩೬೩. ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು, ಪು. ೪೧
೩೬೪. ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು, ಪು. ೪೧
೩೬೫. SII. XI-ii – ೧೨೭, ಕುರ್ತಕೋಟಿ
೩೬೬. SII. IX-ii – ೭೧೧, ಅಂಬಲಿ
೩೬೭. EC. II ಶ್ರವಣಬೆಳ್ಗೊಳ – ೧೩೩

೩೬೮. EC. II ಶ್ರವಣಬೆಳ್ಗೊಳ – ೧೩೩

೩೬೯. EC. IV ನಾಗಮಂಗಲ – ೨೮, ಲಾಲನಕೆರೆ

೩೭೦. EI. XIII ಪು. ೩೨೯, ಕಳಸ

೩೭೧. EI. XVI ಪು. ೮೩, ಹೊಟ್ಟೂರು

೩೭೨. EI. XVI ಪು. ೮೩, ಹೊಟ್ಟೂರು

೩೭೩. EI. XVI ಪು. ೮೩, ಹೊಟ್ಟೂರು

೩೭೪. SII. XI – ೧೭೩, ಆಲೂರು

೩೭೫. ಬೆಂಗೇರಿಯವರ ಬರಹಗಳು, ಪು. ೨೧೧, ಕಾಗಿನೆಲೆ

೩೭೬. EI. V ಪು. ೨೪೫, ಅಬ್ಬಲೂರು

೩೭೭. EI. V ಪು. ೨೪೫, ಅಬ್ಬಲೂರು

೩೭೮. EI. V ಪು. ೨೪೫, ಅಬ್ಬಲೂರು

೩೭೯. EI. V ಪು. ೨೪೫, ಅಬ್ಬಲೂರು

೩೮೦. EI. V ಪು. ೨೪೫, ಅಬ್ಬಲೂರು

೩೮೧. EI. V ಪು. ೨೪೫, ಅಬ್ಬಲೂರು

೩೮೨. EI. V ಪು. ೨೪೫, ಅಬ್ಬಲೂರು

೩೮೩. EI. V ಪು. ೨೪೫, ಅಬ್ಬಲೂರು

೩೮೪. EI. V ಪು. ೨೪೫, ಅಬ್ಬಲೂರು

೩೮೫. SII. XV – ೫೯, ಅಣ್ಣಿಗೆರೆ

೩೮೬. KI. V – ೯೮, ತೇರದಾಳ

೩೮೭. MAR ೧೯೨೭ – ನಂ. ೩೪, ಗೌತಮೇಶ್ವರ ಗ್ರಾಮ

೩೮೮. MAR ೧೯೨೭ – ನಂ. ೩೪, ಗೌತಮೇಶ್ವರ ಗ್ರಾಮ

೩೮೯. MAR ೧೯೨೭ – ನಂ. ೩೪, ಗೌತಮೇಶ್ವರ ಗ್ರಾಮ

೩೯೦. MAR ೧೯೨೭ – ನಂ. ೩೪, ಗೌತಮೇಶ್ವರ ಗ್ರಾಮ

೩೯೧. MAR ೧೯೨೭ – ನಂ. ೩೪, ಗೌತಮೇಶ್ವರ ಗ್ರಾಮ

೩೯೨. MAR ೧೯೨೭ – ನಂ. ೩೪, ಗೌತಮೇಶ್ವರ ಗ್ರಾಮ

೩೯೩. SII. IX-i – ೧೬೯, ಕುರುವತ್ತಿ

೩೯೪. SII. XV – ೬೯೫, ಮುಳಗುಂದ

೩೯೫. SII. XV – ೭೧೬, ಮುಳಗುಂದ

೩೯೬. SII. IX-i – ೧೦೨, ಮೈಲಾರ


೩೯೭. SII. XI-ii – ೧೨೭, ಕುರ್ತಕೋಟಿ

೩೯೮. IA. XII – ೨೨೩, ದಂಡಾಪುರ

೩೯೯. EC. VII ಶಿವಮೊಗ್ಗ – ೯೭, ಆಲಹಳ್ಳಿ

೪೦೦. EC. IV ನಾಗಮಂಗಲ – ೯೪, ಕಸಲಗೆರೆ

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359